ಸೀತಾ ಚರಿತ್ರೆ

॥ ಶ್ರೀಃ ॥

SEETHA CHARITRE

ಸೀತಾ ಚರಿತ್ರೆ.

ರಾಬರ್ಟ್‌ಸನ್‌ಪೇಟೆ ಗೌ. ಏ. ವಿ. ಸ್ಕೂಲ್ ಸಹಾಯೋಪಾಧ್ಯಾಯರಾದ

ಸಿ. ಎ. ಅಣ್ಣಯ್ಯನವರಿಂದ

ವಿರಚಿಸಲ್ಪಟ್ಟುದು.

ಪ್ರಥಮ ಮುದ್ರಣ ೧೦೦೦ ಪ್ರತಿಗಳು.

ಬೆಂಗಳೂರು :

ಟವರ್‌ ಮುದ್ರಾಕ್ಷರ ಶಾಲಾಧಿಕಾರಿಗಳಾದ ಹರಿರಾಮ ಮಿಶ್ರರವರಿಂದ

ಮುದ್ರಿಸಲ್ಪಟ್ಟಿತು.

1914

ಕ್ರಯ ರೂ. 1–8–0.] 0–2–0.

ಪೀಠಿಕೆ.

ಈ ಗ್ರಂಥಕ್ಕೆ ಸಂಸ್ಕೃತದಲ್ಲಿರುವ ಶ್ರೀಮದ್ರಾಮಾಯಣ, ಆನಂದ ರಾಮಾಯಣಗಳೇ ಮುಖ್ಯಾಧಾರವಾಗಿವೆ. ಕನ್ನಡ ದೇಶದ ವಿದ್ಯಾರ್ಥಿಗಳ ಉಪಯೋಗಕ್ಕಾಗಿಯೂ, ಬಾಲಕಿಯರಿಗೆ ಪತಿವ್ರತಾ ಭಕ್ತಿ ಯುಂಟಾಗುವುದಕ್ಕಾಗಿಯೂ, ಪದ್ಯಕಾವ್ಯದಲ್ಲಿ ಜ್ಞಾನ ಲಭಿಸುವುದಕ್ಕಾಗಿಯೂ, ಸಹಾ ಸುಲಭಶೈಲಿಯಿಂದ ಭಾಮಿನಿ ಷಟ್ಪದಿಯ ರೂಪವಾಗಿ ಈ ಗ್ರಂಥವು ವಿರಚಿಸಲ್ಪಟ್ಟಿದೆ. ಲೋಕದಲ್ಲಿ ಪ್ರತಿಯೊಂದು ವಸ್ತುವೂ, ದೋಷಯುಕ್ತವಾಗಿರುವಂತೆ ಈ ಗ್ರಂಥವೂ ಹೆಚ್ಚಾದ ದೋಷದಿಂದ ಕೂಡಿದೆ ಎಂಬುವುದರಲ್ಲಿ ಸಂದೇಹವಿಲ್ಲ. "ಗುಣದೋಷೌಬುಧೋಗೃಹ್ಣ ನ್ನಿಂದುಕ್ಷ್ವೇಳಾವಿವೇಶ್ವರಃ । ಶಿರಸಾಶ್ಲಾಘತೇಪೂರ್ವಂ ಪರಂಕಂಠೇನಿಯಚ್ಛತಿ ॥" ಎಂಬಂತಿರುವುದರಿಂದ ಗುಣಗ್ರಾಹಿಗಳಾದ ಪಂಡಿತರು ತಮಗೆ ಕಾಣಬರುವ ದೋಷವನ್ನು ತಿದ್ದಿ ನನಗೆ ತಿಳಿಸಿ ಉತ್ತರೋತ್ತರ ಗ್ರಂಥವು ಸುಬದ್ಧವಾಗುವಂತೆ ಸಹಾಯ ಮಾಡಬೇಕೆಂದು ಕೇವಲ ವಿಧೇಯನಾಗಿ ಪ್ರಾರ್ಥಿಸುತ್ತೇನೆ. ಈ ಗ್ರಂಥವನ್ನು ಓದುವ ಜನರು ಇದರಲ್ಲಿರುವ ಒಳ್ಳೆಯ ಸಂಗತಿಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಅದರಂತೆ ಆಚರಿಸುತ್ತಾ ಬಂದರೆ ಅದೇ ನನಗೆ ಪ್ರತಿಫಲವೆಂದು ಹಾರೈಸುವೆನು. ಈ ಗ್ರಂಥವನ್ನು ಆಮೂಲಾಗ್ರವಾಗಿ ಪರಿಶೋಧಿಸಿ ಹಲವು ತಿದ್ದುಪಾಟುಗಳನ್ನು ಮಾಡಿ ಪ್ರಿಂಟಾಗುವ ಭಾಗದಲ್ಲಿ ಬಹುಳ ಸಹಾಯವನ್ನು ಮಾಡಿರುವ ಕವಿತಾಶಿಖಾಮಣಿಗಳಾದ ಮಾಗಡಿ ಗೌ. ಏ. ವಿ. ಸ್ಕೂಲ್ ಹೆಡ್ಮಾಸ್ಟರವರಾದ ಮಹಾರಾಜಶ್ರೀ ಕೆ. ರಾಮಸ್ವಾಮ್ಯಯ್ಯಂಗಾರ್ರವರಿಗೂ, ಗುಡಿಬಂಡಾ ಗೌ. ಏ. ವಿ. ಸ್ಕೂಲ್ ಹೆಡ್ಮಾಸ್ಟರವರಾದ ಮಹಾರಾಜಶ್ರೀ ಏ. ಕೇಶವಯ್ಯನವರಿಗೂ ನಾನು ಬಹಳ ಕೃತಜ್ಞನಾಗಿದ್ದೇನೆ. ಕೊನೆಯಲ್ಲಿ ಕೊಟ್ಟಿರುವ ಶುದ್ಧಾಶುದ್ಧ ಪತ್ರಿಕೆಯನ್ನು ನೋಡಿ ಅದರಂತೆ ಅಲ್ಲಲ್ಲಿ ಸರಿಮಾಡಿಕೊಂಡು ಪಠಿಸಬೇಕೆಂಬದಾಗಿ ವಾಚಕರೆಲ್ಲರನ್ನೂ ಬೇಡಿಕೊಳ್ಳುವೆನು.

ಸಿ. ಎ. ಅಣ್ಣಯ್ಯ,
ಸಹಾಯೋಪಾಧ್ಯಾಯಕ,
ಗೌ. ಏ. ವಿ. ಸ್ಕೂಲ್
ರಾಬರ್ಟ್ಸನ್‌ಪೇಟೆ. ಕೆ. ಜಿ. ಎಫ್.

ವಿಷಯಾನುಕ್ರಮಣಿಕೆ.

ಶ್ರೀಃ

॥ ಜಯ ಶ್ರೀ ಸೀತಾರಾಮಚಂದ್ರ ಭಗರ್ವ ॥



ಸೀತಾ ಚರಿತ್ರೆ.

॥ ಭಾಮಿನೀ ಷಟ್ಪದಿ ॥

ಶ್ರೀರಮಣವರ ವಾಸುಕಿಶಯನ । ಕ್ರೂರರಾವಣ ಸಂಹರಣಸರ । ಸೀರುಹನಯನ ಖಗಪತಿಗಮನ ಕೌಸ್ತುಭಾಭರಣ ॥ ಮಾರಪಿತದೇವ ನುತಜನಹಿತ । ನಾರಸಿಂಹ ಮಧುರಿಪುನೀದಯು । ದೋರಿನಿನ್ನವನೆಂದು ರಕ್ಷಿಸು ನಮ್ಮ ನನವರತ ॥ ೧ ॥ ಕ್ಷೀರಸಾಗರ ಮಥನದೊಳು ತಲೆ । ದೋರಿದವಿಷವ ಕೊರಳೊಳಿರಿಸಿದ । ಮಾರನತ್ತರಿದ ಪಂಚವಿಂಶತಿ ಲೀಲೆಗಳತಳೆದ ॥ ನಾರದಾದಿ ಮುನೀಂದ್ರನುತ ಗಿರಿ । ಜಾರಮಣ ಭುಜಗಾಭರಣ ತ್ರಿಪು । ರಾರಿ ಸೋಮಧರಗಿರಿಶ ಸಲಹು ನಮ್ಮ ನನವರತ ॥ ೨ ॥ ವಾರಣವದನ ಮೂಷಕಗಮನ । ತೋರಭುಜಗಾಪರಣ ವಿಘ್ನವಿ । ದೂರಲಂಬೋದರ ದಯಾಕರ ಸಿದ್ಧಿದಾಯಕ ನೀಂ ॥ ದಾರಿಕೊಡದಿರೆ ಕರುಣಿಸುವಸುರ । ರಾರುಪೂಜಿಸಿ ನಮಿಸಿ ನುತಿಸುವೆ । ಸಾರಸುಗುಣವನಿತ್ತು ಪಾಲಿಸು ನಮ್ಮ ನನವರತ ॥ ೩ ॥ ವಾಣಿ ಕಮಲಜರಾಣಿ ವೀಣಾ । ಪಾಣಿ ಕೋಕಿಲವಾಣಿ ಪನ್ನಗ । ವೇಣಿ ಕಲ್ಯಾಣಿವರಸುಗುಣಶ್ರೇಣಿ ಸು

ಶ್ರೋಣಿ || ಕಾಣಿಸಿಮತಿಯ ಸಲಹುಶಾರದೆ | ಜಾಣೆಯಪ್ಪಂತೆ ನಿರುತ
ವುನೀಂ । ಮಾಣದೆಭಜಿಪೆನು ಸತತವುನಿನ್ನಯ ಪದಕಮಲವ || ೪ ||
ಧಾರುಣಿಯೊಳು ತನಯರನಂಕದೊ | ಳೇರಿಸಿಕಲಿಸಿ ನುಡಿಗಳನು ಕೈ |
ದೋರಿಯವುಗಳ ತಂದೆತಾಯಿಗಳಾಲಿಸಿ ನಿರುತವು | ಮೀರಿದಾನಂದದಿ
ನಲಿವವೊಲು | ಸಾರಸಜ್ಜನರಿದರೊಳಡದೆ ವಿ | ಚಾರವನಮಲಮತಿ
ಯೊಳಾಲಿಪುದೆನುತ ನಮಿಸುವೆನು || ೫ || ಬಾರದೆನಗೆ ಕವಿತೆಯಪದ್ಧತಿ |
ಸೇರಿಯರಿಯೆನು ವಿಬುಧರಸಭೆಯ | ಮಾರಜನಕನ ಪಾದಕಮಲವ
ಭಜಿಸಿದವನಲ್ಲ || ಭೂರಿಪಾತಕಿಯಾಗಿರುವೆ ನೀ | ಸಾರಕಥೆಯೊಳಹ
ಮಗುಣಂಗಳ | ತಾರದೆಮನಕೆ ಸತ್ಕಥೆಯಿದೆಂದಾಲಿಪುದು ಜನರು || ೬ ||
ವನಧಿಯಂತೆ ನವರಸಭರಿತಂ । ವನಜಭವನಂತೆ ವಿಬುಧಹಿತಂ । ವನಜ
ದಂತಾರಡಿಯುತಂ ವನಮಾಲಿಯಂತಿದುತಾಂ || ಘನಮೆನಿಪಲಂಕಾರ
ಮಹಿತಂ | ವಿನುತಿವೆತ್ತಿಹುದನ್ವಯದೆ ಸ | ಜ್ಜನರಪರಿಯಂತಾವಗಂಮ
ತ್ಕವಿತೆಧರಣಿಯೊಳು || ೭ || ಘನಯತಿಗಣಪ್ರಾಸದಿಂ ಕವಿ | ವಿನುತಸಂ
ಧಿಸಮಾಸದಿಂ ದಲ | ವನಿಯೊಳೊಪ್ಪಿಹುದು ವರಲಕ್ಷಣಭಾವವನ್ವಯ
ದಿಂ || ಜನಕಜಾತೆಯ ಚರಿತೆಯಿದು ಪಾ | ವನಕೆ ಪಾವನಮತಿ ಶುಭಾ
ವಹ | ಮೆನಿಸಿ ರಾರಾಜಿಪುದು ಪಾಪವಹರಿಸಿ ಮಾನವರ || ೮ || ಇದು
ಜನರ್ಗೆ ಸುಮತಿಯನೀವುದು | ಇದುವೆಪತಿಭಕ್ತಿಯನುವಧುಗ | ಳ್ಗೊ
ದಗಿಪುದು ಸಕಲರ್ಗಮಿಹಪರಸುಖವನಾಗಿಪುದು || ಇದುಸಮಸ್ತಕಲುಷ
ಗಳನುಹರಿ | ಪುದು ಜಗದೊಳಿದಕೆಣೆಯೆಮಿಕ್ಕಾ | ಸುದತಿಯರಚರಿತೆ
ಗಳು ಲಾಲಿಪುದಿದನು ಮುದದಿಂದೆ || ೯ || ವಿನುತಸೀತಾಕಥೆಯನಾಕೆ
ಯ | ಘನತರಕೃಪೆ ಯಿಂದಪೇಳ್ದನು | ಮುನಿಪಕಶ್ಯಪ ಗೋತ್ರದಾಪ
ಸ್ತಂಭಸೂತ್ರದೊಳು || ಜನಿಸಿವೇದಾಧ್ಯಯನದೊಳು ದ | ಕ್ಷನೆನಿಸಿದ
ಹೋಬಿಲಬುಧವರನ | ತನಯ ನರಸಿಂಹನುನಮಿಸಿ ಹಿಂದಣಸುಕವಿ
ಗಳ್ಗೆ || ೧೦ || ಮೆರೆವಶೃಂಗಗಿರಿಮಠದೊಳು ಶಂ | ಕರನುತಾನೆನೆ ರಂಜಿ
ಪ ಜಗ | ದ್ಗುರುಗಳೆನಿಸಿದ ಸಚ್ಚಿದಾನಂದ ಸುಶಿವಾಭಿನವ || ಬಿರುದನಾಂ
ತ ನೃಸಿಂಹಭಾರತಿ | ವರಯತೀಂದ್ರ ಸ್ವಾಮಿಗಳಮಲ | ಚರಣಪಂಕ
ಜಗಳನು ಜಾನಿಸುತೊರೆವೆನೀಕೃತಿಯ || ೧೧ || ತನಯನಂತೀಕ್ಷಿಸುತ
ನನ್ನನು | ಮನೆಯೊಳಾವಗಮಿರಿಸಿಕೊಂಡು ಸ | ವಿನುಡಿಯಿಂದೊಲಿ

ಸುತ್ತ ಕನ್ನಡ ಸಂಸ್ಕೃತಂಗಳನು ॥ ಅನುಗೊಳಿಸಿ ದಳ ಸಿಂಗರಾಚಾ । ರ್ಯನೆನಿಸುವ ವಿದ್ಯಾಗುರೂತ್ತಮನು । ರನಿಜಬೋಧನೆಯ ಬಲದಿಂದೆರ ಚಿಸುವೆನೀಕಥೆಯ ॥ ೧೨ ॥

ಇಂತು ಮೊದಲನೆಯ ಅಧ್ಯಾಯ ಸಂಪೂರ್ಣವು. ಪದ್ಯಗಳು ೧೨.

೨ನೆಯ ಅಧ್ಯಾಯ.

ಸೂಚನೆ ॥ ಸೋಮವಂಶಲಲಾಮ ನಾಪವ ।
ಭೀಮಜನಕನು ಪೊರದನುಸಕಲ ।
ಭೂಮಿಯನುರಾಜರೊಳಧಿಕನೆನಿಸುತ್ತ ಧರ್ಮದಲಿ ॥

ವನರುಹಭವಾಂಡದೊಳುನೆರೆದಿಹ । ವಿನುತಜಂಬೂದ್ವೀಪಮಧ್ಯದೆ । ಕನಕಗಿರಿಕಂಗೊಳಸುವುದವರ ತೆಂಕಣದೆಸೆಯೊಳು ॥ ಜನರದುರಿತವ ನೀಗುತವಿಮಲ । ಮೆನಿಪಗಂಗಾ ನದಿಯತೀರದೊ । ಳುನೆರೆಮೆರೆದುದು ಮಿಥಿಲದೇಶವು ಸಕಲ ಸಿರಿಯಿಂದ ॥ ೧ ॥ ಮೆರೆದುದಾ ಮಿಥಿಲಾಪುರಂ ಕರಿ । ತುರಗಪದಾತ ರಥಗಳಲಾ । ಹೊರವಳಯದುಪವನಗಳಲಿ ಸಾಧಾಳಿಯುಲಿ ಹೊಳೆವ ॥ ಹರಿಹರರ ದೇವಾಲಯಂಗಳ । ಲಿರತುನಾವಳಿ ಯಂಗಡಿಗಳಲಿ । ವರಕವಿವಿಬುಧ ಸಂಚಯದಲಿ ಧನಕನಕಂಗಳಲಿ ॥ ೨ ॥ ಹಿಮಕಿರಣ ವಂಶದೊಳುದಿಸಿದನು । ನಿಮಿ ಮಿಥಿಲೆಯರಸರೊಳು ಮೊದಲಿಗ । ನಮಿತ ತೇಜೋವಂತನಾತನ ಬಳಿಕ ಕ್ರಮದಿಂದ ॥ ಅಮ ಲಗುಣಯುತ ರಾಳ್ದರವರೊಳು । ಸುಮಹಿತ ಪರಾಕ್ರಮನೆನಿಸುತೀ । ಕ್ಷಮೆಯನಾಳ್ದನು ಹ್ರಸ್ವರೋಮಖ್ಯಾತ ಭೂಮಿಪತಿ ॥ ೩ ॥ ಧರಣಿ ಪತಿಯಾ ಹ್ರಸ್ವರೋಮನು । ದರದೆ ಸಂಜನಿಸಿದನು ವಿಧುಕುಲ । ಶರ ಧಿಸೋಮನು ತಾನೆನಲ್ಜನಕಾವನೀಧವನು ॥ ಪರಿಪರಿಯ ರಾಜೋಪ ಚಾರದ । ಲರಗುವರನಭಿ ವೃದ್ಧಿಯಾಗುತ । ಮೆರೆದನುತ್ತಮ ಬಾಲಲೀ ಲೆಗಳನ್ನು ತೋರಿಸುತ ॥ ೪ ॥ ಎಳೆಯತನದೊಳಗಾ ಜನಕಗುರು । ಗಳಸನಿಪದೊಳು ಕಲಿತನೆಲ್ಲಾ । ಕಲೆಗಳವಿತತ ವೇದ ಶಾಸ್ತ್ರಪುರಾಣಗಳ

ತತಿಯ ॥ ತಿಳಿದನಾಬಳಿಕ ಶಾಸ್ತ್ರ ಶಸ್ತ್ರಾ । ವಳಿಗಳ ಶರಶರಾಸನಂಗಳ ।
ನಿಳಿಯೊಳನುಸಂಧಾನಿಸುವುದನು ಬಿಡುವುದನು ಕೂಡ ॥ ೫ ॥ ಜನರೊ
ಡೆಯನಾ ಹ್ರಸ್ವರೋಮನು । ತನಯನ ಕಲಾಕೌಶಲಂಗಳ । ಮನ
ಗೊಳಗೀಕ್ಷಿಸಿ ಧರಣಿ ರಕ್ಷಣೆ ಗರ್ಹನಿವನೆನುತ ॥ ಜನಕನ ಪ್ರಭು ಪದವಿ
ಯೊಳಗಿರಿ । ಸಿ ನಡೆದನು ಸತಿಸಹಿತತಾಂ ಕಾ । ನನಕೆ ತಾಪಸವೃತ್ತಿಯ
ಲಿ ಕಳೆಯುತ್ತ ಕಾಲವನು ॥ ೬ ॥ ಪಿತನದೆಸೆಯಿಂ ತಾನು ಪಡೆದಿಹ ॥
ವಿತತರಾಜ್ಯವ ನಾಜನಕಭೂ । ಪತಿಪೊರೆದ ನಿಳೆಯಲ್ಲಿ ತನಗೆಣೆಯಾರು
ಮಿಲ್ಲೆನಿಸಿ ॥ ನುತಿವಡೆದನು ಸಗರ ಭಗೀರಥ । ರತೆರದೊಳಖಿಳ ಧರ್ಮವ
ಬಿಡದೆ । ಸತತವು ಸಕಲ ರಾಜನೀತಿಯ ತಿಳಿದು ಮನದೊಳಗೆ ॥ ೭ ॥
ಜನಕನರಸಿ ಸುಮೇಧೆಯೆಂಬಾ । ವನಿತೆ ಪತಿವ್ರತೆಯರೊಳಧಿಕಳೆಂ ।
ದೆನಿಪಳಾವಗಮಾಪತಿಗೆ ಸಂಮುದವನೆಸಗುವಳು ॥ ತನಗೆ ಸಮರಾರೀ
ಜಗದೊಳೆಂ । ದೆನೆಸುಮೇಧೆ ನಮಿಸಿ ನಿರಂತರ । ವು ನೆರೆಪೂಜಿಸುವಳು
ಸಕಲದೇವತೆಗಳನುಪದೆದು ॥ ೮ ॥ ಮುನಿಶತಾನಂದನು ಪುರೋಹಿತ ।
ನೆನಿಸುವನು ಭೂಮಿಪತಿ ಜನಕಗೆ । ವಿನುತಿವಡೆದಾ ವೇದಶಾಸ್ತ್ರಂಗಳಲಿ
ವಿದಿತವಹ ॥ ಜನಪರಾಗಿಸುವಖಿಳ ಕರ್ಮಗ । ಳನುನಯದಿ ತಾನಾಗಿಸುವ
ನಾ । ಜನಪತಿಗೆಗೌತಮನ ಪುತ್ರನು ದಿನದಿನಂಗಳಲಿ ॥ ೯ ॥ ವರಸುಧಾ
ಮನು ಮಂತ್ರಿಯೆನಿಸಿಹನು । ನರಪತಿಯಖಿಳ ರಾಜಕಾರ್ಯದೆ । ನಿರತನಾ
ಗಿಹನಾ ಜನಕಭೂಪನ ಸಕಲಮಹಿಯ ॥ ಪುರಧನ ಬಲ ಕರಿ ತುರಗಂ
ಗಳ । ಸರಿಯೆನೆ ವಿಚಾರಿಪನು ಸತತವು । ಧರಣಿಯೊಳಗಾರೀತನಿಗೆ ಸ
ಮನೆಂಬ ಸಚಿವನೆನೆ ॥ ೧೦ ॥ ಸುರಗುರುವಿನ ಸಹಾಯದಲಿ ವಿಬು । ಧರ
ಬಲವಲಿ ನಿಶಾಚರರಸಂ । ಹರಿಸಿನಾಕವ ನಾಳುವಾ ದಿವಿಜಪತಿಯಂದದಲಿ ॥
ವರಸಚಿವ ಬಲದಿಂದೆರಾಜಿಸಿ । ನೆರೆದಸೈನ್ಯದೊಳಾಹಗೆಗಳನು । ತರಿದು
ಪಾಲಿಸಿದ ನವಸಿಯನಾಜನಕ ಭೂಮಿಪನು ॥ ೧೧ ॥ ಆಡಳಿತನ ಮನು
ಜರನೃತವ । ಕೂಡರನ್ಯರ ಸತಿಯರನು ತಾ । ವ್ಬೇಡರಿತರ ಜನರನು
ಮಾಡುವರಖಿಳಧರ್ಮಗಳ ॥ ನೋಡಿ ತಿಳಿಯರು ದುಃಖ ಬಳಗವ । ಕೇ
ಡು ಮಾಡರು ಪರರಿಗೆಂದುಂ । ನೋಡಲಾತನ ಧರೆಯೊಳಿಹರೇ ಖೂಳ
ಮಾನವರು ॥ ೧೨ ॥ ಆರು ಕರ್ಮಂಗಳನು ಮಾಳ್ಪರು । ಧಾರುಣೀಸುರ
ರೆಲ್ಲ ಪಗೆಗಳ । ವೀರಬಾಹುಜರಿರಿದು ರಣದಲಿ ಮಹಿಯ ನಾಳುವರು ।

ಊರುಜರಧಿಕರೆಂದೆನಿಸಿಹರು । ಮಾರಿದ ಕ್ರಯ ವಿಕ್ರಯಗಳಲಿ ।
ಮೂರು ವರ್ಣದೊಳೆಲ್ಲರಂ ಶೂದ್ರತತಿ ಸೇವಿಪುದು ॥ ೧೩ ॥ ಇಳೆಯ
ನಾಳುತ್ತಿರಲು ಜನಕನು । ಮಳೆಯುಸುರಿವುದು ಕಾಲಕಾಲಕೆ । ನೆಲದೆ
ಬೆಳೆವುವು ಸಕಲ ಧಾನ್ಯಗಳರಿಯೆ ಹುಲುಸಾಗಿ ॥ ಫಲಭರಿತವಾಗಿಹ
ವು ಪಾದಪ । ಗಳು ವಿವಿಧ ಕುಸುಮಂಗಳಾ ಲತೆ । ಗಳಲಿ ತೋರ್ಪುವು
ಘನಪರಿಮಳವನಾಂತು ಶೋಭಿಸುತ ॥ ೧೪ ॥ ಕಳವುಪುಸಿಪಾದರ ಕಪಟ
ಭಯ । ವಿಲಗ ಮೋಸ ಕುಟಿಲ ಕಠಿಣತೆ ಜ । ಗಳಜನದ್ವೇಷ ಪರದೂ
ಷಣೆ ಕೋಪ ಧನಲೋಭ ॥ ಗಳ ಹತನ ಮದ ಮತ್ಸರ ಕೊಲೆ ನಿ । ಗ
ಳದ ಬಂಧನ ಸಂಕಟಜಡತೆ । ಗಳು ಮುಳಿದುನೋಡಿ ದೊಡೆಕಾಣವು
ಜನಕನುರ್ವಿಯಲಿ ॥ ೧೫ ॥ ಧರೆಯನಾಜನಕನು ಸಲಹುತಿರೆ । ಧರಣಿ
ಯ ಸಮಸ್ತ ಜನತತಿಯಲಿ । ನಿರುತವುಂ ನೆಲಸಿಹವುಸತ್ಯವಿನಯವು
ಭೂತದಯೆ ॥ ಪರಸಹಾಯವ ಹಿಂಸೆ ಗುರು ಹಿರಿ । ಯರ ಭಕುತಿ ವಿ
ಶ್ವಾಸ ಮೇದಿನಿ । ಸುರರಸೇವೆಯುಮಲಮತಿ ಸಕಲ ದಾನ ಧರ್ಮಗಳು
॥ ೧೬ ॥ ಎಲ್ಲರುಂ ವಿದ್ಯಾನಿಪುಣ ರಹ । ರೆಲ್ಲರುಂ ದಾನಗಳನಾಗಿಪ ।
ರೆಲ್ಲರುಂ ತೋಷಿಪ ರತಿಥಿಯಭ್ಯಾಗತರುಗಳನು ॥ ಎಲ್ಲರುಂ ಸುಖಗ
ಳನು ಹೊಂದುವ । ರೆಲ್ಲರುಂ ಸಂತಸವನಾಂತಿಹ । ರೆಲ್ಲರುಂ ದೇವಾ
ರ್ಚನೆಗಳ ನೆಸಗುತಿಹ ರನುದಿನ ॥ ೧೭ ॥ ಆವಕಾಲದ ಲಾವತಾಣದ
ಲಾವವಿಧದೊಳ ಗಾವಮಾನವ । ನಾವನೋವನು ಮಾಡಲರಿಯನು
ಜನಕರಾಜ್ಯದಲಿ ॥ ತಾವು ಸತಿಸುತ ಬಂಧುಗಳ ಸಹಿ । ತಾವಗಂ ಸಂತ
ಸವ ತಳೆದಾ । ದೇವದೇವನ ಪಾದಕಮಲವ ಪೂಜಿಸುತಲಿಹರು ॥ ೧೮ ॥
ಕಮಲ ಭವನಂತೆ ವಿಬುಧಯುತಂ । ಹಿಮಕಿರಣನಂತೆ ಕುವಲಯ
ಯುತ । ನಮರಪತಿಯಂತೆ ವಸುವಿನುತಂ ರಜತಗಿರಿಯಂತೆ ॥ ವಿಮಲ
ಶಿವಭರಿತಂ ಗಗನದಂ । ತೆ ಮಹಿತ ಕವಿಗುರುವಿನುತಂ ಸಿರಿ । ರಮಣ
ನಂತೆ ಚತುರಬಲಾನ್ವಿತ ನೆನಿಸಿದನು ಜನಕ ॥ ೧೯ ॥ ಸುರಮಣಿಯುತಂ
ಧರಣಿಧರಸಂ । ತರುತರದ್ವಿಜ ರಾಜಮಹಿತಂ । ಗಿರಿಶನಂತೆ ನಿರ್ದೋಷ
ನಾ ದಿವಸಾಧಿಪತಿಯಂತೆ ॥ ಸುರುಚಿರಭುವನ ರಮ್ಯನಾಘನ । ಸರಸಿ
ಯಂತೆ ಸುಮನಸವಿಹಿತಂ । ಸುರನಿಲಯದಂತಾವಗಂ ತಾನೆನಿಸಿದನು
ಜನಕ ॥ ೨೦ ॥ ಈ ಪರಿಯೊಳಾರಾಜ ಧರ್ಮದೆ । ಭೂಪತಿಜನಕ ಪಾಲಿ

ಸುತ್ತಿರೆ । ಭೂಪನೆ ಸಕಲ ಭೂಮಿಯು ನನುಜಸತ್ತಿ ಸಚಿವರಿಂದೆ । ಲೋ
ಪವಿಲ್ಲದೆ ರಾಜ ಸುಖದೊಳು । ಕೋಪಮುಳಿದೀ ಭೂತಳದೊಳಹ ।
ತಾಪಸರಮತದಿಂದೆಸಗಿದನು ಸಕಲ ಧರ್ಮಗಳ ‖ ೨೧ ‖ ದೇವರಾತ
ನೃಪಾಲಗೆ ಮಹಾ । ದೇವನಿತ್ತಾ ಶಿವಧನುವ ತಾ । ನಾವಕಾಲದೆ ತಪ್ಪದೆ
ಯನುಜ ನಾಕುಶಧ್ವಜನ । ತೀವಿದ ಸಹಾಯದೊಳು ಪೂಜಿಸಿ । ನೋ
ವನಾನದೆ ವಿಮಲಸುಮನೋ । ಭಾವದಲಿರಕ್ಷಿಸಿದ ನಾಜನಕ ನವನೀತ
ಳವ ‖ ೨೨ ‖ ಮುನಿಪ ವಿಶ್ವಾಮಿತ್ರ ಗೌತಮ । ಜನನುತಾತ್ರಿವಸಿಷ್ಠ
ಶೌನಕ । ರೆನಿಪಮುನಿಪರು ಶಿಷ್ಯರೊಡನೈತಂದು ನೃಪನಿಂದ ‖ ಮನ
ದಣಿಯೆ ಕೈಕೊಂಡು ಪೂಜೆಗ । ಳನು ಬಳಿಕ ಭೋಜನವ ನಾಗಿಸಿ ।
ಜನಕನಂ ಪರಸುತ್ತ ಪೋದರು ತಿಳಿಸಿ ಧರ್ಮಗಳ ‖ ೨೩ ‖ ಮುನಿಪತಿ
ಗಳಿಂದೀ ತೆರದೊಳಾ । ಜನಕ ಭೂಪತಿ ಸಕಲ ಧರ್ಮಗ । ಳನು ವರಿತು
ನಿಜನಿತ್ಯ ಕೃತ್ಯಂಗಳನು ತಾನೆಸಗಿ ‖ ಮುನಿಸಮೂಹವ ನಖಿಳಭೂ
ಸುರ । ರನಿವಹವ ಸಂತೋಷಗೊಳಿಸುತ । ದಿನದಿನದೆ ಧರ್ಮದಲಿ ಪಾಲಿ
ಸುತಿದ್ದನು ಧರಣಿಯ ‖ ೨೪ । ಭೂತಳವ ನೀಪರಿಯೊಳು ಸಲಹು ।
ವಾತನ ಸತಿಸುಮೇಧೆಯೆಂದೆನಿ । ಪಾ ತರುಣಿಮಣಿ ಪತಿಯತೋಷಿಸುತ
ಖಿಳಕೃತ್ಯದಲಿ ‖ ಖ್ಯಾತಿವಡೆದಾ ವ್ರತಗಳೆಸಗುತ । ಮಾತೆ ಸಕಲ ಜನ
ರಿಗೆ ತಾನೆನೆ । ನೀತಿಯಿಂದೆಸಗಿದಳು ದೇವನಿಕರಕೆ ಪೂಜೆಗಳ ‖ ೨೫ ‖
ಸತಿಸುಮೇಧೆಯೆನಿಪ ವಧೂಮಣಿ । ಸುತರು ತನ್ನುದರದೊಳುದಿಸದಿರೆ ।
ಗತಿಯೊದಗದೆಂದೆನುತ ಮನದಲಿನೊಂದು ಕೊರಗುತ್ತ ‖ ಸತತಮುಂ
ಚಿಂತಿಸುತ ತನ್ನಯ । ಪತಿಯೊಡನೆ ಸಂಕಟವಪೇಳ್ದು ಪ । ಲತೆರದಿಂ
ಮರುಗಿದಳು ಬೇವುತ ತನ್ನ ಚಿತ್ತದಲಿ ‖ ೨೬ ‖ ಪಲತೆರದ ರಾಜೋಪ
ಚಾರಗ । ಳಲಿ ಮನವನಾಗಿಸದುಳಿದು ಸುಖ । ಗಳಗೆಳೆಯರೊಡನಾನದೆ
ಮುದವನೊಂದು ಬಿಸುಸುಯ್ದು ‖ ಇಳೆಯೊಳೆಲ್ಲರು ಬಂಜೆಯೆಂದೆನು ।
ತಲಿ ಕರೆದಪರು ತನ್ನನೆಂದಾ । ಲಲನೆಪೇಳಿದಳಂತರಂಗದೊಳಳುತ ನಿಜ
ಪತಿಗೆ ‖ ೨೭ ‖ ಒಂದುಸಮಯದೊಳಾ ಗಣಪತಿಯ । ನೊಂದು ಸ
ಮಯದೊಳಂಬಿಕೆಯ ಮ । ತ್ತೊಂದುಸಮಯದೆ ತುಲಸಿಬಿಲ್ವಾಶ್ವತ್ಥ
ತರುಗಳನು ‖ ಒಂದುಸಮಯದೊಳಾ ಸವಿತೃವ । ನೊಂದು ಸಮಯ
ದಲಿ ನಾಗಗಳನು । ಚಂದದಲಿ ಪೂಜಿಸುತಲಿರ್ದಳು ಸುತರುದಿಸಲೆನುತ

॥ ೨೮ ॥ ಸತ್ರಿಯು ದುಃಖವಶಾಣುತಾ ಜನ । ಪತಿಮನದೊಳುರೆ ಚಿಂ
ತಿಸುತತನ । ಗತಿಹಿತನೆನಿಪ ಮಂತ್ರಿಯಾದ ಸುಧಾಮನನು ಕರೆದು ॥
ನುತಿವಡೆದ ಮುನಿಪಾಲರಿಗೆ ನೀಂ । ನತಿಭಕುತಿಯಿಂದೆರಗಿ ಕೂಡೆ ಕ । ರೆ
ತಪುದೆನ್ನಯ ಬಿನ್ನಪವ ಮನ್ನಿಸುತಬಹುದೆಂದು ॥ ೨೯ ॥ ಅರಸ
ನಾಜ್ಞೆಯೊಳಾಸುಧಾಮನು । ವರಮುನಿಗಳಸಿಪತ್ರಿಗೌತಮ । ಗುರು
ವಸಿಷ್ಠಸುಯಜ್ಞ ವಾಲ್ಮೀಕಿಗಳ ಬಳಿಗೈದಿ ॥ ಚರಣಕೆರಗುತ ಬಿನ್ನ
ವಿಸಿದನು । ಧರಣಿಪಾಲಕ ಜನಕನಾತನ । ಪುರಕೆ ತಮ್ಮನು ಕರೆತರುವು
ದೆಂದು ಕಳುಹಿದನೆನುತ । ೩೦ । ಸಚಿವವಿನಯದಿ ಬಿನ್ನವಿಸಿದಾ । ವ
ಚನವನು ಕೇಳುತ್ತ ಮುನಿಪರಿ । ದುಚಿತವೆಂದೆನುತಾಗಳೆಲ್ಲರು ಸಂತಸವ
ತಳೆದು ॥ ಉಚಿತವೃತ್ತಿಯೊಳು ಮಿಥಿಲೆಗೆ ಶಿ । ಷ್ಯಚಯದೊಡವೆರಸು
ತ್ತ ಬಂದರು । ಪಚಿತಸಂತಸದಿಂದೆ ಪೇಳುತಮಧುರವಚನಗಳ ॥ ೩೧ ॥
ಬಂದಮುನಿಪೋತ್ತಮರ ನನುಚರ । ರಿಂದೆತಾಂತಿಳಿ ದಿದಿರುವೆಂದಾ ।
ನಂದದಿಂ ನಿಜಮಂದಿರಕೆ ಕರೆತಂದುಚಿತದಿಂದ ॥ ಬಂಧುರಾಸನಗಳಲಿ
ಕೂಡಿಸು । ತಂದುಮುನಿಪತಿಗಳ ಚರಣಕ್ಕೈ । ತಂದು ನಮಿಸುತ ಪೂಜೆ
ಸಿದನಾ ಜನಕಭಕ್ತಿಯಲಿ ॥ ೩೨ ॥ ನಮಿಸಿಮಾಡಿದ ಪೂಜೆಯನು ಪಡೆ ।
ದುಮುನಿಪಾಲರು ವೇದಮಂತ್ರದೊ । ಳಮಲ ಮಂತ್ರಾಕ್ಷತೆಯನಿತ್ತು
ಪರಸಿನಿಜಾಸನದೆ ॥ ಸಮುಚಿತದೊಳಾತನನು ಕುಳ್ಳಿರಿ । ಸಿ ಮಧುರ
ವಚನದಿಂದ ಕೇಳಿದ । ರುಮನುಜೇಂದ್ರನ ದೇಶಕೋಶಂಗಳಲಿ ಕುಶಲ
ವನು ॥ ೩೩ ॥ ಕ್ಷೇಮದಿಂದಿಹೆನೆಲ್ಲರಿಂದಾಂ । ಕ್ಷೇಮವಾಗಿಹ ರಖಿಳ
ಮಾನವ । ರೀಮಹಿಯೊಳಗೆ ತಮ್ಮನುಗ್ರಹದಿಂದಲೀವರೆಗೆ ॥ ಕ್ಷೇಮ
ವೆಲ್ಲೆಲ್ಲಿಯು ನೆಲಸಿಹುದು । ಭೂಮಿಯೊಳು ತಮ್ಮಯತಪಂಗಳು । ನೇ
ಮವಾಗಿಯೆ ನಡೆವುವೇ ನಿರ್ವಿಘ್ನದೊಳಗೆಂದ ॥ ೩೪ ॥ ಪೊಡವಿಪತಿ ಕೇ
ಳೆಮ್ಮ ತಪಗಳು । ನಡೆವುವು ನೆಲದೊಳಾವವಿಘ್ನವ । ಪಡೆಯದೆಸಗುವ
ನಿನ್ನ ನೆರವಿಂ ಸುಕರವೆಂದೆನಿಸಿ ॥ ಒಡೆಯನೀಂ ಕರಿಸಿದಬಗೆಯದೇಂ ।
ತಡೆಯದರುಹೆಂದೆನಲು ಭೂಪತಿ । ನುಡಿದನಧ್ವರವನೆಸಗುವ ಭೀಷ್ಟವ
ನು ಪವಕೆರಗಿ ॥ ೩೫ ॥ ನಮ್ಮಹಿಂದಣ ಜನಪರಂದದೆ । ತಮ್ಮಗಳನು
ಜ್ಞೆಯೊಳಖಿಳಜನ । ಸಮ್ಮತವೆನಿಪ ಯಾಗವನುನಾಂ ಮಾಡಬೇಕೆನು
ತ ॥ ತಮ್ಮ ಚರಣಾಂಬುಜಕೆ ನಮಿಸಿಯೆ । ಸಮ್ಮುದದೆಬೇಡುವೆನು ಸ

ರರಿಗೆ । ಸಮ್ಮತವೆನಿಪ್ಪಂತೆ ಮಾಡಿಸಿ ಸಲಹಿಸೀವೆಂದ ॥ ೩೬ ॥ ಜನಕ
ಭೂಮಿಪ ನಿನ್ನ ಕೋರಿಕೆ । ಜನವಿನುತವಾಗಿಹುದು ನೈಜಮಿ । ದುನಿ
ಮಿಕುಲ ಭೂಪರಲಿ ಸಂತಸವೆನಿಪುದಿದು ನಮಗೆ ॥ ಘನತರವೆನಿಪ
ಕ್ರತುವವಾಳ್ಪುದು । ಮುನಿಶತಾನಂದನನ ಮತದೊಳಿ । ದನು ನಡಿ
ಸುವೆವು ನಾವೆನುತೊರೆದು ಪರಸಿಗಮಿಸಿದರು ॥ ೩೭ ॥ ಮುನಿವರ ಶ
ತಾನಂದನನ ಪದ । ಕೆ ನಮಿಸುತ್ತಲೊರೆದನು ನನ್ನಯ । ವಿನುತ
ಯಾಗಕೆ ಯಾಜಮಾನ್ಯವನಾಂತು ನೀಂಬಳಿಕ ॥ ಘನತರವಹಸ್ರುಕ್ಸ್ರು
ವಾದಿಗ । ಳನು ಬಗೆಬಗೆಯ ಸಕಲವಿಧವೆಂ । ದಿನಿಪ ವಸ್ತು ಚಯವನು
ಮಾಡಿಸಿ ಮನುಜರಿಂದೆನುತ ॥ ೩೮ ॥ ಬಳಿಕ ಸಚಿವಸುಧಾಮನಿಗೆ
ತಾಂ । ತಿಳಿಸಿದನು ನೀಂ ಸಕಲಮೇದಿನಿ । ತಳದೊಳಿಹ ರಾಜರನು ತಾ
ಪಸವರರ ಕರೆತರುತ ॥ ತಳೆದುಸಂತಸವನು ನಡೆವಮಖ । ದೊಳು
ಸಕಲಮಾನವರು ದಿನದಿನ । ಗಳೊಳು ತೃಪ್ತಿ ಪಡೆವವೊಲೊದಗಿಸು ಧಾ
ನ್ಯಗಳನೆನುತ ॥ ೩೯ ॥ ಸೋದರಕುಶಧ್ವಜನ ತಾಕರೆ । ದಾವರಿಸುತ
ಹಿತವಚನದೊಳಿಃ । ಮೋದದಿಂದೆ ನುಡಿದನು ನೀನೀ ಪುರದ ಹೊರಗಡೆ
ಯು ॥ ಮೇದಿನಿಯೊಳು ವಿರಚಿಸುವುದು ಬೇ । ಕಾದ ಸದನಂಗಳನ
ವುಗಳಲಿ । ಸಾದರದೊಳಿರಿಸುವುದು ವಿವಿಧ ಪದಾರ್ಥಗಳನೆನುತ ॥ ೪೦ ॥
ಆಗಳಾ ಭೂಪತಿ ನುಡಿದ ನನು । ರಾಗದಿಂದಾ ಪರಿಚರರಿಗೆ ಸ । ರಾಗ
ದೊಳುನೀ ವೀಯಮಾತ್ಯ ಪುರೋಹಿತರ ಮತದೆ ॥ ಯಾಗದಖಿಳ
ವಿಧಕೆಲಸಂಗಳ । ಬೇಗವಿರಚಿಸಿ ಜನಕೆಸುಖಗಳ । ನಾಗಿಸಿ ನನಗೆ
ಸಂತಸವನಾಗಿಸುವುದೆಂದೆನುತ ॥ ೪೧ ॥ ಹಿತದೆ ಭವನಕ್ಕೈತರುತ ನಿಜ
ಸತಿಗೆ ಪೇಳಿದನಾಜನಕ ಭೂ । ಪತಿ ಮಖವನೆಸಗುವೆನು ತಾಪಸರಾಜ್ಞೆ
ಯನುತಾಳ್ದು ॥ ಗತಿಯೊದಗುವುದೆಮಗೆ ಸಮಸ್ತ ಜ । ನ ತತಿತೃಪ್ತಿ
ಪಡೆವುದು ದಿವಿಜರಿ । ಗತಿಹಿತವೆನಿಪುದೆಂದು ಪೇಳುತ ಸಂತಸಪಡಿಸಿದ
॥ ೪೨ ॥ ಆವಚನವನು ಕೇಳುತಾಸತಿ । ನೋವನುಳಿದಾನಂದಗೊಳ್ಳುತ ।
ಭೂವರನೊಡನೆ ನುಡಿದಳೀ ಯಾಗದೊಳು ಸಕಲರಿಗೆ ॥ ಆವಕೊರ
ತೆಯು ಜನಿಸದಂದದೆ । ತಾವು ಮಾಡಿಸಿ ತೃಪ್ತಿಪಡಿಸುತ । ದೇವ ತತಿ
ಯನು ನಮಿಸಿ ಪೂಜಿಪುದಧಿಕ ಭಕ್ತಿಯಲಿ ॥ ೪೩ ॥ ಪುರದ ಹೊರಭಾಗ
ದೊಳು ಸಮೆದವು । ಮೆರೆವ ಘನಮಂದಿರಗಳು ವಿವಿಧ । ಕರಿತುರಗ

ರಥಶಾಲೆಗಳು ವರನೆಂಟಪಾದಿಗಳು ॥ ತರತರದ ಭವನಗಳು ನೀರಾ ।
ಕರಗಳುಂ ಮಜ್ಜನಮನೆಗಳುರು । ತರದ ಪಾಕಭವನಗಳಾ ಭೋಜ
ನದ ಶಾಲೆಗಳು ॥ ೪೪ ॥ ಅರಸನಾಣತಿಯಿಂ ಸುಧಾಮನು । ತರಿಸಿದನು
ನವಧಾನ್ಯಗಳ ನವು । ಗಿರಿಗೆ ಸಮವಪ ರಾಶಿಗಳೆನಿಸಿ ತೋರಿದವು
ಕಣ್ಗೆ ॥ ಪರಿಪರಿಯ ಪರಿಕರದ ವಸ್ತು ನಿ । ಕರಗಳೆಲ್ಲವನನುಗೊಳಿಸು
ತಲಿ । ಳರಿಗೆ ಸಾಕಾಗುವಪ್ರೊಲಿರಿಸಿದನು ವರವಸನಗಳ ॥ ೪೫ ॥
ಮುನಿಶತಾನಂದನನುವಾಡಿಸಿ । ದನು ಮಂಬಲಗಿಮನುಜರಿಂದೆಸ । ವ
ನದ ಸಾಮಗ್ರಿಗಳನು ವಿಧಿವಿಹಿತ ಘನಮಾರ್ಗದಲಿ ॥ ಮುನಿಪತಿಗಳೊ
ಪ್ಪುವ ಪರಿಬೊಳು । ಮನುಜ ಪತಿಮೆಚ್ಚುವ ತೆರದೊಳಾ । ವಿನುತ
ನಗರಿಯೊಳೆಸೆವುದು ಸಕಲವಸ್ತು ಸಂದೋಹ ॥ ೪೬ ॥ ಬರಿಸಿದನು
ಬಳಿಕಾ ಜನಕ ಭೂ । ವರನು ಲಗ್ನಪತ್ರಿಕೆಗಳನು ಭೂ । ಸುರರಿಗೆ
ಸಮಸ್ತ ಮುನಿಪಾಲಕರಿಗಖಿಳ ನೃಪರಿಗೆ ॥ ಪರಿಪರಿಯ ವರ್ಣಾಶ್ರಮ
ದವರಿ । ಗೆ ರಚಿಸುವೆನನ್ನ ವರಯಾಗಕೆ । ಬರುವುದೆಲ್ಲರ ಗೂಡಿ ಸಕು
ಟುಂಬದೊಳು ನೀವೆನುತ ॥ ೪೭ ॥ ಬಗೆಬಗೆ ಯಲಂಕಾರದಿಂದಲೆ ।
ಸಗಿದರು ವಿವಿಧ ಚಪ್ಪರಗಳನು । ನಗರಿಯಲ್ಲೆಲ್ಲೆಲ್ಲಿಯುಂ ಮನೆಮನೆಗೆ
ಕ್ರಮದಿಂದ ॥ ಸೊಗಸುವಂದದೆ ವರಘನಪತಾ । ಕೆಗಳ ನಿರಿಸಿದರಾ
ಮಿಥಿಲೆಯ ಗು । ಡಿಗಳನಾಪರಿಯೊಳಗಲಂಕರಿಸಿದರು ಭಾಪಿನೀಲ
॥ ೪೮ ॥ ಸಕಲಜನರಾ ಭೂಪತಿ ನುಡಿವು । ದಕೆ ಮೊದಲೆ ತಾವೆತ್ತಿಮು
ದನಿಸವ । ನಕೆಲಸಗಳೆಲ್ಲವನು ಶೀಘ್ರದೊಳಾಗಿಸುತ ಕೂಡೆ ॥ ಸಕಲರಿಗೆ
ಕುಂಮುಕೊರತೆ ಗಳಾ । ವಕಡೆಯೊಳು ಸಂಜನಿಸದಂತೆಪ । ರಿಕರಗಳ
ತುಂಬಿದರು ಕಣ್ಮನದಣಿಯೆ ಸಕಲರ್ಗೆ ॥ ೪೯ ॥ ಜನಕಭೂಪತಿ ನೋಡ
ರನ ಸಹಿ । ತ ನಗರದೊಳು ಜನರೆಸಗಿದಾ । ಘನಸವನಕೃತ್ಯಗಳನೆಲ್ಲ
ಪಂಕಿಸಿದಬಳಿಕ ॥ ಮುನಿಪರಾಗಮ ನವನಿರೀಕ್ಷಿಸು । ತ ನಿಜಮಂತ್ರಿ
ಪುರೋಹಿತರುಗಳೊ । ಡನೆ ಸಲೆನುಡಿಯುತಿದ್ದನಧ್ವರ ವೆಸಗುವಾಪ
ರಿಯ ॥ ೫೦ ॥

ಇಂತು ಎರಡನೇ ಅಧ್ಯಾಯ ಸಂಪೂರ್ಣವು ಪದ್ಯಗಳು ೬೦.

ಮೂರನೆಯ ಅಧ್ಯಾಯ.

ಸೂಚನೆ ॥ ಯಾಗಕೆ ನೆಲವ ಶೋಧಿಸುತ್ತಿರೆ ।
ನೇಗಿಲ ಕೊನೆಗೆ ಸಿಕ್ಕಿದ ಶಿಶುವೆ ।
ನಾಗಲೆ ಕರೆದು ಸೀತೆಯೆನುತ ಸಲಹಿದನಾಜನಕ ॥

ಬಳಿಕಲಾ ಸಚಿವನವಚನವನು । ತಿಳಿದುಲಿಖಿಸಿದ ಪತ್ರಗಳ
ಕಂ । ಡಿಳೆಯೊಳಹ ಮುನಿಪಾಲರೆಲ್ಲರು ಶಿಷ್ಯರೊಡವೆರಸಿ । ತಳೆದ
ಸಂತಸ ದಿಂದೆಬಂದರು । ನೆಲದೊಡೆಯರ್ಯೈತಂದರು ವರಮಿ । ಥಿಳೆಗೆ
ಸಕಲ ಪರಿಚರರಿಂದೊಡಗೂಡಿ ನೆರೆನೆರೆದು ॥ ೧ ॥ ಬಂದ ಮುನಿಪಾಲ
ಕರಬಳಿ ಗೈ । ತಂದು ಪದಪಂಕಜಕೆರಗಿ ಕರೆ । ತಂದುಚಿತನಿಲಯಗ
ಳೊಳಿರಿಸಿದ ನಿರದೆಹರ್ಷದಲಿ ॥ ಚಂದವಹ ವಸ್ತುಗಳನಿಡಿಸಿದ । ನಂದು
ಕೊರತೆಗಳಾವುದುಂ ಸಲೆ । ಸಂಧಿಸದವೊಲುನೇಮಿಸಿದನು ಚದುರರೆನಿಪ
ಜನರ ॥ ೨ ॥ ಅವನಿಪತಿಗಳ ನಾನೃಪಾಲಕ । ತವಕದೊಳಿದಿರುಗೊ
ಳ್ಳುತಿರಿಸಿದ । ನು ವರರಾಜಭವನಗಳಲಿ ಮನ್ನಿಸಿ ಯುಪಚರಿಸುತ ॥
ಸವಿನುಡಿಗಳಿಂದೆಲ್ಲರ ಮನದ । ಣಿವಬಗೆಯೊಳಾಜನಪರಸಕಲ । ಭವನ
ಗಳ ತುಂಬಿಸಿದನು ವಿವಿಧ ವಸ್ತುಚಯದಿಂದ ॥ ೩ ॥ ರಾಯಜನಕನು
ಸಕಲದೇಶದ । ರಾಯರನುಮತದಿಂದೆ ಮುನಿಸಮು । ದಾಯದಲಿ
ಚೈತ್ರಸಿತ ಪಂಚಮಿ ಸೋಮವಾರದೊಳು ॥ ಶ್ರೀ ಯರಸನಿಗೆ ಪ್ರೀತಿ
ಕರಮೆನಿ । ಪಾ ಯಜನಶಾಲೆಯನು ಹೊಕ್ಕನು । ಶ್ರೇಯವನೊದಗಿ
ಸುವ ವಿಮಲಗೋಧೂಳಿ ಲಗ್ನದಲಿ ॥ ೪ ॥ ಪರಮಪಾವನರೆನಿಪಕಶ್ಯಪ ।
ಗುರುವಸಿಷ್ಠ ಸುಯಜ್ಞಗೌತಮ । ವರಭರದ್ವಾಜ ಜಮದಗ್ನಿಯ
ಗಸ್ತ್ಯಶೌನಕರು ॥ ನೆರೆದುಜಾಬಾಲಿ ಶುಕಮುಖರ । ಧ್ವರದವೇದಿಯ
ನೆಸಗಲವನಿಯ । ನರಿತು ಶೋಧಿಸಲೊರೆದರತ್ರಿಯ ಮತವನನುಸರಿಸಿ
॥ ೫ ॥ ಕ್ರತುವಿಗೆಂದೆನು ತಾಮುನೀಂದ್ರರ । ಮತದೊಳವನಿಯ ಶೋ
ಧಿಸುತ್ತಿರ । ಲು ತಗಲಿದುದೊಂದು ಘನಪೆಟ್ಟಿಗೆ ನೇಗಲಿನ ಕೊನೆಗೆ ॥
ಅತಿ ಹರುಷದಿಂದಾಜನಕ ಭೂ । ಪತಿಯು ನೋಡಿದನದನು ತೆಗೆಯಿಸಿ ।
ಹಿತರೊಡನೆ ಕನಕಾಂಬುಜದ ಮಧ್ಯದಲಿ ಕೋಮಲೆಯ ॥ ೬ ॥ ಏನಿ
ದೆಂದೆನು ತಚ್ಚರಿವಡೆದು । ತಾನುನೆರೆನೋಡುತ ಮನದೊಳನು । ಮಾ

ನಿಸಿಮೊದಲಿನಂತ್ರಿದನಿರಿಸುವೆನವನಿಯೊಳೆನುತ ॥ ಜ್ಞಾನನಿಧಿಗಳಹ ಮುನಿ
ಪಾಲರಿ । ಗಾ ನರಪತ್ರಿನಮಿಸಿ ನುಡಿದನು ನಿ । ಧಾನದಲಿ ತಡಬಡಿಸುವಾ
ಗದ್ಗದನುಡಿಗಳಿಂದ ॥ ೭ ॥ ಕೇಳಿಸಿದುದಾಗಳೆ ಜನಕಭೂ । ಪಾಲಕನಿ
ಗಶರೀರವಾಣಿಯು । ಮೇಲೆಯಾಗಸದಲ್ಲಿ ಜನಕನೆನಿನ್ನಸುತೆ ಯೆನುತ ॥
ಆಲಿಸಿಯುವನು ಬಹಳಸಂತಸ । ತಾಳುತಂಕದೊಳೇರಿಸೀಕ್ಷಿಸು । ತಾ
ಲಲನೆಯನು ಸೀತೆಯೆನ್ನುತ ಕರೆದನಾಜನಕ ॥ ೮ ॥ ಸೀರದಗ್ರಕೆ ನೆಲ
ದೆಸಿಕ್ಕಿದ । ಕಾರಣವೆ ಸೀತೆಯೆನುತ ಜನಕ । ಭೂರಮಣನಾಶಿಶುಗೆ
ನಾಮಕರಣವ ತಾಂಮಾಡಿ ॥ ಬಾರಿಬಾರಿಗೆ ಮುದ್ದಿಸಿನಗಿಸಿ । ಮಾರಿದಾ
ನಂದವನು ತಾಳ್ದು । ಬ್ಬೇರಿದನು ಚಂದ್ರನನು ಕಂಡುಕ್ಕುವಜಲಧಿ
ಯಂತೆ ॥ ೯ ॥ ತೊಟ್ಟ ಹೊಸಯುಪವೀತವ ಹಣೆಯೊ । ಳಿಟ್ಟ ನಾಮದ
ಪಿಡಿದವೀಣೆಯು । ಕಟ್ಟಿದ ಕರಣಗಳತಳೆದ ರುದ್ರಾಕ್ಷಮಾಲೆಗಳ ॥
ಮುಟ್ಟ ಮಾಡುವ ಜಪದಮಾರಮುನಿ । ನೆಟ್ಟನೆ ಭಜಿಸುತ ಹರಿನಾಮ
ವ । ಥಟ್ಟನಾಗಸದಿಂದಿಳಿದು ನಿಂದನೃಪ ನಿದಿರಿನಲಿ ॥ ೧೦ ॥ ಅರಸಕೇ
ಳ್ಭೂಜಾತೆ ಯೆನಿಸೀ । ತರುಣಿ ಸಾಕ್ಷಾಲ್ಲಕ್ಷ್ಮಿಯೆನಿಸುವ । ಳುರೆಸಲ
ಹುನೀನೀ ಶಿಶುವನೀಕೆಯುನುವರಿಸುವೊಡೆ ॥ ಹರನಚಾಪವ ಭಂಗಿ
ಸುವ ಮನು । ಜರು ಬಹುದೆನುತ ಪಣವಿಡುಧನುವ । ಮುರಿದುಪಡೆ
ವನು ವಿಷ್ಣುವೆನ್ನುತ ನಾರದನುಡಿದನು ॥ ೧೧ ॥ ಸುರಿದುದಾಗಳೆ
ಕುಸುಮವೃಷ್ಟಿಯು । ಸುರರ ದುಂದುಭಿಗಳು ಮೊರೆದವೆ । ಪ್ಸರರು
ಸಂತಸದಿಂದೆ ನಾಟ್ಯವಮಾಡಿದರುಕೂಡೆ ॥ ನೆರೆದುಗಾನವಮಾಡಿದರು
ತುಂ । ಬುರರು ಬಳಿಕಾಜನಕ ನಿಜಸತಿ । ಗೊರೆದು ತಾನಿತ್ತನಿವಳನು
ಪಾಲಿಪುದು ಸೀನೆನುತ ॥ ೧೨ ॥ ಬಡವ ನೀಭೂಮಿಯೊಳು ನಿಧಿಯ
ನು । ಪಡೆವವೊಲು ಬರದೊಳುರೆಬತ್ತಿದ । ಗಿಡವು ವೃಷ್ಟಿಯನಾಂತ
ವೊಲುಹಸಿವಿಂದೆ ಬಳಲಿದ್ದ ॥ ಜಡತೆಯಾಂತವನಮೃತದನ್ನವ ।
ಪಡೆವ ತೆರದಿಂದಾ ಮಹೀಪತಿ । ಪಡೆದು ಬಾಲೆಯುಮನದೊಳಾಂತನು
ಮಿಗಿಲುಸಂತಸವ ॥ ೧೩ ॥ ಬಳಿಕಲಾಮುನಿವರರಿಗೆ. ವರಣ । ಗಳನು
ಕೊಟ್ಟಶ್ವತ್ಥದಾಮರ । ದೊಳು ಪಡೆದುವರವಹ್ನಿಯನು ಘನಯಾಗ
ಶಾಲೆಯೊಳು ॥ ಥಳಥಳಿಪ ತ್ರೇತಾಗ್ನಿಗಳ ನನು । ಗೊಳಿಸುತಾರಂಭಿಸಿ
ದನು ಜನಕ । ಬಳಸಿದಾ ಋತ್ವಿಕ್ಕುಗಳನೇಮವನು ಕೈಕೊಳು

ತ ॥ ೧೪ ॥ ಉದಯಮಧ್ಯಾಹ್ನ ಪರಸಾಯಂ । ತ್ರಿದ ಸಮಯಗಳೊಳಾ
ಮುನಿಜನತಿ । ಮುದದೊಳಾಹವನೀಯಗಾರುಹಪತ್ಯದಕ್ಷಿಣದ । ಸವ
ಮುಖಸುಕುಂಡಗಳೊಳು ಮುನಿ ಮ । ತದೊಳು ಹೋಮವನಾಗಿಸಿ
ದನತಿ । ಚಮರರದೊಳು ಸತಿಸಹಿತ ಘನತರಸಾಮಗಾನದಲಿ ॥ ೧೫ ॥
ಒಂದುಕಡೆ ಘನಸಾಮಗಾನ ಮ । ದೊಂದುಕಡೆ ವರಹೋಮಧೂಮ
ಮ । ದೊಂದುಕಡೆ ಭೂವರನಿವಹ ಮಿನ್ನೊಂದುಕಡೆಯಲ್ಲಿ ॥ ಬಂದು
ತುಂಬಿದ ಜನನಿವಹ ಮ । ತ್ತೊಂದು ಕಡೆಯೊಳು ಸವನವಸ್ತುಗ ।
ಳಂದು ತೋರುತ್ತಿರಲು ರಾರಾಜಿಸಿತು ಮಂಟಪವು ॥ ೧೬ ॥ ಅತಿ
ಮುಖವನು ತಾನಡಿಸಿದನು । ಹೋತ ಮೈತ್ರಾವರಣ ಬ್ರಹ್ಮೋ ।
ದ್ಗಾತನಾಗ್ನೀಧ್ರರನು ಯಧ್ವರ್ಯುಗಳ ಪೆಸರುಗಳ ॥ ಪ್ರೀತಿಯಿಂ
ಪಡೆದಖಿಳ ಋತ್ವಿ । ಗ್ವ್ರಾತಮುಚ್ಚರಿಸುವ ವಿವಿಧಮಂ । ತ್ರಾತಿಶಯದಿಂ
ಗೈದು ಹೋಮವನಾತ್ರಿಕಾಲದಲಿ ॥ ೧೭ ॥ ವಿನುತ ಯೂಪಸ್ತಂಭಕೆ
ಬಿಗಿದ । ಘನಪಶುಗಳೆಡೆಗೈದಿ ಮಂತ್ರಗ । ಳನು ನುಡಿದು ಋತ್ವಿಕ್ಕು
ಗಳು ಸಂಹರಿಸಿ ಯವುಗಳನು ॥ ಜನರುನೋಡುತ್ತಿರೆ ಪಶುಗಳ ವಪೆ
ಯನು ತೆಗೆದು ಗೋಘೃತವ ಸುರಿಸುತ । ಜನಕ ಭೂಪತಿಯಿಂದೆ
ಘನಹೋಮವನು ರಚಿಸಿದರು ॥ ೧೮ ॥ ಸವನಕಾರಂಭಿಸಿದ ದಿನದಿಂ ।
ದವನಿಪತಿಭೂಸುರರು ಮೊದಲಹ । ವಿವಿಧ ವರ್ಣಾಶ್ರಮದ ಮನುಜ
ರಿಗೆರಡುವೇಳೆಯಲಿ ॥ ಸವಿವಡೆದಖಿಳ ಭಕ್ಷ್ಯ ಭೋಜ್ಯಗ । ಳ ವಿತ
ರಣೆಯಿಂದೆ ಘನಭೋಜನ । ವ ವಿರಚಿಸಿದನು ತೃಪ್ತಿಪಡೆದೆಲ್ಲರು
ಪೊಗಳುವಂತೆ ॥ ೧೯ ॥ ಚರುಪುರೋಡಾಶಗಳನು ಸಕಲ । ತೆರದ
ಸಮಿಧೆಗಳ ನನಲನೊಳಾ । ನರಪತಿ ವರಘೃತಸಹಿತಾಘನ ವೇದಮಂತ್ರ
ದಲಿ ॥ ಪರಮಭಕ್ತಿಯೊಳಾಹುತಿಗೊಡುತ । ಸುರರನೆಲ್ಲರ ದಣಿಸಿಮಿ
ಗೆ ಸೋಂ । ಮರಸಪಾನವಮಾಡಿದನುಋತ್ವಿಗ್ಜನರಸಹಿತ ॥ ೨೦ ॥ ಎಲ್ಲ
ಋತ್ವಿಕ್ಕುಗಳೊಡನೆ ತಾ । ನಲ್ಲಿ ಯವಭೃತವ ನೆಸಗಿಬಳಿಕ । ಸಲ್ಲ
ಲಿತ ಮನದಿಂದೆ ಮಾಡಿದ ನಖಿಳದಾನಗಳ ॥ ಎಲ್ಲಡೆಯೊಳಾತನನು
ಪೊಗಳಿದ । ರಲ್ಲಿ ಪಡೆದಾದಕ್ಷಿಣೆಗಳನು । ಚೆಲ್ಲಿದರು ಪೊರಲಾರದಾಭೂ
ಸುರರು ಮಾರ್ಗದಲಿ ॥ ೨೧ ॥ ವರಮವಿಭಾಗದಲಿ ದಣಿವರು । ಸು
ರರು ಗೋಧನಕನಕ ವಸ್ತ್ರ ನಿ । ಕರದಲತಿಸಂತಸವನಾಂತರು ಸಕಲ

ಖುಷ್ಪಿಹರು । ತರತರದ ಸನ್ಮಾನದೊಳ ನಾಂ । ತರವನೀಪತಿಗಳು ಬಳಿ
ಕುಳಿದ । ನರರು ತಾನ್ವೈದಿದರು ಬಗೆಬಗೆಯುಡಿಗೆ ತೊಡಿಗೆಗಳ ॥ ೨೨ ॥
ಈಪರಿಯೊಳಂ ಘನಸವನವನು । ತಾಪಸರನುಜ್ಞೆಯೊಳಗಿನಿಸುಂ । ಲೋ
ಪವಿಲ್ಲದಂತೆಂದೆಲ್ಲರ ಕಣ್ಮನಂದಣಿಸಿ ॥ ಭೂಪನೆಸಗಿ ಭವನಕೆಬಂದ
ನು । ಭಾಪೆನೆ ಧನಕನಕ ವಸನಗಳ । ತಾಪದೆದುಕೊಡುತಂದು ಮನ್ನಿಸಿ
ಕಳುಹಿ ತವರುಗಳ ॥ ೨೩ ॥ ಮುನಿಪತ್ರಿಗಳಾಶೀರ್ವದಿಸುತಾ । ಜನಕ
ಭೂಪತ್ರಿಯನು ತೆರಳಿದರು । ಘನತಪೋವನಗಳಿಗೆ ತಮ್ಮಯಶಿಷ್ಯರೊಡ
ವೆರಸು ॥ ಜನಪತಿ ನಿಜಭವನದೊಳಾ ಸುತೆ । ಯನು ಸಲಹಿದನು ಸತಿ
ಸುಮೇಧೆಯೊ । ಡನೆವಿವಿಧ ರಾಜೋಪಚಾರಗಳಿಂದೆ ಮುದ್ದಿಸುತ ॥ ೨೪ ॥
ಸುತರನಾನವ ಜನಕಭೂವರ । ನತಿಮುದದೊಳಾ ಸೀತೆಯನು ನಿಜ ।
ಸುತೆಗಧಿಕಳೆಂದೆಣಿಸಿ ಪಾಲಿಸಿದನು ಮಡದಿಸಹಿತ ॥ ಅತಿಮುದದೊಳಾ
ಕೋಮಲೆಗೆ ಸಕ । ಲತೊಡಿಗೆಯುಡಿಗೆಗಳನಿರಿಸುತವ । ಳ ತನುವಿನ
ಸೊಂಕಿಂದೆ ಪಡೆದರು ಸಂತಸವನವರು ॥ ೨೫ ॥ ಕರಕಮಲದಿಂದಾಯ
ಣುಗಿ ನಿಜ । ಚರಣಕಮಲವನು ಸಲೆಪಿಡಿಯುತ । ದರಮೊದಲಿನಾ ಬೆರ
ಳವದನ ಕಮಲದೊಳಿರಿಸುತ್ತ ॥ ತೆರೆದು ಮುಚ್ಚುತ ಕಣ್ಮಲರ್ಗಳ ।
ನರಸನಿಗುಮಾತನ ಸತಿಗುಮನ । ವರತತಾನೆಸಗಿದಳು ಸಂತಸವನ್ನು
ಪಲತೆರದೆ ॥ ೨೬ ॥ ದಿನದಿನದೊಳಾ ಕೋಮಲೆಗೆ ಜನ । ಕನರಸಿಸುಮೇ
ಧೆಘನಸಂತಸ । ವನುತಳೆದು ಸುಪಗೆಯತ್ಯೆಲವನಿರಿಸಿ ತಲೆಯಲ್ಲಿ ॥ ವನ
ಜನೇತ್ರೆಯರೊಡನೆ ಬಿಸುನೀ । ರಿನೊಳು ಮಜ್ಜನವೆಸಗಿ ಯೊರಸುತ ।
ತನುವತಿಲಕವನಿಟ್ಟು ಮಲಗಿಸುತಿಹಳು ತೊಟ್ಟಿಲಲಿ ॥ ೨೭ ॥ ಆದಿಲಕ್ಷ್ಮಿ
ಯು ತಾನೆನಿಸಿದಾ । ಮೇದಿನೀಸುತೆ ಲೋಕಶಿಶುಗಳ । ಮಾದರಿಯೊಳು
ಸಕಲತರತರದ ಬಾಲಲೀಲೆಗಳ ॥ ಸಾದರದೊಳೆಸಗಿ ನಗಿಸುತ ಬೇ । ಕಾ
ದುದನು ತಾನೀವಳೆಂಬವೊಲ್ । ಲಾಧರಣಿಪನ ರಾಜಮಂದಿರದೊಳು ಬೆಳೆ
ದಳಂತು ॥ ೨೮ ॥ ನೆರೆಹೊರೆಯ ಭವನಗಳ ಸತ್ರಿಯರು । ನರಪತಿಯ
ಮನೆಗೈದಿಕಾಣುತ । ಕರಗಳಿಂದಾಯಣುಗಿಯನು ತಾವೆತ್ತಿ ಕೌಂಕುಳೊ
ಳು ॥ ಇರಿಸಿಮುದ್ದಿಸಿ ಯುವಳಸೊಬಗನು । ನೆರೆವಿಲೋಕಿಸಿ ಮನದಣಿ
ಯೆ ಭೂ । ವರನ ರಾಣಿಯಹೊಗಳಿಪೋಪರು ತಮ್ಮಮನೆಗಳಿಗೆ ॥ ೨೯ ॥
ಚಂದಿರನನುರೆಪಳಿವ ವದನದ । ಕುಂದಕುಟ್ಮಲಗಳನು ಧಿಕ್ಕರಿ । ಪಂ

ಪದೆಮೊರೆವ ರದನಪಙ್ಕ್ತಿಯು ಕಮಲದಂಗವನು ॥ ಕಂದಿಪಾನಯನಗಳ ಮಧುರತರ । ದಿಂಪೆರಂಜಿಪ ಕರಚರಣಗಳ । ನಂದುಪಡೆದಾ ಧರಣಿಸುತೆ ತಾನೆಸೆವಳಡಿಗಡಿಗೆ ॥ ೨೦ । ಹಸುವಿನಾನೊರೆವಾಲ ನೃಪಸತಿ । ಮಿಸುಪಚಿನ್ನದ ಬಟ್ಟಲೊಳಿರಿಸಿ । ಪಸುಳೆಗತ್ರಿಸಂತಸದಿ ಕುಡಿಸುವಳನುದಿನಂಗಳಲಿ ॥ ವಸುಧೆಯೊಳು ಸರ್ವೋತ್ತಮವೆನಿಪ । ವಸನಗಳನುಡಿಸುತ್ತ ಮೇಲೆನಿ । ಪ ಸಕಲಾಭರಣಂಗಳನಿರಿಸಿ ಸಿಂಗರಿಸುತಿಹಳು ॥ ೨೧ ॥ ಹೊತ್ತುಹೊತ್ತಿಗೆ ಹಾಲನೀಯುತ । ಮತ್ತೆ ಚಿನ್ನದ ತೊಟ್ಟಿಲೊಳು ತಾ । ನುತ್ತಮದ ಹಾಸಿನೊಳು ಮಲಗಿಸುವಳು ಮಹೀಸುತೆಯ ॥ ಚಿತ್ತರದ ಜೋಗುಳವ ಪಾಡುವ । ಳುತ್ತಮ ಸ್ವರದಿಂದೆ ಪತಿಕ್ಕೈ । ಗಿತ್ತಣುಗಿಯನು ನೋಳ್ಪಳಾಕೆಯ ಬಾಲಲೀಲೆಗಳ ॥ ೨೨ ॥ ವನಜನಾಭನ ಕರುಣೆಯಿಂದೀ । ವನಜನೇತ್ರೆ ನಮಗೆಲಭಿಸಿದಳ । ವನಿಯೊಳೆಮ್ಮಯ ಭಾಗ್ಯಕೆಣೆಯುಂಟೆ ನೃಪನಿವಹದಲಿ ॥ ವನಜನೇತ್ರನ ಸತಿಯೆನಿಸುವೀ । ವನಜವದನೆಯ ಸೇವೆಯಿಂದಾ । ಘನಸುಗತಿಸಂಜನಿಪುದೆಮಗೆಂದನು ಸತಿಗೆ ಜನಕ ॥ ೨೩ ॥ ಒಮ್ಮೆತನ್ನೊಳು ತಾನೆ ನಗುವಳು । ಒಮ್ಮೆ ನಗಿಸುವಳೆಲ್ಲರನು ಮ । ತ್ತೊಮ್ಮೆ ತನ್ನಯ ಬಾಲಲೀಲೆಗಳಿಂದೆ ಸಕಲರಿಗೆ ॥ ಸಮ್ಮದವನೀವಳು ಲಕುಮಿಯೆನೆ । ನಮ್ಮ ಕವತಾನೆಸಗುವಳು ಸಲೆ । ಚಿಮ್ಮುವೆಳಣುಗಿದೇಹ ಕಾಂತಿಯನೆಲ್ಲತಾಣದೊಳು ॥ ೨೪ ॥ ಪುರದನಾರಿಯ ರಾಕುವರಿಯನು । ಕರೆನುತಂದು ನಿಜಭವನಗಳಿಗೆ । ತೊರೆದು ತಮ್ಮಯ ಸುತರಹಾಲನು ಕುಡಿಸಿ ಹಸೆಯೊಳಗೆ ॥ ಇರಿಸಿ ತಿಲಕವ ಕಾಡಿಗೆಯನಾ । ಕರಗಳಿಂ ತಿದ್ದಿ ಜಡೆಹಾಕುತ । ಳಿರಿಸಿ ಪುಷ್ಪಂಗಳ ನಲಂಕರಿಪರು ವಸನಗಳಲಿ ॥ ೨೫ ॥ ಪತಿಗಳಿಗೆ ತೋರಿಪರು ಧರಣೀ । ಸುತೆಯನಾಮಾನಿನಿಯರೀವರು । ಹಿತದೊಳವರಲಿ ನೋಡುವರ ಮಳದೇಹಕಾಂತಿಯನು ॥ ನುತಿಸುವರು ತಾವಾದಿಲಕ್ಷ್ಮಿಯೆ । ನು ತುರೆಸಂತಸವನು ಪಡೆವರು ಸ । ತತವು ಮುದ್ದಿಸಿಲಾಲಿಸಿ ನಗಿಸಿ ನುಡಿಸಿನಡೆಯಿಸುತ ॥ ೨೬ ॥ ಇರಲು ಏಳನೆ ತಿಂಗಳಲಿ ಭೂ । ವರನು ಶುಭವಾಸರದೊಳಣುಗಿಗೆ । ವರವಿಭವದಿಂದೆಸಗಿದನು ಪದೆದನ್ನಪ್ರಾಶನವ ॥ ಧರಣಿ ಸುರರಾದಿಯಹ ಸಕಲಜ । ನರಿಗೆ ವರಭೋಜನವನಾಗಿಸಿ । ತರತರದೊಳುತ್ತನು

ಚಿತ್ರವರಿತು ದಿವ್ಯ ವಸನಗಳ ॥ ೩೭ ॥ ಇಂತು ಕಳೆಯಲು ಕೆಲವುದಿನ
ಸವು । ನಂತರದೊಳಾ ಭೂವರನ ಸತಿ । ಕಂತು ಸತಿಸಮರೂಪೆ ತಾಂಗ
ರ್ಭವನು ತಾಳಿದಳು ॥ ಅಂತವಿಲ್ಲದ ತೆರದೊಳು ಬಳಿಕ । ಸಂತಸ
ವನೈದಿದನವನಿಪತಿ । ಸಂತಸವನೈದಿದರು ಪಟ್ಟಣದಖಿಳಮಾನವರು
॥ ೩೮ ॥ ಜನಕ ನರಸಿಸುಮೇಧೆಧರಿಸುತ । ತನುವಿನೊಳು ಗರ್ಭವನು
ಪಡೆದಳು । ದಿನದಿನದೊಳತ್ಯಧಿಕ ವಿಭವವನಾಜನಕನಿಂದ ॥ ವನಿತೆ ತಾಂ
ಕಳೆದು ನವಮಾಸಗ । ಳನು ಬಳಿಕ ಶುಭವಾಸರದೆ ಶಿಶು । ವನು
ಹಡೆದಳುನವಗ್ರಹಂಗಳು ತೋರುತಿರೆ ಶುಭವ ॥ ೩೯ ॥ ವಸುಮತೀಶನು
ಜಾತಕರ್ಮವ । ನೆಸಗುತ ಶತಾನಂದ ಮುನಿಯಿಂ । ಪಸುಳೆಗಿಟ್ಟನು
ಪೆಸರನೂರ್ಮಿಳೆಯೆನುತ ಹರ್ಷದಲಿ ॥ ಎಸಗಿದನಧಿಕ ದಾನಗಳನು ಜ ।
ನಸಮುದಾಯಕೆ ಭೋಜನವ ನಾ । ಗಿಸುತ ತಾನಿತ್ತನು ಸಕಲರಿಗೆ
ದಿವ್ಯ ವಸ್ತ್ರಗಳ ॥ ೪೦ ॥ ಪಿಡಿದು ಕೈವೆರಲನಡೆ ಕಲಿತಳು । ನುಡಿದನು
ಡಿಗೇಳಿ ನುಡಿಕಲಿತಳು । ಪಡೆದಳಾ ಜನಪಾಲಸಿಂದುರೆರಾಜ ಭೋಗಗ
ಳ ॥ ಪೊಡವಿಯಾತ್ಮಜೆ ಸೀತೆಮುದದಿಂ । ದಡಿಗಡಿಗೆ ತಾ ತಿಳಿದಳು
ಗುರುಗ । ಳೆಡೆಯೊಳಾದರದಿಂದಖಿಳನೀತಿಗಳನು ಮನದಲಿ ॥ ೪೧ ॥
ಪಲತೆರದರಾಜೋಪಚಾರಗ । ಳಲಿ ಪೊರೆದನಾಜನಕ ಭೂವರ । ನಿಳೆ
ಯಣುಗಿಯನು ಸೀತೆತಾನಾಜನನಿ ಜನಕರನು ॥ ಲಲಿತ ವಚನಗಳಿಂದೆ
ತೋಷಿಸು । ತ ಲನುದಿನದೊಳು ತಾನು ತೋರುತ । ಖಿಳವಿನೋದ
ಗಳನು ಬೆಳೆದಳಾರಾಜ ಭವನದಲಿ ॥ ೪೨ ॥ ಉದಯಕಾಲದೊಳೆದ್ದು
ಸೀತೆ ಮ । ನದೊಳು ಜಾನಿಸಿ ದೇವರನುಬಳಿ । ಕುದಯಿಸುವಭಾನು
ವಿಗೆ ಕೈಮುಗಿದು ಜನನಿಜನಕರ ॥ ಪದಗಳ್ಗೆರಗಿ ಮಜ್ಜನವ ನೆಸ ।
ಗಿದಬಳಿಕ ತಾನುಡುವಳಮಲತ । ರ ಧವಳವಸನಗಳನು ತಪ್ಪದೆ ದಿನ
ದಿನಂಗಳಲಿ ॥ ೪೩ ॥ ಸೀತೆ ಭೂವರನಂಕದೊಳು ಸಂ । ಪ್ರೀತಿಯಿಂ
ತಾಂ ಕುಳಿತು ಕೇಳುವ । ಳಾತನುಪದೆದು ಪೇಳುವ ವಿವಿಧ ನೀತಿ
ವಾಕ್ಯಗಳ ॥ ಮಾತೆಯು ಲಲಿತವಚನಗಳ ನಾ । ಭೂತಳಾತ್ಮಜೆ ಕೇ
ಳ್ದುಬಳಿಕಲಿ । ತಾತೆರಳುವಳು ಸಖಿಯರೊಡನಾಡಲ್ಕವರಮನೆಗೆ ॥ ೪೪ ॥
ಬಾಲೆಯರೊಡನೆ ಮೇದಿನೀಸುತೆ । ಬಾಲಕೇಳಿಗಳ ನೆಸಗಿಬಳಿಕ ॥
ಕಾಲವನರಿತು ರಾಜಭವನಕೆ ತಾನು ನಡೆತಂದು ॥ ಲೀಲೆಯಿಂದಲೆ

ತೊಳೆದು ಪೊಗ ಕೈ । ಕಾಲುಗಳ ಕುಂಕುಮವನಿಟ್ಟು ನೃ । ಪಾಲ ನೆಡೆಯೊಳು ಕುಳಿತು ಭೋಜನವಮಾಡುವಳನುದಿನ ॥ ೪೫ ॥ ಮೋದಿಸೀ ಸುತೆ ಯನವನೀಧವ । ನಾದರದೊಳುರೆಪೋಷಿಸುತ್ತಿರ । ಲಾಮುದಣು ಗಿಗೆ ನಾಲ್ಕು ವತ್ಸರಗಳುವಿನೋದದಲಿ ॥ ಮೋದದಿಂದಾ ಜನಕಭೂ ವರ । ನೈದನೆ ವರುಷದಲಿ ಸುತೆಗೆ ಬೇ । ಕಾದ ವಿದ್ಯೆಗಳನು ಕಲಿಸೆ ಚಿಂತಿಸಿದನು ಮನದಲಿ ॥ ೪೬ ॥ ಮುನಿಶತಾನಂದನನ ಕರೆದೊರೆ । ದನು ಮಹೀವರನಾಬಳಿಕ ಮೇ । ದಿನಿಯಣುಗಿ ಗೋದುಬರಹಂಗಳ ಕಲಿಸಿ ನೀವ್ಬಳಿಕ ॥ ವಿನುತ ಪಾತಿವ್ರತ್ಯ ಚರಿತೆಗ । ಳನು ವಿವಿಧ ನೀತಿಗಳನು ಸಕಲ । ಮೆನಿಪ ಧರ್ಮಗಳನ್ನು ಕಲಿಸುವುದೆಂದು ನೇಮಿ ಸುತ ॥ ೪೭ ॥ ಬಳಿಕಲಾಮುನಿ ಸಂತಸವತಳೆ । ದೀಸುತೆಗೆ ಭೂವರನ ಮಂದಿರ । ದೊಳು ದಿನದಿನಂಗಳಲಿ ಯೋದುಬರಹಗಳ ಕಲಿಸುತ ॥ ಇಳೆಯೊಳತಿ ವಿಖ್ಯಾತರೆನಿಸಿದ । ಖಿಳಪತಿವ್ರತೆಯುರ ಚರಿತೆಗಳ । ತಿಳಿಸಿದನು ಭೂಪಾಲನಿಗೆ ಸಂತಸವೊದಗುವಂತೆ ॥ ೪೮ ॥ ಸೀತೆತಾಪಸ ವರನಬಳಿಯೊಳು । ತಾತ್ರಿಳದಳತಿ ಭಕ್ತಿಯೊಳಖಿಳ । ನೀತ್ರಿಗಳ ನನ ಸೂಯೆ ರೋಹಿಣಿಕೇಶಿನಿ ಮೊದಲಹ ॥ ಭೂತಲದೆ ವಿಖ್ಯಾತಿವಡೆದಾ । ಪಾತಿವ್ರತೆಯುರ ಕಥೆಗಳನು ಸಂ । ಪ್ರೀತಿಯಿಂದೆಲ್ಲಜನರು ಸಲೆಪೊಗ ಳ್ವವೊಲನುದಿನ ॥ ೪೯ ॥ ಪಟ್ಟಣದೊಳಹ ಜೋಯಿಸರ್ಕಳು । ನೆಟ್ಟ ನೈತಂದಿಳೆಯ ಸುತೆಯುನು । ದಿಟ್ಟಿಸಿಯೆ ಕೈನೋಡಿ ಸಂತಸದಿಂದೆ ತಿಳುಹುವರು ॥ ಪಟ್ಟಮಹಿಷಿಯೆನಿಪೆ ಪತಿಸಹಿತ । ಕಟ್ಟಡವಿಗೈದು ವೆಯುುದಿಸುವರು । ಗಟ್ಟಿಗರೆನಿಪಬಾಲ ರಿರ್ವರು ನಿನ್ನ ಗರ್ಭದಲಿ ॥ ೫೦ ॥ ನಿನ್ನ ಪತಿ ಮುರಹರನೆನಿಪ್ಪನು । ಮನ್ನಿಸುತ ಮಾನವರ ಪೊರೆದಪ । ನುನ್ನತದಿಹನೊಂದುಸಾವಿರ ವರ್ಷಪರಿಯಂತ ॥ ಸನ್ನುತ ಮಖಂಗಳನು ರಚಿಸುವೆ । ನಿನ್ನ ಪತಿಸಹಿತವಿಳಸುಬಗಳ । ಮನ್ನಣೆ ಯೊಳ್ಳೆದುತ್ತಮಾಡುವೆ ಸಕಲ ಯಾತ್ರೆಗಳ ॥ ೫೧ ॥ ಧಾರುಣಿಯ ಭಾರವನು ಹರಿಸುವೆ । ನಾರಿಯರೊಳುತ್ತಮೆನಿಪೆನೀ । ತೋರುತಿಹೆ ಧರ್ಮಗಳನೆಲ್ಲವ ಜನರಿಗಿಳೆಯೊಳಗೆ ॥ ಸಾರತರ ಮುಕ್ತಿಯುನು ಕೊಡು ವೆ ವಿ । ಚಾರಿಸಲು ನಿನಗೀ ಧರಣಿಯೊಳ । ಗಾರು ಸರಿಯೆನು ತೊರೆದು ತಾವೈದುವರು ಮನೆಗಳಿಗೆ ॥ ೫೨ ॥ ಕುರುಡರಿಗೆ ಕುಂಟರಿಗೆ ದೀನಜ

ನರಿಗೆ ಯುಗಪಿತೃನರಿಗೆ ತಾ । ತರಿಸುತೀವಳು ಧನ ಕನಕ ವಸನಗಳ
ನನುದಿನವು ಕರುಣೆಯಿಂದಾ ಪುರದ ಬಡವರನು । ಜರಪಿಚಾರಿಸಿ ಕೊಡಿ
ಸುತಿರ್ಪಳು । ಧರಣಿಪತ್ರಿಯಿಂದವರ ಬಡತನ ತೊಲಗುವಂದದಲಿ ॥ ೫೩ ॥
ಎಳೆಯ ಬಾಲಕಿಯರೊಡನಾಡು । ತ್ತಿಳಿಯುಸುತ ಜನಕಾಗೆಮೋದವ ।
ಪಲತೆರದೊಳಾಗಿಸುತ ಸೋದರಿಸಹಿತ ಸುತತವು । ತಿಳಿದುಸಕಲವಿನೋ
ದಗಳವನ । ದೊಳಗೆ ಮಾತಾಪಿತೃವಚನಂ । ಗಳನು ತಾಳ್ದರುತೆ
ನಡೆಯುತ್ತಿರ್ದಳತಿನಯದೆ ॥ ೫೪ ॥ ಗುರುಗಳಲಿ ದೇವರಲಿ ಹಿರಿಯರ । ಲಿ
ರಿಸಿಭಯವನು ಪರಮಪಾವನ । ತರಸುತೀರ್ಥಕ್ಷೇತ್ರಗಳಲುರು ಭಕ್ತಿ
ಯನುತಳೆದು ॥ ಪರಿಜನದಕರುಣೆಯನು ತೋರುತ । ನೆರೆದಬಂಧುಬಳ
ಗವರಲಾ । ದರಣೆಯೆಸಗುತ್ತಲೆಲ್ಲರಲಿ ವಿಶ್ವಾಸವಿರಿಸಿದಳು ॥ ೫೫ ॥ ಅಮ
ಲ ವಸ್ತ್ರಂಗಳನುಡುವಳತಿ । ವಿಮಲವಾಗಿಡುವಳವಯವಗಳ । ನು
ಮತಿಯಿಂದರಿತು ಭುಜಿಸುವಳಾಪಕ್ವಫಲಗಳನು ॥ ನಮಿಸಿಪೂಜಿಸಿ ದೇವ
ತತಿಯನು । ಸಮೆದ ಭೋಜನವಮಾಡುತಿರ್ಪಳು । ಸಮಯವರಿತಸ್ವ
ರಿಗೆ ಸಹಚನುಮಾಳ್ಪಳಾಸೀತೆ ॥ ೫೬ ॥ ಬಂದುದಿನತಾನೋರ್ವಭಿಕ್ಷುಕ ।
ಬಂದುನೋಡಿ ಯುವತಿಜೆಯುಬಳ । ಕಂದಾಪೇಳ್ದಳು ನೀನು ಹದಿನಾ
ಲ್ಕುಬುದಪರಿಯಂತ ॥ ಮುಂದೆತೆರಳುವೆ ವನಕೆನಿಂ ಪತಿ । ಯಿಂದೆ ಭೂ
ಭಾರವನು ಹರಿಸುವೆ । ಯಿಂದಿರೆಯುನೀನೆನಿಪೆಯನ್ನುತ ಪೇಳತೆರಳಿದ
ಳು ॥ ೫೭ ॥ ವಿವಿಧಲೀಲೆಗಳಿಂದೆ ಸಕಲರ । ನವನಿಸುತೆ ಸಂತಸವಡಿಸು
ತ್ತಿರೆ । ತವಕದಿಂದಾವರ್ಷಗಳು ಕಳೆದವು ಮಹೀಸುತೆಗೆ ॥ ಅವನಿ
ಪತಿಯಾಸುತೆಗೆ ಪಾಸಟಿ । ಯುವರನಾವನೆನುತ್ತಲನುಜ ಸ । ಚಿವರೊಡನೆ
ತಾಯೋಚಿಸಿದನಾ ರಾಜಕುವರರಲಿ ॥ ೫೮ ॥ ಇಂತುಭೂಪತಿ ಮನದೊ
ಳಗೆತಾ । ಚಿಂತಿಸುತ್ತಿರೆ ಗೌತಮಾತ್ಮಜ । ನಂತರಂಗದೊಳರುಹಿದನುಸೀ
ತೆಯನುವರಿಸುವೊಡೆ ॥ ಸಂತಸದೊಳಾ ದೇವರಾತನು । ಪಿಂತೆಪಡೆದಾ
ಶಿವಧನುವಮುರಿ । ವಂತವನಿಗಾನೀವೆನೆನುತಲೆ ಪಣವನೆಸಗೆಂದು ॥ ೫೯ ॥
ಪತಿಪರಾಯಣರೆನಿಸಿ ಲೋಕದೊ । ಳತಿಜಸವನಾನುತೆ ಮೆರೆವರುಂ ।
ಧತಿಸುಕನ್ಯೆಯುಹಲ್ಯೆ ಲೋಪಾಮುದ್ರೆ ಸಾವಿತ್ರಿ ॥ ನುತಿವಡೆದ ರೋಹಿ
ಣಿ ಮೊದಲಹ ಸು । ದತಿಯರ ಚರಿತ್ರೆಗಳತಿಳಿದರು । ಹಿತದೊಳಾ ಪುರ
ದಬಲೆಯರು ಮೇದಿನಿತನುಜೆಯಿಂದ ॥ ೬೦ ॥ ಆದಿಲಕ್ಷ್ಮಿಯು ತಾನೆನಿ

ಸಿದಾ। ಮೇದಿನೀಸುತೆ ಭೂವರನ ಸಂ। ಮೋದಕೆಡೆಯೆನೆ ಬಳೆದುಕಳೆ ದಳು ಬಾಲ್ಯದಾದೆಶೆಯು ॥ ಐದಿದಳು ಪರಿಣಯಕೆ ತಕ್ಕ ವ। ಯೋದಶೆ ಯುನೇನೆಂಬುದಾಕೆಯು । ಸಾಧುಲಾವಣ್ಯಾಂಬುನಿಧಿ ತುಳ್ಕಿದುದು ತುಂ ಬುತಲಿ ॥ ೬೧ ॥

ಇಂತು ಮೂರನೆಯ ಅಧ್ಯಾಯ ಸಂಪೂರ್ಣವು. ಪದ್ಯಗಳು ೧೨೩.

ನಾಲ್ಕನೆಯ ಅಧ್ಯಾಯ.

ಸೂಚನೆ ॥ ಸೀತೆಯ ವರಿಸಲೈದಿ ಮಿಥಿಳೆಗೆ ।
ಭೂತಳದ ರಾಜಸುತರೆಲ್ಲರು ।
ಸೋತು ಹರಧನುವಿಂಗೆ ನಡೆದರು ವಿಮುಖರಾಗುತಲಿ॥

ಜನಕ ಭೂವರನೊಂದುದಿನದೊಳು । ವಿನುತ ಸಂಧ್ಯಾವಂದ ನಾದಿಗ। ಳನು ರಚಿಸಿ ದೇವರನು ಪೂಜಿಸಿ ಬಳಿಕವೋಲಗಕೆ ॥ ಘ ನವಿಭವದಿಂದೈದಿ ಬರಿಸು। ತ್ತ ನಿಬರನು ತಾಂ ನುಡಿದ ನೀವೇ। ದಿ ನಿಯಣುಗಿ ವೈವಾಹ ವೆಸಗುವ ಪರಿಯದೆಂತೆನುತ ॥ ೧ ॥ ಅವನಿ ಸುರರಾನಂದ ವೈದುತ। ಲವನಿಪತಿಗಾ ಗೌತಮಾತ್ಮಜ। ನ ವಚನವ ಕೇಳುತ್ತ ಪೇಳದರುಚಿತ ವಚನದಲಿ ॥ ಅವನಿಜಾತೆಯ ವರಿಸುವೊಡೆ ಘನ। ಶಿವಧನುವ ಭಂಗಿಸುವ ಭೂವರ। ಕುವರರೈತಹುದೆಂದು ಸಾರಿ ಸು ರಾಜ್ಯದೊಳಗೆನುತ ॥ ೨ ॥ ಬರಿಸಿದನು ಪತ್ರಿಕೆಗಳನು ನೃಪ। ಧರಣಿ ಮಂಡಲದೊಳು ವಿನುತಿವಡೆ। ದಿರುವ ಛಪ್ಪನ್ನಾರು ದೇಶದ ಪೊಡವಿಪಾಲರಿಗೆ ॥ ಹರಧನುವ ಭಂಗಿಸುವ ಸಾಹಸ। ಪರರೆನಿಪರಾಜ ಸುತರೈದೀ। ಪುರಕೆ ಶಿವಚಾಪವತರಿದು ಸೀತೆಯ ಪಡೆವುದೆನುತ ॥ ೩ ॥ ತುಂಗ ಬಲವಿಕ್ರಮನೆನಿಸಿದಾ । ವಂಗದೇಶದ ರಾಯಗುವರನು । ಭಂಗಿಸಿಯೆ ಹರಧನುವ ಪಡೆವೆನು ಸೀತೆಯನೆನುತ್ತ ॥ ವಂಗಡದೊಳಾ ಮಿಥಿಳೆಗುರು ಚತು। ರಂಗ ಬಲಸಹಿತೈದಿ ಚಾಪವ। ಭಂಗಿಸದೆ ದು ಮ್ಮಾನದಿಂ ಪಿಂದಿರುಗಿದನು ಪುರಕೆ ॥ ೪ ॥ ಖಂಡಿಸಿಯೆ ಶಿವಚಾಪವನು ಭೂ। ಮಂಡಲದೊಳಾ ಸೀತೆಸಹಿತಾ । ಖಂಡಲನತೆರದಿಂದಿಹೆನೆನುತ

ಮಗಧನೃಪಸುತನು । ಚಂಡಬಲದಿಂದೈದಿ ಹರಕೋ । ದಂಡವನು
ಭಂಗಿಸದ ವನಿಪರ । ತಂಡದಲಿ ತಾನೈದಿದನು ಖೇದವನುತಲೆವಾಗಿ ॥ ೫ ॥
ಕೇರಳಾಧಿಪಸು ತನೊಲಿಸುವೆನು । ಧಾರುಣೀಸುತೆ ಯನುಘನವೆಯೂ ।
ಮಾರಹರಚಾಪವ ಮುರಿವೆನವನು ಭರದಿಂದೆನುತ ॥ ಭೂರಿಶೌರ್ಯಾ
ಲಾಪಗಳನುರೆ । ಬೀರುತೈತಂದು ಶಿವಚಾಪವ । ಸೇರಿ ತಾಕದಲಿಸದೆ
ಪೋದನು ಮಾನಹಾನಿಯಲಿ ॥ ೬ ॥ ಹರನಚಾಪವ ಭಂಗಿಸುತ್ತಾ ।
ಧರಣಿಜಾತೆಯ ನೊಲಿಸುವೆನೆನು । ತ್ತುರುತರದ ಪೌರುಷವನುಡಿದಾ
ಚೋಳನೃಪಸುತನು ॥ ಚರರಸಹಿತೈತಂದು ಧನುವನು । ಕರಗಳಿಂ
ಪಿಡಿದೆತ್ತಲಾರದೆ । ಧರೆಗೆಬಿದ್ದನು ಚೀರಿಮಿಗೆತಾಂ ಬಳಲಿಬಾಯಾರಿ
॥ ೭ ॥ ಮುರಿವೆಚಾಪವ ಪಡೆವೆ ಸೀತೆಯ । ಮೆರೆವೆ ಸುಖದಿಂ
ಪೆಸರುವಡೆವೆನು । ನರಪತಿಗಳೊಳೆನುತ್ತ ನೇಪಾಳಾವನಿಪಸುತನು ॥
ಭರದೊಳೈತಂದಾಪುರಿಗೆ ಪುರ । ಹರನ ಚಾಪವನೋಡಿ ಕಂಪಿಸಿ ।
ಧರಣಿಯೊಳು ಕಾರುತ್ತ ರಕ್ತವ ಮೂರ್ಛೆಯೈದಿದನು ॥ ೮ ॥
ವರಕಳಿಂಗ ಮಹೀಪತಿಯ ಸುತ । ನುರುಪರಾಕ್ರಮದಿಂದೆ ಬಂದಾ ।
ಹರನ ಚಾಪವನೀಕ್ಷಿಸಿಯೆತಾಂ ನೀಡಿ ಕರಗಳನು ॥ ತರಹರಿಸಿ ಬಿಸು
ಸುಯ್ದು ಬಲಕುಂ । ದಿರದೆ ಕಣ್ಮುಚ್ಚುತಲಿ ಬಿದ್ದನು । ಧರಣಿಯೊಳು
ಗಹಗಹಿಸೆ ಜನರಾಸಭೆಯ ಮಧ್ಯದಲಿ ॥ ೯ ॥ ಕಡಿದು ಚಾಪವ ಪಡೆದು
ಸೀತೆಯ । ಜಡಿವ ವೈರಿಗಳನು ಸುಖದೊಳೀ । ಪೊಡವಿಯನು ಪಾಲಿ
ಸುವೆ ಪೆಸರಿಂದಧಿಕ ಬಲನೆನುತ ॥ ನುಡಿವ ಕೊಂಕಣ ರಾಜಸುತನದ ।
ರೆಡೆಗೆಬಂದಾ ಶೈವಚಾಪದ । ಕಡೆಗೆ ತಾನೀಕ್ಷಿಸದೆ ನಡೆದನು ತನ್ನ
ಪಟ್ಟಣಕೆ ॥ ೧೦ ॥ ಅಂಗದೇಶದ ಭೂಪಸುತನು । ತ್ತುಂಗಭುಜಬಲ
ನೆಯ್ದಿಮಿಥಿಲೆಗೆ । ಕಂಗಳಿಂದಾ ಶೈವಚಾಪವ ನೀಕ್ಷಿಸುತ್ತದನು ॥ ಭಂಗಿ
ಸುವೆನೆಂದೆನುತ ಪಿಡಿಯೆ ಕ । ರಂಗಳುರೆಮುರಿಯಲ್ಕೆತಿರುಗಿದ । ನಂ
ಗಲಾಚುತ ನಿಜಪುರಿಗೆ ಬಲುಖೇದವನುಪಡೆದು ॥ ೧೧ ॥ ಬಲದೊಳಾ
ಕಾಶ್ಮೀರದೇಶದ । ನೆಲದೊಡೆಯನಾತ್ಮಜನು ನಡೆತಂ । ದೆಳೆಯಲಾ ಶಿವ
ಚಾಪ ಕದಲದೆ ನಿಂತಿರಲು ಕಂಡು ॥ ಪಲತೆರದಸಾಹಸಗಳೆಸಗುತ ।
ಕಲಿತನದ ಶಕ್ತಿಯನು ತೋರಿಸಿ । ಫಲಿಸದಿಹ ಬಯಕೆಯೊಳು ಪಿಂದಿ
ರುಗಿದನು ದುಗುಡದಲಿ ॥ ೧೨ ॥ ವಿನುತ ಘೂರ್ಜರದೇಶದಾನೃಪ ।

ತನುಜನೈತಂದಾ ಪುರವರಕೆ। ಧನುವ ಕಾಣುತ್ತದರ ಮಹದಾಕೃತಿಯು
ನೆರೆನೋಡಿ॥ ತನಗಿದರ ಹಂಗೇಕೆನುತ್ತಲೆ। ಮನದೊಳಿದರ ಮಹತ್ತ
ನು ಪೊಗಳು। ತ ನಿಜಪುರಕೈತಂದ ತನ್ನಯ ಪರಿಜನಗಳಿಂದ ॥ ೧೩ ॥
ತೆಂಕಣ ಮಹೀಪಾಲ ಸುತ ನುರು। ಬಿಂಕದಿಂದಾ ಪಟ್ಟಣಕೆ ಧನು।
ವಂ ಕಡಿಪೆನೆಂದೈದಿ ಚಾಪಕೆ ನಿಜಕರಂಗಳನು। ಶಂಕಿಸದೆ ಚಾಚುತಲದ
ನೆತ್ತದೆ। ಸಂಕಟವನಾನುತ್ತೆ ಬಳಲುತ। ವೇಂಕಟೇಶನ ನೆನೆಯುತೈ
ದಿದ ತನ್ನ ಪಟ್ಟಣಕೆ ॥ ೧೪ ॥ ಪಿತನ ಚರಣಂಗಳಿಗೆರಗಿ ನಿಜ। ರಥ
ದೊಳಾ ಮಿಥಿಲೆಯನುಸೇರುತ। ಅತಿ ಪರಾಕ್ರಮದಿಂದೆ ಬರ್ಬರದೇಶದ
ವನಿಪನ॥ ಸುತನು ಚಾಪವ ನೆತ್ತಲಾರದೆ। ಖತಿಯನಾನುತ ಜೈದು
ಜನಕನ। ನು ತಡೆಮಾಡದೆ ಪಾರಿಪೋದನು ತನ್ನ ಪುರಿಗಾಗಿ ॥ ೧೫ ॥
ಒಂದುದಿನ ಸೌರಾಷ್ಟ್ರ ಭೂವರ। ನಂದನನು ತಾನೈದಿ ಚಾಪದ। ಮಿಂ
ದೆನಿಂದದ ನೆತ್ತಲಾ ಧನು ಧಾರುಣೀತಲದೆ। ಮುಂದಕಿನಿಸುಂ ಚಲಿಸದಿರೆ
ಮನ। ನೊಂದುತಾ ನಚ್ಚರಿವಡೆಗು ನಡೆ। ತಂದನಾಘನ ಸೈನ್ಯದಿಂ
ನಿಜಪುರಕೆ ಭರದಿಂದ ॥ ೧೬ ॥ ಶೈವಚಾಪವ ಭಂಗಿಸಿಯೆ ಯಾ। ಭೂ
ವರನ ಸುತೆಯಂ ಪಡೆವೆನೆಂ। ದಾ ವಿದರ್ಭಾಧಿಪನ ಸುತನೈತಂದು ಶೀ
ಘ್ರದಲಿ॥ ದೇವದೇವನ ಧನುವಕಾಣುತ। ಭಾವಿಸದದರ ಚಿಂತೆಯನು
ನರ। ಪೇವ ನೆಡೆಗೈತಂದು ಪೇಳಿದನವರಮಹಿಮೆಯನು ॥ ೧೭ ॥ ವಿನು
ತನಹ ಭೂಪಾಲದೇಶದ। ವನಿಪನಾತ್ಮಜ ನೈದಿಮಿಥಿಳೆಗೆ। ಧನುವಕಾ
ಣುತ ನಿಜಕರಂಗಳನದಕೆ ಚಾಚುತ್ತ॥ ಘನಬಲದೊಳೆತ್ತಲ್ಕೆ ಯಾಹರ।
ಧನು ಚಲಿಸದಿರೆ ಬೆರಗುಗೊಳ್ಳುತ। ಮನದೊಳುರೆ ಬಳಲುತ್ತ ಬಂದನು
ತನ್ನ ಪಟ್ಟಣಕೆ ॥ ೧೮ ॥ ದ್ರವಿಡದೇಶದ ರಾಜಸುತನಾ। ಶಿವಧನುವ
ಭಂಗಿಸಿ ಮಹೀಸುತೆ। ಯ ವರಿಸುವೆನೆಂದಾ ಮಿಥಿಲೆಗೈತಂದು ಪಡೆಸಹಿ
ತ॥ ತವಕದಿಂತಾ ನೆತ್ತಲಾಚಾ। ಪವದು ಧರೆಯೊಳು ಚಲಿಸದಿರಲಾ।
ವಿವಿಧಯತ್ನಂಗಳಲಿ ಚಿಂತಿಸಿನಡೆದನಾಪುರಕೆ ॥ ೧೯ ॥ ಪರಿಚರರನೊಡ
ಗೊಂಡ ಮಂತ್ರಿಯು। ಧರಣಿಪಾಲನ ತನಯನೈತಂ। ದುರವಣಿಸಿ
ಚಾಪವನು ಪಿಡಿದೆತ್ತಲದು ಚಲಿಸದಿರೆ। ತರಹರಿಸಿ ಯಚ್ಚರಿವಡೆದು ಪ
ರಿ। ಪರಿಸಿಕೊಂಡಾ ಬಳಲಿಕೆಯ ನಿಜ। ಪುರಕೆ ತಾನೆಯ್ದಿದನು ತನ್ನಯ
ಸೇನೆಯೊಡಗೂಡಿ ॥ ೨೦ ॥ ಉಳಿದಖಿಳದೇಶಂಗಳರಸರು। ಗಳ ಕು

ಭೂವರರು ಬೇರೆಬೇರೆ ವಿ । ಧಿಗೆ ಬಂದಾಶೈವಚಾಪವನೆತ್ತದೆಯೆ ಮ
ನವಿ । ತಳೆದು ಖೇದಪರಂಪರೆಗಳನು । ಬಳಿಕ ತಾವಾ ಜನಕಭೂವ
ರ । ನೊಳು ಪಗೆಯ ಕೈಕೊಳುತ ಸೇರಿವರೊಂದು ತಾಣದಲಿ ॥ ೧೧ ॥
ಶೈವಚಾಪದ ಘನಮಹಿಮೆಯನು । ತಾವು ಕೇಳುತ ಲಜ್ಜರಿವಡೆದು ।
ಭಾವಿಸುತಲಾ ವೀರ್ಯಶುಲ್ಕನೆನಿಪ್ಪ ಸೀತೆಯನು ॥ ಭೂವರರು ತಾವೈದಿ
ವಿಧಿಲೆಗೆ । ಶೈವಚಾಪವ ಭಂಗಿಸದೆ ನೆರೆ । ನೋವನಾನುತಕದನ
ಕುಜ್ಜುಗಿಸಿದರು ಜನಕನೊಳು ॥ ೧೨ ॥ ಧರಣಿಪಾಲಕ ರೊಟ್ಟುಗೂಡು
ತ । ನೆರೆದು ಸಂಗರದೊಳುರೆಘಾತಿಸಿ । ದರು ಜನಕಭೂಪನನು ಬತ್ತೀ
ಸಾಯುಧಂಗಳಲಿ ॥ ಪರಿಪರಿಯ ಶಸ್ತ್ರಾಸ್ತ್ರನಿಕರದ । ಉರೆಬಳಲಿ ನೊಂ
ದಾಜನಕಭೂ । ವರನು ಕೈಕೊಂಡನು ತಪವನಾಶಿವನಜಾನಿಸುತ
॥ ೧೩ ॥ ತೊರೆದು ತಾನಾಹಾರವನು ಪಗ । ಲಿರುಳು ಪಂಚಾಗ್ನಿಗಳ
ಮಧ್ಯದೊ । ಳುರುತರ ತಪವನಾಚರಿಸುತಾವ್ಯೋಮಕೇಶನನು ।
ಸ್ಮರಿಸುತಿರಲಾ ಜನಕ ನೃಪನಾ । ಪುರಹರನು ಬಂದಾತನಿಗೆ ತಾಂ ।
ಕರುಣಿಸಿದ ನಾನಂದದಿಂದುರುತರದ ಶಕ್ತಿಯನು ॥ ೧೪ ॥ ಜನಕ
ಭೂವರ ಬಳಿಕಲಾ ಮೇ । ದಿನಿಪರೊಡೆಯರೆಲ್ಲರನು ಸೋಲಿಸಿ । ದನು
ಗಿರಿಶನಿತ್ತಧಿಕ ಬಲದಿಂದೆ ರಣರಂಗದೊಳು ॥ ಧನುವ ಭಂಗಿಸದಾಜಿ
ಯೊಳು ನೊಂ । ದು ನಿಜನಗರಂಗಳನು ಸೇರುತ । ಮನದೊಳಾತನ
ಶಕ್ತಿಯನು ಮೆಚ್ಚಿದರು ಪಲತೆರದಿ ॥ ೧೫ ॥ ಸುರನರೋರಗ ಯಕ್ಷ
ಕಿನ್ನರ । ಗರುಡ ಗುಹ್ಯಕ ಕಿಂಪುರುಷ ಸಿ । ದ್ಧರು ಮೊದಲೆನಿಪ
ದೇವತೆಗಳೈತಂದು ಕೋಪದಲಿ ॥ ಹರಧನುವನೆಲ್ಲರವಲೋಕಿಸಿ । ಪರಿ
ಪರಿಯ ಸಾಹಸಗಳಿಂದದ । ಮುರಿಯಲಾರದೆ ತೊರೆದರಾಜಾನಕಿಯ
ಚಿಂತೆಯನು ॥ ೧೬ ॥ ಬಳಿಕ ರಾವಣ ನಾಪ್ರೊಡವಿಪತಿ । ಗಳ ಪರಾಜ
ಯವನುಜನಕನತಿ । ಬಲವನಾಶಿವ ಚಾಪಮಹಿಮೆಯ ನಾಲಿಸುತ್ತೊ
ಡನೆ ॥ ತಿಳಿದು ಸೀತೆಯ ರೂಪು ರೇಖಾ । ವಳಿಗಳನು ನಿಜರಥದೊಳೈ
ದಿ ಮಿ । ಥಿಳೆಗೆ ತೋರಿಸು ಶೈವಚಾಪವನೆನುತ ಗರ್ಜಿಸಿದ ॥ ೧೭ ॥
ನಡುಗಿಬೆಸುಸುಯ್ದಾ ಜನಕನೃಪ । ನಡಿಗಡಿಗೆ ಕೈಮುಗಿದು ದೈನ್ಯದೆ ।
ನುಡಿದನಾ ರಾವಣನಿಗಂಜುತ ವೀರ್ಯಶುಲ್ಕಳಹ ॥ ಪೊಡವಿಯಾತ್ಮಜೆ
ಶೈವಧನುವನು । ಕಡಿವ ಶೂರನ ಮೆಚ್ಚುವಳೆನುತ । ನಡೆದ ಸಂಗತಿ

ಗಳನು ತಾ ವೊಪಲಿಂದ ಪೇಳಿದನು ॥ ೨೮ ॥ ಜಡಿದೆ ದಿಕ್ಪಾಲಕರ
ಸಮರದೆ । ಕಡಿದೆ ದೇವಸಮೂಹವನು ನಾಂ । ಪಿಡಿದೆ ಪನ್ನಗ ಯಕ್ಷ
ಕಿನ್ನರ ದೇವನಾರಿಯರ ॥ ಮೃಡನನೆಚ್ಚಿಸಿ ಸಕಲ ವರಗಳ । ಪಡೆದ
ನನಗೀ ಧನುವಧಿಕವೇ । ಕಡಿವೆನಾನದತರಿಸೆನುತ್ತಲೆ ನುಡಿದ ರಾವ
ಣನು ॥ ೨೯ ॥ ಧನುವನವಲೋಕಿಸುತ ಬಂದಾ । ದನುಜವಲ್ಲಭನಿರದೆ
ಗರ್ಜಿಸು । ತ ದನುವಿಂಶತಿಕರಗಳಿಂದೆತ್ತಲದು ಕದಲದಿರೆ । ಮನದೊ
ಳುರೆನೊಂದು ತೊರೆದಾಮೇ । ದಿನಿಯಣಾಗಿ ಪೋಲಣಭಿಮಾನವ ।
ನು ನಡೆತಂದನು ಲಂಕೆಗಂದಾ ಮಾನಹಾನಿಯಲಿ ॥ ೩೦ ॥ ಧನುವ
ಭಂಗಿಸಿ ವರಿಸುವೆನುಮೇ । ದಿನಿಯಣಾಗಿಯು ನೆನುತ್ತ ಸೈನ್ಯದೊ । ಡನೆ
ಹೊರಟು ಸಾಂಕಾಶ್ಯಪೇಶದ ಧೊರೆಸುಧನ್ವನುತಾಂ ॥ ಜನಕನೆಡೆಗೈ
ತಂದು ತೋರಿಸು । ಧನುವನೆನಗಿಂದು ಜನಮಧ್ಯದೊ । ಳು ನುಡಿದನು
ರೋಷದಲಿ ಪಲ್ಗಳ ಕಡಿದು ಗರ್ಜಿಸುತ ॥ ೩೧ ॥ ಮೀರಿದ ಪರಾಕ್ರ
ಮದೊಳಾ ತ್ರಿಪು । ರಾರಿ ಚಾಪವನೆತ್ತಲಾರದೆ । ಧಾರುಣೀಪತಿಯಾ
ಸುಧನ್ವನು ನೊಂದುಬಿಸುಸುಯ್ದು ॥ ಸೇರಿ ಜನಕ ಮಹೀವರನೊಡ
ನೆ । ಘೋರಸಂಗರ ಕುಜ್ಜುಗಿಸಿದನು । ಸಾರತರವೆಂದೆನಿಪ ಶಸ್ತ್ರಾಸ್ತ್ರ
ನಿಕರಂಗಳಲಿ ॥ ೩೨ ॥ ಸಂಗಳಿಸಿದ ಸುಧನ್ವನನು ಘನ । ಸಂಗರ
ದೊಳಾ ಜನಕಭೂಪತಿ । ಭಂಗಿಸಿದನೇನೆಂಬೆನಾತನ ಘನಪರಾಕ್ರಮವ ॥
ಕಂಗಳನು ಮುಚ್ಚುತ ಬಳಲಿ ರಣ । ರಂಗದೊಳು ಕಾಲಗತಿಯೈದಿ
ದ । ನಂಗಜಾರಿಯನಾಮವನು ತಾನುಚ್ಚರಿಸುತಂದು ॥ ೩೩ ॥ ಕೊಂ
ದು ಸಾಂಕಾಶ್ಯದಸುಧನ್ವನ । ಹೊಂದಿ ತಾನಾದೇಶವನು ಸಲ । ಹೆಂದೆ
ನುತ ಪೇಳಿದನು ವೀರಕುಶಧ್ವಜಂಗೊಲಿದು ॥ ಸಂದಣಿಸೆ ರಾಜಾಧಿರಾ
ಜರು । ಚಂದದಿಂ ಪಟ್ಟವನು ಕಟ್ಟಿದ । ನಂದು ದಿಕ್ಕುಗಳೆಲ್ಲ ವಾದ್ಯ
ಧ್ವನಿಯೊಳಿಕ್ಕೆರಿಯೆ ॥ ೩೪ ॥ ಭೂತಳದ ರಾಜರೊಳಗಾರುಂ । ಭೂ
ತಪತಿಚಾಪವ ಮುರಿಯದೀ । ಭೂತಳಾತ್ಮಜೆಯನುಳಿದೈದಿದರೆಂದೆನುತ
ನುಡಿದು ॥ ಕ್ಷ್ಮಾತಳದೊಳಾವನುದಿಸಿಹನೋ । ಸೀತೆಯನು ಕೈವಿಡಿವ
ನೆಂದುರೆ । ಕಾತರಿಸುತಾಜನಕ ದೈನ್ಯವನೈದಿದನು ಬಳಿಕ ॥ ೩೫ ॥
ಎಲ್ಲಿಪೋಗಲಿ ಧಾರುಣಿಯೊಳಿ । ನ್ನೆಲ್ಲಿ ಹುಡುಕಲಿ ನಾನೆನುತ ಮನ ।
ದಲ್ಲಿ ಚಿಂತಿಸಿ ಮುಂದುಗಾಣದೆ ಜನಕಭೂವರನು ॥ ಉಲ್ಲಸದೊಳಂತ

ವನಿಯಪಾತ್ರಜೆ । ಗಿಲ್ಲಿ ಮದುವೆಯುನಡೆವುದೆಂದೆನು । ತಲ್ಲ ರೊಡನಂದು ನುಡಿದನು ದೈನ್ಯವನುತೋರಿಸುತ ॥ ೩೬ ॥ ವಾಮದೇವನು ದೇವರಾತಗೆ । ಸೋಮಧರ ಕೋದಂಡವನತಿ । ಪ್ರೇಮದಿಂದೇತಕೆ ಕರುಣಿಸಿದನೋ ಧರಣಿಸುತೆಯು । ಭೂಮಿಯೊಳುತಾನೇಕೆ ಸಿಕ್ಕಿದಳೋ ಮಹಿಯೊಳಿವ ವರನಿಹನೋ । ಕೋಮಲೆಗೆನುತ ಜನಕ ಚಿಂತಿಸುತಿರ್ದನನುದಿನವು ॥ ೩೭ ॥ ನಾರದನಮಾತೆಲ್ಲಿ ನುಡಿವ ಶ । ರೀರವಾಣಿಮಗೆಲ್ಲಿ ಗಿರಿಶನ । ಭೂರಿಚಾಪವಿದೆಲ್ಲಿ ಧರಣೀತನುಜೆತಾನೆಲ್ಲಿ ॥ ತೋರದೆನಗೊಂದು ಮನುತಾಮುರ । ವೈರಿಯನು ತಾ ನೆನೆದಡಿಗಡಿಗೆ । ವಿಸಾರಿದತಿಚಿಂತೆಯನು ಕೈಕೊಂಡನು ಜನಕನಿರದೆ ॥ ೩೮ ॥ ಮೇದಿನೀಸುತೆಯಿಂದೆ ನನಗೀ । ಮೇದಿನಿಯೊಳಪಯಶವುಬಂತೆನು । ತಾ ಧರಣಿಪತಿ ಜನಕನೊಂದುವರನನು ಕಾಣದೆಯೆ ॥ ಖೇದದಿಂದಾ ಮುನಿಶತಾನಂ । ದಾದಿಗಳೊಡನೆ ಪೇಳವನು ತಾ । ನೈದಿದಮನಃಖೇದವನು ದೈನ್ಯವನು ತೋರಿಸುತ ॥ ೩೯ ॥ ಸೀತೆಯು ಮದುವೆಗೆಂದೆನುತ ನಾ । ನೀತೆರದೆ ಬಳಲುತ್ತಿಹೆ ನಿತರರ । ಮಾತದೇತಕೆ ಜಗದೆಪೆಂಗಳ ಪಡೆದಮಾನವರು ॥ ಭೂತಳದೊಳುರೆ ಚಿಂತಿಪರು ಪ್ರರು । ಹೂತಸಮರಾದೊಡಮವರ ಬಿಡ । ದೀತೆರದ ತೊಡಕೆನುತ ಯೋಚಿಸುತಿರ್ದನಾಜನಕ ॥ ೪೦ ॥

ಇಂತು ನಾಲ್ಕನೆಯ ಅಧ್ಯಾಯ ಸಂಪೂರ್ಣವು. ಪದ್ಯಗಳು ೧೬೩.

ಐದನೆಯ ಅಧ್ಯಾಯ.

ಸೂಚನೆ ॥ ಮುನಿಪ ವಿಶ್ವಾಮಿತ್ರ ನೊಡನಾ ।
ಜನಕಪುರಿಗೈತಂದು ಗಾಧಿಸು ।
ತನ ಮಹಾತ್ಮೆಯನರಿದು ರಾಮನು ಧನುವ ಭಂಗಿಸಿದ ॥

ಮತ್ತೆ ಸಚಿವಪುರೋಹಿತರ ಬರಿ । ಸುತ್ತ ಚಿನ್ನವಿಸಿದನು ಭಕ್ತಿಯೊ । ಳುತ್ತಮೋತ್ತಮಮುನಿಪ ಯಾಗವನಾಗಿಸುವೆನಿದಕೆ ॥ ಚಿತ್ತದೊಳು ಸಿಮಗೆಂತು ತೋರ್ಪುದೆ । ನುತ್ತ ಬೆಸಗೊಳಲಾಗ ಬಹುದೆಂ । ದುತ್ತರವ ನವರಿತ್ತರಾಜನಕಂಗೆ ಸಮ್ಮುದದಿ ॥ ೧ ॥ ಸಕಲ

ಸಂಭಾರಗಳ ನೊದಗಿಸು । ತ ಕಡುಸಂತ್ರಸದಿಂದವನಿಪನು । ಠಕರ
ಬರಿಸಿದ ನಧ್ವರಕೆನುತಲಾಗ ವೆಹಿಂದಲಿ । ಸುಕವಿಗಳ ಕಣ್ಮನವಣಿಯು
ಜನ । ನಿಕರ ಕಾಗಿಸಿದನು ಭವನಗಳ । ಸುಕರಸೋಪಸ್ಕರಗಳಿಂ
ಮೆರೆವಂತೆ ಭೂಮಿಪತಿ ॥ ೨ ॥ ಕ್ಷಿತಿಯೊಳುಳ್ಳ ಸಮಸ್ತ ಮುನಿಪರ ।
ನತಿನಯದಿ ಕರೆಯಿಸುತ ಸುರಸಂ । ಮತಮೆನಿಪ ಯಾಗಕೆ ಶುಭ
ಮುಹೂರ್ತವನು ನಿಶ್ಚಯಿಸಿ ॥ ಶ್ರುತಿ ವಿಧಾನವನನುಸರಿಸುತಾ । ಕ್ರ
ತುವನಾಚರಿಸುವನಿ ಸುರರ । ಮತದೊಳಂದುಜ್ಜುಗಿಸಿದನು ನಿಜಸತಿ
ಸಹಿತನಲಿದು ॥ ೩ ॥ ಒಂದುದಿನಗಾಧೇಯು ದಶರಥ । ನಂದನರೆನಿಪ ರಾಮ
ಲಕ್ಷ್ಮಣ । ರಿಂದೊಡವೆರಸಿ ಬಂದನು ಮಿಥಿಳೆಗೆ ಮುಖದನೆಮದಲಿ ॥
ಬಂದಮುನಿಪ್ರೋತ್ತಮನ ತಿಳಿದೈ । ತಂದು ಸಾಷ್ಟಾಂಗದೊಳೆರಗಿ
ಪದ । ಕಂದು ಕೊಟ್ಟನು ಯರ್ಘ್ಯಪಾದ್ಯಾಚಮನಗಳನೊಲಿದು ॥ ೪ ॥
ಪರಸಿ ಮಂತ್ರಾಕ್ಷತೆಗಳನು ಕೊ । ಟ್ಟರಸನನು ಕುಳ್ಳಿರಿಸಿ ಕೇಳಿದ ।
ನಿರದೆಮುಖದಲಿ ದೇಶಕೋಶ ಪುರಗಳಲಿ ಕುಶಲವ ॥ ಕರಗಳನು ಜೋ
ಡಿಸುತ ತಾಪಸ । ವರನೊಡನೆ ತಮ್ಮ ಕೃಪೆಯಿಂದೆ । ಲ್ಲರು ಕುಶಲದಿಂ
ದಿಹರೆನುತ್ತಲಿ ನುಡಿದಭೂಮಿಪತಿ ॥ ೫ ॥ ಮುನಿಪ ಶುಭಮಕ್ಕೆನಿಮ
ಗೀನೃಪ । ತನಯ ರಾರ್ಯೆದೇವತುಲ್ಯರು । ವಿನುತಭುಜಬಲ ಯುತರು
ಗಜ ಹುಲಿಸಿಂಹ ವೃಷಭಗಳ ॥ ಘನಗಮನಗಳನಾಂತಿಹರು ಮೇ ।
ದಿನಿಯೊಳತಿವೀರರೆನಿಪರು ರೂ । ಪಿನೊಳಗಶ್ವಿನಿದೇವತೆಗಳಂದದೆ ವಿ
ರಾಜಿಪರು ॥ ೬ ॥ ಇವರು ಯೌವನದಿಂದೆ ಕೂಡಿಹ । ರಿವರು ತಾವ
ನ್ಯೋನ್ಯಸಮರೆನಿ । ಸುವರು ಪರಿಮಾಣೇಂಗಿತಸು ಚೇಷ್ಟೆಗಳ
ನಿವಹದಲಿ ॥ ಇವರು ಶಶಿರವಿಗಳತೆರದೆ ತೋ । ರುವರು ಧಾರುಣಿಗಿಳಿ
ದಮರರಂ । ತೆ ವಿನುತಿವಡೆದಿಹರು ಧರಿಸಿಹರು ಕಾಕಪಕ್ಷಗಳ ॥ ೭ ॥
ಇವರು ಬೆನ್ನೊಳು ಖಡ್ಗತೂಣೀ । ರವರ ಚಾಪಗಳನು ಧರಿಸಿಹರು ।
ಇವರು ತೋರುವರಖಿಳಭೂಮಿಯ ನಾಳುವಾಬಗೆಯ ॥ ಕುವಲಯ
ದಳಾಯುತನಯನ ರೆನಿ । ಸುವಿವರಾವ ನೃಪಾಲನತನಯರು ॥ ರಿವರ ಸಂ
ಗತಿಯೆಲ್ಲವನು ತಿಳುಹುವುದುತನಗೆಂದ ॥ ೮ ॥ ಜನಕಭೂವರ ಸಾವ
ಧಾನದ । ಮನದೊಳಾಲಿಸು ಶುಭಗಳಾಗಲಿ । ನಿನಗೆ ಈ ರಾಜಸುತರಿನ
ವಂಶಾಬ್ಧಿಸೋಮನಹ ॥ ವಿನುತ ದಶರಥ ಸಾರ್ವಭೌಮನ । ತನಯ

ರಾಗಿಸ ರಾಮ ಲಕ್ಷ್ಮಣ । ರೆನಿಸುವರುನೀ ನಿವರ ವೃತ್ತಾಂತವನು ಕೇಳೆಂದ ॥ ೯ ॥ ನಾನುಮಾಡುವ ಮಖಕೆವಿಘ್ನವ । ನಾನಿಸುತ್ತಿರೆ ಬಂದಡಿಗಡಿಗೆ । ದಾನವರಹ ಸುಬಾಹುಮಾರೀಚಾದಿಘಾತುಕರು ॥ ದೀನತೆಯನೈದಿ ಮನ ನೊಂದು ನಿ । ದಾನಿಸದೆ ದಶರಥನ ಯಾಚಿಸಿ । ನಾನಿವರನೊಡಗೊಂಡು ಬಂದೆನು ಯಾಗರಕ್ಷಣೆಗೆ ॥ ೧೦ ॥ ಬರುವದಾರಿಯೊಳೀ ಕುಮಾರರಿ । ಗರುಹಿದೆ ಬಲಾತಿ ಬಲಗಳೆನಿಸು । ವೆರಡುವಿದ್ಯೆಗಳನು ಸಕಲ ಮಂತ್ರಾಸ್ತ್ರಗಳ ಪರಿಯ । ತರಿದು ತಾಟಕಿಯನುಸುಬಾಹುವ । ನಿರಿದು ಮಾರೀಚನನು ದಕ್ಷಿಣ । ಶರಧಿಗೈದಿಸಿ ನನ್ನ ಯಾಗವ ಪೂರೆದನೀ ರಾಮ । ೧೧ ॥ ತದುಪರಿಯೊಳೆನ್ನಿಂದೆ ಗಂಗಾ । ನದಿಯ ವಿಸ್ತಾರವನು ಕೇಳಿ ಮು । ದದೊಳು ತಾನೀಕ್ಷಿಸಿ ವಿಶಾಲಾನಗರಿಯನು ಬಳಿಕ । ಉದಿಸಿದಾನಂದದೊಳು ಮುನಿವ್ರಂ । ದದೊಡನೆ ಮಿಥಿಲೆಗೈ ತರುತ ಮಾ । ರ್ಗದೊಳಹಲ್ಯೆಯ ಶಾಪವನು ಪರಿಹರಿಸಿದನು ರಾಮ ॥ ೧೨ ॥ ಗೌತಮನು ನಿಜಸತಿಸಹಿತ ತಾ । ನೀತನನು ಹರಿಯೆಂದು ಬಗೆವತಿ । ಪ್ರೀತಿಯಿಂದರ್ಚಿಸಿದ ವೇದವಿಹಿತ ವಿಧಾನದಲಿ । ಆತನಾ ಸತಿಸಹಿತಲೈದಿದ । ನಾತುಹಿನಗಿರಿಗೀಶಚಾಪವ । ನೀತನಿಗೆ ತೋರಿಸಲು ಬಂದೆನು ನಿನ್ನ ಬಳಿಗೆಂದ ॥ ೧೩ ॥ ಮುನಿಶತಾನಂದನನೊಡನೆ ರಾ । ಮನ ಚರಿತ್ರಂಗಳನು ಕೇಳುತ । ಮನದೊಳಚ್ಚರಿವಡೆದು ಮಾತೆಯ ಶಾಪ ಭಂಗವನು ॥ ಜನಸಮೂಹದೊಳಾಲಿಸುತ ಜನ । ಕ ನಿದಿರೊಳು ರಾಮನಿಗೆ ಗಾಧಿಸು । ತನ ಮಹಿಮೆಗಳ ಪೇಳಿದನು ಸಂತಸದೆ ಮೊದಲಿಂದ ॥ ೧೪ ॥ ರಾಮಕೇಳ್ಗೈಗಾಧಿಸುತನೀ । ಭೂಮಿಯನು ಪಾಲಿಸುತ ಸತ್ಯದೊ । ಳಾ ಮುನಿವರವಸಿಷ್ಠನಾಶ್ರಮಕೊಂದುದಿವಸದಲಿ ॥ ತಾಮುದದೊಳೈತರಲು ನೃಪನ । ಕ್ಷೇಮವನು ಕೇಳ್ದತ್ತನಾಮುನಿ । ಪ್ರೇಮದೊಳು ತಾನರ್ಘ್ಯಪಾದ್ಯಾಚಮನಗಳನಿತ್ತು ॥ ೧೫ ॥ ಮನುಜಪತಿಗಾ ಧೇಯನಿಗುಮಾ । ತನ ಸಕಲ ಸೈನ್ಯಕುಮೊಡನೆ ಭೋ । ಜನವ ಸಾಗಿಸಬೇಕೆನುತ್ತ ವಸಿಷ್ಠನಾನೃಪನ ॥ ಜಸಿಸಿ ದಾನಂದದೊಳೊಡಂಬಡಿ । ಸಿ ನಿಜನಂದಿನಿ ಧೇನುವನು ಕರೆ । ದು ನುಡಿದನು ಭೋಜನಪದಾರ್ಥಂಗಳ ನೊದಗಿಸೆನುತ ॥ ೧೬ ॥ ಮುನಿವಸಿಷ್ಠನನುಜ್ಞೆಯಿಂದಾ । ಜನಪತಿಯ ಸೈನ್ಯಕ್ಕೊದಗಿಸಿತು । ವಿನುತ ಭಕ್ಷ್ಯಸುಭೋಜ್ಯಗಳನಾಲೇಹ್ಯ ಚೋಷ್ಯಗಳ ॥ ಘನತರದ ಶಾಲ್ಯನ್ನರಾಶಿಗ । ಳನು ವಿಮಲಪಾನೀಯಗಳನಾ । ವನದ ಮಧ್ಯದೊಳೆಲ್ಲರಚ್ಚರಿವಡೆವ ರೀತಿಯಲಿ ॥ ೧೭ ॥ ಬಳಿಕ

ವಿಶ್ವಾಮಿತ್ರ ನಾವನ । ದೊಳುಭುಜಿಸಿ ಬಲದೊಡನೆ ಮುನಿಪನ । ಬಳಿಗೆ ಬಂದಾ ಕಾಮಧೇನುವ ನಿರದೆ ಬೇಡಿದನು ॥ ತಳುವದೀಧೇನುವ ನೆನಗೆ ಕೊಡಿ । ರಿಳೆಯೊಳಗ್ಗದ ರತ್ನಗಳ ನೀ । ಗಳೆ ಕೊಡು ವೆಮುನ ಮೊಪ್ಪುವೆಂದದೆ ನಿಮಗೆ ನಾನೆಂದ ॥ ೧೮ ॥ ಭೂಮಿಪತಿ ನೀನಾಲಿಸ್ಯೆ ವರ । ಕಾಮಧೇನುವ ಬಯಸದಿರೆನಗೆ । ಕಾಮಿತಾರ್ಥಗಳೆಲ್ಲವನು ತಾನೀವು ತಿರ್ಪುದಿದು ॥ ಪ್ರೇಮದೊಳಿದರಘನಸಹಾಯ ದೊ । ಳೀ ಮಹಿಯೊಳಾಚರಿಸುವೆನು ಘನ । ಹೋಮ ಜಪತಪ ಹವ್ಯಕವ್ಯಂಗ ಳನು ನಾನೆಂದ ॥ ೧೯ ॥ ನಂದಿನೀಧೇನುವಿನ ನೆರವಿಂ । ಬಂದತಿಥಿಯ ಭ್ಯಾಗತರ ನಾ । ನಂದಿಸುವೆ ನಾನಗ್ನಿಹೋತ್ರಗಳ ನೆಸಗುವೆನೊಲಿ ದು ॥ ಚಂದದಿಂ ಮುನಿಕೃತ್ಯವೆಲ್ಲವ । ನೊಂದು ಲೋಪವೆನಿಸದೆ ಮಾಡುವೆ । ನಿಂದಿದನುಳಿದು ನಿನಗೆ ಬೇಕಾದುದನು ಕೇಳೆಂದ ॥ ೨೦ ॥ ಧೇನು ವಿದನುಳಿದಾವ ವಸ್ತುವೆ । ನಾನಪೇಕ್ಷಿಸೆ ನಿದನೆ ಬೇಡುವೆ । ನೀನೆಲದೊಳಿದಕಾವುದುಂ ಸಮಮೆನಿಸದೆಲೆಮುನಿಪ ॥ ನಾನು ಕೊಡು ವೆನು ಧರಣಿತಲದೊಳ । ಗೇನುಬೇಕಾದೊಡಮೊಡನೆಯನು । ಮಾನ ವಿಲ್ಲದೆನಗಿದನಿತ್ತು ಪೊರೆವುದುನೀವೆಂದ ॥ ೨೧ ॥ ಜನಪ ವಿಶ್ವಾಮಿ ತ್ರ ನಿನ್ನಯ । ಮನವೊಲಿವರೀತಿಯೊಳು ಧೇನುವ । ನಿನಗೆ ಕೊಡೆ ನಾಂ ಕೇಳುಮತ್ತೇನಾದೊಡ ಮೆನುತ್ತ ॥ ಮುನಿವಸಿಷ್ಠನು ನುಡಿಯ ಲಾ ಮೇ । ದಿನಿಪತಿ ತಮಗೆಸಾವಿರ ಹಸುಗ । ಳನು ಕೊಡುವೆನೀ ಧೇನು ವೆನು ಕೊಡಿರೆನುತ ಬೇಡಿದನು ॥ ೨೨ ॥ ಏನು ಕೊಟ್ಟರು ಬೇಡ ನಾನೀ ಧೇನುವನು ಕೊಡೆನೆನಲು ಗಾಧಿಜ । ನಾನುಡಿಯ ಕೇಳ್ದರದೆ ಲಕ್ಷ ದನಂ ಗಳನು ಕೊಟ್ಟ ॥ ನಾನಿದನು ಕೇಳುವೆನೆನಲ್ಕೆ ತ । ಪೋನಿಧಿಯೊಡಂ ಬಡದಿರಲೊಡನೆ । ತಾನು ತನ್ನೈಸಿರಿಯನೆಲ್ಲವ ಕೊಡುವೆ ನಿದಕೆಂದ ॥ ೨೩ ॥ ಕಾಮಧೇನುವ ಕೊಡುವುದಿಲ್ಲೆನು । ತಾ ಮುನೀಂದ್ರನು ನುಡಿಯಲೊಡನಾ । ಭೂಮಿಪತಿ ಗಾಧೇಯ ಕೋಪವತಾಳ್ದು ಮನ ದೊಳಗೆ ॥ ಕಾಮಧೇನುವ ನೆಳೆಯೆಮನನೊಂ । ದಾ ಮುನಿಪತಿಗೆ ಧೇನು ನುಡಿದುದು । ತಾಮಸವೆನುಳಿದೆನ್ನ ಸಲಹುವುದೆನುತ ಬಿಸು ಸುಯ್ದು ॥ ೨೪ ॥ ನಂದಿನಿಯೆನೀಂ ಕೇಳು ಗಾಧಿಯ । ನಂದನನು ಬಲಶಾಲಿಯಾ ಜನ । ವೃಂದದೊಳು ರಾಜನೆನಿಸಿಹನು ಕ್ಷತ್ರಿಯನು ತಾನು ॥ ಸಂದಣಿಸಿ ಬಲಸಹಿತ ಮಿಲ್ಲಿಗೆ । ಬಂದಿಹನು ನಾನೇನುಮಾಡಲಿ । ಯೆಂದೆನಲು ನಂದಿನಿ ನುಡಿದುದಾಮುನಿಗೆ ವಂದಿಸುತ ॥ ೨೫ ॥ ಕೇಳು

ರಾಘವ ಧೇನುವಾಮುನಿ । ಪಾಲನಿಗೆ ಬಿನ್ನವಿಸಿದುದು ದಯ । ಪಾಲಿಸಿ
ದೊಡಪ್ಪಣೆಯ ನೆನಗೀನೃಪನ ಸೈನ್ಯವನು ॥ ಬೀಳಿಸುವೆ ನಿಮಿಷದಲಿ
ಬಲದಿಂ । ದಾಳಿಪುದು ನೀವೆನಲು ವರಮುನಿ । ಪಾಲ ನಿತ್ತನನುಜ್ಞೆ
ಯನು ನಿರ್ಮಿಪುದು ಬಲವೆನುತ ॥ ೧೬ ॥ ಒಡನೆ ಚತುರಂಗ ಬಲವನು
ತಾ । ನಡವಿಯೊಳು ನಿರ್ಮಿಸುತ ನಂದಿನಿ । ಪೊಡವಿಪಾಲನ ಸೈನ್ಯದೊಡನಾ
ಯುದ್ಧರಂಗದೊಳು ॥ ಕಡುಮುಳಿದುತಾಂ ಹೋರಲವನಿಪ । ನಡಿ
ಗಡಿಗೆ ಸೈನ್ಯವನು ಸೋಲಿಸಿ । ಕಡಿಕಡಿದು ಬೀಳಿಸಿದ ನವನಿಯೊಳಸ್ತ್ರ
ಶಸ್ತ್ರದಲಿ ॥ ೧೭ ॥ ಭಂಗವಡೆದಾ ಸೈನ್ಯವನು ಕಂ । ಡಂಗಕೊಡ
ಹಲು ಧೇನುವಾರಣ । ರಂಗದೊಳು ಜನಿಸಿದರು ಶಕರು ಮ್ಲೇಚ್ಛರು
ಯವನರು ॥ ಸಂಗಳಿಸಿತಾವೆಲ್ಲರಾ ಜನ । ಪಂಗೆ ಬೀರಿದ ರಥಿಕಶಸ್ತ್ರಾ ।
ಸ್ತ್ರಂಗಳನು ಮೀರಿದ ಪರಾಕ್ರಮದೊಳುರೆಬೊಬ್ಬಿರಿದು ॥ ೧೮ ॥
ಮತ್ತೆ ವಿಶ್ವಾಮಿತ್ರನೊಡನಾ । ಬತ್ತಳಿಕೆಯಿಂದಸ್ತ್ರಗಳ ತೆಗ । ದೆತ್ತ
ಲುಂ ಮುತ್ತಿಬಳಸಿದ ಸೈನ್ಯವನು ಖಂಡಿಸುತ ॥ ವುತ್ತಮವೆನಿಸಿದಾಶ್ರ
ಮಂಗಳ । ನೆತ್ತಲುಂ ಶೂನ್ಯವೆನಿಸಿದ ನಾ । ಹೊತ್ತಿನೊಳು ಬಳಿಕಾ
ವಸಿಷ್ಠಮುನೀಂದ್ರ ಖತಿಗೊಂಡ ॥ ೧೯ ॥ ದಂಡವನು ಮುನಿಪೋ
ತ್ತಮನು ಕೈ । ಕೊಂಡವನಿಪಾಲಕನ ಸೈನ್ಯವ । ಖಂಡಿಸಿದನಾ ಬ್ರಹ್ಮ
ತೇಜೋಬಲಮಹಿಮೆಯಿಂದ ॥ ಕಂಡು ವಿಶ್ವಾಮಿತ್ರ ನೀಭೂ । ಮಂಡ
ಲದೊಳು ಕ್ಷತ್ರಿಯಬಲವು । ಭಂಡತನವನು ಹೊಂದಿತೆನ್ನುತ ಮನದಿ
ದುಃಖಿಸಿದ ॥ ೨೦ ॥ ನಿಂದಿಸು ಕ್ಷತ್ರಿಯರ ಬಲವನು । ಯಿಂದುಮೇದಿನಿ
ತಳದೊಳಗಧಿಕ । ಮೆಂದೆನಿಸಿತೀ ಬ್ರಹ್ಮತೇಜೋ ಬಲಮೆನುತಲೊ
ಡನೆ ॥ ಅಂದುಕೊಂಡಾ ರಣವನುಳಿದೈ । ತಂದು ಬ್ರಾಹ್ಮಣನಾಗಲು
ಭಕುತಿ । ಯಿಂದೆ ವಿಶ್ವಾಮಿತ್ರನಾರಂಭಿಸಿದ ನಾತಪಕೆ ॥ ೨೧ ॥
ಶಂಕಿಸದೆ ನೀ ಕೇಳು ರಘುಪತಿ । ತೆಂಕಣದೆಸೆಗೆ ಬಂದು ಗಾಧಿಜ ।
ಶಂಕರನ ಜಾನಿಸುತಸಾಸಿರ ಯಬುದಪರಿಯಂತ ॥ ಬಿಂಕದಿಂದೆಸಗಿದನು
ಬರುಪಾ । ತಂಕಗಳನೀಕ್ಷಿಸದೆ ಭರ್ಗನ । ಕಿಂಕರನು ತಾನೆನಲು ದೇವ
ಸಮೂಹ ಮೆಚ್ಚುವೊಲು ॥ ೨೨ ॥ ತಪವನಾಚರಿಸುತ್ತಿರೆ ಗಾಧಿಜ ।
ವಿಪುಲೆಯೊಳು ಚಂಡಾಲನೆನಿಸಿದ । ತಪನಕುಲದ ತ್ರಿಶಂಕುಯಾಗವ
ಮಾಡಿಸೆಂದೆನುತ ॥ ವಿಪಿನದೊಳು ಬೇಡಲವನಮಪವ । ನುಪಪದೆದಾಗಿ
ಸುತಾತನನು ವಿ । ಷ್ಣುಪದದೊಳು ತಾಂಯ್ದ ಸಗ್ಗದೊಳಿಸಿರಿದನು
ಕೂಡೆ ॥ ೨೩ ॥ ಬಳಿಕ ಪಶ್ಚಿಮದಿಕ್ಕಿನೊಳು ತಾ । ನೊಲಿದು ಘೋರ

ತಪವನೆಸಗಿದನು । ಬಳಿದ ಪಂಚಾಗ್ನಿಗಳ ಮಧ್ಯದೆಸಿಂದನವರತವು ॥ ಕಳಿದುವಿಪರಿ ಸಾಸಿರಬುದಂ । ಗಳೊಡನೆ ಶುನಶ್ಶೇಫನೀತನೆ । ಬಳಿಗೆ ಬಂದಾಂಬುಜಕೆ ಪಶುವೆನಿಸಿರ್ಪ ಸಲಹೆಂದ ॥ ೩೪ ॥ ಕರುಣದಿಂದೀ ಗಾಧಿಸುತನಂ । ದಿರದೆಮನ್ನಿಸಿ ಬಾಲಕನಿಗೊಲಿ । ದೆರಡು ಮಂತ್ರಗಳ ನುಪದೇಶಿಸಿದನು ತಪೋವನದೆ ॥ ಧರಣಿಯೊಳು ನಡೆವಂಬರೀಷನ । ವರಮಖದ ಯೂಪದೊಳು ಬಿಗಿದೊಡ । ಸಿರದೆ ಯುಚ್ಚರಿಸಿದನು ದೇವೇಂದ್ರನು ಪೊರೆವನೆಂದ ॥ ೩೫ ॥ ಉತ್ತರದೆಸೆಗೆ ಪೋಗಿ ತಪವನು । ಮತ್ತೆ ತಾನೆಸಗಿದನು ಜಾನಿಸಿ । ಚಿತ್ತದಲಿ ತಾನೊಂದು ಸಾವಿರ ಯುಬುದಶಂಕರನ ॥ ಚಿತ್ತರಿಸಿದೀತನ ತಪಕೆ ಮೆ । ಚ್ಚುತ್ತ ಬ್ರಹ್ಮನು ಬಂದುಪೇಳಿದ । ನುತ್ತಮದ ಬ್ರಾಹ್ಮಣನು ಋಷಿವರನೆನಿಸಿದೆ ನೀನೆಂದು ॥ ೩೬ ॥ ಈತನೆಡೆಗೈತಂದು ರಂಭೆಯು । ಭೀತಿಯಿಂದೀಕ್ಷಿಸಲೊಡನೆ ಮನ । ಸೋತು ತಾನವಳೊಡನೆ ಭೋಗಿಸಿದ ನುಳಿದು ತಪವನು ॥ ತಾತಿಳಿದು ತನ್ನಜ್ಞತೆಯು ನಿರ । ದೀತಶಾಪವನಿತ್ತ ನವಳಿಗೆ । ಭೂತಲದೆಶಿಲೆಯಾಗು ನೀನೆನುತಧಿಕ ರೋಷದಲಿ ॥ ೩೭ ॥ ಬಂದು ಮೂಡಣ ದೆಸೆಗೆ ಕೌಶಿಕ । ದೊಂದು ಸಾವಿರ ಯುಬುದವಾಡಿದ । ನಂದು ಘೋರತರ ತಪವನು ಬಳಿಕೀತನ ಶಿರದೊಳು ॥ ಚಂದದಿಂದುದಿಸಿದುದು ಧೂಮವು । ನೊಂದುತಲ್ಲಣಿಸಿದುದು ಜಗವಡೆ । ತಂದು ಜೇಡಿದ ನಿಂದ್ರನಿವನ ತಪಃಫಲವನಿರದೆ ॥ ೩೮ ॥ ಪಡೆದು ತಾನಿತ್ತನು ತಪಃಫಲ । ವ ದಿವಿಜೇಂದ್ರನಿ ಗೀತನು ಬಳಿಕ । ಉದಧಿಶೋಷಿಸಿ ತವನಿಕಂಪಿಸಿ ತೀತನ ತಪಸಿಗೆ ॥ ಕದಲಿ ಪುಡಿಪುಡಿಯಾದವು ಗಿರಿಗ । ಳು ಮುಗುಡವೆಸ್ಸಿದಿದರು ಮಾನವ । ರಿದನರಿದು ಬಂದನು ಪಿತಾಮಹ ನಮರರೊಡಗೊಂಡು ॥ ೩೯ ॥ ನೀನು ಬ್ರಹ್ಮರ್ಷಿಯೆನುತಾ ಚತು । ರಾನನ ನೊರೆದನಮರರೆಲ್ಲರು । ನೀನು ಬ್ರಹ್ಮರ್ಷಿಯೆನಿಸಿದೆ ನಿಲ್ಲಿಸು ತಪವನೆನುತ ॥ ಸಾನುರಾಗದೊಳೊರೆದರು ಘನತ । ಪೋನಿಧಿವಸಿಷ್ಠಮುನಿ ನುಡಿದನು । ನೀನು ಬ್ರಹ್ಮರ್ಷಿಯಹೆ ನಿನ್ನಯ ಸಖ್ಯವಿರಲೆಂದು ॥ ೪೦ ॥ ಇಂತು ಬ್ರಾಹ್ಮಣನೆಂದೆನಿಸಿದನು । ಸಂತಸದೊಳಾಲಿಸೆಲೆ ರಾಘವ । ಪಿಂತೆಸಗ್ಗದೊಳು ವಸಿಷ್ಠನೊಡನೆಸಗಿ ಶಪಥವ ॥ ಅಂತವಿಲ್ಲದ ತಪದ ಫಲವನ । ನಂತರದೊಳಿತ್ತನು ಮನದೊಳಗೆ । ಚಿಂತಿಸದೆ ಕೌಶಿಕ ಹರಿಶ್ಚಂದ್ರಂಗೆ ತಾಂ ಪಡೆದು ॥ ೪೧ ॥ ಈತ ತಪದೊಳಗಧಿಕನಾಗಿಹ । ನೀತ ಕುಲದೊಳಗಗ್ಗಳನೆನಿಪ । ನೀತ ನುತ್ತಮನೆಂದೆನಿಸಿದನು ತಾಪಸರುಗಳಲಿ ॥ ಈತ

ನಿಗೆ ಸಮರಿಲ್ಲ ಲೋಕದೊಳೀತ ನಾಮಹಿಮೆಯ ತಿಳಿಯೆನುತ । ಗೌತಮಾತ್ಮಜನುಸುರಿದನು ಪೇಳಿದನೊಲಿದು ರಾಮನಿಗೆ । ೪೧ ॥ ಜನಕ ಭೂಪತಿ ಬಿನ್ನವಿಸಿದನು । ಮುನಿಪ ವಿಶ್ವಾಮಿತ್ರನಿಗೆ ಕರ । ವನುಮುಗಿದು ತಮ್ಮ ದರುಶನದಿಂದೆನ್ನ ವಂಶವಿದು ಘನತೆಯನುತಾಳ್ದುದುರೆ ಧನ್ಯನ । ಹೆನು ಮಹಿಯೊಳೆನಗಾರು ಸರಿಸಮ । ದೆನಿಸುವರು ಫಲಿಸಿದುದು ಯಾಗವು ನಿಮ್ಮ ದಯೆಯಿಂದ ॥ ೪೨ ॥ ಮುಂದೆ ಬೆಸಸುವುದೆಂದು ಭೂವರ । ನುಮ ಬಿನ್ನವಿಸಲೊಡನಾ ಮುನಿ । ಯೆಂದು ಪೇಳಿದ ನೆಲೆಜನಕ ನಿನ್ನ ಬಳಿಯೊಳಿರುತಿಹ ॥ ಇಂದುಶೇಖರ ಧನುವನೀಕ್ಷಿಸ । ಲೆಂದು ನನ್ನೊಡನೀ ಮಿಥಿಲೆಗೈ । ತಂದಿಹನು ರಾಮನೆನೆ ಜನಕಾವನಿಪನಿಂತೆಂದ ॥ ೪೪ ॥ ಮುನಿಪ ನೀನಾಲಿಸು ಶಿವಶರಾ । ಸನವ ನಾ ಭೂತೇಶನಿತ್ತನು । ಮನುಜಪಾಲಕ ದೇವರಾತನಿಗಂದು ಕರುಣಿಸುತ ॥ ಧನುವಿದಾತನ ಮೂಲಕವೆ ತಾ । ನೆಮಗೆ ಬಂದುದು ಶೋಧಿಸುತಿರೆ ಸ । ವನಕೆನುತ ನೆಲವನ್ನು ಬಳಿಕಲಿ ದೊರೆತಳೀ ಸೀತೆ ॥ ೪೫ ॥ ಇವಳು ನಿನ್ನಾತ್ಮಜೆಯು ನೀನೊಲಿ । ದಿವಳ ರಕ್ಷಿಸು ಹರನ ಕೋದಂ । ಡವನು ಭಂಗಿಸುವ ಮನುಜನಿಗೀ ವೀರ್ಯ ಶುಲ್ಕಳಹ ॥ ಅವನಿಸುತೆ ಸೀತೆಯನು ಕೊಟ್ಟು ಮ । ದುವೆಯನಾಗಿಸು ನೀನೆನುತ ಭುಜ । ಭವತನಯನಾರದನುಪೇಳಿದನೆನಗೆ ಕೇಳೆಂದ ॥ ೪೬ ॥ ಸುರಮುನಿಯ ಮತದಂತೆ ಗಂಗಾ । ಧರನ ಚಾಪವ ಮುರಿದವಂಗೀ । ಧರಣಿಸುತೆಯನು ಕೊಡುವೆನೆಂದನುತಾನು ಸಾರಿಸಲು ॥ ಸುರನರೋರಗ ಯಕ್ಷರಾಕ್ಷಸ । ಗರುಡ ಗಂಧರ್ವಾದ್ಯರೆಲ್ಲರು । ಬರುತ ಚಾಪವ ಭಂಗಿಸದೆ ಪಿಂದಿರುಗುತೋಡಿದರು ॥ ೪೭ ॥ ಭೂಮಿಪಾಲಕ ರೊಂದುಗೂಡುತ । ಭೂಮಿಸುತೆಯನು ಪಡೆಯಬೇಕೆಂ । ದೀ ಮಿಥಿಲೆಗೈತಂದು ಸಮರದೊಳೆನ್ನ ಸೋಲಿಸಲು ॥ ನೇಮದಿಂದಾ ನೆಸಗಿ ತಪವನು । ಸೋಮಧರನಿತ್ತಧಿಕ ಬಲದಿಂ । ದಾ ಮನುಜಪಾಲಕರ ಸೋಲಿಸಿದೆನು ರಣಾಂಗಣದೆ ॥ ೪೮ ॥ ಕೇಳು ಮುನಿಪೌತ್ರ ಮಮ ಪರಧನುವ । ನಾಳುತನದಿ ಮುರಿವ ಧರಣೀ । ಪಾಲನನು ಕಾಣೆ ನವನಿಜೆಗೆಂತೆಸಗುವೆ ಮದುವೆ ನು ॥ ಪೇಳಲಾರೆನು ಮನದ ನೋವನು । ಹೇಳಸೀವಿಷಕೆ ಪರಿಹಾರವ । ಪಾಲಿಸುವುದೆನ್ನನೆನುತಂದಾ ಮನುಜಪತಿ ನುಡಿಯೆ ॥ ೪೯ ॥ ಜನಕ ನೀನಾಲಿಸು ಹರಶರಾ । ಸನವ ನೋಡಲು ರಾಮ ಲಕ್ಷ್ಮಣ । ರು ನಡೆತಂದಿಹರಿಲ್ಲಿಗೆನ್ನೊಡ ನುಳಿದು ಸಂಶಯವ ॥ ಧನುವತೋರಿಸಿವರಿಗೆನೆ ಬಳಿಕ । ಮುನಿಪನಾಣತಿಯಂತೆ

ಕಾರ್ಮುಕ । ವನು ತರಿಸಿದನು ಜನಕ ನೃಪನೂರಾಳ್ಗಳಿಂದೊಲಿದು ॥ ೫೦ ॥
ಮುನಿಕುಲೋತ್ತಮ ಕೇಳು ತಮ್ಮ ವ । ಚನವ ತಾಳ್ದು ಶಿರದೊಳು
ಪುರಹರ । ಧನುವ ತರಿಸಿಹೆನೆನುತ ಪೇಳ್ದನು ಜನಕ ಕೈಮುಗಿದು ॥
ಮುನಿವಿಲೋಕಿಸಿ ಗಂಧ ಪುಷ್ಪಗ । ಳನು ತಳಿದ ಕೋದಂಡವನು ರಾ ।
ಮನಿಗೆ ನುಡಿದನು ಹರನಚಾಪವ ನೋಡು ನೀನೆನುತ ॥ ೫೧ ॥ ರಾಮ
ನಾತನ ನುಡಿಯ ನಾಲಿಸಿ । ಕೈಮುಗಿದು ಮುನಿಪೋತ್ತಮನೊಡನೆ ।
ಸೋಮಧರ ಕೋದಂಡವನು ಕೈಯಿಂಪಿಡಿವೆನೆನುತ । ಪ್ರೇಮದಿಂದಲೆ
ನುಡಿದು ಭಕ್ತಿಯೊ । ಳಾ ಮುನಿವರನನುಜ್ಞೆಯನು ತಳೆ । ದಾ ಮಹೇ
ಶನ ಚಾಪದೆಡೆಗೈತಂದ ನತಿಜವದೆ ॥ ೫೨ ॥ ಬಂದು ಚಾಪವ ನೊಂದು
ಕರದಿಂ । ದಂದು ಪಿಡಿದೆತ್ತಿದನು ಸುರರಾ । ನಂದದಿಂದಲೆ ನೋಡಿ ರಾಘವ
ಭಾಪ್ರಭಾಪೆನಲು ॥ ಚಂದದೊಳದಕೆ ತಿರುವ ನೇರಿಸೆ । ಲಂದು ಬಾಗಿಸೆ
ಛಟಛಟ ಧ್ವನಿ । ಯಿಂದೆ ಮುರಿದುದು ಧನುವದೇನೆಂಬೆನು ಮಹಾದ್ಭು
ತವ ॥ ೫೩ ॥ ಜನಕ ನಧಿಕಾನಂದವನು ಪಡೆ । ದನು ಮೊಳಗಿದವು
ದುಂದುಭಿಗಳು ಸು । ಮನಸರಾಗಳೆ ಸುರಿಸಿದರಿಳೆಗೆ ಪುಷ್ಪವೃಷ್ಟಿ
ಯನು ॥ ಮನವೊಲಿದು ಪಾಡಿದರು ಖೇಚರ । ರು ನಡೆತಂದಪ್ಸರರು
ನಾಟ್ಯಗ । ಳ ನೆಸಗಿಪರಾ ಜನಕ ಗಾಧಿಸುತನೊಡನಿಂತೆಂದ ॥ ೫೪ ॥
ರಾಮನಿಗೆ ಸೀತೆಯನು ಲಕ್ಷ್ಮಣ । ಗಾಮಹಿಳೆಯೂರ್ಮಿಳೆಯನಿತ್ತು
ಮ । ಹಾಮುದದೊಳಾಚರಿಸುವೆನು ವೈವಾಹಿಕೋತ್ಸವವ ॥ ಭೂಮಿ
ಪಾಲಕ ದಶರಥನ ನೊಲಿ । ದೀ ಮಿಥಿಳೆಗೆ ಕರಿಸುವೆನೆಂದೆನು । ತಾ ಮುನಿ
ಗೆ ಪೇಳಿದನು ಮಿಥಿಳೇಂದ್ರ ನತಿವಿನಯದಲಿ ॥ ೫೫ ॥ ಬಳಿಕ ಗಾಧೇ
ಯನ ಪದಕೆರಗಿ । ತಳೆದು ಗೌತಮಸುತನನುಜ್ಞೆಯ । ಬಳೆದ ಸಂತಸ
ದಿಂದೆ ಸೇವಕರನ್ನು ಕರೆಯಿಸುತ । ಉಳಿದು ತಾ ಮಸವ ನತಿಸಂಭ್ರಮ ॥
ದೊಳು ಮೆರೆವಯೋಧ್ಯಾಪುರಿಗೆ ಪೋ । ಗಿಳೆಯೊಡೆಯ ದಶರಥನಿಗೀ
ವುದು ಪತ್ರಿಕೆಯನೆಂದ ॥ ೫೬ ॥ ಭೂಮಿಪತಿ ಚಿತ್ತೈಸು ದಶರಥ । ರಾ
ಮ ನಾಹರಧನುವ ಭಂಗಿಸಿ । ಕೋಮಲೆ ಯವನಿಜಾತ್ಮಜೆಯ ನೊಲಿ
ಸಿದನು ಲೀಲೆಯಲಿ ॥ ಪ್ರೇಮದಿಂದೀ ಪುರಕೆ ಬಂಧು । ಸ್ತೋಮಸಹಿತೈ
ತಂದು ರಚಿಸುವು । ದೀ ಮದುವೆಯನೆನುತ್ತ ಬರೆದೋಲೆಯನು
ತಾನಿತ್ತ ॥ ೫೭ ॥ ನಮಿಸಿ ಚರರಾ ಜನಕ ಭೂಪತಿ । ಗೆ ಮಿಥಿಲಾಪುರವ
ನುಳಿದತಿ ಸಂ । ಭ್ರಮದೊಳು ನಡೆವರಂದಯೋಧ್ಯಾನಗರಕತಿಜವದೆ ॥
ತಮತಮಗೆ ಸಂತಸವ ನೈದಿದ । ರು ಮಿಥಿಲೆಯೊಳೆಲ್ಲ ಮನುಜರಾತ ।

ನ್ನ ಮನದೊಳು ತಾಂ ಧನ್ಯನೆನುತಲೆ ತೀಡಿದನಾ ಜನಕ ॥ ೫೮ ॥ ಧರಣಿ
ತನುಜೆಯ ಮದುವೆಗೆ ಯಲಂ । ಕರಿಸಬೇಕೀ ಮಿಥಿಲೆಯನೆನುತ ।
ಕರೆಯಿಸಿದನಾ ಜನಕಭೂಪತಿ ಶಿಲ್ಪಿಗಳನವರು ॥ ನರಪತಿಗೆ ವಂದಿಸಿ
ನೆರೆಯಲಂ । ಕರಿಸುವೆವು ನಿಮ್ಮಾಜ್ಞೆಯೊಳೆನುತ । ಭರದೊಳಾರಂಭಿ
ಸಿದ ರಂದವರ ವರಕೃತ್ಯಗಳ ॥ ೫೯ ॥ ಒಡನೆ ಮಂತ್ರಿಯನೊಲಿದು
ಕರೆಯಿಸಿ । ಪೊಡವಿಪಾಲಕ ಜನಕಮನ್ನಿಸಿ । ನುಡಿದ ನೀಮೇದಿನಿಯೊ
ಳುತ್ತಮವೆನಿಪ ವಸ್ತುಗಳ ॥ ಪೊಡವಿಸುತೆ ಸೀತೆಯ ವಿವಾಹಕೆ ।
ಕಡುಜವದೆ ಹುಡುಹುಡುಕಿಸುತ್ತಲೆ । ಬಿಡದೆ ಕೂಡಿಸಿ ನನ್ನೊಡನೆ
ಪೇಳುವುದು ನೀನೆನುತ ॥ ೬೦ ॥

ಇಂತು ಐದನೆಯ ಅಧ್ಯಾಯ ಸಂಪೂರ್ಣವು. ಪದ್ಯಗಳು ೧೨೩.

ಆರನೆಯ ಅಧ್ಯಾಯ.

ಸೂಚನೆ ॥ ಮಿಥಿಲೆಯ ನಲಂಕರಿಸುತಾ ದಶ ।
ರಥನ ಬರಿಸಿಯೆ ರಾಮನಿಗೊಲಿದು ।
ಪೃಥಿವಿಜೆಯನಿತ್ತು ಮದುವೆಯ ನಾಗಿಸಿದನಾಜನಕ ॥

ಬಿಗಿದರುಪತಾಕೆಗಳ ನಾಸಾ । ಧಗಳ ಮೇಲುರೆ ಚಿತ್ರಿಸಿದರೊ ।
ಪ್ಪಗೆಯೊಳೆಲ್ಲಾ ಭವನಗಳ ಬಗೆಬಗೆಯ ಬಣ್ಣದಲಿ ॥ ಝಗಝಗಿಸು
ವಂದದೊಳು ಲೋವೆಗ । ಳಗೆರಚಿಸಿದರು ಪಟ್ಟೆಗಳ ಬೀ । ದಿಗಳಲಿ
ಮಕರ ತೋರಣಂಗಳ ಕಟ್ಟಿದರು ಬಳಿಕ ॥ ೧ ॥ ಅವನಿಪಾಲರಿ ಗವನಿ
ಸುರರಿಗೆ । ವಿವಿಧ ವರ್ಣಾಶ್ರಮದ ಜನರಿಗೆ । ಭವನಗಳನಾಗಿಸಿದ ರೆಲ್ಲ
ಪದಾರ್ಥಗಳ ನಿರಿಸಿ ॥ ತವಕದಿಂದಾ ಪಟ್ಟಣದ ಹೊರ । ಗೆ ವಿಮಲೋ
ದಕದ ಸವಿಕೊಳಗಳ । ನು ವಿರಚಿಸಿದರು ಸಕಲ ಜೀವಿಗಳಿಗನುಕೂಲ
ವೆನೆ ॥ ೨ ॥ ಆರುಯೋಜನದಗಲ ನೆಲದಲಿ ಸೇರಿದಾ ಚತುರಂಗ
ಸೈನ್ಯಕೆ । ತೋರ ಮಂಟಪಗಳ ನೆಸಗಿದರು ಸೌಖ್ಯವೆನಿಪಂತೆ ॥ ಸಾ
ರತರವೆಂಬ ವೊಲನಿತಕಾ । ಹಾರಗಳನಂದೊದಗಿಸಿದ ರಾ । ಧಾರುಣಿ
ಯೊಳೆಲ್ಲರಿಗೆ ಸಂತಸವೊದಗುವಂದದಲಿ ॥ ೩ ॥ ಕೇರಿಕೇರಿಗಳನು
ಬಳಿಕ ಪ । ನ್ನೀರಿನಿಂದುರೆ ಸಾರಿಸುತೆ ಕ । ರ್ಪೂರ ರಜದಿಂದಿರಿಸಿದರು
ರಂಗವಲಿಗಳನಲ್ಲಿ ॥ ಸಾರತರ ಕೇಸರಿಯ ಜಲಿಲದೆ । ಕಾರಣೆಯನಾಗಿಸಿ

ದರಬಿಲ್ಲಾ । ಗಾರಗಳ ಮೇಲಂದಿರಿಸಿದರು ಕನಕ ಕಲಶಗಳ ॥ ೪ ॥
ಕದಳಿಕಾಸ್ತಂಭಂಗಳನು ಕ । ಟ್ಟಿದರು ಪಟ್ಟಣದ ಭವನಗಳಿಗೆ ।
ಚದುರತನದಿಂದಾಗಿಸಿದ ರಂದ ಭಿತ್ತಿಚಿತ್ರಗಳ ॥ ಸದನಗಳ ಮುಂದೆ
ಬಗೆಬಗೆ ಬ । ಣ್ಣದ ಪುಡಿಗಳಿಂದೆಲ್ಲರು ವಿರಚಿ । ಸಿದರು ಶೃಂಗಾರಗಳ
ನಂದು ನವೀನವೆನಿಸುವಂತೆ ॥ ೫ ॥ ಕಳಸ ಕನ್ನಡಿ ಮಕರ ತೋರಣ ।
ತಳಿರತೋರಣ ಸಿಂಧಸೀಗುರಿ । ಬಿಳಿಗೊಡೆಗುಡಿ ಪತಾಕೆ ಚಾಮರ
ಝಲ್ಲರಿಗಳಿಂದೆ ॥ ಹೊಳೆಹೊಳೆದು ಸಂತತವ ಖಿಳಜನ । ಗಳಿಗೆ ಸಂತಸ
ವನು ಕೊಡುತ್ತ ಮಿ । ಥಿಳೆಯ ಬೀದಿಗಳೆಲ್ಲ ನೆರೆರಂಜಿಸಿತ ಪೂರ್ವವೆ
ನೆ ॥ ೬ ॥ ಮೆರೆವ ಚೌಮೂಲೆಗಳ ಕ್ರಮದಿಂ । ದುರೆ ಚಮತ್ಕಾರಂಗ
ಳನು ಸಮೆ । ದು ರಚಿಸಿದರು ವಿವಾಹ ಮಂಟಪವ ನೆರಡುದಿನದಲಿ ॥
ಗಿರಿಸುತೆಯ ವೈವಾಹ ಮಂಟಪ । ಕೆರಡರಷ್ಟಿನ ಲಂದದೆಸೆದುದು ।
ಪುರದೊಳು ಸಕಲ ಮಾನವರಿಗಚ್ಚರಿಯನಾಗಿಸುತ ॥ ೭ ॥ ಹೊಳೆವ
ಚಿನ್ನದ ಕಂಭಗಳ ಥಳ । ಥಳಿಪ ವಜ್ರದ ಜಗಲಿಗಳ ಮಣಿ । ಬೆಳಗ
ದಿಂದುರೆ ಮೆರೆವ ಸೋಪಾನಗಳ ಮರಕತದ ॥ ಶಿಲೆಗಳಿಂದೊಪ್ಪುತಿಪ
ಗೋಡೆಗ । ಳೊಳು ಚಲಿಸುತಿಹ ತಳಿರತೋರಣ । ಗಳ ಚಮತ್ಕೃತಿ
ಯಿಂದೆ ಮದುವೆಯ ಮಂಟಪವೆಸೆದುದು ॥ ೮ ॥ ವಿರಚಿಸಿದ ವೈವಾಹ
ಮಂಟಪ । ದೆರಡುಪಾರ್ಶ್ವದ ಭಿತ್ತಿಗಳೊಳಂ । ದಿರಿಸಿದ ವಿವಿಧ ಸಾಲ
ಭಂಜಿಕೆಗಳು ಕರವೆಸೆದವು ॥ ಭರದೊಳವು ಬೇಡಿದುದನಿತ್ತವು । ನೆರೆದ
ಮನುಜರಿ ಗಡಿಗಡಿಗೆ ತಾ । ವಿರದೆ ಬಣ್ಣಿಪನಾವನಿಹನು ರಚಿಸಿದ ವೈಖ
ರಿಯ ॥ ೯ ॥ ಒಡನೆ ಮಂಟಪದ ಹೊರಗಿರಿಸಿದ । ರಿಡಿದ ಕಸ್ತೂರಿಯ
ಭರಣಿಗಳ । ನಡುನಡುವೆ ಪನ್ನೀರ ಕೊಪ್ಪರಿಗೆಗಳ ನಿರಿಸಿದರು ॥ ಅಡಕೆ
ತುಂಬಿದ ಸಾದುಪುಣುಗಿನ । ಕೊಡಗಳನು ಸೇರಿಸುತದರ ಸಂ । ಗಡಲಿ
ರಿಸಿದರು ವರಸುಗಂಧದ ಘನಕರಂಡಗಳ ॥ ೧೦ ॥ ಬಿಗಿದ ಬಂಗಾರಿ
ಗಳ ಮುತ್ತಿನ । ಝಗಝಗಿಪ ಕುಚ್ಚುಗಳ ಕಟ್ಟಿದ । ಸೊಗಸ
ನಾಂತಿಹ ಚಿತ್ರಪಠಗಳ ಮೆರೆವಗಿಂಡಿಗಳ ॥ ಬಗೆಬಗೆಯ ಮಣಿದೀಪಗಳ
ಚಮ । ರಗಳ ಬೀಸುವ ಬೊಂಬೆಗಳ ಸಾ । ಲುಗಳ ಲಸೆದುದು ಜಾನ
ಕಿಯ ವೈವಾಹಮಂಟಪವು ॥ ೧೧ ॥ ಸಾರಶಶಿಕಾಂತ ಶಿಲೆಗಳನು
ರೆ । ಸೇರಿಸುತ್ತ ರಚಿಸಿದರು ಚಮ । ತ್ಕಾರದಿಂದಾ ಪುರದ ಮಧ್ಯದೆ
ಸೋಮವೀಧಿಯನು ॥ ಚಾರುತರದಿನೆ ಕಾಂತಶಿಲೆಗಳ । ನೇರಿಸುತ
ಕೌಶಲವನಾಗಿಸಿ । ವಿಸ್ತಾರದ ವಿಭವದಿಂದೆಸಗಿದರು ಸೂರ್ಯವೀಧಿಯನು

ಚರರು ಮಾರ್ಗದ ನಡೆದುದಿನಮೂ । ರರಲಿ ಸೇರ್ದರು ನಿರ್ಜರೇಂ
ದ್ರನ । ಪುರವನು ಪಳಿವಯೋಧ್ಯೆಯನು ಸಂಪ್ರೀತಿಯಿಂದೊಡನೆ ॥
ಸುರಸನುತಶಿವಾ ದಶರಥನ । ಚರಣಕಮಲಕ್ಕೆರಗಿ ಕೊಟ್ಟರು । ನರ
ಪತಿಜನಕ ನಿತ್ತು ಕಳುಹಿದ ಲಗ್ನಪತ್ರಿಕೆಯ ॥ ೧೩ ॥ ಮನುಜಪಾಲ
ಕ ಕುಶಲವೇನಿಮು । ಗೆ ನಿಜಮಂತ್ರಿ ಪುರೋಹಿತರಿಗೆಯುವ । ನಿಯೊಳು
ಕುಶಲವೇ ಕುಶಲದಿಂದಿಹರೆ ಸತ್ರಿಸುತರು । ಜನರು ಪಟ್ಟಣ ದೇಶಕೋ
ಶಗ । ಳು ನಲಿವುತುತ್ತಿಹವೆ ಕುಶಲದೊ । ಳೆನುತ ನುಡಿದಾಚರರು ಪೇ
ಳ್ದರು ಬಂದಸಂಗತಿಯ ॥ ೧೪ ॥ ದೇವ ದಶರಥ ರಾಯ ಕೇಳ್ಳೈ । ಸಾವಧಾ
ನದ ಮನದೆ ರಾಜಿಪ । ಶೈವಚಾಪವ ಕಡಿದು ರಾಮನೊಲಿಸಿದನವನಿಜೆಯ ॥
ಸಾವಕಾಶವನುಳಿದು ಮಿಥಿಲೆಗೆ । ತಾವು ಬಂಧುಗಳೊಡನೆ ಸೀತಾ । ದೇವಿ
ಯ ಮದುವೆಗೀಗಳೈತಹುದೆಂದು ಪೇಳಿದರು ॥ ೧೫ ॥ ಏನಿದಚ್ಚರಿ ಯೆಂ
ದೆನಿಪ್ರಮು ತ । ಪೋನಿಧಿಯೊಡನೆ ರಾಮ ಲಕ್ಷ್ಮಣ । ರೀ ನಗರದಿಂದೆ ಗಮಿಸಿ
ದರಾ ಯಜ್ಞರಕ್ಷಣೆಗೆ । ಜಾನಕಿಯನೆಂತೊಲಿಸಿದನು ಸುತ । ನೇನುಮಾ
ಡಿದನೆಲ್ಲಿಹನುಮುನಿ । ಗೇನುಮಾಡಿದನೆಲ್ಲವನು ಪೇಳೆನುತ ಬೆಸಗೊಂಡ
॥ ೧೬ ॥ ಕೇಳು ಜೀಯರಘುವರ ನಾಮುನಿ । ಪಾಲನ ಮಖವ ರಕ್ಷಿಸುತ
ಘನ । ಲೀಲೆಯಿಂದಾ ಗೌತಮಸತಿಯ ಶಾಪವನುಹರಿಸಿ ॥ ಮೇಲೆನಿಸಿವಿ
ಖ್ಯಾತಿವಡೆದಾ । ಫಾಲನೇತ್ರನ ಭೂರಿಚಾಪವ । ಬೀಳುಮಾಡಿ ಮುರಿ
ದೊಲಿಸಿದನಾ ಸೀತೆಯನು ಬಳಿಕ ॥ ೧೭ ॥ ಜನಕ ಭೂಪತಿರಾಮನಿಗೆ
ಮೇ । ದಿನಿಯಣುಗಿಯನು ಲಕ್ಷ್ಮಣಗೆ ನಿಜ । ತನುಜೆ ಯೂರ್ಮಿಳೆಯ
ನೊಲಿದಿತ್ತು ವಿವಾಹಗಳೆರಡನು ॥ ಘನವಿಭವದಿಂದೆಸಗುವನು ರಾ । ಮ
ನನುಜನೊಡನೆ ಕೌಶಿಕನ ಮನ । ವನೊಲಿಸುತ್ತಿಹನು ಮಿಥಿಲೆಯೊಳಾ
ಜನರ ಮಧ್ಯದಲಿ ॥ ೧೮ ॥ ಅರಸ ಚಿತ್ತೈಸು ಜನಕ ಮಹೀ । ವರನು
ಬರೆಯಿಸಿ ದೋಲೆಯನ್ನನು । ಸರಿಸಿಸತಿಸುತ ಮಂತ್ರಿ ಬಂಧು
ಪುರೋಹಿತರ ಸಹಿತ ॥ ವರಮಿಥಿಲೆಗೈತಹುದು ರಾಮನ । ವರವಿವಾಹ
ಮಹೋತ್ಸವಕೆನುತ । ಚರರು ಪಾದಗಳಿಗೆ ನಮಿಸಿ ಬಿನ್ನವಿಸಿದರುಕೂಡೆ
॥ ೧೯ ॥ ಚರರ ನುಡಿಗೇಳಿ ದಶರಥ ಭೂ । ವರನವರಿಗಿತ್ತು ಬಹುಮಾನ
ವ । ನುರೆಪದೆದು ಮನ್ನಿಸಿ ವಸಿಷ್ಠಮುನೀಂದ್ರನಿಗೆ ನಮಿಸಿ । ಹರನ
ಚಾಪವ ಮುರಿದು ರಾಮನು । ವರಿಸಿ ಸೀತೆಯಗಾಧಿಸುತ ನೊಡ । ನಿ
ರುವ ನಾಮಿಥಿಲೆಯೊಳೆನುತ ಬಿನ್ನವಿಸಿದನು ಬಳಿಕ ॥ ೨೦ ॥ ಜನಕ
ಭೂವರ ಲಗ್ನಪತ್ರಿಕೆ । ಯನು ಬರೆಸಿಹನು ರಾಮನಿಗೆ ಮೇ । ದಿನಿ

ಯಣುಗಿಯನು ಲಕ್ಷ್ಮಣಂಗೂರ್ಮಿಳೆಯನಿತ್ತೊಲಿದು ॥ ಘನವಿವಾಹ
ಗಳೆರಡನಾಗಿಸು । ವೆ ನಿದಕ್ಕೈತಹುದೆನ್ನ ಪಟ್ಟಣ । ಕೆ ನಿಜಬಂಧು
ಬಳಗ ಸಹಿತವೈಭವದೆ ನೀವೆನುತ ॥ ೨೧ ॥ ಅವಧರಿಸು ಮುನಿವರ್ಯ
ಘನವೈ । ಭವದೊಳಾ ಮಿಥಿಳೆಗೆ ಸಕಲ ಬಾಂ । ಧವರೊಡನೆ ನಾಳೆ
ಪಯಣವನಾಗಿಸುವುದೆಂದೆನುತ ॥ ಅವನಿಪಾಲಕ ದಶರಥನು ಬಿ । ನ್ನವಿ
ಸಿ ಬಳಿಕಾ ಪುರವಖಿಳವಾ । ನವರಿಗೈತಹುದೆಲ್ಲರೊಡನೆಂದಾಜ್ಞೆಯ
ನೆಸಗಿದ ॥ ೨೨ ॥ ಪುರದ ರಕ್ಷಣೆಗಾ ಸುಮಂತ್ರನ । ನಿರಿಸಿ ರಥವೇರಿ
ದನು ಬಳಿಕಾ । ಪುರದ ಮಾನವರೆಲ್ಲ ಹೊರಟರು ವಾಹನಂಗಳಲಿ ॥
ಬರುತ ನಾಲ್ಕುದಿನ ಪಥದೊಳು ತದು । ಪರಿಯೊಳೈದಿದರಾ ಮಿಥಿಳೆಯ
ನು । ನೆರೆವಿಭವದಿಂದಿದಿರುಗೊಂಡನು ಜನಕದಶರಥನ ॥ ೨೩ ॥ ಮೊಳಗು
ತಿರೆ ನಿಸ್ಸಾಳತತಿನೆರೆ । ಬೆಳಗುತಿರೆ ಕೈದೀವಿಗೆ ಬೆಳಕು । ಹೊಳೆವ
ಹಗಲಂತೆಸೆಯೆ ಬಣ್ಣದ ಬತ್ತಿಗಳ ಸೊಬಗು ॥ ನಲಿದು ನೃತ್ಯವನಾಡು
ತಿರೆ ಕೊಂ । ಮೆಲೆಯ ರೆಲ್ಲೆಡೆಯೊಳಡಿವಿರೆ ಮಂ । ಗಳರವಂ ಕರೆತಂ
ದನು ಜನಕದಶರಥನೃಪನನು ॥ ೨೪ ॥ ರಾಜಮಂದಿರದೊಳಗೆ ದಶರಥ ।
ರಾಜನ ನಿರಿಸಿದನಖಿಳ ಜನಸ । ಮಾಜವನು ಭವನಂಗಳೊಳಗಿರಿಸಿದನು
ಮನ್ನಿಸುತ ॥ ರಾಜವಂಶದವನಿಪತಿ ಜನಕ । ನಾಜನರಲಾದೇಶ ಕೋ
ಶದ । ಲಾಜನಪತಿಯನೊಲಿದು ಕೇಳಿದ ನೆಲ್ಲರೊಸಗೆಯನು ॥ ೨೫ ॥
ನಾನು ಧನ್ಯನು ಪುಣ್ಯಫಲದಿಂ । ದೀ ನೆಲದೆ ಭಾಸ್ಕರನಕುಲದೊಳು ।
ನಾನುಮಾಡುವೆ ನೀಗ ಘನಸಂಬಂಧವನು ಪದೆದು ॥ ಜಾನಕಿಯ
ವೈವಾಹವನು ಸಂ । ಮಾನದಿಂದಾಗಿಸುವೆ ವೇದವಿ । ಧಾನದೊಳು
ಯಜ್ಞದಕಡೆಯೊಳೆಂದನು ಮಹೀಪತಿಗೆ ॥ ೨೬ ॥ ಮುನಿವಸಿಷ್ಠ
ಸುಯಜ್ಞ ಗೌತಮ । ವಿನುತ ಕಶ್ಯಪ ಮುನಿಶತಾನಂ । ದನ ಭರದ್ವಾಜ
ಚ್ಯವನ ವಾಲ್ಮೀಕಿ ಕೌಶಿಕರ ॥ ಅನುಮತಿಯೊಳಾ ಜನಕ ನಧ್ವರ ।
ವನು ರಚಿಸುತಾ ದೇವಸಂಚಯ । ವ ನೊಲಿಸಿದ ನೀಮಹಿಯೊಳು
ನವೀನವೆನೆ ಜನನಿಕರ ॥ ೨೭ ॥ ಕ್ರತುವನಾಗಿಸಿ ಜನಕ ಗೌತಮ । ಸು
ತಕುಶಿಕಸುತರಿಂದೆ ನಡೆತಂ । ದತಿ ವಿನಯದಿಂದಾ ದಶರಥಂಗೆ ನುಡಿದನು
ನಿಮ್ಮ ॥ ಸುತರಿಗಿಂದೆಸಗಿ ವರಪೂಜೆಯ । ನು ತಳುವದೆನಾಳೆ ಘನ
ನಾಂದಿಯ । ನತಿ ಮುದದೊಳಾಗಿಸಿ ಬಳಿಕ ಮಾಡುವೆನು ಲಗ್ನಗಳ
॥ ೨೮ ॥ ಕುಲದಲಿ ಬಲದಲಿ ಘನಸಂಗರ । ದಲಿ ಸಿರಿಯಲಿ ಪರಾಕ್ರಮದಲಿ
ಬ । ಹಳ ವಿನುತಿವೆತ್ತಿಹರಿನ ಶಶಿಕುಲಗಳೊಳಾದಿಸಿಹರು ॥ ಕಲಿತಿಹುದು

ಸಂಬಂಧವು ನಿಮಗೆ । ನೆಲದೊಳು ಪರಸ್ಪರ ಸಮರು ನೀ । ವೆಲೆಜನಕ
ಕೇಳೆನುತ ಕೌಶಿಕನುತಿವನಂದೊಲಿದು ॥ ೨೯ ॥ ಅರಸ ನಿನ್ನನುಜನ ಸು
ತೆಯರನು । ಭರತ ಶತ್ರುಘ್ನರಿಗೆ ಕೊಡು ತೀ । ಪುರದೆ ನಾಲ್ಕು ಮದು
ವೆಗಳನು ಮಾಡುವುದು ನೀನೆಂದು ॥ ಅರುಹಲಾ ಕೌಶಿಕನು ಬಳಿಕೆ ।
ಲ್ಲರು ಸರಿಯೆನುತಲಂದು ಪೇಳಲು । ಕರವ ಮುಗಿದಾಗ ಬಹುದೆಂದಾ
ಜನಕ ಪೇಳಿದನು ॥ ೩೦ ॥ ಧರಣಿಪಾಲಕ ದಶರಥ ಮನದೊಳರಿವುದೀ ಮಿ
ಥಿಳೆಯನಯೋಧ್ಯಾ । ಪುರದೊಲೀಭವನವನು ನಿನ್ನಯ ರಾಜ ಗೃಹದಂ
ತೆ ॥ ನೆರೆವಿಚಾರವನಾಗಿಸದೆ ತನು । ಜರ ವಿವಾಹಗಳ' ನಡಿಸುವುದೆಂ ।
ದೊರೆಯೆ ಹೊಂದುವನು ಕೊಡುವಗಧೀನನೆನಿಸುವನೆಂದ ॥ ೩೧ ॥ ಜ
ನಕನಾದಿನ ರಾತ್ರಿಯೊಳವನಿ । ಪನ ತನಯರೆಲ್ಲರಿಗೆ ಗೌತಮ । ತನಯ
ನನುಮತಿಯಿಂದೆಸಗಿ ವರಪೂಜೆಗಳನೊಲಿದು ॥ ಘನಮತಂಗಜಗಳೊ
ಳು ಕೂಡಿಸು । ತ ನಿಬರನು ವೈಭವದೊಳಾಗಿಸಿ । ದನು ಗಣಿಕೆಯರ
ನೃತ್ಯದಲಿ ಪೊಸತೆನೆ ಮೆರವಣಿಗೆಯ ॥ ೩೨ ॥ ಮರುದಿನದೊಳಾ ದಶರ
ಥನು ಮುನಿ । ವರವಸಿಷ್ಠನನುಜ್ಞೆಯಂತಾ । ಚರಿಸಿದನು ನಾಂದಿಯ
ನು ವೇದವಿಹಿತ ವಿಧಾನದಲಿ ॥ ಕರಿಸಿ ಕೊಟ್ಟನು ಮಂಗಳಗಳು ಸು ।
ತರಿಗೆ ಪೆರ್ಚಲೆನುತ್ತ ಧರಣೀ । ಸುರರಿಗಾದಿನ ದಕ್ಷಿಣೆಸಹಿತ ಲಕ್ಷ ಗೋ
ವುಗಳ ॥ ೩೩ ॥ ಜನಕತನ್ನಯ ಮಂದಿರದೊಳಾ । ಮುನಿಶತಾನಂದನನ
ನೇಮದ । ಲಿ ನಡಿಸಿದನಂದೊಲಿದು ನಾಂದಿಯ ನತಿವಿನೋದದಲಿ ॥ ತನು
ಜೆಯರಿಗಾಗಲಿ ಶುಭಗಳೆಂ । ದೆನುತ ಮಾಡಿದ ನಖಿಳದಾನಗ । ಳ
ನವನೀಸುರರಿಗೆ ಮನದಣಿಯೆ ದಕ್ಷಿಣೆಯಸಹಿತ ॥ ೩೪ ॥ ತದುಪರಿಯ
ವಾಸರ ಮದಮುಕಾ । ಲದೊಳು ನಿಜಮಂದಿರಕೆ ಜನಕ ನೊ । ಲಿದು
ಕರಿಸಿದನು ವೈಭವಗಳಿಂದೆ ದಶರಥನೃಪನ ॥ ತ್ರಿದಿವದೊಳು ದಿಕ್ಪಾಲ
ರೊಡವೆರ । ಸಿದ ವಿರಂಚಿಯವೊಲು ಸುತರನು ಪ । ದೆದೊಡಗೊಂ
ಡೈತಂದನು ದಶರಥ ಜನಕನಮನೆಗೆ ॥ ೩೫ ॥ ಉಚಿತದಿಂದೆಲ್ಲರನು ಮನ್ನಿ
ಸಿ । ಸಚಿವಸಾಮಂತ ರೊಡನಾಮಣಿ । ಖಚಿತ ಕಾಂತಿವಿಸರದೊಳೆಸೆವ
ವಿವಾಹಮಂಟಪಕೆ ॥ ಅಚಲವೇದವನಾಂತು ಬಂದು ಸ । ಮುಚಿತ
ಪೀಠದೆ ಕುಳ್ಳಿರಿಸಿ ಹಿತ । ವಚನದಿಂದೆ ವಸಿಷ್ಠನನುಪಚರಿಸಿದನಾ
ಜನಕ ॥ ೩೬ ॥ ನೆರೆದರಾ ಮಿಥಿಳೆಯಲಿ ವಿಪ್ರರು । ವರಕವೀಂದ್ರರು
ವಾಗ್ಮಿಗಳು ಜನ । ಪರು ಕಲಾವಿದರು ಗಣಿತಜ್ಞರು ಸೋಮಯಾಜಿ
ಗಳು । ಪರಿಪರಾರ್ಚನರತರು ಯೋಗೀ । ಶ್ವರರು ಶೂದ್ರೋತ್ಯಕರರು

ಮಂತ್ರ । ಜ್ಞರು ವಿವಾಹೋತ್ಸವ ವಿಲೋಕನ ಕೌತುಕಿಗಳೊಲಿದು
॥ ೩೭ ॥ ವರಮುಹೂರ್ತದೊಳಾ ವಸಿಷ್ಠನು । ನೆರೆದ ಮುನಿಪ್ರೋತ್ತ
ಮರ ಮಧ್ಯದೊ । ಳಿರುತ ಗೌತಮಗಾಧಿಸುತರಿಂದೆ ಘನಸಂತಸದಿ ॥
ವರವಿವಾಹದ ವೇದಿಕೆಗಳನು । ವಿರಚಿಸಿ ಬಳಿಕ ತಾನಪನಲಂ । ಕರಿಸಿ
ದನು ಗಂಧಾಕ್ಷತಸುಪುಷ್ಪಗಳ ಸರ್ಪಿಸುತ ॥ ೩೮ ॥ ಬಳಿಕ ತಾನಿರಿಸಿ
ದನು ವೇದಿಕೆ । ಗಳ ನಡುವೆ ಕುಂಕುಮದರಸಿನದ । ಹೊಳೆವಗಂಧಾ
ಕ್ಷತೆ ಕುಸುಮತಾಂಬೂಲ ತಟ್ಟೆಗಳ ॥ ಥಳಥಳಿಸುತಿಹ ಕಲಸ ಕನ್ನಡಿ ।
ಗಳ ನೆಸೆವ ಸ್ರುಕ್ಸ್ರುವಸಮಿತ್ಕುಶ । ಗಳನು ದರ್ಭೆಗಳ ನರಳಿನ
ಗೋಘೃತದ ಪಾತ್ರೆಗಳ ॥ ೩೯ ॥ ಬರಿಸಿ ಕೂಡಿಸಿ ವೇದಿಕೆಯೊಳಾ ।
ನರಪತಿಗಳನು ಮುದದೆಪುಣ್ಯಾ । ಹರಚನೆಯ ನಂದಾಗಿಸಿದನು ಸಕಲ
ಸುರಾರ್ಚನೆಯ ॥ ಎರಡುವಂಶಗಳಲಿ ಮಹೀಪಾ । ಲರನು ಹೊಗಳುತ
ವೇದವಿಧಿಯೊಳು । ವಿರಚಿಸಿದನವರಿಂದೆ ಹೋಮವನಾವಸಿಷ್ಠಮುನಿ
॥ ೪೦ ॥ ನೆರೆದ ಶುಭಲಗ್ನದೊಳು ಮುನಿವರ । ಕರಿಸಿ ಗಿರಿಜಾರ್ಚನೆಯ
ನೆಸಗಿದ । ತರಳೆಯರನಾವರರ ಮುಂಗಡೆ ತೆರೆಯಹೊರಗಿನಲಿ ॥ ಮೆರೆವ
ವೇದಿಕೆಗಳೊಳು ನಿಲಿಸು । ತ್ತಿರಿಸಿದನು ಜೀರಿಗೆಗುಳವನಾ । ವರವಧುಗ
ಳಿಂದೆ ಘನಮಂಗಳಗಳನು ಪೇಳುತ್ತ ॥ ೪೧ ॥ ಹೊಳೆವವೇದಿಕೆ ಮಧ್ಯ
ದಲಿನೃಪ । ನಿಳೆಯ ಮಗಳನು ತಾಂ ಪಿಡಿದು ನೆರೆ । ಬಳಸಿದ ಮನುಜ
ರಾಲಿಸುತ್ತಿರೆ ಕರೆದು ರಾಮನನು ॥ ತಳೆದ ಸಂತಸದಿಂದೆ ನುಡಿದನು ।
ಗಳದೊಳುಬ್ಬುವಗದ್ಗದ ಸ್ವರ । ಗಳ ಗಡಣದಿಂದೆ ಸುರಿಸುತ್ತಾನಂದ
ಬಾಷ್ಪಗಳ ॥ ೪೨ ॥ ನನ್ನ ಮಗಳೀ ಸೀತೆನಡೆವಳು । ನಿನ್ನ ಸಹಧರ್ಮಿ
ಣಿಯುತಾನೆನೆ । ಮನ್ನಣೆಯೊಳೀಕ್ಷಿಸು ಪತಿವ್ರತೆಭಾಗ್ಯಶಾಲಿನಿಯು ॥
ನಿನ್ನ ನನುಸರಿಸುವಳು ನೆರಳಂ । ತಿನ್ನು ಪಿಡಿನೀನಿವಳ ಪಾಣಿಯ ।
ನೆನ್ನುತಾತನ ಕರದೆ ಧಾರೆಯ ನೆರೆದನಾಜನಕ ॥ ೪೩ ॥ ಒಡನೆ ಲಕ್ಷ್ಮಣ
ನಂ ಕರೆದು ನೆಲ । ದೊಡೆಯನಾಜನಕ ಪ್ರಮೋದದೆ । ನುಡಿದನು
ನಿನಗೆ ಭದ್ರಮಾಗಲಿತನುಜೆ ಯೂರ್ಮಿಳೆಯಂ ॥ ಕಡುಹರುಷದಿಂದೀಕ್ಷಿಸಿ
ಕರವ । ಪಿಡಿವುದೀಗೆನುತ್ತ ಸಭೆಯೊಳು । ನುಡಿದು ಧಾರೆಯನೆರೆದನು
ಚ್ಚರಿಸುತ್ತ ಮಂತ್ರವನು ॥ ೪೪ ॥ ಭರತಬಾರ್ಯೆ ಮಾಂಡವಿಯ ನೀಂ ।
ನೆರೆವಿಲೋಕಿಸು ಕರವಪಿಡಿ ನಿಜ । ಕರದೊಳೆನುತಾ ಜನಕ ಭೂಪರ
ನುಡಿದು ಸಂತಸದಿ ॥ ವರಮುನೀಂದ್ರನು ನುಡಿವಮಂತ್ರವ । ನೊರೆದು
ಧಾರೆಯ ನೆರೆವನಾತನ । ಕರದೊಳೆಲ್ಲರು ನೋಡುತಿರಲಾ ಮದುವೆಯ

ಮನೆಯಲಿ ॥ ೪೫ ॥ ಮತ್ತೆ ಶತ್ರುಘ್ನನ ಕರೆದು ನೀ । ನಿತ್ತಲೀಶ್ರುತ ಕೀರ್ತಿಯನು ನೋ । ಡುತ್ತ ಮಾಂಗನೆಯ ಕರವನು ಪಿಡಿ ಕೈಯೊಳಿಂ ದೆನುತ ಬಿನ್ನೈಸಿ ನುಡಿದಾಜನಕ ತಾ । ನುತ್ತಮದ ಸಾತ್ವೀಕಭಾವ ದೊ । ಳಿತ್ತನವನಿಗೆ ಧಾರೆಯನೆರೆದು ಕನ್ಯಕೆಯನೊಲಿದು ॥ ೪೬ ॥ ಬಳಿಕ ರಾಜತನಯರು ನಾಲ್ವರು । ಥಳಥಳಿಪ ಸಕಲಾಭರಣಗಳ । ಬಳಗದಿಂ ದೆಸೆವ ವಧುಗಳ ಕೈಗಳನು ತಾವ್ಪಿಡಿದು ॥ ಹೊಳೆವಹೋಮಾನಲನ ಸುತ್ತಲು । ಸುಳಿದರಂದು ವಿರಚಿಸಿ ಹೋಮವ । ನಿಳೆಯೊಳದು ಪೊಸತೆನಲು ಶ್ರುತಿಮಂತ್ರಗಳ ನಾಲಿಸುತ ॥ ೪೭ ॥ ಮುನಿವಸಿಷ್ಠನೆಸೆವ ವಧೂವರ । ರನು ನಿಲಿಸುತಾ ವೇದಿಕೆಯೊಳದಿ । ರಿನಲಿ ರಚಿಸಿದನಕ್ಷತಾರೋಪಣೆಗಳನವರಿಗೆ ॥ ಮುನಿಗಳೆಲ್ಲರು ಮೆಚ್ಚುವಂದದೆ । ಜನಸಮೂಹದ ಮಧ್ಯದೊಳವನಿ । ತನುಜೆಯ ವಿವಾಹನಡೆದುದಧಿಕ ವೈಭವಂಗಳಲಿ ॥ ೪೮ ॥ ಬಂದುದು ಕುಸುಮವೃಷ್ಟಿ ಗಗನದೊ । ಳಂದು ದುಂದುಭಿ ಘೋಷವಿಡಿದುದು । ನಿಂದು ನಾಟ್ಯವನಪ್ಸರಾಂಗನೆಯರ್ಗಳಾಡಿದರು । ಸಂದಣಿಸಿ ಗಂಧರ್ವರಿಂದ್ರನ । ಮುಂದೆ ಪಾಡಿದರು ಮಧುರಧ್ವನಿ । ಯಿಂದೆ ದಶರಥನಂದನರ ವೈವಾಹಲಗ್ನದಲಿ ॥ ೪೯ ॥ ವೇದಮಂತ್ರಗಳೊಂದಡೆ ಬುಧವಿ । ವಾದ ಮತ್ತೊಂದೆಡೆ ಸುಗಾನನಿ । ನಾದ ಮಿನ್ನೊಂದುಕಡೆ ನಾಟ್ಯದ ಬೆಡಗದೊಂದುಕಡೆ ॥ ಮೋದಿಸೀಶರ ಗಡಣವೊಂದೆಡೆ । ವಾದಿಗಳ ಸಂವಾದವೊಂದೆಡೆ । ವೇದಮೂರ್ತಿಗಳಾಶಿಷಂಗಳದೊಂದೆಡೆನೆರೆದುದು ॥ ೫೦ ॥ ಮೊಳಗುತಿರೆ ನಿಸ್ಸಾಳ ತತ್ರಿಕೆವಿ । ಗಳಿಗೆ ಬೀರುತಿರೆ ಘನವಾದ್ಯಂ । ಗಳ ನಿನದಮತಿಸಂತಸದೊಳಾ ಜನಕಭೂವರನು ॥ ತಿಳಿದು ಕೊಡಿಸುತ ಗಂಧ ಪುಷ್ಪಂ । ಗಳನು ಫಲತಾಂಬೂಲ ದಕ್ಷಿಣೆ । ಗಳನಧಿಕ ಮರ್ಯಾದೆಯಿಂದೆಲ್ಲರನು ಮನ್ನಿಸಿದ ॥ ೫೧ ॥ ನೆರೆದಮಾನವರಿಗೆ ಜನಕ ಭೂ । ವರನು ಹದಿನೈದು ದಿವಸಂಗಳೊ । ಳೆರಡು ವೇಳೆಯೊಳು ವಿರಚಿಸಿದನು ಸಂತರ್ಪಣೆಗಳನು ॥ ಧರೆಯೊಳೆಲ್ಲರ ತಾರತಮ್ಯವ । ನರಿತು ಮನ್ನಿಸಿ ಭೋಜನಗಳಿಂ । ದುರೆದಣಿಸಿದನು ಬೇರೆಬೇರವರವರರೀತಿಯಲಿ ॥ ೫೨ ॥ ಮೆರೆವಶಾಲ್ಯನ್ನ ಹುಳಿಯನ್ನ ಸ । ಲಿರುಚಿವೆತ್ತಘೃತ ದಧಿಸೂಪ ಹು । ಳಿರಸ ಶಾಕ ಪಳಿದವು ಪಚ್ಚಡಿ ಪರಿಪರಮಾನ್ನ ॥ ಕರಿದ ಹಪ್ಪಳ ಸಂಡಿಗೆ ಕಡಬು । ಪಿರಿಯುಳಾಡು ಚಿರೋಟಿ ಯಾಂಬೊಡೆ । ತರತರದ ಹೋಳಿಗೆಗಳಿಂದಾಗಿಸಿದ ನೂಟಗಳ ॥ ೫೩ ॥ ವರವಧೂವರರೆಲ್ಲರಿಂದಾ । ಗುರುವಸಿಷ್ಠ

ನು ಸೌಖ್ಯದಿನಗಳೊ । ಳೆರಡುವೇಳೆಯಲಿ ರಚಿಸಿದ ಸೌಪಾಸನಾದಿಗ ಳ ॥ ಎರಡುವೇಳೆಗಳಲಿ ದಿನದಿನವೊ । ಳುರಟಣೆಗಳನು ಮಾಡಿಸಿದರು ವಿ । ತರಣೆಯಿಂದೆಸಗಿದನು ನಾಕಬಲಿಯು ಮಹೋತ್ಸವವ ॥ ೫೪ ॥ ಬೀರೆ ಕೈದೀವಿಗೆಗಳ ಬೆಳಕು । ಮೀರೆಬಣ್ಣದ ಚಿತ್ರಿಗಳ ಛವಿ । ತೋರೆ ಬಾಣಬಿರುಸುಗಳ ಬಗೆಬಗೆಯ ಚಮತ್ಕೃತಿಯು ॥ ಸೇರೆ ಮಂಗಳವಾದ್ಯನಿಸ್ವನ । ಸಾರೆವೇಶ್ಯಾಂಗನೆಯರ ನಟನ । ವಾರಣಂಗಳೊಳೇರಿಸಿದ ನಂದಾವಧೂವರರ ॥ ೫೫ ॥ ಮೇದಿನೀಪತಿ ಜನಕನಾಬಳಿ । ಕೈದನೆಯದಿನ ರಾತ್ರಿಯೊಳು ತಾ । ನಾದಶರಥ ಮಹೀವರನೊಡನೆ ರಾಜತೇಜದಲಿ ॥ ಬೀದಿಬೀದಿಗಳಲಿ ಬರಿಸುತ ವಿ । ನೋದದಿಂದಾಗಿಸಿದನು ಪುರದೊ । ಳಾದರದೆ ಮೆರವಣಿಗೆಯನು ಸಂಸ್ತುತಿಸೆಕವಿನಿಕರ ॥ ೫೬ ॥ ತದುಪರಿಯುವಾಸರದೊಳಾಚರಿ । ಸಿದರು ಬಂಧುಸಮೂಹದ ಸಹಿತ । ಮುದವನಾಂತಾನೃಪತನುಜರೋ ಕುಳಿಯಸಡಗರವ ॥ ಪದೆದು ನೋಡಿದರೆಲ್ಲರಾನಂ । ದದೊಳು ನೆರೆರಾಜಿಸಿದರು ಬಹುವಿ । ಧದುಡಿಗೆ ತೊಡಿಗೆಗಳಗಡಣದಿಂದಾ ವಧೂವರರು ॥ ೫೭ ॥ ಈತೆರದೆ ಮಿಥಿಲಾಪುರದೊಳಾ । ಸೀತೆಯ ಮದುವೆ ನಡೆಯಲಾ ಸಾ । ಕೇತ ಪತಿಜನಕರೆಸಗಿದಖಿಳ ದಾನಧರ್ಮಗಳಲಿ ॥ ಪ್ರೀತಿವಡೆದುದು ಭೂಸುರರ ಸಂ । ಘಾತ ಮನ್ನಿಸಿದರೊಲಿದೊಲಿದಾ । ಭೂತಲಾಧೀಶರನುಡಿಗೆ ಯುಚಿತವಚನಂಗಳಲಿ ॥ ೫೮ ॥ ಇತ್ತನಾಜನಕ ನಳಿಯಂದಿರಿ । ಗುತ್ತಮವಧೇನುಗಳನತಿ ಬೆಲೆ । ವೆತ್ತರನ್ನದೊಡವೆಗಳನು ಪೀತಾಂಬರಂಗಳನು ॥ ಬಿತ್ತರದ ಕನ್ಯಾಧನವಿದೆನೆ । ಮತ್ತಗಜ ಹಯ ರಥಗಳನು ಕಳೆ । ವೆತ್ತಕಂಬಳಿಗಳನು ಸೇವಕಸೇವಕೀಜನರ ॥ ೫೯ ॥ ಪದೆದುಮನ್ನಿಸಿಯುಡುಗರೆಗಳಂ । ದೆ ದಶರಥ ಭೂಪಾಲಕನನು ಸ । ಲೆದಣಿಸುತ್ತಳಿಯಂದಿರೊಡನಾಸುತೆಯರೆಲ್ಲರನು ॥ ಬವಗಿದನು ರಾಗದೊಳು ತಾಕಳು । ಹಿದ ನಯೋಧ್ಯೆಗೆ ಮೊರೆಯೆ ವಾದ್ಯಗ । ಳದುಬುತಮಿದೆನೆ ವೈಭವಂಗಳೊಳಾ ಜನಕನೊಲಿದು ॥ ೬೦ ॥ ಅತ್ತೆ ಮಾವಂದಿರ ಸಹಿತಮೊರ । ಡುತ್ತ ಗಂಡನ ಕೈವಿಡಿದು ಪೋ । ಗುತ್ತಿಹಾಧರಣೀಸುತೆಗೊಲಿದು ಜನಕ ಭೂಮಿಪನು ॥ ಮತ್ತೆಮತ್ತುಪದೇಶಿಸಿದ ನ । ತ್ಯುತ್ತಮದ ನೀತಿಗಳನೆಲ್ಲವ । ನುತ್ತಮಾಂಗವನು ಸವರುತ ಲೋಕದಿತರ ಜನರೊಲು ॥ ೬೧ ॥ ಸೀತೆ ಜನಕ ಸುಮೇಧೆಯರ ಬಳಿ । ಗಾತುರದೊಳೈದಿ ಚರಣಕೆರಗಿ । ಮಾತೆ ನೀನಾಲಿಪುದು ನನ್ನಖಿಳಾಪರಾಧಗಳ ॥ ಪ್ರೀತಿ

ಯಿಂ ಮನ್ನಿಸೆನುತ ನುಡಿದು । ತಾತನಿಗೆ ಪೋಗಿಬಂಪೆನೆನು । ತಾ
ತರುಣಿ ಯೊರೆದೊಲಿಸಿದಳು ತನ್ನಯ ಸಖೀಜನರ ॥ ೬೬ ॥ ಪಿತನ
ಪ್ರರದಿಂದೆ ಪೊರಮಟ್ಟು । ಕ್ಷಿತಿಸುತೆ ರಥವನೇರಿ ಪತಿಯೊಡ । ನತಿ
ವಿಭವದೊಳ್ಳಳತ ಯೋಧ್ಯಾಪ್ರುರಿಗೆ ಪೊರಮಡಲು ॥ ಕ್ಷಿತಿಪತಿ ದಶರ
ಥನನು ಗೌರವಿ । ಸುತ ನಡೆದು ಪೋಗಿ ಬಳಿಕಾಜನ । ಕ ತಿರುಗಿದನಾ
ತನನುಮತಿಯಿಂದಾ ಮಿಥಿಲಗಾಗಿ ॥ ೬೭ ॥ ಬರುತ ಮಾರ್ಗದೊಳದಿರು
ವಂದಾ । ಪರಶುರಾಮನ ಬಿಂಕವನು ಸಲೆ । ಮುರಿದ ಪತಿಯೊಡನೈದಿದ
ಳಯೋಧ್ಯಾಮಹಾಪ್ರರವ ॥ ಪುರದ ಹೊರವಳಯದಲಿ ಕಂಡಳು ।
ಪರಿವನದಿಗಳ ಪುಷ್ಪವನಗಳ । ಪಿರಿದೆನಿಪ ತಾವರೆ ಕೊಳಂಗಳನಾ
ಮಹೀತನುಜೆ ॥ ೬೮ ॥ ಸೀತೆಯ ವಿವಾಹ ಕಥೆಯಿದು ವಿ । ಖ್ಯಾತಿಯಿಂ
ನೆಸೆವುದನವರತವು । ಭೂತಲದೊಳೀ ಚರಿತೆಯನು ನಿತ್ಯವು ಭಕುತಿ
ಯಿಂದೆ ॥ ಪ್ರೀತಿವಡೆದೋದುವಮನುಜರಿಂ । ಗಾತುರದೊಳತ್ತ ಖಿಳ
ಸೌಭಾ । ಗ್ಯಾತಿಶಯಗಳನು ಸಲೆಪಾಲಿಸುವನುರಮಾಧವನು । ೬೯ ॥

ಇಂತು ಆರನೆಯ ಅಧ್ಯಾಯ ಸಂಪೂರ್ಣವು. ಪದ್ಯಗಳು ೬೯.

ಏಳನೆಯ ಅಧ್ಯಾಯ.

ಸೂಚನೆ ॥ ಪತಿಯೊಡನೆ ಹನ್ನೆರಡು ವರುಸವು ।
ವಿತತ ಸೌಖ್ಯಂಗಳನು ತಾನೈ ।
ದುತ ಲಯೋಧ್ಯಾಪ್ರರದೊಳದ್ದಳು ಸೀತೆ ಸಂತಸದಿ ॥

ಹಲಸು ನೇರಿಳೆ ನಿಂಬೆ ಕಿತ್ತಳೆ । ಫಲಿತದಾಡಿಮ ಮಾವು ತೆಂಗು
ಪೆ । ರಿಳೆ ಚಕೋತ ಕಪಿತ್ಥಮಾದಳ ಕದಳಿ ಬಹುಬೀಜ ॥ ಬೆಳೆದ
ತಿಂತ್ರಿಣಿ ಕಾಂಗುಬದರಿಸು । ಲಲಿತ ಖರ್ಜೂರಾಮಲಕವೆ ಮೊ । ದಲಹ
ಫಲತರುವನಗಳನು ನೋಡಿದಳು ಭೂಮಿಸುತೆ ॥ ೧ ॥ ಸುರಗಿಮಲ್ಲಿಗೆ
ಜಾಜಿಸಂಪಿಗೆ । ಕುರುವಕಶಿರೀಷ ಕಣಗಲೆ ಪಾ । ದರಿತಿಲಕ ಸೇವಂತಿಗೆ
ಕಮಲ ಚೂತಸುರಹೊನ್ನೆ ॥ ಮೆರೆವನಂದ್ಯಾವರ್ತ ಕೇತಕಿ । ವರೆಸು
ಮಂದಾರ ಕುಸುಮಗಳಿಂ । ದುರೆಪೊಳೆವ ಪೂದೋಟಗಳ ನಾಸೀತೆ
ನೋಡಿದಳು ॥ ೨ ॥ ಬೆಳೆದಭತ್ತದ ಗದ್ದೆಗಳ ಥಳ । ಥಳಪ ಕಬ್ಬಿನ
ತೋಟಗಳ ಕಂ । ಗಳಿಗೆ ತೋರ್ಪ ಸಕಲ ವಿಧಧಾನ್ಯದ ಹೊಲಂಗಳ

ನು ॥ ಇಳಿಯಣುಗಿ ನೋಡುತ್ತ ಪೊಕ್ಕಳು । ಪೊಳೆವ ದೇವನಗರಿಯು
ವೊಲುಕಂ । ಗೊಳಪ ಯೋಧ್ಯಾಪುರವ ನಂದಾಪತಿಸಹಿತ ಬರುತ ॥ ೩ ॥
ಎಡಬಲದ ಸೌಧಂಗಳಿಂ ದಡಿ । ಗಡಿಗೆಸೆವ ದೇವಾಲಯಂಗಳಿಂ । ದುಡಿಗೆ
ತೊಡಿಗೆಗಳಂಗಡಿಗಳಿಂದೆಸೆವ ಬೀದಿಗಳಿಂ ॥ ಇಡಿದ ನವರತ್ನದೊಡ
ವೆಗಳಿಂ ಗಡಿಗಳಿಂದುರೆ ರಂಜಿಸುತ ಕಡು । ಬೆಡಗನೈದಿದೆ ಡೆಗಳನೋ
ಡುತ ಬಂದಳಾಸೀತೆ ॥ ೪ ॥ ಸುರನಗರಿಯಂತಾವಕಾಲದೊ । ಳುರೆ
ವಿಭವದಿಂದೆಸೆವ ಯೋಧ್ಯಾ । ಪುರವನಾ ಭೂಮಿಸುತೆ ಸೀತೆ ವಿಲೋಕಿ
ಸುತೊಡನೆ ॥ ನೆರೆಹೊಳೆವರ ಮನೆಯನನಿಪಕ್ಕೈ । ತರುತ್ತೀದು
ರಥದಿಂದೆ ಪೊಕ್ಕಳು । ಪರಮ ಸಂತಸದಿಂದೆ ಮೆರೆವಾರಾಣಿವಾಸವನು
॥ ೫ ॥ ಅತ್ತ ಮಾವಂದಿರೆಡೆಯೊಳಗಾ । ಯುತ್ತಮಾಂಗನೆ ಸೀತೆಯನು
ಭವಿ । ಸುತ್ತ ರಾಜಸುಖಂಗಳೆಲ್ಲವ ನಿರುತ್ತಿರಲು ಬಳಿಕ ॥ ಮತ್ತೆ ಜನ
ಕನ ಯೋಧ್ಯೆಗೆ ಬೆಸಸಿ । ತೆತ್ತಿಗರ ನಟ್ಟಿದನು ಬಿನ್ನವಿ । ಸುತ್ತ ದೀವ
ಳಿಗೆಗೆ ಕರೆತಹುದೆಂದು ದಶರಥನ ॥ ೬ ॥ ಜನಕ ನಪ್ಪಣೆಯನು ಶಿರದೊ
ಳಾಂ । ತು ನಡೆತಂದಾ ಚರರ ಯೋಧ್ಯೆಗೆ । ಮನುಜನಾಥನಿಗೆರಗಿ ಕೈ
ಮುಗಿದಿತ್ತು ಪತ್ರಿಕೆಯ । ವಿನಯದಿಂದಲೆ ಪೇಳ್ದರೀಪುರ । ಜನಸಹಿತ
ದೀವಳಿಗೆ ಹಬ್ಬಕೆ । ತನಯರೊಡನೈತಹುದು ಮಿಥಿಲಾಪುರಕೆ ನೀವೆನುತ
॥ ೭ ॥ ಪೊಡವಿಪಾಲಕ ದಶರಥನು ತಿಳಿ । ದೊಡನೆ ಲಿಖಿತಾರ್ಥವನು
ಬಳಿಕಲೆ । ರಡನೆಯದಿನದಿ ನೆಂಟರಿಷ್ಟರನೊಲಿದು ಬರಿಸುತ್ತ ॥ ಸಡಗರ
ದೊಳಾತ್ಮಜರನವರಾ । ಮಡದಿಯರನೊಡಗೊಂಡು ರಥವ । ನ್ನಡರಿ
ಮಿಥಿಲಾಪುರಕೆ ಪಯಣವನಂದುಮಾಡಿದನು ॥ ೮ ॥ ಬಂದಭೂಪನ
ತಿಳಿದು ತಾನೈ । ತಂದು ಮನ್ನಿಸಿ ಸಕಲ ವಸ್ತುಗ । ಳಿಂದೆಸೆವ ಸೌಧ
ದೊಳಗಂದಿರಿಸಿದನು ಕರೆತರುತ ॥ ಅಂದು ಚರಣಂಗಳಿಗೆರಗಿ ದಳೀ ।
ಯಂದಿರನು ತನುಜೆಯರ ಮನ್ನಿಸಿ । ಚಂದದಿಂದಾಶೀರ್ವದಿಸಿದನು
ಜನಕ ಮೈದಡವಿ ॥ ೯ ॥ ಕಂಗಳಿಗೆಕಡು ಸಂತಸವೆನಲು । ಸಿಂಗರಿ
ಸುತಾ ಮಿಥಿಲೆಯನು ಘನ । ಮಂಗಳನಿನದ ಮೊದವೆಭೂವರ ನತಿ
ವಿಭವದಿಂದೆ ॥ ಕಂಗೊಳಿಪ ದೀಪಾವಳಿ ಮೊದಲೊ । ಳಂಗನೆಯರಿಂದಾ
ಗಿಸಿದ ನ । ಭ್ಯಂಗನ ಸ್ನಾನಗಳನಾ ದಂಪತಿಗಳೆಲ್ಲರಿಗೆ ॥ ೧೦ ॥ ಕ್ಷಿತಿಪತಿ
ಜನಕನಾ ದಶರಥನ । ಸುತರು ನಾಲ್ವರ ನವರವರ್ಗಳ । ಸತಿಯರಸಹಿತ
ರತ್ನಪೀಠಂಗಳೊಳು ಕುಳ್ಳಿರಿಸಿ ॥ ಪ್ರತಿದಿನಂಗಳೊಳೆರಡುವೇಳೆಯೊ ।
ಳತಿ ವಿಭವದಿಂದಾಗಿಸಿದನು ವ । ನಿತೆಯರಿಂದುರಟಣೆಗಳನು ಬಹು

ವಿಧವಿನೋದದಲಿ ॥ ೧೧ ॥ ನೆರೆದ ಬಾಂಧವರೊಡನೆ ಮನ್ನಿಸಿ । ಧರಣಿ
ಪಾಲಕ ದಶರಥನನಾ । ದರಿಸುತ ಸಕಲ ರಾಜಮರ್ಯಾದೆಗಳಲಾ
ಜನಕ ॥ ಎರಡುವೇಳೆಗಳೊಳು ಬಗೆಬಗೆಯ । ತರತರದ ವಸ್ತು
ಚಯದಿಂದುಪ । ಚರಿಸಿ ಭೋಜನಗಳನು ತಾಂ ಮಾಡಿಸಿದ ನೆಂಟದಿನ
॥ ೧೨ ॥ ಕೂಡಿಸಿ ಹಸೆಯೊಳಾರತಿಗಳನು । ಮಾಡಿಸುತ್ತಳಿ ಯಂದಿರುಗ
ಳಿಗೆ । ನಾಡೆಸವೆದಿತ್ತ ನಗಣಿತರತ್ನಾಭರಣಗಳನು ॥ ಜೋಡಿ ಶಾಲುಗಳ
ನ್ನು ಮೇಣಾತ್ರಂ । ಮಾಡಿಸಿದ ಪೀತಾಂಬರಗಳನು । ಮೂಡಿದಾನಂದದೊ
ಳಗಾ ಬಲಿಪಾಡ್ಯವಿಯದಿನದೆ ॥ ೧೩ ॥ ಪ್ರೊಢಪಾಲಕ ಜನಕನಿತ್ತ
ನು । ಪ್ರೊಢವಿಯಾತ್ಮಜೆ ಯೂರ್ಮಿಳೆಯರಿಗೆ । ಕಡುವಿಭವದೊಳು ಮಾಂಡ
ವೀ ಶ್ರುತಕೀರ್ತಿಯರಿಗೊಲಿದು ॥ ಇಡಿದರನ್ನಗಳಂದೆ ಕಂಗೊಳೆ ।
ಪ್ರೊಢವೆಗಳ ನಾಸರಿಗೆಯಿಂದುರೆ । ಬೆಡಗನ್ಯೈದಿದ ವಿಮಲ ಚೀನಾಂಬರ
ವಿತಾನವನು ॥ ೧೪ ॥ ಸಕಲ ಮಾನವರಿಗವರ ವರದು । ನಕತಿಸಂತಸ
ಮುಪ್ಪವೆಂದದೊ । ಳು ಕಡುವೈಭವದಿಂದೆ ಕೊಟ್ಟನುಡಿಗೆತೊಡಿಗೆಗಳ
ನು ॥ ಸಕಲ ರಾಜ್ಞಿಯರಿಗುಡುಗರೆಗಳ । ನು ಕಲೆವೆತ್ತ ರತುನದೊಡ
ವೆಗಳ । ನು ಕೊಡಿಸಿದನಾ ಸತಿಸುಮೇಧೆಯು ಕೈಯೊಳಾಜನಕ ॥ ೧೫ ॥
ಮತ್ತೆ ದಶರಥಭೂಪತ್ರಿಯು ನ । ತ್ಯುತ್ತಮದ ರಾಜೋಪಚಾರದೊ ।
ಳೆತ್ತಲುಂ ಸಂತವಿದಣಿಸಿದ ನೌತಣಂಗಳಲಿ ॥ ಇತ್ತಖಿಳ ರತ್ನಾ
ಭರಣಗಳ । ನುತ್ತಮೋತ್ತಮದ ವಸನಂಗಳ । ನತ್ತ ಯೋಧ್ಯೆಗೆ
ಪಯಣವನು ಮಾಡಿಸಿದನಾಜನಕ ॥ ೧೬ ॥ ಜನಕನಿಂದೈದೆ ಪಡೆದ
ಪ್ಪಣೆ । ಯನು ದಶರಥಮಹೀವರನು ತ । ನ್ನ ನಗರಮಿನಿಪಯೋಧ್ಯೆಗೆ
ಪಯಣಮಾಡಿದನುಕೂಡೆ ॥ ಜನಸಮೂಹದೊಳೈತರುತ ರಥ । ಪನಡರಿ
ದನಾ ರಾಜತೇಜದೊ । ಳು ನಿಜಶಿಬಿಕೆಗಳ ನಡರಿದರಾನೃಪನ ರಾಣಿಯರು
॥ ೧೭ ॥ ಜನಕ ನಳಿಯಂದಿರುಗಳೆಲ್ಲರೊ । ಡನೆ ಮಹೀಸುತೆ ಸೀತೆ
ಮೊದಲಹ । ತನುಜೆಯರು ನಾಲ್ವರ ನಯೋಧ್ಯೆಗೆ ಕಳುಹುತ ಪಥ
ದೊಳು ॥ ವಿನುತ ನೀತಿಗಳ ನುಪದೇಶಿಸಿ । ಘನರಥಂಗಳ ನೇರಿಸುತ್ತ
ವ । ರನು ಕಳುಹಿದನು ರಾಜತೇಜದೊಳಾ ಮಿಥಿಲೆಯಿಂದ ॥ ೧೮ ॥
ಎಲ್ಲಜನರಿಂ ನಡೆತರುತ್ತ । ಲ್ಲಲ್ಲಿನಿಲ್ಲುತ ನಾಲ್ಕನೆಯದಿನ । ದಲ್ಲಿ ಸೇರಿದನಾ
ದಶರಥನ ಯೊಧ್ಯೇಯನು ಬಳಿಕ ॥ ಸಲ್ಲಲಿತ ನುಡಿಯಿಂದೆ ಮನ್ನಿಸು ।
ತೆಲ್ಲರನು ಕಳುಹುತ್ತ ಮನೆಗಳ । ಗುಲ್ಲಸದೊಳೈದಿದನು ನಿಜಸುತರಿಂದೆ
ಮಂದಿರವ ॥ ೧೯ ॥ ಭೂತಳಾಧಿಪ ದಶರಥನನಾ । ಸೀತೆ ಸೇವಿಪಳು

ಹಿತನಂದದೆ । ಮಾತೆಯಂತುಪಚರಿಸಳತ್ತೆಯರನತಿ ಭಕ್ತಿಯುಲಿ ॥ ಪ್ರೀತಿಸುವಳೆಲ್ಲಜನರನು ತಾ । ನಾತುರದೆ ಪೇಳುವಳು ಶಾಸ್ತ್ರದ । ನೀತಿಗಳ ನಾಸಖಿಯರಿಗೆ ಸಂತಸದೊಳುಪಚರಿಸಿ ॥ ೨೦ ॥ ಇರುತಿರಲು ಮೇದಿನಿಯಣುಗಿ ಸಖಿ । ಯರಸಹಿತಲೀತೆರದೆ ಮಂಗಳ । ಕರಮೆನಿಸಿಪ ಶುಭದಿನ ದುದಯಕಾಲದಸುಲಗ್ನದೊಳು ॥ ಅರಸಿಯರಿಗಾನಂದ ಮೊದಗು । ತ್ತಿರೆ ಮೊದಲು ಪುಷ್ಪವತಿಯಾದಳು । ಮೆರೆವ ದಶರಥಸಾರ್ವಭೌಮನ ರಾಜಭವನದಲಿ ॥ ೨೧ ॥ ವಿತತವೈಭವದಿಂದೆ ಧರಿಣೀ । ಸುತೆಗೆಮಾಡಿಸುತಾರತ್ರಿಗಳನು । ಸತಿಯರಿಂ ಹದಿನಾರುದಿನಗಳವರೆಗೆ ಸಂತಸದಿ ॥ ಕ್ಷಿತಿಪತಿ ವಿದೇಹನನು ಕರೆಯಿಸಿ । ಸತಿಸುಮೇಧೆಯು ಸಹಿತಲಾ ದಶ । ರಥನಯೋಧ್ಯೆಗೆ ಮುನಿಪನಿಂದಿರಿಸಿದನು ಲಗ್ನವನು ॥ ೨೨ ॥ ಮುನಿವಸಿಷ್ಠನು ಬಳಿಕ ಶುಭಕರ । ಮೆನಿಪ ದಿನದೊಳು ಕೂಡಿಸುತ್ತರಾ । ಮನನು ಮಣಿಮಯಭದ್ರಪೀಠದೊಳವನಿಸುತೆ ಸಹಿತ ॥ ಜನಸಮೂಹದೊಳಾಗಮವಿಧಿಯೊ । ಳುನಡಿಸಿದನಾ ಶಾಂತಿಕೃತ್ಯಗ । ಳನು ಕೊಡಿಸುತವನೀಸುರರಿಗೆ ಸಮಸ್ತ ದಾನಗಳ ॥ ೨೩ ॥ ಆದಿನದ ಶುಭಲಗ್ನದಿರುಳೊಳ । ಗೈದೆ ಶೃಂಗಾರಗಳ ತಳೆದಾ । ಮೇದಿನೀಸುತೆರಾಮರನು ಕೂಡಿಸುತ ಪೀಠದಲಿ ॥ ವೇದವಿಧಿಯೊಳು ಮುನಿಪ ಫಲಪೂ । ಜಾದಿಗಳನಾದಂಪತಿಗಳಿಂ । ದಾದರದೆಮಾಡಿಸುತ ಗರ್ಭಾಧಾನವಾಗಿಸಿದ ॥ ೨೪ ॥ ಪಲತೆರದ ವೈಭವಗಳನು ತಾ । ನೊಲಿದು ನೋಡುತ ನಿಜಸತಿಸಹಿತ । ಕೆಲವುದಿನಗಳಿರುತ್ತ ಯೋಧ್ಯಾಪುರದೊಳಾಜನಕ ॥ ಇಳೆಯುಮಗಳನು ಸಂತವಿಸುತ ಮಿ । ಥಿಳೆಗೆ ಬಂದನು ಬಂಧುಗಳೊಡನೆ । ತಳೆದು ದಶರಥನಿಂದಖಿಳ ಮರ್ಯಾದೆಗಳನಿರದೆ ॥ ೨೫ ॥ ಪತಿಸಹಿತ ಬೇರರಮನೆಯೊಳತಿ । ಹಿತದೊಳಾಸೀತೆ ಪದೆದನುಭವಿ । ಸುತ ಸಕಲ ಸುಖಗಳನು ಸಂತಸದಿಂದಲನುದಿನವು ॥ ಪತಿಗೆ ಸಂತಸಗಳನು ತಾನೆಸ । ಗುತ ಕನಕ ಪುತ್ಥಳಿಯತೆರದೆ ಪೊ । ಸತಹ ಯವ್ವನದಿಂದೆ ಮೆರೆದಳು ಜನರಕಂಗಳಿಗೆ ॥ ೨೬ ॥ ರಾಜಹಂಸ ಗಮನೆವರದ್ವಿಜ । ರಾಜಮುಖಿವಿದ್ಯುಲ್ಲತಾಂಗಿ ಸ । ರೋಜದಳಘನ ನೇತ್ರೆ ಸಾವ್ಯವಿಲಾಸ ಸೌಂದರ್ಯೆ ॥ ರಾಜಿತ ಕಠೋರತರಘನ ವ । ಕ್ಷೋಜಯುಗಳೆ ಮೃಗೇಂದ್ರಮಧ್ಯೆ ವಿ । ರಾಜಿತ ಸುಬಿಂಬಾಧರೆ ವಿರಾಜಿಸಿದಳಾ ಸೀತೆ ॥ ೨೭ ॥ ನಡಿಗೆಯಿಂ ದಂಚೆಯನು ಮಂಜುಳ । ನುಡಿಗಳಿಂದರ ಗಿಳಿಯನಾಟಿಡ । ನಡುವಿನಿಂ ಕೇಸರಿಯ ಲೋಚನದಿಂದೆ ಕಮಲವನು ॥ ಕಡುಮೆರೆವ

ದನಾಳಿಯಿಂ ದಡಿ । ಗಡಿಗೆ ಪಳಯುತ ಕುಂದಕುಟ್ಮಲ । ಗಡಣವನು ಸಲೆರಂಜಿಸಿದಳಾ ಸೀತೆಸಂತತವು ॥ ೧೮ ॥ ಹೊಳೆವ ಚಂದ್ರಿಕೆಯಂತೆಸೆದೆ ಥಳ । ಥಳಿಸ ಕಿರುನಗೆ ಪಲ್ಲವದತೆರ । ದೊಳುರೆ ಶೋಭಿಸೆ ಚರಣಯುಗಳವು ತಿಲಕುಸುಮದಂತೆ ॥ ಕಳೆಯನಾಂತಿರೆ ನಾಸಕ್ಕೈಪಿಡಿ । ಪೊಲು ಮೆರೆದು ಕೆನ್ನೆಗಳು ಕರಿಕರ । ದೊಲುವಿರಾಜಿಸೆ ತೊಡೆಗಳಾಭರಣೀಸುತ ಮೆರೆದಳು ॥ ೧೯ ॥ ಕೊರಳಹಾರದ ಕರ್ಣಪೂರದ । ಕರಗಳೊಳೆಸೆವ ಕಂಕಣಂಗಳ । ಚರಣದಂದುಗೆ ಗಳಕಟಿಯೊಳೊಪ್ಪುತಿಪ ಮೇಖಲೆಯು ॥ ಶಿರದ ರತ್ನಾಭರಣಗಳ ಘನ । ತರದಲಂಕೃತಿ ಜೆಡಗಿನಿಂದುರೆ । ಮೆರೆದಳು ಸಕಲ ಲೋಕಮಾತೆ ವಿನೀತೆಯಾಸೀತೆ ॥ ೨೦ ॥ ಕುರುಳುಕಾರ್ಮುಗಿಲಂತೆಸೆಯುತಿರೆ । ತುರುಬಿನೊಳುತಾಂ ಮುಡಿದ ಮಲ್ಲಿಗೆ । ಯರಳುಗಳು ತಾರಗೆಯ ಪೋಲ್ಮೆರೆಯೆ ಕಡೆಗಣ್ಣುಗಳ ॥ ಮೆರೆವ ಕಾಂತಿತ ಟಿಲ್ಲತೆಯ ಪೋ । ಲಿರೆಸುರಿವ ಬೆಮರಾಮಳೆಹನಿಯು । ತೆರದೊಳಾಗಲು ವರ್ಷಋತುವಿನೊಲೆಸೆದಳಾ ಸೀತೆ ॥ ೨೧ ॥ ಮಳೆಯನೀರಿಂ ತಣಿದಚಾತಕ । ಬಳಗದಂತಾ ಪುಷ್ಪರಸವೆನು । ನಲಿದು ಪೀರ್ದಳಿಗಡಣ ದಂದದೊಳಾ ಘನರಸವನು ॥ ನೆಲದೆ ಕುಡಿದೆಸೆವಾ ಮಹೀರುಹ । ಗಳನಿಕರದಂತವನಿಜೆಯು ಕೋ । ಮಲತರಾಧರ ಪಾನದಿಂದುರೆನಲಿದನಾರಾಮ ॥ ೨೨ ॥ ಕಮಲಲೋಚನೆ ಕಮಲಸನ್ಮುಖಿ । ಕಮಲಪಾಣಿಯು ಕಮಲಪದಯುಗೆ । ಕಮಲಗಂಧಿನಿ ಕಮಲಮಂದಿರೆ ಕಮಲೆತಾನೆನಲು ॥ ಕಮಲವಾಸಿನಿ ಸೀತೆ ಸತತವು । ಕಮಲನೇತ್ರನ ಕಣ್ಗೆ ಮೆರೆದಳು । ಕಮಲಮಯಪುತ್ಥಳಿಯು ತಾನೆಂಬಂತೆ ಕಳಕಳಿಸಿ ॥ ೨೩ ॥ ಪತಿಯುಚಿತ್ತಕೆ ಮುದವನೀಯುತ್ತತಿಶಯಾಲಂಕಾರದಿಂದುರೆ । ರತಿಸುಖವನಾಗಿಸುತ ರಾಮನನೊಲಿಸಿದಳು ಸೀತೆ ॥ ಕತಿಪಯಪತಿವ್ರತೆಯರಾ ಸುಚ । ರಿತೆಗಳನು ಪೇಳುತ ಸಖೀಜನ । ಕತಿಶಯಮೆನಿಪ ಕುತುಕವನು ನೀಡುತ್ತೆಸೆದಳಲ್ಲಿ ॥ ೨೪ ॥ ತಳೆದಮುತ್ತಿನ ಹಾರಮದುನೆರೆ । ಬಳೆದ ಕುಚಮಂಡಲದೊಳುರೆಕಂ । ಗೊಳಿಸೆ ಕಲಶಂಗಳಗಿರಿಸಿದಾ ಕುಸುಮಮಾಲೆಯೊಲು ॥ ಹೊಳೆವ ಕಸ್ತೂರಿ ತಿಲಕ ಮಾಮುಖ । ದೊಳೆಸೆಯುತ್ತಿರೆ ಚಂದ್ರಮಂಡಲ । ದೊಳಹ ಹರಿಣದ ರೀತಿಯೊಲು ಕಣ್ಗೆಸೆದಳಾಸೀತೆ ॥ ೨೫ ॥ ರದನಪಙ್ಕ್ತಿಯು ಕುಂದಕುಸುಮ ಸ । ಮುದಯದಂತುರೆಮೆರೆಯೆ ನಾಸಿಕ । ಮುದೆಸೆವಾ ಚಾಪಕದೊಲಿರೆನಯನಂಗಳೊಪ್ಪುತಿಪ ॥

ಸದಮಲಕುಶೇಶಯಯುಗಳಂತಿರೆ । ವದನವಾಪಂಕಜದವೊಲೆಸೆಯೆ । ಸುದತಿ ಕುಸುಮಾಕರದ ಬನದಂತೆಸೆದಳಾಸೀತೆ ॥ ೩೬ ॥ ಚಾರುಹಾಸದ ಚಾರುನಯನದ । ಚಾರುರದನದ ಚಾರುಗಮನದ । ಚಾರುತರಪೀನಘನ ವಕ್ಷೋಜಯುಗ ವೈಖರಿಯ ॥ ಚಾರುವೇಣಿಯ ಚಾರುವಾಣಿಯ । ಚಾರುಪಾಣಿಯ ಚಾರುದೃಷ್ಟಿಯ । ಚಾರುಬಿಂಬಾಧರದ ಜಾನಕಿ ಮೆರೆದಳಾಪುರದಿ ॥ ೩೭ ॥ ಸುಂದರೀಮಣಿ ಸೀತೆ ಪತಿಯನು । ಬಂಧುರತರದಲಂಕೃತಿಯೊಳಾ । ನಂದವಡಿಸುತ ಹೊಂದಿದಳು ದಿನದಿನದೆ ರತಿಸುಖವ ॥ ಇಂದಿರನೊಡನೆ ಶಚಿಯು ಸೌಖ್ಯವ । ನೊಂದುವಂದದೆ ಪತಿಸಹಿತ ಸುಖ । ದಿಂದೆ ಕಳೆದಳು ಹನ್ನೆರಡು ಯಬುದಗಳನೀತೆರದೆ ॥ ೩೮ ॥ ಅತಿಥಿಯಭ್ಯಾಗತರನುರೆದಣಿ । ಸುತ ಬಡವರನು ಸಂತಸಂಗೊಳಿ । ಸುತನುದಿನದೊಳಗಾ ಕುರುಡ ಕುಂಟರನುದಣಿಸುತ್ತ ॥ ಪತಿಪರಾಯಣರೆಂದೆನಿಸಿದ ವ । ನಿತೆಯರ ಕಥಾವಳಿಗಳೆಲ್ಲವ । ನು ತಿಳಿಸುತ ಖಿಳ ಮಾನಿನಿಯರಿಗೆ ಮೆರೆವಳಾಸೀತೆ ॥ ೩೯ ॥ ಪುರದ ನಾರಿಯರೆಲ್ಲರನು ತಾ । ಬರಿಸಿ ತೃಪ್ತಿಯ ನೈದಿಸುವಳಾ । ಪರಿಮಳದ ವಸ್ತು ಚಯದಿಂದಡಿಗಡಿಗೆ ತಾನೊಲಿದು ॥ ತರತರದ ಸೀರೆ ಕುಬಸಂಗಳ । ನಿರದೆ ಕೊಟ್ಟು ಸುಭೋಜನಗಳಿಂ । ದುರೆದಣಿಸುತಾನಂದವನು ಮಾಡಿದಳು ಭೂಮಿಸುತೆ ॥ ೪೦ ॥ ಬಳಿಕ ರಾಮನಿಗೀ ಮಹೀಮಂ । ಡಲದೊಡೆತನವ ನೀಯಬೇಕೆಂ । ದಿಳೆಯೊಡೆಯನಾದಶರಥನು ಚಿತ್ತದೊಳು ತಾನೆಣಿಸಿ ॥ ಹೊಳೆಹೊಳೆವತೆರದಿಂದೆ ನಿಜಪುರ । ದೊಳತಿ ಶೃಂಗಾರವನು ಮಾಡಿಸು । ತೊಲಿದು ಲಗ್ನವನಿರಿಸಿದನು ಪಟ್ಟಾಭಿಷೇಕಕ್ಕೆ ॥ ೪೧ ॥ ನಾಳೆ ಪಟ್ಟವ ನಿನಗೆಕಟ್ಟುವೆ । ಕೇಳು ರಾಘವ ಸತಿಸಹಿತ ಮುನಿ । ಪಾಲ ನಪ್ಪಣೆಯಂತೆ ನೀನುಪವಾಸವನುಮಾಡಿ ॥ ಮೇಲೆನಿಸುವೀದಿನದೊಳಾವನ । ಮಾಲಿಯನು ಪೂಜಿಸುತ ಭೂಸುರ । ಜಾಲವನು ಸಂತುಷ್ಟಿವಡಿಸೆಂದೊರೆದನವನಿಪತಿ ॥ ೪೨ ॥

ಇಂತು ಏಳನೆಯ ಅಧ್ಯಾಯ ಸಂಪೂರ್ಣವು. ಪದ್ಯಗಳು ೩೩೦.

ಎಂಟನೆಯ ಅಧ್ಯಾಯ.

ಸೂಚನೆ ॥ ಅಡವಿಗೈತಪೆನೆಂದು ಬೇಡುವ ।
ಪೊಡವಿಯೊಡೆಯನಿಗಿಯ ನಾರಘುವರನು ।
ತಡೆಯುಲೊಪ್ಪಿಸಿದಳವನೀಸುತೆ ಪಲತೆರದೆಪತಿಯ ॥

ದಶರಥನು ಪಟ್ಟಾಭಿಷೇಕದ । ಪ್ರಸತೆನಿಪಸುದ್ದಿಯನು ಕೈಕೆಗ । ತಿ ಸಡಗರದಿಂಪರುಹಬೇಕೆಂದೆನುತ ಲೈತರಲು ॥ ಬಸವಳಿದು ರೋಷಾತಿಶಯದಿಂ । ದುಸುರದಿಹ ಸತಿಯನ್ನು ಕಾಣುತ । ವಸುಮತೀಶನು ಬೆರಳವುಗಿನೊಳಂದುಬೆರಗಾದ ॥ ೧ ॥ ಏನಿದೀ ಮನದಾಯಸವೆನುತ । ಮಾನಿನಿಯನಾನೃಪತಿ ಕೇಳಲು । ಮಾನವಾಧಿಪ ಕೇಳು ಮನದಣಿಕೆಯನು ತಪ್ಪಿಸದೆ ॥ ನೀನು ನೆರವೇರಿಸುವೆನೆನುತನು । ಮೌನವಿಲ್ಲದೆ ನುಡಿವೊಡೆ ಬಳಿಕ । ನಾನು ಪೇಳುವೆ ನನ್ನಭೀಷ್ಟವನೆಂದಳಾ ಕೈಕೆ ॥ ೨ ॥ ಏನ ಕೇಳಿವೊಡೀವೆನಿನಗಾ । ನೇನ ಪೇಳ್ದೊಡವುಗಳ ಮಾಳ್ಪೆನು । ಮಾನಿನೀಮಣಿ ರಾಮನಾಣೆಯು ನಿಜವೆನುತ ನಂಬು ॥ ನೀನು ಸಂತೋಷವನುತಾಳ್ದನು । ಮಾನಿಸದೆ ಪೇಳೆಂದು ಕೈಕೆಗ । ಧೀನನಾಗುತ ಬೇಡಿವನು ದಶರಥನು ತಲೆದಡವಿ ॥ ೩ ॥ ದೇವಚಿತ್ತ್ರಸಂದೆನಗೆನೀಂ । ದೇವದಾನವ ಕವನದೊಳಗಿ । ತ್ತಾವರಂಗಳ ಬೇಡುವೆನು ಪದಕೆರಗಿ ವಿನಯದಲಿ ॥ ನೀವು ಭರತಂಗಿಂದೊಡೆತನವ, ನೀವುದೊಂದರ ಲೊಂದರಲಿ ರಘು । ಭೂವರನ ಕಳುಹುವುದು ಹದಿನಾಲ್ಕುಬುದವನಕೆನುತ ॥ ೪ ॥ ಆ ನುಡಿಯನಾಲಿಸುತ ಬಿದ್ದನು । ಭಾನುಕುಲಮಣಿ ದಶರಥನು ತಾ । ನಾನೆಲಕೆ ಛೇದಿಸಿದ ಮರವಿಳಿಗುರುಳುವಂದದಲಿ ॥ ಜ್ಞಾನವಿಲ್ಲದೆ ಮೂರ್ಛೆಯಿಂದಿರೆ । ಮಾನವಾಧಿಪನಾ ಸುಮಂತ್ರನು । ತಾನು ಬಂದನು ಕಾಣಬೇಕೆನುತಾ ದಶರಥನನು ॥ ೫ ॥ ರಾಜರ್ಷಿ ತಂದಿಹರು ಶಿಷ್ಯ ಸ । ಮಾಜಸಹಿತ ವಸಿಷ್ಠಮುನಿನಿಜ । ರಾಜ ಮಂದಿರದ ಬಳಿಗೈತಂದಿಹನು ಹರ್ಷದಲಿ । ರಾಜರಾಜನೆ ದಶರಥೇಂದ್ರನೆ । ರಾಜನಾಗಲು ರಾಮನನು ನೀ । ಮೀ ಜಗಕೆ ಪಟ್ಟಾಭಿಷೇಕವ ಮಾಡೆನುತ ನುಡಿದ ॥ ೬ ॥ ಉತ್ತರವ ದಶರಥನು ಕೊಡದತಿ । ಚಿತ್ತ್ರದ ದುಃಖವನು ತಾಂ ತಳೆ । ದತ್ತ ಮೂರ್ಛೆಯೊಳಿರೆಸುಮಂತ್ರಗೆ ನುಡಿದಳಾಕೈಕೆ ॥ ಇತ್ತ ನಿದ್ದೆಯೊಳಿರ್ಪನವನಿಪ । ಹೊತ್ತು ಮಾಡದೆ ಬರಿಸು ರಾಮನ । ನುತ್ತಮದ ಕಾರ್ಯವಿಹುದೆಂದೆನುತವನ ಕಳುಹಿದಳು ॥ ೭ ॥ ರಾಮನರಮನೆಗಾ ಸುಮಂತ್ರನು । ತಾಮಸವ ನುಳಿದೈದಿ ತಿಳಿ

ಸುತ । ನೇಮವನು ಕರೆತಂದನಾ ಕೈಕಯರಮನೆಗಾಗಿ ॥ ಪ್ರೇಮದಿಂದಾ ದಶರಥನ ಪದ । ತಾಮರಸ ಯುಗಕಂದು ನಮಿಸುತ । ರಾಮನೆಂದನು ಪಿತನೆನೇಮವದೇನು ನನಗೆನುತ ॥ ೮ ॥ ಮನುಜಪಾಲಕ ನುಡಿಯಲಾರದೆ । ಮನದ ದುಃಖಾತಿಶಯದಿಂದಾ । ತನಯನನು ನಯನೋದಕವಲೀಕ್ಷಿಸದೆ ತಾನಿರಲು ॥ ಅನುನಯದೊಳಾ ಕೈಕೆ ನುಡಿದಳು । ತನಯನೆ ಪಿತನಭೀಷ್ಟವೊಂದಿಹು । ದು ನಿನಗದನೀ ಭೂವರನರುಪಲಂಜುತಿಹನೆನುತ ॥ ೯ ॥ ವಾತನೀಂನುಡಿ ಪಿತನಭೀಷ್ಟವ । ನೀತ ನಪ್ಪಣೆಯಂತೆ ನಡೆವೆನು । ವೀತಿಹೋತ್ರನೊಳಂದು ಪೀಳುವೆ ಕುಡಿವೆ ಗರಳವನು ॥ ನಾ ತಳುವದಬ್ಧಿಯೊಳುರುಳುವೆನು । ತಾತನಿಷ್ಟವ ನುಡಿಯುದನು ಸಂ । ಪ್ರೀತಿಯಿಂದಲೆ ಮಾಳ್ಪೆನೆನ್ನುತ ನುಡಿದನಾರಾಮ ॥ ೧೦ ॥ ಅವನಿಪತಿ ತನಗೆರಡು ವರಗಳ । ದಿವಿಷದಾಸುರಯುದ್ಧದಲಿ ತಾಂ । ತವಕದಲಿ ಕೊಟ್ಟಿಹನು ನಾನವನರ್ಥಿಸಿದೆನೀಗ ॥ ಅವನಿಯೊಡೆತನ ಭರತಗೀವುದು । ಜವದೆ ಬನಕಟ್ಟುವುದು ಹದಿನಾ । ಲ್ಕುವರುಸಂ ರಾಮನನೆನುತ್ತಲೆ ಬೇಡಿದೆನು ಕೇಳ್ಳೈ ॥ ೧೧ ॥ ನಿನಗೆ ತಾನೀ ಸಂಗತಿಯನಿಂ । ದು ನುಡಿಯಲು ಭೂವರನು ಚಿಂತಿಸು । ವನು ಪಿತನನೇಮವನು ಸಲಿಪ್ಪುದೆಸುತನಕರ್ತವ್ಯ ॥ ಎನುತ ಕೈಕೆಯುಪೇಳಲು ದಶರ । ಥನು ತಳೆದು ಮೂರ್ಛೆಯನು ಬಿದ್ದನ । ವನಿಯೊಳು ಬಳಿಕ ರಾಮನುಪಚರಿಸುತ್ತಲಿಂತೆಂದ ॥ ೧೨ ॥ ದಶರಥನು ಚೇತರಿಸಿಕೊಳ್ಳುತ । ಬಸವಳಿದು ದುಃಖಾತಿರೇಕದೊ । ಳುಸುರದೀಕ್ಷಿಸಿಸುತನ ಬಿಸುಸುಯ್ದಳುತ ತಪಿಸುತಿರೆ ॥ ಬಸಗೆಯೊಳು ಪಟ್ಟಾಭಿಷೇಕವ । ನೆಸಗುವುದು ಭರತಂಗೆನಾಂ ಚಿ । ತಿಸದೆ ಪೋಪೆನು ವಿಪಿನಕೆನ್ನುತ ನುಡಿದನಾರಾಮ ॥ ೧೩ ॥ ವನಕೆ ಪೋಗುವೆನೆಂದೆನುತ್ತ ಪಿ । ತನನೊಡಂಬಡಿಸುತ್ತ ಬಂದು ಜ । ನನಿಯ ಮಂದಿರಕೆರಗಿ ಪಿತನಾಜ್ಞೆಯೊಳು ನಾನಿಂದು ॥ ಮುನಿಗಳಂದದೆ ವಲ್ಕಲಜಟೆಗ । ಳನು ಧರಿಸಿಪದಿನಾಲ್ಕುಬುದಗಳ । ತನಕ ಪೋಗುವೆವಿಪನಕೆನ್ನುತ ನುಡಿದನಾರಾಮ ॥ ೧೪ ॥ ಸುತನ ಮಾತನುಕೇಳ್ದು ಬಿದ್ದಳು । ವಿತತದುಃಖೋದ್ರೇಕದಿಂದವ । ನಿತಲದೊಳು ಕೌಸಲ್ಯೆರಾಮನುಪಚರಿಸುತ ಕೂಡೆ ॥ ಶ್ರುತಿವಚನದಿಂದಾಕೆಯನು ಸಂ । ಮತಿಸಿ ತಳೆದಾಶೀರ್ವಚನಗಳ । ನತಿಭರದೊಳೈತಂದನಾತನ ಮನೆಗೆ ತಲೆವಾಗಿ ॥ ೧೫ ॥ ಪತಿಪರಾಯಣೆ ಸೀತೆನೋಡಿಕ । ಡುತವಕದೊಳೆದ್ದಿದಿರು ವಂದಾ । ಪತಿಗೆ ನಮಿಸುತ ಕಾಂತಿಯಿಲ್ಲದ ಮುಖವನೀಕ್ಷಿಸುತ । ಪತಿಯೊಳೀ

ಳೀದಿನವು ಬಾರ್ದ । ಸ್ವತದ ಪುಷ್ಯವಿಶಾರೆಯಿಂದೆ ಬೆ । ರೆತ್ತಿಹುದೆನ್ನುವ
ದೇಕೆ ಚಿತ್ತ್ರವು ಕೆಟ್ಟಿಹುದು ನಿನಗೆ ॥ ೧೬ ॥ ಶತ ಸಲಾಕೆಗಳಿಂದೆ ಕಾಗೋಳಿ ।
ಸುತ್ತಿರ ಬಿಗು ಗೊಡೆಯಿಂದೆಸೆವುದಿ । ಲ್ಲ ತವಮುಖಪಂಕೇರುಹವು ತಾ
ನೇಕೆಕಳೆಗುಂದಿ । ಸತತನಾಳಶಿಖಂಸಗಳ ಪೋ । ಲತಿ ಬಿಳುಪನಾಂತ ಚಕ
ಮರಂಗಳ । ನುತಗದೇತಕೆ ಬೀಸದಿರುವರು ಮುಖಸರೋಜದೊಳು
॥ ೧೭ ॥ ಸೂತಮಾಗಧವಂದಿವಾಗ್ಮಿಗ । ಳೇತಕೀದಿನಪಡೆದು ಸಂತೋ । ಷಾ
ತಿಶಯಪನು ಮಂಗಳಸ್ತೋತ್ರಗಳನಾಗಿಸುತ ॥ ಪ್ರೀತಿಯಿಂದೈತಂದು
ಕಾಣಿಸ । ರೇತಕೀಸರಿ ಮನವೆಚಿಂತಿಸಿ । ಕಾ ತರಿಸುತೆಲ್ಲರಿಗೆ ದುಃಖವನಾ
ಗಿಸುವೆನೀನು ॥ ೧೮ ॥ ವೇದಪಾರಂಗತರೆನಿಸಿದಾ । ಭೂದಿವಿಜರೊಡಗೂಡಿ
ಭರದಿಂ । ದೀದಿನದೊಳಭಿಷೇಕವ ನೆಸಗಿ ನಿನ್ನ ಮೂರ್ಧದೊಳು ॥
ವೇದಮಂತ್ರವ ನುಚ್ಚರಿಸುತ । ತ್ಯಾವರದೊಳು ಕ್ಷೌದ್ರದಧಿಗಳ ।
ನೈದೆ ಸಿಂಗರಿಸದಿಹರೇತಕೆ ಪೇಳುನನಗೀಗ ॥ ೧೯ ॥ ಅರರೆ ಚಿತ್ರವಿದಿ
ತರದೇಶದ । ನರರಯೋಧ್ಯಾಪಟ್ಟಣದ ಮನು । ಜರಿತರಮಹೀಪಾಲ
ಕರು ಘನಸಂತಸವನಾಂತು । ತರತರದಲಂಕಾರಗಳನಾ । ದರದೊಳಾ
ಗಿಸಿ ಶ್ರೇಣಿಮುಖ್ಯರ । ನರವಿಯಿಂದೀ ಕೈತರದಿಹರು ನಿನ್ನ ಬಳಸು
ತ್ತ ॥ ೨೦ ॥ ಇಂದು ಕನಕಾಭರಣಸಂಚಯ । ದಿಂದಲಂಕೃತಿವೆತ್ತು
ಕಡುಜವ । ದಿಂದೆ ಪೋಗುವ ನಾಲ್ಕು ಕುದುರೆಗಳನ್ನು ತಾತಳೆದು ॥
ಸುಂದರ ಪತಾಕೆಗಳ ಸಮುದಯ । ದಿಂದೆಸೆವ ರಥಮೇಕೆನಿನ್ನಯ ।
ಮುಂದೆ ಬಾರದಿರುವುದು ಪೇಳೆಂದೆನುತ ಕೇಳಿದಳು ॥ ೨೧ ॥ ಪಡೆದು
ಪೂಜೆಯ ಸಿಂದುನಿನ್ನಯ । ಬೆಡಗಿನಿಂದಾರಾಜಿಸುತ್ತಿಹ । ಕಡುಪಿರಿದೆ
ನಿಪ ಮುಗಿಲುಬೆಟ್ಟಗಳ ಪ್ರಭೆಯನಾಂತು ॥ ಉಡಿಗೆತೊಡಿಗೆಗಳಿಂದೆ
ರಂಜಿಸು । ತಡಿಗಡಿಗೆ ಮುಂಗಡೆಯೊಳೇತಕೆ । ನಡೆತರದಿಹುದು ಪಟ್ಟ
ದಾನೆಯೆನುತ್ತ ಕೇಳಿದಳು ॥ ೨೨ ॥ ಕನಕ ಚಿತ್ರಗಳಿಂದೆರಂಜಿಪ ।
ವಿನುತವೀರಪುರಸ್ಸರವೆನಿಪ । ಘನಸುಭದ್ರಾಸನವದೇತಕೆ ಬಾರದಿಹು
ದೀಗ ॥ ಮನುಜಪತಿ ಪಟ್ಟಾಭಿಷೇಕವ । ನಿನಗೆ ಮಾಡಿಸುತಿರಲು
ನಿನ್ನವ । ದನವು ಕಳೆಗುಂದಿಹುದು ಪೇಳೇತಕೆನುತನುಡಿದಳು ॥ ೨೩ ॥
ಕೇಳುತೀನೆಲೆ ಸೀತೆಶಿರದೊಳು । ತಾಳುತ ಪಿತನನೇಮವನು ನಾಂ । ಪಾ
ಲಿಸದೆ ಭೂಮಿಯನು ಹದಿನಾಲ್ಕು ಬುದಪರಿಯಂತ ॥ ಮೇಲಹ ಸುಖಂ
ಗಳನುಳಿದು ಮುನಿ । ಪಾಲರಂದದೆ ವನಕೆ ಪೋಗುವೆ । ನಾಲಿಸುವುದೆಂದೆ
ನುತ ಪೇಳ್ದನು ಸೀತೆಗಾರಾಮ ॥ ೨೪ ॥ ಪಿತನು ಕೊಟ್ಟಿಹನೆರಡು

ಮಗಳ । ನತಿಹಿತದೊಳಾ ಕೈಕೆಗೊಂದರ । ಲಿ ತನಯಂಗರಸುತನ
ವನು ಮತ್ತೊಂದರಲಿ ನನಗೆ ॥ ಕೃತಕಮತಿಯಿಂ ವನದವಾಸವ ।
ನು ತರುಣೀಮಣಿಕೇಳಿದಳವನಿ । ಪತಿಯುಸದರಿಂ ವನಕೆ ಪೋಪ್ಪುದೆನುತ್ತ
ಪಿತನೆಂದ ॥ ೨೫ ॥ ವನಿತೆಕೇಳಾಂ ಪೋಗಿಬರುವೆನು । ವನಕೆ ಹದಿ
ನಾಲ್ಕುಬುದ ಮುಂದಿನ । ತನಕ ನೀನಿಹುದಿಲ್ಲಿ ದಶರಥನತ್ರಿಳಿ ಪಿತನಂತೆ ॥
ಜನನಿಯಂದದೆ ಸೇವಿಸತ್ತೆಯು । ರನಿಬರನು ಭರತಂಗೆನೀನಿದಿ । ರುನು
ಡಿಯದಿರಾತನಿದಿರಿನೊಳಗೆ ನನ್ನ ಪೊಗಳದಿರು ॥ ೨೬ ॥ ಭರತಶತ್ರುಘ್ನ
ರನು ತ್ರಿಳಿ ತನು । ಜರ ಪೊಲಾವಗವಿಪ್ರರದ ಮನು । ಜರನು ತೋಷಿಸು
ರಚಿಸು ದೇವಾರ್ಚನೆಗಳನನುದಿನ ॥ ಭರತನಧಿರಾಜನೆನಿಸುವ ನೀ ।
ಧರಣಿಗದರಿಂದಾತನಿಗೆಸಗ । ದಿರ ಸಮಾಧಾನವನು ನೀನೆಲೆಕಾಂತೆ
ಕೇಳೆಂದ ॥ ೨೭ ॥ ಕಾನನಕೆನಾಂ ಪೋಗಿಬರುವೆನು । ಮಾನಿನೀಮಣಿ
ಸೀತೆತ್ರಿಳಿನಾ । ನೀನಗರಿಗೈತರುವ ಮರಿಗೀಪ್ಪುರವೆ ವಾಸಿಪ್ಪುದು ॥ ನೀನೆ
ನುತ ನುಡಿಯಲ್ಕೆ ರಾಮನು । ಜಾನಕಿಯು ಪತಿಪದವ ಪಿಡಿಯುತ ।
ತಾನು ಪೇಳ್ದಳು ಪ್ರಣಯಕೋಪದೊಳುತ್ತರವನಿರದೆ ॥ ೨೮ ॥
ಪತಿಯೆ ಶಸ್ತ್ರಾಸ್ತ್ರಂಗಳನು ತಳೆ । ದತಿ ಪರಾಕ್ರಮಿಗಳಹ ಮೇದಿನಿ ।
ಪತಿಸುತರಿಗೀ ನುಡಿಗಳಪಕೀರ್ತಿಕರವಾಗಿಹುವು ॥ ಪಿತನು ಮಾತೆಯು
ಸೊಸೆಯು ತಮ್ಮನು । ಸುತನು ಮೊದಲಾದವರು ತಾವ್ಪಡೆ । ಯುತ
ಲಿಹರು ಪೂರ್ವದೊಳು ಮಾಡಿದ ತಮ್ಮ ಭಾಗ್ಯವನು ॥ ೨೯ ॥ ಪತಿಯ
ಭಾಗ್ಯವ ಮಡದಿಪೊಂದುವ । ಳಿತರ ಮಾರ್ಗವಿರುವುದೆ ಸತಿಗೀ ।
ಕ್ಷಿತಿಯೊಳದರಿಂಬರುವೆನಾಂ ಕಾನನಕೆ ನಿನ್ನೊಡನೆ ॥ ಗತಿಯುನೀಮನು
ಮಡಿದ ಮಡದಿಗೆ । ಪತಿಯುಪರದೊಳಗಲ್ಲದೆ ಪೊರೆವ । ಪಿತನು ಮೊದ
ಲಾದವರು ತಾವು ಕೊಡುವರೆ ಮುಕ್ತಿಯನು ॥ ೩೦ ॥ ನಿನ್ನ ಸಂಗಡ ವನಕೆ
ಬರುತಲೆ । ಸನ್ನುತಿವಡೆದತಾಪಸಗಣವ । ನುನ್ನತ ಭಕುತಿಯಿಂದೆ
ಸೇವಿಪೆನವರ ಸತಿಯರನು ॥ ಮನ್ನಿಸುತ ಚಿಂತಿಸದೆ ಸೌಖ್ಯವ । ನೆನ್ನ
ತಂದೆಯು ಮನೆಯೊಳಿದ್ದಂ । ತಿನ್ನು ಮೇಸುವೆನಾನಡವಿಯೊಳು ನಿನ್ನ
ನೊಲಿಸುತ್ತ ॥ ೩೧ ॥ ನಿನ್ನ ಬಳಿಯೊಳಗಿರ್ಪೆನಗೆ ಬನ । ಮಿನ್ನು
ನಾಕಸಮಾನಮೆನಿಪುದು । ನಿನ್ನನು ತೊರೆದ ರಾಜಭವನಮರಣ್ಯಸಮ
ಮಹುದು ॥ ನಿನ್ನ ನುಳಿದಿಲ್ಲಿರೆನುಮನದೊಳು । ನಿನ್ನೊಡನೆ ಪೂಜಿಸುತ
ಗುಣಸಂ । ಪನ್ನರಹ ಮುನಿಪೋತ್ತಮರ ನಾನಂದದಿಂದಿಹೆನು ॥ ೩೨ ॥
ಫಲಮೊಗಡ್ಡೆಯೊಗೆಣಸೊತಿಂದಪೆ । ಜಲಜಸಂಚಯದಿಂದೆ ರಂಜಪ ।

ಕೊಳಗಗಳೊಳು ಮಜ್ಜನವನಾಗಿಪೆ ನವನದೀಜಲವ । ನಲಿದು ಪಾನವ ಮಾಡುವೆನು ಕೆಂ। ದಳಿರಹಾಸಿಗೆಯಲ್ಲಿ ಮಲಗುವೆ । ಪಲತೆರದ ಮೃಗ ಪಕ್ಷಿಗಳ ನೋಡುತ್ತ ಹರುಷಿಪೆನು ॥ ೩೩ ॥ ಶರಭಸೈರಿಭಸಿಂಹವಾ ರಣ । ಹರಿಣ ಋಕ್ಷವರಾಹವೃಕವಾ । ನರತರಕ್ಷುಗಳಂದತಿ ಕಠಿನವಾ ಗಿಕಾಣಿಸುತ ॥ ಪಂಡಿಕೊಂಡಿಹ ಕಲ್ಲು ಮುಳ್ಳುಗ । ಳುರುಬೆಯಿಂದೊ ಪ್ಪುತಿಹ ವಿಪಿನಕೆ । ಬರುವೆನೆನುತಾ ಜಾನಕಿಯು ಪೇಳಿದಳು ಪತಿಗಿರ ದೆ ॥ ೩೪ ॥ ಲಲನೆ ಕೇಳಾವನದ ದೋಷಂ । ಗಳತಿಶಯವಾಗಿಹವು ಮೇದಿನಿ। ಯೊಳದರಿಂದಲೆ ವನವೆನುತ ಪೆಸರಾಗಿರುವುದದಕೆ॥ ತಿಳಿಸುವೆ ನು ನಾನವುಗಳೆಲ್ಲವ । ನೊಲಿದು ಕೇಳುತ ನೀನು ಪಟ್ಟಣ । ದೊಳಿಹು ದುತ್ತಮವೆಂದು ನುಡಿದನು ವನದಕಷ್ಟಗಳ ॥ ೩೫ ॥ ಅಡವಿಯೊಳಗಿ ಹ ಮರಗಳನು ಕಂ । ಡೊಡನೆ ಬಹುಭಯವಹುದು ನೀಂಕೇ । ಳಡಿಗಡಿಗೆ ಕೂಗುವುವು ಪೆಂಬುಲಿ ಸಿಂಗಕರಡಿಗಳು ॥ ಅಡಿಗಳಿಗೆ ತಗಲುವುವು ಕಲ್ಲುಗ । ಳಡಿಗಡಿಗೆ ಮುಳ್ಳುಗಳು ಚುಚ್ಚುವು । ವೆಡೆಯೊ ಳದರಿಂವನವೆ ದುಃಖಾಸ್ಪದವೆನಿಪ್ಪುದಲ್ತೆ ॥ ೩೬ ॥ ದಿನದಿನಂಗಳೊಳುಗು ಪವಾಸಗ । ಳ ನೆಸಗುತ್ತಿರಬೇಕು ವಲ್ಕಲ । ವ ನುಡಬೇಕೈ ತಂದತಿಥಿಯ ಭ್ಯಾಗತರುಗಳನು ॥ ಮನವಣಿಯೆ ಸಂತಸವಡಿಸಬೇ। ಕನುದಿನವು ದೇ ವಾರ್ತನೆಗಳನು । ಘನಭಕುತಿಯಿಂದೆಸಗಬೇಕಾ ವಿಪಿನಕುಸುಮದಲಿ ॥ ೩೭ ॥ ಮರಗಳಿಂದಲೆ ಬಿದ್ದ ಫಲದೊಳು । ದರದ ಪೋಷಣೆಯಾಗ ಬೇಕು ತ । ಳರುಗಳಿಂದಾಗಿಸಿದ ಹಾಸಿಗೆಯೊಳು ಮಲಗಬೇಕು ॥ ಇರುಳು ನಿದ್ದೆಯನುಳಿದು ನಾವಾ । ಕರಡಿಸಿಂಗಹುಲಿಗಳ ಶಬ್ದವ । ನರಿಯಬೇಕದರಿಂದೆ ಕಷ್ಟವೆನಿಪುದು ವನವಾಸ ॥ ೩೮ ॥ ನದಿಗಳೊ ಳು ವಸಿಸುತ್ತ ತಪ್ಪದೆ । ನದಿಗಳಂದದೆ ಕುಟಿಲವಾಗಿ ನ । ಡೆದುಬರುತ ಲಿಹ ಪನ್ನಗಂಗಳು ಮಲಗಿಕೊಂಡಿಹವು ॥ ವಿಧವಿಧದ ವನಪಕ್ಷಿಗಳ ಕಳಿ । ನ ದನಿಯಿಂದಾಗುವುದು ಭೀತಿಗ । ಳದರ ದೆಸೆಯಿಂ ಕಷ್ಟ ವಾಗಿರುತಿಹುದು ವನವಾಸ ॥ ೩೯ ॥ ಇರುವೆ ನೊಣಸೊಳ್ಳೆಗಳು ಕಡಿವುವು । ತರತರದ ನೋವುಗಳನಾಗಿಸು । ತ ರಣಹದ್ದುಗಳಾಗಿಪವು ಕೂಗುತ್ತ ಭೀತಿಯನು ॥ ಪಸರಿಯು ಚೇಳುಗಳು ಹುಳುಗಳು । ನೆರೆದುಕೊಂಡಿಹ ವೆತ್ತ ನೋಡಿದೊ । ಡರಸಿತಿಯೆ ವನವಾಸವತಿಭೀಕರ ವೆನಿಸುತಿಹುದು ॥ ೪೦ ॥ ಬಿಸಿಲು ಚಳಿಮಳೆಗಾಳಿಗಳು ಬಾ । ಧಿಸುತಿ ಹವು ರಾಕ್ಷಸರು ತಾವಾ । ಗಿಸುವ ರೈತಂದಖಿಳ ಹಿಂಸೆಗಳನ್ನು

ಪಲತೆರದೆ ॥ ಹಸಿದ ಹುಲಿಗಳು ಬಂದ ಜನಗಳ । ನೊಸೆದು ಭಕ್ಷಿಸುತಿಹ
ವು ವಾನರ । ವಿಸರಕಾಡಿಸುವುದದರಿಂದತಿದುಃಖ ವನವಾಸ ॥ ೪೧ ॥
ಲತೆಗಳಧ್ವದೊಳಾಕ್ರಮಿಸಿಹ ರ । ಡುತಡಿಯಿಡಲಂಜಕೆಯನಾಗಿಪ್ರ ।
ವತಿಶಯದ ಕತ್ತಲೆಗಳೆಸಗುತ್ತಿಹವು ಭೀತಿಯನು ॥ ಸತತ ಧೈರ್ಯವ
ಕೆಡಿಸುತಿಹವಾ । ಪಥದೆ ಗಿರಿಗಳು ಶಿಲೆಗಳದರಿಂ । ದತಿಭಯಂಕರವೆಂದೆ
ನಿಪುದೀ ನೆಲದೆವನವಾಸ ॥ ೪೨ ॥ ರಾಜಭವನದೆ ಬೆಳೆದು ಮಿಥಿಲೆಯ ।
ರಾಜನಿಗೆ ಸುತೆಯಾಗಿ ದಶರಥ । ರಾಜನಿಗೆ ಸೊಸೆಯಾಗಿ ಬಹುವಿಧ
ಸೌಖ್ಯವನುಪಡೆದ । ರಾಜಮಹಿಷಿಯೆ ಕೇಳು ವನದ । ವ್ಯಾಜವನು
ಳಿವು ಚಿಂತಿಸದೆ ನೀ । ನೀ ಜನನಿ ಕೌಸಲ್ಯೆಯೊಡನಿಹುದೆಂದ ನಾರಾಮ
॥ ೪೩ ॥ ಕಷ್ಟಗಳ ಸಂಗತಿಯನಾಲಿಸ । ದಿಷ್ಟ ಪತ್ನಿಯೆ ಕೇಳು
ನಿನಗು । ತ್ಕೃಷ್ಟವಲ್ಲವು ವಿಪಿನಕೆನ್ನೊಡನೈತಹುದೆನುತ್ತ ॥ ಎಷ್ಟು
ಬಗೆಯೊಳು ತಿಳುಹುತಿರ್ದೊಡ । ಮಷ್ಟು ಕೊಪ್ಪದೆ ಭೂಮಿಸುತೆ ತ ।
ನ್ನಿಷ್ಟವನು ಪೇಳಿದಳು ರಾಮನ ಚರಣಗಳಪಿಡಿದು ॥ ೪೪ ॥ ಪತಿಯೆ
ಕೇಳಾವನವ ಕಷ್ಟದ । ಳತಿ ಸುಖಾಸ್ಪದ ಮೆಂದೆನಿಸುವುವು । ಪತಿಯ
ಸಖ್ಯವೆ ಮುಖ್ಯವೆನ್ನುತ ತಿಳಿದಿರುವವನನಗೆ ॥ ಜತನದಿಂದೊಡವುದು
ಖಗಮೃಗ । ತತಿಯು ನಮ್ಮನು ಕಂಡು ಹೊಸಬರೆ । ನುತದುಕಾರಣ
ದಿಂದೆ ಬರುವೆನು ನಿನ್ನೊಡನೆ ವನಕೆ ॥ ೪೫ ॥ ಗುರುಗಳೆಡೆಯೊಳುಬಾಲ್ಯ
ದೊಳು ನಾ । ನರಿತಿಹೆನು ಪತಿಯೊಡನೆ ಸಂತತ । ಮಿರುತಿಹುದು ಪೋ
ಗುವುದು ನೀನಾತನೆಡೆವಿಡಿದೆನುತ ॥ ಗುರುಗಳಾಜ್ಞಾಪಿಸಿಹರವರಿಂ ।
ದಿರದೆ ನಾನೈತಹೆನು ನಿನ್ನನು । ತೊರೆದಯೋಧ್ಯೆಯೊಳೆಂತು ಬದುಕು
ವೆನೆಂದಳಾಸೀತೆ ॥ ೪೬ ॥ ನಿನ್ನ ಜತೆಯೊಳು ನಾನಿರುತ್ತಿರೆ । ನನ್ನ
ಹೆವರಿಸಲಮರ ಸಾಧನಿ । ಗಿನ್ನಸಾಧ್ಯವೆನಿಪುದು ತಿಳಿ ನೀನದನು
ಯೋಚಿಸುತ ॥ ನಿನ್ನನುಳಿದಾಂ ಬದುಕಲಾರೆನು । ನನ್ನಚಿತ್ತದಭೀಷ್ಟ
ವನರಿತು । ನನ್ನನೊಡಗೊಂಡಾ ಬನಕೆ ಪೋಗೆನುತಬೇಡಿದಳು । ೪೭ ॥
ಪತಿಯೆ ನೀನವಧರಿಸು ಬಾಲ್ಯದಿ । ಪಿತನ ಮಂದಿರದೊಳಿರೆ ಭೂಸುರ ।
ರತಿಮುದದೆ ಪೇಳಿಹರು ಕಾಡಿಗೆಪೋಗುವೆಯೆನುತ್ತ ॥ ಪತಿಯೊಡನೆ
ನೀಂ ಪೋಪೆ ಬನಕೆ । ನ್ನುತ ತಿಳುಹಿದಳು ಭಿಕ್ಷುಕೆಯು ಕೇ । ಳ್ಸ್ತ್ರಿಸು
ರರನುಡಿ ಸತ್ಯವಾಗಲಿ ಬರುವೆವನಕಿಂದು ॥ ೪೮ ॥ ವಿಹಿತವಾಗಿಹುದಾ
ಪತಿಸಹಿತ । ಸಹಗಮನವಾಚರಿಪುದಬಲೆಗೆ । ಮಹಿಯೊಳೆನ್ನುತ ನುಡಿ
ದಿಹರು ಭೂಸುರರು ಮುನಿವರರು ॥ ವಿಹಿತವೃತ್ತಿಯೊಳೆಡೆಬಿಡದೆ

ನಾಂ । ಬಪೆನು ನೆರಳಂತೆ ವನಕೆಂದಾ । ಮಹಿಳೆಪೇಳ್ದಳು ಪಲವು ತೆರವಿಂನೊಲಿದು ಗಂಡನಿಗೆ ॥ ೪೯ ॥ ಆನವಮನುಜಗೆ ಪಿತನುತನುಜೆ ಯು । ನೀವನೋ ಮೇದಿನಿಬೊಳಾತನ । ಸಾವನಿತೆ ಸೇವಿಸುತ ಸಂತತ ವಧಿಕಭಕ್ತಿಯಲಿ ! ಸಾವನೈದಿದ ಪತಿಯು ಚಿತಿಯೊಳ । ಗಾವನೋಪ ನು ತಾಳದೆ ಮನದೊ । ಳಾವಿಹಿತ ಸಹಗಮನವಾಳ್ಪದು ವೇದವಿಧಿ ಯುಕ್ತ । ೫೦ ॥ ನಿನ್ನ ಕಷ್ಟ ಸುಖಂಗಳೆಲ್ಲವು । ನನ್ನ ಹೊಂದಿಹು ದೆಂದು ತಿಳಿನೀಂ । ನಿನ್ನ ಸುಖದುಃಖಂಗಳಗೆನಾಂ ಬಾಧ್ಯಳಾಗಿಹೆನು ॥ ನನ್ನನಾವನಿಮಿತ್ತದಿಂದುಳ । ದಿನ್ನು ಪೋಗುವೆ ಬನಕೆ ನೀಂ ಪೇ । ಳೆನ್ನುತಾ ಧರಣಿಸುತೆ ನುಡಿದಳು ರಾಮನಿಗೆ ಮುಳಿದು ॥ ೫೧ ॥ ಬಿಟ್ಟು ನನ್ನನು ಬನಕೆ ಪೋದೊಡೆ । ನೆಟ್ಟನಗ್ನಿಯೊಳುರುಳುವೆನು ನಾಂ । ಬೆ ಟ್ಟದಿಂ ಧುಮುಕುವೆನು ಭೂಮಿಗೆ ಕುಡಿಯುವೆನು ವಿಷವ ॥ ಪಟ್ಟಣದೊ ಳಾನಿರದೆ ಕೊಳದೊಳು । ಧಟ್ಟನುರುಳುತಲಸುವನೀಗುವೆ । ಕೆಟ್ಟ ಹೆಸರನು ಹೊಂದುತಿಹೆ ನೀನೀ ಧರಣಿತಲದೆ ॥ ೫೨ ॥ ಈತೆರದೊಳಾ ಪತಿಗೆ ಬಹುವಿಧ । ನೀತಿಗಳ ಸಾರವನು ಪೇಳುವ । ಸೀತೆಯನು ಕಾನನಕೆ ಕರೆದೊಯ್ಯಲ್ಕೆ ಮನದೊಳಗೆ ॥ ಆತನೊಪ್ಪದೆ ಪೋಗಲತಿ ರೋಃ । ಷಾತಿಶಯದಿಂದಾಮಹೀಸುತೆ । ಕಾತರಿಸಿಯಳುತಿರಲು ಸಂತೈಸಿದನು ತಳೆದಡವಿ ॥ ೫೩ । ತಿಳಿದು ರಾಮನವಚನಗಳ ನಾ । ಬಳಿಕ ವನವಾಸದನಿಮಿತ್ತದೆ । ನೆಲದಣುಗಿ ಪೇಳಿದಳು ಪುರುಷನ ವೇಷವನು ತಳೆದ ॥ ಲಲನೆ ನೀನೆಂದರಿಯದಿತ್ತನು । ಅಳಿಯನೆನ್ನುತ ಜನಕನೀಪುರ ದೊಳುತೊರೆದು ಪೋಗಲ್ಕೆ ಭಯಮೇಂತಿಳುಹು ನೀನೆನಗೆ ॥ ೫೪ । ಪತಿಭಕುತಿಯಿಂದೈದೆ ಭೂಮಿಯೊ । ಳತಿ ಜಸವನಾನುತ್ತ ಗಂಡನ ನತಿ ಹಿತದೊಳನುಸರಿಸಿದಾ ಸಾವಿತ್ರಿಯಂದದೊಳು ॥ ಕ್ಷಿತಿಯೊಳ ನಿನಗಧೀನಳೆನ್ನುತ । ಸತತನೀಂತಿಳಿ ನಿನ್ನನುಳಿದಾ । ನಿತರ ಮಾನವ ರನ್ನು ಮನದೊಳು ಚಿಂತಿಸುವಳಲ್ಲ ॥ ೫೫ ॥ ನಿನ್ನೊಡನೆ ಬೆಂಬಿಡಿದೆ ಕೂಡಿ । ದೆನ್ನ ಬಹುದಿನದಿಂದ ಸಲಹಿದೆ । ನಿನ್ನ ನಿಜಸತಿಪತಿಪರಾಯ ಣೆಯೆಂದೆನಿಸಿರುತಿಹ ॥ ನನ್ನನಿತರರಿಗಿಂದು ಕೊಡಬೇ । ಕೆನ್ನುತಲಪೇ ಕ್ಷಿಸುವುದುಚಿತವೆ । ನಿನ್ನೊಡನಿರುವೆ ಸಗ್ಗದೊಳಗಂತೆ ವನಮಧ್ಯ ದೊಳು ॥ ೫೬ ॥ ನಿನ್ನೊಡನೆ ನಾನಿರುವೆ ತೊರೆದಾಂ । ನಿನ್ನನಿರುವ ವೆಳಲ್ಲರಣ್ಯಕೆ । ನಿನ್ನಹಿಂದೈದುತಿರಲಾಗದು ನನಗೆ ಬಳಲಿಕೆಯು ॥ ನಿನ್ನಸಂಗಡ ವನಕೆ ಬರ್ಪೆ । ನನ್ನ ಕಾಲ್ಗಳಿಗೊತ್ತವು ಶಿಲೆಗ ।

ಳನ್ನಿಹವು ಮುಳ್ಳುಗಳು ಹಾಸದ ಗರಿಗಳಂದದಲಿ ॥ ೫೭ ॥ ಇರುತಿಹಾ
ಮುಳ್ಳುಗಳು ಕಲ್ಲುಗ । ಳು ರಚಿಸವೆ ಬಾಧೆಯನು ನಿನ್ನಯ । ಚರಣ
ಯುಗಳಕೆ ಹಂಸತೂಲಿಕೆಯಂದದೊಳಗಿಹವು ॥ ಧರಣಿಯಿಂದೇಳುವ
ಪರಾಗವು । ವರಸುಗಂಧವ ಪೋಲಿಪುದು ಪು । ಲ್ಲಿರುವುದೆನಗುತ್ತಮ
ಶಯನಕಿಂತಧಿಕವೆಂದೆನಿಸಿ ॥ ೫೮ ॥ ಅಧಿಕವಾಗಲಿ ಕೊಂಚವಾಗಲಿ ।
ಯುದರಪೋಷಣೆಯಾಗಿಸುವೆನು ವ । ನದೊಳಗಾ ಫಲಕಂದಮೂಲಾದ
ನಗಳಿಂದೊಲಿದು ॥ ಪಡೆದು ನೀನಿತ್ತಪುದೆ ಸಮವೆ । ನಿಪ್ಪುದು ಸುಧೆಗೆಜನ
ನೀಜನಕರನು । ಸನನವನು ಚಿಂತಿಸದೆ ಸಂತಸದೊಳಿಹೆ ನಡವಿಯಲಿ
॥ ೫೯ ॥ ನಿನಗೆ ನಂನ್ನಿಂದಾವ ತೊಂದರೆ । ವನದೊಳೆಂದಿಗುಮಾಗಲಾರದು ।
ನನಗೆಸಗ್ಗಕೆ ಸಮವೆನಿಪ್ಪುದು ನಿನ್ನೊಡನಿರುವೆಡೆ ॥ ನನಗೆ ನಿನ್ನನು
ಬಿಟ್ಟೆಡೆ ನರಕ । ವೆನಿಪ್ಪುದದರಿಂದೆನ್ನ ಚಿತ್ತವ । ನು ನೆರೆನೋಡುತಲಿಂದು
ನಡೆಪುದು ವನಕೆನನ್ನೊಡನೆ ॥ ೬೦ ॥ ನನ್ನನೀಂ ತೊರೆದೆಯ್ದಲಿಲ್ಲಿಯೆ ।
ನಿನ್ನ ದುಃಖದೆ ಸಾಯುವೆನು ನಾ । ನಿನ್ನರಿಪ್ರವೇಶದಲ್ಲಿರೆನುನಾಂ । ಕುದಿ
ವೆಗರಳವನು ॥ ನಿನ್ನೊಡನೆ ಸಾಯುವುದೆ ಘನವೆಂ । ದೆನ್ನುತ ಮನ
ದಿನಂಬಿಹೆನುನಾಂ । ನಿನ್ನನುಳಿದು ಮುಹೂರ್ತಮಾತ್ರವು ನಿಲ್ಲುವುದೆ
ಜೀವ ॥ ೬೧ ॥ ನಿನ್ನನುಳಿದು ಮುಹೂರ್ತಕಾಲವು । ನನ್ನ ಜೀವವಿ
ರವು ಪುರದೊಳಂ । ತಿನ್ನಿರಲಿ ಹದಿನಾಲ್ಕುಬುದಗಳಕಾಲಪರಿಯಂತ ॥ ಎ
ನ್ನುತ ಪತಿಯನಪ್ಪಿಕೊಳ್ಳುತ । ತನ್ನ ಕಣ್ಣೊಳು ಸುರಿಸುತಿದ್ದಳು । ಸ
ನ್ನುತಾಂಗಿಯು ಜಲವನಗ್ನಿಯು ನರಣಿಬಿಡುವಂತೆ ॥ ೬೨ ॥ ಚಾರುನಯನ
ಗಳಿಂದೆ ರಂಜಿಪ । ನಾರಿಯಮುಖಸರೋಜವಿರ್ದುದು । ನೀರಿನಿಂದಲೆ
ತೆಗೆದು ಬಿಸಿಲಿನೊಳಿಟ್ಟ ಕಮಲದೊಲು ॥ ಸಾರಸಾಕ್ಷಿಯ ಬಾಡಿದ
ಮೊಗವ । ನಾರಘುವರನು ಪರಿಕಿಸುತ್ತಾ । ನೀರೆಯನುತಾನಪ್ಪಿಕೊಳ್ಳು
ತ ನುಡಿದನೊಲಿಸುತ್ತ ॥ ೬೩ ॥ ನೀನು ದುಃಖವನೈದಿ ಚಿಂತಿಸೆ । ನಾನು
ಮೆಚ್ಚೆನು ಸಗ್ಗಸುಖವನು । ಕಾನನದೊಳೆಂತಿರಲಿ ನಿನ್ನನು ಬಿಟ್ಟ
ಯೋಧ್ಯೆಯಲಿ ॥ ಮಾನವನನೆಂತವನ ಕೀರ್ತಿಯು । ದೀನೆಲದೆ ಬಿಡವಿ
ರ್ಪುದದರಂ । ತಾನುಪೋಗೆನು ಬಿಟ್ಟುನಿನ್ನನು ಸೀತೆಕೇಳೆಂದ ॥ ೬೪ ॥
ಪೊಡವಿಯಾತ್ಮಜೆ ಕೇಳುನೀನೆ । ನ್ನೊಡನೆ ಕಾನನವಾಸಕಾಗಿಯೆ ।
ಪಡೆದೆಜನ್ಮವ ತಂದೆತಾಯ್ಗಳ ನುಡಿಗಳನು ಕೇಳ್ದು ॥ ನಡೆವ ಮಕ್ಕ
ಳಿಹದೊಳು ಕೀರ್ತಿಯ । ಪಡೆದು ಮರಣಾನಂತರದೆ ತಾ । ವ್ಪಡೆವರಾ
ಗಂಧರ್ವವಿಧಿಗೋ ದೇವಲೋಕಗಳ ॥ ೬೫ ॥ ಇಂದುಮುಖಿನೀಂ

ತ್ರೀಪುರನೆನ್ನೆಯು । ತಂದೆತಾಯ್ಗಳು ನುಡಿದ ವಚನಗ । ಳಂತೆ ನಿನ್ನಯು ಕೂಡೆ ವಿಪಿನದ ವಾಸವೆಸಗುವೆನು । ಸುಂದರಿಯೆ ನೀನೆನ್ನ ಜತೆಯಲಿ । ಬಂದು ವನವಾಸವನೆಸಗಬೇ । ಕೆಂದುದಿಸಿರುವೆ ನನ್ನೊಡನೆ ಬಹುದೆನ್ನು ತೊಪ್ಪಿಸಿದ । ೬೬ । ನನಗೆನೀಂ ಸಹಧರ್ಮಚಾರಿಣಿ । ಯೆನಿಸಿಕೊಂಡಿಹೆ ನಿನ್ನ ತೊರೆದೆಡೆ । ನನಗೆ ರುಚಿಸದು ಸಗ್ಗಸೊಗನೀಂ ಬಂದುನನ್ನೊಡನೆ ॥ ವನದೆವಾಸವನೆಸಗುಕೊಡುವೇ । ದಿಸಿಸುರರಿಗೆರತುನಗಳನು ಭೋ । ಜನವನಾಗಿಸು ಬಿಕ್ಷುಕರಿಗೆಂದುಸುರಿದನು ಸತಿಗೆ ॥ ೬೭ ॥ ಧರಣಿ ದೇವತೆಗಳಿಗೆ ಭೃತ್ಯನಿ । ಕರಕೆನೀಂ ಕೊಡುಕಾಂತೆ ಸಕಲಾ । ಭರಣಗಳನುತ್ತಮದ ವಸನಂಗಳನು ಮೇಲೆನಿಪ ॥ ಮೆರೆವಹಾಸಿಗೆಗಳನು ಸುಂದರ । ತರ ಪದಾರ್ಥಗಳನೆನುತ ನುಡಿದ । ನು ರಘುನಂದನನಾ ಸತಿಗೆ ಸಂತಸದೊಳಂದಿತು । ೬೮ ॥ ಇಂತು ನುಡಿದಾಪತಿಯು ಮಾತನು । ಸಂತಸದೊಳಾಲಿಸುತ ಪಡೆದ । ತ್ಯಂತಹರುಷವ ನಾಮಹೀಸುತೆ ಕೀರ್ತಿಯುತೆಸೀತೆ ॥ ಅಂತವಿಲ್ಲದೆ ಕೊಟ್ಟಳು ಮನದೆ । ಚಿಂತಿಸದೆ ಧನಕನಕಮಣಿಗಳ । ಸುತತ್ರಿಯು ನಾಪೂರ್ಣಮನದಿಂದಖಿಳ ಮನುಜರಿಗೆ ॥ ೬೯ ॥ ವನಕೆನಾಂ ಬಹೆನೆನುತ ಲೊಪ್ಪಿಸಿ । ದನುಜ ಲಕ್ಷ್ಮಣ ಸಹಿತ ತಂದೆಯು । ಮನೆಗೆ ಪೋಗುವ ರಾಘವನಹಿಂದಾ ಮಹೀಸುತೆಯು ॥ ಮನವಸಂತಸದಿಂದೆ ಪೋದಳು । ವನಿತೆಯರೊಳೆಣೆಯಾರು ಜಾನಕಿ । ಗೆನಲು ಮಾವನಮನೆಗೆ ವನವಾಸದ ಕುತೂಹಲದಿ ॥ ೭೦ ॥ ನಮಿಸಿ ತಂದೆಯುಪದಕೆಪೋಗುವೆ । ನು ಮಡದಿವೆರಸಿ ಕಾನನಕೆನಾಂ । ನಮಗನುಜ್ಞೆಯನುಕೊಡು ಲಕ್ಷ್ಮಣ ಬರುವನೆನ್ನೊಡನೆ ॥ ತಮಗೆ ಚಿಂತೆಯು ಬೇಡವಿಪಿನದೊ । ಳು ಮುನಿವೇಷವನಾಂತಿರುವೆನೆ । ನ್ನ ಮನಕಿಲ್ಲವು ದುಃಖವೆನ್ನುತ ನುಡಿದನಾರಾಮ ॥ ೭೧ ॥

ಇಂತು ಎಂಟನೆಯ ಅಧ್ಯಾಯ ಸಂಪೂರ್ಣವು. ಪದ್ಯಗಳು ೪೦೧.

ಒಂಭತ್ತನೆಯ ಅಧ್ಯಾಯ.

ಸೂಚನೆ ॥ ಚಿತ್ರಕೂಟಾಚಲದೊಳದ್ದ ಧ ।
ರಿತ್ರಿಯಾತ್ಮಜೆ ರಘುವರನೊಡನೆ ।
ಯತ್ರಿಮುನಿಯಾಶ್ರಮಕೆ ಬಂದಳು ಖೇದವನುತೊರೆದು ॥

ನೆರೆದುಸೇರಿದ ಜನರಮಧ್ಯದೊ । ಳರದೆ ಕೊಟ್ಟಳು ನಾರು

ಮಡಿಗಳ । ನು ರಘುಪತಿಗಾಕೈಕೆ ಲಜ್ಜೆಯನುಳಿದು ಚಿತ್ತದೊಳು ॥ ಧರಿಸಿ ರಾಮನು ಧರಣಿಜಾತೆಯು । ಕರದೊಳಿತ್ತನು ನಾರುಸೀರೆಯು । ಪರಿಪರಿಬಗೆಯೊಳಂದು ಬೈದರು ಜನರು ಕೈಕಯನು । ೧ ॥ ತಡೆಯ ಲಾರದೆ ಮನದದುಃಖವ । ನೊಡನೆಬಿದ್ದನು ಮೂರ್ಛೆಯಿಂದಾ । ಪೊಡವಿ ಪಾಲಕ ದಶರಥನು ನೋಡುತಿರೆ ಸಕಲಜನ ॥ ಕಡುಭರದೊಳಾರಾಮ ನೈತಂ । ದೊಡಲಿಗೀಯುತ ಹಿಮಜಲವ ತಾ । ನಡಿಗಡಿಗೆ ಬೀಸುತಿರೆ ತಿಳಿದನು ಕೂಡೆಮೂರ್ಛೆಯನು ॥ ೨ ॥ ಕುಲವಿಘಾತಕಿ ಕೈಕೆಸೀಂರ ವಿ । ಕುಲಕೆ ಮೃತ್ಯುವಿನಂತೆ ಬಂದಿಹೆ । ಕೆಲಕೆ ಸಾರಿಳಿಸುಷೆಗೆ ಸಮ್ಮತ ವಲ್ಲ ನಾರುಮಡಿ । ಛಲಮಿದೇಕೆನುತಾ ವಸಿಷ್ಠನು । ಮುಳಿದು ಜೈಯ್ದು ಕೊಡಿಸಿದನಿಳೆಸುತೆ । ಗೊಲಿದು ದಶರಥನಿಂದೆ ಮೇಲೆನಿಪುಡಿಗೆ ತೊಡಿ ಗೆಗಳ ॥ ೩ ॥ ಪೇಳಿದನುಭೂಪತಿ ಸುಮಂತ್ರಿಗೆ । ತಾಳಲಾರದೆ ಮನದ ದುಃಖವ । ಕೇಳುತಿರೆ ರೋದಿಸುತ ತನ್ನಯ ರಾಣಿಯರ ನಿಬರು ॥ ಮೇಲೆನಿಪ ರಥದಲ್ಲಿ ಕೂಡಿಸಿ । ಹೇಳುವೆಡೆಬಿಟ್ಟೈತಹುದು ಗಿರಿ । ಜಾಲ ದಿಂದೆಸೆವಡವಿಯೊಳು ರಾಮನನು ನೀನೆನುತ ॥ ೪ ॥ ಪತಿಯೊಡನೆ ವನ ಕೈದುತಿಹ ಭೂ । ಸುತೆಗೆ ಕೊಟ್ಟನು ಪದೆದು ಧರಣೀ । ಪತಿ ದಶರಥ ನು ಮೇಲೆನಿಪರತ್ನಾಭರಣಗಳನು ॥ ಅತಿಮನೋಹರ ಮೆನಿಪುಡಿಗೆ ಗಳ । ನು ತರಿಸಿತ್ತನು ಮತ್ತೆ ಮನದೊಳು । ವಿತತದುಃಖವನಾಂತು ರೋದಿಸುತಧಿಕ ಚಿಂತೆಯಲಿ ॥ ೫ ॥ ಜವದೊಳೋಡುವ ಕುದುರೆಗಳ ನಾಂ । ತವರ ರಥವನು ತಂದುನಿಲಿಸೆ ಸ । ಚಿವನು ಮಂದಿರದಿದಿರೊಳಾ ಸೌಮಿತ್ರಿಸತಿಸಹಿತ ॥ ರವಿಕುಲೋತ್ತಮ ರಾಘವನದಕೆ । ತವಕದಿಂದೆರ ಗುತ್ತಲೇರಿದ । ನವನಿಪನೊಡನೆ ರೋದಿಸಿದರಾ ಪುರದಮಾನವರು ॥ ೬ ॥ ಮೇದಿನೀಸುತೆ ಸೀತೆರಥದೊಳು । ಮೈದುನನೊಡನೆ ಪತಿಯ ಬಳಿಯೊಳು । ಗೈದೆ ಕುಳ್ಳಿರಲಾಸುಮಂತ್ರನು ರಾಮನಭಿಮತವ ॥ ಸಾದರದೊಳಾಲಿಸುತ ಕಾನನ । ಕಾದಿನವೆ ನಡಿಸಿದನು ರಥವನು । ಮೋ ದದಿಂದೈದಿದರು ತಮಸಾನದಿಯ ತೀರವನು ॥ ೭ ॥ ಮಡದಿತಮ್ಮಂದಿರ ವೆರಸಿಕಾ । ರಡವಿಗೈದಿದ ರಾಮನನರಿದು । ಬಿಡದೆ ರೋದಿಸುತಿದ್ದರೆಲ್ಲರು ಕೆಲಸಗಳನುಳಿದು ॥ ಮಡದಿಗಂಡನ ನೊಲಿಸದಿರ್ದಳು । ಕೊಡದೆ ಪೋದಳು ಹಾಲನೆಳೆಯನಿ । ಗೊಡಲೊಳಡಿವತ್ತಿದುಃಖದಿಂದಾ ವಸಿತೆ ಭವನದೊಳು ॥ ೮ ॥ ಇರುತ ತಮಸಾನದಿಯ ತೀರದೊ । ಳೆರಡನೆಯ ದಿನ ಶೃಂಗಿಬೇರನ । ಗರಕೆ ಬರಲಾಗುಹನು ನಡೆತಂದೆರಗಿರಾಘವನ ॥

ಚರಣಪಂಕಜಕಂದುಕೊಟ್ಟನ । ವರಿಗೆ ರಾಜಾರ್ಹವೆನಿಸಿಪ್ರತ್ತವು । ತರವ ಸನ್ನೆಸ್ಟ್ರೀಜನವ ಕೇಳುತ ಕುಶಲವಾರ್ತೆಯನು ॥ ೯ ॥ ಸಲೀಂದಿ ದಾಹಾರವನೆಸಗ । ತಳೆದು ರಾಘವನಲ್ಲಿ ಜಡೆಗಳ । ನೊಲಿದು ಗುಹನಿಂತ ರಿಸಿನಾವೆಯನಾಗಸುತಸದಿ ॥ ಕುಳಿತು ಲಕ್ಷ್ಮಣ ಸೀತೆಯರೊಡನೆ । ಬಳಿಕ ಪುರಕ್ಕೈದಲು ಸುಮಂತ್ರನಿ । ಗೊಲಿದುಸುರಿ ತನಾಗಿಸಿದ ಗಂಗೆ ಯೊಳು ಪಯಣವನು ॥ ೧೦ ॥ ದೇವಗಂಗಾನದಿಯೊಳೈದುತ । ಭೂವ ನಿತೆ ಬೇಡಿದಳು ಜಾಹ್ನವಿ । ದೇವಿನೀಂಪತಿ ಲಕ್ಷ್ಮಣರ ಸಹಿತೆನ್ನನಿಂ ದೊಲಿದು ॥ ನಾವೆಯಿಂದಾ ದಡವನೈದಿಸ । ಲೀ ವಿಪಿನವಾಸವನು ತೀರಿಸಿ । ನಾವು ಪುರವನು ಸೇರ್ದಬಳಕೊಲಿದರ್ಚಿಸುವೆನೆನುತ ॥ ೧೧ ॥ ಒಂದು ಸಾವಿರ ಹೆಂಡಗಡಿಗೆಗ । ಳಂದೆ ನಿನ್ನನು ತೃಪ್ತಿಪಡಿಸುವೆ । ನೊಂದು ಲಕ್ಷದ ದನಗಳನು ನಾನೀವೆವಿಪ್ರರಿಗೆ ॥ ಮಂದಿರದೆ ಮೃಷ್ಟಾನ್ನ ಪಾನಗ । ಳಂದವರ ನಾವರಿಪೆ ಮಾಂಸಗ । ಳಂದೆ ಭೂತಬಲಿಯನು ಮಾಡುತ ನಿನ್ನ ಪೂಜಿಸುವೆ ॥ ೧೨ ॥ ಎನುತ ಗಂಗೆಗೆ ಕೈಮುಗಿದು ಮೇ । ದಿನಿಯಣುಗಿ ಭಕ್ತಿಯಲಿ ಜಾನಿಸಿ । ಮನದೆ ಭಾಗೀರಥಿಯ ಸಂ ಸ್ತುತಿಸುತ್ತಿರೆ ಪಲತೆರದಿ ॥ ಅನಿತರೊಳು ದಕ್ಷಿಣದ ತೀರಕೆ । ಜನಕ ಸುತೆ ಸೌಮಿತ್ರಿ ರಘುನಂ । ದನರ ನೈದಿಸಿ ತೀಕ್ಷ್ಣರಿಯನಾಗಿಸುತ ಲಾನಾವೆ ॥ ೧೩ ॥ ನಾವೆ ಯಿಂದಿಳದೈದಿದರೊಲಿದು । ಮೂವರಾಲದ ವೃಕ್ಷವನು ಸಂ । ಭಾವಿಸುತಲಿದ್ದರು ವಿಲೋಕಿಸಿ ವನವಿನೋದಗಳ ॥ ತಾವು ತಳೆದಾರಾತ್ರಿಯನಿರದೆ । ಸಾವಕಾಶವನುಳಿದು ಪೋದರು । ಶೀವಿ ಯಿಂದಾ ಮುನಿವರ ಭರದ್ವಾಜನಾಶ್ರಮಕೆ ॥ ೧೪ ॥ ನಡೆತರುತ ಸೌಮಿ ತ್ರಿಸತಿಸಹ । ತಡವಿನೊಳು ರಾಘವನು ಮುನಿವರ । ನಡಿಗಳಿಗೆರಗಿ ಬಿನ್ನವಿಸಿದನು ಪರಮಭಕ್ತಿಯಲಿ । ಪೊಡವಿಯಾತ್ಮಜೆ ಈಕೆನನ್ನಯ । ಮಡದಿ ಲಕ್ಷ್ಮಣನೆನ್ನ ತಮ್ಮನು । ಅಡವಿಯೊಳು ವಾಸಿಪೆವು ತಂದೆಯ ನೇಮದಿಂದೆನುತ ॥ ೧೫ ॥ ಮುನಿಪತಿಭರದ್ವಾಜ ನಾರಾ । ಮನನು ಕೂಡಿಸಿ ಯುಚಿತ ಪೀಠದೊ । ಳು ನಲವಿಂದಾ ಸೀತೆ ಲಕ್ಷ್ಮಣರೊಡನೆ ಹರ್ಷದಲಿ । ವನದೊಳುತ್ತಮವೆನಿಸಿಪ ವಸ್ತುಗ । ಳನು ತರಿಸಿ ಭೋಜ ನವನಾಗಿಸಿ । ದನು ಕಳೆವರವರಲ್ಲಿ ಸಂತಸದಿಂದೆ ರಾತ್ರಿಯನು ॥ ೧೬ ॥ ಉದಯಕಾಲದೊಳೆದ್ದು ರಾಮನು । ಸುದತಿ ಲಕ್ಷ್ಮಣರಿಂದೆ ಮುನಿಪನ । ಪದಕೆರಗುತಲ್ಲಿಂದೆ ಪೋದನು ಮುನಿಪನಾಜ್ಞೆಯಲಿ ॥ ಪದುಳದಿಂದಾ ಬ ನದೊಳೈತರು । ತಧಿಕ ಸಂತಸದಿಂದೆ ಯಮುನಾ । ನದಿಯ ತೀರವ

ನ್ನೈದಿದರು ನೋಡುತ್ತವನ ಸಿರಿಯ ॥ ೧೭ ॥ ಕಟ್ಟಿ ತೆಪ್ಪವನೆಂದು ಮೂವರು । ನೆಟ್ಟನದರೊಳು ಕುಳಿತು ಪೋದರು । ಕಟ್ಟಿಗೆಗಳಿಂ ನಡಿಸುತಲಿ ತೆಪ್ಪವನು ನೀರಿನೊಳು ॥ ಥಟ್ಟನೆಯ್ದನು ತೆಂಕಣದ ಡವ । ಮುಟ್ಟಿ ಸೌಮ್ಯಮುನಾಂಬೆ ನಿನಗಾಂ । ಕೊಟ್ಟು ಪೂಜೆಯ ಮಾಳ್ಪೆ ಘನಶತ ಮದ್ಯಕುಂಭಗಳ ॥ ೧೮ ॥ ಎಂದು ಜಾನಕಿ ಮಣಿದೆರಗಿ ಕಾ । ಳಿಂದಿಯನು ಬೇಡುತ್ತಿರೆ ಚಿತ್ತದೊ । ಳೆಂದು ತೆಂಕಣ ದಡವನೈದಿದರೊಂದು ನಿಮಿಷದಲಿ ॥ ಮುಂದೆ ವಿಪಿನದೊಳೈತರುತ ರಘು । ನಂದನನು ಸತಿಸೋದರರ ಸಹ । ಬಂದು ಹೊಕ್ಕನು ಭರದೊಳಾನ್ಯಗ್ರೋಧ ವೃಕ್ಷವನು ॥ ೧೯ ॥ ಕಳೆದುರಾತ್ರಿಯನಲ್ಲಿ ಪೋದರು । ಬೆಳಗಿನಾಜಾವದೊಳಗಾ ಮುನಿ । ತಿಳುಹಿದಂತಾವನದೆ ನೋಡುತ ಮುಂದೆ ಕೌತುಕವ ॥ ಹಲವುವಿಧ ಮೃಗಪಕ್ಷಿ ವರ್ಗವ । ತಳೆದು ರಂಜಿಪ ಚಿತ್ರಕೂಟವ । ಬಳಿಯೊಳಿಹ ವಾಲ್ಮೀಕಿ ಮುನಿಯಾಶ್ರಮವ ನೈದಿದರು ॥ ೨೦ ॥ ನಮಿಸಿ ವಾಲ್ಮೀಕಿಮುನಿಪದ ಯುಗ । ಕಮಿತಮೋದವನಾಂತವರು ನೆರೆ । ಸಮುಚಿತಾಸನಗಳೊಳು ಮಂಡಿಸಿದರು ತದಾಜ್ಞೆಯಲಿ ॥ ತಮಗೊದವಿದಾ ವಿಪಿನವಾಸ । ಕ್ರಮವ ಮೊದಲಿಂದರುಹಿಯುಚಿತವ । ಸಮಯದೊಳು ಕೈಕೊಂಡರಾ ಮುನಿಯಿಂದೆ ಭೋಜನವ ॥ ೨೧ ॥ ಬಳಿಕ ವಾಲ್ಮೀಕಿ ಮುನಿಪಾಲನ । ಬಳಿಯೊಳಾ ಸೌಮಿತ್ರಿಯಿಂದಂ । ದೆಳೆ ಮನೆಯನಾಗಿಸಿದನಾ ರಘುವರನು ಶೀಘ್ರದಲಿ । ಪೊಳೆವ ಮಂದಾಕಿನಿಯ ದಡದೊಳು । ಸಲೆಮನೋಹರವಾಗಿ ಸೀತಾ । ಲಲನೆಗರಿಯೆ ವಿಹಾರಯೋಗ್ಯವದೆನಿಸಿ ರಾಜಿಸಿತು ॥ ೨೨ ॥ ಕೊಂದು ಮೃಗವನು ಶಾಸ್ತ್ರಸಮ್ಮತಿ । ಯಿಂದೆ ಶಾಲೆಗೆ ಶಾಂತಿಗೈಯುತ । ಚಂದದಿಂದಲೆ ಭೂತಬಲಿಯನು ಕೊಟ್ಟರಾಘವನು ॥ ಬಂದು ಹೊಕ್ಕನು ಸತಿಸಹೋದರ । ರಿಂದೆ ಪರ್ಣಶಾಲೆಯನವರುಳಿದ । ರಂದು ಪಟ್ಟಣದಿಂದೆ ಬನಕೈತಂದ ಖೇದವನು ॥ ೨೩ ॥ ಸೀತೆಪತಿ ಲಕ್ಷ್ಮಣರಸಹಿತ ಮ । ಹಾತಪೋಧನನಾಶ್ರಮಬಳಿಯೊ । ಳೀತೆರದೊಳಿರುತಿದ್ದಳೀಕ್ಷಿಸುತ ವನವಿಭವಗಳ ॥ ಪ್ರೀತಿಯಿಂದಾ ಪತಿಯಸಂಗಡ । ಮಾತನಾಡುತ ಬಂದಳಾನಂ । ದಾತಿಶಯದೊಳು ಚಿತ್ರಕೂಟಗಿರೀಂದ್ರಕೊಂದುದಿನ ॥ ೨೪ ॥ ನೋಡು ಜಾನಕಿ ಚಿತ್ರಕೂಟವು । ನಾಡೆ ಕಂಗೊಳಿಸುವುದು ಬಗೆಬಗೆ । ಕೋಡುಗಲ್ಲುಗಳಾ ಗಗನಮಂಡಲವ ಮುಟ್ಟಿಹವು ॥ ಬೀಡುಗೊಂಡಿಹವಖಿಳ ಮೃಗಗಳು । ಕೋಡಗಗಳೆಲ್ಲೆಡೆಯೊಳೆಸೆವುವು । ನೋಡಲೀಗಿರಿ

• ಗುಂಫವೊದನಕೇಳಿಯೆನಿಪುದಲ್ತೆ ॥ ೨೫ ॥ ಧರಿಸಿ ದಂಬರದಂತೆಸೆವುದಂ । ಬರಪ್ರಮಾರಗಳಂದದಿಂದುರೆ । ಮೆರೆವುವು ಝುರಿಗಳಲ್ಲ ಮೇಖಲೆಯಂತೆ ಕೋಟೆಯಿದು । ನೆರೆವಿರಾಜಿಸುತ್ತಿಹುದು ಕಲಶದ । ತೆರದೊಳೀ ಶಿಖರಂಗಳೊಪ್ಪುವು । ವು ರಮಣೀಯಕಮನಿಸಿಕೊಂಡಿಹುದಿದರ ಸೌಂದರ್ಯ ॥ ೨೬ ॥ ಮುನಿಗಳೈತಂದಾಚರಿಸುವರು । ಘನತಪಂಗಳನಿಲ್ಲಿ ಮಂದಾ । ಕಿನಿಯು ಕಂಗೊಳಿಸುವುದು ಸಿಂಹವ್ಯಾಘ್ರ ಋಕ್ಷಗಳು ॥ ಜನಗಳಿಗೆ ಭೀತಿಯನು ಮಾಡುವು । ವು ನೆಲಸಿರ್ಪುದು ಪನ್ನಗನಿವಹ । ಮೆನುತ ರಾಘವ ನಾಮಹೀಸುತೆಗೆಂದು ಪೇಳಿದನು ॥ ೨೭ ॥ ನಮಗಯೋಧ್ಯಾನಗರದಂತಿಹು । ದು ಮನಕೀವರ ಚಿತ್ರಕೂಟವು । ವಿಮಲಮಂದಾಕಿನಿಯು ಸರಯುವಿನಂತೆ ರಂಜಿಪುದು ॥ ಸಮನಿಸಿದರಾಜ್ಯಾರ್ಹವೆಂದೆನಿ । ಪ ಮಲಭೋಜನದಂತೆ ತೋರ್ಪುವು । ವಿಮಲಫಲಗಳು ಕಂದಮೂಲಂಗಳೆಮಗದ್ರಿಯೊಳು ॥ ೨೮ ॥ ಮಡದಿ ಲಕ್ಷ್ಮಣರಿಂದೆ ರಾಘವ । ನಡವಿಯೊಳು ತಾನಿಂತಿರುತ್ತಿರೆ । ಪೊಡವಿಪಾಲಕ ದಶರಥನು ರಘುನಂದನನಗಲಿದ ॥ ಒಡಲದುಃಖದೆ ಮರಣವೈದಿದ । ನೊಡನೆ ಭರತನು ಬಂದಯೋಧ್ಯೆಗೆ । ಕಡುಭಕುತಿಯಿಂದಪರಕರ್ಮಂಗಳನು ಮಾಡಿದನು ॥ ೨೯ ॥ ಅರಸನಾಗಲು ತಾನೊಡಂಬಡ । ದೆ ರಘುನಂದನನಡವಿಯಿಂ ದೀ । ಪುರಕೆ ಕರೆತಂದೀವೆ ನಾತನಿಗೀ ಧೊರೆತನವನು ॥ ಭರದೊಳೆನುತಾ ಭರತನೊಪ್ಪಿಸಿ । ಗುರುವಸಿಷ್ಠಾದಿಗಳನಂದಾ । ಪುರದ ಮಾನವರೆಲ್ಲರವೆರಸಿ ಬಂದನಾಗಿರಿಗೆ ॥ ೩೦ ॥ ಬರುತ ಗುಹನಿಂದರಿತು ರಾಮನ । ಪರಿಯನತಿದುಃಖಾತಿಶಯದಿಂ । ದಿರದೆ ಜಡೆಗಳ ತಾಳುತಲ್ಲಿಂದೈತರುತ ವನದಿ ॥ ವರಭರದ್ವಾಜಮುನಿಗೆ ನಮಿಸಿ । ಭರತನಾವರ ಚಿತ್ರಕೂಟಕೆ । ಭರದೊಳೈತಂದೆರಗಿದನು ರಾಘವನ ಪದಯುಗಕೆ ॥ ೩೧ ॥ ಪರಸಿರಾಘವನಾ ಭರತನಂ । ಕರುಣದಿಂ ದೀಕ್ಷಿಸುತ ಸಲೆಕು । ಳ್ಳಿರಿಸಿ ತನ್ನ ತೊಡೆಯೊಳು ಮನ್ನಣೆಗೈದು ಲಾಲಿಸುತ ॥ ಪುರದೊಳೆಲ್ಲರು ಕುಶಲದಿಂದಿರು । ವರೆ ಕುಶಲದಿಂದಿಹನೆ ತಂದೆಯು । ಮೆರೆವುದೇ ಪುರದೇಶಕೋಶವೆನುತ್ತ ಕೇಳಿದನು ॥ ೩೨ ॥ ನಮಿಸಿ ರಾಮನಚರಣಕೆ ಭರತ । ನ ಮಲಮತಿಯಿಂದಂದು ಪೇಳಿದ । ನು ಮರುಗದೆ ಸತಿ ಸೋದರರೊಡನೆ ವನಕೆ ನೀಂಬರಲು ॥ ಸಮನಿಸಿದ ದುಃಖಾತಿಶಯದಿಂ । ದೆ ಮನುಜಾಧಿಪನೈದಿದನು ತಾ । ನಮರ ಲೋಕವ ನೆಸಗುಸೀನವಗ ಪರಕರ್ಮವನು ॥ ೩೩ ॥ ನಿನ್ನನೆಕುರಿತು ಮನದೆಶೋಚಿಸಿ । ನಿನ್ನ ನೋಡುವ ಬಯಕೆಯಿಂದಳೆ । ನಿನ್ನೊಳಗೆ ಮನವಿಟ್ಟು ನೆನೆಯುತ

ನಿನ್ನನನುದಿನವು ॥ ನಿನ್ನನಗಲುತ ನಿನ್ನ ದುಃಖದೊಳನ್ನೆಗಂ ಮುಳುಗುತ್ತ ಸಂತತ । ನಿನ್ನನೆನೆಯುತ ಸತ್ತನಿನ್ನಯ ತಂದೆ ದಶರಥನು ॥ ೩೪ ॥ ಕಡಿವಗಿಡದಂತಿಳೆಗೆತಾಂಬಿ । ದ್ದೊಡನೆ ಮೂರ್ಛೆಯನೈದಿ ರಾಘವ । ನೊಡಲದುಃಖಾತಿಶಯದಿಂ ದಡಿಗಡಿಗೆ ಬಿಸುಸುಯ್ದು ॥ ಕಡೆಗೆ ಪ್ರಜ್ಞೆಯನೈದಿ ಬಂದನು । ಮಡದಿ ಲಕ್ಷ್ಮಣರಿಂದೆ ತಂದೆಗೆ । ನಡಿಸಲುತ್ತರಕ್ರಿಯೆಗಳನು ಮಂದಾಕಿನೀತಟಕೆ ॥ ೩೫ ॥ ಮಿಂದುಮಂದಾಕಿನಿಯೊಳಾರಘು । ನಂದನನು ರೋದಿಸುತ ಕೊಟ್ಟನು । ತಂದೆಗೆ ತಿಲೋದಕವನಾವೇದೋಕ್ತವಿಧಿಯೊಳಗೆ ॥ ತಂದಗಾರೆಯ ಹಿಟ್ಟನೊಳು ತಾ । ನಂದು ಪಿಂಡಂಗಳನೆಸಗಿ ಕರ । ದಿಂದೆ ಹಾಸಿದ ದರ್ಭೆಯೊಳರಿಸಿದನಧಿಕ ಭಕ್ತಿಯಲಿ ॥ ೩೬ ॥ ಹರಿವ ಮಂದಾಕಿನಿಯ ತೀರದೊ । ಳು ರಘುನಂದನನಿರದೆ ತಂದೆಗ । ಪರದ ಕರ್ಮಂಗಳನು ಮಾಡಿ ಕುಟೀರಕೈತಂದು ॥ ಭರತನಂ ತೊಡೆಯಲ್ಲಿತಾಂ ಕು । ಳ್ಳಿರಿಸಿ ಕೇಳಿದ ನೇತಕೀಮನು । ಜರ ನೆರವಿಯಿಂದೀ ಗಿರೀಂದ್ರಕೆ ಬಂದೆ ನೀನೆನುತ ॥ ೩೭ ॥ ಪಿಡಿದು ರಾಮನ ಪಾದಕಮಲವ । ನೊಡನೆ ಬಿನ್ನೈಸಿದನು ಧಾರುಣಿ । ಯೊಡೆತನವು ಬೇಡೆನಗೆ ನೀನಂಗೀಕರಿಪುದಿಂದು ॥ ಮಡದಿಮಾತನು ಕೇಳ್ದು ತಂದೆಯು । ನುಡಿದನೀಪರಿ ಭಾನುವಂಶದೊ । ಳೊಡೆಯನಾಗುವನಣ್ಣನೆನ್ನುತ ನುಡಿದನಾಭರತ ॥ ೩೮ ॥ ನನಗರಸುತನ ಬೇಡವೆನದಿಂ । ದ ನಗರಿಗೆ ನಡೆತಂದು ಪಾಲಿಸ । ವನಿಯನೀಂ ವಿಪರೀತ ನಡೆದುದು ಕೈಕೆಯುಕ್ತಿಯಲಿ ॥ ವನಕೆ ನೀನೈತಂದೆ ಮಡಿದನು । ಮನುಜಪಾಲಕನಾಯ್ತು ನಿನಗೀ । ಘನವನೋವ್ಯಥೆಯೆನುತ ಪೇಳ್ದನು ಭರತಗೋಳಡುತ ॥ ೩೯ । ಅಡವಿಯಿಂದೈತಂದಯೋಧ್ಯೆಗೆ । ಪೊಡವಿಯನು ಪಾಲಿಪುದು ನಿನ್ನನು । ಬಿಡೆನು ನೀನೆನಗೊಲಿವವರೆಗೀ ವಿಪಿನದೊಳು ನಾನು ॥ ಕಡುಭಯಂಕರ ತಪವನಾಗಿಸು । ತಡವಿಯೊಳಗಾಂ ವಸಿಪೆ ನೆಂದೆನು । ತೊಡನೆ ರಾಮನಿಗೆಂದು ಬಿನ್ನಹಮಾಡಿದನು ಭರತ ॥ ೪೦ ॥ ಎನಲು ರಾಘವನಾಭರತನನು । ಜನಸಮೂಹದೊಳಂದೊಡಂಬಡಿ । ಸಿ ನಿಜಪಾದುಕೆಗಳನು ಕೊಟ್ಟು ಕರುಣಿಸಿ ಮನ್ನಿಸುತ ॥ ಜನಕ ನಪ್ಪಣೆಯಂತೆ ನಾನೀ । ವನದೊಳಗೆ ಹದಿನಾಲ್ಕುವರುಸವ । ತನಕ ವಾಸಿಸಿ ಬರುವೆನೀಂ ಪೋಗೆನುತ ಪೇಳಿದನು ॥ ೪೧ ॥ ನೀನು ಹದಿನಾಲ್ಕಬುದದನ್ತಂ । ಕಾನನದೊಳಿದ್ದಾಬಳಿಕ ಯೋ । ಧ್ಯಾನಗರಕೈತರದಿರಲು ಕಂಡವಧಿಪರ್ಯಂತ । ನಾನುಬೀಳುವೆ ನಗ್ನಿಯೊಳಗೆಂ । ದಾ ನೆರೆವ ಜನಮಧ್ಯದೊಳುಸುರಿ ।

ಮಾನವೇರನೊಡಗೊಂಡು ಪುರಕ್ಕೈತಂದನಾಭರತ । ೪೨ ॥ ಬಂದಯೋ ಧ್ಯಪ್ರರಿತಾಂ ಮನ । ನೊಂದು ಕಾಂತಿವಿಹೀನವಾಗುತ । ತಂದರಾಘವ ರಿಲ್ಲದಾ ಪುರವನು ವಿಲೋಕಿಸುತ । ಅಂದು ದುಃಖವ ತಾಳಲಾರದೆ । ನಂದಿಗ್ರಾಮಕೆ ಬಂದು ವರರಘು । ನಂದನನ ಬರುವಿಕೆಯ ನೀಕ್ಷಿಸು ತಿದ್ದ ನಾಭರತ ॥ ೪೪ ॥ ಪಾದುಕೆಗಳನು ಪೂಜಿಸುತ ಪರ । ಮಾದರ ಗೊಳಾ ಭರತನನುದಿನ । ವೈದೆತಾಂ ನಡಿಸಿದನು ರಾಜ್ಯವಿಚಾರವೆಲ್ಲವನು । ಆದಿಯಿಂದವೆ ಕೊಪ್ಪಿಸುತರಾ । ಮಾದಿಗಳ ಬರುವಿಕೆಯ ನೀಕ್ಷಿಸು । ತಾದರಣೆಯಿಂ ಸಲಹುತ್ತಿದ್ದನು ಸಕಲ ಮಾನವರ ॥ ೪೩ ॥ ನಗರದ ಸಮೀ ಪದೊಳಗಿಹುದೀ । ನಗವು ಬಂದನು ಭರತನಿಲ್ಲಿಗೆ । ಪಗಲಿರುಳೊಳೈತ ರುವರಾ ಪುರದಖಿಳಮಾನವರು ॥ ಸೊಗಸದಿಲ್ಲಿಹುದೆನುತ ಮನದೊಳು । ಬಗೆದು ಜಾನಕಿ ಲಕ್ಷ್ಮಣರೊಡನೆ । ನಗುತರಾಘವನಂದು ಪೇಳ್ದನು ಮನದ ಯೋಚನೆಯ ॥ ೪೫ ॥ ಬಳಿಕ ತಾಪಸರೈದಿ ರಾಮನ । ಬಳಿಗೆ ಪೇಳದರೊಟ್ಟುಗೂಡುತ । ತಿಳಿವುದೆಲೆರಾಘವನೆ ನಡೆತಂದಖಿಳರಾಕ್ಷಸ ರು ॥ ತಿಳಿವು ನಾನಾಚರಿಸುವ ತಪಂ । ಗಳನು ಕೆಡಿಸುತ ಹಿಂಸೆಗೈವ ರು । ತಳುವದೈತಂದವರ ಬಾಧೆಯ ಹರಿಸು ನೀನೆನುತ ॥ ೪೬ ॥ ಬರುತ ಮುನಿಗಳಸಹಿತ ಮಾರ್ಗದೊ । ಳರಸಿ ಲಕ್ಷ್ಮಣ ವೆರಸುತಾ ರಘು । ವರ ನು ಕಂಡನು ಕಂಗೊಳಸುವತ್ರಿಮುನಿಯಾಶ್ರಮವ ॥ ಪರಮಭಕ್ತಿಯೊ ಳಾ ಮುನೀಂದ್ರನ । ಚರಣಕಮಲಂಗಳಗೆರಗಿ ಸಾ । ದರದೊಳಂದರುಹಿ ದನು ವನಕ್ಕೈತಂದ ಸಂಗತಿಯ ॥ ೪೭ ॥ ತನಯನಂತೀಕ್ಷಿಸುತ ರಾಘವ । ನನು ಪಿಡಿದುಮನ್ನಿಸುತ ಅತ್ರಿಮು । ನಿನೆರೆಸಮುಚಿತ ಪೀಠದೊಳು ಕೂಡಿಸುತವರುಗಳನು ॥ ಮನವೊಲಿಯೆ ಭೋಜನವನಾಗಿಸಿ । ಜನಕ ಜಾತೆಯನಾಗಲೆ ಕಳುಹಿ । ದ ನನಸೂಯಾದೇವಿಯಬಳಿಗೆ ತಾನುಸತ್ಕ ರಿಸಿ ॥ ೪೮ ॥ ಬಂದೆರಗಿದಾ ಸೀತೆಯನು ಕರೆ । ತಂದು ತಾನಾಶೀರ್ವದಿಸು ತಾ । ನಂದವಿಂದನಸೂಯೆ ನುಡಿದಳು ಕೂಡಿಸಿಮಣೆಯೊಳು ॥ ಇಂದು ಮುಖಿಕೇಳಖಿಳ ಸುಖಗಳ । ನಂದುಳಿದು ಕಾನನಕೆ ನೀಂ ನಡೆ । ತಂದೆ ಗಂಡನಹಿಂದೆಹದಿಬದೆ ಧರ್ಮದಿಂದೆನುತ ॥ ೪೯ ॥

ಒಂಭತ್ತನೆಯ ಅಧ್ಯಾಯ ಸಂಪೂರ್ಣವು. ಪದ್ಯಗಳು ೪೯೦

ಹತ್ತನೆಯ ಅಧ್ಯಾಯಂ.

ಸೂಚನೆ ॥ ಪಂಚವಟಿಯೊಳಗಿರಲವನಿಸುತೆ ।
ಹೊಂಚುಹಾಕುತಲಿರದೆ ರಾವಣ ।
ವಂಚನೆಯೊಳೈತಂದ ಭಿಕ್ಷುಕರೂಪವನುತಳೆದು ।

ಬಳಿಕ ಜಾನಕಿಯತ್ರಿಪತ್ನಿಯು । ಬಳಿಯೊಳುತ್ತಮ ಪೀಠದೋ
ಳ್ಸಲೆ । ಕುಳಿತು ಬಿನ್ನವಿಸಿದಳು ಕೇಳೆಲೆತಾಯೆ ಸತಿಯರಿಗೆ ಇಳೆಯೊ
ಳಗೆ ಪತಿದೈವವೆನ್ನುತ । ತಿಳಿದವರು ಪೇಳುವರು ಗಂಡನ । ನುಳಿದನಾ
ರಿಗೆ ಸದ್ಗತಿಯದೆಲ್ಲಿಹುದು ಹೇಳೆನುತ ॥ ೧ ॥ ಪೊಡವಿಯಾತ್ಮಜೆ ನಿನ್ನನುಡಿ
ಯಿಂ । ದಡಿಗಡಿಗೆ ಸಂತಸವಹುದು ಪತಿ । ಬಡವನಾಗಲಿ ಭಾಗ್ಯಯುತನಾ
ಗಲಿ ಪುರದೊಳಿರಲಿ ॥ ಅಡವಿಯೊಳಿರಲಿ ಪಾಪಿಯಾಗಲಿ । ಕಡುಸುಕೃತಿಯಾ
ಗಿರಲಿ ಧರೆಯೊಳು । ಮಡದಿಯರು ದೇವರೆನುತಾತನ ತಿಳಿಯಬೇಕಮ್ಮ
॥ ೨ ॥ ಕುರುಡನಾಗಲಿ ಕುಂಟನಾಗಲಿ । ದುರುಳನಾಗಲಿ ಪತಿತನಾ
ಗಲಿ । ಪರಮಘಾತುಕನಾಗಲಂಗವಿಹೀನನಾಗಿರಲಿ ॥ ತರುಣಿಯರಿಗಾ
ಪತಿಯೆದೈವವು । ನಿರುತವಾತನ ಚರಣಪಂಕಜ । ವೆರಗಿ ಸೇವಿಸಬೇ
ಕೆನುತ್ತ ತಿಳುಹಿದಳನಸೂಯೆ ॥ ೩ ॥ ಆಲಿಸುತ್ತನಸೂಯೆ ಕರುಣದಿ ।
ಪೇಳಿದಾ ನುಡಿಗಳನು ಜಾನಕಿ । ತಾಳಿ ಸಂತೋಷವನು ಪೇಳಿದಳಾಕೆಗೆ
ನಮಿಸುತ ॥ ಕೇಳು ತಾಯೆ ಸತಿಯನು ಗಂಡನು । ಪಾಲಿಸುವನೀ
ಮೇದಿನಿಯೊಳತಿ । ಮೇಲೆನಿಪ ಸೌಖ್ಯಗಳನಿತ್ತತಿ ಸಂತಸದೊಳೆಂ
ದುಂ ॥ ೪ ॥ ಪತಿಯೆನಿಸಿದಾ ಸತ್ಯವಂತನ । ನತಿ ಭಕುತಿಯಿಂದೈದೆ
ಸೇವಿಸಿ । ನುತಿವಡೆದಳೀ ಭೂಮಿಯೊಳು ಸಾವಿತ್ರಿಪೂರ್ವದಲಿ ॥ ಪತಿಯ
ನಗಲದೆ ರೋಹಿಣಿಯು ಸಂ । ತತವು ಗಂಡನಸೇವಿಸಿದಳಾ । ಪತಿಪರಾ
ಯಣೆಯರ ಕಥಾವಳಿಗಳನು ಕೇಳ್ದಿಹೆನು ॥ ೫ ॥ ಪತಿಯಪಾದವೆ ಮು
ಖ್ಯಗತಿಯೆ । ನ್ನುತ ತಿಳಿದುನಡೆತಂದಿರುವೆನಾಂ । ಪತಿಯೊಡನೆನುತ
ಸೀತೆ ಬಿನ್ನವಿಸುತಿರಲನಸೂಯೆ ॥ ಅತಿ ಹರುಷದಿಂದೊಲಿದು ಕೊಟ್ಟ
ಳು । ವಿತತಮಂಗಳ ವಸ್ತುಗಳನಿರಿ । ಸುತ ಮಹೀಸುತೆಗಖಿಳವರ
ವಸ್ತ್ರಾಭರಣಗಳನು ॥ ೬ ॥ ಇತ್ತು ಜಾನಕಿ ಗಂಗರಾಗವ । ನುತ್ತ
ಮಾಂಗನೆ ಯತ್ರಿಮುನಿಸತಿ । ಮತ್ತೆ ನುಡಿದಳು ಸೀತೆ ನಿನ್ನ ವಿವಾಹ
ಚರಿತೆಯನು ॥ ಚಿತ್ತಕೊಪ್ಪುವ ರೀತಿಯಿಂದಲೆ । ಬಿತ್ತರಿಸಿ ಪೇಳೆನಗೆ
ಹಿತದೊಳೆ । ನುತ್ತ ಕೈವಿಡಿದೊಲಿದು ಮನ್ನಿಸಿ ಸಂತಸವಡಿಸುತ ॥ ೭ ॥

ನೀನರಿಯದಿಹುದಿದೆಯೆ ಲೋಕದೊ । ಳಾನರಿಯೆನೇ ನಿನ್ನ ಚರಿತವ ।
ಮೌನಿನಾರದನರಿಯನೇ ಭವದೀಯಮಹಿಮೆಯನು ॥ ಏನಹೇಳುವು
ದಂಬೆತ್ರಿಳೆಯದ । ಮಾನಿನಿಯರಂತೆನ್ನ ಕೇಳ್ವನಿ । ದಾನವಾವುದೊ
ಪೇಳ್ವೆನಾದೊಡಮೆಂದಳವನಿಸುತೆ ॥ ೮ ॥ ಕೇಳು ಜನನಿಯೆ ಜನಕ
ಭೂಪತಿ । ಪಾಲಿಸುತತಾಂ ಮೇದಿನಿಯನು ವಿ । ಶಾಲಕೀರ್ತಿಯನಾಂತು
ನಡೆದನು ಬಹಳ ಧರ್ಮದಲಿ ॥ ಆಲಿಸುತ ಶಾಸ್ತ್ರಂಗಳನು ಮುನಿ । ಪಾಲರ
ಪ್ಪಣೆಯಿಂದೆಸಗಿದನು । ಮೇಲೆನಿಪಯಾಗವನು ಸಂತಸದಿಂದ ಒಂ
ದುದಿನ ॥ ೯ ॥ ಜನಕಭೂವರ ನಧ್ವರಕೆನುತ । ವನಿಯನಂದುಳಿಸುತಿರೆ
ನೇಗಿಲ । ಕೊನೆಗೆನಾಂ ಸಿಲುಕಿದೆನು ಬಹು ಸಂತೋಷವನುತಾಳ್ದು ॥
ಮನುಜಪಾಲಕ ತನ್ನ ತೊಡೆಯೊಳ । ಗೆನಲಿದೆನ್ನ ನಿರಿಸುತ ನನ್ನಯ ।
ತನುಜೆನೀನೆಂದೊರೆದು ಸೀತೆಯೆನುತ್ತ ಪೆಸರಿಟ್ಟ ॥ ೧೦ ॥ ನುಡಿದು
ದಶರೀರದ ನುಡಿಯು ಕೇ । ಳ್ಪೊಡವಿಪಾಲಕ ನಿನ್ನ ಸುತೆಯೀ । ಹುಡು
ಗಿರಕ್ಷಿಸು ನೀನಿವಳ ನಿಜಸುತೆಯವೋಲೆನುತ್ತ ॥ ಒಡನೆಬಂದರಮನೆಗೆ
ಕೊಟ್ಟನು । ಮಡದಿ ಕೈಯೊಳು ನನ್ನನುಪೊರೆದ । ಳಡಿದಸಂತಸದಿಂದೆ
ನಲಿಸಿಸುಮೇಧೆ ದಿನದಿನದಿ ॥ ೧೧ ॥ ಪಡೆದುನನಗಾಹಾರವನು ಕೊ ।
ಟ್ಟು ದಿನದಿನದೊಳು ಮೇಲುಮೇಲೆನಿ । ಸಿದ ದುಕೂಲಂಗಳನುಡಿಸುತಾ
ನಂದವನುತಳೆದು ॥ ಸುದತಿನನ್ನನು ನಗಿಸಿಲಾಲಿಸಿ । ಸದಯದಿಂದೀಕ್ಷಿ
ಸುತ ನೆರೆಸಲ । ಹಿದಳು ಮುದ್ದಿಸಿ ನುಡಿಸಿ ಕೂಡಿಸಿ ತನ್ನ ತೊಡೆಯೊಳ
ಗೆ ॥ ೧೨ ॥ ಭೂತಳಾಧಿಪ ಜನಕ ನೆನ್ನನು । ಪ್ರೀತಿಯಿಂದುರೆ ಪೋಷಿ
ಸುತ್ತಿರ । ಲೀ ತೆರದೊಳಾದವೆನಗೇಳು ವರುಸಗಳಾಬಳಿಕ ॥ ಈ ತರಳೆ
ಗೆ ವಿವಾಹವನು ತಾ । ನಾತುರದೊಳಾಗಿಸುವೆ ನೆಂದೆನು । ತಾತಯೋಚಿ
ಸಿ ಹುಡುಕಿಸಿದ ನೀಭೂಮಿಯೊಳುವರನ ॥ ೧೩ ॥ ವರನಕಾಣದೆ
ಜನಕ ಭೂಪತಿ । ವರುಣನಿತ್ತ ಮಹೇಶಚಾಪವ । ಮುರಿವ ಬಾಹು
ಜವೀರರೀ ಮಿಥಿಲಾಪುರಕೆಬಂದು ॥ ಹರನ ಕೋದಂಡವನು ಭಂಗಿಸಿ ।
ವರಿಸುವುವು ಭೂಸುತೆಯನೆನ್ನುತ । ಬರೆಯಿಸಿದ ನವನೀಪತಿಗಳಿಗೆ
ಭವ್ಯಲಿಖಿತಗಳ ॥ ೧೪ ॥ ಧರಣಿಮಂಡಲದೊಳಿಹ ರಾಜಸು । ತರು
ಧರಣಿಪಾಲಕರು ರಾತ್ರಿಂ । ಚರರು ಮೊದಲಹ ಸಕಲ ಶೂರರು ಕೇಳಿ
ಸಂಗತಿಯ ॥ ವರಿಸಬೇಕೆಂದೆನುತ ಬಂದು ನ । ಗರಕೆ ಮುರಿಯದೆ ಶೈ
ವಚಾಪವ । ಭರದೊಳವರಂ ದೈದಿದರು ನಿಜನಗರಗಳಗಿರದೆ ॥ ೧೫ ॥
ಜನಕ ನೀಮಹಿಯಲ್ಲಿ ಕಾಣದೆ । ನನಗೆ ಗಂಡನ ನಂದು ಚಿಂತಿಸಿ ।

ಮನವೆ ಪೊಂದಿದ ನವನಿಪಾಲಕರೊಳವಮಾನವನು ॥ ತನುಜೆಯುರಪಡೆ
ದಾವನುಂ ನಿಂ । ದ್ಯನಿಗೆ ಸಿರಿಯೊಳ್ಸಮನೆಸಿಸಿದೊಡ । ಮೆಣಿಸಲ್ಕೆದು
ವನತ್ತೆ ತಾನಸಮಾಶವಧರಣಿಯೊಳು ॥ ೧೬ ॥ ಕೆಲವುಕಾಲಕಮೋಕ್ಷ್ಯೆ
ಯಿಂದೆ ಮಿ । ಥಿಳೆಗೆ ಬಂದರು ರಾಮಲಕ್ಷ್ಮಣ । ರೊಲಿಸುತಾ ಕೌಶಿಕನ
ಸಧ್ವರಶಾಲೆಗೊಂದುದಿನ ॥ ನಲಿಮುಪೂಜಿಸಿ ಮನ್ನಿಸುತ್ತಾ । ಬಳಿಕ
ಮುನಿಪೇಳ್ದಂತೆ ರಾಮನಿ । ಗೊಲಿದು ಶಿವಧನುವನ್ನು ತೋರಿದನಾ
ಜನಕನಂದು ॥ ೧೭ ॥ ಮುನಿಪ ನಾಣತಿಯಿಂದೆ ಶಿವಧನು । ವನು ತೆಗೆ
ದುಕೊಂಡಾಗ ರಾಮನು । ಜನರಮಧ್ಯದೊಳಂದು ಟಂಕ್ರಿಯನೆಸ
ಗುತಕೂಡೆ ॥ ಧನುವ ನಿಕ್ಕಡಿಗೈವನತಿಭರ । ದೆ ನಲಿದಾಗಳೆ ಸೀತೆಯು
ನು ಕೊಡು । ವೆನು ರಘುವರಂಗೆನುತ ಪೇಳ್ದನು ಜನಕನಾಮುನಿಗೆ
॥ ೧೮ ॥ ತಂದೆಯಪ್ಪಣೆಯಿಲ್ಲದಾ ರಘು । ನಂದನ ಮದುವೆಯಾಗದಿರೆ
ತಾ । ನಂದು ಕರೆಸುತ ಭೂಮಿಪಾಲಕ ಜನಕದಶರಥನ ॥ ಸಂದ ಶುಭ
ಲಗ್ನದೊಳು ಸಂತಸ । ದಿಂದೆ ರಾಮನಿಗಿತ್ತು ಸನ್ನನು । ಮಂದಿರದೊ
ಳಾಗಿಸಿದ ಭಾಪನೆ ಮದುವೆಯನುಕೂಡೆ ॥ ೧೯ ॥ ಆದಿನದೊಳೇ ಲಕ್ಷ್ಮ
ಣನಿಗಾ । ಮೇದಿನೀಪತಿ ಯೂರ್ಮಿಳೆಯನು ವಿ । ನೋದದಿಂದಲೆ ಕೊಟ್ಟು
ಮದುವೆಯನಾಗಿಸಿದನೊಲಿದು ॥ ಆದರಿಸಿ ಮಾಂಡವಿಯು ನಿತ್ತನು ।
ಸಾರುತ ಲಗ್ನವನು ಭರತಂ । ಗಾದಿನದೆ ಶತ್ರುಘ್ನಗಾಶ್ರುತ ಕೀರ್ತಿ
ಯನುಕೊಟ್ಟ ॥ ೨೦ ॥ ಇಂತು ನಾಲ್ಕು ಮದುವೆಗಳನು ಬಹು । ಸಂತ
ಸದೊಳಾಗಿಸುತ ಯೋಧ್ಯೆಗೆ । ಚಿಂತಿಸದೆ ಕಳುಹಿದನು ಪತಿಸಹಿತನ್ನ
ನಾಜನಕ ॥ ಪಿಂತೆನಡೆದಾ ಮದುವೆಸುದ್ದಿಯು । ನಿಂತು ನಿಮ್ಮಯು
ಬಳಿಯೊಳಾಂತಿಳ । ದಂತೆ ಬಿನ್ನವಿಸಿದೆನೆನುತ್ತವನೀಸುತೆ ನುಡಿದಳು
॥ ೨೧ ॥ ಕೇಳಿ ಸಂತಸಪಡೆದು ಮನ್ನಿಸಿ । ಲಾಲಿಸುತ್ತವನೀಸುತೆಯನು
ವಿ । ಶಾಲಲೋಚನೆಕಳುಹಿಸಿದಳನಸೂಯೆ ಪತಿಯೆಡೆಗೆ ॥ ಬಾಲೆ ಜಾನ
ಕಿ ತಾನುಪಡೆದತಿ । ಮೇಲೆನಿಪ ಘನಮಂಗಳಂಗಳ । ನಾಲಿಯಿಂದೀಕ್ಷಿ
ಸುತ ಕಳೆದನು ರಾತ್ರಿಯನುರಾಮ ॥ ೨೨ ॥ ಬಳಿಕ ಮಾರನೆದಿನ
ದುದಯದೊಳು । ತಳೆದುಮುನಿಪಾಲಕನ ನೇಮವ । ಬಳೆದಸಂತಸದಿಂ
ದೆರಗಿ ಸತಿ ಸೋದರರಸಹಿತ ॥ ಬಳಸಿದಾಮುನಿವರರ ವಚನಂ । ಗಳನು
ಕೇಳುತ ಬಂದು ಹೊಕ್ಕನು । ತಳುವದಂದಾದಂಡಕಾರಣ್ಯವನು । ರಾಘ
ವನು ॥ ೨೩ ॥ ಮುನಿಗಳಾಶ್ರಮಗಳೊಳು ರಘುವೀ । ರನು ಸತೀ ಸೋ
ದರರೊಡನೆ ಭೋ । ಜನವನಾಂತವರಿಂದೆ ಪಡೆದಾಶೀರ್ವಚನಗಳನು ।

ಮನುಜರಿಲ್ಲದ ಘೋರತರಕಾ | ನನದೊಳೈತರುತಂದು ಕಂಡನು | ಘನಭ
ಯಂಕರನಪವಿರಾಧನನಾವನವನತುವೆ ‖ ೨೪ ‖ ಇವರ ನೀಕ್ಷಿಸುತಾ
ವಿರಾಧನು | ತವಕದಿಂನ್ಯೈತಂದು ಸೀತೆಯ | ನವಸರದೆ ಪಿಡಿದೆತ್ತಿಕೊಂ
ಡಿರಿಸುತ್ತ ಕಾಂಕುಳೊಳು ‖ ಇವಳೆನಗೆ ಭಾರ್ಯೆಯುಹಳೀಗಳ್ | ಬವ
ರದೊಳು ಸಂಹರಿಸಿನಿಮ್ಮನು | ಸವಿದು ತಿನ್ನುವೆ ನಾರುನೀವೆನುತಂದು
ಗರ್ಜಿಸಿದ ‖ ೨೫ ‖ ಕೊಂದುತಿನ್ನುವೆ ನಿಮ್ಮನೆಂದೆನು | ತಂದು ಹುಂಕ
ರಿಸುತ ವಿರಾಧನು | ಬಂದು ಮೇಲ್ಬೀಳುತಿರಲಾ ರಘುನಂದನನು ಮು
ಳಿದು ‖ ಕೊಂದು ಗುಳಿಯೊಳುರುಳ್ಚಿದನವನ | ಮುಂದೆ ಲಕ್ಷ್ಮಣನಡುವೆ
ಜಾನಕಿ | ಹಿಂದೆ ರಾಘವ ನೀಕ್ರಮದೊಳೈತಂದ ರಡವಿಯುಲಿ ‖ ೨೬ ‖
ಬರುತ ಶರಭಂಗಾಶ್ರಮವ ಪೊ | ಕ್ಕರು ಭಕುತಿಯಿಂದಾ ಮುನೀಂ
ದ್ರನ | ಚರಣಪಂಕಜಕೆರಗಿ ತಳೆದಾಶೀರ್ವಚನಗಳನು ‖ ಕರುಣ
ದಿಂದಾ ಮುನಿಪನಂದಾ | ದರಿಸಿ ಕೊಟ್ಟಾಹಾರವನು ಪಡೆ | ದರವನೀ
ಸುತೆ ರಾಮಲಕ್ಷ್ಮಣ ರಾಕುಟೀರದೊಳು ‖ ೨೭ ‖ ಬಳಿಕ ರಾಘವನ
ಪ್ಪಣೆಯ ನಾ | ಗಳೆ ಪಡೆದು ಶರಭಂಗಮುನಿಯು | ಜ್ವಲಿಸು ವಗ್ನಿಗೆ
ತನ್ನ ದೇಹವ ನಾಹುತಿಯನೆಸಗಿ ‖ ಬಳಗೆಬಂದ ವಿಮಾನದೊಳು ತಾಂ |
ಕುಳಿತು ಪೋದನು ಬ್ರಹ್ಮಲೋಕಕೆ ‖ ಜಲಜಸಂಭವನಲ್ಲಿ ಶರಭಂಗ
ನನು ಮನ್ನಿಸಿದ ‖ ೨೮ ‖ ಹರಿಣಕೇಸರಿ ದಂತಿವನ ಸೂ | ಕರವಲೀ
ಮುಖ ಋಕ್ಷಗಂಡಕ | ಶರಭಶಾರ್ದೂಲಗಳ ನೋಡುತ ದಕ್ಷಿಣದಿಶೆ
ಯೊಳು ‖ ಚರಣದಿಂದಲೆ ನಡೆದು ವನದೊಳು | ಬರುತನಾನಾ ಪಕ್ಷಿನಿ
ನದವ | ನರಿಯುತ ಸುತೀಕ್ಷ್ಣಮುನಿಯಾಶ್ರಮವ ನವರೈದಿದರು
‖ ೨೯ ‖ ಮುನಿಸುತೀಕ್ಷ್ಣರ ಚರಣಪಂಕಜ | ಕೆ ನಮಿಸಿ ಪಡೆದು
ಭೋಜನವನಾ ‖ ಮುನಿಪನಿಂದರಿತಾ ವನದ ವಿವರಂಗಳೆಲ್ಲವನು ‖
ಮನದಿ ಸಂತಸತಾಳುತಲ್ಲಿಂ | ದೆ ನಡೆತಂದರು ರಾಮ ಲಕ್ಷ್ಮಣ | ರು
ನೆಲದಣುಗಿಯುಸಹಿತ ಮುನಿಪಾಲಕರು ಟಜಗಳಿಗೆ ‖ ೩೦ ‖ ಕೆಲವು
ಕಡೆಯೊಳು ಮೂರುತಿಂಗಳು | ಕೆಲವುಕಡೆಯೊಳು ನಾಲ್ಕುತಿಂಗಳು |
ಕೆಲವುಕಡೆಯೊಳಗಾರು ತಿಂಗಳು ವಾಸಿಸುತ ಮುಂದೆ ‖ ಕೆಲವುಕಡೆ
ಯೊಳಗೆಂಟು ತಿಂಗಳು | ಕೆಲವುಕಡೆಯೊಳು ಹತ್ತುತಿಂಗಳು | ಕೆಲವು
ಕಡೆಗಳೊಳೊಂದುವರುಸವು ಮಿದ್ದರವರಂದು ‖ ೩೧ ‖ ಮುನಿಗಳಾಶ್ರ
ಮಂಗಳೊಳು ವಾಸಿಸು | ತ ನಿಜಸತಿ ಸೋದರರೊಡನೆ ರಾ | ಮನಿರು
ತಿರೆ ಹದಿಮೂರುವರುಸಗಳಾದವಾಬಳಿಕ ‖ ವನದೊಳಾ ನದಿಸರಸಿ

ಗಿರಿಗಳ | ನು ನೆರೆನೋಡುತ ಬಂದು ಹೊಕ್ಕರು | ಮುನಿಸುದರ್ಶನನೆ
ನಿಪ ಗಸ್ತ್ಯನ ತಮ್ಮನಾಶ್ರಮವ ‖ ೩೨ ‖ ಪರಮ ಭಕ್ತಿಯೊಳಾ
ಸುದರ್ಶನ | ಚರಣಪಂಕಜಕೆರಗಿ ಸತಿಸೋ | ದರರ ಸಹಿತಾ ಮುನಿ
ಪನಿಂದಾಶೀರ್ವಚನತಳೆದು ‖ ಕರುಣಿಸಿತ್ತಾ ಹಾರವನು ಪಡೆ | ದಿರುತ
ರಾತ್ರಿಯನಲ್ಲಿ ಕಳೆದಾ | ತುರದೊಳೈದಿದರವರಗಸ್ತ್ಯಮುನೀಂದ್ರ
ರಾಶ್ರಮವ ‖ ೩೩ ‖ ಬಂದಗಸ್ತ್ಯಮುನೀಂದ್ರನಾಶ್ರಮ | ಕಂದು
ಸತಿಸೋದರರಸಹಿತೊಲ | ವಿಂದೆ ಮುನಿಪಾಲಕನ ಪದಪಂಕಜಗಳಿಗೆ
ಮಣಿಯೆ ‖ ಚಂದದಿಂದಾಶೀರ್ವದಿಸಿ ಸುತ | ನಂದದೊಳು ರಾಘವನನಧಿ
ಕಾ | ನಂದದಿಂ ಬಿಗಿಯಪ್ಪಿಯುಚಿತಾಸನದೆ ಕೂಡಿಸಿದ ‖ ೩೪ ‖ ವನಜ
ಸಂಭವನೆಡೆಯನಗ್ನಿಯ | ಮನೆಯನಾವಿಷ್ಣುವಿನ ಮಂದಿರ | ವನು
ದಿವಾಕರನಿಕ್ಕೆಯ ನೆಸೆವ ಚಂದ್ರನನೆಲೆಯನು ‖ ಧನದನಾವಾಸವನು
ವಿಬುಧೇಂ | ದ್ರಸಿರುವೆಡೆಯನು ಗಂಧವಹನಸ | ದನವನು ವರವಿಧಾ
ತಧಾತರೆಡೆಗಳ ನೀಕ್ಷಿಸುತ ‖ ೩೫ ‖ ವಿನುತ ಧರ್ಮಸ್ಥಾನವನು
ವಸು | ವಿನೆಡೆಯನು ಷಣ್ಮುಖನ ಮಂದಿರ | ವನು ಭಗನಸೀಮೆಯನು
ಗಾಯತ್ರೀನಿಶಾಂತವನು ‖ ಘನವರುಣ ನಾವಾಸವನನಂ | ತನಮನೆ
ಯನಾನಾಗ ರಾಜಭ | ವನವ ನೆಸೆವಾಪಾಶಹಸ್ತನ ನೆಲೆಯನೋಡಿದ
ರು ‖ ೩೬ | ಮುನಿಯಗಸ್ತ್ಯನವರನು ಮನ್ನಿಸಿ | ಘನದಯಾರಸದಿಂ
ದುಪಚರಿಸಿ | ಮನವೊಲಿಯೆ ಭೋಜನವನಾಗಿಸಿ ರಾಘವೇಂದ್ರನಿಗೆ ‖
ವಿನುತ ಶಸ್ತ್ರಾಸ್ತ್ರಂಗಳನು ಮೋ | ಲೆನಿಪ ವರತೂಣೀರಖಡ್ಗಗ | ಳ
ನೊಲಿದಿತ್ತನು ನಮಿಸಿಪೋದರು ಮುನಿಗರಣ್ಯದಲಿ ‖ ೩೭ ‖ ಮುಂದೆ
ರಾಘವ ನಡುವೆ ಜಾನಕಿ | ಹಿಂದೆ ಲಕ್ಷ್ಮಣ ರಿಂತವರು ನಡೆ | ತಂದು
ಪೊಕ್ಕರು ಪಂಚವಟಿಯನು ವಿಸ್ಮಯವನಾಂತು ‖ ಬಂದು ನಮಿಸಿ
ಜಟಾಯುದಶರಥ | ನಂದನಂಗರುಹಿದನು ನಿಮ್ಮಯ | ತಂದೆಗಾಂ ಸಖ
ನೆನುತ ಲೋಕದ ವಿವರವೆಲ್ಲವನು ‖ ೩೮ ‖ ಹರಿವ ಗೋದಾವರಿಯ
ತೀರದೊ | ಳಿರುವ ಪಂಚವಟಿಯೊಳು ಪಕ್ಷಿಗ | ಳರಸನೆನಿಪ ಜಟಾ
ಯುಸಂತಸವಡಿಸುತವರುಗಳ ‖ ಇರುಳು ಹಗಲುಂ ರಾಮ ಲಕ್ಷ್ಮಣ |
ರಿರದ ವೇಳೆಯೊಳಾ ಕುಟೀರದೆ | ಪೊರೆವುತಿರ್ದನು ಸೀತೆಯನು ಜಾಗ್ರತೆ
ಯೊಳೆಡೆವಿಡದೆ ‖ ೩೯ ‖ ಇಂತಿರಲು ಶೂರ್ಪನಖಿತಾಂ ಸಮ | ನಂತರ
ದೊಳೊಂದುದಿನ ಬಂದ | ತ್ಯಂತ ಕಾಮಾತುರದೆ ರಾಮನ ವರಿಸಬೇಕೆ
ನುತ ‖ ಸಂತಸದೆ ಪೀಡಿಸಲು ತಾನವ | ಳಂತರಂಗಕೆ ಸಿಲುಕದಟ್ಟಿದ |

ನುತು ಲಕ್ಷ್ಮಣನೆಡೆಗೆ ವರಿಸಾತನನು ನೀನೆನುತ ॥ ೪೦ ॥ ಬಂದು
ಲಕ್ಷ್ಮಣನೆಡೆಗೆ ನೀನೆಂಲಿ । ಸೆಂದು ಪೀಡಿಸಲೊಪ್ಪದಾಕೆಯು । ನಂದು
ಕಳುಹಿದನಣ್ಣನಂ ವರಿಸೆನುತ ಸಂತವಿಸಿ ॥ ಕೊಂದು ಸೀತೆಯು ಸಿಂದು
ವರಿಸುವೆ । ನೆಂದೆನುತ ಶೂರ್ಪನಖಿ ನಡೆತರ । ಲಂದು ಲಕ್ಷ್ಮಣ ಕಡಿದ
ನವಳಾ ಮೂಗು ಕಿವಿಗಳನು ॥ ೪೧ ॥ ಅಳುತ ದಶಕಂಧರನಸೋದರಿ ।
ಬಳಿಕ ಬಂದಳು ಖರನಸನ್ನಿಧಿ । ಗಳುಕದಬ್ಬರಿಸುತ್ತ ಕಾನನದಲ್ಲಿ ನಡೆ
ತರುತ ॥ ತಿಳುಹುತಜನ ಸ್ಥಾನದಿಂದಾ । ಗಳೆ ಖರಾಸುರನನ್ನು ಬವರ
ಕೆ । ಕಳುಹಿಕೊಟ್ಟಳು ರಾಘವನಮೇಲಧಿಕ ರೋಷದಲಿ ॥ ೪೨ ॥ ಖರನು
ಕೇಳ್ದತಿ ರೋಷವನು ತಾ । ಳ್ದು ರಣಕೋವಿದರೆಂದೆನಿಪ ಘನ । ಬಿರುದ
ನೈದಿದ ದೂಷಣತ್ರಿಶಿರಾದಿಗಳ ಸಹಿತ ॥ ತ್ವರಿತದೊಳು ಹದಿನಾಲ್ಕು
ಸಾಸಿರ । ದ ರಜನೀಚರರಿಂದೆ ಬಂದನು । ಧುರದೆ ರಾಮನಕೊಲುವೆ
ನೆನ್ನುತ ಸಂಚಪಟಿಗಾಗಿ ॥ ೪೩ ॥ ಒಡನೆ ಸೀತಾಲಕ್ಷ್ಮಣರ ನಾ । ಯು
ಡವಿಯೊಳಗಿಹ ಗುಹೆಗೆಕಳುಹಿಸಿ । ಕಡಿದನಾ ಹದಿನಾಲ್ಕುಸಾಸಿರ ಸೈ
ನ್ಯದಾಭಟರ ॥ ಬಿಡದೆ ದೂಷಣ ತ್ರಿಶಿರಖರರನು । ಬಡಿದು ತಾಂ ಕಳು
ಹಿಸಿದನಂತಕ । ನೆಡೆಗೆ ಕಾಳಗದಲ್ಲಿ ರಾಘವನತಿ ವಿನೋದದಲಿ ॥ ೪೪ ॥
ತಿಳಿಯುತ ಜನಸ್ಥಾನದೊಳು ಕಡು । ಗಲಿಗಳೆಂದೆನಿಪಾ ಖರಾದಿಗ । ಳಳಿ
ದುದನು ಹದಿನಾಲ್ಕುಸಾಸಿರ ಸೈನ್ಯಮಡಿದುದನು ॥ ಇಳೆಯಣುಗಿಯಾ
ರೂಪುರೇಖಾ । ವಳಿಯು ಕಿವಿಮೂಗುಗಳ ಕಳೆದುರೆ । ಯುಳುವ ಸೋದ
ರಿ ಯಿಂದೆ ದಶಕಂಧರನು ಖತಿಗೊಂಡ ॥ ೪೫ ॥ ಬಂದು ಮಾರೀಚನೆಡೆ
ಗಾ ದಶ । ಕಂಧರನೊಡಂಬಡಿಸು ತಾತನ । ನಂದು ರಥದೊಳು ಕೂಡಿ
ಸಿಕೊಳುತ ರಾಮನಾಶ್ರಮಕೆ ॥ ಬಂದು ದೂರದೊಳಿಳಿದು ನಿಜರಥ ।
ದಿಂದೆ ನೀಂ ಮಾಯಾಮೃಗದರೂ । ಪಿಂದೆ ಸೀತೆಯಮುಂದೆ ಸಂಚರಿಸೆ
ನುತ ಪೇಳಿದನು ॥ ೪೬ ॥ ಅತಿಮನೋಹರ ಕಾಂಚನಮೃಗದ । ಸುತನು
ವನು ತಾಂ ಪಡೆದು ಧರಣೀ । ಸುತೆಯಮುಂಗಡೆ ತಿರುಗುತಿರೆ ಮಾರೀ
ಚನಡಿಗಡಿಗೆ ॥ ಪತಿಗೆಪೇಳ್ದಳು ಕಂಡು ವೈದೇ । ಹಿ ತಳುವದೆ ನೀನೀ
ಮೃಗವ ನೀ । ಗ ತರಬೇಕಿಹುದೆನಗಿದರಮೇಲಾಶೆ ಕೇಳೆನುತ ॥ ೪೭ ॥
ತೆಗೆದುಕೊಂಡಾ ಧನುವಬೇಗನೆ । ಮೃಗದಹಿಂಗಡೆ ನಡೆದು ನಡೆದಾ । ಶು
ಗದೆ ಕಡೆಗಿಕ್ಕಿದನು ದಶರಥರಾಮನಾ ಮೃಗವನು ॥ ಮೃಗದವೇಷವನು
ಳಿದು ಬಿದ್ದನು । ಗಗನಕೆ ನೆಗೆದು ವನದೊಳಾ ಧರ । ಣಿಗೆ ಖಳನು ಹಾ
ಸೀತೆ ಹಾ ಲಕ್ಷ್ಮಣ ಯೆನುತನುಡಿದು ॥ ೪೮ ॥ ಆನುಡಿಯ ಕೇಳ್ದೊಡನೆ

ಜಾನಕಿ । ದೀನಳಾಗುತ ಪೋಗುಲಕ್ಷ್ಮಣ । ನೀನು ರಾಮನನೆರವಿಗೆ ನ್ನುತ ನುಡಿಯುಲೊಪ್ಪದಿರೆ ॥ ಮಾನಿನೀಮಣಿ ಕೇಳಲಾರದ। ಹೀನವಚನಗಳಿಂದೆ ಪಳಿದಳು । ಕಾನನದೊಳಂದಳುತ ಮನಬಂದಂತೆ ಲಕ್ಷ್ಮಣನ ॥ ೪೯ ॥ ನಿನ್ನಸಂಗತಿ ನನಗೆ ಗೊತ್ತಿಹುದು । ದೆನ್ನವರಿಸಲು ಬೇಕೆನುತ ನೀ । ನೆನ್ನ ಹಿಂದೆಯೆ ಬಂದಿರುವೆ ಕಾನನಕೆ ಪುರದಿಂದೆ ॥ ನಿನ್ನನು ಭರತ ಕಳುಹಿಕೊಟ್ಟಿಹ । ನುನ್ನತದ ಸಂಕೇತದೊಳಗೆಂ । ದೆನ್ನುತ ನುಡಿದಳಾಮಹೀಸುತೆ ಮುಳಿದು ನಿಂದಿಸುತ ॥ ೫೦ ॥ ನೀನು ಬಗೆದಂತಾಗಲಾರದು। ನಾನು ಸಾಯುವೆನೆಂದು ಜಾನಕಿ । ಹೀನವಚನಗಳಿಂದೆ ನಿಂದಿಸಲಂದು ಮೈದುನನ ॥ ಆ ನುಡಿಗಳನು ಕೇಳಲಾರದೆ । ಮಾನಿನಿಯನುಳಿದಾಗ ನಡೆದನು । ಕಾನನದೊಳಣ್ಣನಬಳಿಗೆ ಸೌಮಿತ್ರಿದುಃಖಿಸುತ ॥ ೫೧ ॥ ಧರಿಸಿ ಕಾಷಾಯಾಂಬರಂಗಳ । ನುರುತರದ ರುದ್ರಾಕ್ಷಸರಗಳ । ನಿರಿಸಿ ಕೊರಳೊಳು ವಿನುತ ದಂಡ ಕಮಂಡಲಂಗಳನು ॥ ಕರದೊಳಾಂತತಿ ಮೇಲೆನಿಪ ಜಪ । ಸರವ ಪಿಡಿದೈತಂದನಾ ದಶ । ಶಿರನು ಸೀತೆಯಬಳಿಗೆ ಮಾಯಾಭಿಕ್ಷು ರೂಪದಲಿ ॥ ೫೨ ॥ ಹರಹರ ಮಹಾದೇವ ಯೆನ್ನುತ। ಭರದೊಳಾಗಲೆ ಭಿಕ್ಷುವೇಷವ । ಧರಿಸಿದಾ ದಶಶಿರನು ಬಂದಾಪರ್ಣಮಂದಿರಕೆ ॥ ಕರುಣೆಯಿಂದಲೆ ಕೇಳ್ದನೆಲೆ ಸುಂ । ದರೀಮಿ ನೀನಾರಿಲ್ಲಿನೀನೇ । ಕಿರುವೆಯೊಬ್ಬಳೆ ನಿನ್ನ ಪೆಸರೇನೆನಗೆ ತಿಳುಹೆನುತ ॥ ೫೩ ॥ ರಾಜಹಂಸಗಮನೆ ವರದ್ವಿಜ । ರಾಜಮುಖಿ ರಾಜೀವನಯನೆ ಸ । ರೋಜಕರಯುಗೆ ಪನ್ನಗಾಭ ಸುವೇಣಿ ಪಿಕವಾಣಿ ॥ ರಾಜಿತ ಕನಕಕುಂಭ ಕುಚೆ ಪಂ । ಕೇಜಗಂಧಿಯೆ ಕೇಳು ನೀನು ವಿ । ರಾಜಿಸುವೆ ರತಿಯಂತೆ ಕಾಮೋದ್ರೇಕವನುನೀಡಿ ॥ ೫೪ ॥ ಮಾರಸತಿಯೋ ವಾಣಿಯೋ ದನು । ಜಾರಿಯ ಮಡದಿಯೋ ಮಹೇಂದ್ರನ। ನಾರಿಯೊ ಅಂತಲ್ಲದಿರೆ ಶಿವನರಸಿಯೋ ನೀನು ॥ ನಾರಿಯರೊಳುತ್ತಮಳೆನಿಸುವೆ ವಿ । ಚಾರಿಸಲು ನಿನ್ನಂದದೊಳೆಸೆವ। ನಾರಿಯನುನಾಂ ಕಾಣೆನು ಚತುರ್ದಶ ಭುವನಗಳಲಿ ॥ ೫೫ ॥ ಸುರನರೋರಗ ಯಕ್ಷರಾಕ್ಷಸ। ಗರುಡ ಗುಹ್ಯಕ ಗಂಧರುವ ಕಿ। ನ್ನರವಿನುತ ವಿದ್ಯಾಧರಾಪ್ಸರ ಸಿದ್ಧಸಾಧ್ಯರಲಿ ॥ ಮೆರೆವಕೋಮಲೆಯರನು ನಾಂ ನೋ। ಡಿರುವೆನವರೊಳು ನಿನ್ನ ಪೋಲ್ದೆಸೆ। ವ ರಮಣೀಮಣಿಯಿಲ್ಲ ನೀನಾರೆನಗೆ ತಿಳುಹೆಂದ ॥ ೫೬ ॥ ಜೊನ್ನಮಂ ಕರೆವುದೆಲೆ ಕಾಮಿನಿ । ನಿನ್ನನಗೆ ಮಿಂಚನು ರೆಪಳವುದು । ನಿನ್ನ ನೋಟವುಕಣ್ಣುತಾವರೆಯೆಸಳ ನಿಂದಿಪ್ಪುದು ॥ ನಿನ್ನ ಮುಖವನು ಕಂಡುಚಂದಿರ । ನಿನ್ನೆಗಂ ಕ್ಷಯದಿಂದೆನರಳುವ । ನಿನ್ನ

ಚಂದವೆನಾರು ಬಣ್ಣಿಪರೀ ಮಹೀತಲದಿ ॥ ೫೭ ॥ ನಿನ್ನ ಕುಚಗಳು ತಾಲಫಲದಂ । ತುನ್ನತಿವಡೆ ದಿಹುವೆಲೆ ಭಾಮಿನಿ । ನಿನ್ನತೊಡೆಗಳು ಗಜದಕುಂಡವ ಪೋಲುತಿರ್ಪುವು ॥ ನಿನ್ನಪಲ್ಗಳು ಕುಂದಕುಟ್ಮಲ । ವ ನ್ನು ಹೋಲುತಿಹುವೆಲೆ ಕಾಮಿನಿ । ನಿನ್ನ ನೋಡಿದನನಗೆ ಕಾಮೋ ದ್ರೇಕ ಹೆಚ್ಚಿಹುದು ॥ ೫೮ ॥ ಆರುನೀನೆಲೆ ರಮಣಿ ಬರಿದೇ । ಕಾರು ಮಿಲ್ಲದರಣ್ಯದಲ್ಲಿಹೆ । ಯಾರು ನಿನ್ನಯುಗಂಡ ನಾವುದುನಿನ್ನಯು ನಿವಾಸ ॥ ಆರು ನಿನ್ನಯು ತಂದೆ ಬಂಧುಗ । ಳಾರು ನೀನೇಕಿಲ್ಲಿರುತಿಹೆ ಕು । ಟೀರ ದೊಳೆನಗೆ ವಿವರಿಸೆಂದಾ ಯತಿಯುಕೇಳಿದನು ॥ ೫೯ ॥ ಕಪಟಯತಿಯೆಂ ದೆನ್ನುತ ತಿಳಿಯ । ದೆ ಪೊಡವಿಯಣುಗಿ ರಾವಣನನಂ । ದುಪಚರಿಸಿ ಬಂ ದಿರ್ಪನಥಿತಿಯೆನುತ್ತ ಭಕ್ತಿಯುಲಿ ॥ ಕೃಪೆಯೊಳಾತನಕರೆದು ಕುಳ್ಳಿರಿ । ಸಿ ಪರಮಾನಂದದೊಳು ಕೊಟ್ಟಳು । ಚಪಲವಿಲ್ಲದೆ ಯರ್ಘ್ಯಪಾದ್ಯಾ ಚಮನಗಳನಂದು ॥ ೬೦ ॥ ಇನಯು ಮೈದುನ ರಿಲ್ಲದಾಗಳೆ । ಮನೆಗೆಬಂ ದಾ ಕಪಟವೇಷದ । ದನುಜನನು ವಿಪ್ರೋತ್ತಮನೆನುತ ಬಗೆದುಭಕ್ತಿ ಯುಲಿ ॥ ವನಫಲಂಗಳ ಭುಜಿಸುವಿಮಲಾ । ಸನವನಂಗೀಕರಿಸು ಪತಿ ತರು । ವನುಮಿಗದ ಮಾಂಸವನೆನುತ್ತಲೆ ನುಡಿದಳಾ ಸೀತೆ ॥ ೬೧ ॥

ಇಂತು ಹತ್ತನೆಯ ಅಧ್ಯಾಯ ಸಂಪೂರ್ಣವು. ಪದ್ಯಗಳು ೫೧೧.

ಹನ್ನೊಂದನೆಯ ಅಧ್ಯಾಯ.

ಸೂಚನೆ ॥ ಜನಕಜಾತೆಯನೆತ್ತಿಕೊಂಡು ಗ ।
ಗನದೆ ರಾವಣ ಬರುತಿರಲ್ಕೆ ಕ ।
ದನಕೆಬಂದ ಜಟಾಯುವನಿರಿದು ಲಂಕೆಗೈದಿದನು ॥

ಬಂದಿಹನು ವಿಪ್ರೋತ್ತಮನು ನಿಜ । ಮಂದಿರಕೆ ನಾನೀ ಯತಿಥಿ ಗೊಲಿ । ದಿಂದುಪೇಳದೊಡೆನ್ನ ಸುಗತಿಯನ್ನು ಭಿಕ್ಷುಕನು ॥ ಸಂದಕೋ ಪದೆಶಾಪವಿತ್ತಪ । ನೆಂದು ಚಿಂತಿಸುತಿನಿಯನನು ತಾ । ನಂದುತಿಳುಹಿ ದ ಳಸುರಪತಿಗಾ ಸೀತೆ ವಿವರಿಸುತ ॥ ೧ ॥ ಅವಧರಿಸುನೀಂ ಬ್ರಾಹ್ಮ ಣೋತ್ತಮ । ಅವನಿಪಾಲಕ ಜನಕಸುತೆ ನಾಂ । ರವಿಕುಲಾಧಿಪ ದಶರ ಥನಸೊಸೆ ಮಡದಿರಾಮನಿಗೆ ॥ ಭುವಿಯೊಳೆನ್ನನು ಸೀತೆಯೆಂದು ಕ । ರೆ ವರಯೋಧ್ಯಾಪುರದೆ ಪತಿಯೊಡ । ನೆ ವಿಧವಿಧ ಸುಖಗಳನುಪೊಂದಿದೆ ಹನ್ನೆರಡುವರುಸ ॥ ೨ ॥ ಬಳಿಕ ಹದಿಮೂರನೆಯ ವರುಸದೊ । ಳೊ

ಲಿನು ವೈಭವದಿಂದೆ ರಾಮನಿ । ಗಿಳೆಯೊಡೆತನವ ನೀಯಬೇಕೆಂದೆಣಿಸಿ ದಶ
ರಥನು ॥ ಬೆಳೆಯಿಸಲು ಸನ್ನಾಹಗಳನಾ । ಗಳೆತಿಳಿದು ಕೈಕೇಯಿ ಕರು
ಬುತ । ಛಲದೆಕೇಳ್ದಳು ಮುನ್ನ ತನಗಿತ್ತೆರಡು ವರಗಳನು ॥ ೩ ॥
ರಾಮನಿಗೆ ಪಟ್ಟಾಭಿಷೇಕವ । ನೀ ಮುಹೂರ್ತದೊಳೆಸೆಗದಟ್ಟುವು । ದಾ
ಮಹಾಟವಿಗೆ ಹದಿನಾಲ್ಕು ವರುಷವಪರಿಯಂತ ॥ ತಾಮಸವನುಳಿದೆನ್ನ ಭ
ರತಂ । ಗೀಮಹಿಯ ದೊರೆತನವಕೊಡೆನು । ತ್ತಾಮಹಿಳೆ ಪೀಡಿಸಿದಳಂ
ದಾ ದಶರಥೇಶ್ವರನ ॥ ೪ ॥ ಪಿತನಭೀಷ್ಟವ ತಿಳಿದುರಾಘವ । ನತಿ ಭರ
ದೊಳೈತಂದ ವನಕಾ । ಪತಿಯೆದಿಕ್ಕೆನುತರಿದು ಬಂದೆನು ಬನಕೆಚಿಂತಿ
ಸದೆ ॥ ಹಿತದೊಳೆಮ್ಮನು ಸೇವಿಸುವೆ ನೆ । ನ್ನುತಡವಿಗೆ ಲಕ್ಷ್ಮಣನು
ಬಂದಿಹ । ನು ತಿಳಿವುದುನೀನೆನುತ ಪೇಳ್ದಳು ಸೀತೆವಿಪ್ರನಿಗೆ ॥ ೫ ॥
ಆರುನೀನೆಲೆ ವಿಪ್ರ ನಿನ್ನನು । ಧಾರುಣಿಯೊಳೇನೆಂದು ಕರೆವರು । ಘೋ
ರಕಾನನಕೇತಕೈತಂದೆ ನೆಲೆಯೆಲ್ಲಿಹುದು ॥ ಕ್ರೂರಜಂತುಗಳಡಿ ದರಣ್ಯ
ದೊ । ಳಾರಬಳಗೈದುತಿಹೆ ತಿಳಿಸೆಂ । ದಾ ರಮಣಿಕೇಳದಳು ರಾವಣನೆಂ
ದರಿಯುದವನ ॥ ೬ ॥ ಲಲನೆನೀನರಿ ನಾನು ರಾವಣ । ನು ಲವಣೋದಧಿ
ಮಧ್ಯದೊಳು ಕಂ । ಗೊಳಿಪ ಲಂಕಾದ್ವೀಪವೆನ್ನಯ ನಿಜನಿವಾಸದೆಡೆ ॥
ಕಲಿತನದೊಳೆನಗಿಲ್ಲ ಸಮರು ಹ । ಗಲಿರುಳೋಲೈಸುತ್ತಿಹರು ಕೋ ।
ಮಲೆಯರೈದುಸಹಸ್ರಜನ ಸಂತಸವನಿತ್ತೆನಗೆ ॥ ೭ ॥ ಸುರನರೋರಗ
ಯಕ್ಷ ವಿದ್ಯಾ । ಧರದನುಜ ಗರುಡಾಪ್ಸರರು ಕಿಂ । ನರರು ನನ್ನನು
ಸಂಹರಿಸದಂತೆ ರಣರಂಗದಲಿ ॥ ಸರಸಿಜೋದ್ಭವನನುರೆ ಮೆಚ್ಚಿಸಿ ।
ವರಗಳನು ನಾಂಪಡೆದಿಹೆನು ಭೂ । ಸ್ಥರನು ಮೊದಲಾದವರ ರಂಜುವರೆ
ನ್ನ ವಿಕ್ರಮಕೆ ॥ ೮ ॥ ಹರಸಖಕುಬೇರನನು ಸೋಲಿಸು । ತ ರಣ
ದೊಳುತಂದಿಹೆನು ಪುಷ್ಪಕ । ವರವಿಮಾನವನಾತ ನಗ್ರಜನೆಂದೆನಿಪನೆ
ನಗೆ ॥ ಸುರದೊಳಡಿಗಡಿ ಗಷ್ಟದಿಕ್ಪಾ । ಲರನು ಸೋಲಿಸಿರುವೆನು ತ
ಪದೊಳು । ಹರನಮೆಚ್ಚಿಸಿಪಡೆದೆ ನುತ್ತಮವರಗಳನು ನಾನು ॥ ೯ ॥
ನನ್ನನಾಮವಕೇಳ್ದೊಡನೆ ನರೆ । ಖಿನ್ನರಾಗುತ ಮೂರ್ಛೆಪೋಗುವ ।
ರೆನ್ನ ವೈರಿಗಳದಿರಿಸುವರಿಲ್ಲೆನ್ನೆ ತ್ರಿಭುವನದಲಿ ॥ ನಿನ್ನನೋಡಿದ ನನಗೆ
ರುಚಿಪುದೆ । ನನ್ನಧೀನದೊಳಿರು ವೆಬಲೆಯರೊ । ಳನ್ನು ಕೇಳ್ರತಿಕೇ
ಳಿ ನಿನಗೆ ವಿಧೇಯನಾಗಿಹೆನು ॥ ೧೦ ॥ ಅರಸಿಯಾದೊಡೆ ನೀನೆನಗೆ ತರ ।
ತರದ ಸೌಖ್ಯಂಗಳನು ಪೊಂದುವೆ । ಮೆರೆವಪುಷ್ಪಕಯಾನದೊಳು ಸಂ
ಚಾರವನುಮಾಳ್ಪೆ ॥ ಪರಿಚರಿಸುತಿಪ ರೈದುಸಾಸಿರ । ವರವನಿತೆಯರು

ನಿನ್ನನಡನಿಯೊ । ಆರದೆಲಂಕೆಗೆ ಬಂದೊಡೈದುವೆ ಭೋಗಭಾಗ್ಯಗಳ ॥ ೧೧ ॥ ವನಿತೆಕೈಕೆಯು ಮಾತನಾಲಿಸಿ । ವನಕೆಬಂದತಿ ಹೇಡಿಯೊಡನೀ । ವನದೆದುಃಖಿಸಿ ಕಂದಮೂಲ ಫಲಂಗಳನು ಭುಜಿಸಿ ॥ ಘನದುಕೂಲಂಗಳನುಳಿದು ನಾ । ರಿನ ಮಡಿಗಳನುಡುತ್ತ ಭೀಕರ । ಮೆನಿಪರಣ್ಯದೊಳೇತಕಿಹೆ ನೀನೆನ್ನವರಿಸೆಂದ ॥ ೧೨ ॥ ತಿರುಕನಂದದೆ ವಿಪಿನದೊಳು ಸಂ । ಚರಿಸುವಾ ರಘುನಂದನನೊಡನೆ । ತೊರೆದು ನಿದ್ರಾಹಾರಗಳನೀಂ ಬಳಲುತೇಕಿರುವೆ ॥ ವರಿಸಿನನ್ನನು ರಾಜಸಾಧದೊ । ಳಿರುತ ಪಟ್ಟದಮಹಿಷಿಯೆನಿಸುವೆ । ಸರಸಿಜಾನನೆ ಭರದೊಳೈತಹುದೆನುತ ಪೇಳದನು । ೧೩ ॥ ಮಾನಿನೀಮಣಿ ವನದೊಳೇಕತಿ । ದೀನತೆಯನಾಂ ತಂಜಿಕೊರಗುವೆ । ನೀನು ಲಂಕೆಯೊಳೆನ್ನೊಡನೆ ಸಲೆಸುಖಿಸು ರವಿಸುತ್ತ ॥ ದಾನವಾಗ್ರಣಿ ಯೆನಿಪ ನನ್ನ ಸ । ಮಾನನೆನಿಪನೆ ರಾಮನೀಗ ನಿ । ದಾನಿಸದೆನೀಂ ಬರುವುದೆನ್ನುತ ನುಡಿದ ರಾವಣನು ॥ ೧೪ ॥ ವನಗಳಲಿ ಗಿರಿಗಳಲಿ ಮೇಣ್ಪುಳಿ । ನನಿವಹಂಗಳ ಲುತ್ತಮಾರಾ । ಮನಿಚಯಗಳಲಿ ವಿನುತಸಾಧಾಗ್ರಂಗಳಲಿ ನೀನು । ವಿನುತಪುಷ್ಪಕ ವರವಿಮಾನದೊ । ಳು ನಲಿದೆನ್ನಯುಮನಕೆ ಸಂತಸ । ವನುಕೊಡುತ ಸಂಚರಿಪೆಕೇಳೆನ್ನ ತೊಡೆಯೊಳು ಕುಳಿತು ॥ ೧೫ ॥ ಇಳೆಯನಂದನೆ ರಾವಣನ ನುಡಿ । ಗಳನುಕೇಳ್ದನು ಮೋದಿಸದೆ ತಾ । ನಳುಕುತಿನಿಯನ ಬರವನೀಕ್ಷಿಸುತಡಿಗಡಿಗೆ ಭಯದೆ ॥ ಪಲತೆರದೊಳಾ ರಕ್ಕಸನಿಗಾ । ಗಳೆ ತೃಣವಪಿಡಿದಂದು ನುಡಿದಳು । ಮುಳಿದು ನೀಚನೆನುತ್ತ ಬಗೆದಾಪರ್ಣಶಾಲೆಯಲಿ ॥ ॥ ೧೬ ॥ ಗಿರಿಗಳಂದದೆ ಚಲಿಸನಬ್ಧಿಯು । ಪರಿಯೊಲು ಕ್ಷೋಭಿಸನು ಸುಂದರ । ತರ ಸಕಲಲಕ್ಷಣಗಳನು ತಾಳ್ದಹನು ಸತ್ಯದೊಳು ॥ ನಿರತನು ಮಹಾ ಭಾಗ್ಯಶಾಲಿಯು । ಧರಣಿತಲದೊಳು ರಾಘವೇಂದ್ರನು । ನಿರುತ ಮಾತನನೊಲಿಪೆ ನಿತರರನೋಡುವೆನೆ ನಾನು ॥ ೧೭ ॥ ಅಮಿತಬಾಹು ಬಲಾಢ್ಯನು ವಿಶಾ । ಲವೆನಿಪ ಸುವಕ್ಷಸ್ಥಳವನಾಂ । ತು ಮೆರೆವನು ಕೇಸರಿಯುಗತಿಯಂತೆ ನಡೆಯುತ್ತಿಹನು ॥ ಸಮನೆನಿಪನಾ ಸಿಂಹದತಿ ವಿ । ಕ್ರಮಕೆ ರಾಮನು ಸಂತತವು ನಾ । ನು ಮನದೊಳು ಚಿಂತಿಸೆನು ರಾಘವನಲ್ಲದನ್ಯರನು ॥ ೧೮ ॥ ಹೊಳೆಹೊಳೆವ ರಾಕಾಸುಧಾಕರ । ನೊಲುರೆರಂಜಿಪ ವಕ್ತ್ರವನುತಾಂ । ತಳೆದಿಹನುರಾಘವನು ರಾಜಸುತನು ಜಿತೇಂದ್ರಿಯನು ॥ ಇಳೆಯೊಳು ನ್ಯಗ್ರೋಧಪರಿ ಮಂ । ಡಲನೆನಿಸುವನು ಮೇಲೆನಿಪ ಯಶ । ವನು ಪಡೆದಿರುವ ನಾತನಲ್ಲದಿತರರ ಚಿಂತಿಸೆನು ॥

। ೧೯ ನರಿ ಗೆಸವೆನೆಂದೆನಿಸ ರಜನೀ । ಚರನೆ ನೀನಾ ಹೆಣ್ಣು ಸಿಂಗದ । ಪರಿಯೊಳುಪ್ಪವ ನನ್ನನಿಚ್ಛೈಸುತಿಹೆ ವಿಪಿನದಲಿ । ತರಣಿಕಿರಣಂಗಳ ಪೊಳೆನ್ನನು । ಕರಗಳಿಂ ನೀಂ ಪಿಡಿಯಲೆಳಸುವೆ । ಹೊರಡು ಶೀಘ್ರದೊಳಿಲ್ಲಿ ನಿಲ್ಲದೆನುತ್ತ ಪೇಳ್ದಳು ॥ ೨೦ ॥ ಎಲೆನಿಶಾಚರಕೇಳು ರಾಮನ । ಲಲನೆ ನನ್ನನು ಮಂದಬುದ್ಧಿಯೊ । ಳೊಲಿಸುವೆ ನೆನುತಪೇಕ್ಷಿಸುವೆ ಯೋಚನೆಯನುಳಿದಿಂದು ॥ ತಳುವದೀಕ್ಷಿಪೆ ಚಿನ್ನದಮರಂ । ಗಳಪೊಲು ಮರಂಗಳನು ಕೋಪವ । ತಳೆದಸಿಂಹದ ಪಲ್ಗಳನು ಕೀಳಲ್ಕೆಯತ್ನಿಸುವೆ ॥ ೨೧ ॥ ಧರೆಯೊಳುನ್ನತಿವೆತ್ತ ಮೆರಮಂ । ದರಗಿರೀಂದ್ರವ ಪಿಡಿದು ನಿನ್ನಯ । ಕರಗಳಿಂದೋಡಲ್ಕೆ ಬಯಸುವೆ ಕಾಲಕೂಟವನು ॥ ತರಿಸಿ ಕುಡಿದಾನಂದದಿಂದೀ । ಧರಣಿಯೊಳಿರಲಪೇಕ್ಷಿಸುವೆ ಕೇ । ಳುರಜನೀಚರನೀನು ರಾಮನ ಪತ್ನಿಯನುಬಯಸಿ ॥ ೨೨ ॥ ನಯನವನು ಚುಚ್ಚಲೆಳಸುವೆ ಸೂ । ಜಿಯುಮೊನೆಗಳಿಂ ದಡಿಗಡಿಗೆ ಕ । ತ್ತಿಯ ಹರಿತವನು ನೆಕ್ಕಲಿಚ್ಛೈಸುತಿರುವೆ ಜಿಹ್ವೆಯಲಿ ॥ ಭಯವೆನಾನದೆ ಕಟ್ಟಿಕೊಳುತಶಿ । ಲೆಯನು ದಾಟಲೆಳಸುವೆ ವಾರಿನಿ । ಧಿಯನು ರಾಮನಪತ್ನಿಯನು ಕೊಂಡೊಯ್ಯಲೆಳೆಸುತ್ತ ॥ ೨೩ ॥ ಕರಗಳಿಂ ರವಿಶಶಿಗಳನು ನೀಂ । ಭರದೆಪಿಡಿಯಲ್ಕಿಚ್ಛೈಸುವೆ ಸಲೆ । ಯುರಿವಬೆಂಕಿಯ ಕಟ್ಟಲೆಳಸುವೆ ವಸ್ತ್ರದಿಂದಿರದೆ ॥ ಪಿರಿದೆನಿಪ ಕಬ್ಬಿಣದಶೂಲೆ ಗಿ । ದಿರೊಳುಪೊಗ ಲಪೇಕ್ಷಿಸುವೆ ಕ । ರ್ಬುರನೆ ರಾಮನಪತ್ನಿಯನು ಕೊಂಡೊಯ್ಯಬೇಕೆನುತ ॥ ೨೪ ॥ ಅರರೆಜಂಬುಕ ಸಿಂಹಗಳಿಗೆಂ । ತಿರುವುದಂತರ ತೋರ್ಪುದೆಂತಂ । ತರವುಕಾಲ್ವೆ ಕಡಲುಗಳಿಗೆ ಸೀಸಕನಕಂಗಳಿಗೆ ॥ ಇರುವುದೆಂತಂತರವು ಗಂಧ ಕೆ । ಸರುಗಳಿಗೆ ಕಾಣಿಸುವುದೆಂ ತಂ । ತರವು ತಾನಂತಿರುವುದಂತರ ನಿನಗೆ ರಾಮನಿಗೆ ॥ ೨೫ ॥ ಕರಿಬಿಡಾಲಗಳಿಗೆನಿತಂತರ । ಮಿರುವುದೀ ಧಾರುಣಿಯೊಳೊಪ್ಪವ । ಗರುಡವಾಯಸಗಳಿಗದಂತರವೆಂತಿಹುದು ನೋಡೆ ॥ ಪಿರಿನವಿಲು ನೀರ್ಕಾಗೆಗಳಿಗಂ । ತರವು ತಾನೆನಿತಿರುವುದಂತಂ । ತಿರುವುದಾರಘುವೀರನಿಗೆ ನಿನಗಂತರವಿಳೆಯೊಳು ॥ ೨೬ ॥ ಧರಣಿಯೊಳ್ಕಂಗೊಳಿಪ ಹಂಸಕೆ । ಸರಿಯೆನಿಪ್ಪುದೆ ಗೃಧ್ರವದರಂ । ತೆ ರಘುನಂದನಿಗೇಂ ಸಮನೆನೀಂ ಯೋಚನೆಯನುಳಿದು ॥ ಮರಣವನು ಕೋರುತ್ತ ನನ್ನನು । ವರಿಸಬೇಕೆಂದಿಂದು ಬೇಡುವೆ । ಭರದೆ ಬಂದಂವದಲಿನೀಂ ಪೋಗೆಂದಳಾಸೀತೆ ॥ ೨೭ ॥ ಜಾನಕಿಯ ನುಡಿಗಳನುಕೇಳುತ । ದಾನವಾಧಿಪ ರಾವಣನು ಸ । ನ್ಮಾನಿಸದೆ ಪೇಳ್ದನು

ಕೇಳೆಲೆನೀತೆ ನೀನಿಂದು ॥ ಜ್ಞಾನವಿಲ್ಲದೆ ನುಡಿವೆ ನನ್ನ ಸ । ಮಾನರುಂಟೆ ವಿಚಾರಿಸಲು ಕೇ । ಳ್ನೀನೆನುತ ತಿಳಿಸಿದನು ಕುಲಬಲನಾಮಗಳನಿರದೆ ॥ ೧೮ ॥ ನನಗೆಸೂರ್ಯನಳುಕುತ ಮಾಡುವಿ । ಹನುಸೆಗಳಕೆಯು ಪವನನಂಜುತ । ನನಗೆಶೀತವು ಸೋಕದಂದದೆ ಬೀಸುವನುತಾನು ॥ ಅನಲನುಷ್ಣವನಾಗಿಸನು ಮೇ । ದಿನಿಯೊಳೆಲ್ಲರು ಭೀತಿಪಡುವರು । ನಿನಗೆ ಯೋಚನೆಯಿಲ್ಲದೆನ್ನನು ಬಿಡಬಹುದೆಪೇಳ್ ॥ ೧೯ ॥ ತರುಗಳೆಲ್ಲವು ನನ್ನ ಭಯದಿಂ । ದುರೆ ಕದಲದೆಲೆಗಳನು ತಾವಾಂ । ತಿರುತಿಪುವು ನದನದಿಗಳಾ ತೀವ್ರಗಮನವನುಳಿದು ॥ ಹರಿವುವೆನ್ನಯ ಭೀತಿಯಿಂದಲೆ । ಗಿರಿಗಳೆಲ್ಲವು ಕಂಪಿಸುವು ವಿದ । ನರಿಯದೆನ್ನನು ನೀನು ಪೋಗೆಂಬುದುಚಿತವೆನಿನಗೆ ॥ ೨೦ ॥ ನನ್ನ ಪಟ್ಟಣವೆನಿಪ ಲಂಕೆಯು । ಸನ್ನುತಿವಡೆದ ಜಲಧಿಮಧ್ಯದೊ । ಳನ್ನಗವಿರುತ ವೀರರಾಕ್ಷಸರಿಂದೆ ತುಂಬಿಹುದು ॥ ಮನ್ನಣೆಯನಾಂ ತಮರ ಪುರಿಯಂ । ತುನ್ನತಿಯನಾಂತಿಹುದು ಬಳಸಿ । ಪ್ರನ್ನತ ಪ್ರಾಕಾರದಿಂದುರೆ ರಂಜಿಸುತ್ತಿಹುದು ॥ ೨೧ ॥ ಕನಕ ಕಕ್ಷ್ಯಗಳಿಂದೆಸೆವುದೆ । ನ್ನ ನಗರವು ವೈಡೂರ್ಯಮಯತೋ । ರಣಗಳಿಂ ಹೊಳೆಯುವುದು ಹಸ್ತ್ಯಶ್ವರಥತತಿಯಿಂದೆ ॥ ಅನವರತ ತುಂಬಿಹುದು ತೂರ್ಯದ । ನಿನದಗಳ ಸೊಂಪಿಂದೆ ಮೆರೆಯುತ । ವಿನುತಿವೆತ್ತಿಹುದಖಿಳ ವೈಭವಯುಕ್ತವಾಗಿಹುದು ॥ ೨೨ ॥ ಸಕಲ ಕಾಲದೆ ಪುಷ್ಪ ಫಲಗಳ । ನು ಕೊಡುವಮಹೀರುಹಗಳನು ತಾ । ಳ್ದಖಿಳ ವನಸಂದೋಹದಿಂದಾ ಲಂಕೆ ಶೋಭಿಪುದು ॥ ಪ್ರಕಟತರ ಭೋಗಗಳನಾನುತ । ಸುಖದೊಳೆನ್ನೊಡನೆ ರಮಿಸುತ್ತ ಮ । ನಕೆತರದೆ ರಾಘವನ ಚಿಂತೆಯನಿರುವೆ ನೀನೆಂದ ॥ ೨೩ ॥ ತಂದೆ ದಶರಥನನುಡಿಯಿಂವಲೆ । ಬಂದಿಹನು ವನಕೆ ವಿಗತಾಯುಷ । ನೆಂದೆನಿಸುವನು ತಪಸಿಯಾಗುತ ಭಿಕ್ಷಬೇಡುವನು ॥ ಇಂದುಮುಖಿನೀಂ ಕೇಳು ರಾಘವ । ನಿಂದಲೇಂಸುಖಮಿಹುದು ನಿನಗೈ । ತಂದು ನೀಂ ನನ್ನೊಡನೆ ಸುಖಿಸದೆ ಬದಲು ಪೇಳುತಿಹೆ ॥ ೨೪ ॥ ದನುಜರೆಲ್ಲರಿ ಗೊಡೆಯನೆಂದೆನಿ । ಪೆನು ಮದನತಾಪದೊಳು ನಾನಾ । ಗಿನಡೆತಂದಿಹೆನೆಲೆ ಮಹೀಸುತೆ ಕೇಳು ನಿನ್ನೆಡೆಗೆ ॥ ನನಗೆ ಸಮನಲ್ಲಾ ರಘೂದ್ವಹ । ಮೆನವೊಲಿಸದೇತಕ್ಕೆ ನೀಂನುಡಿ । ವೆ ನನಗೆ ಬದಲು ನಿನ್ನ ಭಾಗ್ಯೋದಯದೊಳೈತಂದೆ ॥ ೨೫ ॥ ವರಿಸಬೇಕೆನುತ ನುಡಿದಾ ದಶ । ಶಿರನಿಗಾ ಭೂಮಿಸುತೆ ಪೇಳದ । ಳು ರಜನೀಚರರಾಜರಾಜನ ತಮ್ಮನೆನಿಸುತ್ತ ॥ ದುರುಳತನದಿಂ ಕಸನೆಂದೆನಿ ।

ಸಿರುವೆ ಬಹು ಪಾಪಿಷ್ಠನಾಗಿಹೆ । ಧರೆಯೊಳು ಮತಿವಿಹೀನನನು ಜಿತೇಂ ದ್ರಿಯ ರಹಿತನೆನಿಪೆ ॥ ೩೬ ॥ ದನುಜರೆಲ್ಲರು ಲಯುವನ್ನೈದುವ । ರು ನಿ ನಗೊದಗಿತು ಸಾವುವಿಬುಧೇಂ । ದ್ರನ ಸತಿ ಶಚೀದೇವಿಯಂತೆನ್ನನು ಬಯಸಿ ನೀನು ॥ ಮನದೊಳಾನಂದಿಸುವೆ ನಿನ್ನಿಂ । ದೆನಿಜಬಂಧು ಗಳೆಲ್ಲ ಮಡಿದಪ । ರುನಿನಗೆ ವಿನಾಶನವು ಬಂದಿಹುದೆಂದಳಾಸೀತೆ ।೩೭॥ ದನುಜವಲ್ಲಭನಾಮಹೀಸುತೆ । ಯ ನುಡಿಗಳನಾಲಿಸುತಿರದೆ ಪೇ । ಳ್ದನೆ ಲೆ ಜಾನಕಿ ಮತ್ತತೆಯೊಳಂದೆನ್ನ ವಿಕ್ರಮವ ॥ ಮನಕೆತಾರದೆ ನುಡಿ ಯುುತಿರುವೆ ಗ । ಗನದೊಳಗಿರುತ್ತವನಿಯ ಧರಿಸಿದ । ಬೆನು ನಿಜಭು ಜುಗಳಲಿ ಸಾಗರ ಜಲವ ಕುಡಿಯುುವೆನು ॥ ೩೮ ॥ ಸಮರದೊಳು ವಧಿಸುವೆನು ಮೃತ್ಯುವ । ನುಮಿಹಿರನಘಾತಿಸುವೆ ನಸ್ತ್ರದೊ । ಳು ಮಹಿಯನು ನಾಂ ಸೀಳ್ವೆ ಪುಡಿಮಾಡುವೆನು ಬೆಟ್ಟಗಳ ॥ ಕಮಲಲೋ ಚನೆ ವರಿಸುನನ್ನನು । ವಿಮಲಮತಿಯಿಂದೆನ್ನುತಾಗಳೆ । ರಮಣಿ ಸೀತೆಗೆ ತೋರಿಸಿದ ನಿಜರೂಪವನು ಬಗೆದು ॥ ೩೯ ॥ ತೊರೆದ ಮಲಸನ್ಯಾಸಿವೇಷವ । ನು ರಮಣೀಮಣಿಸೀತೆಗಾ ದಶ । ಶಿರನು ತೋರ್ದ ನು ನೈಜರಾಕ್ಷಸರೂಪವನು ಭರದೆ ॥ ಅರುಣನೇತ್ರದತಾಳ್ದ ಕನಕಾ । ಭರಣಭುಜಗಳ ಹತ್ತುತಲೆ ಗಳ । ದುರುಳ ರಾವಣನಾಗ ಸೀತೆಯು ಕಣ್ಗೆ ಕಾಣಿಸಿದ ॥ ೪೦ ॥ ಅರುಣ ವಸ್ತ್ರಂಗಳನು ಹೊದೆದಾ । ಕರಿ ಮುಗಿಲ್ಗೆಣೆಯೆನಿಪ ದಶಕಂ । ಧರನಧಿಕ ಕೋಪವನುತಾಳುತ ನುಡಿದ ಜಾನಕಿಗೆ ॥ ಸರಸಿಜಾನನೆ ಮೂರುಲೋಕದೊ । ಳುರೆವಿನುತಿವೆತ್ತನ್ನ ವರಿಪುದು । ಸರಿಯೆನಿಸಿಕೊಂಡಿಹೆನು ಪತಿರೂಪದೊಳು ನಿನಗೆನುತ ॥ ೪೧ ॥ ನಿನಗೆ ಯೆಳ್ಳನಿತ ಪ್ರಿಯುವನೆಸ । ಗೆನಲೆ ಕೋಮಲೆ ಕೇಳು ರಾಮನೊ । ಳು ನೆಲಸಿದವಿಶ್ವಾಸವನು ಬಿಡು ನನ್ನೊಳಿರಿಸದನು ॥ ವನಿತವಾಕ್ಯಕೆ ರಾಜ್ಯವನುಳಿದು । ವನಕೆ ಬಂದಾ ಮೂಢಮತಿಯಿಂ । ದ ನಿನಗೇಂ ಫಲಮೆನುತತಿಭರದೆ ಹತ್ತಿರಕೆಬಂದ ॥ ೪೨ ॥ ಬುಧನು ರೋಹಿಣಿಯನ್ನು ವರಿಸಿ ಪಿ । ಡಿದತೆರದೊಳಾ ದನುಜವಲ್ಲಭ । ನುಧರಣೀ ಸುತೆಯು ತಲೆಯನು ಪಿಡಿದೆಡವಕೈಯಿಂದೆ ॥ ಚೆದರಿಸುತ ತೊಡೆಗಳನು ಕೂಡೆ ಪಿ । ಡಿನು ಬಲದಕೈಯಿಂದೆ ತನ್ನಂ । ಕದೊಳು ಕೂಡಿಸಿಕೊಂಡ ನೆತ್ತಿಕೊಳುತ್ತ ಶೀಘ್ರದಲಿ ॥ ೪೩ ॥ ಮರಣ ದೇವತೆ ಗಿಮ್ಮಿಗಿಲೆನಿ ಸು । ತುರುಭುಜಬಲ ಪರಾಕ್ರಮಿಯೆನಿಪ । ಸುರನ ರೂಪವ ಕಂಡು ವನದೇವತೆಗಳಂಜಿದರು । ಖರಗಳನುತಾನಾಂತು ಬಹುಕಳಿ । ನರ

ವೆವನುವಮಾಡುತಿಹ ರಾವಣ । ನರಥಕಾಣಿಸಿತಾಗ ಮಾಯಾಕಾರವೆನು
ತಾಳ್ದು ॥ ೪೪ ॥ ಭರದೊಳಾ ದಶಶಿರನು ಸೀತೆಯ । ನಿರದೆ ಕರಂಗಳು
ಗೊಳಲಿಸಿಕೊಳ್ಳುತ । ನರೆವಿರಾಜಿಪ ರಥಕಡರ್ದನು ಬಹಳ ಹರ್ಷದಲಿ ॥
ಧರಣಿಸುತೆ ರಾವಣನಧೀನದೊ । ಳಿರುತ ಕಾನನದೊಳತಿದೂರಕೆ ।
ತೆರಳಿದಾ ರಘುವರನಕೂಗುತ ರೋದಿಸಿದಳಿರದೆ ॥ ೪೫ ॥ ಕಾಮಪೀಡಿತ
ನಹ ದಶಶಿರನು । ಕಾಮವಿಲ್ಲದ ಸೀತೆಯನುತಾಂ । ತಾಮಸವನುಳದೆ
ತ್ತಿ ಕೊಂಡುಂಬರಕೆ ಹಾರಿದನು ॥ ತಾಮಲೋಚನೆ ದುಃಖಿಸುತ ಹಾ ।
ರಾಮ ಹಾ ಸೌಮಿತ್ರಿಯೆನುತಂ । ದಾಮರುತ್ಪಥದಲ್ಲಿ ರೋದಿಸುತಿದ್ದಳತಿ
ಭಯದೆ ॥ ೪೬ ॥ ತಂದೆಲಕ್ಷ್ಮಣ ಖೂಳರಾವಣ । ಬಂದು ನನ್ನನು ಕೊಂ
ಡು ಪೋಗುವ । ನಿಂದು ಲಂಕೆಗೆ ನೀನರಿಯದಿಹೆಕೇಳು ನನ್ನಿರವ ॥
ಮುಂದೆ ಗತಿಯೇನೆನಗೆ ನಿನ್ನನು । ನಿಂದಿಸಿದೆನಾಂ ಮುಳಿದು ವಿಪಿನದೊ
ಳಂದು ನೀಂ ರಘುನಂದನನಗೆ ತಿಳುಪೆಂದು ಹಲುಬಿದಳು ॥ ೪೭ ॥ ದನುಜ
ವಲ್ಲಭ ಖೂಳ ದಶಕಂ । ಠನು ತೆಗೆದುಕೊಂಡೊಯ್ವ ನೆನ್ನನು । ನಿನಗೆ
ಕಾಣದರೀತಿಯೊಳು ಲಂಕೆಗತ್ರಿವೇಗದಲಿ ॥ ಇನಯ ನೀನೆಂತರಿವೆ ಹಾ
ಹಾ । ನನಗೊದಗಿದೀ ಕಷ್ಟವನು ಬಿಡಿ । ಸೆನುತ ರಾಮನಕೂಗಿ ಯು
ತ್ತಳು ಸೀತೆ ಗಗನದಲಿ ॥ ೪೮ ॥ ಎಲೆ ವನಗಳಿರ ವನದದೇವತೆ । ಗಳಿರ
ವೃಕ್ಷಂಗಳಿರ ಖೇಚರ । ಗಳಿರ ಮೃಗಗಳಿರ ನದಿಗಳಿರ ಮಹೀಧರಂಗಳಿ
ರ ॥ ನೆಲದಣುಗಿಯನು ಕೊಂಡುಪೋದನು । ಖಳದಶಾಸ್ಯನೆನುತ್ತ ಪೇ
ಳಿರಿ । ತಳುವದೀರಘುಪತಿಗೆನುತ ಕೈಮುಗಿದು ಬೇಡಿದಳು ॥ ೪೯ ॥
ದಶಶಿರನೊಡನೆ ಪೋಗುತಾಗಳೆ । ಶಶಿವದನೆ ಗೋದಾವರಿಯು ನೀ । ಕ್ಷಿ
ಸುತ ತಳುವದೆ ಬೇಡಿದಳು ಕೈಗಳನುಜೋಡಿಸುತ ॥ ಅಸುರ ರಾವಣ
ಕೊಂಡುಪೋದನು । ವಸುಮತೀ ನಂದನೆಯ ನೆಂದೆನು । ತುಸುರುವು
ದು ರಾಘವನಿಗೆಂದಾ ಗಗನಮಾರ್ಗದಲಿ ॥ ೫೦ ॥ ಕೈಕೆನಿನ್ನಯ ಕೋರಿ
ಕೆ ಫಲಿಸ್ಸಿ । ತೀ ಖಳದಶಗ್ರೀವನೆನ್ನನು । ತಾ ಕಡುಜವದೊಳೆತ್ತಿ ಕೊಂ
ಡೈದುತಿಹ ನಿಂದೆನುತ ॥ ಭೀಕರದೊಳಾ ಸೀತೆಪೋಗುತ । ಶೋಕದಿಂದ
ಲೆ ನಮಿಸಿಪೇಳಿದ । ಳೀಕಡೆ ಪ್ರಸ್ರವಣಗಿರಿ ಗರುಹೆನುತ ರಾಮನಿಗೆ ॥
॥ ೫೧ ॥ ಅಳುತಜಾನಕಿ ರಾವಣನ ರಥ । ದೊಳತಿದುಃಖಿವ ನೈದುತಾಗ
ಳೆ । ತಳುವದೆ ಜಟಾಯುವನು ಕಾಣುತ ಮರದಕೊಂಬೆಯಲಿ ॥ ಖಳ
ದಶಾನನಕೊಂಡು ಪೋಗುವ । ನೆಲೆಜಟಾಯುವೆ ನನ್ನ ನೋಡೆಂ । ದಳು
ಕಿ ಕೂಗಿದಳೊಡನೆ ಹಾಯೆನುತ ಧಿಕಶೋಕದಲಿ ॥ ೫೨ ॥ ಅವನಿಜಾ

ತೆಯ ನುಡಿಯ ಕೇಳು । ತ್ತವನಿರುಹದೊಳ್ಳಿದ್ದ ಗೃಧ್ರ್ಯಶ್ರೀ । ಹವಿಪ
ಗೇಂದ್ರ ಜಟಾಯು ಘನರೋಷವನು ತಾಳುತ್ತ ॥ ತವಕದಿಂದಾ ರಕ್ಕಸ
ನೊಡನೆ । ಬರ್ಕಂಕುಜ್ಜುಗಿಸಿದನು ಗಗನದೊ । ಳವರಿಗಾಗಳೆ ನಡೆದುದ
ತಿ ಘೋರತರ ಸಂಗರವು ॥ ೫೩ ॥ ದನುಜವಲ್ಲಭ ವಿಹಗವಲ್ಲಭ । ರುನೆರೆ
ಕಾದಿದ ರಂತರಿಕ್ಷದ । ಲಿ ನಿಶಿಚರವರನಿರದೆ ಪಕ್ಷಿಯು ನೈದುಬಾಣದಲಿ ॥
ಕನಲಿಘಾತಿಸಿದನು ಜಟಾಯುವ । ದನೇಕಸದೆ ಗಾಯಗಳನಾಗಿಸಿ । ದನು
ದಶಗ್ರೀವನಿಗೆ ನಖಮುಖ ಚರಣಘಾತದಲಿ ॥ ೫೪ ॥ ಹತ್ತು ಬಾಣಗಳಿಂದೆ
ಹೊಡೆದನು । ಮತ್ತೆ ರಾವಣನಾ ಜಟಾಯುವ । ಸತ್ತ್ರರಾವಣನ ರಥಸಾ
ರಥಿ ರಥದಖರಗಳನು ॥ ಸತ್ತಿಗೆಸಹಿತಲಾ ಜಟಾಯುವು । ಕತ್ತರಿಸಿದನು
ಕೊಕ್ಕುಗುರುಗಳ । ವೊತ್ತದಲಿ ದಶಕಂಠಕಡಿದನು ರೆಕ್ಕೆಗಳನವನ ॥
॥ ೫೫ ॥ ಕೊಂದು ರಾವಣನಾಜಟಾಯುವ । ನಂದುಸೀತೆಯನೆತ್ತಿಕೊಂ
ಡಾ । ನಂದದಿಂದಲೆ ಹಾರಿದನು ಬಹುಬೇಗನೆ ಗಗನಕೆ ॥ ನೊಂದು ನೆಲ
ದೊಳುಬಿದ್ದಪಕ್ಷಿಯು । ಮುಂದೆ ನೆರೆರೋದಿಸಿದಳವನೀ । ನಂದನೆಮಹಾ
ದುಃಖದೊಳು ಹಾ ರಾಮ ಹಾಯೆನುತ ॥ ೫೬ ॥ ಪವನಬೀಸದೆ ಪೋದ
ನಾಗಳೆ । ರವಿಗೆ ಕಾಂತಿವಿಹೀನವಾಯ್ತು ಜ । ಗವನು ಕಾವಳಮುಚ್ಚಿ
ತಸುರೇಂದ್ರ ನವನೀಸುತೆಯು ॥ ತವಕದಿಂದೊಯ್ಯುತಿರೆ ಚೀರಿದ । ಳವ
ನಿಜೆ ಜಟಾಯುವನು ವಧಿಸಿದೆ । ಜವದೊಳೆನ್ನನು ಕೊಂಡುಪೋಗುವೆ
ಕಳ್ಳನಂತೆನುತ ॥ ೫೭ ॥ ನನ್ನಗಂಡನು ನೋಡುವಂದದೆ । ನನ್ನಪಿಡಿದಿರೆ
ಖರನತೆರದೊಳು । ನಿನ್ನ ನಂತಕನೆಡೆಗೆ ಕಳುಹಿಸುತಿದ್ದ ನೆನ್ನಪತಿ ॥
ನಿನ್ನ ಶೌರ್ಯಸ್ಥೈರ್ಯ ಧೈರ್ಯಗ । ಳನ್ನು ಸುಡಬೇಕವನಿಯೊಳು ನೀ ।
ನಿನ್ನು ಜೀವಿಸಲಾರೆಯೆನ್ನುತ ಪೇಳ್ದಳಾಸೀತೆ ॥ ೫೮ ॥ ಜಾನಕಿಯನಂ
ಕದೊಳಿರಿಸಿಕೊಂ । ಡಾ ನಿಶಾಚರನೈದಿದನು ಪವ । ಮಾನನಂತ್ರತಿ ವೇಗ
ದಲಿ ದಕ್ಷಿಣದೆಶೆಯೊಳಂದು ॥ ದೀನತೆಯೊಳಾ ಸೀತೆ ಹಾ ಹಾ । ಪ್ರಾಣ
ನಾಥನೆ ಹಾ ರಘುವರನೆ । ನೀನೆಗತಿಯನುತಳುತ ಕಂಡಳು ಋಷ್ಯ
ಮೂಕವನು ॥ ೫೯ ॥ ಹರಿದು ಸೀರೆಯ ಸೆರಗನಾಗಲೆ । ಧರಣಿಯಾತ್ಮ
ಜೆ ತನ್ನಕನಕಾ । ಭರಣಗಳನವರೊಳಿರಿಸುತಕಟ್ಟಿ ಗಿರಿಶಿಖರದೊಳು ॥
ತರಣಿಸುತ ಸುಗ್ರೀವನನು ಬಳ । ಸಿರುವ ಕಪಿಗಳು ನಾಲ್ವರನಡುವೆ ।
ಭರದೊಳಂದು ಬಿಸುಟಳು ರಾಮನಿಗೀಯಬೇಕೆನುತ ॥ ೬೦ ॥ ಹಾ
ರಮಣ ಹಾರಾಮ ಹಾರಣ । ಧೀರಹಾಸೌಮಿತ್ರಿದೇವರ । ಹಾರಘುಕುಲೋ
ತ್ತಮ ಯೆನುತರಾವಣನ ತೊಡೆಯೊಳಗೆ । ಧಾರುಣೀ ಸುತೆರೋದಿಸು

ತ್ತಿರೆ । ಕ್ರೂರರಾವಣ ಕಳೆದು ಪಂಪೆಯ । ನಾರಮಣಿಸಹಿ ತಂದು
ತೆಂಕಣಕಡಲ ದಾಟಿದನು ॥ ೭೧ ॥ ತೊಡೆಯೊಳಿಟ್ಟ ಭೂಜಾತೆ ಸಹಿತಾ ।
ಕಡಲದಾಟುತ ಲಂಕೆಗೈತಂ । ದೊಡನೆ ರಾವಣನಿರಿಸಿದನು ಸೀತೆಯನರ
ಮನೆಯಲಿ ॥ ಪ್ರೀಣವಿಸುತೆಗೆ ವರಮಣಿಮೌಕ್ತಿಕ । ದೊಡವೆಗಳ ಚೀ
ನಾಂಬರಂಗಳ । ಕೊಡುವುದೆನ್ನುತ ಕೂಡೆರಕ್ಕಸಿಯರಿಗೆ ಪೇಳಿದನು ॥
॥ ೭೨ ॥ ನೆನೆದೊಡೆಭಯವಸೀವ ಕರ್ಕಶ । ರೆನಿಪರಕ್ಕಸಿಯರಿಗೆ ಪೇಳ್ದ
ನ । ವನಿಜೆಕೇಳ್ದುದ ಸೀವುದೆಂದೆನುತಸುರವಲ್ಲಭನು ॥ ಮನದೊಳಾರಾ
ದೊಡಹಿತವೆ ನಾ । ವನಿತೆಗಾಚರಿಸಿದೊಡೆ ಕೊಲ್ಲುವೆ । ನೆನುತಪೇಳ್ದು
ಕೃತಾರ್ಥನೆನ್ನುತ ತತ್ಸನಂದರಿದ ॥ ೭೩ ॥ ಲಲನೆಜಾನಕಿಯನ್ನಚಿತ್ತವ ।
ನೊಲಿಸಿರಾಘವ ನನುಳಿವಂತೆ ಹ । ಗಲಿರುಳಾಕೆಗೆನುಡಿದು ವಿಹಿತೋಕ್ತಿ
ಗಳನೆಲ್ಲವನು ॥ ಹಲವುಬಗೆಯಿಂ ದೊಪ್ಪಿಸಿರೆನುತ । ತಿಳಿಸಿರಕ್ಕಸಿಯರಿಗೆ
ರಾವಣ । ಕಳುಹಿಕೊಟ್ಟನು ಧರಣಿಜಾತೆಯಬಳಿಗೆ ಸಂತಸದಿ ॥ ೭೪ ॥

ಇಂತು ಹನ್ನೊಂದನೆಯ ಅಧ್ಯಾಯ ಸಂಪೂರ್ಣವು. ಪದ್ಯಗಳು ೫೭೪

ಹನ್ನೆರಡನೆಯ ಅಧ್ಯಾಯ.

ಸೂಚನೆ । ಮೇದಿನೀಸುತೆಯನ್ನು ವರಿಸೆನು ।
ತಾ ದಶಾಸ್ಯನು ಬೇಡಲೊಪ್ಪದೆ ।
ಪೋದಬಳಿ ಕಾಕೆಯನಶೋಕಾವನದೊಳಗಿರಿಸಿದ ॥

ಬಳಿಕರಾವಣನೊಂದುದಿನ ಮನ । ದೊಳಗೆ ನೆನೆದು ಜಾನಕಿಯ
ನಾಗಳೆ । ಬಳೆದ ಕಾಮಾತುರದೊಳರಿಯದೆ ಯೊಂದನತಿಭರದೆ ॥ ಕಳೆ
ದು ಲಜ್ಜಾಭಯಗಳನು ತಾಂ । ತಿಳಿಯದೆ ತನಗೆ ಮುಂದೆಸಂಭವಿ । ಪ
ಲಯವನು ಜಾನಕಿಯಬಳಿಗೈತಂದ ನಂದಿರದೆ ॥ ೧ ॥ ನೆರೆದರಕ್ಕಸಿಯರ
ನಡುವೆ ರಘು । ವರನಚಿಂತಿಸುತ ಬಹುಶೋಕದೊ । ಳುರೆಬಳಲಿ ಬೆಂ
ಡಾಗಿ ಬಿಸುಸುಯ್ಯುತ್ತ ಕಂಬನಿಯ ॥ ಸುರಿಸಿರೋದಿಸುತಾ ಮಹೀಸುತೆ ।
ಶಿರವಬಾಗಿಸಿ ಜಲಧಿಮಧ್ಯದೆ । ನೆರೆಮುಳುಗಿದಾ ಹಡಗಿನಂತಿರಲಸುರ
ನೈತಂದ ॥ ೨ ॥ ವನದೊಳಾ ಮೃಗಯೂಥಗಳನುಳಿ । ದು ನಡುಗುತ್ತಿ
ಹ ಹೆಣ್ಣುಮಿಗದವೊ । ಲು ನೆರೆದುಃಖಿಪ ಮೇದಿನೀಸುತೆಗಾ ನಿಶಾಚರ
ನು ॥ ಮನದೊಳಾನಂದವನು ತಾಳುತೊ । ಡನೆ ಸುರಭವನದಂತೆ ಕಂ

ಗೊಳಿ । ಪ ನಿಜರಾಜಭವನವತೋರಿದನಂದು ವಿವರಿಸುತ ॥ ೩ ॥ ಜನಕ ಸುತೆ ನೋಡಿದಳು ದಶಕಂ । ಠನಮನೆಯೊಳೊಪ್ಪುತಿಹ ಬಹುಜನ । ವನಿತೆಯರನಾ ಮಂಜುಳತರದ ಪಕ್ಷಿನಿವಹವನು । ವಿನುತಿವೆತ್ತಿರೆ ಮೆರೆವ ವಿವಿಧ ರ । ತುನಸಮೂಹಂಗಳನು ಪ್ರಾಸಾ । ದ ನಿಕರಂಗಳ ನಂತೆಸೆವ ಹರ್ಮ್ಯಂಗಳೆಲ್ಲವನು ॥ ೪ ॥ ಕನಕ ರಜತ ಸ್ಫಟಿಕ ದಂತದ । ಘನತರ ಸ್ತಂಭಂಗಳೆಸೆದವು । ವಿನುತಗೋಮೇಧಿಕ ವಿಡೂರಜ ವಜ್ರರಾಶಿಗಳು ॥ ಜನರ ಕಣ್ಮನಕೊಪ್ಪುತಿರ್ದವು । ಮನೆಯೊಳುರೆ ತುಂಬಿರ್ದವಾಧನ । ಕನಕವಸನಾಭರಣಗಳಧಿಕ ಮಾಗುತೆಲ್ಲಕಡೆ ॥ ೫ ॥ ಬಳಿಕರಾವಣ ದೇವದುಂದುಭಿ । ಗಳನಿಕರದಿಂದಿಡಿದು ನೆರೆಪೊಳೆ । ಹೊಳೆವ ಚಿನ್ನದ ತೋರಣಂಗಳನಾಂತು ರಂಜಿಸುತ ॥ ಥಳಥಳಿಪಸೋಪಾನಗಳನಾ । ನೆಲದಣುಗಿಯೊಡನಂದು ಹತ್ತಿದ । ನೊಲಿಸಬೇಕೆಂದಾ ಮಹೀಜಸುತೆಯ ನತಿಸಂತಸದಿ ॥ ೬ ॥ ಅಲ್ಲಿಕಂಗೊಳಿಸುತ್ತ ತೋರ್ದವು । ಬೆಳ್ಳಿಜಂತದ ಘನಗವಾಕ್ಷಗ । ಳೆಲ್ಲೆಡೆಯೊಳೊಪ್ಪಿದವು ಕನಕಸಮೂಹದಿಂದೆಸೆವ ॥ ಸಲ್ಲಲಿತ ಪ್ರಾಸಾದಪಙ್ಕ್ತಿಗ । ಳೆಲ್ಲರಿಗೆ ಸಂತಸವನಾಗಿಸು । ತಲ್ಲೆಸೆದುವು ಸುಧಾಮಣಿಗಳಿಂದೊಪ್ಪಿದ ನೆಲಗಳು ॥ ೭ ॥ ಕಮಲಕಲ್ಹಾರಂಗಳನುತಳೆ । ದಮಲಜಲದಿಂದೆಸೆವತಿ ವಿಶಾ । ಲಮೆನಿಪ ಸರೋವರಗಳನು ನೋಡಿದಳು ಭೂಮಿಸುತೆ ॥ ಸುಮಸಮುದಯವನಾಂತು ಕಂಗೊಳಿ । ಪ ಮರಗಳನಾನಂದಿಪ ವಿಹಂ । ಗಮನಿಕರವನು ತರತರದ ಬಣ್ಣದಜಲಚರಗಳ ॥ ೮ ॥ ಇಂತು ರಾವಣನಾಮಹೀಸುತೆ । ಗಂತಮಿಲ್ಲದ ವಸ್ತುಗಳನ । ತ್ಯಂತ ಸಂತಸದಿಂದೆ ತೋರುತಲೆಲ್ಲವನು ಬಿಡದೆ ॥ ಚಿಂತಿಸದೆ ಪತಿನಾಮವನು ನೀ । ನಂತರಂಗದೊಳೆನ್ನ ವರಿಸಿಯೆ । ಸಂತತವು ಸೌಖ್ಯವನು ತಾಳುವುದೆಂದು ಪೇಳಿದನು ॥ ೯ ॥ ಲಲನೆಕೇಳ್ಸಿಂವನಧಿಮಧ್ಯದೆ । ಹೊಳೆವಲಂಕೆಗೆ ರಾಜನಾಗಿಹೆ । ನೊಲಿದುಸೇವಿಸುತಿಹರುಹತ್ತಿಪ್ಪತ್ತು ಕೋಟಿಯುಹ ॥ ಖಳನಿಶಾಚರ ರೆನ್ನನವರೀ । ನೆಲದೊಳತಿ ಘೋರತರ ರೂಪಂ । ಗಳನು ಹೊಂದಿಹರೆಲ್ಲರಿಗೆ ಬಹು ಭಯವನಾಗಿಸುತ ॥ ೧೦ ॥ ಧನಮನಃಪ್ರಾಣಂಗಳನು ನಾಂ । ನಿನಗೆ ಕೊಟ್ಟಿಹೆನುಳಿಸು ಮಾನವ । ನಿನಗಧೀನವೆನಿಸುವು ವುತ್ತಮ ಭೋಗಭಾಗ್ಯಗಳು ॥ ನನಗೆ ಪ್ರಾಣಾಧಿಕಳೆನಿಪೆ ನೀಂ । ನನಗರಸಿಯಾಗುತ್ತೊಡೆಯುಳೆಂ । ದೆನಿಪೆ ಕೋಟಿ ಸಹಸ್ರ ನಾರಿಯರಿಗೆ ನಿರಂತರವು ॥ ೧೧ ॥ ಇತರ ಬುದ್ಧಿಯೊಳೇನು ಫಲವಹು । ದತಿಶಯವೆನಿಪ ಕಾಮಬಾ

ಧನೊ । ಳು ತಪಿಸುತ್ತಿಹ ನನ್ನ ಸಂತತವೊಲಿಸಲೆ ರಮಣಿಯೆ ॥
ಅತಿವಿಶಾಲ ಸಮುದ್ರ ಮಧ್ಯದೆ । ಸತತ ಮೆಸೆವುದು ಲಂಕೆಕೇಳದ ।
ನು ತಡೆವಮಹಾ ಶೂರರಿಹರೇ ನಖಿಳಲೋಕದಲಿ ॥ ೧೨ ॥ ಸುರನ
ರೋರಗ ಯಕ್ಷ ರಾಕ್ಷಸ । ಗರುಡ ಕಿನ್ನರ ಸಿದ್ಧಸಾಧ್ಯರೊ । ಳಿರುವ
ನೇಪೇಳಿನ್ನ ಸಮನಹ ಘನಪರಾಕ್ರಮಿಯು ॥ ಸರಸಿಜಾಸನೆ ಕೇಳು
ನನ್ನೊಡ । ನೆ ರಣರಂಗದೊಳಿದಿರು ನಿಲ್ಲದೆ । ತರಹರಿಸುವರು ಸಕಲ
ಲೋಕದ ವೀರರನವರತ ॥ ೧೩ ॥ ವನಿತೆಕೇಳಾ ರಾಘವನು ತಾಂ ।
ಮುನಿಗಳಂತಿಹ ನಲ್ಪ ಕಾಂತಿಯು । ವನೆನಿಪನು ದೀನತೆಯುಸಾಂತ
ಲ್ಪಾಯುವೆನಿಸುವನು ॥ ವಿನುತ ರಾಜ್ಯಭ್ರಷ್ಟನೆಂದೆನಿ । ಪನು ಮನು
ಜನೆಂದೆನಿಪ ನಾರಾ । ಮನನುಳಿದು ನೀನೆನ್ನ ವರಿಸವಸಿಂದೆ ಫಲವೇ
ನು ॥ ೧೪ ॥ ನಿನಗೆ ನಾಂ ಸರಿಯೆಂದೆನಿಸುವೆ ನ । ವನಿಜೆನನ್ನನು
ಹೊಂದು ಯೌವ್ವನ । ವು ನಿನಗು ಮನಗು ಶಾಶ್ವತವೆನೀಂ ರಮಿಸು
ನನ್ನೊಡನೆ ॥ ಅನಿಲವೈಶ್ವಾ ನರರಿಗಳವ । ಲ್ಲ ನಡೆತರಲೀ ಪಟ್ಟಣಕೆ
ನಿ । ನ್ನಿನಯನೆಂತೈತಹನು ಯೋಚಿಸು ನಿನ್ನ ಚಿತ್ತದಲಿ ॥ ೧೫ ॥
ವನಿತೆ ನೀನಾಲಿಪುದು ನನ್ನಯ । ಘನತರದ ಭುಜ ಶೌರ್ಯದಿಂದುರೆ । ಮ
ನವೊಲಿವರೀತಿಯೊಳು ನಿನ್ನನು ನಾನು ಸಲಹುತಿರೆ ॥ ವನಧಿಯನು
ಲಂಘಿಸುತ ನಿನ್ನನು । ಘನಪರಾಕ್ರಮದಿಂದೆ ಬಿಡಿಸು । ತ್ತ ನಿಜ ನಗ
ರಿಗೆ ಕೊಂಡುಪೋಗುವನೆಂತು ರಾಘವನು ॥ ೧೬ ॥ ಸಲಹು ಲಂಕಾ
ರಾಜ್ಯವನು ಕೋ । ಮಲೆ ನನಗೆ ಸಮರೆಂದೆನಿಪ ಕಡು । ಗಲಿಗಳು
ನಿನಗೆ ದಾಸರಾಗುತ ನಿನ್ನ ಸೇವಿಪರು ॥ ಲಲನೆ ಬಿಡು ಲಜ್ಜೆಯನು
ಸಹಜವು । ಬಲೆಯರಿಗೆ ಬಹುಕಾಲದಿಂದೆ ಮ । ಹಿಳೆಯರಿಗೆ ಬಂದಿ
ಹುದು ಕೇಳದರಿಂದ ಫಲವೇನು ॥ ೧೭ ॥ ಪ್ರಮದೆ ನಿನ್ನಯ ಪದವ
ಪಿಡಿವಾಂ । ನಮಿಸುವೆನು ನೀಂಕರುಣಿಸೆನ್ನನು । ಕಮಲಲೋಚನೆ
ನಿನ್ನಧೀನದಿ ದಾಸನೆನಿಸುತ್ತ ॥ ವಿಮಲಮತಿಯಿಂದೆಸಗುವೆನು ನಿ ।
ನ್ನ ಮನದಿಷ್ಟಾರ್ಥಂಗಳನು ನಿ । ನ್ನ ಮನವೊಪ್ಪುವ ರೀತಿಯಿಂದಲೆ
ನುತ್ತ ಪೇಳಿದನು ॥ ೧೮ ॥ ಪರಿಮಳಾತಿಶಯವನು ಬೀರುತ । ಲುರೆಮಘ
ಮಘಿಸಿ ಸಲೆವಿರಾಜಿಪ । ತರತರದ ಚಂದನಕುಸುಮ ತಾಂಬೂಲಗಳನೊ
ಲಿದು ॥ ಪರಮ ಸಂತಸದಿಂದೆ ಸೇವಿಸಿ । ವರವಿಮಾನದ ಮಧ್ಯದೊಳು
ನೀಂ । ಸುರತ ಸೌಖ್ಯವನೈದುವುದೆನುತ ಪೇಳ್ದನವನಿಜೆಗೆ ॥ ೧೯ ॥
ಪರಸಖನಹ ಕುಬೇರನನು ಸಂ । ಗರದೊಳೋಡಿಸಿ ತಂದಿಹೆನು

ಸುಂ । ದಂತರಿಸಿಸಿದ ವರವಿಮಾನವ ನತ್ರಿಪರಾಕ್ರಮದೆ ॥ ಮೆರೆವ
ರವಿಗೆ ಸಮಾನವಾಗಿಹ । ದುರಂತರಮೆನಿಸಿಕೊಂಡತಿ ಮನೋ
ಹರವೆನಾಗಿಪ್ಪುದೀ ವಿಮಾನವು ನೋಡೆ ಭೂತಳದಿ ॥ ೨೦ ॥ ಇಂದು
ಮುಖಿ ಕೇಳತಿಮನೋಹರ । ಮೆಂದೆನಿಸ ನೋಟವನು ತಳೆದರ ।
ವಿಂದದಂತುರೆಮೆರೆವ ನಿನ್ನಯ ಮುಖವು ಕಂದಿಹುದು ॥ ಹಿಂದೆನಾಸಿಂ
ತಾವವನಿತೆಗು । ವಂದಿಸಿಲ್ಲವರುಗಳ ನೀತೆರ । ದಿಂದೆ ಕೇಳಿದುದಿಲ್ಲ
ನಿನ್ನನು ಬೇಡುವೆಂದದಲಿ ॥ ೨೧ ॥ ಖಳನ ಮಾತುಗಳೆಲ್ಲವನು ಕೇ ।
ಳ್ದಳುತ ಮುಖವನು ಮುಚ್ಚಿಕೊಂಡಾ । ಲಲಿತೆ ವಸ್ತ್ರದೊಳೆಂದುನ
ಯನಾಂಬುವನು ಸುರಿಸಿದಳು ॥ ಸಲೆ ವಿಷಾದಿಸಿ ಪಗಲಿರುಳು ಮಿನ ।
ಕುಲತಿಲಕರಾಘವನ ಜಾಪಿಸಿ । ಬಳಲುತತಿ ದೈನ್ಯವನುತಾಳ್ದು ಸ್ವಸ್ಥ
ಳೆನಿಸಿದಳು ॥ ೨೨ ॥ ದನುಜವಲ್ಲಭ ನೀ ತೆರದೊಳಾ । ವನಜಲೋ
ಚನೆ ಜಾನಕಿಗೆ ಪೇ । ಳ್ದು ನಿಜಚಿತ್ತದೊಳೆಂದು ತಿಳಿದನು ಕಾಲವಶನೆ
ನುತ । ಮನದೊಳಂಜುತ ಸೀತೆ ರಾಮನ । ನೆನೆದು ಕೋಪವನಾಂತು
ಕೂಡೆ ರ । ಜನಿಚರೇಂದ್ರನಿಗೆಂದಳಾಗಲೆ ಪಿಡಿದು ಕಡ್ಡಿಯನು ॥ ೨೩ ॥
ಮನುಜಘಾತುಕಕೇಳು ರಘುನಂ । ದನನು ಭೂವರದಶರಥನಸುತ । ನೆ
ನಿಪನು ವಿಶಾಲವಹ ನಯನಂಗಳನು ತಾಳ್ದಿಹನು ॥ ಘನಸುಬಾಹುಗಳಿಂ
ದೆಸೆವನು ತ । ಪನಕುಲದೊಳುತ್ತಮನು ಜಗದೊಳು । ವಿನುತಿಪೆತ್ತಿಹ
ರಾಮನೆನಿಸುತ ಜನಸಮೂಹದಲಿ ॥ ೨೪ ॥ ವಿನುತಿಯಾಂತಿಹ ನಮಲ
ಸತ್ಯದೊ । ಳೆನಗೆ ರಾಮನೆದೇವರಾಗಿಯು । ವಿನಯನಾಗಿಯು ವಿಹ
ನು ಲಕ್ಷ್ಮಣಸಹಿತ ರಣದೊಳಗೆ ॥ ಘನಶರಗಳಿಂ ಕಡಿದಪನು ನಿ । ನ್ನನ
ತಿ ಶೀಘ್ರದೊಳಾರಘುವರನೆ । ಲೆ ನಿಶಿಚರಕೇಳೆನುತ ಜಾನಕಿನುಡಿದಳಾ
ಗ್ರಹಿಸಿ ॥ ೨೫ ॥ ದಾನವಾಧಮಕೇಳು ನನ್ನನು । ಕಾನನದೊಳಾ ರಾ
ಮಲಕ್ಷ್ಮಣ । ರಾನಿಜಕುಟೀರದೊಳಿರುವ ವೇಳೆಯೊಳವರಿದಿರಲಿ । ನೀ ।
ನು ವಂಚಿಸಿತಂದಿರೆ ಜನ । ಸ್ಥಾನದೊಳು ಖರನಳಿದತೆರದೊ । ಳ್ಪ್ರಾ
ಣನಾಶವನೈದುತಿದ್ದು ರಘುವರನಂಬಿನಲಿ ॥ ೨೬ ॥ ಗರುಡನಲಿಹಾವುಗಳು
ಸಾಯುವ । ತೆರದೊಳೀ ಘೋರಾಕೃತಿಗಳನು । ಧರಿಸಿ ದತ್ರಿಬಲಶಾಲಿಗಳೆ
ನಿಪ ಖೂಳರಕ್ಕಸರು ॥ ಭರದೊಳು ವಿಷಾದವನು ತಾಳುತ । ಮರಣ
ವನು ಹೊಂದುವರು ರಾಮನ । ಶರದೊಳೆಂದಾ ರಾವಣಗೆ ಪೇಳಿದಳು
ಭೂಮಿಸುತೆ ॥ ೨೭ ॥ ಮನುಜಭಕ್ಷಕಕೇಳು ರಘುವೀ । ರನಶರಂಗಳು
ನಿನ್ನ ದೇಹವ । ನು ನೆರೆಸೀಳ್ವುವು ನನ್ನ ಕೊಲ್ಲುವರಿಲ್ಲವೆಂದೆನುತ ॥

ಮನದೊಳಗೆ ತಿಳಿಯದಿರುವೆ ನೀನೆಲೆ । ದನುಜನಾಶಕನೆನಿಸಿದ ರಘುನಂ । ದನನೆನಿನ್ನನು ಸಂಹರಿಸುವನು ಬೇಗಕದನದಲಿ ॥ ೧೮ ॥ ಸವನದೊಳು ಕುಂಗೊಳಿಪ ಯೂಪಕೆ । ಸವನಿಸಿದ ಪಶುವಂತೆ ಪತಿಕೊ । ಲ್ಲುವನು ನಿನ್ನನು ಖಂಡಿತವೆನುತ್ತ ತ್ರಿಳ ಚಿತ್ತದೊಳು । ಅವನಿಗುರುಳಲಿ ರವಿಕಿರಣಗಳ । ಜೀವವು ಶೋಷಿಸಲು ರಘೂದ್ವಹ । ನು ಮಹಿಜೆಗೆ ಕೇಂಡೆಯ್ಯದಿರನೆಂದೊರೆದಳವನಿಸುತೆ ॥ ೧೯ ॥ ಪಲಲ ಭಕ್ಷಕರೆಳುನಿನ್ನಯ । ಕುಲಬಲ ಕ್ರೀಚೇತನಂಗಳು । ವಿಲಯವಪ್ಪವುಸೇನೆ ಪರಿವಾರಲ ಸಹಿತ ಶೀಘ್ರದಲಿ ॥ ಲಲನೆಯರು ವೈಧವ್ಯವನು ತಾ । ವ್ತಳವರೀ ಲಂಕೆಯೊಳು ನಿನ್ನಯ । ಕಲುಷದಿಂದೀ ಪುರದ ಶೂರರಿಗೊದಗುವ್ರದು ಮರಣ ॥ ೨೦ ॥ ಪತಿಯುಬಳಿಯಿಂದೆನ್ನ ನೀಪ್ರರ । ಕತಿ ಬಲಾತ್ಕಾರದೊಳು ತಂದದು । ರಿತವು ಸೌಖ್ಯವನಾಗಿಪ್ಪದೆ ನಿನಗೆಂದಿಗಾದೊಡೆಯು ॥ ಕ್ಷಿತಿಯೊಳತಿ ಶೂರನಹನನ್ನಯ ಪತಿಯು ದೇವಸಮಾನನೆನಿಸಿ ನಿ । ರುತವು ಭೀತಿಯನುಳಿದು ಪಂಚವಟಿಯೊಳು ತಾನಿಹನು ॥ ೨೧ ॥ ನಿನ್ನಹಂಕಾರ ಬಲದರ್ಪವ । ನೆನ್ನ ಪತಿ ಮುರಿವನೆಲೆ ರಾವಣ । ನಿನ್ನ ಸಂತಸ ವೆನ್ನಪತಿಯಿಂ ಲಯವನೆಯ್ದುವ್ರದು ॥ ನನ್ನ ತಂದುದರಿಂದೆ ನೀನುಂ । ನಿನ್ನ ಯಂತಃಪುರವು ನಗರವು । ನಿನ್ನಖಿಳ ಸೈನಿಕರು ಸಾಯುವರೆಂದಳಾಸೀತೆ ॥ ೨೨ ॥ ಖಳದಶಾನನ ಕೇಳು ಮೇದಿನಿ । ಯೊಳು ಶಮನನಿಂದಖಿಳ ಜೀವಿಗ । ಳಲಿ ವಿಹಿತವಾಗಿರ್ಪ ಮರಣವದಾವಸಮಯದಲಿ ॥ ಸಲೆತಲೆಯಿಡುವುದಾ ಸಮಯದೊಳ । ಖಿಳಜನರು ಕಾಲವಶವೆನ್ನಿಸು । ತಲೆ ಮರಣ ಚಿಹ್ನೆಗಳ ನೆಸಗುತ್ತಿಹರು ನೈಜವಿದು ॥ ೨೩ ॥ ಸವನಶಾಲೆಯ ನಡುವೆ ಬ್ರಾಹ್ಮಣ । ರವರ ಮಂತ್ರಗಳಿಂದೆ ಪರಿಶು । ದ್ಧವೆನಿಸುತ ಸೃಕ್ಸ್ರುವಗಳಿಂದುರೆ ಮೆರೆವ ವೇದಿಕೆಯು ॥ ಅವನಿಯೊಳು ಚಂಡಾಲಗೆಂತುತು । ಳಿವುದಕಳವಲ್ಲದಿಹುವದರಂ । ತೆ ವಶವಾಗುವಳಲ್ಲ ನಿನಗೆಂದೊರೆದಳಾಸೀತೆ ॥ ೨೪ ॥ ಜಲರುಹಾಕರದೊಳಿನಯನೊಡನೆ । ಸಲೆ ವಿಹರಿಪಾ ರಾಜಹಂಸಿಯು । ಬೆಳೆದಹುಲ್ಲಿನ ಮಧ್ಯದೊಳಗಿಹ ನೀರು ಕಾಗೆಯನು ॥ ನಲಿದದೆಂತೀಕ್ಷಿಪುದು ಪೇಳೆಲೆ । ಖಳದಶಾಸ್ಯನೆ ರಾಮಚಂದ್ರನ । ಲಲನೆ ನಿನ್ನನು ಕೊಲ್ಲದೀಕ್ಷಿಸುತಿಹಳೆ ಮನಸೋತು ॥ ೨೫ ॥ ಪಾಪಿ ರಾವಣ ಕೇಳು ದಶರಥ । ಭೂಪನಾಸೊಸೆಯನ್ನು ಮುಟ್ಟಲು । ರೂಪು ತೋರದೆ ಜವದಿಯುಮಸನ್ನಿಧಿಯನೆಯ್ದುತಿಹೆ ॥ ಕೋಪವನುಳಿದು ರಾಮನ ಪದಸ । ಮೀಪಕೊಪ್ಪಿಸಿ

ನನ್ನ ನೀಗಳ್ । ನೀಂ ಪದುಳದಿಂದಿಹುದು ಲಂಕೆಯೊಳೆಲ್ಲರೊಡಗೂ
ಡಿ ॥ ೩೬ ॥ ಮುನಿವಿಘಾತುಕ ಕೇಳು ನನ್ನಯ । ತನುವನೀಗಳೆ
ಬಂಧಿಸಿದೊಡಂ । ಕನಲಿ ಭಕ್ಷಿಸಿ ದೊಡಮಿದನು ರಕ್ಷಿಸೆನು ಪ್ರೀತಿಯ
ಲಿ ॥ ನನಗೆ ದುಃಖವನಾಗಿಸುತ ಬಂ । ಧುನಿವಹಂಗಳ ಸಹಿತ ಕಾಲನ ।
ಮನೆಯನೈದುವೆ ನೀನು ಶೀಘ್ರದೊಳೆಂದು ಪೇಳ್ದಳು ॥ ೩೭ ॥ ಇಂತು
ಪೇಳ್ದಸುರೇಂದ್ರನಿಗೆ ಸಮ । ನಂತರದೊಳಾ ಸೀತೆ ನುಡಿಯದೆ ।
ಚಿಂತಿಸುತ ಕೊನೆಯಿಲ್ಲದತಿ ದುಃಖದೊಳು ತಾ ನಿರಲು ॥ ಅಂತಕನ
ತೆರದಿಂದೆ ಮುಳಿದ । ತ್ಯಂತ ಭೀತಿಯ ನುಂಟುಮಾಡುತ । ನಂತೆ ಯು
ಣುಗಿಗೆ ನುಡಿದರಾವಣ ನಂದು ಗರ್ಜಿಸುತ ॥ ೩೮ ॥ ನನ್ನ ಮಾತನು
ಕೇಳು ಜಾನಕಿ । ಹನ್ನೆರಡು ತಿಂಗಳುಗಳೊಳು ನೀ । ನೆನ್ನ ವಶವಾ
ಗುವುದುದಾಸೀನವನು ಮಾಡಿದೊಡೆ । ನಿನ್ನ ಖಂಡಿಸಿ ಚೂರುಚೂ
ರುಗ । ಳನ್ನು ಮಾಡುವೆ ನೆಂದು ಹೆದರಿಸಿ । ತನ್ನ ರಕ್ಕಸಿಯರಿಗೆ ರಾವ
ಣ ಪೇಳ್ದನತಿಭರದೆ ॥ ೩೯ ॥ ಪಲಲ ರಕ್ತಗಳಿಂದೆ ದೇಹವ । ಬೆಳಸಿ
ಜನರನು ಹಿಂಸಿಸುವಿರೀ । ನೆಲದೊಳತಿ ಘೋರಾಕೃತಿಗಳನು ನೀವು
ಪಡೆದಿಹಿರಿ ॥ ಬಳಸಿ ಸೀತೆಯನು ಘನಗರ್ಜನೆ । ಗಳಲಿ ಭಯಪಡಿಸು
ತ್ತ ರಾತ್ರಿಹ । ಗಲು ಪರಿಹರಿಪುದಿವಳ ದರ್ಪವನೆಂದನಸುರಪತಿ ॥ ೪೦ ॥
ಒಡನೆ ಘೋರನಿಶಾಚರಿಯರಾ । ಪೊಡವಿಯಾತ್ಮಜೆ ಯೆಡೆಗೆನಡೆತಂ । ದೆ
ಡೆಗೊಡವ ಪೋಲ್ಬಳಸಿಕೊಂಡರು ಗುಂಪುಗುಂಪಾಗಿ ॥ ಕಡುಭಯಂಕರ
ರಕ್ಕಸಿಯರಿಗೆ । ನುಡಿದನಾ ದಶಕಂಧರನು ನೀ । ವಿಡುವುದೀ ಸೀತೆಯನ
ಶೋಕವನದನಡುವೆಯನುತ ॥ ೪೧ ॥ ನೀವುಗೋಪ್ಯದೊಳಾಲಿಸಿ ಪಾಲಿಪು ।
ದೀ ವಸುಮತೀಬಾಲೆಯ ನಶೋ । ಕಾವನದ ಮಧ್ಯದೊಳು ಚತುರೋ
ಪಾಯಗಳನರುಹಿ ॥ ಆವವಿಧದಿಂದಾದೊಡಂ ಸರಿ । ನೀವಿವಳನೆನ್ನ ವಶಮಾ
ಡುವು । ದಾ ವನಕರಿಣಿಯನ್ನು ವಶಪಡಿಸುವೊಲು ಯುಕ್ತಿಯಲಿ ॥ ೪೨
ದನುಜನಾಜ್ಞೆಯ ನಾಲಿಸುತ್ತಾ । ವನದಮಧ್ಯಕೆ ಕೊಂಡು ಪೋದರ ।
ವನಿಸುತೆಯನಾ ರಕ್ಕಸಿಯರತಿ ವೇಗದಿಂದಿರದೆ ॥ ಅನುದಿನದೊಳಾ ರಾಘ
ವನ ಸತಿ । ಯನುಭಯಪಡಿಸುತಿದ್ದರಿರಿಸುತ । ವನದ ಮಧ್ಯದೊಳಧಿಕ
ಕೋಪವನಾಂತುಗರ್ಜಿಸುತ ॥ ೪೩ ॥ ಸರ್ವರಾಕ್ಷಸಿ ಯರತಿಭರದಿಂ
ದುರ್ವರಾತ್ಮಜೆಯನ್ನು ಬಳಸಿಯ । ಖರ್ವಸಂಪದದಿಂದೆಸೆವ ಶೋಕವನ
ಕೈತಂದು ॥ ಸರ್ವಪಕ್ಷಿಗಳಗೆಡೆಯೆನಿಸು । ತುರ್ವರೆಯೊಳತಿ ಸುಂದರವೆ
ನಿಪೆಸರ್ವಡೆದಬನ್ನಿಮರದಕೆಳಗೆ ಕೂಡಿಸಿದರೊಲಿದು ॥ ೪೪ ॥ ದುಷ್ಟ ಪ

ಶುಗಳ ಕೈಗೆಸಿಕ್ಕುತ । ಕಷ್ಟವಡುವಾ ಹರಿಣಿಯಂತತಿ । ಕಷ್ಟವನು ತಾನೈದುತಾ ಧರಣೀಸುತೆವನದೊಳು ॥ ಇಷ್ಟಬಂಧುಗಳನುಳಿದು ಸುಖ । ಭ್ರಷ್ಟಳಾಗುತ ಹಗ್ಗದಿಂದಲೆ । ಕಟ್ಟಿದಾಹರಿಣವೊಲು ನಡಗುತಭಯವನೆಯ್ದಿದಳು ॥೪೫॥ ಸೀತೆ ರಾಮನಚಿಂತಿಸುತ ಬಹು । ಭೀತಿಯುನು ತಾಸಾಂತು ಮನದೊಳು । ಕಾತರಿಸುತರೆ ಕುಂದಿನಡನಡುಗುತ್ತ ಬೆಂಡಾಗಿ ॥ ಚೇತರಿಸಿಕೊಳ್ಳದೆಯೆ ಸಾಕ್ಷ್ಯ । ವಾ ತವನುಳಿದು ರಕ್ಕಸಿಯರಿಗೆ । ಸೋತು ರೋದಿಸುತಿದ್ದಳಾವನದಲ್ಲಿ ಹಗಲಿರುಳು ॥ ೪೬ ॥ ಧರೆಯೊಳಾರಾಘವನ ಸತಿಯಾ । ಗಿರುವೆ ಧರಣೀದೇವಿಮಗಳಾ ; ಗಿರುವೆಮೋಣ್ದಶರಥನ ಸೊಸೆಯಾಗಿರುವೆ ನಿಮಿಕುಲದ ॥ ಅರಸನಾಗಿಹ ಜನಕಭೂವರ । ನರಮನೆಯೊಳಗೆ ಬೆಳೆದನನಗೀ । ಪರಿಯು ಕಷ್ಟವೊದಗಿದುದೇ ಹಾ ಯೆಂದುಕೊರಗಿದಳು ॥ ೪೭ ॥ ಬಂಧು ಬಳಗಂಗಳನುಳಿದು ಮನ । ನೊಂದಶೋಕಾವನದ ಮಧ್ಯದೊ । ಳಂದುಮುಖಿ ರಕ್ಕಸಿಯರೊಳಗೆ ಸಿಕ್ಕಿಚಿಂತಿಸುತ ॥ ಸಂದದುಃಖವ ತಾಳಲಾರದೆ । ಕುಂದಿಮನ ನೊಂದಡಿಗಡಿಗೆ ರಘು । ನಂದನನ ನಾಮವನು ಜಾನಿಸುತಿದ್ದಳನುದಿನವು ॥ ॥ ೪೮ ॥

ಇಂತು ಹನ್ನೆರಡನೆಯ ಅಧ್ಯಾಯ ಸಂಪೂರ್ಣವು. ಪದ್ಯಗಳು ೬೦೩.

ಹದಿಮೂರನೆಯ ಅಧ್ಯಾಯ.

ಸೂಚನೆ ॥ ಜನರಿಗಾನಂದವನು ಕೊಡುತಿಂ ।
ದ್ರನವನವ ಧಿಕ್ಕರಿಪಶೋಕಾ ।
ವನದಲಂಕಾರವನು ಕಂಡಳು ಸೀತೆ ಶೋಕಿಸುತ ॥

ವಿಮಲಜಲದಿಂದೆಸೆದವು ವಿಶಾ । ಲಮೆನಿಪ ಸರೋವರಗಳರಳಿದ । ಕಮಲಸಂಚಯದಿಂದೆ ನಿರುತವಶೋಕವನದೊಳಗೆ ॥ ವಿಮಲವಾರಿಯೊಳೊಪ್ಪಿದವಖಿಳ । ಕಮಠಕಚ್ಛಪಮುಖ್ಯಜಲಚರ । ಸಮುದಯವುಸಂತೋಷವನು ಮಾಡುತ್ತ ನೆರೆನೆರೆದು ॥ ೧ ॥ ಸಕಲಕಾಲದೊಳರಳಿದ ಕುಸುಮ । ನಿಕರದಿಂದೆಸೆದಿದ್ದುವಾ ಕುರು । ವಕ ತಿಲಕಮಂದಾರ ಬಂಧೂಕ ಕರವೀರಗಳು ॥ ವಕುಳಪಾಟಲಿ ಜಾಜಿ ಘನಕೇ । ತಕಿ ರಸಾಲ ಶಿರೀಷಮಧು ಚಂ । ಪಕವರಸುಪುನ್ನಾಗ ಮುಖ್ಯಮರಂಗಳಾವನದೆ ॥ ॥ ೨ ॥ ಪಲಸು ಕಿತ್ತಳೆ ಬಾಳೆ ನೇರಿಳೆ । ಯಳಚಿಮಾದಳ ತಾಳತೆಂಗು

ಹೆ ರಿಳಿ ಚಕೋತವು ಮಾವುಬೇಲ ದ್ರಾಕ್ಷೆಖರ್ಜೂರ ॥ ಪಲತೆರದ ದಾಳಿಂಬೆ ಚೈತ್ರಾ । ಮಲಕ ಸೀತಾಳಬಹುಬೀಜಮೊ । ದಲಹ ಫಲಪಾದಪಗಳೆಸೆದವು ಬಹುಫಲವನಾಂತು ॥ ೩ ॥ ಅಲ್ಲಿಗಲ್ಲಿಗೆ ಪುಷ್ಪವಲ್ಲಿ ಗ । ಳಲ್ಲಿಗಲ್ಲಿಗೆ ತಳಿರತಲ್ಪಗ । ಳಲ್ಲಿಗಲ್ಲಿಗೆ ಲತೆಯಮಂಟಪ ಗಳೆಸೆದೊಪ್ಪಿದವು ॥ ಅಲ್ಲಿಗಲ್ಲಿಗೆ ಮರಳದಿಬ್ಬಗ । ಳಲ್ಲಿಗಲ್ಲಿಗೆ ನೀರಕಾಲ್ವೆಗ । ಳಲ್ಲಿಗಲ್ಲಿಗೆ ತಳಿರ ತೋರಣಗಳುರೆ ರಂಜಿಪವು ॥ ೪ ॥ ತಳಿರಕೆಂಪಿಂ ವರಕುಸುಮಂಗಳ । ಹಳದಿಯಿಂಮಿಡಿಗಳ ಹಸುರಿನಿಂ । ಬೆಳದು ತನ್ನೊಳು ಪಬ್ಬಿದಾವಲ್ಲಿಗೆಯ ಹೂವುಗಳ ॥ ಬಿಳುಪಿನಿಂದವೆ ಕೆರಗಿದಳಿಗಳ । ಸಲೆಹೊಳೆವ ಕಪ್ಪಿಂವೆ ಮಾಮರ । ಗಳುರೆಮೆರೆದವು ಪಂಚವರ್ಣದ ರಥಗಳಂದದಲಿ ॥ ॥ ೫ ॥ ಎಳೆಯತನದೊಳ್ತಮಗೆ ಪದೆದಿ । ತ್ತಲವಣೋದಕವನ್ನು ನೆನೆಯುತ । ತಲೆಯೊಳಗೆಧರಿಸುತ್ತ ಪೀಯೂಷಸಮವಾರಿಯನು । ನಲಿದುತಾವ್ಕೊಡುತಿದ್ದ ವುಜನಂ । ಗಳಿಗೆ ತೆಂಗಿನಮರಗಳಾವನ । ದೊಳಗೆ ತಮ್ಮಯ ಜೀವಮಾನದತನಕ ದಿನದಿನವು ॥ ೬ ॥ ನಲಿದು ನಮ್ಮನು ಪೋಷಿಸಿದುದೀ । ನೆಲಮೆನುತವನಿಯನ್ನುತಪ್ಪದೆ । ಸಲಿಲಮಂತ್ರಾಕ್ಷತೆಗಳಿಂದರ್ಚನೆ ಯೆಸಗಿದಂತೆ ॥ ಬೆಳೆದತೆಂಗಿನ ಮರಗಳಾವನ । ದೊಳಗೆ ಯುದುರಿಸುತಿದ್ದವು ಕುಸುಮ । ಫಲಸಲಿಲಗಳನಂತೆಹೊಂಬಾಳೆಗಳನನುದಿನವು ॥ ೭ ॥ ಅನುದಿನವು ನಮ್ಮನ್ನು ಪೊರೆದುದು । ಮನವಮರುಕದೊಳವನಿಯೆಂದುರೆ । ವಿನಯದಿಂವೆರಗುವವೊ ಲಾವನದೊಂದುಕಡೆಯೊಳಗೆ ॥ ಘನಫಲಂಗಳನಾಂತು ರಂಜಿಪ । ಗೊನೆಗಳ ಬಹಳಭಾರದಿಂದಿಳೆ । ಗೆ ನೆರೆಬಾಗಿದ ಪಲವುತೆರದಾ ಬಾಳೆಗಳೆಸೆದವು ॥ ೮ ॥ ಸಲೆಬೆಳೆದದಾಡಿ ಮದ ವೃಕ್ಷಂ । ಗಳೊಳು ಕಿಕ್ಕಿರಿದೊಗೆದ ಬಿರಿದಾ । ಫಲಗಳೀನೆಸೆದುವು ನಿಶಾಚರನಾರವೆಯೊಳಂದು ॥ ಥಳಥಳಿಪ ಚಿನ್ನದೊಳು ಕೆತ್ತಿದ । ಬೆಲೆವಡೆದರತುನಂಗಳಂದದೆ । ಸಲೆವಿರಾಜಿಸುತಿರ್ದವಾ ಹಣ್ಣುಗಳಬಿತ್ತುಗಳು ॥ ೯ । ಪಲವುಫಲವೃಕ್ಷಂಗಳೀ ವನ । ದೊಳಿರುತಿರ್ದ್ದೀಂ ಫಲವು ಮೇದಿನಿ । ಯೊಳು ಪಸಿವೆನಸ್ಮೃತೆಕಳೆವವೆ ಮಾನವರಿಗೆನುತ ॥ ಪಲಸಿನಮರಂಗಳವುಗಳ ಬೇ । ರ್ಗಳಮೊದಲಿನಿಂ ಕೊನೆಯವರೆಗಂ । ಫಲಗಳನು ಬಿಟ್ಟಲ್ಲಿ ತಣಿಸುತಲಿರ್ದವೆಲ್ಲರನು ॥ ೧೦ ॥ ಆವಕಾಲದೊಳಾವ ಠಾವಿನೊ । ಳಾವನಾಗಲಿ ಬಯಸುವನೊ ತಾ । ನಾವಫಲವನು ದೊರೆಯದಿರದಾ ಬನದೊಳವನಿಗದು ॥ ಭಾವಿಸಲ್ಕಸ್ವಾರ್ಥನಾಮವ । ಲಾವನಕಿರುವಶೋಕನಾಮವು । ಶ್ರೀವಿಹಾರ

ಸ್ಥಳವೆಮಾಗಿರ್ದೆಸೆವುದನುದಿನವು । ೧೧ ॥ ಗರುಡಸಾರಸ ಹಂಸಬ
ಕತಿ । ತ್ತಿರಿಮಯೂರ ಕಪೋತಟಿಟ್ಟಿಭ । ವರಚಕೋರರಥಾಂಗಪಿಕ
ಶುಕಶಾರಿಕಾದಿಗಳು ॥ ನೆರೆನೆರೆದು ಸಲೆಪಾಡುತಿರ್ಪ । ಪರಿಯು ನೋಡಿ
ದೊಡಾವರಾಗಲಿ । ತೊರೆದುನಿಜಚಿಂತೆಗಳನಲ್ಲಿಯೆ ವಸಿಸಲೆಳಸುವನು
॥ ೧೨ ॥ ಧನಿಕನನೋಯಿಸದೆ ಪಡೆದಾ । ತನ ಪದಾರ್ಥವನುಂಡುನ
ಲಿದಾ । ಧನಿಕನಿಗೆ ಪುಣ್ಯವನು ನೀಡುವೆಸುಜನರಂದದೊಳು ॥ ವನದ
ಫಲಪುಷ್ಪಗಳ ಕಾಂತಿಗ । ಳನಿನಿಸುಂಕಡಿ ಸವಿದುಗಳರಸ । ವನುಕುಡಿ
ದೆಸೆದವಾ ಭ್ರಮರಗಳಶೋಕವನದೊಳಗೆ ॥ ೧೩ ॥ ನವಿಲನಾಟವೆ
ನಾಟ್ಯವಳ್ಳಿಗಳ । ರವವೆಗಾನಮಡಿಗಡಿಗಿರದೆ ವೊ । ರೆವಪಿಕದನಿಯೆ
ಚಾರುತರಘನವಾದ್ಯವೆಂದೆನಿಸೆ ॥ ಅವನಿಯೊಳು ಬೀಳ್ವಕುಸುಮಂಗ
ಳೆ । ಸೆವವಿನುತ ಪುಷ್ಪಾಂಜಲಿಗಳಾ । ಗೆ ವನವೆಸೆದುದು ಲಾಸ್ಯವೆಂದಿರ
ದಂತೆ ಕಾಣಿಸುತ ॥ ೧೪ ॥ ಜಲದೊಳೆಸೆವರ ಸಂಚೆಕೊಂಚೆಗ । ಳುಲಿ
ಗಳಿಂ ಫಲಕೆರಗುವಾಪ್ರೊ । ಕ್ಕಳಗಿಳಿಗಳಿಂ ಪುಷ್ಪನಿವಹದಪೆಂಪುಕಂಪು
ಗಳ ॥ ಬಳಗದಿಂದುಲಿವಖಿಳವಿಹಗಂ । ಗಳೆಸಗುವ ಘನಕೇಳಿಗಳ
ವಂ । ಗಳ ರಚನೆಯಿಂದಾ ಯಶೋಕಾವನವಿರಾಜಿಸಿತು ॥ ೧೫ ॥
ಸುರಪನವನಂತನಗೆ ಸಾಟಿಯೆ । ಹರಸಖನಚೈತ್ರರಥ ವೆನಗೇಂ ।
ಸರಿಯೆನಿಪ್ರದೇಂತ್ರಿಜಗದೊಳೆಸೆವ ವನಗಳೆನ್ನಂತೆ ॥ ನೆರೆಯಶೋಕವೆ
ನಿಪ್ಪಪೆಸರಿಂ । ದೆರಚಿಸುವುದೆ ಯಶೋಕವನುಮನು । ಜರಿಗೆ ಪೇಳೆಂ
ದುಲಿವ ವೊಲ್ಮೆರೆದುದು ಪಿಕಧ್ವನಿಯು ॥ ೧೬ ॥ ಬಂದುಬಗೆಬಗೆ ಹಣ್ಣ್ಗ
ಗಳನಾ । ನಂದದಿಂ ಸವಿದೀ ಕುಸುಮಗಳ । ಚಂದವನುಕಂಡವನು ಧರಿ
ಸುತಮಧುಪಪಙ್ಕ್ತಿಗಳ ॥ ಸುಂದರತರದ ಗಾನವನು ಹಿತ । ದಿಂದಕೇ
ಳುತ ಸುಖವನೈದುವು । ದೆಂದು ಜನರನು ಕೂಗುವಂದದೆಸೆದುದು
ಪಿಕನಿನದ ॥ ೧೭ ॥ ಚರಿಪದುಂಬಿಯ ಬಳಗನೆಸೆವಾ । ಕರಿಯಮು
ಗಿಲಂ ತೊಪ್ಪೆಸುಚರಿ । ಪ ರಮಣೀಮಣಿಗಣದ ಕಡೆಗಣ್ಮಿಂಚಿನಂತೆಸೆ
ಯೆ ॥ ಮರುತಹತಿಯಿಂದೊಗುವ ಪೂಗಳೆ । ಪಿರಿಯಹನಿಯಂತೊಪ್ಪೆ
ಭೃಂಗಗ । ಳರವವೇ ಸಿಡಿಲೆನಿಸೆ ಕಾರ್ಮುಗಿಲಂತೆಸೆದುದುವನ ॥ ೧೮ ॥
ದನುಜವಲ್ಲಭ ನಾಯಶೋಕಾ । ವನದೊಳಿರಿಸಿರ್ದನು ಮತಂಗಜ ।
ವನಮಹಿಷಕಪಿ ಸಿಂಹಸೂಕರ ಶರಭಭಲ್ಲೂಕ ॥ ಘನಹರಿಣಶಾರ್ದೂಲ
ಗಂಡಕ । ವನತುರಂಗಗಳಾದಿಯಾದ ವಿ । ಗನಿವಹಂಗಳ ನೆಲ್ಲಜನರನು
ಸಂತಸವಡಿಸಲು ॥ ೧೯ ॥ ಬಂದುಕಡೆ ಕೋಗಿಲೆಯು ಸಿಡುಸರ । ವೊಂ

ದುಕಡೆ ಪಾರಿವದಗುಡುಗುಡ । ದೊಂದುಕಡೆಯೊಳು ನೋಗನವಿಲಿನ ಕೇಕೆಯುಸಿನದವು ॥ ಒಂದುಕಡೆ ಬಕಪಕ್ಷಿಯುತಪ ಮ । ದೊಂದುಕಡೆ ಶುಕಶಾರಿಕಾದಿ ಗ । ಳಂದವೊಪ್ಪಿರೆ ಕಂಗೊಳಿಸಿತಾ ದಶಶಿರನವನವು ॥ ೧೦ ॥ ಕುವಲಯಾನ್ವಿತ ವಾರಿಧಿಯವಿನಂ । ತವನಿಪತಿಯಂತೆ ನವಚಕ್ರವಿ । ಭವಯುತಂ ರವಿಯಂತ್ರೆ ರಥದಂತೆ ಘನರಸಭರಿತಂ ॥ ಭುವನನಿಧಿಯಂತೆ ಸುಮದಂತಾ । ಶಿವಭರಿತಪಾರಜಿತ ಗಿರಿಯಂ । ತೆ ವನದಂತೆ ನಲೊಪ್ಪಿದುದು ರಾವಣನ ಶೋಕವನ ॥ ೧೧ ॥ ಇರುಳಿನಂತಾ ಗಗನದಂತೆ ಜ । ಲರುಹದಂತಾ ವನಧಿಯಂತನ । ವರತಮಾಸೋವಾರ್ಕರಸವಿದ್ರುಮಮಹಿತವಾಗಿ ॥ ಸುರಪನಂತೆ ಸುಮೇರುಗಿರಿಯಂ । ತೆ ರಥವಂತೆ ಮುರಾರಿಯಂತಾ । ಸುರಭಿಕಾಂಚನ ಚಕ್ರಕಮಲಾನ್ವಿತಮಿದೆನಿಸಿದುದು ॥ ೧೨ ॥ ಗಿರಿಶನಂದದೆ ಸಾನುಗಂಗೆಯು । ಧರಿಸಿಹನೇತ್ರಗಳು ಮೂರಾ । ಗಿರುವುವು ಜಡೆಗಳಿಲ್ಲಕಡೆ ತೋರುತ್ತರಾಜಿಪವು ॥ ಪರವಿಭೂತಿಯುವರ್ಣವನುಧರಿ । ಸಿರುವೆ ನೀವೆನುಬೇಡಿದುವನೀ । ಧರೆಯೊಳಾರೆಣೆ ನನಗೆನಲು ತೆಂಗಾಯಿಗಳೆಸೆದವು ॥ ೧೩ ॥ ತಳಿರಮಂಟಪಗಳು ರೆಶೋಭಿಪ । ಶಿಲೆಗಳುಂ ಕೃತಕಾಚಲಂಗಳು । ಹೊಳೆವಪೊಂಗಳಸಂಗಳಿಂದೆಸೆ ದೊಪ್ಪುವಗುಡಿಗಳು ॥ ಜಲದೊಳಾಡುವ ಹಕ್ಕಿಗಳುಥಳ । ಥಳಿಪ ಬಳ್ಳಿಗಳಿಲ್ಲ ಜನರಿಗೆ । ಪಲತೆರದೊಳಾನಂದವನುಮಾಡಿದವು ವನದೊಳಗೆ ॥ ೧೪ ॥ ತಿಲಕರಂಜಿತ ಮೆಸೆವಚಂದನ । ಕಲಿತಮುತ್ತುಮವಂಶಮಹಿತಮ । ಮಲತರಾಲಂಕಾರಯುಕ್ತಮನಂತಮಣಿಸಹಿತಂ ॥ ಫಲಭರಿತವೊಂದೆನಿಸಿ ಕಾಣಿಸು । ತ್ತಿಳೆಯೊಡೆಯನಂತೆಸೆದುದೀ ನೆಲ । ದೊಳಗೆ ದಶಕಂಧರನಶೋಕವನ ವೆತ್ತಿವೈಭವದಿ ॥ ೧೫ ॥ ವನದ ದೇವತೆತಾಂ ಭಕುತಿಯಿಂ । ದನುದಿನದೊಳೀ ಧರಣಿದೇವತೆ । ಯನು ನಲಿದುಸಲೆ ಪೂಜಿಸಿದಳೆನೆ ವನದಮಧ್ಯದೊಳು ॥ ಘನಫಲಕುಸುಮ ಮುಕುಳಗಳು ಮೇ । ದಿನಿಗೆ ಬಿದ್ದೆಳನೀರಕಾಲ್ವೆಗ । ಳನೆರವಿಯೊಳು ವಿರಾಜಿಸಿದ ವೆಚ್ಚನಿಯನಾಗಿಸುತ ॥ ೧೬ ॥ ಇಂತೆಸೆವ ವನದೊಳಗೆ ತಾಂ ಸಲೆ । ಚಿಂತಿಸುತ ರಾಘವನ ನಾಮವ । ನಂತಮಿಲ್ಲದ ದುಃಖದಿಂದಾ ಸೀತೆದಿನದಿನವು ॥ ಸಂತತವು ಶೋಭಿಸುವ ವನದ । ತ್ಯಂತ ವೈಭವಗಳನು ನೋಡುತ । ಸಂತಸವನುಳಿದೈದೆ ದುಃಖಿಸುತಿದ್ದಳು ಮನದಲಿ ॥ ೧೭ ॥ ಅಡಿಗಡಿಗೆ ದಶಕಂಧರನು ತ । ನ್ನೊಡತಿಯರೊಡನಶೋಕವನಕತಿ । ಸಡಗರದೊಳೈತಂದು ಸಂತಸದಿಂದೆ ವಿಹರಿಸುತ ।

ಬೆಡಗಿನಿಂ ವನವಿಭವವೆಲ್ಲವ । ನಡೆವಿಡದೆ ನೋಡುತ್ತವನಿತೆಯು । ಕೊಡನೆ ಜಲಕೇಳಿಯು ನೆಸಗುತಿದ್ದನತಿವಿಭವದಲಿ ॥ ೨೮ ॥ ಸರವೆಗೋಮುಖಿ ಶೂರ್ಪಣಖಿನು । ಭ್ಯರಪಘೋರ ನಿಶಾಚರಾಂಗನೆ । ಯುರುಬಳಸಿಕೊಂಡಾ ಮಹೀಸುತೆಯನ್ನು ಪಲತೆರದೆ ॥ ಇರುಳು ಹಗಲೊಳು ದನುಜನಾಥನ । ವರಿಸುವುದೆನುತ ಸಂತಸಂದಳಿ । ದರುಹಿದರು ರಾವಣನನೇಮವನಾಂತು ಶಿರದೊಳಗೆ ॥ ೨೯ ॥ ಪತಿವಿಯೋಗದೊಳಾವನದನಡು । ವೆ ತಪಿಸುತ್ತಿಹ ಭೂಸುತೆಗವುರ । ಪತಿಸುಧೆಗೆ ಸಮವೆಂದೆನಿಪ ಪಾಯಸವನನುದಿನವು ॥ ಇತರರಿಗರಿಯದಂತೆ ಸಲೆಬೆಳ । ಗುತಿಹ ಚಿನ್ನದ ಬಟ್ಟಲೊಳಗಿರಿ । ಸುತ್ರತಿ ಮುದದಿಂದೀಯುತಿದ್ದನಶೋಕವನದೊಳಗೆ ॥ ೩೦ ॥ ಸೀತೆಯುವರೊಳ ಗರ್ಧವನುಸಂ । ಪ್ರೀತಿಯಿಂದಲೆ ರಾಮನಿಗೆನು । ತ್ತಾತುರದೆ ಮುಂದುಗಡೆಯೊಳಿರಿಸಿ ಪತಿಯುಜೀವಿಸಿರೆ ॥ ಭೂತಳದೊಳದು ಮಾಯವಾಗು । ತ್ತಾತನಿಗೆ ಸಂತುಷ್ಟಿಕೊಡಲೆಂ । ದಾತುರದೆ ಪೇಳುತ್ತ ಭುಜಿಪಳು ಪಾಯಸಾರ್ಧವನು ॥ ೩೧ ॥ ಸುರನರೋರಗ ಯಕ್ಷರಾಕ್ಷಸ । ಗರುಡಕಿನ್ನರ ಸಿದ್ಧವಿದ್ಯಾ । ಧರರೊಳುತ್ತಮರೆನಿಪ ನಾರಿಯರ ಸುರನಾಥನನು ॥ ಸರಸಸಲ್ಲಾಪಂಗಳಿಂದನ । ವರತವೊಲಿಸುತ ಶೋಕವನದೊಳು । ಪರಮಸಂತಸದಿಂದೆ ಪಡೆದರಖಿಳವಿನೋದಗಳ ॥ ೩೨ ॥ ಸಕಲನಾರಿಯರಾಮಹೀಸುತೆ । ಯ ಕಡೆಗೈತಂದವಳಿಗಿಪತಿ । ಭಕುತಿಯನುಕಾಣುತ್ತ ಬಾಗಿಸಿ ತಮ್ಮ ತಲೆಗಳನು ॥ ಚಕಿತರಾಗುತ ತಮ್ಮನಡತೆಯ । ನು ಕುರಿತನು ದಿನಚಿಂತಿಸುತ್ತಸ । ಲೆ ಕೊರಗಿ ವಿಷಾದವನುತಾಳುತಲಿದ್ದ ರೆದೆಯೊಳಗೆ ॥ ೩೩ ॥ ಉಡುಗೆ ತೊಡುಗೆಗಳನ್ನಪೇಕ್ಷಿಸ । ದಡಿಗಡಿಗೆ ರಾಘವನನನೆನೆದಾ । ಪ್ರೊಡವಿಸುತೆ ರಾವಣನಶೋಕವನದೊಳು ರೋದಿಸುತ ॥ ಕಡುಗಿಗರ್ಜಿಪ ದನುಜೆಯರ್ಕಳ । ನಡುವೆ ತಾನಿರುತಿದ್ದಳು ದುರುಳ । ರೊಡಲೊಳಹಪರಮಾತ್ಮನಂದದೆ ಕುಂದಿಕೊರಗುತ್ತ ॥ ೩೪ ॥ ಅಸುರರೆಲ್ಲರು ಕಂಡು ರಾವಣ । ನೆಸಗಿದಾಕೇಳ್ತನವೆ ನೀಪುರ । ಕೆ ಸಮನಿಸಿತು ವಿನಾಶಕಾಲವೆನುತ್ತ ತಾವರಿತು ॥ ಬಸವಳಿದು ದುಃಖವನುತಾಳಿದ । ರಸುರನನು ಜವಿಭೀಷಣನು ಚಿಂ । ತಿಸಿ ಮನದೊಳ್ಳೈದಿದ ನತಿವಿಷಾದವನು ಪಲತೆರದೆ ॥ ೩೫ ॥ ರಾಮಮಂಗಳನಾಮ ರಾಕ್ಷಸ । ಭೀಮ ಭಾಸ್ಕರ ದೇವವಂಶಲ । ಲಾಮ ಸುಗುಣಗುಣಾಭಿರಾಮ ನಮಿತಜನಪ್ರೇಮ ॥ ಭೂಮಿಕರುಣಾಧಾಮ ತಾರಕ । ನಾಮ ಪಾಲಿಸುಪಾಲಿಸೆಂದೆನು । ತಾ ಮಹೀಸುತೆ ಜಪಿಸುತಿ

ಷ್ಟಳು ರಾಮನಾಮವನು ॥ ೩೬ ॥ ನನ್ನ ಕಷ್ಟವನಾರು ರಾಮನಿ। ಗಿನ್ನುಪೇಳುವರೆಂದು ಜಾನಕಿ। ತನ್ನಚಿತ್ತದೊಳಂದುಕೊಂಡಾ ಶಿಂಶುಪಾತರುವ ॥ ಚೆನ್ನೆಳಲಿನೊಳು ಕುಳಿತುಕೊಳ್ಳುತ। ಪನ್ನಗಾರಿಧ್ವಜನ ನಾಮವ। ನುನ್ನತಮತ್ರಿಯೊಳ್ಪಿದೆ ಜಾನಿಸುತಿದ್ದಳನುದಿನವು ॥ ೩೭ ॥

ಇಂತು ಹದಿಮೂರನೆಯ ಅಧ್ಯಾಯ ಸಂಪೂರ್ಣವು. ಪದ್ಯಗಳು ೬೬೦.

ಹದಿನಾಲ್ಕನೆಯ ಅಧ್ಯಾಯ.

ಸೂಚನೆ ॥ ಅಸುರನಾಜ್ಞೆಯನಾಂತು ರಾಮನ।
ರಸಿಯನು ಬಳಸಿಕೊಂಡು ವನದೊಳ।
ಗೆಸಳೆಸಲಹುತಲಿದ್ದರಖಿಳ ಕುರೂಪಿನಬಲೆಯರು ॥

ದನುಜನಾಥನ ನೇಮದಿಂದಲೆ। ವನದೊಳಾಧರಣೀಸುತೆಯನನು। ದಿನವುತಪ್ಪದೆ ಸುತ್ತಿಕೊಂಡತ್ರಿ ಹರ್ಷವನುತಾಳ್ದು। ಮನುಜಭಕ್ಷಕ ರೆನಿಸಿಭೀಕರ। ತನುಗಳನು ತಾವಾಂತರಾಕ್ಷಸ। ವನಿತೆಯರು ಕಾಯುತ್ತಲಿದ್ದರು ನಿಚ್ಚ ಮಡೆಬಿಡದೆ ॥೧॥ ಬಂದುಕಣ್ಣವ ಳೊಂದುಕಿವಿಯವ। ಳೊಂದುಕೈಯವ ಳೊಂದುಕಾಲವ। ಳೊಂದುಮೊಲೆಯವ ಳೊಂದು ಬೆರಳವ ಳೊಂದುತುಟಿಯವಳು ॥ ಬಂದಶಿಗಡಿಗಶೋಕವನ ದೊಳ। ಗಿಂದುಮುಖಿ ಸೀತೆಯನು ಸಂತಸ। ದಿಂದೆ ಹೆವರಿಸುತ್ತಿದ್ದರು ಬಳಸಿಕೊಂಡು ಹಗಲಿರುಳು ॥ ೨ ॥ ಶಿರದೊಳುಭ್ಯಾಸಿಸುವ ಮೂಗನು। ಧರಿಸಿಕೊಂಡಿರುತಿಹಳು ಲಂಬೋ। ದರಪಯೋಧರಳುತ್ತಮಾಂಗಿಯು ಘೋರರೂಪಿಣಿಯು ॥ ಧರೆಯೊಳತಿ ದೇಹವನು ತಾನಾಂ। ತಿರುವಳು ಮಹೋದರಿಯು ತಲೆಕೆಳ। ಗಿರುವಳಾವನ ದೊಳಿರುತ್ತಿದ್ದರು ಬಳಸಿ ಸೀತೆಯನು ॥ ೩ ॥ ಕೂದಲಿಲ್ಲದ ವಳತಿಯಾಗಿಪ। ಕೂದಲುಳ್ಳವಳುತ್ತಮವೆನಿಪ। ಕೂದಲಿನಕಂಬಳಿಯನಾನಂದದೊಳು ತಾಳ್ದಿಹಳು ॥ ಮೇದಿನೀಸುತೆಯನ್ನು ಬಳಸು। ತ್ತಾ ದನುಜವಲ್ಲಭನ ವನದೊಳ। ಗಾದ ಮಂಜಿಸುತಿರ್ದರೆಡೆವಿಡದಿರ್ದು ದಿನದಿನವು ॥ ೪ ॥ ಉದ್ದವಾಗಿಪ ಮುಖಗಳುಳ್ಳವ। ರುದ್ದವಾಗಿಹ ತುಟಿಗಳಾಂತಿಪ। ರುದ್ದವಾಗಿಹ ಮೂಗುಕಿವಿಗಳ ನಾಂತವನಿತೆಯರು ॥ ಉದ್ದವಹ ಮೊಣಕಾಲನಾಂತವ। ರುದ್ದವಾಜೊಡಲು ಮೊಲೆಗಳನಾಂ। ತಿದ್ದವರು ರಕ್ಷಿಸುತಲಿದ್ದರು ವನದೆ

ಸೀತೆಯನು ॥ ೫ ॥ ಕರ್ಣಹೀನರು ಶಂಕುಕರ್ಣರು । ಕರ್ಣಪ್ರಾವರ
ಣಾಂತ ರೂಪರ । ಕರ್ಣರೆನಿಪರು ಸಿಂಹಕರ್ಣರು ಗೋವೃಕರ್ಣದೊ
ಳು ॥ ಕರ್ಣವನುತಾಳ್ದಿಹರು ಹಯುಗಜ । ಕರ್ಣಗಳನಾಂತಿಹರು ಬಹು
ವಿಧ । ಕರ್ಣಗಳನೈದಿದವರಿದ್ದರುಸುತ್ತಲವನಿಜೆಯ ॥ ೬ ॥ ಲಂಬಕರ್ಣರು
ಕಲಹಶೀಲರು । ಲಂಬಮುಖಿಗಳು ವಿಕೃತಾಂಗರು । ಲಂಬಜಾನರು ದೀ
ರ್ಘಕಾಯರು ಕುಬ್ಜರೂಪಿಗಳು ॥ ಲಂಬಹಸ್ತರುವಾಮನಾಂಗರು । ಲಂ
ಬನೇತ್ರರು ಹ್ರಸ್ವಗಾತ್ರರು । ಲಂಬರದನರು ವಿಕಟದೇಹಿಗಳಿದ್ದರಾವ
ನವೆ ॥ ೭ ॥ ತುರಗಮುಖಿಗಳು ಧೇನುಮುಖಿಗಳು । ಹರಿಣಮುಖಿಗಳು
ಛಾಗಮುಖಿಗಳು । ಖರಮುಖಿಗಳುವ್ಯಾಘ್ರಮುಖಿಗಳು ಜಂಬುಕಮು
ಖಿಗಳು ॥ ಕರಿಮುಖಿಗಳುಷ್ಟ್ರಮುಖಿಗಳು ಸೂ । ಕರಮುಖಿಗಳಾಮ
ಹಿಷಮುಖಿಗಳು । ಧರಣಿಜಾತೆಯಸುತ್ತಲಿದ್ದರುಭಯವನಾಗಿಸುತ ॥ ೮ ॥
ಮೂಗದಿಲ್ಲದವನಿತೆಯರು ಪಿರಿ । ಮೂಗಿನ ವರಡ್ಡಡ್ಡವಾಗಿಹ । ಮೂಗಿ
ನವರುವಿಕಾರವಾಗಿಹ ಮೂಗನುಳ್ಳವರು ॥ ನಾಗವಂದವ ಮೂಗಿನವರು
ಸ । ರಾಗದಿಂದ ಲಲಾಟವೊಳಗಿಹ । ಮೂಗಿನೊಳುಸಿರನಾಡಿಸುವ ರಿರುತಿ
ದ್ದರಾವನವೆ ॥ ೯ ॥ ತುರಗಪಾದಿಗಳುಷ್ಟ್ರಪಾದಿಗ । ಳುರೆ ವಿಷಾದವ
ನಾಗಿಸುತ್ತಿಹೆ । ದರಿಸುವ ಮಹಾಪಾದಿಗಳು ಘನಹಸ್ತಿಪಾದಿಗಳು ॥
ವೊರೆವೆಪರಪಾದಿಗಳತಿ ಭಯಂ । ಕರರೆನಿಪ ಗೋಪಾದಿಗಳು ನೆರೆ ।
ನೆರೆದು ಗರ್ಜಿಪಪಾದಚೂಳಕೆ ಗಳಿರುತೊಪ್ಪಿದರು ॥ ೧೦ ॥ ಪಿಂಗಳಾ
ಕ್ಷಿಗಳಧಿಕ ಕೋಪಿಗ । ಳಂಗಹೀನರು ಕಾಳಿಗಳು ಮಲಿ । ನಾಂಗಿಗಳು
ಕಾಳಾಯಸಮಹಾಶೂಲಧಾರಿಗಳು ॥ ಪಿಂಗಳರುವಿಕೃತಮುಖಿಗಳು ।
ತ್ತುಂಗ ಮುದ್ಗರ ಕೂಟಧಾರಿಗ । ಳಂಗನಾಮಣಿ ಸೀತೆಗಾಗಿಸುತಿದ್ದರತಿ
ಭಯುವ ॥ ೧೧ ॥ ದೀರ್ಘಶಿರಗಳ ನಾಂತಿರುತಿಹರು । ದೀರ್ಘಕಂಠಂಗ
ಳ ತಳೆದಿಹರು । ದೀರ್ಘನಖಮುಖ ಜಿಹ್ವಲೋಚನಗಳನುತಾಳ್ದಿಹರು ॥
ದೀರ್ಘಕುಚಗಳನೈದಿದವರತಿ ॥ ದೀರ್ಘದೇಹಗಳನುಪಡೆದಿಹರು । ದೀ
ರ್ಘಕೇಶಿಗಳಿದ್ದರು ಹೆದರಿಸುತ್ತ ಸೀತೆಯನು ॥ ೧೨ ॥ ಪಿರಿಯತುಟಿ
ಯಿಂದಿಹರು ಗಡ್ತ್ವದ । ತೆರದೊಳಿಹ ತುಟಿಯುವರು ಭೀಕರ । ತರಕರಾಳಿ
ಗಳು ಲಘುಮುಖಿಗಳು ನಿಮ್ನವಕ್ತ್ರಗಳು ॥ ಧರಣಿಜಾತೆಯ ಸುತ್ತಲಾ
ದಿಶ । ಶಿರನಶೋಕಾವನವೆ ಗರ್ಜಿಸಿ । ಬಿರುನುಡಿಗಳಿಂದೆ ಹೆದರಿಸುತ್ತಿದ್ದ
ರವನೀಸುತೆಯ ॥ ೧೩ ॥ ಶೂಲಮುದ್ಗರಗಳನು ಪಿಡಿದಾ । ಕಾಳರಕ್ಕ
ಸಿಯರು ಹೆಸರಿಸ ಕ । ರಾಳಿಗಳು ಕಲಹಪ್ರಿಯರತಿವಿಕಾರಮುಖದ

ವರು । ಕಾಲಕಾಲದೆ ಭೀತಿಪಡಿಸುತ । ಬಾಲೆಯನು ರಕ್ಷಿಸುತಲಿ
ದ್ದರು । ಲೀಲೆಯಿಂದಾ ಧೂಮ್ರಕೇಶಿಯು ಸಹಿತವೆಸದೊಳಗೆ ॥ ೧೪ ॥
ರಕುತಮದ್ಯಂಗಳನು ಕುಡಿವರು । ರಕುತಮಾಂಸಂಗಳನು ತಿನ್ನುವ
ರು ಕಡುಬಿನವದೆ ಮಾಂಸರಕ್ತಂಗಳನು ಬಯಸುವರು ॥ ರಕುತಮಾಂ
ಸಂಗಳನು ತಮ್ಮಯ । ಸಕಲವಿಧದವಯವಗಳೊಳು ತೊಡೆ ।
ದುಕೊಳುತುರೆ ಗರ್ಜಿಸುವನೀರೆಯರಿದ್ದರಾವನದೆ ॥ ೧೫ ॥ ಕಡುಭ
ಯಂಕರರೆನಿಪಬಲೆಯರ । ನಡುವೆಜಾನಕಿ ದುಃಖದಿಂದಡಿ । ಗಡಿಗೆ
ರೋದಿಸಿ ಕಾಂತಿಯುಳಿದತಿ ಭೀತಿಯನುತಳೆದು । ಪಡೆದಪುಣ್ಯವೆ ಕಳೆ
ದುನಭದಿಂ । ಪೊಡವಿಗುದುರಿದ ತಾರೆಯಂದದೆ । ನಡುಗುತಿದ್ದಳು ಮಾಸಿ
ದಕುರುಳ್ಗಳನು ತಾನಾಂತು ॥ ೧೬ ॥ ಪತಿಯ ದರ್ಶನವಿಲ್ಲದಾತನೊ ।
ಳು ತನಗಿಹ ಭಕ್ತಿಯನೆ ಭೂಷಣ । ದ ತೆರದಿಂದೆಲ್ಲರಿಗೆ ತೋರಿಸುತ
ಸುರವಲ್ಲಭನ ॥ ಅತಿಮನೋಹರ ವನದೊಳಾ ಕ್ಷಿತಿ । ಸುತೆ ಸಿಲುಕಿಬಂ
ಧನಕೆ ನಂಟರ । ನು ತೊರೆದಿದ್ದಳು ಕೇಸರಿಯುವಶದೊಳಹ ಕರಿಣಿಯೊ
ಲು ॥ ೧೭ ॥ ದನುಜವಲ್ಲಭನಿಂದೆ ಬಹುಬಂ । ಧನಕೆ ಸಿಕ್ಕಿ ದುಗುಡವನಾಂ
ತಾ । ಜನಕಸುತೆ ಕಾರ್ಮುಗಿಲಮಧ್ಯದೊಳಡಗಿರಂಜಿಸದೆ ॥ ಜನರಸಾನಂ
ದವಡಿಸದ ವಿಧು । ವಿನೊಲು ರಾಕ್ಷಸನಾಥ ಸಾಘನ । ವನದೊಳಿದ್ದಳು
ದುಃಖದಿಂದುರೆಬಳಲಿ ತಪಿಸುತ್ತ ॥ ೧೮ ॥ ಅತಿಮಲಿನರೂಪಿಂದೆ ರಾವಣ ।
ನತಿಮನೋಹರ ವನದೊಳವನೀ । ಸುತೆ ಮನೋದುಃಖವನುತಾಳ್ದುರೆ
ಕುಂದಿಕೊರಗುತ್ತ ॥ ಕ್ಷಿತಿಯೊಳು ಸ್ಪರುಶವನುಳಿದು ಸಂ । ತತವಯು
ಕ್ತಮೆನೆಸಿದ ವಲ್ಲಕಿ । ಯತೆರದಿಂದಲೆ ಕಾಣಿಸಿದಳಾತಂಕಕೊಳಗಾಗಿ
॥ ೧೯ ॥ ಪತಿಯಧೀನದೊಳಹುದೆ ತನಗೆ ವಿ । ಹಿತಮೆನಿಸಿಕೊಂಡಿಹ
ಮಹೀಸುತೆ । ಪತಿಯನು ತೊರೆದಯುಕ್ತಮಾಗಿಯೆ ನೀರೆಯರನಡುವೆ ।
ಅತಿಶಯದದುಃಖಾಬ್ಧಿಯೊಳು ಮುಳು । ಗಿ ತಪಿಸುತ್ತ ಗ್ರಹಗಳ
ನಡುವಿ । ರುತಿಹ ರೋಹಿಣಿಯಂತೆ ತೋರಿದಳಾವನಾಂತರದೆ ॥ ೨೦ ॥
ಮಾಸಿಮೊಡಲನುತಾಳ್ದು ಸತತಮ । ಹೀಸುತೆ ಕೆಸರಿನಿಂದೆಕೂಡಿರು ।
ವಾ ಸರೋಜಲತೆಯವೊಲಾ ವನಮಧ್ಯದೊಳಿರುತ್ತ ॥ ಗಾಸಿಪಡಿಸುವ
ಸುರೆಯರನಡುವೆ । ವಾಸಮಾಡುತೆ ಸೆದುಮೆಸೆಯದಾ । ಯಾಸದಿಂದಿ
ರುತಿದ್ದಳಾರಾಘವನ ಜಾನಿಸುತ ॥ ೨೧ ॥ ಮಲಿನವಸ್ತ್ರವನುಟ್ಟ
ನುದಿನದೊ । ಳಳುತ ದೈನ್ಯವನಾಂತು ಸಂಕಟ । ಜಲಧಿಯೊಳು ಮು
ಳುಗಿದ್ದ ಪಂಕಜನೇತ್ರಿಜಾನಕಿಯು ॥ ಬಳಿದಗಂಡನ ತೇಜದಿಂದಲೆ ।

ಕಳೆದುವೈನ್ಯವ ನುಡಿತನ್ನನು । ಸಲಹಿಕೊಂಡಿರುತ್ತಿದ್ದಳುಸಿಜಾಚಾರಬಲದಿಂದ ॥ ೨೦ ॥ ಬಡವೆಗಳ ನುಳದಾಮಹೀಸುತೆ । ನಡುನಡುಗುತಾ ವನದಮಧ್ಯದೊ । ಳಡಿದ ಧೂಳಿಂದಂಡಗೆಟ್ಟಿದೆಯುಲ್ಲಿ ರಾಘವನ ॥ ಬಿಡವೆ ಜಾನಿಸುತ ಕುಸುಮಗಳನು । ಬಿಡದಬಳ್ಳಿಯು ತೆರದೆಚಲಿಸುತ । ಕಡುಬಳಲಿ ಬೆಂಡಾಗಿ ದುಃಖಿಸುತ್ತಿದ್ದಳನುದಿನವು ॥ ೨೧ ॥ ಕಾಮಭೋಗಗಳನು ತೊರೆದಾ । ಭೂಮಿಸುತೆ ಬಂಧುಗಳ ಕಾಣದೆ । ರಾಮನಾಗಮ ನವನಪೇಕ್ಷಿಸುತಾ ಮರದಕೆಳಗೆ ॥ ಪ್ರೇಮದಿಂದಾ ರಾಘವನ ಮಲ । ನಾಮವನು ಜಾನಿಸುತ ಮನನೊಂ । ದಾಮಹಿಗೆ ತಲೆವಾಗಿ ದುಃಖಿಸುತಿದ್ದಳನುದಿನದೆ ॥ ೨೨ ॥ ಹೃದಯಮಧ್ಯಗೊಳರ್ಪಿನಯನಬಿ । ಡದನುದಿನವೀಕ್ಷಿಸುತ ಶೋಕವ । ನದೊಳಗಿಪ ಫಲಪ್ರಷ್ಪತರುಗಳ ನಾದನುಜೆಯನು ॥ ಪದೆನುನೋಡದೆ ಕಿಂಶುಪಾವ್ರ । ಕ್ಷದಕೆಳಗೆ ತಾನಿದ್ದಳು ಪತಿಯು । ಪದಸರೋಜಗಳನು ಜಾನಿಸುತಧಿಕ ಭಕ್ತಿಯಲಿ ॥ ೨೩ ॥ ಪತಿಯೆಮೇಲೆನಿಪಾಭರಣಮೆನಿ । ಸುತಿಪನೆಲ್ಲ ವನಿತೆಯರಿಗೆ ಸಂ । ತತವಖಿಳ ಭೂಷಣನಿವಹ ಕಿಂತೆನುತ ತಾನರಿದು ॥ ಕ್ಷಿತಿಸುತೆ ಸಕಲಭೂಷಣಾರ್ಪಳೆ । ನುತ ನಗಳ್ದಂ ರಾಮನಿಂದೆ ರ । ಹಿತಳೆನಿಸಿ ಕಂಗೊಳಿಸದಿದ್ದಳಶೋಕವನದೊಳಗೆ ॥ ೨೪ ॥ ಕ್ಷಮೆಯೊಳಗೆ ಭೂದೇವಿಗೆಣೆಯಹ । ಕಮಲಲೋಚನೆ ಸೀತೆವನದೊಳು । ರಮಣವ್ಯಸನದಿಂದೆ ತಾಂ ರಕ್ಷಣೆಯನಾಂತಿದ್ದಂ ॥ ಅಮರವೈರಿಯಶೋಕವನದೊಳು । ಸಮನಿಸಿದ ದುಃಖವನುತಾನಾಂ । ತು ಮರದಬುಡದೊಳಿದ್ದಳಾವನಿತೆಯಮರಕಾಪಿನಲಿ ॥ ೨೫ ॥ ಹಿಮಪತನಳನಿಯಂತೆ ಕಳೆಗುಂ । ದಿನೊರೆಯದೆ ಬಹುದೈನ್ಯವನು ತಾ । ಳ್ದುಮನನೊಂದುರೆ ಚಿಂತಿಸುತ ತನ್ನೊಡನೆ ತಿರುಗುತ್ತಿಹ ॥ ರಮಣನಂತೊರೆದಾ ಚಕೋರಕೆ । ಸಮಳಿನಿಸುತಾ ಪತಿಯತೊರೆದುರೆ । ಸಮೆಯುತ್ತಿದ್ದಳು ಸೀತೆನಿದ್ರಾಹಾರಗಳನುಳಿದು ॥ ೨೬ ॥ ಪ್ರಿಯಜನಂಗಳ ನೀಕ್ಷಿಸದೆ ಬಹು । ಭಯವನಾಂತೀಕ್ಷಿಸುತ ರಾಕ್ಷಸ । ಚಯವನು ಮಹಾದುಃಖದಿಂದಲೆ ತಪಿಸಿರೋದಿಸುತ ॥ ನಯನದೊಳ್ಸುರಿಸುತ್ತ ಜಲವ ಪ । ತಿಯನು ಜಾನಿಸುತಶನಮುಳಿದತಿ । ಶಯದ ಖೇದವನಾಂತು ಶೋಕಿಸುತ್ತಿದ್ದಳಾಸೀತೆ ॥ ೨೭ ॥ ದಿನದಿನಂಗಳೊಳಾಮಹೀಸುತೆ । ಘನಮನೋವ್ಯಥೆಯಿಂದೆ ಕಂಪಿಸು ॥ ತ ನೆರೆನೊಂದುಪವಾಸವನೆಸಗಿ ಕೃಶತೆಯನುಪಡೆದು ॥ ಇನಯನನಗಲು ತ ಜಿಸುಸುಯಪ್ರಾ । ವನದೊಳಿದ್ದಳು ಶುಕ್ಲಪಕ್ಷದೊ । ಳು ನಭದೆ ವಿರಾ

ಜಿಸುವ ಪ್ರತಿಪಚ್ಚಂದ್ರನಂದದಲಿ ॥ ೩೦ ॥ ಕಾಗೆಗಳ ಗುಂಪಿನೊಳು ಸಿಕ್ಕಿದ । ಕೋಗಿಲೆಯುವರಿಯಂತೆ ಹುಲಿಗಳ । ಕೈಗೆಸಿಲುಕಿದ ಜಿಂಕೆ ಯಂತೆ ಯುಮಭಟರವಶದಲಿ ॥ ಕೂಗಿಕೊರಗುವ ಜೀವಿಯಂತನು । ರಾಗವಿಲ್ಲದೆ ತನಗೆಭೀತಿಯು । ನಾಗಿಸುವ ರಕ್ಕಸಿಯರವಶದೊಳದ್ದಳಾ ಸೀತೆ ॥ ೩೧ ॥

ಇಂತು ಹದಿನಾಲ್ಕನೆಯು ಅಧ್ಯಾಯ ಸಂಪೂರ್ಣವು. ಪದ್ಯಗಳು ೬೯೧.

ಹದಿನೈದನೆಯು ಅಧ್ಯಾಯ.

ಸೂಚನೆ ॥ ಮೃಗವಕೊಂದೈತರುತ ಉಟಜದಿ ।
ಮೃಗನಯನೆಯಿಲ್ಲದಿರೆ ಚಿಂತಿಸಿ ।
ರಘುಜನರಸುತ ಬಂದು ಕೆಳೆಗೊಂಡನು ಕಪೀಶ್ವರನ ॥

ಕೊಂದು ಮಾಯಾಮೃಗವ ನಾರಘು । ನಂದನನು ರಕ್ಕಸನ ಶಬ್ದವ । ನಂದುಕೇಳ್ದತಿ ಶಂಕೆಯುನು ತಾಳ್ದೈತರುತಪಥದಿ ॥ ಕೊಂದು ಮೃಗ ಮತ್ತೊಂದನುರುಶರ । ದಿಂದದರಚರ್ಮವನು ಕೊಂಡೈ । ತಂದ ನತಿವೇಗದೊಳು ತನ್ನಾಶ್ರಮ ಕರಣ್ಯದಲಿ ॥ ೧ ॥ ಅದುರಿತೆಡಗಣ್ಣು ರಘುನಂದನ । ನಿದಿರಿನೊಳ್ನಡೆತಂದು ಜಂಬುಕ । ವೊದರುತಿರ್ದುದು ವಿಕೃತರವದಿಂದತಿ ಭಯಂಕರದೆ ॥ ಬೆದರಿಬರುತಿರೆ ಬೇಗದಾರಿಯೊ । ಳದಿ ರುವೆಂದಾ ಲಕ್ಷ್ಮಣನ ಕಂ । ಡು ದುಗುಡವನೈದುತ್ತ ಕಳವಳಗೊಂಡ ನಾರಾಮ ॥ ೨ ॥ ಬಂದುಮಣಿದಾ ರಾಘವನಡಿಗೆ । ನಿಂದತಮ್ಮನಕಂಡು ಧರಣೀ । ನಂದನೆಯುನುಳದೇತಕಿಲ್ಲಿಗೆ ಬಂದೆ ನೀನೆನುತ ॥ ಅಂದು ರಾಮನು ನುಡಿಯಲಾತನ । ಮುಂದೆ ಕೈಮುಗಿದವನಿಸುತೆ ನುಡಿ । ದಂದವನು ಸೌಮಿತ್ರಿಬಿನ್ನವಿಸಿದನು ಮೊದಲಿಂದೆ ॥ ೩ ॥ ಆಲಿಸಣ್ಣದನುಜನ ಶಬ್ದವ । ಕೇಳಿ ನೀನಳದೆ ಯೆನುತಬಗೆದು । ತಾಳದೆನ್ನನು ಸೀತೆ ನಿನ್ನಯುಬಳಿಗೆಪೋಗೆನುತ ॥ ಪೇಳಲಾಕೆಗೆ ನಾನರುಹಿದೆನು । ಕೇಳು ಜನನಿಯೆ ರಾಮಚಂದ್ರನ । ಸೋಲಿಸುವರಿಲ್ಲವು ಸುರಾಸುರನರಭುಜಂಗ ರಲಿ ॥ ೪ ॥ ಖರನಳಿದುದಾರಭ್ಯ ನಮಗಸು । ರರೊಳು ಹಗೆತನಬಂದಿ ಹುದು ದನು । ಜರಿರದೆಮ್ಮನು ವಂಚಿಸಲು ತರತರದೆಕೂಗುವರು ॥ ಹರಿಣವೇಷವನಾಂತ ರಕ್ಕಸ । ನಿರದೆತಾನೀತೆರದೆ ಕೂಗಿಹ । ನು ರಭಸದೆ

ಹಾಸೀತೆ ಹಾಸೌಮಿತ್ರ ಯೆಂದೆನುತ ‖ ೫ ‖ ಅಣ್ಣನಪ್ಪಣೆಯಿಲ್ಲದಿಲ್ಲಿ
ಯೆ । ನಿನ್ನನೊಬ್ಬಳ ಬಿಟ್ಟುಪೋಗೆನು । ಸನ್ನುತಬಲಾಢ್ಯನಹರಾ
ಮನಿಗಾವ ಭಯವಿಲ್ಲ ‖ ನಿನ್ನ ಬಿಡದೆಯೆ ಘಾತಿಸುತ್ತಿಹ । ರಿನ್ನು ರಕ್ಕಸ
ರಿಲ್ಲದಿರೆನಾ । ನೆನ್ನುತನುಡಿಯೆ ಕೆರಳಿನನ್ನೊಡನೆಂದಳವನಿಜೆಯು ‖ ೬ ‖
ನೀನು ನನ್ನನು ವರಿಸಲೋಸುಗ । ಕಾನನಾಂತರದಲ್ಲಿ ತಿರುಗುವೆ । ನಾ
ನು ನಿನ್ನ ವಶವಹಳಲ್ಲ ಭರತನನುಡಿಗೇಳ ‖ ನೀನು ಸಂಕೇತವನೆಸಗಿ
ಕೊಂ । ಡೀನಡೆವಳಿಯು ತೋರಿಸುತ್ತಿಹೆ । ನಾನು ರಾಮನ ನುಳಿದಿತರ
ಮಾನವರನೋಡುವಳೆ ‖ ೭ ‖ ದೀನನಾಗಿಹ ನನ್ನರಮಣಗೆ । ನೀನು
ಸಂಗರದೊಳು ಸಹಾಯವ । ನೀನು ಮಾಡದೆ ನನ್ನೊಳನುರಾಗವ ನೆಸ
ಗಿಕೊಂಡು ‖ ಕಾನನದೆಕಾದಿರ್ಪೆ ನನ್ನಯ । ಪ್ರಾಣಬಿಡುವೆನು ಕುಡಿದು
ನಂಜನು । ನಾನುಗೋದಾವರಿಯೊಳೀಗಲೆ ಪೋಗಿಬೀಳುವೆನು ‖ ೮ ‖
ತಮ್ಮನಲ್ಲವು ರಘುವರಗೆ ನೀಂ । ಸುಮ್ಮನೆಯೆ ನಟಿಸುತ್ತಿಹೆ ಖೂಳನೆ ।
ನಮ್ಮ ಕೇಡನುಕೋರುತಿಹೆ ದಾಯಾದಿಗಳಬಗೆಯು ‖ ತಮ್ಮನಂಟರ ಕೆ
ಡುಕನೆಣಿಸುವ । ದಮ್ಮವಂಚಕನೀನು ಪೋಗೆಂ । ದುಮ್ಮಳಿಸಿ ಬಿರು
ನುಡಿಯನಾಡಿದಳಾ ಮಹೀಸುತೆಯು ‖ ೯ ‖ ತಂದೆಕೇಳಾನುಡಿಗಳನು
ಕಿವಿ । ಯಿಂದಕೇಳದೆ ನಿನ್ನಬಳಿಗಾಂ । ಬಂದೆನೆಂದಾ ಲಕ್ಷ್ಮಣನು ಬಿನ್ನ
ವಿಸೆ ರಾಘವನು ‖ ನೊಂದುಕೊಂಡತಿ ವೇಗದಿಂದಲೆ । ಬಂದುತನ್ನಾಶ್ರ
ಮದೆ ಧರಣೀ । ನಂದನೆಯಕಾಣದೆಯೆ ಬಿದ್ದನು ಮೂರ್ಛೆಯನು ತಾ
ಳ್ದು ‖ ೧೦ ‖ ಬಳಿಕಮೂರ್ಛೆಯ ಕಳೆದು ಕಾನನ । ದೊಳಹ ಗಿರಿನದಿ
ವೃಕ್ಷ ಶಿಲೆಲತೆ । ಜಲರುಹಾಕರಗಳೊಳು ಹುಡುಕುತ ಸತಿಯನೀಕ್ಷಿ
ಸದೆ ‖ ಅಳುತರಾಘವನಾಗ ಬಿಸುಸು । ಯ್ದಳಿಗೆಬಿದ್ದು ನುಡಿದನು ಲಕ್ಷ್ಮ
ಣ । ನೊಳು ಮಹೀಸುತೆಯನ್ನು ತಿಂದಿಹರಸುರರೆಂದೆನುತ ‖ ೧೧ ‖
ಮನದೆಕುಂದಿ ಕೊರಗುತರಣ್ಯದೊ । ಳುನಡೆತಂದಾ ರಾಮನನುಜನೊ ।
ಡನೆ ಗಿರಿಗಳೊಳು ಪಾದಪಗಳೊಳು ಮರದತೊರೆಗಳೊಳು ‖ ಘನಶಿಲೆ
ಗಳೊಳು ಕಂದರಂಗಳೊ । ಳು ನದನದಿಗಳೊಳರಸಿ ಕಾಣದೆ । ಜನಕ
ಜಾತೆಯ ತೆರವಬಂದನು ದಕ್ಷಿಣಾಪಥದೆ ‖ ೧೨ ‖ ಒಡನೆಕಂಡನು ನೆಲ
ದೆ ಬಿದ್ದಡಿ । ಗಡಿಗೆ ರಕ್ತವ ಕಾರುತಸುವನು । ಬಿಡದೆಮರಣಾವಸ್ಥೆಯ
ನು ಹೊಂದಿದಜಟಾಯುವನು ‖ ಪೊಡವಿಜೆಯನೀ ಪಕ್ಷಿರೂಪವ । ಪಡೆದ
ದನುಜನು ತಿಂದಿಹನಿವನ । ಕಡಿವೆ ನೆಂದೆನುತೆತ್ತಿಕೊಂಡನು ರಾಮನಾ
ಧನುವ ‖ ೧೩ ‖ ಆನುಡಿಯಕೇಳುತ ಜಟಾಯು ನಿ । ದಾನಿಸದೆ ಪೇಳ್ದ

ನೆಲೆ ರಾಘವ । ದಾನವಾಧಿಪ ರಾವಣನು ಕೊಂದೆನ್ನನವನಿಜೆಯ । ತಾನು ಲಂಕೆಗೆಕೊಂಡುಪೋದನು । ನೀನು ತಿಳಿಯೆನುತ ನುಡಿದಾಗಳೆ । ಪ್ರಾಣ ವನುಬಿಟ್ಟನು ರಘೂತ್ತಮನೆದೆಯು ಕರಗುತಿರೆ ॥ ೧೪ ॥ ಸುಟ್ಟುಬೆಂಕಿ ಯೊಳಾಜಟಾಯುವ । ನೆಟ್ಟನೆ ತಿಲೋದಕವ ಬಿಡುತಲೆ । ಕೊಟ್ಟುಸದ್ಗ ತಿಯನು ಖಗೇಂದ್ರಂಗಿರದೆ ರಾಘವನು ॥ ಕಟ್ಟಡವಿಯೊಳನುಜನೊಡನೆ ಪೊರ । ಮುಟ್ಟಿ ಬರುತಿರಲಂದುಪಥದೊಳು । ಥಟ್ಟನೆಪಿಡಿದನಾಕಬಂಧ ನು ಕೈಯೊಳೀರ್ವರನು ॥ ೧೫ ॥ ಭರದೊಳು ಕಬಂಧನಭುಜಂಗಳ । ನಿರಿದುಪಾವಕನಿಂದೆ ದಹಿಸಲಿ । ವರದಿರೊಳಗಾ ದನುಜನುತ್ತಮವಪ ವಿಮಾನದಲಿ ॥ ಪರಮತೇಜದೆಮೆರೆದು ತೋರುತ । ಧರಿಸಿದಿವ್ಯಾಭರಣ ವಸನವ । ಸರವನಿಂತರುಹಿದನು ರಘುಕುಲಜರಿಗೆ ಸಂತಸದಿ ॥ ೧೬ ॥ ಆಲಿಸೈ ರಘುನಂದನನೆ ಸೀ । ತಾಲಲನೆಯನು ತೊಡೆಯೊಳಿರಿಸಿಯೆ । ಖೂ ಳರಾವಣ ನೆತ್ತಿಕೊಂಡಾ ಲಂಕೆಗೈದಿದನು ॥ ಆ ಲಲನೆಯಿಂದೊದಗಿಹು ದು ಕೊನೆ । ಗಾಲ ದನುಜರಿಗೆಲ್ಲ ನೆಲದೊಳು । ಕೇಳೆನುತರಾಘವನಿಗು ಸುರಿದನೊಂದು ಸಂಗತಿಯ ॥ ೧೭ ॥ ಪೋಗಿನೀವೀ ಕಾನನದೊಳು ಸ । ರಾಗದಿಂದೆ ಶಬರಿಗೆ ಮೋಕ್ಷವ । ನಾಗಿಸಿ ಮೆರೆವ ಪಂಪೆಯನು ಸಾರ್ದ ದರಸನಿಹದೊಳು ॥ ಆಗಸವನಾಕ್ರಮಿಸಿ ಪಿಡಿದನಿ । ಪಾಗುಹೆಗಳಿಂದತಿ ಮನೋಹರ । ಮಾಗಿಕಾಣುವ ಋಶ್ಯಮೂಕಗಿರಿಯನು ಸಾರುವುದು ॥ ೧೮ ॥ ಮೃಗಖಗೋರಗ ಪಾದಪಗಳಿಂ । ದೆ ಗಹನವೆನಿಪ ಋಶ್ಯ ಮೂಕದೊ । ಳಗಿಹ ನಾರವಿತನಯ ಸುಗ್ರೀವನತಿಸಂತಸದಿ । ಧಗೆಯೆ ನಿಪ ವಾಲಿಭಯದಿಂದೆ ಕ । ಪಿಗಳು ನಾಲ್ವರಸಹಿತಿನಿಯಳ । ನಗ ಲಿ ವಸಿಸುವ ನಾತನೊಡನೆಸಗುವುದು ಸಖ್ಯವನು ॥ ೧೯ ॥ ರವಿಸುತನು ಸೀತೆಯನು ನೀಂ ಪೊಂ । ದುವತೆರದೊಳು ಸಹಾಯಮಾಡುವ । ನವ ನು ಕಂಡಿಹನೀಮಹೀತಲವೆಲ್ಲವನು ಹಿಂದೆ ॥ ಬವರದೊಳು ರಾವಣ ನಸಂಹರಿ । ಸಿ ವಸುಧಾಸುತೆಯನ್ನು ಪಡೆದಾ । ಳುವೆ ಮಹೀ ಮಂಡಲವನೆಂದು ಕಬಂಧನರುಹಿದನು ॥ ೨೦ ॥ ಇಂತು ಪೇಳ್ದುತೆ ರಳುವುವೆಂದೆನು । ತಂತರಿಕ್ಷದೊಳಾ ಕಬಂಧನು । ಸಂತಸದೊಳಾ ರಾಘವನಿಗೆಂದಾತನಾಣತಿಯ ॥ ಅಂತುಶಿರದೊಳು ಮಾಯಮಾದನ । ನಂತರದೊಳಾ ವನದೆ ಬಂದರು । ಚಿಂತಿಸುತ ಸುಗ್ರೀವಸಖ್ಯವ ಬ ಯಸಿಶೀಘ್ರದಲಿ ॥ ೨೧ ॥ ರಾಮ ಲಕ್ಷ್ಮಣ ರಡವಿಯೊಳ್ಬರು । ತಾ ಮತಂಗಾ ಶ್ರಮವಸೇರಲು । ರಾಮನಚರಣಕೆರಗುತಾ ಶಬರಿಬಹುಭಕ್ತಿ

ಯಲಿ । ರಾಮಣೀಯಕವೆನಿಸಿ ಮೆರೆವಾ । ರಾಮನೆಗೊಳ್ಪಳೆದ ಫಲಕುಸು
ಮ । ಸ್ತೋಮವನು ಕೊಟ್ಟೊಲಿಸಿ ಪೇಳ್ದಳು ಮುನಿಮಹಾತ್ಮೆಗಳ
॥ ೨೬ ॥ ಶ್ರೀದಮತಾಪಸರ ಪ್ರಭಾವವ । ಕಳುಹಿಸಗ್ನಿಕೆ ಶಬರಿಯುಮನು
ತಾ । ತಳೆದು ಲಕ್ಷ್ಮಣನೊಡನೆ ರಾಘವನಧಿಕ ವಿಸ್ಮಯವ ॥ ಬಳಿಕ
ಹತ್ತಿರದೊಳತಿ ನಿರ್ಮಲ । ಸಲಿಲದಿಂದಾನಂದವ ನೆಸಗು । ತ್ತಿಳೆಯೊಳುನ್ನ
ತಿವೆತ್ತ ಪಂಪಾಸರಸಿಗೈತಂದ ॥ ೨೭ ॥ ಕಮಲಕೈರವ ಪುಂಡರೀಕ ।
ಭ್ರಮರಸಂಕುಲದಿಂದೆ ರಂಜಿಸಿ । ಕಮಠ ಝಷ ಮಂಡೂಕನೆಂಕರ ಸ
ಮೂಹವನುತಾಳ್ದು ॥ ವಿಮಲಬರ್ಹಿಣ ಹಂಸಶುಕಪಿಕ । ಸಮುದಯ
ದೊಳಾನಂದವ ನೆಸಗು । ತ ಮೆರೆವಾ ಪಂಪಾಸರಸಿಗೈತಂದನಾರಾಮ
॥ ೨೮ ॥ ಅನುಜ ಲಕ್ಷ್ಮಣನೊಡನೆ ರಘುನಂ । ದನನೆಸೆವ ಪಂಪಾಸ
ರೋವರ । ವ ನಡಿಗಡಿಗೀಕ್ಷಿಸುತ ಮಹದಾಶ್ಚರ್ಯವನುತಾಳ್ದು ॥ ವನಜ
ಲೋಚನೆ ಜನಕನಂದನೆ । ಯನಗಲಿದ ವಿರಹಾಗ್ನಿಯಿಂದುರೆ । ಮನ
ದೊಳಗೆ ತಪಿಸುತ್ತ ಸಂಕಟದೊಳು ವಿಲಾಪಿಸಿದ ॥ ೨೯ ॥ ವಿಂದುಪಂ
ಪಾಸರಸಿಯೊಳಗಾ । ನಂದದಿಂದಾ ಲಕ್ಷ್ಮಣನಸಹಿ । ತಂದು ಸಂಧ್ಯಾವಂ
ದನಾದಿಗಳೆಲ್ಲವನು ರಚಿಸಿ ॥ ಸುಂದರತರುಗಳಿಂದೆ ತೀರದೊ । ಳಂದ
ಮಾಗಿಪ ವನವಕಂಡೈ । ತಂದು ಹೊಕ್ಕನು ವಿರಹತಾಪವನಾಂತು ರಾಘ
ವನು ॥ ೩೦ ॥ ಪರಿಮಳಾತಿಶಯವನು ಬೀರುವ । ಪರಿಪರಿಯ ಪುಷ್ಪ
ಲತೆಗಳ ನಾ । ತರತರದ ಫಲಭಾರದಿಂದೆಸೆವಖಿಳ ತರುಗಳನು ॥ ಇರದೆ
ಕಿವಿಗಿಂಪಾಗಿ ಕೂಗುತ । ನೆರೆದ ಪಕ್ಷಿನಿಕರವನೀಕ್ಷಿಸಿ । ವಿರಹತಾಪವ
ತಾಳಲಾರದೆ ನೊಂದನಾರಾಮ ॥ ೩೧ ॥ ಚರಿಸುತಾರವಿಸುತನು ಕಂಡ
ನು । ಭರದೊಳಾರಘುನಂದನರ ನಂ । ದಿರದೆ ಪಂಪಾತೀರದೊಳು
ಭೀತಿಯನು ತಾನಾಂತು ॥ ಸುರಪಸುತನ ಮತದೊಳಿಮಗೆತೊಂ ।
ದರೆಯನಾಗಿಸರಿವರು ಭರದಿಂ । ದರಿವುದಿವರಿಂಗಿತವನೆಂದಟ್ಟಿದನು ಮಾರು
ತಿಯ ॥ ೩೨ ॥ ಭರದೊಳೈತಂದೆರಗಿ ರಾಮನ । ಚರಣಪಂಕಜಕಿರದೆ
ಚಿತ್ತದೊ । ಳರಿತುಕೊಂಡವ ರಿಂಗಿತವನಾತರಣಿಸಂಭವನ ॥ ಚರಿತ
ವನು ತಾ ತಿಳುಹಿ ಬೆನ್ನಿನೊ । ಳರಿಸಿಕೊಂಡವ ರಿಬ್ಬರನು ಬಂ । ದುರ
ವಿತನಯುಂಗಾ ಹನುಮನರುಹಿದ ನವರಪರಿಯ ॥ ೩೩ ॥ ಅನಲಸಾಕ್ಷಿ
ಯೊಳಾ ರಘುವರನೊ । ಡನತಿ ಸಂತಸದಿಂದೆ ರವಿನಂ । ದನನೆಸಗಿದನು
ಸಖ್ಯವನುಬಳಿ ಕಿಬ್ಬರವರವರ ॥ ಮನದ ಸುಖದುಃಖಂಗಳನು ತಿಳು ।
ಹಿ ನುಡಿದರು ರಣರಂಗದೊಳು ತಾ । ವು ನಡಿಸುವ ಸಂಗತಿಗಳನು

ಬಳಿಕೊಬ್ಬರೊಬ್ಬರೊಳು ॥ ೩೦ ॥ ಮುರಿದು ವಾಲಿಯನೊಂದುಶರದಿಂ । ದೆ ರಣದೊಳು ನಾ ಸೀವೆಕಪಿಗಳ । ದೊರೆತನವನೆಂದೆನುತ ಅಭಯವ ಕೊಟ್ಟರಾಘವನು ॥ ತರಣಿನಂದನ ನೊಲಿಸುತಾತನಿ । ದಿರೊಳು ಚಿಮ್ಮಿದನಂದು ತನ್ನಯ । ಚರಣದುಂಗುಟದಿಂದೆ ದಶಯೋಜನಕೆ ದುಂದುಭಿಯ ॥ ೩೧ ॥ ಏಳು ತಾಳೆಯಮರಗಳನು ನೆರೆ । ಸೀಳಿ ಧರೆಗಾರಾಮಭದ್ರನು । ಬೀಳಿಸಿದನೊಂದಂಬಿನಿಂದಾಗಿರಿ ಶಿಖರದಿಂದೆ ॥ ತಾಳದಾಕಿಷ್ಕಿಂಧೆಗೆಯ್ದಿಯೆ । ಕಾಳಗದೊಳಂದಿರದೆ ಕೊಂದನು । ವಾಲಿಯನು ತಾನೊಂದುಶರದಿಂದಚ್ಚರಿಗೊಳಿಸುತ ॥ ೩೨ ॥ ಬಳಿಕ ಲಕ್ಷ್ಮಣನೊಡನೆ ರಾಘವ । ನಳಿದವಾಲಿಯ ಕಂಡುದುಃಖಿಸು । ತಳುವ ಸುಗ್ರೀವನನು ತಾರಾಂಗದರುಗಳಸಹಿತ ॥ ತಳುವದೆಸಮಾಧಾನವಡಿಸುತ । ತಿಳುಹಿಲೋಕವಿಧಾನವನು ಕಪಿ । ಗಳೊಡೆಯಂಗಾಗಿಸಿದನುತ್ತರಕರ್ಮಗಳನಲ್ಲಿ ॥ ೩೩ ॥ ಕರೆದುರಾಘವನಾರವಿಸುತಂ । ಗರುಹಿದನುಕೇಳ್ಸಖನೆನೀ । ನಿರದೆಕಿಷ್ಕಿಂಧಾನಗರಕೈದಿ ಕಪಿರಾಜ್ಯವನು ॥ ಪೊರೆವುದಭಿಷೇಕವನುಪಡೆದಾ । ದರಿಸುತೀವುದು ಯೌವರಾಜ್ಯದ । ಸಿರಿಯ ನಂಗದಗೆನುತ ಸಂತಸವಡಿಸುತಡಿಗಡಿಗೆ ॥ ೩೪ ॥ ಈಗವರ್ಷಾಕಾಲವೆನಿಪುದು । ಪೋಗಿನೀಂಕಿಷ್ಕಿಂಧೆಯೊಳಗಿರು । ರಾಗದಿಂನಿವಸಿಸುವೆ ನೀ ಪ್ರಸ್ರವಣಶೈಲದೊಳು ॥ ಬೇಗ ಸಜ್ಜುಗೊಳಿಸುವುದೆಲ್ಲವ । ನೀಗಳೆಂದೆನುತ ವನಕಳುಹಿಸು। ತಾಗಿರೀಂದ್ರಕೆಬಂದನಾರಘುವರನುಶೀಘ್ರದಲಿ ॥ ೩೫ ॥ ಹನುಮಜಾಂಬವ ತಾರಶತಬಲಿ । ಪನಸನೀಲಗವಾಕ್ಷಗಜಗವ । ಯನಳಶರಭಸುಷೇಣ ಕೇಸರಿಗಂಧಮಾದನರು ॥ ವಿನುತಶುಭಲಗ್ನದೊಳು ರವಿನಂ । ದನನಿಗಭಿಷೇಕವನು ಮಾಡಿದ । ರನಘಶಕ್ರಗೆ ವಸುಗಳಭಿಷೇಕವನು ಗೆಯ್ದಂತೆ ॥ ೩೬ ॥ ಅರಸನಾಗುತ ತರಣಿಸಂಭವ । ನಿರಿಸಿದನು ಯುವರಾಜ ಪದವಿಯೊ । ಳರದೆ ತಾರಾಸುತನ ನಾರಘುನಾಥನೊರೆದಂತೆ ॥ ಪರಮಸಂತಸದಿಂದೆ ತಾಂ ಪಡೆ । ದುರುಮೆಯನುತಾರೆಯನುಲೇಸೆನೆ । ಪೊರೆದನಾಕಪಿರಾಜ್ಯವನು ಸಚಿವರಸಹಾಯದಲಿ ॥ ೩೭ ॥ ಕೇಳುಲಕ್ಷ್ಮಣತನ್ನರಾಜ್ಯವ । ನಾಳುತಾ ಸುಗ್ರೀವನು ಮದನ । ಕೇಳಿಯೊಳಗಾಸಕ್ತನಾಗಿಯೆ ನಮ್ಮಕಾರ್ಯವನು ॥ ಕಾಲವರಿತೆಸಗದೆಮರೆತಿಹನು । ಖೂಳನಿಗೆನೀಂಪೋಗುತೀಗಳೆ । ಪೇಳು ಬುದ್ಧಿಯನೆಂದು ಕಳುಹಿದರಾಮನುರೆಮುಳಿದು ॥ ೩೮ ॥ ಬಂದುಲಕ್ಷ್ಮಣನಾರವಿಸುತನ । ಮುಂದೆನಿಲ್ಲುತ ತನ್ನ ಚಿತ್ತಕೆ । ಬಂದತೆರದೊಳು ನಿಂದಿಸಲು ಸುಗ್ರೀವನತಿಭರದೆ ॥ ವಂದಿಸುತ ಲಕ್ಷ್ಮಣನಿಗಾರಘು । ನಂದನನ

ಕಾರ್ಯವನು ವಿರಚಿಸು । ವಂದವನರುಹಿ ಸಂತವಿಸಿದನುಕಪಿವನ್ನಿ
ಸುತ ॥ ೩೯ ॥ ಧರಣಿಮಂಡಲ ದನದಿಗಳೊಳಾ । ಗಿರಿಗಳೊಳುಶಿಲೆಗಳೊ
ಳುಘನಕಂ । ದರಗಳೊಳು ಕೂಪಗಳೊಳಾ ವನಗಳೊಳುತರುಗಳೊ
ಳು । ತೊರೆಗಳೊಳು ಪೊದೆಗಳೊಳು ಗುಡಿಗೋ । ಪುರಗಳೊಳಗಿಪ
ಕಪಿಗಳೆಲ್ಲರ । ಬರಿಸೆನುತನೇಮಿಸಿದ ನಾನೀಲಂಗೆ ರವಿಸುತನು ॥ ೪೦ ॥
ರವಿಸುತನ ನೇಮವನುತಾಳ್ದತಿ । ಜವದೊಳಾ ವೈಶ್ವಾನರನಸುತ । ನವ
ನಿಮಂಡಲದೊಳಿಹ ವಾನರವೀರರೆಲ್ಲರನು ॥ ತವಕದೊಳ್ಕರೆತಂದು ನಿ
ಲ್ಲಿಸು । ತವರವರ ಸೈನ್ಯಂಗಳೊಡನಂ । ದು ವಿವರಿಸಿ ಪೇಳಿದನು ಸು
ಗ್ರೀವಂಗೆ ಕೈಮುಗಿದು ॥ ೪೧ ॥ ಅಪರಿಮಿತ ಸೈನ್ಯಂಗಳಸಹಿತ ।
ಕಪಿವರನು ರಘುವೀರನೆಡೆಗೈ । ದಿ ಪದಪಂಕಜಕೆರಗಿ ತೋರಿದನು ಕಪಿ
ಸೇನೆಯುನು ॥ ಕಪಿಬಲವನೀಕ್ಷಿಸುತ ರಾಘವ । ನುಪಚರಿಸಿ ಸುಗ್ರೀವ
ನನು ತಳೆ । ದಪರಿಮಿತಸಂತೋಷದಿಂ ಬಿಗಿದಪ್ಪುತಿಂತೆಂದ ॥ ೪೨ ॥
ರಾವಣನು ತಾನೆಲ್ಲಿವಸಿಪನು । ಭೂವನಿತೆಯೆಲ್ಲಿಹಳು ಪಟ್ಟಣ । ವಾವು
ದಾತಜನೀಚರನ ನೀನಿವ್ರುಗಳೆಲ್ಲವನು ॥ ಆವಬಗೆಯಿಂದಾದೊಡೆಯು ನೆ
ರೆ । ದೀವರಕಪೀಂದ್ರರನೆ ರವಿಯಿಂ । ದಾವನಿತೆಯಿರ್ಪೆಡೆಯ ಕಾಣುವು
ದೆಂದ ನಾರಾಮ ॥ ೪೩ ॥ ವಿನತನಂಕರೆ ದಾದಿನಾಕರ । ತನಯುಮನ್ನಿಸಿ
ಲಕ್ಷವಾನರ । ರ ನೊಡಗೊಂಡಾ ಸೋಮಸೂರ‍್ಯಾತ್ಮಜರೊಡನೆ ನೀ
ನು ॥ ದನದಕಾಲಿನಗಲದ ಮೇದಿನಿ । ಯುನು ಬಿಡದೆ ಮೂಡಲೊಳರ
ಸುವುದು । ಜನಕಜಾತೆಯ ನೊಂದುತಿಂಗಳೊಳಿಂದು ನೇಮಿಸಿದ
॥ ೪೪ ॥ ಪನಸಮೈಂದಸುಷೇಣ ನೀಲಪ । ವನಸುತಗವಯು ಗಂಧಮಾ
ದನ । ವನಜಸಂಭವ ತನಯುಋಷಭಗವಾಕ್ಷಶರಗುಲ್ಮ । ಘನಬಲಸು
ಹೋತ್ರಗಜ ವಾಲಿಜ । ರನು ಕರೆದು ಭಾನುಸುತಮನ್ನಿಸು । ತ ನುಡಿ
ದನು ರಾಘವನಿದಿರೊಳಾಗಿರಿಯ ಶಿಖರದಲಿ ॥ ೪೫ ॥ ದ್ವಿವಿದನುಲ್ಕಾ
ಮುಖಶರಾರಿಗ । ಳ ವೆರಸುತನೀವಿಂದಿರದೆ ಪೋ । ಗಿ ವಸುಧಾನಂದನೆ
ಯ ನಾತೆಂಕಣದಿಸೆಯೊಳೆಲ್ಲ ॥ ರವಿಕಿರಣವೆಲ್ಲೆಲ್ಲಿ ಪಸರಿಪು । ದವನಿ
ಯೊಳಗಾಸ್ಥಳಗಳನು ಬಿಡ । ದೆ ಮಹಿಲದೊಳರಸಿ ಬಹುದಿಲ್ಲಿಗೆ ತಿಂಗ
ಳೊಂದರಲಿ ॥ ೪೬ ॥ ಬಳಿಕ ತನ್ನೆಡೆಗಾಸುಷೇಣನ । ತಳುವದಾಸುಗ್ರೀ
ವನು ಕರೆದು । ತಿಳುಹಿದನು ನೀನೀಮರೀಚಿತನಯುರನೊಡಗೊಂಡು ॥
ಇಳೆಯ ಪಶ್ಚಿಮಭಾಗದೊಳಿಹ । ಸ್ಥಳಗಳೆಲ್ಲವ ನರಸಿ ಸೀತಾ । ಲಲನೆ
ಯುನು ಕಂಡು ಬಹುದಿಲ್ಲಿಗೆ ತಿಂಗಳೊಳಗೆನುತ ॥ ೪೭ ॥ ಶತಬಲಿಯುನಾ

ತಸನ ಸಂಭವ । ನತಿಹಿತೋಕ್ತಿಗಳಿಂದೆ ಮನ್ನಿಸು । ತ ತಳುವದೆ ನೀನೊಂದು ಲಕ್ಷಕಪಿಗಳನೊಡಗೊಂಡು ॥ ಕ್ಷಿತಿ ಸುತೆಯನುತ್ತರದೆಸೆ ಯೊಳರ । ಸುತಖಿಳಸ್ಥಳಗಳನು ಶೋಧಿಸಿ । ಯತಿಜವದೊಳ್ಮೈತಹುದು ತಿಂಗಳೊಳನುತ ನೇಮಿಸಿದ ॥ ೪೮ ॥ ಪವನಸಂಭವ ಕೇಳ್ಚತುರ್ದಶ । ಭುವನಗಳೊಳಗೆ ನೀನು ಕಾಣದಿ । ಹ ವಿಷಯಂಗಳ ನರಿಯೆ ನಿನಗೆ ಸಮಾನನಹಭಟನು ॥ ಭುವಿಯೊಳಲ್ಲಧರಣಿಯೊಳಾಗಲಿ । ದಿವದೊಳಾಗಲಿ ನೀಂ ರಸಾತಳ । ಭುವನದೊಳಗಾಗಲಿ ಜನಕಜೆಯನರಿದುಬಹುದೆಂದ ॥ ೪೯ ॥ ಇವನು ಕಾರ್ಯವ ಬಿಡದೆಮಾಡುವ । ನಿವನುಧೀವರ ನಿವನು ಬಲಯುತ । ನಿವನುಕಾಣುವ ನಾಧರಣಿಜೆಯನೆನುತ ರಾಘವನು ॥ ಪವ ನತನಯಂಗೊಲಿದು ಕೊಟ್ಟನು । ತವೆಮೆರೆವತನ್ನಂಗುರವ ನಿದ । ನವ ನಿಜೆಗೆಕೊಟ್ಟವಳಕುರುಹನು ತರುವುದೆಂದೆನುತ ॥ ೫೦ ॥ ಸಕಲವಾನರ ರಾಕಪೀಂದ್ರಗೆ । ಛಕುತಿಯಿಂಮಣಿದೆರಗಿರಘುಜಗೆ । ಪ್ರಕಟಸುಗ್ರೀವಾ ಜ್ಞೆಯಿಂ ಪೊರಮಟ್ಟುಜವದಿಂದ ॥ ಸಕಲ ದಿಶೆಗಳ ನರಸತೊಡಗಿದ । ರು ಕುಟಿಲದಮನದಿಂದೆ ತಮ್ಮಯ । ಶಕುತಿಯಂತೋರಿಸುತ ಸೀತೆಯು ಕಂಡುಬಹೆವೆಂದು ॥ ೫೧ ॥ ಪ್ಲವಗವೀರರು ಪೋದಬಳಿಕಾ । ರವಿಕುಲ ತಿಲಕ ನಾ ತರಣಿಸಂ । ಭವನ ವಿಶ್ವಾಸವನು ಲಕ್ಷ್ಮಣನಿಗೆ ತಿಳುಹಿ ಸುತ್ತ ॥ ಅವನಿನಂದನೆ ಸೀತೆಯಿಹತಾ । ಣವನರಿಯಬೇಕೆಂದು ತಾನು ಪ । ಲವುತೆರದೆ ಚಿಂತಿಸುತಲಿದ್ದನು ತನ್ನ ಚಿತ್ತದಲಿ ॥ ೫೨ ॥

ಇಂತು ಹದಿನೈದನೆಯ ಅಧ್ಯಾಯು ಸಂಪೂರ್ಣವು. ಪದ್ಯಗಳು ೭೪೩

ಹದಿನಾರನೆಯ ಅಧ್ಯಾಯ.

ಸೂಚನೆ ॥ ಹುಡುಕುತಾಪವನಸುತತೆಂಕಣ ।
ಕಡಲ ಲಂಘಿಸಿ ಸಾರ್ದುಲಂಕೆಯ ।
ಪೊಡವಿಸುತೆಯ ನಶೋಕವನದೊಳುಕಂಡು ಮುದಗೊಂಡ ॥

ವಿನತ ನೆಲ್ಲಕಪಿಗಳೊಡನೆ ಮೂ । ಡಣದೆಸೆಯೊಳೆಲ್ಲೆಡೆಗಳೊಳ ಗಾ । ಜನಕಜಾತೆಯ ನರಸಿಕಾಣದೆತಿಂಗಳೊಂದರಲಿ ॥ ಇನತನಯರಾಘ ವರೆಡೆಗೆ ಬಂ । ದುನಮಿಸುತ್ತತಿದ್ದೈನ್ಯವನುತಳೆ । ದು ನುಡಿದನುಪೂರ್ವ

ದೊಳು ಕಾಣೆವು ಜಾನಕಿಯನೆನುತ ॥ ೧ ॥ ಒಂದು ತಿಂಗಳೊ
ಳಾಸುಷೇಣನು । ಸುಂದರಾಂಗಿಯ ನೆಲೆಯನರಸು । ತ್ತಂದು ಪಶ್ಚಿಮದಿ
ಕ್ಕಿನೊಳುಕಾಣದೆ ವಿಷಾದಿಸುತ ॥ ನೊಂದುಖೇದವನಾಂತು ಭಾಸ್ಕರ ।
ನಂದನಂಗರುಹಿದ ನತಿವಿನಯ । ದಿಂದೆಕಾಣೆನು ಜಾನಕಿಯನಾದೆಸೆ
ಯೊಳೆಂದೆನುತ ॥ ೨ ॥ ಉತ್ತರದಿಶೆಯೊಳಾ ಜನಕಜೆಯ । ನೆತ್ತಲುಂ
ತಾನರಸಿ ಕಾಣದೆ । ಚಿತ್ತದಲಿ ದುಗುಡವನು ಪೊಂದುತಲಾಗ ಶತ
ಬಲಿಯು ॥ ಇತ್ತ ತಿಂಗಳಗಡುವಿನೊಳು ಬಂ । ದೊತ್ತರಿಸಿ ಪೇಳಿ
ದನು ಪದಕೆರ । ಗುತ್ತ ಸುಗ್ರೀವಂಗೆ ಕಾಣೆನು ಸೀತೆಯನೆನುತ್ತ ॥ ೩ ॥
ಹನುಮನಾ ಕಪಿರಾಜನಪ್ಪಣೆ । ಯನು ಪಡೆದು ದಕ್ಷಿಣದದಿಕ್ಕಿನೊ । ಳನು
ದಿನವು ಜಾಂಬವಸುಹೋತ್ರಾಂಗದರುಗಳಸಹಿತ ॥ ಜನಕನಂದನೆಯನ
ರಸಿದನಾ । ವಿನುತ ವಿಂಧ್ಯಾಚಲದೊಳೊಪ್ಪುವ । ಘನಗುಹಾನದಿ ವಿಟಪಿ
ಸರಸಿಗಳಲ್ಲಿ ತಾಂ ಬಿಡದೆ ॥ ೪ ॥ ಶಿಲೆಗಳಲಿ ಪೊಟರೆಗಳಲಿ ಪೊದೆಗ ।
ಳಲಿ ಖಗಮೃಗಾವಾಸಗಳಲಿ ವಿ । ಮಲ ಜಲರುಹಾಕರಗಳಲಿ ಘನಕಂದ
ರಂಗಳಲಿ । ಉಳಿದು ನಿದ್ರಾಹಾರಗಳನು ಹ । ಗಲಿರುಳೊಳುತಾ ನರಸಿ
ದನು ಕಪಿ । ಗಳ ನೆರವಿಯಿಂದೊಂದುತಿಂಗಳು ವಿಂಧ್ಯಶೈಲದೊಳು ॥೫॥
ಅರಸುತಿರಲೊಂದುದಿನ ವಾನರ । ವರರು ನೀರಡಿಕೆಯನು ಹೊಂದು ।
ತ್ತಿರೆಬಳಲಿ ಬಿಲವೊಂದನೀಕ್ಷಿಸಿದರು ಸಮೀಪದಲಿ ॥ ಪರಮಹರ್ಷದೊ
ಳೊಳಪುಗುತ ಸು । ಸ್ಥಿರಮನದೆ ತಪವಾಚರಿಪ ಸುಂ । ದರಿಯನೋ
ರ್ವಳಕಂಡು ನಿಂತರು ಮಿಗಿಲುಬೆರಗಾಗಿ ॥ ೬ ॥ ಹನುಮನಾಕೆಗೆ ಮಣಿ
ದುತಿಳಿದಾ । ವನದ ವಿವರಂಗಳನು ತಾ ನರು । ಹಿ ನಿಜವೃತ್ತಾಂತವನು
ಕಳೆದು ಕ್ಷುತ್ಪಿಪಾಸೆಗಳ ॥ ಘನಬಿಲದೊಳಿರೆ ಕಳೆದುದವಧಿಯು । ಮನ
ದೆ ಚಿಂತಿಸಿ ಮುಂದುಗಾಣದೆ । ಯೆ ನುಡಿದರು ಬಳಿಕಾಸ್ವಯಂಪ್ರಭೆ
ಗೆಲ್ಲ ಸಂಗತಿಯ ॥ ೭ ॥ ತಿಳುಹಿ ಮಾರ್ಗವ ನಾಸ್ವಯಂಪ್ರಭೆ । ಬಿಲ
ವನ್ನೈದಿದ ಬಳಿಕ ದಕ್ಷಿಣ । ಜಲಧಿಯನು ಕಂಡರತಿಶೀಘ್ರದೊಳೈದಿ
ವಾನರರು ॥ ತಿಳಿದು ಸಾಗರದತಿವಿಶಾಲವ । ನಳುಕುತಂದವ ರಾಕಡಲದ
ಡ । ದೊಳಿರಲಾ ಸಂಪಾತಿಬಳಿಕೈತಂದನವರೆಡೆಗೆ ॥ ೮ ॥ ತಿಳಿದು ವಾನ
ರರಿಂದೆ ದಕ್ಷಿಣ । ಜಲಧಿತೀರದೊಳಾಗರಿಗಳನು । ಕಳೆದ ಸಂಪಾತಿಜನಕ
ಸುತೆ ಜಟಾಯುಗಳಪರಿಯ ॥ ಅಳುತ ಮಿಂದುತಿಲೋದಕವ ನಿ ।
ತ್ತಳಿದತಮ್ಮನಿಗೆಂದು ಗರಿಗಳ । ತಳೆದು ಪೇಳ್ದನು ಸೀತೆ ಲಂಕೆಯೊಳಿ
ಪಳು ತಾನೆನುತ ॥ ೯ ॥ ಕಡಲ ಲಂಘಿಸಿ ಕಂಡು ಸೀತೆಯ । ನೊಡನೆ

ಬರಲಾರೆಹೆನುತೆಲ್ಲರು । ನುಡಿಯಲಾ ಜಾಂಬವನು ದೂರದೊಳೊಂದು ಬಂಡೆಯಲಿ । ಪೊಡವಿಸುತೆಯಂ ಕಾಣಬೇಕೆನು । ತಡಿಗಡಿಗೆ ಚಿಂತಿಸುತಿಹ ಹನುಮ । ನೆಡೆಗೆ ಬಂದರುಹಿದನು ನೀಂ ಲಂಘಿಸುಕಡಲನೆನುತ ॥ ೧೦ ॥ ತನ್ನ ಶೌರ್ಯವ ನರುಹಿ ಕಪಿಗಳ । ಗುನ್ನತ ಪರಾಕ್ರಮಿಪವನಸುತ । ಮನ್ನಣೆಯನಾಂತಿರದೆ ತಾನು ಮಹೇಂದ್ರಶೈಲದೊಳು ॥ ಅನ್ನೆಗಂ ಜಲಧಿಯನು ನೋಡುತ । ಮುನ್ನ ರಾಮನಿಗೆರಗಿ ದಾಟುವೆ । ನೆನ್ನುತಲಿತಾಂ ನುಡಿದು ಹಾರಿದ ನತಿಜವದೆನಭಕೆ ॥ ೧೧ ॥ ಮರುತಸಂಭವನಂತರಿಕ್ಷದೊ । ಳರದೆ ಶೀಘ್ರದೊಳಂದು ಬರುತಾ । ಶರಧಿಮಧ್ಯದೆ ನಿಂದಮೈನಾಕವನು ಕಾಣುತ್ತ ॥ ಚರಣದಿಂದೊದೆಯಲ್ಕೆ ನುಡಿದುದ । ದಿರದೆ ನಿನ್ನ ಸಹಾಯಕೆಂದೀ । ಶರಧಿನನಗಾಜ್ಞಾಪಿಸಲು ನಾಂ ನಿಂದಿಹೆನೆನುತ್ತ ॥ ೧೨ ॥ ಹನುಮನಾಮೈನಾಕ ಭೂಧರ । ವನು ಪದೆದು ಮನ್ನಿಸುತ ಬರಲಾ । ವನಧಿ ಮಧ್ಯದೊಳಾಸುರಸೆಸಿಂಹಿಕೆಗಳನು ವಧಿಸಿ ॥ ಮನಕೆ ಭೀತಿಯನಾಗಿಸುತ ತ । ನ್ನನೆರಳಂ ಪಿಡಿದಂದು ಬರುತಿಹ । ವನಿತೆ ಛಾಯಾಗ್ರಾಹಿಯನು ಕೊಂದನತಿ ಶೀಘ್ರದಲಿ ॥ ೧೩ ॥ ನೂರುಗಾವುದ ಕಡಲಲಂಘಿಸಿ । ಮಾರುತಿಮಹಾಜಲಧಿ ದಕ್ಷಿಣ । ತೀರದೊಳುತಾ ನಿಳಿದನಾಗಸದಿಂದೆ ರಭಸದಲಿ ॥ ಚಾರುತರ ಸೌಂದರ್ಯದಿಂದೀ ಧಾರುಣಿಯೊಳಮರಾವತಿಯ ಪೋಲು । ತೋರುವಾಲಂಕೆಯನು ನೋಡಿದ ನಧಿಕಹರ್ಷದಲಿ ॥ ೧೪ ॥ ಪುರದಬಾಗಿಲೊಳಡ್ಡಗಿಸಿ ನೀಂ । ಬರದಿರೀನಗರದೊಳಗೆಂದ । ಬ್ಬರಿಸಿ ತನ್ನನು ಹೊಡೆದ ಲಂಕಿಣಿಯನು ಧರೆಗುರುಳ್ಚಿ । ಮರುತ ಸಂಭವನಾರಜನಿಚರ । ರರಿಯದಂತೆ ಬಿಡಾಲರೂಪವ ॥ ಧರಿಸಿಹೊಕ್ಕನು ಲಂಕೆಯನು ತನ್ನೆಡವಡಿಯನಿರಿಸಿ ॥ ೧೫ ॥ ರಕ್ಕಸರು ಕಾಣದೊಲು ರಾತ್ರಿಯೊ । ಳುಕ್ಕಿ ಬೆಳಗುತಿಹ ಬೆಳದಿಂಗಳೊ । ಳಕ್ಕರೆವಿಡಿದು ಜಾನಕಿಯ ನರಸಿದನು ಲಂಕೆಯಲಿ ॥ ಪೊಕ್ಕು ಬೀದಿಯ ಬಿಡದೆ ನೋಡುತ । ಸಿಕ್ಕದೊಬ್ಬರಿಗಾ ಪುರದೊಳಗೆ । ತಕ್ಕುಮಾಡುತ ಹುಡುಕುತಿದ್ದನು ಬಿಡದೆ ಮನೆಮನೆಯ ॥ ೧೬ ॥ ಸುರಪಜಿತು ಧೂಮ್ರಾಕ್ಷರಾವಣ । ವರವಿಭೀಷಣ ಕುಂಭಕರ್ಣನು । ರರಿಪುಯೂಪಾಕ್ಷಮಕರಾಕ್ಷ ನರಾಂತಕ ನಿಕುಂಭ ॥ ಉರಗರೋಮಾಕಂಪನ ಮಹೋ । ದರಮಹಾಪಾರ್ಶ್ವಾದಿರಾತ್ರಿಂ । ಚರರ ಭವನಂಗಳೊಳರಸಿದನು ಹನುಮನವನಿಜೆಯ ॥ ೧೭ ॥ ತ್ರಿಶಿರಶಾರ್ದೂಲ ಸುಮುಖಸುನೇ । ತ್ರಶುಕಸಾರಣ ಸಗ್ನಿಕೇತು ಪ್ರ । ಘಸವಿರೂಪಾಕ್ಷತ್ರಿಕಾಯಸುಕೇತು

ರಕ್ಕಾಕ್ಷ ॥ ಜನವನಾಂತಕ್ಷಯ ಕುಮಾರನೆ । ನಿಜಮಖಿಳರಕ್ಕಸರ
ಮನೆಗಳೊ । ಳಸವಸದನರಸಿದನು ಮಾರುತಿಜನಕಜಾತೆಯನು ॥೧೮॥
ಎಲ್ಲರಕ್ಕಸರ ಭವನಂಗಳೊ । ಳೆಲ್ಲಿಯುಂ ಕಾಣದೆಯೆ ಸೀತೆಯ । ನಲ್ಲಿ
ನೊಂದು ಸಮೀರಸುತನಾ ಪುರದಮಧ್ಯದೊಳು ॥ ಮೆಲ್ಲನೈತಂದಾ ದಶ
ಶಿರನ । ಸಲ್ಲಲಿತಮೆಂದೆನಿಪ ಸೌಧವ । ನುಲ್ಲಸದೊಳೈದಿದನು ಧರಣೀಸುತೆ
ಯನರಸಲ್ಕೆ ॥ ೧೯ ॥ ದನುಜವಲ್ಲಭ ನರಮನೆಯೊಳಾ । ಹನುಮನೆಲ್ಲ
ಕಡೆಗಳೊಳೀಕ್ಷಿಸಿ । ಜನಕನಂದನೆ ಸೀತೆಯನು ತಾಂಕಾಣದಾಬಳಿಕ ॥
ಘನವಿಭವದಿಂದೆಸೆವ ದಶಕಂ । ಠನ ವಿನುತ ಶಯ್ಯಾಗೃಹಕೆ ಬಂ । ದನು
ಮಹೀಸುತೆಯನು ಹುಡುಕಬೇಕೆಂದು ಚಿಂತಿಸುತ ॥ ೨೦ ॥ ರತುನ
ಮಂಚದಮೇಲೆ ತನ್ನಯ । ಪತಿದಶಾನನನಸಹಿತ ಮೃದು । ಲತಮ ತ
ಲ್ಪದೆ ನಿದ್ರಿಪಾಮಂಡೋದರಿಯನಲ್ಲಿ ॥ ಅತಿಹರುಷದಿಂದೀಕ್ಷಿಸಿ ಮಹೀ ।
ಸುತೆಯೆನುತ ತಾಂಭ್ರಮಿಸಿ ತನಗೆವಿ । ಹಿತಮೆನಿಪ ಕಪಿಚೇಷ್ಟೆಗಳನಾಗಿ
ಸಿದನಾ ಹನುಮ ॥ ೨೧ ॥ ಮನದೆಯೋಚಿಸಿ ಸೀತೆ ದಶಕಂ । ಠನೊ
ಡನೆಯೆಂತಾಂ ಮಲಗಳೆಂದರಿ । ತು ನೆರೆನೋಡುತ್ತವಳ ಪದದೊಳು ಕಾ
ಕರೇಖೆಯನು ॥ ದನುಜನಾಥನ ಕೂಡೆಮಲಗಿದ । ವನಿತೆಯರನೀಕ್ಷಿ
ಸುತ ನಡೆತಂ । ದನು ನಿರಾಶೆಯೊಳಾ ವಿಮಾನದಬಳಿಗೆ ಭರದಿಂದ ॥ ೨೨ ॥
ಗಿರಿಶಸಖನಂಗೆಲಿದು ದಶಕಂ । ಧರನು ತಂದವಿಮಾನದೊಳೆಸೆವ । ತರ
ತರದ ಚಿತ್ರಂಗಳನುಕಾಣುತ್ತ ಸೀತೆಯನು ॥ ಅರಸಿನೋಡದೆ ನೊಂದು
ರಾಮನ । ಚರಣವನುಜಾನಿಸುತ ಚಿತ್ತದೊ । ಳುರೆಬಳಲ್ದಾ ಪವನಸಂ
ಭವನಂದು ದುಃಖಿಸಿದ ॥ ೨೩ ॥ ಆರುಪೇಳುವರೆನಗೆ ಲಂಕೆಯೊ । ಳಾ
ರುತೋರುವರೀ ನಿಶೆಯೊಳಾ । ಧಾರುಣೀಸುತೆಯನೆನುತಾ ಹನುಮಂತ
ಮನದೊಳಗೆ ॥ ಬಾರಿಬಾರಿಗೆ ಚಿಂತಿಸುತ್ತ ವಿ । ಚಾರದಿಂದಾಲೋಚಿಸಿ
ಪುರದ । ತೋರಣಸ್ತಂಭವನಡರಿ ನೋಡಿದನು ದೆಸೆದೆಸೆಯ ॥ ೨೪ ॥
ಧರಣಿಜಾತೆಯ ನೆಲೆಯಕಾಣದೆ । ತರಣಿಸಂಭವನೆಡೆಗೆ ಪೋದೊಡೆ ।
ಮರಣವೈದುವ ನವಳವಿರಹದೆ ರಾಘವೇಶ್ವರನು ॥ ಹರಣವನು ಬಿಡು
ತಿಪರು ಲಕ್ಷ್ಮಣ ॥ ಭರತಶತ್ರುಘ್ನಾದಿಗಳು ಭಾ । ಸ್ಕರತನಯ ಸುಗ್ರೀ
ವನಳಿವ ನಖಿಳಕಪಿಗಳೊಡನೆ ॥ ೨೫ ॥ ನನಗೆ ಕಾಣಿಸಲಿಲ್ಲ ಜಾನಕಿ ।
ದನುಜನಾಥನ ಪುರದೊಳಗೆ ನಾ । ನುನೆರವನರಿಯೆ ಮುಂದೆಗತಿಯೇ
ನೆಂದು ಯೋಚಿಸುತ ॥ ಮನದೆಕುಂದಿ ಕೊರಗುತ ಮಾರುತಿ । ಜನಕ
ಜಾತೆಯು ಲಂಕೆಯಲ್ಲಿಹ । ಳೆನುತೊರೆದ ಸಂಪಾತಿಯಾನುಡಿ ಸುಳ್ಳೆನಿಸಿ

ತೆಂದ || ೨೬ || ಪುರವನೆಲ್ಲವಹುಡುಕಿ ರಾವಣ | ನರಮನೆಯನಿಂದರಸಿ
ದನಿಶಾ | ಚರಪತಿಯೊಡನೆ ಮಲಗಿದಾಸುಂದರಿಯರೆಲ್ಲರನು || ಅರಿದೆ
ಧರಣೀಸುತೆಯು ಕಾಣಿಸ | ದಿರುವಳೆನಗೆಂದಾ ಹನುಮನೀ | ಪರಿಯೊ
ಳಾಲೋಚಿಸಿದನಾ ತೋರಣದಕಂಬದಲಿ || ೨೭ || ಹುಡುಕದಸ್ಥಳವಿಲ್ಲ
ನಾನೆ | ಲ್ಲೆಡೆಯೊಳೀ ಲಂಕಾಪುರದೊಳಾ | ಪೊಡವಿಜಾತೆಯನಿಂದೆನಗೆ
ಸಿಕ್ಕದಿಹಳಾಸೀತೆ || ಕಡಲೊಳಾಕೆಯು ಬಿದ್ದಳೋ ತ | ನ್ನೊಡಲನೀಗಿ
ದಳೋ ಗರಳವನು | ಕುಡಿದಳೋ ತಾಂ ಜೀವಿಸಿಹಳೋ ಎನುತ
ಚಿಂತಿಸಿದ || ೨೮ || ನಾನುಲಂಕೆಯೊಳಿಂದು ಕಾಣದೆ | ಜಾನಕಿಯ
ನತಿದುಃಖದಿಂದಾ | ವಾನರೇಂದ್ರನಬಳಿಗೆಪೋದೊಡೆ ಲಯುವನೈದುವುದು ||
ಭಾನುಕುಲವದರಿಂದೆ ಜಲಧಿಯೊ | ಳಾನುಬಿದ್ದೆನ್ನಸುವ ನೀಗುವೆ | ನೀ
ನಿಶಿಯೊಳೆಂದೆನುತ ನಿಶ್ಚೈಸಿದನು ಮನದೊಳಗೆ || ೨೯ || ಬಳಿಕ
ತನ್ನೊಳುತಾನು ಯೋಚಿಸಿ | ನೆಲದಜೀವಿಸಿನೋಡುವನು ಶುಭ | ಗಳ
ನು ಮಾನವನೆನುತ ಪಂಡಿತರೊರೆದಿಹರು ಮುನ್ನ || ಇಳೆಯೊಳತಿಪಾತಕ
ಮೆನಿಸುವುದೊ | ಡಲನು ನೀಗುವುದೆನುತ ಶಾಸ್ತ್ರಂ | ಗಳೊಳರಲುವುವ
ದರಿಂದೆ ದೇಹವನಿಂದು ರಕ್ಷಿಪೆನು || ೩೦ || ಸಕಲತಾಣಂಗಳೊಳರಸಿದೆ
ಜ | ನಕಸುತೆಯನೀ ಲಂಕೆಯೊಳಗೆ ಹು | ಡುಕದೆಬಿಟ್ಟಿಹೆ ನೀಯ
ಶೋಕಾವನವನೆಂದೆನುತ || ಪ್ರಕಟಮತಿ ವಾಯುಸುತನಾಗನೆ | ಲಕಿಳ
ದೊಡನಾ ಕಂಬದಿಂದಿರ | ದೆ ಕಡುಜವದಿಂದೆ ನಡೆತಂದನಶೋಕವನ
ಕಾಗಿ || ೩೧ || ಫಲಕುಸುಮದಳ ಕಿಸಲಯುಗಳಿಂ | ದಲೆಮೆರೆವ ಮರ
ಗಳನುಪಾದಪ | ಗಳಿಗೆಹಬ್ಬಿದ ಲತೆಗಳನು ಘನಗುಲ್ಮನಿವಹವನು ||
ಜಲರುಹಾಕರಗಳನು ಸಿಕತಾ | ಚಲಗಳನು ಥಳಥಳಪ ಚಪ್ಪರ | ಗಳ
ನು ಕಂಡನು ಮರುತಸಂಭವನಾವನದ ಬರುತ || ೩೨ || ಕಲಶಗೋ
ಪುರ ಮಂಟಪಂಗಳ | ಬಳಗದಿಂದುರೆ ಮೆರೆವ ಗುಡಿಗಳ | ನೆಳೆದಳಿರ
ಹಾಸಿಗೆಗಳ ನಖಿಳವಿಧಮಿಗಂಗಳನು || ಉಲಿವಕೋಗಿಲೆ ನವಿಲುಗೊರ
ವಕ | ಗಿಳಿಗಳ ನಶೋಕವನದೊಳುತಾಂ | ತಳುವದೀಕ್ಷಿಸುತವನಿಸುತೆ
ಯನರಸಿದನಾಹನುಮ || ೩೩ || ಇನಜಸಚಿವನು ತಾನಶೋಕಾ |
ವನದೊಳೆಲ್ಲೆಡೆಗಳನುಹುಡುಕುತ | ಮನದೊಳಾಶ್ಚರ್ಯವನು ತಾಳ್ದನು
ವನದವೈಭವಕೆ || ದನುಜನಾಥನ ನೇಮದಿಂದಲ | ವನಿಸುತೆಯ ಸುತ್ತ
ಲೆಡೆಬಿಡದನು | ದಿನವು ಕಾವಲಿರುತಿಹ ರಕ್ಕಸಿಯರನುನೋಡಿದನು ||೩೪||
ತರತರದ ಘೋರಾಕೃತಿಗಳನು | ಧರಿಸುತೆಲ್ಲರನಂಜಿಸುವ ಸಕ | ಲ ರಜ

ನೀಚರ ವನಿತೆಯರ ನೀಕ್ಷಿಸುತವರನಡುವೆ ॥ ತೊರೆದು ನಿದ್ರಾಹಾರಗಳನುರೆ । ಕೊರಗುತಾ ರಘುವೀರನಡಿದಾ । ವರೆಗಳನು ಜಾನಿಸುವ ಸೀತೆಯನಲ್ಲಿ ನೋಡಿದನು ॥೩೫॥ ಮಾರುತಾತ್ಮಜನಂದು ನೋಡುತ । ಧಾರುಣೀಸುತೆ ಸೀತೆಯನು ಗಂ । ಭೀರಜಲನಿಧಿಚಂದ್ರನನು ಕಂಡುಕ್ಕುವಂದದಲಿ ॥ ಮೀರಿದಾನಂದವನು ತಾಳು । ತ್ತಾರುಮರಿಯದ ತೆರದೆಬಂದನು । ಬೀರಿದಾಬೆಳದಿಂಗಳೊಳು ಜಾನಕಿಯಹತ್ತಿರಕೆ ॥೩೬॥ ಸಕಲ ಚಿಹ್ನೆಗಳಿಂದೆ ತಿಳಿದು ಜ । ನಕತನುಜೆಯೆಂದೆನುತ ಚಿತ್ತದೊ । ಳು ಕಳೆದನು ಮಾನವನು ಮಾರುತಸುತನು ಸಂತಸದಿ ॥ ಅಕಟಕಟ ರಾವಣನುಕೊಟ್ಟಿಹ । ನು ಕಡುಗಾಸಿಯನೀ ಧರಣಿಸುತೆ । ಗೆ ಕೊನೆಗಾಣದವೋಲೆನುತ ದುಃಖಿಸಿದಮನದೊಳಗೆ ॥೩೭॥ ಉಳಿದುರಾಜಸುಖಂಗಳನು ತಾ । ನಳುತ ನಿದ್ರಾಹಾರವಿಲ್ಲದೆ । ಬಳಲುತಾಭರಣಂಗಳೊಂದನು ಧರಿಸದಾವನದೆ ॥ ಉಳಿದುಬಂಧುಗಳೆಲ್ಲರನು ಮನ । ದೊಳು ಪತಿಯಪಾದವನು ಬಿಡದೆಹ । ಗಲಿರುಳುಂ ಜಾನಿಸುವಜಾನಕಿ ಕಾಣಿಸಿದಳಲ್ಲಿ ॥೩೮॥ ತನ್ನ ಕಷ್ಟವು ಫಲಿಸಿತೀದಿನ । ಮಿನ್ನು ರಕ್ಕಸಿಯರರಿ ಯದವೋಲು । ಬನ್ನಿಯಮರವನ್ನೈದಿ ನೋಡುವೆನೀಕೆಯಿರವನ್ನು ॥ ಸನ್ನುತಚರಿತೆಗಿಂತು ಧರಣಿಯೊ । ಳುನ್ನತಮೆನಿಪ ದುಃಖವೊದಗಿದು । ದೆನ್ನುತಾ ಹನುಮಂತನಂದುರೆ ಶೋಕಿಸಿದನಿರದೆ ॥೩೯॥ ಒಡನೆಶಿಂಶುಪ ತರುವನೇರಿನಿ । ಬಿಡಮೆನಿಸಿದಾ ಕೊಂಬೆಗಳನಡು । ನಡುವೆ ಪಕ್ಷಿಯಪೋಲ್ಕುಳಿತುಕೊಂಡಾ ಮರುತಸುತನು ॥ ಪೊಡವಿಯಾತ್ಮಜೆ ಗಾವಬಾಧೆಯ । ಕೊಡುವರೋ ದನುಜಾಂಗನೆಯರೆಂ । ದಡಿಗಡಿಗೆ ನೋಡುತ್ತಲಿದ್ದನು ಜಾಗರಿಕನಾಗಿ ॥ ೪೦ ॥

ಇಂತು ೧೬ನೆ ಅಧ್ಯಾಯ ಸಂಪೂರ್ಣವು. ಪದ್ಯಗಳು ೭೮೩.

ಹದಿನೇಳನೆ ಅಧ್ಯಾಯ.

ಸೂಚನೆ ॥ ಬಂದುರಾವಣ ವರಿಸಬೇಕೆನು ।
ತಂದುಬೇಡಲು ಕಠಿಣವಚನಗ ।
ಳಿಂದೆಮಾರುತ್ತರವನಿತ್ತಳು ಸೀತೆಕೋಪಿಸುತ ॥

ಆದಿನದನಿಶಿ ಕೊನೆಯಜಾವದೊ । ಳಾದಶಶಿರನು ತನ್ನ ಚಿತ್ತದೊ । ಳ್ವೈದೆಜಾನಕಿಯನು ನೆನೆದುಕೊಂಡಧಿಕ ಮೋಹದಲಿ ॥ ಆದರದೊಳೈತಂ

ದನು ಬಹುವಿ | ನೋದದಿಂದ ಲಶೋಕವನ ಕಂ | ದಾದನುಜನಾರಿಯುರ
ಪೂಗಳಿಕೆಯಿಂದತಿಭರವಲಿ ‖ ೧ ‖ ಅಸುರನಾಥನ ಸುತ್ತಲಾವನ | ಕೆ ಸಡ
ಗರದಿಂದಿರವೆ ಬಂದರ | ತಿ ಸೊಗಸಿಂದುರೆ ಮೆರೆವಸತ್ತಿಗೆಚಾಮರಂಗಳ
ಸು ‖ ಹಸನಹ ಕನಕಪಾತ್ರಗಳನಂ | ದೊಸೆದು ಕೈಯೊಳುಪಿಡಿದು
ಬಹುಸಂ | ತಸದೆ ಕೈವಾರಿಸುತದೈತ್ಯಾಂಗನೆಯರಾದರದೆ ‖ ೨ ‖ ಭರ
ದೊಳ್ಕೈತರುತಾದಶಶಿರನು | ಧರಣಿಜಾತೆಯು ಬಳಿಗೆಬಂದನು | ಪರಮ
ವೈಭವದಿಂದೆ ಕಾಮಾತುರನು ತಾನೆನಿಸಿ ‖ ಸುರವಿರೋಧಿಯು ಬರವಕಂ
ಡಾ | ಧರಣಿಜೆಯು ಮೆಯ್ಪ್ರಾಣದಂತಿರೆ | ಸೆರಗಿನಿಂ ದಾಚ್ಛಾದಿಸಿರ್ದಳು
ತಲೆಯಬಾಗಿಸುತ ‖ ೩ ‖ ನಿಂದುರಾವಣನವನಿಜಾತೆಯು | ಮುಂದೆಪೇ
ಳ್ದನು ರಾಜವೈಭವ | ದಿಂದೆ ಕಾಮಾತುರದೊಳತಿ ಚಾತುರ್ಯವಚನ
ದಲಿ ‖ ಇಂದುಮುಖಿಕೇಳೆನ್ನ ವರಿಸು | ತ್ತಿಂದುನೀನಖಿಳ ಸುಖಸಂಚ
ಯ | ದಿಂದವಿಹರಿಸು ನನ್ನೊಡನೆ ಸಂತೋಷವನುತಾಳ್ದು ‖ ೪ ‖ ಮೂ
ರುಲೋಕದ ವೀರರೊಳು ನನ | ಗಾರುಸರಿಯಿಲ್ಲಗ್ರಜನಹ ಕು | ಬೇ
ರನಂಜಯಿಸುತ ವಿಮಾನವತಂದಿಹೆನು ನಾನು ‖ ಘೋರತರತಪದಿಂದೆ ಮೆ
ಚ್ಚಿಸಿ | ಶಾರದಾಪತಿಯನ್ನು ಪಡೆದಿಹೆ | ಸಾರತರಮೆನಿಪ ಖಿಳವಿಧವರ
ಗಳನು ಪೂರ್ವದಲಿ ‖ ೫ ‖ ಹರಿಣಲೋಚನೆ ಪಂಕಜಾನನೆ | ಉರಗವೇ
ಣಿಮೆ ದೇಭಗಾಮಿನಿ | ಯರುಣಪಲ್ಲವಪಾಣಿ ಕೋಕಿಲವಾಣಿ ಸುಶ್ರೋ
ಣಿ ‖ ವರಸುವರ್ಣಕಲಶ ನಿಭಪಯೋ | ಧರೆ ವಿರಾಜಿಪ ಶೋಣಬಿಂಬಾ |
ಧರೆ ರಮಿಸುನೀನೆನುತ ಪೇಳ್ದನು ಸೀತೆಗಾಖಳನು ‖ ೬ ‖ ಕಾಮಿನೀ
ಮಣಿ ಕೇಳುನಿನ್ನವೊ | ಲೀಮಹೀಮಂಡಲದೊಳಿಲ್ಲವು | ಭಾಮಿನೀವರ
ರಿಂದುನಿನ್ನಯ ರೂಪವನುಕಂಡು ‖ ಕಾಮಬಾಧೆಯ ತಾಳಲಾರದೆ |
ಕೋಮಲಮೆನಿಪ ನಿನ್ನಚರಣಕೆ | ನಾಮಣಿದುಬೇಡುತಿಹೆ ನನ್ನನುವರಿ
ಸಬೇಕೆನುತ ‖ ೭ ‖ ತಾಪಸರವೊಲು ಚಿತ್ತದೊಳಗನು | ತಾಪವನುತಾ
ಳ್ದಿ ರಘೂದ್ವಹ | ತಾಪದುಳದಿಂದಿರದೆ ದುಃಖಿಸುತಿಹನರಣ್ಯದಲಿ ‖ ಆಪದ
ಕ್ಕೊಳಗಾಗಿಹನು ನ | ನ್ನೀಪುರಕೆಬರಲಾರ ನೆನ್ನಸ | ಮಾಪದೊಳಿದಿರು
ನಿಲ್ಲುವಧಟುತನಮಿಹುದೆ ರಣದಲಿ ‖ ೮ ‖ ವಾರಿಧಿಯನು ಲ್ಲಂಘಿಸುವ
ಬಲ | ವಾರಘುವರಂಗಿಹುದೆ ಕೇಳು ವಿ | ಚಾರಿಸಲುತಾಂ ಮೃತಿಯನೈ
ದುವನೀ ಧರಣಿತಲದೆ ‖ ನಾರಿಯ ನುಡಿಗಧೀನನಾಗುತ | ಪಾರುಗಾಣದ
ಸಂಪದವನುಳಿ | ದಾರುಮಿಲ್ಲದರಣ್ಯಕೈದಿದ ಹೇಡಿಯಾಗಿಹನು ‖ ೯ ‖
ಉತ್ತಮಾಂಗನೆಕೇಳು ನಿನ್ನನು | ಹತ್ತುಸಾವಿರ ದಾದಿಯರು ನಲಿ | ದೆ

ತ್ತಲುಂ ಸೇವಿಸುವರೆನ್ನಾಜ್ಞೆಯೊಳಗನವರತ ॥ ಚಿತ್ತವಿಡುನನ್ನೊಳು ನಿಜೇಶನ । ನಿತ್ತ ಕಾಣುವರೀತಿಯನು ಬಿಡೆ । ನುತ್ತ ಸೀತೆಗೆಪೇಳ್ದನಾ ದಶಕಂಠನಾವನದೆ ॥ ೧೦ ॥ ನನಗೆಭಾಸ್ಕರನಂಜಿ ತಾಪವ । ನನುದಿನವು ಮೊಡದಜನಾಯುನಿ । ಲನತಿ ಸೌಖ್ಯದಿಬೀಸುವನು ವಾಯುಸಖನುಷ್ಣ ವನು । ಅನುದಿನವು ಮೊಡದಿಹ ನಖಿಳಭು । ವನದ ಶೂರರು ನನ್ನನಾ ಮವ । ನೆನೆನೆನೆದು ಚಿತ್ತದಲಿನಡುಗುತ್ತಿಹರು ಸಂತತವು ॥ ೧೧ ॥ ಕೋ ಮಲಾಂಗಿಯೆಕೇಳು ನಿನಗಾ । ರಾಮನಿಂದಿನಿತಿಲ್ಲ ಸೌಖ್ಯವು । ಭೂಮಿ ಯೊಳು ಯವ್ವನವುಶಾಶ್ವತಮಲ್ಲ ಮನುಜರ್ಗೆ ॥ ಕಾಮಿತಾರ್ಥಂಗಳನು ಪಡೆದೀ । ಕಾಮಿನಿಯರಿಗೆ ಮಹಿಷಿಯಾಗುತ । ಕಾಮಕೇಳಿಯೊಳೆನ್ನನೊ ಲಿಸೆಂದೆನುತ ಪೇಳಿದನು ॥ ೧೨ ॥ ಲಲನೆಕೇಳೆನ್ನನು ವರಿಸುತೀ । ನೆಲ ದೊಳುತ್ತಮ ವೆಂದೆನಿಸುವ ಸ । ಕಲ ಸುಖಂಗಳನಾಂತು ನಿನ್ನಯ ತಂದೆಜನಕಂಗೆ ॥ ತಳೆದಸಂತಸದಿಂದೆ ಕೊಡುವುದ । ಖಿಳಪದಾರ್ಥಂಗ ಳನುನೀಂ ಮ । ತ್ತುಳದ ಬಂಧುಗಳೆಲ್ಲರನು ಸಂತವಿಸುಮನ್ನಿಸುತ ॥ ೧೩ ॥ ನನಗೆರಾಘವನೆಳ್ಳನಿತು ಸಮ । ನೆನಿಸನೈಶ್ವರ್ಯ ಕುಲ ಬಲ ಗುಣ । ಘನಪ ರಾಕ್ರಮ ರಾಜವೈಭವ ಕಲಿತನಂಗಳಲಿ ॥ ವನಜಲೋಚನೆ ನೀನು ನ ನ್ನೊಳು । ಮನವನಿಟ್ಟುದ್ಧರಿಸು ವಂದಿಸು । ವೆನತಿಹಿತದಿಂದೆನುತ ರಾ ವಣ ನುಡಿದನವನಿಜೆಗೆ ॥ ೧೪ ॥ ಕಳೆದಿಹನು ಸೌಖ್ಯಂಗಳನು ನೆಲ । ದೊಳು ಮರಣವೈದುವನು ಸತ್ವವ । ನುಳದಿಹನು ರಾಘವನು ತಂದೆಯ ಮಾತನಾಲಿಸುತ ॥ ಚಳಿಮಳೆಬಿಸಿಲು ಗಾಳಿಗಳಿಗೆ ಹ । ಗಲಿರುಳಂಜುತ ವಿಪಿನದೊಳಿಹನು । ನೆಲದೊಳೇನು ಸುಖವನುಹೊಂದಿದೆ ನೀನು ಪತಿ ಯಿಂದೆ ॥ ೧೫ ॥ ಪ್ರಮದೆನೀಂ ಕುಡಿಸಂತಸದೊಳು । ತ್ತಮವೆನಿಪ ಪಾನಂಗಳನು ನಿ । ನ್ನಮನವೊಪ್ಪುವ ವೋಲ್ವಿಹರಿಸುದ್ಯಾನವನಗಳಲಿ । ರಮಿಸುನನ್ನೊಡ ನೀವಿಮಾನದೊ । ಳಮಲಭೋಗಂಗಳನು ಭುಂಜಿ ಸು । ವಿಮಲಮಣಿಕನಕಾಂಬರಂಗಳ ನೀವೆಮನದಣಿಯೆ ॥ ೧೬ ॥ ತೊರೆದು ರಾಜಸುಖಂಗಳೆಲ್ಲವ । ನುರಘುವರನಾ ಕಾನನದೊಳಿಹ । ನಿರು ಳು ಹಗಲಾಹಾರನಿದ್ರೆಯನುಳಿದು ಭಯದಿಂದ ॥ ಇರದೆಲಂಘಿಸಿ ಜಲನಿ ಧಿಯನೀ । ಪುರಕೆ ಬಂದೊಡಗೊಂಡು ನಿನ್ನನು । ಹೊರಟುಹೋಗುವ ಶಕ್ತಿ ಯೆಲ್ಲಿಹುದಾನರಿಯದಂತೆ ॥ ೧೭ ॥ ಮಲಿನವಸ್ತ್ರವನೇಕೆ ಧರಿಸಿಹೆ । ಜಲವನೇತಕೆ ಸುರಿಪೆನಯನಂ । ಗಳಲಿ ಧಾರುಣಿಗೇಕೆಬಿಗ್ಗಿಸಿಕೊಂಡಿ ಪೆ ತಲೆಯನು ॥ ಲಲನೆಕೇಳೀ ದುಃಖದಿಂದೇಂ । ಫಲವಹುದು ನಿನಗೆನ್ನ

ವರಿಸುತ । ಬಿಳಸುಖಂಗಳನ್ನೈದಿ ನೀಂಬಾಳುವುದೆಲೇಸೆಂದ ॥ ೧೮ ॥ ಭ್ರಮರಸಂಚಯದಿಂದೆ ಶೋಭಿಪ । ಸುಮನಸಂಗಳನಾಂತು ಸಾಗರ । ದಮಲತೀರದೊಳೆಸೆವ ಪಾದಪಚಯವನೀಕ್ಷಿಸುತ ॥ ಭ್ರಮೆಯನಾಗಿಸು ತೆನ್ನೊಳತಿ ಸಂ । ಭ್ರಮವನಾನುತ ವಿಹರಿಸತ್ಯ । ತ್ತಮವಿಭವದಿಂದೆನು ತ ಸೀತೆಗೆಪೇಳ್ದನಸುರೇಂದ್ರ ॥ ೧೯ ॥ ದನುಜವಲ್ಲಭನಾಮಹೀಸುತೆ । ಗೆನಲವಿಂಪಲತೆರದೆ ನೀನೆ । ನ್ನನು ವರಿಸಬೇಕೆಂದು ನಯಭಯ ವಿನ ಯವಚನದಲಿ । ವನದೊಳಾಹನುಮಂತ ನೋಡುತ್ತಿ । ರೆ ನುಡಿದುಬಳಿಕ ಸುಮ್ಮನಾದನು । ತನಗೊದಗಿದಾಪದವ ನಾಲೋಚಿಸುತ ಚಿತ್ತದಲಿ ॥ ॥ ೨೦ ॥ ಜನಕನಂದನೆ ಕೇಳ್ದು ರಾವಣ । ನನುಡಿಗಳನಾ ವನದೆಬಿತಿ ಯಿಂ । ದೆ ನುಡಿದಳು ಕಡ್ಡಿಯನು ಕೈಯೊಳುಪಿಡಿದು ತಲೆವಾಗಿ ॥ ಮ ನುಜಘಾತುಕ ಕೇಳು ಕಮಲಾ । ಸನನವಂಶದೊಳುದಿಸಿ ಬಹುನೀ । ಚ ನೆನಿಸುತ್ತಿಹೆ ಹೋಗುದೂರಕೆನುತ್ತ ಗಜರಿದಳು ॥ ೨೧ ॥ ಮನುಕು ಲೋತ್ತಮ ರಾಮನಲ್ಲದೆ । ಮನದೊಳನ್ಯರನೆನೆವಳೇ ನಾಂ । ಮನುಜ ಭಕ್ಷಕಕೇಳು ವರಿಸೆಂದೆನ್ನ ಕೇಳುತಿಹ ॥ ನಿನಗೆಸುಖವೆಂತಹುದು ಘೋ ರಕ । ದನದೊಳಾ ರಘುವರನು ಕಾಲನ । ಮನೆಗೆ ನಿನ್ನನು ಕಳುಹುವ ನಖಿಳ ರಕ್ಕಸರಸಹಿತ ॥ ೨೨ ॥ ಖೂಳಕೇಳೆನ್ನಿನಯ ನಿಲ್ಲದ । ಕಾಲ ದೊಳು ಸನ್ಯಾಸಿವೇಷವ । ತಾಳುತೈತಂದೆನ್ನನಿಲ್ಲಿಗೆ ತಂದೆ ಕಳ್ಳನೊಲು ॥ ಕೇಳಲಾರದ ನುಡಿಗಳನು ನೀಂ । ಪೇಳುತೆನ್ನೊಡನೆ ನಲಿದಾಡುವೆ । ಕಾಲವಶದಿಂ ತೋರಿಸುತ ವಿಪರೀತ ಬುದ್ಧಿಯನು ॥ ೨೩ ॥ ನನ್ನ ವಶ ವಾಗೆನುತ ಕೇಳುವ । ನಿನ್ನ ನಾಲಿಗೆ ಸೀಳದಿಹುದೇ । ನಿನ್ನು ಕೇಳೆಲೆ ಖೂಳರಾವಣ ರಾಘವನಿದಿರಲಿ ॥ ನನ್ನೆಲೆಮನೆಗೆ ಬಂದು ಪಿಡಿದಿರ । ಲೆನ್ನ ನಾರಘುವೀರನಾಗಳೆ । ನಿನ್ನ ವಧಿಸುತ್ತಿದ್ದನಾ ಖರನಂತರಣ್ಯದಲಿ ॥ ೨೪ ॥ ದುರುಳ ರಾವಣ ಕೇಳು ನೀನಾ । ತರಣಿವಂಶಲಲಾಮನೆನ್ನಿ ಸು । ವರಘುಪತಿಗೆ ಸಮಾನನಲ್ಲವು ಮುಂದೆ ಬವರದಲಿ ॥ ಶರಗಳಿಂದಲೆ ನಿನ್ನ ನಾರಘು । ವಿಳನು ಕೊಲ್ಲುವ ನೀಗಳಾತನ । ಚರಣಕೆರಗಿಯೆ ಕೊ ಟ್ಟು ನನ್ನನು ಬಾಳುವುದುಲೇಸು ॥ ೨೫ ॥ ಹರಿಯಮುಂದೆ ಸಫಲವೆ ನಿಪುದೇಂ । ನರಿಯ ಯುಕ್ತಿಗಳೆಲ್ಲ ನೋಡಲು । ಧರಣಿಯೊಳ್ವೃಫಲಂಗಳ ಲ್ಲವೆ ರಾಘವನಮುಂದೆ ॥ ದುರುಳನಿನ್ನ ಯುಕುತಿಗಳೆಲ್ಲವು । ಧುರದೊ ಳಾ ರಘುವೀರನಿಂದಲೆ । ಮರಣಸಂಭವಿಸುವುದು ಮುಂದೆ ನಿನಗಿದು ನಿಶ್ಚಯವು ॥ ೨೬ ॥ ರಾಮನಶಿರಕಿರಿಸಿದ ತೋಳನು । ಭೂಮಿಯೊಳ

ತರ ಮನುಜರಿಗಿರಿಸೆ । ನಾ ಮನುಕುಲೋತ್ತಮನ ಪಾದವೆಗತಿಯು ನನಗೆಂದುಂ ॥ ನೀ ಮನದೊಳರಿ ಕೈಟಭಾಂತಕ । ನೀ ಮಹೀತಲದೊಳಗುದಿಸಿಹನು । ರಾಮನಾಗಿಯೆ ಹರಿಸಲೀ ಧಾರುಣಿಯ ಭಾರವನು ॥ ೨೭ ॥ ಕೊಂದುಹಾಕಿದರೂ ಸರಿಯೆನೀಂ । ಬಂಧಿಸಿದರೂ ಸರಿಯೆ ನನ್ನನು । ತಿಂದರೂಸರಿ ಪ್ರೊರೆಯೆ ನೀದೇಹವನು ಮೋಹದಲಿ ॥ ಇಂದು ಬೇಕಾಗಿಲ್ಲ ವೆನಗೀ । ಚೆಂದವಾಗಿಹ ವಸ್ತುಗಳು ರಘು । ನಂದನನೆ ಗತಿಯೆನುತ ಜಾನಕಿಪೇಳ್ದಳಸುರಂಗೆ ॥ ೨೮ ॥ ದುರುಳನೀಂ ಕೇಳೆಲವೊ ಪರಸತಿ । ಯರನು ದುಃಖಪಡಿಸುತಲಿರ್ಪ ಜ । ನರಿಗೆ ನಷ್ಟವೆನಿಪುದ ಖಿಳಸಾಭಾಗ್ಯ ಸಂದೋಹ ॥ ಸುರವಿರೋಧಿಯೆಕೇಳು ನಿನ್ನಿಂ । ದುರುತರದಬಾಧೆಯನು ತಾಳು । ತ್ತಿರುವ ನನ್ನ ನಿಮಿತ್ತ ಸಾಯುವೆ ನೀನು ಶೀಘ್ರದಲಿ ॥ ೨೯ ॥ ಪರಸತಿಪರಧನಂಗಳ ಗೆಳಸಿ । ಧರಣಿಯೊಳಪಹರಿಸುತಖಿಳಮನು । ಜರಿಗೆ ನೋವನೆಸಗುವ ಬಹುಪಾತಕಿಗೆ ದಿನದಿನವು । ತರತರದ ದುಃಖಂಗಳೊದಗುತ । ಭರದೊಳಾತನ ಸಿರಿಗೆತಪ್ಪದೆ ॥ ಬರುತಿಹುದು ನಾಶನವಿದರೊಳನುಮಾನ ವೇನಿಹುದು ॥ ೩೦ ॥ ಪತಿಪರಾಯಣಿಯೆನಿಪ ನನ್ನಯ । ವಿತತದುಃಖವೆ ನಿನ್ನವಂಶವ । ನತಿಭರದೊಳು ವಿನಾಶವಮಾಳ್ಪುದು ದುರುಳಕೇಳೆಲವೋ ॥ ಕ್ಷಿತಿಯೊಳನುದಿನ ನೀಚಕಾರ್ಯವ । ನು ತಿಳಿದಾಚರಿಸುತಿಹ ನರನಿಗೆ । ಸತತ ಕೇಡಾಗುತಿಹುದಲ್ಲದೆ ಸೌಖ್ಯವೆತ್ತಣದು ॥ ೩೧ ॥ ದಾನವಾಧಮಕೇಳು ನೀನು ನಿ । ದಾನವಮಾಡದೆ ಹಗೆಯನುಳಿದು । ಜ್ಞಾನಮಾರ್ಗದಿ ನಮಿಸಿ ರಾಮನಚರಣ ಪಂಕಜಕೆ ॥ ಸಾನುರಾಗದೊಳೆನ್ನ ನಿತ್ತು । ಭಾನುವಂಶಲಲಾಮನಿಗೆಲಂ । ಕಾನಗರದೊಳು ಬಾಳು ಬಂಧುಗಳೊಡನೆ ಬಹುಕಾಲ ॥ ೩೨ ॥ ಭ್ರಷ್ಟನೆ ನಿನಗೆ ಬುದ್ಧಿಯಿಹುದೇ । ನಷ್ಟಮದದಿಂದುಬ್ಬಿ ಗರ್ವಿಸಿ । ದುಷ್ಟಕಾರ್ಯಂಗಳನೆಸಗಿ ಸಾಧ್ವಿಯರನೆಳೆತಂದು ॥ ಕಷ್ಟಪಡಿಸುತಲಿಹೆ ನಿನಗಿನ್ನೆಷ್ಟುದಿನ ಜಯವಾಗಿಹುದು ಪೇಳ್ । ಇಷ್ಟಜನಗಳಸಹಿತನಾಶವನೈದುವೆ ಭರದಲಿ ॥ ೩೩ ॥ ಉತ್ತಮೋತ್ತಮ ಬುದ್ಧಿಯನು ನೀಂ । ಚಿತ್ತದೊಳ್ ಳಿದಾ ರಘುವರಂಗಿತ್ತು ನನ್ನನು ಚರಣಕಾನತನಾಗಿ ಸಂತತವು ॥ ಬಿತ್ತರದ ಸಂಪದವನನುಭವಿ । ಸುತ್ತಖಿಳ ಬಂಧುಗಳಪೋಷಿಸು । ಕೆತ್ತಲುಂ ಸಂತವಿಸಿಬಾಳ್ವುದೆ ಯೋಗ್ಯಮೆನಿಸುವುದು ॥ ೩೪ ॥ ಕ್ಷಿತಿಯೊಳು ಪತಿವ್ರತೆಯರೆನಿಪರ । ನಿತೆಯರತಿದುಃಖವನುಹೊಂದುತ । ಳುತನುಡಿದಶಾಪಾಗ್ನಿಯಿಂದಲೆ ಭಸ್ಮವಾಗುವನು ॥ ಸತಿಸುತಸಹೋದರರು ಮೊದಲಹ । ವಿತತಬಂಧು

ಗಳೊಡನೆ ಮನುಜನೆ । ನುತ ನುಡಿವನೀತಿಯನುಳಿದು ನೀಂಕೆಡುವೆ ಕೇಳೆಲವೊ ॥ ೩೫ ॥ ಜ್ಞಾನಮಾರ್ಗವನುಳಿದು ತನ್ನವ । ಸಾನಕಾಗಿಯೆ ಧಾರುಣಿಯೊಳಾ । ಮಾನವನು ವಿಪರೀತಬುದ್ಧಿಯನೈದುವಂದದಲಿ ॥ ನೀನುರಾಘವನೊಳು ವಿರೋಧವ । ನಾನುತ ಸಕಲ ಬಂಧುಗಳಸಹಿ । ತೀನಗರದೊಳುನಾಶವಾಗುವೆ ಮುಂದೆದು ಖಿಸುತ ॥ ೩೬ ॥ ಮುನಿಗಳಗೆ ಹಿಂಸೆಯನುಮಾಡಿದೆ । ವನಿತೆಯರೊಳುತ್ತಮರ ನೀಕ್ಷಿಸಿ । ಘನಬಲಾತ್ಕಾರದೊಳು ನೀಂ ಕರೆತಂದುಕೆಡಿಸಿರುವೆ ॥ ಮನದೊಳಾನಂದವನು ತಾಳ್ದು ಕ । ದನವನೆಸಗಿ ವಿಬುಧರಸಂಚಯ । ವನುರೆ ನೋಯಿಸುತಿರ್ಪ ನಿನಗಾಗುವುವೆ ಸಾಖ್ಯಗಳು ॥ ೩೭ ॥ ವಿನುತಮೆನಿಪಾ ಬ್ರಹ್ಮಚರ್ಯದೊ । ಳುನಮಿಸುತ ವಿದ್ಯಾಗುರುವನನು । ದಿನವು ಸೇವಿಸಿ ತನ್ನರೂಪವನರಿತ ವಿಪ್ರನಿಗೆ ॥ ಅನವರತದೊಳಧೀನ ಮಾಗಿಹ । ಘನಸುವಿದ್ಯೆಗಳಂತೆ ರಘುನಂ । ದನನಿಗೀ ಧರಣಿಯೊಳಧೀನಳೆನಿಸಿರುತಿಹೆನೆಂದುಂ ॥ ॥ ೩೮ ॥ ದುರುಳರಾವಣ ಕೇಳೆಲವೊ ನೀಂ । ಮರುಳನಂದದೆ ನೈಜಬುದ್ಧಿಯು । ತೊರೆದು ಕಾಮಾತುರನೆನಿಸಿ ಈವಿಯೊಳು ನನ್ನೊಡನೆ ॥ ತರತರದ ಮಾತುಗಳನಾಡುವೆ । ಧರಣಿಯೊಳು ನೀನಿನ್ನು ನೋಡದೆ ವರಶುಭಂಗಳ ನೈದುವೆಜವದೊಳಾ ಯಮನಬಳಿಗೆ ॥ ೩೯ ॥ ಹೋಗೆಲವೆಲವೊ ಖೂಳನಿನಗಾ । ರಾಘವೇಂದ್ರನು ಮುಂದೆಮರಣವ । ನಾಗಿಸುವನಿದರೊಳಗೆ ಸಂಶಯವಿಲ್ಲನೀನಿಂದು ॥ ಕೂಗದೆನ್ನಬಳಿಯೊಳುದೂರಕೆ । ಬೇಗಪೋಗೆಂದೆನುತ ಪೇಳದ । ಳಾಗ ಧರಣೀಜಾತೆ ಬಹುಧೈರ್ಯದೊಳುರಾವಣಗೆ ॥ ೪೦ ॥ ಪೊಡವಿಯಣುಗಿಯ ನುಡಿಗಳನು ಕೇ । ಳ್ದೊಡನೆ ಕೋಪಾತಿಶಯದಿಂದಲೆ । ನುಡಿವನಾದಶಶಿರನು ಪಲ್ಗಳಕಡಿದು ಕಟಕಟನೆ ॥ ಕಿಡಿಗಳನುಕಾರುತ್ತ ಕಂಗಳೊ । ಳಡಿಗಡಿಗೆತಾಂ ತನ್ನ ತುಟಿಗಳ । ನಡುಗಿಸುತ್ತೊದೆ ದವನಿತಲವನ್ನಡದಕಾಲಿಂದೆ ॥ ೪೧ ॥ ತೊರೆದು ಬಂಧುಗಳೆಲ್ಲರನು ಹಗ । ಲಿರುಳು ರೋದಿಸುತೆನ್ನಧೀನದೊ ॥ ಳಿರುವನಿನಗಾ ರಾಮನಿಂದೆ ಸಹಾಯುವಾಗುವುದೆ ॥ ಅರಿತುಚಿತ್ತದೊಳಖಿಳ ಲೋಕವ । ನುರೆನಡುಗಿಸುವ ನನ್ನನಿಂದೀ । ತೆರದಿನಿಂದಿಸಬಹುದೆ ಕೊಲ್ಲುವೆನಿನ್ನನೀಕ್ಷಣವೆ ॥ ೪೨ ॥ ಎನುತ ಕತ್ತಿಯನಾಗಪಿಡಿದಾ । ದನುಜನಾಥನು ಝಳಪಿಸುತ ಮೇ । ದಿನಿಯಣುಗಿಯ ಸನಿಹಕೆಪಲ್ಗಡಿವುತ್ತನಡತರಲು ॥ ಅನಿತರೊಳು ರಾವಣನರಸಿ ಯೆಂ । ದೆನಿಪ ಮಂಡೋದರಿ ತಡೆದು ಗಂ । ಡನಿಗೆ ಪೇಳ್ದಳುನಮಿಸಿ ಪದಪಂಕೇರುಹಂಗಳಗೆ ॥ ೪೩ ॥

ಪತಿಯೊಳೀಗ ಸೀತೆನನಗಿಂ । ತತಿಶಯಳ್ ಸೌಂದರ್ಯದಲಿ ನೋ । ಡಿತಿಳ
ಯವೆ ಕಾಮಾತುರದೊಳೀತಕ್ಕೆ ಬಳಲಿವಪೆ ॥ ಹಿತದೆನನ್ನೊಳು ರಮಿಸು
ಧರಣೀ । ಸುತೆಗೆ ಕಾಮೋದ್ರೇಕವಿಲ್ಲವು । ವಿತತಕಾಮಾತುರಳ್ ನಿಪೆ
ನಾನೆಂದುಪೇಳಿದಳು ॥ ೪೪ ॥ ಮಡದಿ ಮಂಡೋದರಿಯು ಪೇಳಿದ । ನು
ಡಿಯನಾಗಳ್ ರಾವಣನು ಕೇ । ಳ್ದೊಡನೆ ತನ್ನ ಮನದೊಳುದಾಸೀನವ
ನು ತಾಳುತ್ತ ॥ ತಡೆಯಲಾರದ ಸಂಕಟಂಗಳ । ನಡಗಿಸುತ ಮನದೊ
ಳಗೆ ಸೀತೆಯು । ಕಡೆಗೆ ತನ್ನಯ ಮುಖವತಿರುಗಿಸಿ ಮತ್ತೆ ಪೇಳಿದನು ॥
॥ ೪೫ ॥ ಧರಣಿಜಾತೆಯೆ ಕೇಳು ನಿನ್ನೊಳು । ಕರುಣಿಸುತ್ತೀ ದಿನವೊ
ದಲುಗೊಂ । ಡೆರಡು ತಿಂಗಳ ಗಡುವನಿತ್ತಿಹೆ ಕೇಳ್ಕ ನಗನರೆಳು ॥ ವರಿ
ಸಿ ನನ್ನನು ಸಂತವಿಸದಿ । ದ್ದರೆ ಕಡಿಕಡಿದು ನಿನ್ನ ಛೇದಿಸು । ವರೆನುತು
ಸುರಿದನಾ ನಿಶಾಚರಿಯರಿಗೆ ರಾವಣನು ॥ ೪೬ ॥ ನೀವು ಕೇಳುವದೆನ್ನ
ನೇಮವ । ನೀವನಿತೆ ನನ್ನನು ವರಿಸಿತಾ । ನಾವೆಗಂ ಸುಖಗೊಳಿಪ ತೆರ
ದೊಳು ಬಹುವಿಧಂಗಳಲಿ ॥ ಸಾವಕಾಶವ ಮಾಡದನುದಿನ । ವೀವನದಿ
ಪೇಳುತ್ತಿಹುದೆಂದಾ । ರಾವಣನು ಪೇಳುತ್ತ ಬಂದನು ರಾಜಮಂದಿರಕೆ ॥
॥ ೪೭ ॥ ದನುಜನಾಥನ ಬಳಸುತಾತನ । ಮನೆಗೆ ಬಂದರು ದೂತಿಕೆಯ
ರಾ । ಮನುಜಘಾತುಕನನ್ನು ಬಿರುದುಗಳಿಂದೆ ಹೊಗಳುತ್ತ ॥ ಘನತರದ
ಲಂಕಾರದಿಂದೆಸೆ । ವ ನಿಜರಾಜಭವನಕೆ ನಡೆತಂ । ದನು ಮಡದಿ ಮಂ
ಡೋದರಿವೆರಸಿ ರಾವಣಾಸುರನು ॥ ೪೮ ॥ ಈ ತೆರದೊಳಾ ದನುಜನಾಥ
ನು । ಸೀತೆಯೊಡನಾಡಿದ ನುಡಿಗಳನು । ಮಾತರಿಶ್ವತನೂಜನಾ ಶಿಂಶುಪ
ಮಹೀರುಹದೆ ॥ ಕೂತು ಕೇಳುತ ತನ್ನ ನರಿಯದ । ರೀತಿಯಿಂದಾ ಸೀತೆ
ಗೊದಗಿದ । ಭೀತಿಯನು ತಾಂ ಕಂಡು ಶೋಕಿಸುತಿದ್ದನು ಮನದಲಿ ॥ ೪೯ ॥
ಅಸುರನಾಥನು ಪೋದಬಳಿಕಾ । ವಸುಮತೀಸುತೆ ತನ್ನ ಚಿತ್ತದೊ । ಳು
ಸಲೆ ದುಃಖಿಸಿ ರೋದಿಸುತ ಶೋಕವನ ಮಧ್ಯದಲಿ ॥ ಬಿಸಲಿನತಿಝಳದಿಂದೆ
ಬಾಡಿದ । ಕಿಸಲಯದವೋಲ್ ಕಾಣಿಸಿದಳಂ । ದಸುರವಧುಗಳ ನಡುವೆ
ಯುಂಜುತಳುತ್ತ ನಡುನಡುಗಿ ॥ ೫೦ ॥

ಇಂತು ಹದಿನೇಳನೆಯ ಅಧ್ಯಾಯ ಸಂಪೂರ್ಣವು. ಪದ್ಯಗಳು ೮೩೩.

ಹದಿನೆಂಟನೆಯ ಅಧ್ಯಾಯ.

ಸೂಚನೆ। ದನುಜಪತಿ ದಶಶಿರನ ವರಿಸು ।
ತ್ತನುದಿನವು ಸುಖಿಸೆಂದು ಪೇಳ್ದಾ ।
ವನಿತೆಯರಿಗಾ ಜನಕನಂದನೆ ಪೇಳ್ದಳುತ್ತರವ ॥

ಖಳನುತೆರಳದಬಳಿಕ ಸೀತೆಯ । ಬಳಿಗೆ ತಾನೈತಂದಿರದೆ ನುಡಿ । ದಳು ಮಹಾವೈಭವದೊಳೇಕಜಟೆ ಯೆನಿಪ ವನಿತೆಯು ॥ ಇಳೆಯೊಳಾಗಿ ಕೇಳಾ ದಶಶಿರನ । ನೊಲಿಸುತ ಸಕಲವಿಷಯ ಸೌಖ್ಯಂ । ಗಳನು ಹೊಂದುವುದೆಲ್ಲರಿಗೆ ನೀನೊಡತಿಯೆಂದೆನಿಸಿ ॥ ೧ ॥ ಭರದೊಳಂದಾ ಜಾನಕಿಯುಹ । ತ್ತಿರಕೆ ತಾನೈತಂದು ಪೇಳ್ದಳು । ಹರಿಜಟೆಯೆನಿಸಿಪ ರಕ್ಕಸಾಂಗನೆ ಬಹಳಯುಕ್ತಿಯಲಿ ॥ ಧರಣಿಸುತೆ ಕೇಳಸುರನಾಥನ । ವರಿಸಿನೀನೀ ಲಂಕೆಯೊಳು ದನು । ಜರಿಗೆ ರಾಜ್ಞಿಯೆನಿಸುವುದಾವಗ ಮೆಸುತ ಸಂತಸದಿ ॥ ೨ ॥ ಪ್ರಘಸೆಯೆಂಬ ಪೆಸರಿನ ರಕ್ಕಸಿ । ರಘುವರನರಾಣಿಯಬಳಿಗೆ ಬಂ । ದು ಘನತರ ಸಂತೋಷದಿಂದಾ ವನದಮಧ್ಯದೊಳು. ಪೊಗಳುತಸುರೇಶ್ವರನ ಹಲವ್ರವಿ । ಧ ಗುಣಸಂಚಯವ ನಡಿಗಡಿಗಾ । ಮುಗುಳುನಗೆ ಯಿಂದೊಲಿಸುತುಸುರಿದಳತಿ ವಿನೋದದಲಿ । ೩ । ಸುಂದರೀಮಣಿ ಕೇಳು ನೀಂ ರಘು । ನಂದನನುಳಿದು ದನುಜನಾಥನಿ । ಗಿಂದು ಭಾರ್ಯೆಯೆನಿಸುತ ರಾಜಸುಖಂಗಳೆಲ್ಲವನು । ಹೊಂದಿ ಲಂಕಾಪುರವರವನಾ । ನಂದದಿಂ ಸಲಹುತ್ತ ವಾಸಿಪು । ದೆಂದುನುಡಿದಳು ಕೇಳುವಂದದೆ ಸಕಲನಾರಿಯರು ॥ ೪ ॥ ಜನಕಜಾತೆಯೆ ಕೇಳು ನಿನಗೆ ಸ । ಮನಹ ಕಾಂತಾಮಣಿ ಯರಿಲ್ಲವು । ದನುಜನಾಥನ ಮಡದಿಯಾಗುತ ವರವಿಮಾನದಲಿ ॥ ದಿನದಿನವುನೀಂ ರಾಕ್ಷಸೇಂದ್ರನೊ । ಡನೆ ರಮಿಸುತಾನಂದದಿಂದಿಹು । ದೆನುತಪೇಳ್ದಳು ವಿಕಟೆಯೆನಿಪಾಘೋರ ರಕ್ಕಸಿಯು ॥ ೫ ॥ ಪೊಡವಿಜಾತೆಯ ಬಳಿಗೆಬಂದತಿ । ಸಡಗರದೊಳಾ ದುರ್ಮುಖಿಯೆನಿಪ । ಕಡುಮುಳಿಸನಾಂತಿರುವ ರಕ್ಕಸಿ ವನದಮಧ್ಯದಲಿ ॥ ಬಿಡದೆನೀನೀಪುರದೊಳು ದನುಜ । ರೊಡೆಯನಾಗಿಹ ಪಙ್ಕ್ತಿಕಂಠನ । ಮಡದಿಯಾಗುತ ಸಲಹು ನಮ್ಮನೆನುತ್ತಪೇಳಿದಳು ॥ ೬ ॥ ನಿನಗೆಸರಿಯೆಂದೆನಿಪ ಸುಂದರಿ । ಯನು ಚತುರ್ದಶ ಭುವನಗಳೊಳಾ । ವು ನೆರೆಯರಿಯೆವು ನಿನ್ನಬಿಡುವನೆ ದನುಜವಲ್ಲಭನು ॥ ಮನದೊಳೊಂದನು ಯೋಚಿಸದೆ ದಿನ । ದಿನವು ಭೋಗಿಸುತಸುರನಾಥನೊ । ಡನೆ ಸಫಲವೆಂದೆನಿಸು ಹರಯವನೆಂ

ದುಪೇಳಿದಳು ॥ ೭ ॥ ವನದೊಳಾಧರಣೀಸುತೆ ತನಗೆ । ದನುಜನಾರಿ
ಯರೆಲ್ಲ ಗರ್ಜಿಸಿ । ಘನಭಯವತೋರಿಸುತ ನುಡಿದಾನುಡಿಗಳೆಲ್ಲವನು ॥
ವನಕೇತುರದ ಕೋಪವನು ತಾ । ಳ್ದನೆರೆ ಜರೆಯುತ ತೊರೆದು ಭೀತಿ
ಯು । ವಿನಯಸೀನರಿಗಿತ್ತಳತಿ ಧೈರ್ಯದೊಳಗುತ್ತರವ ॥ ೮ ॥ ದಿವಿಜ
ವಲ್ಲಭನಂ ಶಚಿಯುದೆಂ । ತು ವರಿಸಿಹಳಾ ಗುರುವಸಿಷ್ಠಮು । ನಿವರನ
ನರುಂಧತಿಯು ತಾನೆಂತೊಲಿದು ಸೇವಿಪಳು ॥ ಶಿವಶಿರೋಭೂಷಣನೆನಿ
ಸಿದವಿ । ಧುವನು ರೋಹಿಣಿಯೆಂತುಪರಿಚರಿ । ಸುವಳು ನಾನವರಂತೆಕೈ
ವಿಡಿದಿಹೆನು ರಾಮನನು ॥ ೯ ॥ ವಿನುತಲೋಪಾಮುದ್ರೆ ತಾನನು । ದಿನ
ವು ತೊರೆಯದಗಸ್ತ್ಯಮುನಿಪಾ । ಲನನು ಸೇವಿಸುತೆಂತವ ನಧೀನದೊ
ಳು ಸೇರಿಹಳು ॥ ಘನಭಕುತಿಯಿಂದಾ ಸುಕನ್ಯೆಯು । ವಸಿಯೊಳಾಚ್ಯ
ವನನ ವಶದೊಳೆಂ । ತು ನೆಲಸಿಹಳದರಂತೆ ನಾನಿಹೆ ರಾಮನವಶದಲಿ ॥
॥ ೧೦ ॥ ಪತಿಪರಾಯಣೆಯೆನಿಸ ಸಾವಿ । ತ್ರಿ ತಳೆದಾನಂದವನು ತನ್ನಯ ।
ಪತಿಯೆನಿಸುವಾ ಸತ್ಯವಂತನನೆಂತು ಸೇವಿಪಳು ॥ ಸತತವಾ ಶ್ರೀಮತಿ
ಯು ಕಪಿಲನ । ನು ತಿಳಿದೆಂತೊಲಿಸುತಿಹ ಳವರಂ । ತೆ ತಿಳಿದೊಲಿಸು
ತ್ತಿರುವೆನಾ ರಘುನಾಥನನು ನಾನು ॥ ೧೧ ॥ ಜಸವಡೆದ ಸೌದಾಸನಂ ಸಂ ।
ತಸವನಾನುತ್ತಮದ ಯಂತಿವೆ । ರಿಸಿದ ರೀತಿಯೊಳಾ ಸಗರನಂಕೇಶಿನಿ
ಯು ಬಿಡದೆ ॥ ಒಸೆದುಸಂತಸ ವಡಿಸುವಂದದೆ । ವಸುಧೆಯೊಳು ನಾಂ
ರಾಘುವೇಂದ್ರನ । ನೊಸೆದುಸೇವಿಪೆ ನಿತರರನು ಕಣ್ಣಿಂದಲೀಕ್ಷಿಸೆನು ॥
॥ ೧೨ ॥ ಭೂಮಿಪತಿ ನಳಚಕ್ರವರ್ತಿಯು । ನೀಮಹೀತಳದೊಳು ಜಸೆ
ವಡೆದ । ಭೀಮಭೂಪಾಲಕನ ಸುತೆದಮಯಂತಿ ವರಿಸುತ್ತ ॥ ಪ್ರೇಮ
ದಿಂದುಪಚರಿಸಿದಂದದೆ । ರಾಮಚಂದ್ರನನುಪಚರಿಸುತಿಹೆ । ನೀಮಹಿಯೊ
ಳಸ್ವರನು ವರಿಸೆನೆನುತ್ತ ಪೇಳಿದಳು ॥ ೧೩ ॥ ಬಳಿಕಿತನ್ನನು ಭೀತಿವ
ಡಿಸುವ । ಖಿಳ ಕುರೂಪಿ ನಿಶಾಚರಿಯರಿಗೆ । ತಿಳುವಳಿಕೆಯನು ತಾನರು
ಹುವೆಂತಾ ಮಹೀಸುತೆಯು ॥ ಇಳೆಯೊಳಾ ಪತಿಭಕ್ತಿಯಿಂದೆ ಪೊ । ಗ
ಳಿಕೆವಡೆದಾ ಸಾಧ್ವಿಯರ ಕಥೆ । ಗಳನು ಪೇಳುತ ಸುಮ್ಮನಾದಳು ಪತಿ
ಯ ಜಾನಿಸುತ ॥ ೧೪ ॥ ವಿನತೆಯೆಂಬ ಪೆಸರಿನರಕ್ಕಸಿ । ಜನಕನಂದನೆ
ಗೆಂದಳೆನ್ನವ । ಚನವನಾಲಿಸು ಸೀತೆ ರಾಕ್ಷಸರಾಜನೆಂದೆನಿಪ ॥ ಘನ
ಪರಾಕ್ರಮಿ ರಾವಣನ ವರಿ । ಸಿ ನಿರುತವು ಸೌಖ್ಯದೊಳಹುದು ಮೇ ।
ಲೆನಿಪುದಿದಕೊಪ್ಪದಿರೆ ಕೊಲ್ಲುವೆನೆನುತ ಪೇಳಿದಳು ॥ ೧೫ ॥ ಧರಣಿಜಾತೆ
ಯೆ ಕೇಳು ದಶಕಂ । ಧರನ ಸೌಧದೊಳಿರುವೆ ನಿನ್ನನು । ಕರೆದುಕೊಂ

ಡೊಯ್ಯಲಳವಲ್ಲವು ಮೇಘವಾಹನಿಗೆ ॥ ಸುರವಿರೋಧಿ ದಶಾಸ್ಯನಿಗೆ ನೀಂ । ನರಸಿಯಾಗುತ ಸಲಹುನಮ್ಮನು । ಕರುಣೆಯಿಂದೆನುತಾ ವಿಕಟೆ ಪೇಳಿದಳು ವಿನಯದಲಿ ॥ ೧೬ ॥ ದನುಜರೆಲ್ಲರಿಗೊಡೆಯ ನಾಗಿಹ । ಮನುಜಹಿಂಸಕನೆನಿಪ ದಶಕಂ । ಠನಿಗೆ ಸತಿಯಾಗುತ್ತಖಿಳ ಸುಖಭೋಗಗಳನೆಲ್ಲ ॥ ದಿನದಿನವು ಹೊಂದುತ್ತಿಹುದುತ್ತಮ । ನಿನಗೆ ಸರಿಬೀಳದಿರೆಲೆನ್ನವೆ । ಜನವು ಕೊಲ್ಲುವೆನೀಗ ನಿನ್ನನೆನುತ್ತ ಪೇಳಿದಳು ॥ ೧೭ ॥ ಪಿಡಿದು ಶೂಲಾಯುಧವ ನಂದಡಿ । ಗಡಿಗೆತಿರುಗಿಸಿ ತನ್ನಪಲ್ಗಳ । ಕಡಿದು ರಕ್ಕಸಿಯರಿಗೆ ಸಂತೋಷವನು ಮಾಡುತ್ತ ॥ ಪೊಡವಿಜಾತೆಯ ಬಳಿಗೆ ನಡೆತಂ । ದೊಡನೆಪೇಳ್ದಳು ರಾಘವೇಂದ್ರನ । ಮಡದಿಗಾ ಚಂಡೋದರಿಯೆನಿಪ ಘೋರರಕ್ಕಸಿಯು ॥ ೧೮ ॥ ಅಸುರನಾಥನಿಗಿಂದು ಪತ್ನಿಯೆನಿಸುತ ಸಾಖ್ಯವಹೊಂದುವುದುಚಿತ । ವು ಸರಿಬೀಳದೆ ಹೋದರೆನ್ನನುಡಿಗಳು ನಿನಗಿಂದು ॥ ಉಸಿರನಾಡಿಸದಂತೆ ಸಲೆಭೇ । ದಿಸುತ ನಿನ್ನನು ನಾನಿರದೆ ಭ । ಕ್ಷಿಸುವೆ ನೆಣವಸೆಮಿದುಳು ಕರುಳಿದೆ ಮಾಂಸಗಳ ಸಹಿತ ॥ ೧೯ ॥ ಎನುತನಿಶ್ಚೈಸಿಹೆನು ಚಿತ್ತದೊ । ಳನಗೆ ನಿನ್ನಯ ಮಾಂಸಖಂಡಗ । ಳನುನಲಿದು ತಿನ್ನುವದರೊಳ ಗತ್ಯಾಸೆಯಾಗಿಹುದು ॥ ಮನುಜಮಾಂಸವ ನುಳಿಯಲಾರೆನು । ವನಿತೆಕೇಳಿದು ನನ್ನಬುದ್ಧಿಯು । ನಿನಗೆಪೇಳಿಹೆನೆಂದು ನುಡಿದಳು ಸೀತೆಗಾಮುರುಳೆ ॥ ೨೦ ॥ ಜಾನಕಿಯ ಕಂಠವನು ಛೇದಿಸು । ತೀನಿಶಾಂತ್ಯದೊಳೆಲ್ಲ ರುಳಿದನು । ಮಾನವನು ಭಕ್ಷಿಪುದೆ ನನಗಿಷ್ಟವೆನಿಸಿಹುದೀಗ ॥ ದಾನವೇಂದ್ರಂಗರುಹಲೀ ವಧು । ತಾ ನಳಿದಳೆನುತ್ತಿವರೊಳಿಮ ಗಿ । ನ್ನೇನು ಭಯವೆನುತಾ ಪ್ರಘಸೆಯೆಂಬವಳು ಪೇಳಿದಳು ॥ ೨೧ ॥ ಬರಿಯಮಾತುಗಳೆನ್ನ ಚಿತ್ತಕೆ । ಸರಿಯೆನಿಸುವುವೆ ಕೇಳಿ ನಾವೀಂ । ಧರಣಿಜಾತೆಯ ನೆರಡು ಭಾಗದಿಭೇದಿಸುತಲೀಗ ॥ ಭರದೆ ತಿನ್ನುವುದುಚಿತ ನೀವಿ । ಲ್ಲಿರಿಸುವುದು ಮದ್ಯಂಗಳನು ತರ । ತರದ ಲೇಹ್ಯಂಗಳನೆನುತ ಜಾಮುಖಿಯುಪೇಳಿದಳು ॥ ೨೨ ॥ ನನಗಜಾಮುಖಿ ಮುಖ್ಯರಾಗಿಹ । ದನುಜೆಯರು ಪೇಳಿದುದೆ ಸಮ್ಮತ । ವೆನಿಸಿತೋರ್ಪುದು ಸಕಲ ದುಃಖವಿನಾಶಕರಮೆನಿಪ ॥ ವಿನುತಮದ್ಯಂಗಳನು ತನ್ನಿರಿ । ಘನವಿನೋದದೊಳೀಂಟಿ ಸೀತೆಯ । ತನುವ ಭಕ್ಷಿಸಬೇಕೆನುತ ಶೂರ್ಪನಖಿ ಪೇಳಿದಳು ॥ ೨೩ ॥ ಸೀತೆಯನು ತಿನ್ನುತ್ತ ಘನಸಂ । ಪ್ರೀತಿಯಿಂದಲೆ ಪಾನಮಾಡು । ತ್ತಾತುರದೊಳತಿ ಮೀಲೆನಿಪ ಮದ್ಯಂಗಳನು ನಾವು ॥ ಮಾತನಾಡುತ ತಿಂದುತೇಗಿ ಮ । ಹೀತಳದೊ

ಳಗೆ ಕುಣಿಯಬೇಕೆಂ । ಬೀತೆರದ ಪತಿ ನನ್ನದೆನುತ ನುಡಿಗಳು ಶೂ ರ್ಪನಖಿ ॥ ೨೪ ॥ ಕಾವಲಿರ್ದ ನಿಶಾಚರಿಯ ರಂ । ದಾವಚನಗಳ ಕೇಳ್ದು ಜಾನಕಿ । ನೋವನೈದುತ ಧೈರ್ಯವನುಳಿದು ತಾನುರೋದಿಸುತ ॥ ಆವವಿಧದ ಸಹಾಯವಿಲ್ಲದೆ । ತೀವಿದಂಜಿಕೆಯನ್ನು ಸೈರಿಸ । ದಾವನದೊಳಿದ್ದಳು ರಘೂತ್ತಮನನ್ನು ಜಾನಿಸುತ ॥ ೨೫ ॥ ಕ್ರೂರರಾಕ್ಷಸಿಯರನುಡಿಗಳನು । ಧಾರುಣೀಸುತೆ ಕೇಳ್ದು ಕಣ್ಣೊಳು । ನೀರಸುರಿಸುತ್ತಳುತಗದ್ಗದ ನಿನದದಿಂದೊಡನೆ ॥ ತಾರೆನುಮನಕೆ ನಿಮ್ಮನುಡಿಗಳ । ಕೋರಿನನ್ನನು ಭಕ್ಷಿಸಿರಿ ನಾ । ನಾರಜನಿಪತಿಯನ್ನು ವರಿಸೆನೆನುತ್ತ ಪೇಳಿದಳು ॥ ೨೬ ॥ ಪತಿಯಕಾಣದೆ ವನದೊಳಾವೃಕ । ತತಿಯಿಂದೆ ಬೆದರಿವ ಪೆಣ್ಮೃಗ । ದತೆರದಿಂ ದಂಗಗಳನಡಗಿಸಿಕೊಂಡು ದೇಹಗೊಳು ॥ ಕ್ಷಿತಿಸುತೆ ದನುಜನಾಥನಿಗೆ ಪೆದ । ರುತಸುಖಂಗಳಕಾಣದಸುರವ । ನಿತೆಯರಾಮಧ್ಯದಲಿ ಕಂಪಿಸಿ ದುಃಖಿಸಿದಳಾಗ ॥ ೨೭ ॥ ಕುಸುಮಸಂಚಯದಿಂದೆ ಸಲೆಶೋ । ಭಿಸುವಶೋಕ ಕುಜದೊಳು ದೊಡ್ಡದೆ । ಸಿಸಿದಕೊಂಬೆಯ ಪಿಡಿದುಕೊಳ್ಳುತ ಸೀತೆಬಿಸುಸುಯ್ದು ॥ ಬಸರುತಿಹ ಕಣ್ಣೀರಿನಲಿ ನೆನೆ । ಯಿಸುತ ತನ್ನಘನಸ್ತನಂಗಳ । ನು ಸಲೆಚಿಂತಿಸುತ್ತಿದ್ದಳನಯನ ಪೆಸರಜಾನಿಸುತ ॥ ೨೮ ॥ ಬಿಡದೆಬೀಸುತಿಹಬಿರುಗಾಳಿಯ । ಹೊಡೆತದಿಂದೀನೆಲಕೆ ಬಾಳೆಯ । ಗಿಡವುಬೀಳುವವೊಲು ಮಹೀಸುತೆ ಬಳಲಿಬೆಂಡಾಗಿ ॥ ನಡುನಡುಗಿ ರಾಕ್ಷಸಿಯರಿಂದಡಿ । ಗಡಿಗೆ ಕಳಗುಂದಿಡಿದ ದುಃಖದಕೆ । ಕಡೆಯಕಾಣದೆ ಕೊರಗುತಿದ್ದಳು ವನದಶೋಕಿಸುತ ॥ ೨೯ ॥ ಕಾಳಪನ್ನಗನಂತೆ ಕಣ್ಗೆವಿ । ಶಾಲವಾಗಿಯೆ ತೋರುವವನೀ । ಬಾಲೆಯಾಜಡೆ ದೊಡ್ಡದೆನಿಸುತ ತೋರಿತೆಲ್ಲರಿಗೆ ॥ ಆಲಿಗಳನೀರನ್ನು ಸುರಿಸುತ । ತಾಳಲಾರದ ದುಃಖಭರದಿಂ । ದಾಲಪನೆಗೊಳಾಡಿದಳು ಬಿಸುಸುಯ್ದು ದೈನ್ಯದಲಿ ॥ ೩೦ ॥ ಹಾರಮಣ ಹಾರಾಮಹಾರಣ । ಧೀರಲಕ್ಷ್ಮಣ ಹಾದನುಜಸಂ । ಹಾರ ಹಾಕೌಸಲ್ಯೆ ಹಾಮಗಧೇಂದ್ರಸುತೆಯನುತ ॥ ಧಾರುಣೀಸುತೆ ಕೂಗಿಕೊಂಡಳು । ತಾರನೆರವನು ಕಾಣದಾಗಳೆ । ಘೋರದುಃಖವನೈದಿದಳಶೋಕವನ ಮಧ್ಯದಲಿ ॥ ೩೧ ॥ ಮರಣಬಾರದಕಾಲದೊಳಬಲೆ । ಯರಿಗೆ ಪುರುಷರಿಗೆನ್ನುತ ವಿಬುಧ । ವರರುಹೇಳಿಹ ಲೋಕವಾರ್ತೆಯುಸತ್ಯವಾಗಿಪುದು ॥ ತರತರದಘೋರಾಕೃತಿಗಳನು । ಧರಿಸಿದಸುರಾಂಗನೆಯರಿಗೆಹಗ । ಲಿರುಳುಭೀತಿಪಡುತ್ತಬದುಕಿಹೆನೆಂದುಕೊರಗಿದಳು ॥ ೩೨ ॥ ಕಡಲನಡುವಲೆವಬಿರುಗಾಳಿಯ । ಹೊಡೆತದಿಂದಲೆಪೂರ್ಣ

ವಾಗಿಹ | ಹಡುಗುನಾಶವನೈದುವಂತತ್ಯಲ್ಪಪುಣ್ಯವನು ‖ ಪಡೆದತಿಕೃಪಣ ಳೆನಿಸುತ್ತೀ | ಪೊಡವಿಯೊಳು ನಾನಿಂದುಬೇಗನೆ | ಬಿಡುವೆಜೀವವನೆನುತ ಬಿಸುಸುಯ್ದತ್ತಳಾಸೀತೆ ‖ ೩೩ ‖ ನೀರಿನತಿಶಯದಿಂದೆಮುರಿದಾ | ವಾರಿಧಿ ಯತಟದಂತೆನಾನೀ | ಕ್ರೂರರಕ್ಕಸಿಯರ ಮಧ್ಯದೊಳಗೆ ನಿರತವಾಸಿಸುತ ‖ ವೀರರಾಮನಕಾಣದೆಸಲೆವಿ | ಚಾರವನುಳಿದು ಕಷ್ಟವತಡೆಯು | ಲಾರದ ಳವೆನೆನುತ್ತಜಾನಕಿರೋದಿಸಿದಳಲ್ಲಿ ‖೩೪‖ ನೆಲದೊಳೆನ್ನಪತಿಯನು ಸಂ ತಸ | ದಳೆದುನೋಡುವ ಜನರು ಧನ್ಯರು | ಜಲರುಹಾಕ್ಷನೆನಿಸುವ ನಾರ ಘುವರನುಸಂತತವು ‖ ನಲಿದುಪೇಳ್ವನು ವಿಹಿತವಚನಂ | ಗಳನುಧರ್ಮಾ ತ್ಮನೆನಿಸುತ್ತಿಹ | ನಿಳೆಯೊಳೆಲ್ಲಜನರಿಗೆ ರಕ್ಷಕನೆನಿಸಿಕೊಂಡಿಹನು ‖೩೫‖ ಧರಣಿಯೊಳು ವಿದಿತಾತ್ಮನೆಂದೆನಿ | ಸಿರುವ ರಾಮನನಗಲಿ ದೆನ್ನಯು | ಹರಣವಿಂದಿಹುದೇನು ಗರಳವಕುಡಿದ ಜನರಂತೆ ‖ ತರತರದಪಾಪಂಗಳ ನುಮಾ | ಡಿರುವೆ ಹಿಂದಣಜನ್ಮದಲೆನಗ | ದರಫಲವು ಸಂಪ್ರಾಪ್ತವಾಗಿ ಹುದೀತೆರದೊಳಿಂತು ‖ ೩೬ ‖ ನಿಂದಿಸೀ ಮಾನವರ ಜನ್ಮವ | ನಿಂದಿಸೀ ಪರವಶತೆಯನು ನಾ | ನಿಂದುರಾಮನ ನಗಲಿ ಬಹುಶೋಕವನು ಸೈರಿ ಸುತ ‖ ಮುಂದೆ ಜೀವಿಸಲಾರೆನು ಮನಕೆ | ಬಂದತೆರದಿಂ ದಸುವನೀ ಗುವೆ | ನೆಂದು ಜಾನಕಿ ರೋದಿಸಿದಳಾವನದಮಧ್ಯದಲಿ ‖ ೩೭ ‖ ಧರಣಿ ನಂದನೆ ಕಣ್ಣೊಳುಜಲವ | ಸುರಿಸುತೀಪರಿಯಿಂದೆ ಪೇಳುತ | ಶಿರವ ಬಾಗಿಸಿಕೊಂಡು ರೋದಿಸುತಂದು ಭೂಮಿಯಲಿ ‖ ಮರುಳರಂತಾ ಕು ಡುಕರಂತನ | ವರತ ಹೊರಳಾಡಿದಳು ಸಲೆಚೇ | ತರಿಸಿಕೊಳ್ಳದೆ ಭೀತಿ ಯನುತಾನಾಂತು ನಡುನಡುಗಿ ‖ ೩೮ ‖ ರಾಮಸತಿಯೆಂದೆನಿಪ ತನ್ನ ನು | ಕಾಮರೂಪಿ ದಶಾಸ್ಯನಿಲ್ಲಿಗೆ | ಕಾಮಿಸುತ ತಂದಿಹನತಿಬಲಾತ್ಕಾರ ದಿಂದಿರದೆ ‖ ರಾಮನನುಳಿದು ಘೋರರೂಪಿನ | ಭಾಮಿನಿಯರ ವಶದೊ ಳಿರುತಲೀ | ಭೂಮಿಯೊಳಗಾನೆಂತು ಬದುಕುವೆನೆಂದು ಮರುಗಿದಳು ‖ ೩೯ ‖ ತರತರದ ಭೀತಿಗಳನಾಗಿಸು | ವರನುದಿನವೀ ರಾಕ್ಷಸಾಂಗನೆ | ಯರತಿದುಃಖಾರ್ತಳೆನಿಸುತ ರಾಮನನು ಬಿಟ್ಟೆನಗೆ ‖ ಹರಣನಿಲ್ಲುವುದೆ ಧನಕನಕಾ | ಭರಣಗಳು ನನಗೇಕೆ ಪೊಂದುವೆ | ಮರಣವನುನಾನೆ ನುತ ಜಾನಕಿ ದೃಢವಮಾಡಿದಳು ‖ ೪೦ ‖ ನನ್ನಹೊಟ್ಟೆಯು ವಜ್ರದಿಂ ದಲೆ | ಮುನ್ನನಿರ್ಮಿತವಾಗಿಹುದರಿಂ | ದಿನ್ನುಸೀಳದಿಹುದು ಮಹಾದುಃ ಖಾತಿಶಯದಿಂದೆ ‖ ನನ್ನನಿಂದಿಸಬೇಕು ಭೂಮಿಯೊ | ಳೆನ್ನಗಂಡನ ಬಿಟ್ಟಿಹುದರಿಂ | ದೆನ್ನುತಾಭೂಮಿಸುತೆ ದುಃಖಿಸಿ ರೋದಿಸಿದಳಂದು

॥ ೪೧ ॥ ನಾನು ಪೂಜ್ಯಳೆನಿಸೆನು ಲೋಕದ । ಮಾನಿನಿಯರೊಳು ನೀ ಚಳೆನಿಪೆನು । ಹೀನತರರೀತಿಯನಾಂತಿಹೆ ನುಳಿದುನನ್ನಗಂಡನನು ॥ ಪ್ರಾಣವನು ರಕ್ಷಿಸುತಿಪುದರಿಂ । ದೀನೆಲದೊಳೆನ್ನ ಪತಿಭಕ್ತಿಗೆ । ಹಾನಿ ಪರಾಯ್ತೆನುತಾ ಮರುಗುತ ಶೋಕಿಸಿದಳರದೆ ॥ ೪೨ ॥ ಇರದೆ ನನ್ನನು ಕೊಂದು ತಿನ್ನಲಿ । ಧರದೊಳೀಗಲೆ ಕತ್ತರಿಸಲಿ ಜ । ನರೊಡನೆ ಪ್ರಿಯ ವಚನಗಳನಾಡುತ್ತ ನೆರೆನೆರೆದು ॥ ಧರಣಿಪಾಲಕ ನೆಂದೆನಿಪ ರಘು । ವರ ನನುಳಿದು ಬದುಕಿರಲಾರೆನು । ಮರಣವನು ಹೊಂದುವೆನೆನುತ ರೋದಿ ಸಿದಳಾಸೀತೆ ॥ ೪೩ ॥ ರಮಣನಂ ತೊರೆದೀ ದನುಜಪತಿಯು । ಮನೆಯೊಳು ದುಃಖವನುತಾಳುತ । ಸವೆದುರೋದಿಸಿ ಬದುಕಿಫಲವೇನಿಪುದು ಯೋ ಚಿಸಲು ॥ ಅವರುನ್ನೈರಿಯ ವಚನಗಳು ನ । ನ್ನ ಮನಕೊಪ್ಪುವುದಿಲ್ಲ ವೆನದೇ । ಹವನೆಡವಕಾಲಿಂದೆ ಸೋಕುವಳಲ್ಲ ಮನಸೋತು ॥ ೪೪ ॥ ದನುಜನೆನ್ನನು ಪರಿಸುನೀನೆಂ । ದೆನುತ ಬೇಡುತ್ತಿಹುದರಿಂ ದಿವ । ನು ನೆಲದೊಳು ಹಾಳಾಗುವನಖಿಳ ಬಂಧುಗಳಸಹಿತ ॥ ಅನಲನಿಂದೆ ಸುಡಲಿ ಕಡಿಯಲಿ । ನ್ನಸುರೆ ಛಿನ್ನಾಭಿನ್ನವಾಗೀ । ಮನದೊಳವನನು ವರಿಸೆ ನೆಂದಳು ಸೀತೆದುಃಖಿಸುತ ॥ ೪೫ ॥ ನಾನುಮಾಡಿದ ಪಾಪದಿಂದಲೆ । ತಾ ನು ನನ್ನನುಹುಡುಕದೆಯು ದಾ । ಸೀನದಿಂದಿಹ ಕರುಣವಿಲ್ಲದೆ ರಾಮ ನೆನ್ನೊಳಗೆ ॥ ಜ್ಞಾನವಂತನು ಕರುಣಮುಳ್ಳವ । ನೀನೆಲದೊಳು ಖ್ಯಾತಿ ವಡೆದಿಹ । ನಾನರೇಂದ್ರನು ವಿನುತಸದ್ವರ್ತನನು ತಾನೆನಿಸಿ ॥ ೪೬ ॥ ಪರಿಪರಿಯುವಿಧದಿಂದೆ ಕೊರಗುವ । ದರೊಳು ಫಲವೇನಂದು ರಾಘವ । ನಿರವೆಕೋಪಿಸುತಾ ಜನಸ್ಥಾನದೊಳು ನಡೆತಂದ ॥ ಖರನನಾಹದಿನಾಲ್ಕು ಸಾವಿರ । ದ ರಜನೀಚರರೊಡನೆ ಕೊಂದನು । ಭರದೊಳೆನ್ನನು ಕರೆ ದುಕೊಂಡೊಯ್ಯದೆ ಬಿಡುವನೆಂತು ॥ ೪೭ ॥ ಹೀನವೀರ್ಯನು ಕಳ್ಳತನ ದಿಂ । ದೀ ನಗರಕಂದೆನ್ನ ತಂದಿಹ । ನೀ ನಿಶಾಚರನನ್ನು ರಾಮನೆ ಸಂ ಹರಿಸುತಿಹನು ॥ ದಾನವವಿರಾಧನನು ದಂಡಕ । ಕಾನನದೊಳಗೆ ಕೊಂ ದರಾಮನೆ । ತಾನು ನನ್ನನದೆಂತುಬಿಡುವನು ಭರದೆಬಂದಪನು ॥ ೪೮ ॥ ಜಲಧಿಮಧ್ಯದೊಳಿಪುದು ಲಂಕೆಯು । ಕಲಿಗಳಿಗೆ ಜಯಿಸಲ್ಕಸಾಧ್ಯವು । ಜಲರುಹಾನನ ರಘುವರನಬಾಣಕ್ಕೆ ತಡೆಯುಂಟೆ ॥ ಖಳನಿಶಾಚರನಿಂದೆ ಕಾನನ । ದೊಳಪಹೃತಳೆಂದೆನಿಸಿ ದೆನ್ನನು । ತ್ರಿಳಿದುರಾಮನು ಬಿಡುವನೆ ಯುದಾಸೀನವನು ತಾಳ್ದು ॥ ೪೯ ॥ ಪತಿಗೆ ನಾನಿಲ್ಲಿಪುದು ಗೊತ್ತಿ । ಲ್ಲ ತಿಳಿದಿದ್ದರೆ ತಾಳ್ದು ಕೋಪವ । ನು ತಳುವದೆ ಸಂಹರಿಸಿ ಸಂಗ್ರಾಮ

ದೊಳು ರಾವಣನ ॥ ಅತಿಪರುಷದಿಂದೆನ್ನ ನೊಡಗೊಂ । ಡತಿಶಯದ
ವಿಭವಂಗಳಿಂದೀ । ಕ್ಷಿತಿಯೊಳುನ್ನತಿ ವೆತ್ತಯೋಧ್ಯೆಗೆ ಪೋಗದಿರುತಿ
ಹನೆ ॥ ೫೦ ॥ ತಿಳಿಯದಿದ್ದುದರಿಂದಲೆ ತರಣಿ । ಕುಲತಿಲಕ ಸುಮ್ಮನಿ
ಹನೆನ್ನತ । ತಿಳಿದುಕೊಂಡಿಹೆ ನೀದಶಶಿರನ ಪುರದೊಳಿರ್ಪುದನು ॥ ತಿಳು
ಹುವವರಾ ರೆನ್ನ ಪತಿಗೀ । ಖಳನೊಡನೆಹೋರಾಡಿ ಕಾಳಗ । ದೊಳು
ಮಡಿದನು ಜಟಾಯು ಬಿಡಿಸಲ್ಕೆನ್ನನೈತಂದು ॥ ೫೧ ॥ ಧರಣಿಪತಿರಾಘ
ವನು ಲಂಕಾ । ಪುರದೊಳಗೆ ನಾನಿರುವುದನು ತಾ । ನರಿದೊಡೆ ನಿಶಾಚ
ರರು ಲೋಕದೊಳಿಲ್ಲದ ತೆರದೊಳು ॥ ಶರಗಳಿಂದಲೆ ಕೊಲ್ಲುವನು ಸಾ ।
ಗರವಶೋಷಿಸಿ ದನುಜನಾಥನ । ಶಿರಗಳನು ಛೇದಿಸದೆಬಿಡುವನೆ ಮುಂದೆ
ಸಂಗರದಿ ॥ ೫೨ ॥ ದನುಜನಾಥನ ದರ್ಪವನು ರಾ । ಮನು ವಿನಾಶವ
ನಾಗಿಸುವನೀ । ಗನನಗೆಂತೊದಗಿಹುದು ಗೋಳಾಟವದರಂದದಲಿ ॥ ದನು
ಜರೆಲ್ಲರು ನಾಶವೈದಿದೊ । ಡನವರ ಸತಿಯರೆಲ್ಲದುಃಖಿಸು । ತನುದಿನವು
ಗೋಳಾಡುವರವರ ಮನೆಗಳೊಳುಮುಂದೆ ॥ ೫೩ ॥ ಅನುಜನಿಂದೊಡ
ಗೂಡಿ ರಾಮನು । ವನದೊಳು ಹುಡುಕುತೆನ್ನ ಸಾಗರ । ವನೊಣಗಿಸಿ
ಲಂಕಾಪುರಕೆ ಶೀಘ್ರದಲಿಬರುತಿಹನು ॥ ಮನುಕುಲೋತ್ತಮ ನೆಂದನಿಪ
ರಾ । ಮನನು ನೋಡಿದಕೂಡಲೆ ದಶಶಿ । ರನಳಿವನು ಜೀವಿಸದದೊಂದು
ಮುಹೂರ್ತಪರ್ಯಂತ ॥ ೫೪ ॥ ನೆರೆವಲಂಕಾಪುರದ ದಾರಿಗ । ಳುರಿವಚಿತೆ
ಗಳಹೊಗೆಗಳಿಂದ ನ । ವರತ ತುಂಬಿಕೊಳುತಿಹು ದೀಕ್ಷಿಸಲಾಗದೆಂ
ಬಂತೆ ॥ ನೆರೆನೆರೆದು ಸೇರುವುವು ಹದ್ದುಗ । ಳರದೆ ಶೀಘ್ರದೊಳಾಸ್ಮಶಾ
ನಕೆ । ಸರಿಯೆನಿಪುದೀಲಂಕೆ ಫಲಿಸುವುದೆನ್ನ ಕೋರಿಕೆಯು ॥ ೫೫ ॥
ಮುಂದೆ ನಿಮಗೆವಿನಾಶವೊದಗುವು । ದಿಂದು ದುಶ್ಶಕುನಂಗಳಿಂತತಿ ।
ಚಂದದೊಳುಕಾಣುತಿಹ ವೀಲಂಕಾನಗರದೊಳಗೆ ॥ ಅಂದವಿಲ್ಲದೆ ಹೀನ
ಕಾಂತಿಯ । ಹೊಂದುತೀಪುರವೆಲ್ಲ ರಕ್ಕಸ । ರಿಂದೆ ಹಾಳಾಗುವುದೆನು
ತ್ತಲೆ ನುಡಿದಳಾಸೀತೆ ॥ ೫೬ ॥ ಖಳನುಸಾಯಲು ಲಂಕೆಪತಿಯನು । ಕ
ಳೆದ ಮಾನಿನಿಯಂತೆ ಶೋಕಿಸು । ತಳವುದೆಳ್ಳನಿತಿಲ್ಲನಗೆ ಸಂದೇಹವಿದ
ರೊಳಗೆ ॥ ಬಳಿದಸಂಪದದಿಂದೆ ಸಲೆಕಂ । ಗೊಳಿಪ ಲಂಕೆಯು ರಕ್ಕಸ
ರಸಹಿ । ತಲಯವಹುದತ್ಯುನ್ನತಿಯೆ ಕಾರಣವಿನಾಶನಕೆ ॥ ೫೭ ॥ ಭರ
ದೊಳೀಲಂಕೆಯಲಿ ದುಃಖಾ । ತರೆನಿಸುತಳುವ ರಾಕ್ಷಸಾಂಗನೆ । ಯರ
ಮನೆಗಳೊಳು ರೋದನಧ್ವನಿಗಳನು ಕೇಳುವೆನು ॥ ಅರಿದರೆನ್ನನು ರಾ
ವಣನ ಮಂ । ದಿರದೊಳಿರುವಂ ತೆನ್ನ ಗಂಡನು । ಶರಗಳಿಂದೀ ಸಕಲ

ರಾಕ್ಷಸರನ್ನು ವಧಿಸುವೆನು ॥ ೫೮ ॥ ಕತ್ತಲೆ ಕವಿದುಕೊಳ್ಳುವುದು ಮ
ನೆ । ಮೆತ್ತ ಬಾಣಗಳಿಂದೆ ರಾಮನು । ಮತ್ತೆ ಮತ್ತೆ ಸುಡುತ್ತಿರಲುಲಂಕೆ
ಯನು ಕೋಪದಲಿ ॥ ಸತ್ತ ರಾಕ್ಷಸರಿಂದೆ ಲಂಕೆಯು । ಸುತ್ತಲುಂ ಕಾಂ
ತಿಯನುಳಿದು ತಾ । ನೆತ್ತಲುಂ ಸಲೆಭೀತಿಯನು ಮಾಡುತಿಹುದೆಲ್ಲರಿಗೆ
॥ ೫೯ ॥ ನನಗೆ ರಾವಣನಿತ್ತ ಗಡುವಿನ । ದಿನವುಬಂದುದು ಘೋರಪಾಪ
ಗ । ಳನೆಸಗುವರಾಕ್ಷಸರು ನೋಡರ ಕಾರ್ಯವೆಂಬುದನು ॥ ಮನುಜಭಕ್ಷಕ
ರೀಕ್ಷಿಸರು ಮೋ । ಲೆನಿಪ ಧರ್ಮವಿಚಾರಗಳ ವಧಿ । ಸೆನುತನಾಳೆಯೆ ನೀ
ಮಿಸುವನೀ ಖೂಳರಾವಣನು ॥ ೬೦ ॥ ಖಳರುಮಾಡಿದ ಧರ್ಮದಿಂದೀ ।
ಗಲೆ ಮಹೋತ್ಪಾತಂಗಳೀ ಪುರ । ದೊಳಗೆ ಹುಟ್ಟುವುವಖಿಳ ರಾತ್ರಿಂ
ಚರರ ನಾಶನಕೆ ॥ ಹೊಳೆಹೊಳೆವ ರಕ್ತಾಂತನಯನಂ । ಗಳನು ತಾಳ್ದ
ರಘುವರನನಿಂ । ದುಳಿದು ಬದುಕುವೆನೆಂತೆನುತ್ತಳಲಿದಳು ಜಾನಕಿಯು
॥ ೬೧ ॥ ದನುಜರೊಳಗಾರಾದರುಸರಿಯೆ । ನನಗೆ ನಂಜನುತಂದು ಕೊ
ಟ್ಟರ । ದನು ಕುಡಿದುಸಾಯುವೆನು ಕೇಳಿರಿ ಖೂಳದನುಜೆಯರೆ ॥
ನನಗೆಗಂಡನನುಳಿದು ನಿಲ್ಲದು । ತನುವಿನೊಳು ಪ್ರಾಣಂಗಳೆನುತಾ । ಜನ
ಕಜಾತೆಯು ಶೋಕಿಸಿದಳಾ ಮರದಕೆಳಗೆ ॥ ೬೨ ॥ ಧರೆಯೊಳಿಂದು
ಬದುಕಿರುವೆನ್ನನು । ಸರಸಿಜಾಕ್ಷನೆನಿಸುವ ರಾಘವ । ನರಿಯಲಿಲ್ಲವುತಿಳಿ
ದಿರಲು ತಾನೆನ್ನಹುಡುಕದೆಯೆ । ಇರುವನಲ್ಲ ರಘುವರನೆನ್ನಯ । ವಿರ
ಹದಿಂದಲೆ ತೊರೆದುದೇಹವ । ಸುರರಲೋಕಕೆ ಹೋಗಿರುವನೆಂದೆಣಿಪೆ
ನಾನಿಂದು ॥ ೬೩ ॥ ಸುರರು ಸಿದ್ಧರು ತಾಪಸರು ಗಂ । ಧರುವರೆನ್ನಯ
ಗಂಡನಾಗಿಹ । ಸರಸಿಜಾಕ್ಷನೆನಿಸುವ ರಾಮನನಿಂದುನೋಡುವರು ॥ ನರೆ
ವಿಚಾರಿಸಲವರೆಧನ್ಯರು । ಪರಮ ಧರ್ಮಾತ್ಮನೆನಿಸುತಿಹಾ । ಪರಮಪುರು
ಷೋತ್ತಮನಿಗೆನ್ನಿಂದೇನು ಫಲವಿಹುದು ॥ ೬೪ ॥ ಪ್ರೀತಿತಾನಿಸುಡೀಕ್ಷಿಸು
ತ್ತಿರ । ಲಾತೆರದೆ ನೋಡದಿರಲೀಧರ । ಣೀತಲದೊಳು ಸ್ನೇಹವಿಲ್ಲದೆ ತ
ಪ್ಪಿಹೋಗುವುದು ॥ ನೀತಿಕೋವಿದ ನೆಂದೆನಿಪ ಸಾ । ಕೇತಪತಿ ರಾಮನ
ಳಿಯದಿರಲಿ । ಭೀತಿಯನುತಾಳುತ್ತಳಿಯಲಿ ಕೃತಘ್ನರವನಿಯೊಳು ॥
॥ ೬೫ ॥ ಗುಣಗಳಿಂದೇಂ ಫಲವಿಹುದು ಧಾ । ರುಣಿಯೊಳಾರಾಮನನು
ಬಿಟ್ಟನು । ದಿನವು ದುಃಖಿಸುವೆನಗೆ ಜೀವಿಪ್ರದರೊಳು ಫಲವೇನು ॥
ಮನುಕುಲೇಂದ್ರನನುಳಿದು ಸಾಯುವು । ದೆನಗೆ ಭೂಮಿಯೊಳುತ್ತಮೋ
ತ್ತಮ । ಮೆನುತಜಾನಕಿ ನುಡಿದಳಾದನುಜಾಂಗನೆಯರೊಡನೆ ॥ ೬೬ ॥
ಉಳಿದು ಶಸ್ತ್ರಾಸ್ತ್ರಂಗಳನು ವನ । ದೊಳಗೆ ಸಂಚರಿಸುತ್ತ ಭಕ್ಷಿಸಿ ।

ಹಲವುಬಗೆ ಗಡ್ಡೆಗೆಣಸುಗಳನು ರಾಮಲಕ್ಷ್ಮಣರು । ಅಳಿದರೋ ಓಡು ಕಿರುವರೋ ವನ । ದೊಳು ದನುಜಪತಿಯಿಂದ ಮಡಿದರೊ । ಸಲಹು ಡುಕುತಿಹರೋ ಯೆನುತ ಗೋಳಿಟ್ಟಳಾಸೀತೆ ॥ ೬೭ ॥ ಮರಣವೇ ಶ್ರೇಷ್ಠತರವೆಂದೆನಿ । ಸಿರುವುದೆನಗಾ ಮೃತ್ಯುವೀಗಳೆ । ಬರುವುದಿಲ್ಲವು ಕಾಲವೀತೆರದಿಂದ ಪರಿಣಮಿಸೆ ॥ ನೆರೆದ ಸುಖದುಃಖಂಗಳೊಳು ತಾ । ವಿರಿಸಿ ಚಿತ್ತವನೊಂದೆ ತೆರದಿಂ । ದಿರುವತಾಪಸವರರು ಧನ್ಯರುಮೇದಿನಿಯೊಳರಿಯೆ ॥ ೬೮ ॥ ಮುನಿಗಳು ಮಹಾತ್ಮರೆನಿಪರು ಮೇ । ದಿನಿಯೊಳಾತ್ಮಂಗಳನು ಜಯಿಸಿಹ । ರುನಿರತವು ಪಾಪಂಗಳನು ಪರಿಹರಿಸಿಕೊಂಡಿಹರು ॥ ಮನದೊಳಾ ಸುಖದುಃಖಗಳನನು । ದಿನದಲೊಂದೆಸಮದಲಿ ನೋಡುವ । ಘನಮಹಾತ್ಮರಿಗೆರಗುವೆನು ನಾನಿಂದುವಿನಯದಲಿ ॥ ೬೯ ॥ ತೊರೆದುವಿದಿತಾತ್ಮನಹ ರಘುಕುಲ । ವರನನಾನಿಂದಿಂತು ದಶಕಂ । ಧರನಧೀನಕೆ ಸಿಕ್ಕಿದುಃಖಿಸುತನುದಿನವು ಬರಿದೆ ॥ ಹರಣವನುತಾಳ್ದು ಫಲವೇನೀ । ಪುರದೊಳೀಗಲೆ ಸಾಯುವೆನೆನುತ । ಧರಣಿಜಾತೆಯು ಪೇಳ್ದಳಾದನುಜಾಂಗನೆಯರೊಡನೆ ॥ ೭೦ ॥

ಇಂತು ಹದಿನೆಂಟನೆಯ ಅಧ್ಯಾಯ ಸಂಪೂರ್ಣವು. ಪದ್ಯಗಳು ೯೦೭

ಹತ್ತೊಂಭತ್ತನೆಯ ಅಧ್ಯಾಯ.

ಸೂಚನೆ॥ ತ್ರಿಜಟೆಪೇಳಿದ ಕನಸನಾಲಿಸು ।
ತ ಜನಕಜೆರೋದಿಸುತಿರಲು ಪವ ।
ನಜನೆರಗಿ ಪೇಳಿದನು ರಘುಭೂವರನ ಸಂಗತಿಯ ॥

ಕೇಳಿಜಾನಕಿ ನುಡಿದನುಡಿಗಳ । ತಾಳಲಾರದೆ ರಾಕ್ಷಸಪತಿಗೆ । ಪೇಳಲೊಬ್ಬಳು ಪೋದಳೀ ತೆರನೆಲ್ಲವನುಕೂಡೆ ॥ ಆ ಲಲನೆಯರು ಮತ್ತೆ ಸೀತೆಗೆ । ಪೇಳಿದರುಕಠಿನೋಕ್ತಿಗಳ ನಂ । ದಾಲಿಗಳೊಳುಮರಿಸುತ ಕೆಂಡಂಗಳನು ಕೋಪದಲಿ ॥ ೧ ॥ ಬಳಿಕ ಘೋರಾಕೃತಿಗಳನು ತಳೆ । ದಿಳೆಯೊಳೆಲ್ಲಾ ಮನುಜರಿಗೆ ಭಯ । ಗಳನು ಮಾಡುವ ರಕ್ಕಸಿಯರೈತಂದು ಜಾನಕಿಗೆ ॥ ಎಲೆಮಹೀಸುತೆ ಕೇಳು ನಿನ್ನನು । ಬಳಸಿಕೊಳ್ಳುತ ನಿನ್ನಮಾಂಸವ । ನೊಲಿದುತಿನ್ನುವೆರಿಂದು ರಕ್ಕಸರೆನುತ ಪೇಳಿದರು ॥ ೨ ॥ ಈತೆರದೊಳಂಜುತ್ತ ಕೊರಗುವ । ಸೀತೆಯನು ಕಂಡಧಿಕತರ

ಸು । ಪ್ರೀತಿಯಿಂದಲೆ ನುಡಿದಳು ವಿಭೀಷಣನ ಮಗಳೆನಿಪ ॥ ಸೀತೆ
ಕೇಳ್ವಿದೇಹಜಾ ತ್ರಿಜಟೆಯು ಮ । ಹಾತುರದಿ ಮಲಗಿರ್ದ ಸಮಯದ ।
ತಾ ತಿಳಿದ ಕನಸನ್ನು ವಿವರಿಸಿ ರಕ್ಕಸಿಯರೊಡನೆ ॥ ೩ ॥ ಎಲೆನಿಶಾಚರ
ವಸಿತೆಯರೆ ಮನ । ವೊಲಿದು ಕೇಳಿರಿ ಜಾನಕಿಯನಿಂ । ದುಳಿದು
ಸನ್ನನು ಭಕ್ಷಿಸಿರಿ ನಿಮ್ಮಿಚ್ಛೆ ಬಂದಂತೆ ॥ ಖಳರಿಗೆ ವಿನಾಶಕರವೆನಿಸು।
ತ್ತ ಳೆಯುಮಗಳಿಗೆ ಸಾಖ್ಯದವೆನಿಸಿ । ಪೊಳೆವಕನಸನ ದೊಂದಕಂಡೆನು
ಕೇಳಪೇಳುವೆನು ॥ ೪ ॥ ಧವಳವಸ್ತ್ರಂಗಳನು ಧರಿಸು । ತ್ತ ವನಿಜಾ
ಲಕ್ಷ್ಮಣರೊಡನೆ ರಾ । ಘವನು ಸಾವಿರ ಹಂಸಪಕ್ಷಿಗಳಿಂದೆ ಶೋಭಿಸುತ॥
ತವಕದಿಂದೈತರ್ಪ ದಂತದ । ನವವಿಮಾನದ ಮಧ್ಯದಲಿಕುಳಿ । ತ ವಿರ
ವಿಭವದಿಂದೆ ಮೆರೆದನು ಕೇಳಕನಸಿನೊಳು ॥ ೫ ॥ ಶ್ವೇತವಸ್ತ್ರಂಗ
ಳನು ಧರಿಸಿಯೆ । ಸೀತೆ ರಾಘವನಂಕದೊಳು ಸಂ । ಪ್ರೀತಿಯಿಂದಲೆ
ಕೂತುಕೊಂಡಾಜಲಧಿಮಧ್ಯದಲಿ ॥ ಖ್ಯಾತಿವಡೆದನವರತ ಮೆಸೆವಾ ।
ಶ್ವೇತಗಿರಿ ಶಿಖರದೊಳಗಿದ್ದವೊ । ಲೀತೆರದ ಕನಸೆನಗೆ ಬಂದುದು ರಾತ್ರಿ
ನಿದ್ದೆಯಲಿ ॥ ೬ ॥ ಗಿರಿಗೆಸರಿಯೆಂದೆನಿಸಿ ಕಾಣುವ । ಕರಿಯುಮೇಲೇ
ರುತ್ತ ಭರತಾ । ವರಜಸಹಿತಾ ರಾಘವನು ಸಂಚರಿಸಿದನು ತಾನು ॥ ಧರಿಸಿ
ಶುಕ್ಲಾಂಬರಗಳನು ತ । ನ್ನರಸಿತಮ್ಮಂದಿರ ಸಹಿತ ರಘು । ವರನುಕಂ
ಗೊಳಿಸಿದನು ಮತ್ತುಮದೇಭ ಕಂಧರದಿ ॥ ೭ ॥ ಪತಿಯುತೊಡೆಯಿಂದೆ
ವೃದ್ಧಧರಣೀ । ಸುತೆಕರಗಳಿಂ ಚಂದ್ರಸೂರ್ಯರ । ನತಿಹರುಷದೊಳು
ಮುಟ್ಟುತಿದ್ದಳು ರಾಮಲಕ್ಷ್ಮಣರು ॥ ಕ್ಷಿತಿಸುತೆಸಹಿತ ವಾರಣವ ನಡ।
ರುತ ಸುರೇಂದ್ರನ ನಗರವೆಂದೆನಿ । ಸುತಿಹ ಲಂಕೆಯು ಮೇಲುಗಡೆ ತಾ
ನಿದ್ದುದನುಕಂಡೆ ॥ ೮ ॥ ಬಿಳಿಯದೆಂದೆನಿಪಷ್ಟ ವೃಷಭಂ । ಗಳನು ಕ
ಟ್ಟಿದ ರಥದೊಳಾ ರಘು । ಕುಲತಿಲಕ ರಾಘವನು ಜಾನಕಿ ಲಕ್ಷ್ಮಣರ
ಸಹಿತ ॥ ಕುಳಿತುಕೊಂಡೀ ಲಂಕೆಗೈದಿದ । ವೊಲುನನಗೆ ಕಾಣಿಸಿದನು
ಕನಸಿ । ನೊಳದು ಸತ್ಯವು ಕೇಳಮುಂದಿನ ವಿವರವನು ನೀವು ॥ ೯ ॥
ತಿಸಹೋದರರೊಡನೆ ರಾಘವ । ನತಿಹರುಷದಿಂದಾದಿವಾಕರ । ನ ತೆರ
ದಂತೆ ವಿರಾಜಿಪ ವಿಮಾನದೊಳು ಕುಳ್ಳಿರ್ದು ॥ ಗತಿಯ ಜವದಿಂ ದು
ರದಕಡೆ । ಗೆ ತೆರಳಿದವೋಲ್ಕಂಡೆನು ಮಲಗಿ । ರುತ ವಿಭಾವರಿಯೆಂತ್ಯ
ಕಾಲದ ಕನಸಿನೊಳು ನಾನು ॥ ೧೦ ॥ ಸುರರಲೋಕವು ಪಾತಕಿಗಳಹ।
ರುಷರಿಗಸಾಧ್ಯ ಮೆನಿಸುತ್ತಿಹ । ತೆರದೊಳಾರಾಮನನು ಸಂಗರ ರಂ
ಗಮಧ್ಯದಲಿ ॥ ಸುರರು ಸಿದ್ಧರು ನರರು ರಾತ್ರಿಂ । ಚರರು ಯಕ್ಷರು

ಜಯಿಸಲಾರರು । ಭರದೊಳೈತಂದೊಟ್ಟುಗೂಡುತ ತಮ್ಮ ಪಡೆಯೊ
ಡನೆ ॥ ೧೧ ॥ ದನುಜವಲ್ಲಭ ನರುಣವಸ್ತ್ರಗ । ಳನು ಧರಿಸಿ ಕೆಂಗಣಗ
ಲೆಯ ಹೂ । ವಿನ ಸರಂಗಳ ತಾಳ್ದು ಹೆಂಡವಕುಡಿದು ತೈಲವನು ॥
ತನುವಿಗೆಲ್ಲ ಸವರಿಕೊಳುತ ಮೋ । ದಿನಿಗೆ ಬಿದ್ದಂತೆನಗೆ ಕಾಣಿಸಿ । ದ
ನು ಮಲಗಿ ನಿದ್ರಿಸುತಲಿರೆ ನಾನುದಯಕಾಲದಲಿ ॥ ೧೨ ॥ ಧರೆಗೆಬಿದ್ದನು
ವರವಿಮಾನದೊ । ಳಿರುತನಭದಿಂದಾ ದಶಾಸ್ಯನು । ಭರದೊಳೋರ್ವ
ವನಿತೆಯು ಬಂದಾನಂದವನು ತಾಳ್ದು ॥ ಕರಿಯಬಟ್ಟೆಗಳನ್ನು ತಾಳು ।
ತ್ತ ರಜನೀಚರ ವಲ್ಲಭನನೀ । ಧರಣಿಯಿಂ ದೆಳದೊಯ್ದತೆರದಿಂದೆನಗೆ
ಕಾಣಿಸಿತು ॥ ೧೩ ॥ ಧರಿಸಿ ರಾಕ್ಷಸ ವಲ್ಲಭನು ತಾ । ನರುಣ ಪುಷ್ಪಂ
ಗಳನು ಗಂಧವ । ನಿರದೆ ತೈಲವಕುಡಿದು ತನ್ನಯಮನದೆ ಭ್ರಮೆಗೊಂ
ಡು ॥ ತರತರದ ನಾಟ್ಯಗಳನಾಡುತ । ಖರಗಳಿಂದೆಸೆದಿರ್ಪ ತೇರಿನೊ ।
ಳಿರುತ ತೆಂಕಣದೆಸೆಗೆ ಪೋದಂತೀಕ್ಷಿಸಿದೆ ಕನಸ ॥ ೧೪ ॥ ದನುಜಪತಿ
ಗಾರ್ದಭವ ನೇರುತ । ವನಿಪೊಳಾ ದಕ್ಷಿಣದೆಸೆಗೆಪೋ । ದನಳುತತಿಭರ
ದಿಂದೆ ಕಂಡೆನು ಕನಸಿನೊಳಗಿದನು । ಮನದೊಳತಿಭೀತಿಯನು ಹೊಂ
ದುತ । ವನಿಗೆ ಬಿದ್ದನು ತಾನು ತಲೆಕೆಳ । ಗೆನಿಸುತಾಖರದಿಂದೆ ಕೇಳರಿ
ಮುಂದಣಾ ಪರಿಯ ॥ ೧೫ ॥ ಮರುಳನಂತೆದ್ದು ಭ್ರಮೆಗೊಳ್ಳು । ತ್ತ
ರಜನೀಚರ ವಲ್ಲಭನು ತಾ । ನಿರದೆ ಕೂಗುತ ತೊರೆದು ವಸ್ತ್ರವನಾಂ
ತು ಭೀತಿಯನು ॥ ನರಕಕೆಣೆಯೆಂದೆನಿಸು ಮತಿಭೀ । ಕರವೆನಾಗಿಸು
ತಂಧಕಾರದೊ । ಳಿರುವಮೇಧ್ಯದ ಕೆಸರಿನೊಳ್ಮುಳುಗಿರುವ ನೀಕ್ಷಿ
ಸಿದೆ ॥ ೧೬ ॥ ಅರುಣ ವಸ್ತ್ರಂಗಳನು ತಾಳ್ದು ಕೆಂ । ಪರಿನಗಂಧವ
ಸವರಿಕೊಳ್ಳುತ । ಕರಿಯಬಣ್ಣದ ನಾಂತವನಿತೆಯು ದೋರ್ವಳೈತಂದು ॥
ಭರದೊಳಾ ದಶಕಂಠನನು ತಾ । ನುರವಣಿಸಿ ಕಂಠದೊಳು ಬಂಧಿಸು ।
ತಿರದೆಳೆದು ಕೊಂಡೈದಿದಳು ದಕ್ಷಿಣದದಿಕ್ಕಿನಲಿ ॥ ೧೭ ॥ ನನಗೆತೋರಿದ
ನಸುರವಲ್ಲಭ । ನನುಜನಾಗಿಹ ಕುಂಭಕರ್ಣನು । ಕನಸಿನೊಳು ರಾವ
ಣನತೆರದಿಂ ದುದಯಕಾಲದಲಿ ॥ ದನುಜನಾಥನ ಮಕ್ಕಳೆಲ್ಲರು । ತನುವಿ
ಗೆಣ್ಣೆಯ ಬಳಿದುಕೊಂಡಂ । ತೆನಗೆ ಕಾಣಿಸಿದರು ಮಲಗಿನಿದ್ರಿಸುತಲಿರೆ
ನಾನು ॥ ೧೮ ॥ ಹಂದಿಯನು ತಾನೇರುತಾ ದಶ । ಕಂಧರನು ದಕ್ಷಿಣದೆ
ಸೆಗೆ ಭರ । ದಿಂದೆಪೋದನು ಶಿಂಶುಮಾರವ ನಡರುತಿಂದ್ರಜಿತು ॥ ತಂದೆ
ಯಂತಾ ಕಡೆಗೆಪೋದನು । ಹಿಂದೆಯುಷ್ಟ್ರವ ನಡರಿಕೊಂಡವ । ರಂದದಿಂ
ದಲೆ ಕುಂಭಕರ್ಣನು ಪೋದನಾದೆಸೆಗೆ ॥ ೧೯ ॥ ಬಿಳಿಯಪೂಮಾಲೆಯ

ನು ಧರಿಸಿಯೆ । ಬಿಳಿಯ ಗಂಧವ ಲೇಪಿಸಿಕೊಳುತ । ಬಿಳಿಯಬಟ್ಟೆಗಳ
ನು ಹೊದೆದುಕೊಂಡಾವಿಭೀಷಣನು ॥ ಬಿಳಿಯದೆಂದೆನಿಪಾನೆಯ ಕೊರಳ ।
ನೊಳು ಕುಳಿತುಮಂತ್ರಿಗಳ ನಾಲ್ವರು । ಗಳನಡುವೆ ರಂಜಿಸಿದ ತೂರ್ಯ
ತ್ರಯದ ವಿಭವದಲಿ ॥ ೨೦ ॥ ದನುಜರೆಲ್ಲರು ಕೆಂಪುಬಟ್ಟೆಗ । ಳನು ಧರಿ
ಸಿ ಕೆಂಪಾಗಿರುವ ಹೂ । ವಿನ ಸರಂಗಳನಾಂತು ಹೆಂಡವ ಕುಡಿದವೋಲೆ
ನಗೆ ॥ ಕನಸಿನೊಳು ಕಾಣಿಸಿದ ದೀಪುರ । ವು ನೆರೆಕಾಣಿಸಿತೆನಗೆ ಮನೆ
ಗಳೊ । ಡನೆ ಮುರಿದ ಗೋಪುರಗಳಂ ದಬ್ಧಿಯೊಳಗಾಳ್ದಂತೆ ॥ ೨೧ ॥
ದನುಜನಾಥನ ಲಂಕೆಯನು ರಾ । ಮನ ಚರಣಸೇವಕನಹ ಕಪೀಂ ।
ದ್ರನು ದಹಿಸಿದಂತೆನಗೆ ಕಾಣಿಸಿತ್ತಿಂದು ಕನಸಿನಲಿ ॥ ಮನವೊಲಿದು ತೈಲ
ವನು ಕುಡಿದೀ । ದನುಜನಾರಿಯರೆಲ್ಲ ನರ್ತನ । ವನೆಸಗುತ ವಹ್ನಿಯೊ
ಳುರಿದು ಪೋದಂತೆ ನೋಡಿದೆನು ॥ ೨೨ ॥ ತ್ರಿದಶಜಿತುವಾ ಕುಂಭಕ
ರ್ಣನೆ । ಮೊದಲೆನಿಪಖಿಳ ದನುಜರೆಲ್ಲರು । ಹೊದೆದುಕೊಳ್ಳುತ ಕೆಂಪು
ಬಟ್ಟೆಗಳ ನತಿಸಡಗರದಿ ॥ ಹೆದರಿಕೊಂಡೈತಂದು ದುರ್ಗಂ । ಧದ ಸಗಣಿ
ಗರ್ತದೊಳು ಬಿದ್ದಂ । ತುದಯಕಾಲದ ಕನಸಿನೊಳು ಕಂಡೆನಿದನಾಲಿಪು
ದು । ೨೩ ॥ ಎಲೆನಿಶಾಚರ ವನಿತೆಯರೆ ನೀ । ವ್ರೊಲಗಿ ದೂರಕೆ ನಾಶವ
ಪ್ಪಿರಿ । ನೆಲವಣುಗಿಯನು ಸೇರುವನು ರಾಘವನು ಶೀಘ್ರದಲಿ ॥ ತಳುವ
ದೆಯೆ ಬಂದಸನು ರಾಮನು । ಮುಳಿದು ದನುಜರನೆಲ್ಲ ಯಮಪುರ ॥
ದೊಳಗೆ ಸೇರಿಸಿ ಯಮನಿಗೌತಣವನ್ನು ಮಾಡುವನು ॥ ೨೪ ॥ ಬಿಡದೆ
ಜಾನಕಿಯನ್ನು ಹಗಲಿರು । ಳಡಿಗಡಿಗೆ ನೋಯಿಸುವ ನಿಮ್ಮನು । ಬಿಡ
ನು ಸುಮ್ಮನೆ ರಾಮನೀಕೆಗೆ ಭಯವನಾಗಿಸದೆ ॥ ಅಡಿಗೆರಗಿ ಸಂತವಿಸಿ
ರಾತನ । ಮಡದಿಯನುನಾಂ ರಾತ್ರಿಯೊಳು ನಿ । ವ್ರೊಡನೆ ನಿದ್ರಿಸು
ತೀವಿಧ ಕನಸುಗಳನು ನೋಡಿದೆನು ॥ ೨೫ ॥ ಇಂದುನಾ ನೀಕ್ಷಿಸಿದ ಕನ
ಸುಗ । ಳಂದವನುವಿವರಿಸಿದೆ ನೆಲ್ಲವೆ । ಮುಂದೆ ಸಂತಸವೆಯ್ದಿ ಜಾನಕಿ
ತನ್ನಪತಿಸಹಿತ ॥ ಕುಂದದಾನಂದವನು ಪಡೆದಪ । ಳೆಂದುತಿಳಿದೀ ಸತಿ
ಯ ಶರಣವ । ಹೊಂದಿಬದುಕಿರಿ ಪಗೆತನದಿ ನೀವ್ಕೆಟ್ಟುಪೋಗುವಿರಿ ॥
೨೬ ॥ ಮನುಕುಲೋತ್ತಮ ರಾಘವನ ಜಯ । ವನು ದಶಶಿರನ ನಾಶ
ವನೆ ನೀ । ಜನಕಜಾತೆಯ ಭೀಷ್ಟವನು ನೋಡುವೆವು ಶೀಘ್ರದಲಿ ॥
ದನುಜರೆಲ್ಲರು ನಾಶವಾಗುವ । ರಿನಕುಲತಿಲಕನಿಂದೆ ಕಾಣಿಸ । ವ್ರನನಗೆ
ಲಕ್ಷಣಗಳೆಲ್ಲಿಯು ಸೀತೆಯಂಗದಲಿ ॥ ೨೭ ॥ ಜನಕಸುತೆಗಿಷ್ಟವ ನರು
ಹಲೀ । ಕನಸೆ ಕಾರಣವಾಗಿರುವು ದೀ । ವನಿತೆಗಾ ರಾಘವನು ಮುಂದಿ

ರುವಂತೆ ತೋರ್ಪುದನು ॥ ವನದೊಳಿಂದು ನಮಗೆ ತಿಳುಹುವೆಂ । ತನೆ
ಡುಗುತ್ತಿಹ ವೀಕೆಯೆಡಗಡೆ । ಯ ನಯನವು ತೋಳು ತೊಡೆಗಳನುತ
ಪೇಳ್ದಳಾ ತ್ರಿಜಟೆ ॥ ೧೮ ॥ ವಸುಮತೀಸುತೆ ಕೇಳ್ದು ರಾವಣ । ನಸು
ರಿದಪ್ರಿಯ ವಚನಗಳ ದುಃ । ಖಿಸುತ ಗೋಳಾಡಿದಳು ಸಿಂಹಕಂಡ
ಕರಿಯಂತೆ ॥ ಅಸುರವಧುಗಳನಡುವೆ ಸಿಲುಕುತೆ । ಬಸವಳಿದು ಚಂಡಾ
ಗಿಸಲೆ ರೋ । ದಿಸಿದಳಾ ಭೂಮಿಸುತೆ ಕಾಡೊಳು ಬಿಟ್ಟಣುಗಿಯಂತೆ ।
॥ ೧೯ ॥ ಸಾವು ಬಾರದಕಾಲದೊಳೆನುತ । ಕೋವಿದರು ಪೇಳುವುದೆ
ನಿಜ ವೀ । ರಾವಣನ ಮಂದಿರದೊಳಾ ರಾಮನನು ನಾನಗಲಿ ॥ ಜೀವಿಸಿ
ರುವುದರಿಂದೆ ಸೌಖ್ಯವೆ । ನಾವಕಾಲಕೆ ನೋಳ್ಪೆ ನೆನಗೀ । ನೋವ ಪರಿ
ಹರಿಸುವರ ದಾರೆನುತೆಂದಳಾಸೀತೆ ॥ ೨೦ ॥ ಪವಿಹತಿಗೆ ಸೀಳದ ಗಿರಿಶಿಖ
ರ । ದವೊಲತಿಕಠಿನ ಮಾಗಿರುತ್ತಿಹು । ದವನಿಯೊಳು ನನ್ನೆದೆಯು ಜೀ
ವಿಸಿಕೊಂಡಿಹುದರಿಂದ ॥ ಜವದೊಳೆನ್ನನು ದುರುಳರಾವಣ । ನು ವಧಿ
ಸುವನೀ ಖೂಳನನು ನಾ । ನು ವರಿಸೆನು ನೋಡಿದೊಡೆ ದೋಷಗಳಿಲ್ಲನ
ನ್ನೊಳಗೆ ॥ ೨೧ ॥ ನನ್ನ ಪತಿ ರಾಘವನು ಬರದಿರ । ಲೆನ್ನವಯವಂಗಳ
ನು ರಾವಣ । ನಿನ್ನು ಕಡೆವನು ಗರ್ಭದೊಳಗಿಹ ಮಗುವ ಕಡಿವಂತೆ ॥
ಮುನ್ನ ತಾನೆನಗಿತ್ತ ವಾಯಿದೆ । ಯನ್ನು ತೀರಿಸಿಕೊಂಡು ತಸ್ಕರ । ನನ್ನು
ಕೊಲುವಂತಸುರನಾಥನು ನನ್ನ ವಧಿಸುವನು ॥ ೨೨ ॥ ಹಾರಮಣ ಹಾ
ರಾಮ ಹಾರಣ । ಧೀರ ಹಾಸೌಮಿತ್ರಿ ರಿಪು ಸಂ । ಹಾರ ಹಾಕೌಸಲ್ಯ
ಹಾಹಾ ಜನನಿಯೆನುತಾಗ ॥ ವಾರಿಧಿಯ ಮಧ್ಯದೊಳು ಜಂಝಾ ।
ಮಾರುತನಹತಿ ಗೊಡೆದನಾವೆಯು । ತೋರುವಂದದೆ ಸಂಯಮವೆನೆಸು
ತ್ತಿತ್ತಳಾಸೀತೆ ॥ ೨೩ ॥ ಮೃಗದರೂಪಿಂದಾ ನಿಶಾಚರ । ನಗಲಿಸಿಯೆ ಪತಿ
ದೇವರರತಾಂ । ಪಗೆತನದಿ ಪೋದವನು ಕೊಂದಿರಬಹುದು ಕಾನನದೆ ॥
ಮೃಗದ ವೇಷವನಾಂತು ನನ್ನನು । ರಘುಕುಮಾರರ ಸನಿಹದಿಂ ತಾ ।
ನಗಲಿಸಿದವನೆ ಕಾಲಪುರುಷನೆನುತ್ತ ತಿಳಿದಿಹೆನು ॥ ೨೪ ॥ ಪತಿಯರಾಕ್ಷಸ
ರಿಂದೆ ನನಗೆ ಬ । ರುತಿಹಸಾವನು ನೀನು ನೋಡದಿ । ರುತಿಹೆ ನಾನಾಚ
ರಿಸಿದಂತಹ ಸಕಲಧರ್ಮಗಳು ॥ ಕ್ಷಿತಿಯೊಳು ವಿಫಲವೆಂದೆನಿಸಿದವು ।
ಪತಿಯಭಕ್ತಿಯು ರಕ್ಷಿಸದಿಹುದೆ । ನುತ ಮಹೀಸುತೆ ಬಾರಿಬಾರಿಗೆ
ರೋದಿಸಿದಳೆಂದು ॥ ೨೫ ॥ ತಂದೆಯಪ್ಪಣೆಯಂತೆ ಸಂತಸ । ದಿಂದೆ ವನ
ವಾಸವನೆಸಗಿ ಕಾ । ಡಿಂದಯೋಧ್ಯೆಗೆ ಹೋಗಿ ಸಕಲ ವ್ರತಗಳನುಮಾ
ಡಿ । ಸುಂದರೀಮಣಿಯರೊಳು ಸೇರುತ । ಮುಂದೆ ಸುಖಿಸುವೆ ಪತಿಯ

ದುಃಖವ । ನೊಂದಿದೆನಗಿನ್ನೇನುಗತಿಯೆಂದತ್ತಳವನಿಜೆಯು ॥ ೩೬ ॥ ಪತಿ
ಯನಿನ್ನೊಳು ಕಾಮುವ ನನವ । ರತ ಮಿರಿಸುತೀ ಲಂಕೆಯೊಳು ದುಃ ।
ಖತತ್ರಿಯಿಂ ಕೊರಗುತ್ತ ಬಳಲುವೆ ನುಳದ ಭೋಜನವ ॥ ಕ್ಷಿತಿಯೊಳೆ
ನ್ನನು ನಿಂದಿಸಲು ಬೇ । ಕತಿಶಯದ ಪಾತಕಿಯು ನಾನೆನಿ । ಸುತಿಹೆ ಸಾ
ಯುವೆ ನೀಗಳೆಂದೆನುತತ್ತಳಾಸೀತೆ ॥ ೩೭ ॥ ವಿಷವ ನುಂಡಸುವನು
ಬಿಡಲೆನಗೆ । ವಿಷವನೀ ದನುಜಾಧಿಪನ ರಾ । ಜಸದನದೊಳೀವರನು
ಕಾಣೆನು ತಿಳಿದು ಯೋಚಿಸಲು ॥ ನಿಶಿತ ಕರವಾಳವನು ಕೊಂಡೆ । ನ್ನ
ಶಿರವನು ಛೇದಿಸುವೆ ನೆಂದೊಡೆ । ನಿಶಿಚರರೊಳೋರ್ವರು ಕೊಡರೆನುತ
ನೊಂದಳವನಿಜೆಯು ॥ ೩೮ ॥ ಏನಮಾಡಲಿ ಹಾಯೆನುತ್ತಾ । ಜಾನಕಿಯು
ಗೋಳಿಟ್ಟು ಮನದೊಳು । ಜಾನಿಸುತ ರಾಘವನ ನಂದೊಣಗಿದ್ದ ಮು
ಖದಿಂದೆ ॥ ವೇಣಿ ಹಾಕಿಕೊಳುತ ಬಿಡುವೆನು । ಪ್ರಾಣವನೆನುತ ಪಿಡಿ
ದು ಕೈಯೊಳು । ವೇಣಿಯನು ಹೂವಿಂದೆಸೆವ ಶಾಖೆಯನು ಸೇರಿದಳು ॥
॥ ೩೯ ॥ ಸಕಲವಿಧದಿಂದೆ ತಪಿಸುತ್ತ ಜ । ನಕಸುತೆ ಶಮೀ ಶಾಖೆಯನು
ತ । ನ್ನ ಕರದಿಂದೆ ಪಿಡಿದುರೆ ಗೋಳಿಡುತಂದುಚಿತ್ತದಲಿ ॥ ಪ್ರಕಟಮ
ತಿಯಿಂದಾ ರಘುವರನ । ನುಕುಲವನು ಸೌಮಿತ್ರಿಯನು ನೆನೆ । ದುಕೊ
ಳುತಿರೆ ಶುಭಶಕುನಗಳು ತೋರಿದವು ಜಾನಕಿಗೆ ॥ ೪೦ ॥ ಎಡದಕಣ್ಣದಿ
ರಿತವನೀಸುತೆ । ಗೆಡದ ತೋಳುತೊಡೆಗಳು ಶುಭಮೆನೆ । ನಡುಗಿದವು
ರಾಘವನು ಮುಂದಿರುವುದನರುಹುವಂತೆ ॥ ಪೊಡವಿಯಣುಗಿಯುಸೀರೆಕಂ
ಪಿಸಿ । ತೊಡನೆ ಸ್ರುತಸವಾದುದಾಕೆಗೆ । ಪೊಡವಿಯೊಳೆಣಗಿ ದಾಮರ
ಚಿಗುರಿದಂತೆಮಳೆಯಿಂದೆ ॥ ೪೧ ॥ ಸುಖಕೆಕಾರಣಮೆಂದೆನಿಪಶುಭ । ಶಕುನ
ಗಳನೀಕ್ಷಿಸುತಚಿತ್ತದೊ । ಳುಕಡುಧೈರ್ಯವನಾಂತುಬೇಗನೆಕಳೆದುದುಃಖ
ವನು ॥ ಸಕಲಕಳೆಗಳನಾಂತ ಶಶಿಯಂ । ದೆ ಕಡುಬೆಳಗುವರಾತ್ರಿಯಂ
ತೆಜ । ನಕಸುತೆವಿರಾಜಿಸುತಲಿದ್ದಳು ತನ್ನ ಮುಖದಿಂದ ॥ ೪೨ ॥ ಹನುಮ
ನಾ ರಕ್ಕಸಿಯರಾಡುತಿ । ಹನುಡಿಗಳನಾ ಜಾನಕಿಯ ರೋ । ದನವನಾ
ತ್ರಿಜಟಾಕನಸುಗಳ ಪರಿಯನಾಲಿಸುತ ॥ ಜನಕಜಾತೆಗೆ ರಾಮನಕುಶಲ ।
ವನರುಹುವೆ ನಿಲ್ಲದಿರಲಿಂದಸು । ವನ್ನು ಬಿಡುವಳೆಂದೆನುತ ಪೇಳ್ದನು ರಾ
ಮಚರಿತವನು ॥ ೪೩ ॥ ಕೇಳುಸೀತೆಯೆ ದಶರಥ ಮಹೀ । ಪಾಲನೋ
ರ್ವನು ಧರಣಿಯೆಲ್ಲವ । ನಾಳುತಿದ್ದನು ಧರ್ಮದಿಂದವನಸುತ ರಾಘವನು ॥
ಕೇಳತಂದೆಯ ಮಾತನಡವಿಗೆ । ಲೀಲೆಯಿಂದೈತಂದ ನಂದುವಿ । ಶಾಲ
ಲೋಚನೆ ಸೀತೆಲಕ್ಷ್ಮಣರೊಡನೆ ಪುರದಿಂದ ॥ ೪೪ ॥ ಬಂದುದಂಡಕ ವ

ನದೊಳಿರಲ್ಕೈ । ತಂದುರಾವಣ ನಾತನರಸಿಯ । ನಂದುವಂಚಿಸಿಕೊಂಡು ಬಂದನು ತನ್ನಪಟ್ಟಣಕೆ ॥ ಇಂದುವದನೆಯ ಹುಡುಕುತಾ ರಘು । ನಂದನನು ತಮ್ಮನಸಹಿತ ಕಿ । ಷ್ಕಿಂಧೆ ಗೈತಂದನುಕಬಂಧನ ಮಾತನಾಲಿಸುತ ॥ ೪೫ ॥ ತರಣಿಸುತ ಸುಗ್ರೀವನಿಂದೆ ದ । ಶರಥನಸುತನು ಸಖ್ಯವನೆಸಗು । ತ ರಣದೊಳು ವಾಲಿಯನು ಕೊಂದಾ ತಪನತನಯಂಗೆ ॥ ಅರಸುತನವನುಕೊಟ್ಟು ಸೀತೆಯ । ನರಸಲಟ್ಟಿದನಾ ಕಪೀಂದ್ರರ । ನಿರದೆಯೋಚಿಸಿ ನಾಲ್ಕುದಿಕ್ಕುಗಳಿಗತಿಶೀಘ್ರದಲಿ ॥ ೪೬ ॥ ಹುಡುಕುತಾ ಸಂಪಾತಿಪೇಳಿದ । ಸುಡಿಯನಾಲಿಸಿ ನಾನುಲಂಘಿಸಿ । ಕಡಲ ನಾತನರಾಣಿಯೆನಿಸುವ ನಿನ್ನನೋಡಿದೆನು ॥ ಕಡುಗಲಿಗಳಹ ರಾಮಲಕ್ಷ್ಮಣ । ರೊಡನೆ ಲಂಕೆಗೆ ಬರುತಿಹರು ಕೇ । ಳ್ಪಡೆಯ ನೊಡಗೊಂಡವರು ಕುಶಲವೆನುತ್ತ ಪೇಳಿದನು ॥ ೪೭ ॥ ಸೀತೆಸಂತಸದಿಂದೆ ಕೇಳ್ದಾ । ಮಾತುಗಳ ನಂದಿರದೆ ನೋಡಿದ । ಳಾತರುವಿನೊಳು ಕುಳಿತುಕೊಂಡಿಹ ಮಾರುತಾತ್ಮಜನ ॥ ಭೀತಿಗೊಂಡಿದು ಕನಸೆನುತ ಭೂ । ಜಾತೆ ಯೋಚಿಸಿ ದೇವತತಿಯನು । ತಾತ್ರಿಳದು ಬೇಡಿದಳು ಮಂಗಳವಾಗಲೆಂದೆನುತ ॥ ೪೮ ॥ ಪರಮಭಕ್ತಿಯೊಳಾ ಮಹೀಸುತೆ । ಹರಿಹರ ವಿರಂಚಿ ರವಿಗಳಿಗಂ । ದೆರಗಿ ಬೇಡಿದಳಾ ರಘೂದ್ವಹ ಲಕ್ಷ್ಮಣರಿಗಿಂದು ॥ ಭರದೊಳಾಗಲಿ ಶುಭಗಳೀದಿನ । ದಿರುಳುಕಂಡೆನು ಕನಸಿನಲಿ ವಾ । ನರನನಿದು ಶುಭಮಲ್ಲವೆನ್ನುತ ಬುಧರುಪೇಳುವರು ॥ ೪೯ ॥ ಹಗಲಿರುಳು ನಿದ್ದೆಯನುಮಾಡದೆ । ನಗೆ ಕನಸದೆಲ್ಲಿಬಹುದುಬಿಡದೆ । ರಘುವರನ ಜಾನಿಸುತಿಹುದರಿಂ ದಾತನಾಕಥೆಯ ॥ ಸೊಗಸಿನಿಂ ದಾಲಿಸಿದೆ ನೆನ್ನುಬ । ಳಿಗಸುರೇಂದ್ರನು ಬಂದುಪೇಳಿದ । ನು ಘನವಾನರ ರೂಪದೊಳೆನುತ ತಿಳಿದಳಾಸೀತೆ ॥ ೫೦ ॥

ಇಂತು ಹತ್ತೊಂಭತ್ತನೆಯ ಅಧ್ಯಾಯ ಸಂಪೂರ್ಣವು ಪದ್ಯಗಳು ೯೫೩.

ಇಪ್ಪತ್ತನೆಯ ಅಧ್ಯಾಯ.

ಸೂಚನೆ ॥ ಸೀತೆಗೆತಿಳುಹಿ ರಾಮನಿರವನು ।
ಪ್ರೀತಿಯಿಂ ದಿತ್ತುಂಗರವ ನಾ ।
ವಾತರಿಶ್ವನ ತನಯಕೊಂಡನು ವರ ಶಿರೋಮಣಿಯ ॥

ಮರುತನಾಮಗ ನೀಂದುಬನ್ನಿಯ । ಮರದಮೇಲಿಂ ದಧಿಕಭಕ್ತಿ

ಯೊ । ಳೆರಗಿಸೀತೆಯ ಚರಣಪಂಕಜ ಕಂಡುನುಡಿಸಿದನು ॥ ಗರುಡಕಿ
ನ್ನರ ಯಕ್ಷರಾಕ್ಷಸ । ಸುರನರೋರಗ ಮಾನಿನೀಮಣಿ । ಯರೊಳಗಾರೆ
ಲೆತಾಯೆ ಪೇಳ್ವುದುನನಗೆ ನೀನೆನುತ ॥ ೧ ॥ ನಿನಗೆ ಪತಿಯಾರಮ್ಮ ನಿ
ನ್ನಸು । ತನ ಪೆಸರದೇನಮ್ಮ ಯಾವುದು । ನಿನಗೆವಾಸಸ್ಥಳವು ಪೇಳು
ವುದೆನಗೆ ನೀನಿವನು ॥ ದನುಜರಾವಣ ನಡವಿಯೊಳು ರಾ । ಮನನುವಂ
ಚಿಸಿಕೊಂಡು ಬಂದಾ । ಜನಕಜಾತೆಯೆ ನೀನು ಹಾಗಿರಲೆನಗೆ ಪೇಳಂ
ದು ॥ ೨ ॥ ದೀನತೆಯುನಾಂ ತಿರುವನಿನ್ನನು । ಮಾನುಷ ಸ್ತ್ರೀಯೆನುತ
ತಿಳಿವೆನು । ನೀನುರಾಮನ ಪತ್ನಿಯೆನ್ನುತ ತಿಳಿವೆನೆಂದೆನಲು ॥ ಜಾನಕಿ
ಯು ಕೇಳ್ದನುಡಿಗಳನು । ತಾನುಪೇಳಿದ ಳಂದಿರದೆ ಪವ । ಮಾನತನ
ಯಂಗೊಡನೆತನ್ನಯ ವಿವರವೆಲ್ಲವನು ॥ ೩ ॥ ರಾಯದಶರಥನ ಸೊಸೆಯು
ಜನಕ । ರಾಯನ ಮಗಳುನಾನು ಕಮಲದ । ಳಾಯತಾಂಬಕ ರಾಮನ
ಮಡದಿ ಸೀತೆಯೆಂದೆನುತ ॥ ಈ ಯುವನಿಯೊಳು ಕರೆವರೆನ್ನನು । ರಾ
ಯರಾಘವನಿಂದ ಹೊಂದಿದೆ । ನಾ ಯಯೋಧ್ಯೆಯೊಳಖಿಳ ರಾಜಸು
ಖಂಗಳೆಲ್ಲವನು ॥ ೪ ॥ ಪತಿಯೊಡನೆ ಹನ್ನೆರಡು ವರ್ಷ ಮಿ । ರುತಿರಲಾ
ದಶರಥ ಮಹೀವರ । ನು ತವಕದೊಳು ರಾಮನಿಗೆ ಪಟ್ಟಾಭಿಷೇಕವ
ನು ॥ ಕ್ಷಿತಿಯೊಳಾಗಿಸ ಬೇಕೆನಲವನಿ । ಪತಿಯನಂದಾ ಕೈಕೆಕೇಳಿದ।
ಳು ತನಗಿತ್ತ ವರಂಗಳೆರಡನು ಕೊಡುವುದೆಂದೆನುತ ॥ ೫ ॥ ಬಂದರಲಿ
ಭರತಂಗೊಡೆತನವ । ನಿಂದು ಕೊಡುವುದು ಪತಿಯೆ ಕೇಳ್ಮ । ತ್ತೊಂದ
ರಲಿ ಹದಿನಾಲ್ಕು ವತ್ಸರತನಕ ರಾಮನನು ॥ ಇಂದೆ ಕಾಡಿಗೆ ಕಳುಹಬೇ
ಕೆನ । ಗಿಂದು ಕೊಡದಿರಲಿವನು ನಿನ್ನಯ । ಮುಂದೆಸಾಯುವೆ ನೆನುತ
ಹಟವನು ಮಾಡಿದಳು ಕೈಕೆ ॥ ೬ ॥ ವನಕೆಪೋಗೆನುತಾ ದಶರಥ ನೃ ।
ಪನುನುಡಿಯಲಾ ರಾಘವನು ಬಂ । ದನು ಸತಿಸಹೋದರರ ಸಹಿತಾದಿನ
ವೆ ಕಾನನಕೆ ॥ ಮುನಿಗಳಂದದೆ ದಂಡಕಾವನ । ದನಡುವಿರಲಾ ರಾಮ
ಲಕ್ಷ್ಮಣ । ರನು ದಶಶಿರನು ವಂಚಿಸೆನ್ನನು ತಂದನೀಪುರಕೆ ॥ ೭ ॥ ಪರಿ
ಸಬೇಕೆನುತೆನಗೆ ಕೊಟ್ಟಿಹ । ನೆರಡುತಿಂಗಳ ಗಡುವನಾದಶ । ಶಿರನು
ನಾನಾಬಳಿಕ ಸಾಯುವೆನೆಂದು ತಿಳುಹಿಸಲು ॥ ಪರಮಸಂತಸ ದಿಂದೆ
ಕೇಳುತ । ಧರಣಿಜಾತೆಯ ಮಾತುಗಳನಾ । ವರಕಪೀಶ್ವರ ನಂದುಸೀತೆ
ಗೆ ಮತ್ತೆ ಪೇಳಿದನು ॥ ೮ ॥ ರಾಮದೂತನು ನಾನುಬಂದಿಹೆ । ನಾಮನು
ಕುಲೋತ್ತಮನ ಕಡೆಯಿಂ । ದೀ ಮಹೋದಧಿಯನ್ನು ಲಂಘಿಸಿ ಭರದೆ
ನಿನ್ನೆಡೆಗೆ ॥ ಕ್ಷೇಮದಿಂದಿಹನಾ ರಘೂದ್ವಹ । ರಾಮನನುಜನು ಕುಶಲ

ದಿಂದಿಹ । ನಾ ಮಿಹಿರಸುತ ನೆನ್ನ ಕಳುಹಿದ ನಿನ್ನ ಹುಡುಕಲ್ಕೆ ॥ ೯ ॥ ನಿನಗೆ ವಂದನೆಗಳನು ಹೇಳೆನು । ತನಗೆ ಹೇಳದನಾ ಸುಮಿತ್ರೆಯು । ತ ನುಜನಾ ರಾಘವನ ಪತ್ತಿರದಿಂದೆ ಬಂದಿಹೆನು ॥ ನಿನಗೆಸಂಶಯಬೇಡ ರ ಘುನಂ । ದನರು ನಿನ್ನನಿಮಿತ್ತದಿಂ ದುರೆ । ಮನದಿ ಕುಂದಿಕೊರಗುತ ಹುಡುಕುತ್ತಿಹರು ಸಂತತವು ॥ ೧೦ ॥ ವೇದವೇದ್ಯ ನೆನಿಸುವ ರಾಘವ । ನಾ ದಿವಾಕರ ಸುತನಭೀಷ್ಟವ । ನಾದರದೊಳಾಲಿಸುತ ನಾಲ್ದೆಸೆಗಳಗೆ ಶೀಘ್ರದಲಿ ॥ ಮೇದಿನಿಯೊಳಿಹ ವಾನರೇಂದ್ರರ । ನಾದರಿಸಿ ಕಳುಹಿದನು ಸೀತೆಯು । ನೀಧರಣಿಯೊಳು ಹುಡುಕಬೇಕೆನುತ್ತಿತ್ತು ವಾಯಿದೆಯು ॥ ॥ ೧೧ ॥ ಜನಕನಂದನೆ ಕೇಳು ರಘುನಂ । ದನನು ನಿನ್ನನು ನೋಡಿ ಕೊಂಡಾ । ತನಬಳಗೆ ಬರುವಂತೆ ನನ್ನನು ಕಳುಹಿಸಿದನೆನಲು ॥ ಹನು ಮನಾಡಿದ ಮಾತುಗಳ ನಾ । ವನಿತೆಕೇಳುತ ತಳದುಸಂತಸ । ವನು ಮನದೊಳಂದಂದುಕೊಂಡಳು ವನದಮಧ್ಯದಲಿ ॥ ೧೨ ॥ ಜೀವಿಸಿದ್ದರೆ ನೂರು ವರ್ಷಗ । ಳಾವಕಾಲದೊಳಾದೊಡೆಯುನರ । ನೀ ವಸುಧೆಯೊ ಳು ಸಂತಸವ ನೈದುವನು ತಾನೆನುತ ॥ ಕೋವಿದರು ಪೇಳರುವ ಗಾಥೆ ಯು । ಭಾವಿಸಲು ಸತ್ಯವೆನಿಸಿಕುದೆಂ । ದಾವನಿತೆ ತಾನಂದುಕೊಂಡ ಳು ತನ್ನಮನದೊಳಗೆ ॥ ೧೩ ॥ ಬಳಗೆಬರಲಾ ಪವನಸಂಭವ । ನಿಳೆ ಯನಂದನೆ ದೂರಕ್ಕೈದುತ । ತಿಳದು ವಾನರರೂಪವನುತಾಳ್ದ ದಶಕಂಧರ ನು ॥ ಬಳಗೆಬಂದಿಹ ನೆನುತ ಕೊಂಚೆಯು । ನುಳದುಮನದೊಳು ಮ ತ್ತೆ ದುಃಖವ । ತಳೆದುರೋದಿಸಿ ಕೂತುಕೊಂಡಳು ನೆಲದೊಳೊಂದುಕ ಡೆ ॥ ೧೪ ॥ ಧರಣಿಜಾತೆಯು ಚರಣಪಂಕಜ । ಕೆರಗಲಾ ಹನುಮಂತನಾತ ನ । ಕುರಿತೆಲೆ ದಶಗ್ರೀವ ನೀನಾಪಂಚವಟಿಗೆಯ್ದಿ ॥ ಭರದೆವಂಚಿಸಿ ಭಿ ಕ್ಷುರೂಪದೊ । ಳರದೆನನ್ನನು ತಂದುದಲ್ಲದೆ । ತಿರುಗಿಮತ್ತೀತಕ್ಕೆ ಪೆದ ರಿಪೆ ಕಾಮರೂಪದಲಿ ॥೧೫॥ ಮನುಜಭಕ್ಷಕ ಕೇಳುನೀನಾ । ದನುಜ ವಲ್ಲಭನಲ್ಲದಾ ರಾ । ಮನಿಗೆ ಸೇವಕನಾಗಿ ವಾನರನೆನಿಸಿಕೊಂಡಿರಲು ॥ ನಿನಗೆಮಂಗಳವಾಗಲಾ ರಾ । ಮನಗುಣಂಗಳ ತಿಳುಹುನೀ ನಿಂ । ದೆ ನಗೆಕಂಡೆನು ರಾಮಲಕ್ಷ್ಮಣರನ್ನು ಕನಸಿನಲಿ ॥ ೧೬ ॥ ವಾನರನ ನೋ ಡಿದೆನು ಕನಸಿನೊ । ಳಾನು ಕನಸಿದೆನಿಸದು ನಿದ್ದೆಯು । ನಾನವನನಗೆ ಕನಸುಬಪ್ಪುದೆ ಮರಳುತನವೆನಲು ॥ ನಾನು ಪುಚ್ಚಳೆನಿಸೆನು ಹಾ ಹಾ । ಏನಮಾಡಲೆನುತ್ತ ನುಡಿಯದೆ । ಜಾನಕಿಕೊರಗುತ್ತಿದ್ದಳಾ ವನ ದಲ್ಲಿ ದುಃಖಿಸುತ ॥ ೧೭ ॥ ಈ ತೆರದೊಳುರೆ ದುಃಖಿಪ ಜನಕ । ಜಾತೆ

ಯುಸು ಕಂಡೆರಗಿಪೇಳ್ದ । ನಾತಪನಸುತ ಸಚಿವ ರಾಘವನೊಡನರಣ್ಯ
ವಲಿ । ಪ್ರೀತಿಯಿಂದಿಹ ನಿನ್ನನಿಲ್ಲಿಗೆ । ಮಾತನಾಡಿಸಿ ತಂದಿಹನದರ । ಹೇ
ತುವಿಂದಾ ರಾವಣನಿವರ ಫಲವೆಹೊಂದುವನು ॥ ೧೮ ॥ ಸುರವಿರೋಧಿ
ದಶಾಸ್ಯನನು ಮುಂ । ದೆರಣದೊಳಗಾ ರಾಘವನು ಸಂ । ಹರಿಸುವ ನವ
ನಬಂಧು ವರ್ಗವಸಹಿತ ಕಡುಮುಳಿದು । ಭರದೊಳಾ ರಾಮನನುನೋ
ಡುವೆ । ಶರಧಿಯನು ಲಂಘಿಸುತಬಂದಿಹೆ । ನು ರಘುನಾಥನ ಸನಿಹದಿಂ
ದೆನುತೆರಗಿ ಪೇಳ್ದನು ॥ ೧೯ ॥ ಅಗಲಿನಿನ್ನನು ದುಃಖಿಸುವನಾ । ರಘುವ
ರೇಣ್ಯನು ತನ್ನಸುಖವನಿ । ನಗೆ ತಿಳುಹಿಸೆಂದೆನುತ ಪೇಳ್ದ ನಮ್ಮ ಜಾ
ನಕಿಯೆ ॥ ಮುಗಿದುಕೈಗಳ ಶಿರವಬಾಗಿ ನಿ । ನಗೆ ನಮಸ್ಕಾರಂಗಳನ
ದಿಗ । ಡಿಗೆ ತಿಳುಹೆನುತ ಲಕ್ಷ್ಮಣನೊಲಿದು ಪೇಳ್ದನುನನಗೆ ॥ ೨೦ ॥
ತರಣಿಸುತ ಸುಗ್ರೀವನಾ ರಘು । ವರನಿಗೆ ಸ್ನೇಹಿತ ನೆನಿಸಿಕೊಂ । ಡಿರು
ವನಾತನು ನಿನಗೆ ಕುಶಲವನರುಹಬೇಕೆನುತ ॥ ಪರಮಸಂತಸದಿಂದೆ
ಪೇಳ್ದ ನ । ವರುಗಳನ್ನನು ಕಳುಹಲೈತಂ । ದಿರುವೆನಿಲ್ಲಿಗೆನುತ್ತ ಸೀ
ತೆಗೆ ಪೇಳ್ದನಾ ಹನುಮ ॥ ೨೧ ॥ ಸ್ಮರಿಸುವನು ಸೌಮಿತ್ರಿ ಸುಗ್ರೀ ।
ವರುಸಹಿತ ರಾಘವನು ನಿನ್ನನು । ನಿರತವುಬಿಡನೆ ದೈವಯೋಗದೆ ದನು
ಜನಾರಿಯರ ॥ ನೆರವಿಬೊಳುನೀಂ ಸಿಕ್ಕಿಬದುಕಿಹೆ । ಧರಣಿನಂದನೆ ಕೇ
ಳು ಸೀನತಿ । ಭರದೊಳೀಕ್ಷಿಪೆ ರಾಮಲಕ್ಷ್ಮಣ ಸೂರ್ಯಪುತ್ರರನು ॥
॥ ೨೨ ॥ ನಾನು ರವಿಜನಮಂತ್ರಿ ನೀನನು । ಮಾನವನು ಬಿಡು ನಿನ್ನ
ನೋಡಲು । ದಾನವೇಂದ್ರನ ಲಂಕೆಗೈತಂದಿಹೆನೆನಲು ಕೇಳ್ದು ॥ ಮಾನಿ
ನೀಮಣಿ ಸೀತೆನುಡಿದಳು । ವಾನರೇಂದ್ರನೆ ರಾಘವನೊಡನೆ । ನೀನು ಸ
ಖ್ಯವನೆಂತುಮಾಡಿದೆ ವನದೊಳಂದೆನುತ ॥ ೨೩ ॥ ನೀನು ಲಕ್ಷ್ಮಣ
ನೆಂತು ತಿಳಿದಿಹೆ । ವಾನರನರರಿಗೆಂತು ಸಖತನ । ಕಾಣಿಸಿತು ರಾಘವ
ನ ಲಕ್ಷಣಗಳನು ನನಗಿಂದು ॥ ನೀನರುಹು ಲಕ್ಷ್ಮಣನ ಚಿನ್ಹೆಗ । ಳೀ
ನು ತಿಳಿಸೆಂದನಿಲ ಸುತನನು । ಜಾನಕಿಯು ಕೇಳ್ದಳು ಸಂತೋಷವ
ನು ತಾಳ್ದೊಡನೆ ॥ ೨೪ ॥ ಧರಣಿಸುತೆ ಕೇಳಾರಘುವರನು । ಸರಸಿಜಾಕ್ಷ
ನೆನಿಪನು ಬೆಳಗುವ । ನುರವಿಯಂದದೆ ಸರ್ವಕಾಲವು ವಿನುತಬುದ್ಧಿ
ಯೊಳು ॥ ಸುರಗುರುವಿಗೆ ಸಮಾನನೆನಿಪನು । ಧರೆಗೆಣೆಯೆನಿಪನು ಕ್ಷಮೆ
ಯೊಳಗ । ಮರಪತಿಗೆ ಸಮನೆಂದೆನಿಪ ನುರುತರದ ಕೀರ್ತಿಯಲಿ ॥ ೨೫ ॥
ಪೊರೆವನೆಲ್ಲರ ನವನಿಯೊಳು ನಂ । ಟರನು ಸಲಹುತ್ತಿಹನು ಸಾಧುಜ ।
ನರಿಗುಪಕೃತಿಗಳನು ಮಾಳ್ಪನು ರಾಜವಿದ್ಯೆಗಳ ॥ ಅರಿತಿಹನು ಧರ್ಮ

ಷ್ಯನವನೀ । ಸುರರ ಸೇವಿಸುತಿಹನು ನಿತ್ಯವು । ನೆರೆಸಲಹುವನು ನಾ
ಲ್ಕು ವರ್ಣಾಶ್ರಮದ ಮನುಜರನು ॥ ೨೬ ॥ ವೇದ ವೇದಾಂಗಂಗಳೆಲ್ಲ
ವ ॥ ನಾದಿಯಿಂ ತಿಳಿದಿರ್ಪನು ಧನು । ರ್ವೇದದೊಳತಿ ವಿಶಾರದನೆನಿಸಿ
ಕೊಂಡಿಹನು ತಾನು ॥ ಈ ಧರಣಿಯೊಳು ಶೀಲಯುತನಹ । ನಾ ದಿವಾ
ಕರಕುಲ ಲಲಾಮನ । ನಾದಿಯಿಂದಲೆ ರೂಪದಾಕ್ಷಿಣ್ಯ ಯುತನಾಗಿಹನು॥
॥ ೨೭ ॥ ಕಾಲದೇಶಂಗಳ ನರಿತಿಹ ವಿ । ಶಾಲವಕ್ಷಸ್ಥಳನು ಪಿರಿದಹ ।
ತೋಳುಗಳನಾಂತಿಹನು ಶುಭ್ರಮುಖವನು ತಳೆದಿಹನು ॥ ಮೇಲೆನಿಪ
ಸತ್ಯದೊಳು ನಿರತನು । ಕೇಳು ರಾಮನು ಕಂಬುಕಂಠನು । ಲೋಲ
ನೆನಿಪನು ನಿಗ್ರಹಾನುಗ್ರಹಗಳೆರಡರಲಿ ॥ ೨೮ ॥ ಗುಣದೊಳನುರಾಗ
ದೊಳು ರೂಪದೊ । ಳನವರತವಾ ರಾಮನಂತಿರು । ವನು ಸುಮಿತ್ರೆ
ಯತನಯನಾ ಲಕ್ಷ್ಮಣನು ಧರಣಿಯಲಿ ॥ ಜನಕಸುತೆ ಕೇಳಾತನನು
ರಾ । ಮನೊಡನಾ ಕೌಸಲ್ಯೆ ಪೊರೆದಳು । ಮನವೊಲಿದು ವಿಶ್ವಾಸದಿಂದ
ಲೆ ರಾಮನಂದದಲಿ ॥ ೨೯ ॥ ಅಡವಿಯೊಳಗಾ ರಾಮಲಕ್ಷ್ಮಣ । ರಡಿಗ
ಡಿಗೆ ತಾವಿರದೆ ನಿನ್ನನು । ಹುಡುಕುತಾ ಸುಗ್ರೀವನೆಡೆಗೈತಂದರತಿಭರ
ದೆ ॥ ಒಡನೆರವಿಸುತ ದಶರಥ ಸುತರಿ । ಗೊಡರಿಸಿತು ಸಖಿತನವು ವಾನ
ರ । ರೊಡೆಯ ತೋರಿದ ನಿನ್ನೊಡವೆಗಳ ನಾರಘುವರಂಗೆ ॥ ೩೦ ॥
ಕೊಂದುವಾಲಿಯ ನಾದಿವಾಕರ । ನಂದನಂಗೊಡೆತನವ ಕೊಟ್ಟಿಹ ।
ನಂದುರಾಘವನವರ ದೂತನೆನುತ್ತ ಚಿತ್ತದಲಿ ॥ ಇಂದುನೀಂತಿಳಿ ನನ್ನ
ನಾರವಿ । ನಂದನನು ಕಳುಹಿಸಿದ ನರಸ । ಲ್ಕೆಂದು ನಿನ್ನನು ನಾಲ್ಕು
ದೆಸೆಗಳಿಗಖಿಳ ಕಪಿವರರ ॥ ೩೧ ॥ ಅಂಗದನೊಡನೆ ವಿಂಧ್ಯನಗದೊಳು।
ಸಂಗಳಿಸಿ ಹುಡುಕುತಿರೆ ನಿನ್ನನು । ತಿಂಗಳನವಧಿ ಕಳೆದುಪೋದುದು ಬ
ಳಿಕನಾವೆಲ್ಲ ॥ ಕಂಗೊಳಿಪ ಗುಹೆಯಿಂದೆ ವನಧಿಯ । ಮುಂಗಡೆಗೆ
ಬಂದೀಕ್ಷಿಸುತ ದನು । ಲಂಘಿಸದೆ ಕೈಕೊಂಡಿರಲು ಪ್ರಾಯೋಪವೇಶವ
ನು ॥ ೩೨ ॥ ತಿಳುಹಿದನು ಸಂಪಾತಿ ರಾವಣ । ಲಲನೆ ಲಂಕೆಯೊಳಿರ್ಪ
ಳೆನುತಲೆ । ಜಲಧಿಯನು ದಾಟುತ್ತ ಕಂಡೆನು ನಿನ್ನನೀಪ್ರದದೆ ॥ ತಿಳಿವುದೆ
ನ್ನನು ರಾಮನಾಳೆಂ । ದುಳಿದು ಸಂದೇಹವನು ಕೇಳುಕು । ಶಲವನಾಂ
ತಿಹ ನಾರಘುವರನು ಲಕ್ಷ್ಮಣನ ಸಹಿತ ॥ ೩೩ ॥ ಬಂದುರಾಮನು ಬಂ
ಧುಗಳೊಡನೆ । ಕೊಂದು ದಶಶಿರನನ್ನು ಕಡುಜವೆ । ದಿಂದಯೋಧ್ಯೆಗೆ
ನಿನ್ನ ಕರೆದೊಯ್ವನಿದು ನಿಶ್ಚಯವು ॥ ಇಂದುವಿವರಿಸು ತೆಲ್ಲವನು ಮೊ।
ದಲಿಂದರುಹಿದೆನೀ ನಾನುಕೇಸರಿ । ನಂದನನು ನಿನಗೇನುತೋರ್ಪುದ

ದನ್ನು ತಿಳಿಸೆನಗೆ ॥ ೩೪ ॥ ಏನಮಾಡಲಿ ಏನಹೇಳುವೆ । ನೀನು ನೋಡೆಂದೆನುತ ಕೊಟ್ಟನು । ಜಾನಕಿಗೊಲಿದು ರಾಮನಾಮಾಂಕಿತವ ಮುದ್ರಿಕೆಯ ॥ ಪ್ರಾಣನಾಥನ ಪೊಂದಿದಂತಾ । ಮಾನಿನೀಮಣಿ ತೆಗೆದುಕೊಂಡನು । ಮಾನಿಸದೆ ನೋಡಿದಳು ಕಣ್ಣಳಗೊತ್ತಿ ಸಂತಸದೆ ॥ ೩೫ ॥ ಧರಣಿನಂದನೆ ರಾಹುತೊರೆದಾ । ವರಸುಧಾಕರನಂತೆ ಮೆರೆದಳು । ನೆರೆ ವಿರಾಜಿಪ ತನ್ನಮುಖದಿಂದೊಡನೆ ಹರ್ಷದಲಿ ॥ ಮರುತತನಯಗೆ ನೀಂ ಸಮರ್ಥನು । ಧರೆಯೊಳು ಪರಾಕ್ರಮಿಯು ಧೀವರ । ವೆರನುನನ್ನೊಳು ನೀನುಸಂಭಾಷಿಸಲು ತಕ್ಕವನು ॥ ೩೬ ॥ ವನಧಿಯನು ಲಂಘಿಸುತ ದಶಕಂ । ಠನಪುರಕೆನೀಂ ಬಂದಕಾರಣ । ನಿನಗೆ ರಾವಣ ಭೀತಿಯಿಲ್ಲವು ಮೇದಿನೀತಲದೆ ॥ ನಿನಗೆಸಮನಹ ವೀರನಿಲ್ಲವು । ನನಗೆ ಪೇಳಾ ರಾಮಲಕ್ಷ್ಮಣ । ರು ನೆಲವೊಳು ಸುಖದಿಂದಿಹರೆ ಕೌಸಲ್ಯೆಗೆ ಕುಶಲವೆ ॥ ೩೭ ॥ ಭರತ ಶತ್ರುಘ್ನರುಗಳಿಬ್ಬರಿ । ಹರೆ ಕುಶಲದಿಂದಾಸುಮಿತ್ರೆಯು । ಪುರದೆಸುಖವಾಗಿಹಳೆ ನಾನಾರಾಮಚಂದ್ರನನು ॥ ತೊರೆದಿಹುದರಿಂದೆನ್ನೊಳಾತಗೆ । ಕರುಣೆಯಿಲ್ಲದೆ ಪೋಗಿರಬಹುದು । ಪರಿಹರಿಪನೆಂತೆನ್ನ ದುಃಖವ ನಾರಘೂದ್ವಹನು ॥ ೩೮ ॥ ಅಣ್ಣನ ನೆರವಿಗೆಂದೆನುತ ಪಡೆ । ಯನ್ನು ಕಳುಹಿಸಿರುವನೆ ಭರತನು । ನನ್ನಬಿಡಿಸಲ್ಕಾ ರವಿಸುತನು ಋಕ್ಷಕಪಿಗಳನು ॥ ತನ್ನೊಡನೆ ಬರಮಾಡಿಕೊಳ್ಳುತ । ನನ್ನಗಂಡನ ಬಳಿಯೊಳಿಹನೇ ನಿನ್ನು ಲಕ್ಷ್ಮಣನೆಂತು ರಕ್ಕಸರನ್ನುವಧಿಸುವನು ॥ ೩೯ ॥ ಆವಸಮಯದೊಳೀಕ್ಷಿಸುವೆನೀ । ರಾವಣನು ರಘುನಾಥನಿಂದಲೆ । ಸಾವನಾಂಪುದನೆಂದುಜಾನಕಿ ಕೇಳಲನಿಲಜನು ॥ ದೇವಿನೀನೀ ಲಂಕೆಯೊಳಿಹುದ । ನಾವಿಭುವರನು ತಿಳಿಯಲಿಲ್ಲವು । ದೇವರಾಘವ ನಬ್ಧಿಯನು ಶೋಷಿಸುವನತಿ ಭರದೆ ॥ ೪೦ ॥ ಅವನಿಜೆ ಪೆಕೇಳಸುರರೆಲ್ಲರ । ನು ವಧಿಸುವನಾ ರಘುವರನುನಿ । ನ್ನವಿರಹಾನಲನಿಂದೆ ದುಃಖಿಸುತಿಹನು ಹಗಲಿರುಳು ॥ ಜವದೆ ನೋಡುವೆ ಗಂಡನನಿದು ನಿ । ಜವು ರಘುವರನು ನಿನ್ನನೋಡದ । ರುವುದರಿಂದಲೆ ಮದ್ಯಮಾಂಸಂಗಳನು ಸೇವಿಸನು ॥ ೪೧ ॥ ಕನಕಮಂದರ ಪರ್ವತಗಳಾ । ಣೆನಿಜವಿದು ಕೇಳಮ್ಮ ಸೀತೆಯೆ । ಮನದೊಳು ಸ್ಮರಿಸುವನು ನಿನ್ನನೆ ರಾಮನನುದಿನವು ॥ ಜನನಿನಿದ್ದೆಯ ನುಳಿದಿಹನು ರಾ । ಮನುಮಲಗಿ ನಿದ್ದಿಸುತಜಾನಕಿ । ಯೆನಿಪನಾಮವ ಕೇಳ್ದಮಾತ್ರಕೆ ದುಃಖಿಸುವನೆದ್ದು ॥ ೪೨ ॥ ಫಲಕುಸುಮ ಸಂದೋಹವನು ನೋ । ಡಲಿರದೆಯೆ ಹಾ ಸೀತೆಯೆಂದಳು । ತಳುತ ಬಿಸುಸುಯ್ದುವುಗಳನು ಕೈಕೊ

ಳದೆ ಬಿಡುತಿಹನು ॥ ಖಳ ದಶಗ್ರೀವನನು ಸಂಗರ । ದೊಳು ವಧಿಸಿ ನಿ
ನ್ನನು ಪಡೆಯಲು ಹ । ಗಲಿರುಳು ಬಹುಳ ಯತ್ನವನು ಮಾಡುವನು
ರಾಘವನು ॥ ೪೩ ॥ ಎಂದುಪೇಳಲು ಕೇಳ್ದುಧರಣೀ । ನಂದನೆ ನುಡಿದ
ಳಾಂಜನೇಯುನಿ । ಗಂದೆಲೆ ಪವನಸಂಭವನೆ ಕೇಳ್ಜಗದೊಳಾಯುಮ
ನು ॥ ಸಂದಧಿಕ ಸಂಪದದೊಳಾಗಲಿ । ಕುಂದಿಸತಿದುಃಖದೊಳಗಾಗಲಿ ।
ಬಂಧಿಸುತ ಬಿಡದೆಳೆವ ರಜ್ಜುವಿನಿಂದೆಮಾನವನ ॥ ೪೪ ॥ ವಿಧಿಯು ದು
ಸ್ತರವೆನಿಸಿಕೊಂಡಿಹು । ದದನು ವಿಾರಲುಶಕ್ಯವಲ್ಲ ವ । ಸುಧೆಯೊಳಾರಿ
ಗು ನನ್ನ ಮುಳುಗಿಸಿರುವದು ದುಃಖದಲಿ ॥ ವಿಧಿನಿಯಾಮಕ ಬಂಧನಕೆ
ಸಿಲು । ಕಿ ಧರಿಸಲಸಾಧ್ಯವಹ ದುಃಖ ಜ । ಲಧಿಯೊಳೀಗ ಮುಳುಗಿರುತಿ
ಹರಾ ರಾಮಲಕ್ಷ್ಮಣರು ॥ ೪೫ ॥ ಎಂತು ದಶಕಂಧರನ ಕೊಲ್ಲುವ । ನೆಂ
ತು ನನ್ನನು ಹೊಂದುವನು ತಾ । ನೆಂತು ರಾಮನು ಲಂಘಿಸುವನೀ ದುಃ
ಖಸಾಗರವ ॥ ಪಿಂತೆನಗೆ ಕೊಟ್ಟಿಹನು ರಾವಣ । ಸಂತಸದೊಳೊಂದು
ವರುಷಗಡುವ । ನಿಂತುಕೊರಗುತ ನಾನುಕಳೆದೆನು ಹತ್ತು ತಿಂಗಳನು ॥
॥ ೪೬ ॥ ಎರಡುತಿಂಗಳು ಮಿಕ್ಕಿಹುದು ದಶ । ಶಿರನ ಸೋದರನಹ ವಿಭೀ
ಷಣ । ನು ರಘುನಾಥನಿಗೆನ್ನ ನೀವುದೆನುತ್ತ ದಿನದಿನವು ॥ ತರತರದನೀತಿ
ಗಳನರುಹಲು । ಸುರಪತಿಗೆಸರಿಬೀಳಲಿಲ್ಲನು । ತರುಪುತಿರ್ದಪಳನಲೆಸಂ
ಬ ವಿಭೀಷಣನಮಗಳು ॥ ೪೭ ॥ ವನದೊಳಾ ಹದಿನಾಲ್ಕುಸಾವಿರ । ದನು
ಜರನು ಸಂಹರಿಸಿದಾ ರಾ । ಮನಿಗೆ ಯುದ್ಧದೊಳಿದಿರುನಿಲ್ಲುವರುಂಟೆ
ಯೋಚಿಸಲು ॥ ದನುಜನಾಥನ ಸಂಹರಿಸದೆ ಬಿ । ಡನುರಘುಕುಲೋತ್ತ
ಮನು ಮುಂದೆ ಕ । ದನದೊಳೆನ್ನ ನಿಮಿತ್ತದಿಂದೆನು ತತ್ತಳಾಸೀತೆ ॥
॥ ೪೮ ॥ ಎನಲುಕೇಳ್ದಾ ಪವನಸಂಭವ । ನು ನುಡಿದನು ಕೇಳೆಲೆ ಮಹೀ
ಸುತೆ । ಮನುಕುಲೋತ್ತಮ ರಾಮನಾಕಪಿಸೈನ್ಯವನು ಕೂಡಿ ॥ ವನ
ಧಿಗಾಗಿಸಿಸೇತುವ ದಶಶಿ । ರನನು ಸಂಹರಿಸುವ ನಿದುನಿಜವು । ಮನದೊ
ಳನುಮಾನವನು ಬಿಡುನೀ ನಿನ್ನು ಚಿಂತಿಸದೆ ॥ ೪೯ ॥ ಇಲ್ಲದಿದ್ದರೆ ನಿನ್ನ
ನು ಹೆಗಲಿ । ನಲ್ಲಿ ಕೂಡಿಸಿಕೊಂಡು ರಾಘವ । ನಲ್ಲಿಗೆ ಕರೆದುಕೊಂಡು
ಹೋಗುವೆ ನಬ್ಧಿಯನುದಾಟ ॥ ಇಲ್ಲಿ ನಿನ್ನಸಮಸ್ತ ದುಃಖವ । ನೆಲ್ಲ
ಹರಿಸುವೆ ನೆನ್ನ ಮಸ್ತಕ । ದಲ್ಲಿ ಲಂಕೆಯನಿರಿಸಿ ಕೊಂಡೈದುವೆ ನಸುರರೊ
ಡನೆ ॥ ೫೦ ॥ ಎನಲುಜಾನಕಿ ಕೇಳ್ದಲೆ ಪವನ । ತನಯ ನಿನ್ನ ಕಪಿತನ
ಕಾಣಿಸಿ । ತೆನಗೆ ಕಿರಿದಹ ದೇಹವನು ಹೊಂದಿರುವೆ ನೀನರಿಯೆ ॥ ವನ
ನಿಧಿಯನೆಂತೆನ್ನ ನಿರಿಸು । ತ್ತನಿಜ ಭುಜದೊಳು ಲಂಘಿಸುವೆ ರಾ । ಮ

ನೆನವಿನಾಪಕ ದೆಂತುಪ್ರೋಗುವೆ ನನಗೆಪೇಳೆನಲು ॥ ೫೧ ॥ ತಿಳಿಯದೆನ್ನ
ಬಲಪ್ರಭಾವಂ । ಗಳನು ನೀನೀತೆರದೆಪೇಳುವೆ । ತಿಳಿದು ನೋಡುವುದೆ
ನ್ನ ರೂಪವನೆಂದುನುಡಿಯುತ್ತ ॥ ಬಳಿಕಮಂದರಮೇರುಪರ್ವತ । ಗಳಿಗೆ
ಸರಿಯೆಂದೆನಿಸಿ ಸೀತೆಯು । ಬಳಿಯೊಳು ಪವಮಾನಿನಿಂದನು ತಾಯೆ
ನೋಡೆನುತ ॥ ೫೨ ॥ ಸೀತೆಬಿಡು ಶೋಕವನು ನೀನಿಂ । ದೇತಕನು
ಮಾನಿಸುವೆ ರಾಕ್ಷಸ । ನಾಥನೊಡನೀ ಲಂಕೆಯುನಿರಿಸು ತೆನ್ನ ತಲೆಯೊ
ಳಗೆ ॥ ಭೀತಿಯಿಲ್ಲದೆ ರಾಮನೆಡೆ ಗೆನಿ । ಕೇಳಿಯೊಳಗಾಂ ಪೋಪೆನೆನೆ
ಘೂ । ಜಾತೆ ಪೇಳಿದಳಾಂಜನೇಯನಿ ಗಧಿಕಹರ್ಷದಲಿ ॥ ೫೩ ॥ ನೀನೆ
ಘಟಕನು ನೀನೆಶಕ್ತನು । ನೀನೆಶೂರನು ನೀನೆಧೀರನು । ನಾನುತಿಳಿದೆ
ನು ನಿನ್ನಮಿತಬಲ ಶಕ್ತಿಗಮನಗಳ ॥ ಭಾನುವಂಶ ಲಲಾಮನ ಬಳಿಗೆ ।
ನಾನು ನಿನ್ನೊಡಬರ್ಪುದನುಚಿತ । ನೀನು ಯೋಚಿಸಿನೋಡು ನಿನ್ನಯ
ಮನಸಿನೊಳಗಿಂದು ॥ ೫೪ ॥ ನನ್ನೊಡನೆ ಜಲನಿಧಿಯದಾಟುವ । ನಿನ್ನ
ಪಿಡಿವುರೆ ಘಾತಿಸುತ್ತಿಹ । ರಿನ್ನು ರಣದೊಳಗೆಂತಿರುತಿಹವೋ ಸೋಲು
ಗೆಲವುಗಳು ॥ ಮುನ್ನ ಪೇಳಲಸಾಧ್ಯ ಜಲನಿಧಿ । ಯನ್ನು ನೀಂ ಲಂಘಿ
ಸುವ ಕಾಲದಿ । ನಿನ್ನ ಹೆಗಲಿಂ ಬಿದ್ದರುಂಬೀಳಬಹುದಬ್ಧಿಯಲಿ ॥ ೫೫ ॥
ನಿನ್ನ ಸಂಗಡ ನಾನುಬಂದರೆ । ನನ್ನನು ಕಳತ್ರವತಿ ಜಾನಕಿ । ಯೆನ್ನು
ತೊರೆವರು ರಕ್ಕಸರೊಡನೆ ನೀನು ಕಾದುತಿರೆ ॥ ನಿನ್ನಹೆಗಲಿಂ ದವನಿ
ಯೊಳುರು । ಳ್ದೆನ್ನನು ಪಿಡಿದುಕೊಂಡು ದಾನವ । ರಿನ್ನು ಲಂಕೆಗೆತರು
ವರೆನ್ನುತ ನುಡಿದಳನಿಲಜಗೆ ॥ ೫೬ ॥ ದನುಜರೆಲ್ಲರ ನಿರಿವಶಕ್ತಿಯು ।
ನಿನಗಿರುತಿಹುದು ನೀನುಕೊಂದರೆ । ಮನುಕುಲೋತ್ತಮ ರಾಘವನ
ಗೌರವಕೆ ಕುಂದಹುದು ॥ ಅನಿಲನಂದನಕೇಳು ರಘು ನಂ । ದನನನು
ಳಿದೀ ನೆಲದೊಳನ್ಯರ । ತನುವಸೋಕುವಳಲ್ಲನಾನೆನು ತೆಂದಳಾಸೀತೆ ॥
॥ ೫೭ ॥ ಕೊಂದು ದಶಶಿರನನ್ನು ದಶರಥ । ನಂದನನಯೋಧ್ಯಾ ನಗರ
ಕಿ । ಲ್ಲಿಂದೆ ನನ್ನನು ಕರೆದುಕೊಂಡ್ಯೈದಿದೊಡೆ ಲೋಕದಲಿ ॥ ಮುಂದೆ
ಗೌರವ ಬರ್ಪುದಾ ರಘು । ನಂದನಂಗೆ ಸುರಾಸುರೋರಗ । ಗಂಧರುವ
ರೊಳಗಾರು ಸರಿಯಲ್ಲವಿದು ನಿಶ್ಚಯವು ॥ ೫೮ ॥ ಸೇರಿಸೆನ್ನನು ಶೀಘ್ರ
ದೊಳುನೀ । ನಾರಘೂದ್ವಹ ನೆಡೆಗೆನುತತಾ । ನಾ ರಜನಿಯೊಳು ಸೀತೆ
ಪೇಳಲು ಪವನಸಂಭವನು ॥ ಮಾರಿದಾನಂದವನು ತಾಳ್ದಾ । ಧಾರಿಣೀ
ಸುತೆ ನುಡಿಗಳನು ಕೇ । ಳ್ದಾರಮಣಿಗೆರಗುತ್ತ ಪೇಳದ ನತಿವಿನಯದಿಂ
ದ ॥ ೫೯ ॥ ಸೀತೆನಿನ್ನಯ ನುಡಿಗಳೆಲ್ಲ ಸು । ನೀತಿಯುತವಾಗಿರುವು

ವು ಧರಿ । ತ್ರೀತಲದೊಳಿದು ಸಹಜ ಹದಿಬದೆಯರುಗಳೆಲ್ಲರಿಗೆ ॥ ಪಾತೆ ರಾಮನ ನುಳಿದು ಸೋಕೆನು । ಭೂತಲದೆ ಮತ್ತೊಬ್ಬರ ನೆನುವು । ದಾತನಮಡದಿ ಯೆನ್ನಿಪನಿನಗೆ ಯೋಗ್ಯವಾಗಿಹುದು ॥ ೬೦ ॥ ಧರಣಿಜಾತೆಯೆ ಕೇಳುಪದೆದಾ । ತರಣಿವಂಶ ಲಲಾಮನೊಳು ನನ । ಗಿರುವ ವಿಶ್ವಾಸಾತಿಶಯದಿಂದಿಂತು ಪೇಳಿದೆನು ॥ ಭರದೊಳಾತನ ಬಳಿಗೆನಿನ್ನನು । ಕರೆದುಕೊಂಡೈದುವೆನು ಭಕ್ತಿಯೊ । ಳುರುತರದ ಗುರುಸೇವೆಯೆನು ತಾಂತ್ರಿಳಿದು ಮನದೊಳಗೆ ॥ ೬೧ ॥ ನಿನಗೆ ನನ್ನೊಡನೈತರಲು ಹಿತ । ಮೆನಿಸದಿದ್ದರೆ ರಾಮನರಿವಂ । ತೆನಗೆ ನೀಂಕೊಡು ನಿನ್ನಕುರುಹನೆನುತ್ತ ಬೆಸಗೊಳಲು ॥ ಜನಕನಂದನೆ ಕೇಳ್ದು ಹನುಮಂ । ತನಿಗೆ ಪೇಳಿದಳಧಿಕ ಸಂತಸ । ವನುತಳೆದು ಹಿಂದಾದ ಕಥೆಯನುಕೂಡೆ ವಿವರಿಸುತ ॥ ೬೨ ॥ ಹಿಂದೆಮಂದಾಕಿನಿಯ ತೀರದೊ । ಳಂದವಾಗಿಹ ಚಿತ್ರಕೂಟದ । ಮುಂದೆ ಜಲಫಲ ಕಂದಮೂಲಗಳಿಂದೆ ಶೋಭಿಸುತ ॥ ಸುಂದರವೆನಿಪ ಪರ್ಣಶಾಲೆಯ । ಮುಂದೆ ರಾಮನ ತೊಡೆಯೊಳತಿ ಮುದ । ದಿಂದೆನಾಂ ಮಲಗಿದ್ದೆ ನೊಂದಾನೊಂದು ದಿವಸದಲಿ ॥ ೬೩ ॥ ಆಗ ವಾಯಸನೊಂದು ಬಂದತಿ । ಬೇಗ ನೆನ್ನವೊಲೆಗಳ ನಡುವಣ । ಭಾಗವನುಕಚ್ಚಿದುದು ಹೆಂಟೆಯೊಳೋಡಿಸಿದೆನದನು ॥ ರಾಘವೇಂದ್ರನು ಮತ್ತೆಮಲಗಿ ಸ । ರಾಗದಿಂದಲೆ ನನ್ನತೊಡೆಯೊಳ । ಗಾಗಪನವಲಿ ನಿದ್ದೆಯ ನೆಸಗುತ್ತಿದ್ದ ವೇಳೆಯಲಿ ॥ ೬೪ ॥ ಮತ್ತೆ ಬಂದಾಕಾಗೆ ಕಚ್ಚಿತು । ನೆತ್ತರೊನಲಿಡುವಂತೆ ನನ್ನ ಸು । ವೃತ್ತ ಕುಚಮಧ್ಯವನು ಬಳಿಕಲ್ಲಿಂದೊಡನೆ ಸುರಿದ ॥ ನೆತ್ತರಿಂದೆಚ್ಚರಿಕೆಯನು ಹೊಂ । ದುತ್ತು ರಗನಂದದೊಳು ಕೋಪಿಸಿ । ಹತ್ತಿರದೊಳಿಹ ವಾಯಸವ ನೀಕ್ಷಿಸಿದ ನೆನ್ನಪತಿ ॥ ॥ ೬೫ ॥ ಬಡನೆ ಚಾಪೆಯೊಳೊಂದು ದರ್ಭೆಯ । ನೆಡವಕೈಯಿಂದಾಂತು ರಾಘವ । ನಡವಿಯೊಳಗಂ ದದನು ಬ್ರಹ್ಮಾಸ್ತ್ರದೊಳು ಸಂಧಿಸುತ ॥ ಬಿಡಲುಮಂತ್ರಿಸಿ ವಾಯಸವ ಮೇ । ಲಡಿಗಡಿಗೆ ಭೀತಿಯನುತಾಳುತ । ಕಡುಜವದೊಳಾ ಬ್ರಹ್ಮನೆಡೆಗೋಡಿದುದು ವಾಯಸವು ॥ ೬೬ ॥ ಸುರಪತಿಯ ಸುತನೆನಿಪ ಕಾಕಾ । ಸುರನು ರಾಮಾಸ್ತ್ರಕ್ಕಳುಕುತದ । ಪರಿಹರಿಸಬೇಕೆನುತ ಬ್ರಹ್ಮಾದ್ಯಖಿಳ ವಿಬುಧರನು ॥ ಶರಣುಪೊಗಲಾ ವಾಯಸವ ನೆ । ಲ್ಲರು ಸಲಹಲಾರದುಳಿಯಲು ಬಂ । ದೆರಗಿದುದು ನೀಂ ರಕ್ಷಿಸೆನ್ನನೆನುತ್ತಲಿಂದ್ರನಿಗೆ ॥ ೬೭ ॥ ತಂದೆ ನನ್ನಿಂದಾಗದೆಂದೆನು । ತಂದುಕಳುಹಲು ಮತ್ತೆ ದಶರಥ । ನಂದನನ ಬಳಗೈದಿ ವಾಯಸ ಸಲಹು

ನೀನೆನುತ । ನಿಂದು ಪೊಗಳುತ ಪದಕೆರಗಲಾ । ನಂದವನು ತಾಳ್ದದರ
ಬಳಿಗ । ಕಣ್ಣೊಂದನರಿದು ಸಲಹಿದನಾ ಕಾಕಾಸುರ ನಸುವನು ॥ ೧೮ ॥
ಬಳಿಕ ರಾಮನಿಗೆರಗಿ ತನ್ನ । ಸ್ಥಳಕೆಪೋದುದು ಕಾಗೆಕೋಪವ । ತಳೆ
ದು ನನ್ನ ನಿಮಿತ್ತದಿಂದಲೆ ವಾಯಸದ ಮೇಲೆ ॥ ಬಲಿದ ಬ್ರಹ್ಮಾಸ್ತ್ರವ
ನುಬಿಟ್ಟನ । ಸುಳಿವನೇಂ ದಶಕಂಠನನು ರಣ । ದೊಳಗೆ ವಧಿಸದೆ ಕೇ
ಳೆನುತ ಪೇಳಿದಳು ಭೂಮಿಸುತೆ ॥ ೧೯ ॥ ಆತನ ಬಲಪರಾಕ್ರಮಂಗಳ ।
ನಾತನ ಸುಗುಣ ಸಾಹಸಂಗಳ । ನಾತನ ಸಕಲ ಯುಕ್ತಿಶಕ್ತಿಗಳನ್ನು
ನಾಂಬಲ್ಲೆ ॥ ಆತ ನೆನ್ನ ನಿಮಿತ್ತದಿಂದೀ । ಭೂತಲಕ್ಕೈತಂದ ಸುರಸಂ ।
ಘಾತವನು ಸಂಹರಿಸುವನು ರಣರಂಗದೊಳು ಮುಂದೆ ॥ ೨೦ ॥ ಆ ರ
ಘುಕುಲೋತ್ತಮನಿಗೆ ಸುರ ನ । ರೋರಗ ದನುಜ ಸಿದ್ಧಸಾಧ್ಯರೊ ।
ಳಾರು ಸರಿಯಿಲ್ಲಧಿಕ ಭುಜಬಲ ಶೌರ್ಯಯುತನವನು ॥ ವೀರರೆನಿಸಿದ
ರಾಮಲಕ್ಷ್ಮಣ । ರಾರವಿತನಯನೊಡನೆ ಲಂಕೆಗೆ । ಬಾರದಿರುವುದರಿಂದೆ
ನಾನತಿಪಾಪಿಯಾಗಿಹೆನು ॥ ೨೧ ॥ ವಾಯುನಂದನಕೇಳು ಜನಸಮು ।
ದಾಯಕೆ ಸಕಲವಿಧವಬಾಧೆಯ । ನೀಯುತ ಮಹಾಪಾಪವ ನೆಸಗಿರು
ವುದರಿಂದೀಗ ॥ ವಾಯುವಗ್ನಿಗಳಿಗೆ ಸಮರೆನಿಪ । ರಾಯದಶರಥ ಸುತ
ರು ಕಪಿಗಳ । ಸಾಯದಿಂದೈತಂದು ನನ್ನನು ಕಾಣದಿಹರೆನಲು ॥ ೨೨ ॥
ಆನುಡಿಯನಾಲಿಸುತ ಪವ । ಮಾನನಂದನ ನೆರಗಿಸೀತೆಗೆ । ತಾನು
ಪೇಳಿದ ನೆಲೆಮಹೀಸುತೆ ನಿನ್ನ ದುಃಖವನು ॥ ಭಾನುವಂಶತಿಲಕನು ಹರಿ
ಸುವ । ನೀ ನುಡಿಯೊಳನುಮಾನ ವಿಲ್ಲವು । ನೀನುಸಿಕ್ಕಿದೆ ದೈವವಶದಿಂ
ದೆನಗೆ ಲಂಕೆಯುಲಿ ॥ ೨೩ ॥ ರಾಮನು ಮನದೆದುಃಖಿಸುತ್ತಿರಲು । ರಾಮ
ನಂದದೆ ದುಃಖಿಸುವ ನಾ । ರಾಮನ ಸಹೋದರನು ತನ್ನ ಯಮನದೊ
ಳನವರತ ॥ ನೀ ಮನದೊಳೈದದಿರು ದುಃಖವ । ನೀ ಮುಹೂರ್ತದೊ
ಳೀಕ್ಷಿಪೆ ಶುಭ । ಸ್ತೋಮವನು ಕೇಳೆನುತ ಪೇಳ್ದನುಮತ್ತೆ ಜಾನಕಿಗೆ ॥
॥ ೨೪ ॥ ನಿನ್ನನೋಡುವಪೇಕ್ಷೆಯಿಂದಲೆ । ತನ್ನ ಕಪಿಗಳಕೂಡೆ ನಡೆತಂ ।
ದುನ್ನತ ಪರಾಕ್ರಮದೊಳಾ ರಘುವರನು ಲಂಕೆಯನು ॥ ಇನ್ನು ಸು
ಡುವನುಬಿಡದೆ ರಾವಣ । ನನ್ನು ಬಂಧುಗಳೊಡನೆ ಕೊಲ್ಲುತ । ನಿನ್ನ ಕರೆ
ದೊಯ್ಯುವನು ತನ್ನಯಪುರಿಗೆ ಶೀಘ್ರದಲಿ ॥ ೨೫ ॥ ಮಾತೆ ರಾಮನಿ
ಗೇನಹೇಳಲಿ । ನೀ ತಿಳಿಸೆನುತ ಕೇಳಲಂದಾ । ಸೀತೆನುಡಿದಳು ನೀನು
ಕೇಳೆಲೆ ಪವನಸಂಭವನೆ ॥ ಆತನಿಗೆ ಪೇಳೆನ್ನ ತೆರವನು । ಸೀತೆನಮಿಸಿ
ದಳೆಂದು ತಿಳಿಸೈ । ನೀ ತಿಳುಹು ಸೌಮಿತ್ರಿಗೆನ್ನಯ ವಿವರವೆಲ್ಲವನು ॥

॥ ೨೬ ॥ ತರಣಿತನಯಂಗರುಹು ಸೀತೆ । ನ್ನಿರವ ನಾಸಿನ್ನೊಂದು ತಿಂಗಳ । ವರೆಗೆ ಜೀವಿಸಿರುವೆನು ನಂತರ ಬಿಡುವೆದೇಹವನು ॥ ಮರುತನಣುಗನೆ ನೀನುಶಕ್ತನು । ಭರದೊಳೆನ್ನಯ ದುಃಖವನು ಪರಿ । ಹರಿಸುವಂತಾಗಿಪುದು ನೀನೆನುತೆಂದಳಾಸೀತೆ ॥ ೨೭ ॥ ಪವನಸಂಭವ ರಾಘವನಿಗೆಕೊ । ಡುವುದುನೀನೀ ಮಣಿಯನೆನ್ನುತ । ತವಕದಿಂದಲೆ ಸೀರೆಸೆರಗನು ಬಿಚ್ಚಿ ಜಾನಕಿಯು । ರವಿಯತೆರದಿಂ ಥಳಥಳಿಸುತ ಮೆ । ರೆವಸುಚೂಡಾಮಣಿಯನಂದಾ । ಪ್ಲವಗನಾಥನ ಕೈಗೆಕೊಟ್ಟಳು ಬಹುಳಹರ್ಷದಲಿ ॥ ೨೮ ॥ ಆಮಣಿಯನಾಂ ತಧಿಕಭಕ್ತಿಯೊ । ಳಾಮಹೀಸುತೆ ಸುತ್ತಲುತಿರುಗಿ । ಕೈಮುಗಿದು ಸಾಷ್ಟಾಂಗದಿಂದೆರಗುತ್ತ ಭಕ್ತಿಯಲಿ । ರಾಮನಂ ನೆನೆನೆನೆದು ಮನದೊಳು । ತಾಮಸವನುಳಿದನಿಲ ಸುತನಾ । ರಾಮನಬಳಿಗೆ ಪೋಗಬೇಕೆನುತಂದು ಯೋಚಿಸಿದ ॥ ೨೯ ॥

ಇಂತು ಇಪ್ಪತ್ತನೆಯ ಅಧ್ಯಾಯ ಸಂಪೂರ್ಣವು. ಪದ್ಯಗಳು ೧೦೩೭.

ಇಪ್ಪತ್ತೊಂದನೆಯ ಅಧ್ಯಾಯ.

ಸೂಚನೆ ॥ ಸೀತೆವಿವರವ ನರಿತುರಾಘವ ।
ನೈತರುತಲಾ ಜಲನಿಧಿಗಿರದೆ ।
ಸೇತುವನೆಸಗಿ ಹೊಕ್ಕನಾಲಂಕೆಯನು ಬಲಸಹಿತ ॥

ಬಳಿಕಜಾನಕಿ ಪವನತನಯಂ । ಗೊಲಿದುಪೇಳಿದ ಳೆಲೆಕಪೀಂದ್ರನೆ । ಲಲಿತಚೂಡಾ ರತ್ನವನು ರಾಮನಿಗೆಗುರುತಾಗಿ ॥ ನಲಿದುನೀಂಕೊಡು ಮಣಿಯನೋಡುತ । ತಿಳಿವರಾಘವನು ಸ್ಮರಿಸಿನಪ । ನೊಲಿದು ನನ್ನನು ನಮ್ಮತಾಯಿಯನಾ ದಶರಥನನು ॥ ೧ ॥ ನನ್ನದುಃಖವು ಹೋಗುವಂದದೊ । ಳೆನ್ನುಯತ್ನವ ಮಾಡುನೀನೆಂ । ದೆನ್ನು ತವಸಿಜೆಪೇಳಲಂದಾ ಪವನಸಂಭವನು ॥ ನಿನ್ನಕೋರಿಕೆಯಂತೆ ಫಲಿಸುವು । ದಿನ್ನು ನಾಂಪೋಗಿಬಹೆ ರಾಮನ । ಸನ್ನಿಧಿಗೆ ನನಗಪ್ಪಣೆಯ ನೀವುದೆನುತ ನಮಿಸಲು ॥ ೨ ॥ ಮರುತನಣುಗನೆ ರಾಘವೇಂದ್ರಸಿ । ಗರುಹುನನ್ನಯ ಕುಶಲವಾರ್ತೆಯ । ಭರದೊಳಾ ಲಕ್ಷ್ಮಣನಿಗೆ ತಿಳುಹಿಸೆನ್ನ ಕುಶಲವನು ॥ ತರಣಿತನಯಂಗೆನ್ನ ರೀತಿಯ । ನರುಹು ಜಾಂಬವ ಮುಖ್ಯರಹಕಪಿ । ವರರಿಗೆನ್ನಯ ಕುಶಲವರುಹೆಂದೆನುತ ಪೇಳವಳು ॥ ೩ ॥ ರವಿ

ಕುಲತಿಲಕ ರಾಮನೀ ದುಃ । ಖವನು ಪರಿಹರಿಸೆನ್ನನುರೆ ಸಲ । ಹುವ ಪೊಲಾಗಿಸು ಶುಭಗಳಾಗಲಿ ನಿನಗೆ ನಾರಿಯೊಳು ॥ ಪವನಸುತನೀ ನಿಲ್ಲಿರುವುದೀ । ದಿವಸವೆಲ್ಲವು ಮತ್ತೆ ನಿನ್ನ ಮು । ಖವನು ನೋಡುವೆನೆಂಬುದೆನ ಗನುಮಾನವಾಗಿಹುದು ॥ ೪ ॥ ಬಂದುತಿಂಗಳು ಕಳೆದನಂತರ । ಕೊಂದುಹಾಕುವ ನೆನ್ನನೀ ದಶ । ಕಂಧರ ನಿವನಬಾಧೆ ನನಗತ್ಯಧಿಕವಾಗಿಹುದು ॥ ಅಂದುಕೊಳ್ಳಲಸಾಧ್ಯ ವೆನಿಸಿಹು । ದಿಂದಿವನು ವಿಸ್ತರಿಸುತಾ ರಘು । ನಂದನಂ ಗರುಹೆಂದು ಕಳುಹಿದಳಾಂಜನೇಯುನನು ॥ ॥ ೫ ॥ ಜೊರಟುಬಂದಾ ಪವನಸಂಭವ । ನಿರದೆಯೋಚಿಸಿ ತಾನುಬಂದಿಪ । ಪರಿಯನರಿಪದೆ ಪೋಪುದನುಚಿತ ವೆಂದುಬಗೆದೊಡನೆ ॥ ಭರದೊಳೈತಂದಾ ವನವಖಿಳ । ತರುಗಳನು ಭಂಗಿಸುತ್ತಿರಲು ಬಂ । ದರನಿಲಸುತನಮೇಲೆ ವನಪಾಲಕರು ಕಾಳಗಕೆ ॥೬॥ ಫಡಫಡೆಲವೋವೋ ತೊಲತೊಲಗು । ಕಡಿದು ಕಂಬಕೆ ಬಿಗಿವೆವೆನ್ನುತ । ನುಡಿದಿರದೆ ಕಾಳಗಕೆ ರಕ್ಕಸರೈತರಲು ಜವದೆ ॥ ಕಡುಮುಳಿದು ಪವಮಾನಸಂಭವ । ಬಿಡದೆಕೊಂದನು ರಣದೊಳೆಲ್ಲರ । ನೊಡೆಯನಿಗೆ ಪೇಳದರುಳದವನ ಪಾಲಕರುಕೊಡೆ ॥ ೭ ॥ ಆ ದಶಶಿರನುಕೇಳಿ ಕಡುಮುಳಿ । ದಾದರದೆ ಕಳುಹಿಸಿದನಂದಿರ । ದೈಮಜನ ಮಂತ್ರಿಸುತರನು ಕಾಳಗಕೆ ಮನ್ನಿಸುತ ॥ ಕಾದುವಭಿಲಾಷೆಯನು ತಾಳ್ದು ವಿ । ನೋದವಮಾತ್ರದೆ ವಧಿಸಿದನವರ । ನಾ ವಿಪಾಕರ ತನಯ ಸಚಿವನದೊಂದು ನಿಮಿಷದಲಿ ॥ ೮ ॥ ಸಾಯದೈತಂದವರು ದಾನವ । ರಾಯನಿಗೆ ಪೇಳದರು ಕೊಂದನು । ವಾಯುನಂದನ ಸಚಿವಸುತ ರೈವರನು ಕೇಳೆನುತ ॥ ಹಾಯೆನುತ ನೆರೆನೊಂದು ಸೈನ್ಯ ಸ । ಹಾಯದಿಂದಕ್ಷಯ ಕುಮಾರನ । ನಾಯನುವರಕೆ ಕಳುಹಿಂದನು ಮನ್ನಿಸುತ ರಾವಣನು ॥ ೯ ॥ ಅಟ್ಟಹಾಸದೊಳೈದಿ ಕದನಕೆ । ನೆಟ್ಟನಿದಿರೊಳು ನಿಂದಸೈತ್ಯನ । ಥಟ್ಟನೀಕ್ಷಿಸಿ ಕೊಂದನಾ ಪವಮಾನನಂದನನು ॥ ಭಟ್ಟನೆ ತಿಳಿದು ರಾವಣನಿದನು । ಹೊಟ್ಟೆಯೊಳಡಿದ ದುಃಖದಿಂದಳೆ । ಕಟ್ಟುತಹುದಾ ಕಪಿಯನೆನು ತಿಂದ್ರಜಿತುವನು ಕಳುಹೆ ॥ ॥ ೧೦ ॥ ಪಿತನ ನೇಮದೊಳಿಂದ್ರಜಿತು ಪವ । ನತನಯನಮೇಲಾಹವಕೆ ಬಂ । ದತಿಖತಿಯೊಳಂದಿರದೆ ಬ್ರಹ್ಮಾಸ್ತ್ರವನು ಬಿಡಲೊಡನೆ ॥ ಮತಿಯೊಳರಿದಾ ಬ್ರಹ್ಮನಸ್ತ್ರವ । ನತಿಭಕುತಿಯಿಂ ದದಕೆವಶವಾ । ಗುತವನಿಗೆ ಮೈಮರೆದು ಬಿದ್ದನು ಹನುಮನಾಹವದೆ ॥ ೧೧ ॥ ಪಿಡಿದು ಹಗ್ಗಗಳಿಂದೆ ಕಟ್ಟಿಸು । ತೊಡನೆ ತಂದೆಯಬಳಿಗೆ ನಡೆತಂ । ದಿಡಿದಸಂ

ತನದಿಂದೆ ಹನುಮಂತನನು ತೋರಿಸಲು ॥ ಕಡುಮುಳಿದು ನೋಡುತ್ತ
ದಾನವ । ರೊಡೆಯ ಕೇಳಿದನೀವೂಕಪಿ ನೀಂ । ನುಡಿವುದೆಮ್ಮೊಳಗಿಂ
ದುಸಿನ್ನಯ ಪರಿಯನೆಂದೆನುತ ॥ ೧೨ ॥ ನಾನುರಾಮನ ದೂತನಿಲ್ಲಿಗೆ ।
ಜಾನಕಿಯನೀಕ್ಷಿಸಲು ಬಂದೆನು । ದಾನವೇಂದ್ರನೆ ರಾಘವನಿಗೀವುದು
ಮಹೀಸುತೆಯ ॥ ನೀನು ಕೊಡದಿರೆ ಬಂದುಲಂಕೆಗೆ । ಭಾನುವಂಶ ಲ
ಲಾಮ ನಿನ್ನ ನಿ । ದಾನಿಸದೆ ಸಂಹಾರಮಾಡುವ ನಖಿಳಜನಸಹಿತ ॥
॥ ೧೩ ॥ ಎಂದುಪೇಳಲು ಕೇಳ್ದುರಾವಣ । ನಂದುಮುಳಿದೀ ವಾನರನ
ನೀ । ವ್ರೊಂದು ಹಾಕುವದೆಂದು ದೂತರಿಗಾಣತಿಯ ಕೊಡಲು । ಬಂ
ದು ಶೀಘ್ರದೊಳಾ ವಿಭೀಷಣ । ನೊಂದುಕೊಳ್ಳುತ ಪೇಳಿದನು ದಶ ।
ಕಂಧರನೊಡನೆ ದೂತವಧೆ ಯುದಗರ್ಹ್ಯ ಮೆಂದೆನುತ ॥ ೧೪ ॥ ಇವನ
ಬಾಲವ ಸುಡುವುದೆನ್ನುತ । ತವಕದಿಂದಸುರೇಂದ್ರ ನೇಮಿಸಿ । ದ ವಚ
ನವಕೇಳುತ್ತ ಬಂದಾ ಕಪಿಯನೆಳತಂದು ॥ ಜವದೊಳಂದಿರ ದೆಣ್ಣೆಯೊ
ಳು ನೆನೆ । ದ ವಸನಗಳನು ಸುತ್ತಿಸುಟ್ಟರು । ಪವನಜನ ಬಾಲವನು
ದೂತರು ಬಹುವಿನೋದದಲಿ ॥ ೧೫ ॥ ಪುರದಬೀದಿಗಳಲ್ಲಿ ರಾತ್ರಿಂ । ಚ
ರರಖಿಳವಾದ್ಯಗಳ ಬೊಬ್ಬೆ ಯೊ । ಳಿರದೆ ಹನುಮಂತನನು ಸುತ್ತಿಸು
ತಿರೆ ವಿನೋದದಲಿ ॥ ಧರಣಿಜಾತೆಯಕೂಡೆ ರಕ್ಕಸಿ । ಯರು ನುಡಿದರೀ
ಸಂಗತಿಯ ನತಿ । ಭರದೆ ಕೈಚಪ್ಪಾಳೆಗಳ ನಾಗಿಸುತ ಹರ್ಷದಲಿ ॥ ೧೬ ॥
ನಾನುಪತಿಯನು ಸೇವಿಸಿದ್ದರೆ । ನಾನುತಪವನು ವಿರಚಿಸಿದ್ದರೆ । ನಾನು
ಭೂಮಿಯೊಳೇಕ ಪತ್ನಿಯೆನಿಸಿರೆ ರಾಮನಿಗೆ ॥ ನೀನು ಶೀತವನಾಗಿಸ್ಸೈ
ಪವ । ಮಾನತನಯಂಗೆಂದು ನಮಿಸುತ । ಜಾನಕಿ ಬಕುತಿಯಿಂದೆ ವ
ಹ್ನಿಯ ನೈದೆಬೇಡಿದಳು ॥ ೧೭ ॥ ರಾಮನಕರುಣೆ ನನ್ನೊಳಿದ್ದರೆ ।
ಭೂಮಿಯೊಳು ರಾಮನ ಸಮಾಗಮ । ನೇಮವೆನಗುಂಟಾಗುವಂತಿರ
ಲಾಂಜನೇಯನಿಗೆ ॥ ತಾಮಸವ ನಾಗಿಸದೆನೀಂ ಬಿಡಿ । ಸೀ ಮಹಾಬಾಧೆ
ಯನೆನುತ ಪೇ । ಳ್ದಾಮಹೀಸುತೆ ಬೇಡಿದಳು ಕೈಮುಗಿದು ವಹ್ನಿಯ
ನು ॥ ೧೮ ॥ ನಾನುಹೊಂದಿರ ಲಲ್ಪಭಾಗ್ಯವೆ । ನಾನು ಸದ್ವರ್ತನೆಯೊ
ಳಿರಲಾ । ಭಾನುಸಂಭವ ನೆನ್ನದುಃಖವ ಹರಿಸುವಂತಿರಲು ॥ ನೀನು
ಶೀತವನಾಗಿಪ್ರದು ಪವ । ಮಾನ ತನಯಂಗೆನ್ನು ತಂದು ನಿ । ದಾನಿಸದೆ
ಬೇಡಿದಳು ಜಾನಕಿನಮಿಸಿ ವಹ್ನಿಯನು ॥ ೧೯ ॥ ವೀತಿಹೋತ್ರನಿಗಿದು
ತುಷ್ಟಿಯ । ಸೀ ತೆರದೊಳಾಗಿಸುವೆ ನೆನ್ನುತ । ಮಾತರಿಶ್ವನ ತನಯ
ನಂದತಿ ಕೋಪವನುತಾಳ್ದು ॥ ಭೀತಿಗೊಳ್ಳದೆ ಬಂದು ಸುಟ್ಟನು ।

ಯಾತುಧಾನರ ಘನಸದನ ಸಂ । ಘಾತವನು ತಾನಾ ವಿಭೀಷಣ ಭವನವ
ನು ಬಿಟ್ಟು ॥ ೨೦ ॥ ಉರಿಯುನಾಗಿ ಸದಗ್ನಿ ತನಗಂ । ದುರುತರದ ಶೈ
ತ್ಯವ ನೆಸಗಲು । ವರಕಪೀಶ್ವರ ನಚ್ಚರಿವಡೆದನು ಲಂಕೆಯೆಲ್ಲವನು ॥ ಉ
ರಿಸಿ ಬೂದಿಯನಾಗಿಸುತ ಕೊಂ । ದು ರಜನೀಚರರನ್ನು ಜಲಧಿಯೊ ।
ಳುರಿಯನಾರಿಸಿಕೊಂಡ ನದ್ಭುತ ತನ್ನ ಬಾಲವನು ॥ ೨೧ ॥ ಮತ್ತೆ ಕಂ
ತು ಮಹೀಸುತೆಯು ನಂ । ದುತ್ತಮೋತ್ತಮ ಭಕ್ತಿಯಿಂ ದರ । ಗುತ್ತ
ತಾನಲ್ಲಿಂದೆಬಂದಾ ಪವನನಂದನನು ॥ ಹತ್ತಿ ಬೆಟ್ಟವ ನಾಗಸಕೆ ಹಾ ।
ರುತ್ತ ಬಂದನು ಗಗನಮಾರ್ಗದೊ । ಳುತ್ತರದಕಡೆ ಜಾಂಬವಾದಿಗಳಿ
ದ್ದ ಪರ್ವತಕೆ ॥ ೨೨ ॥ ಘನಮಹೇಂದ್ರಾಚಲದ ಶಿಖರದೊ । ಳನಿಲ
ಸಂಭವ ನಿಳಿದು ಶಿರಬಾ । ಗಿ ನಮಿಸುತ ಜಾಂಬವನು ಮೊದಲಹ ವೃ
ದ್ಧಕಪಿಗಳಿಗೆ ॥ ಜನಕಜಾತೆಯು ಕಷ್ಟವನರುಹಿ । ದನುಜನಾಥನ ಪುರ
ದೊಳೆಸಗಿದು । ದನುತ್ರಿಳುಹಿ ಮಧುವನಕೆ ಬಂದನು ವಾನರರಸಹಿತ ॥
॥ ೨೩ ॥ ಮೆಸದಣಿಯೆ ವಾನರರೊಡನೆ ಮಧು । ವನುಕುಡಿದು ಬಳಿ
ಕಾ ಪವನ ನಂ । ದನನು ಮಧುವನದಿಂದೆ ಪೊರಮಡು ತಂತರಿಕ್ಷದಲಿ ॥
ಘನಜವದೊಳೈತಂದು ರಘುನಂ । ದನನ ಪದಪಂಕಜಕೆ ಶಿರಬಾ । ಗಿ
ನಮಿಸಿದನಾ ಪ್ರಸ್ರವಣ ಶೈಲದೊಳು ಕೈಮುಗಿದು ॥ ೨೪ ॥ ಶಿರವಬಾ
ಗಿಸಿ ನಮಿಸಿರಾಮನ । ಚರಣ ಕಮಲಂಗಳಿಗೊಲಿದು ತಾ । ನರುಹಿ ಸೀ
ತೆಯ ಕುಶಲವಾರ್ತೆಯ ನನಿಲಸಂಭವನು ॥ ಪರಮಸಂತಸದಿಂದೆ ಕೊ
ಟ್ಟನು । ತರಣಿವಂಶ ಲಲಾಮನಿಗಮಲ । ತರದ ಚೂಡಾಮಣಿಯನಾ
ಪ್ರಸ್ರವಣ ಶೈಲದಲಿ ॥ ೨೫ ॥ ಧರಣಿಜಾತೆಯು ದುಃಖವೆಲ್ಲವ । ನರುಹ
ಲಾ ಪವಮಾನಸುತ ನಂ । ದು ರಘುನಾಥನು ಸೀತೆಯನು ಕಂಡಂತೆ ರ
ತ್ನವನು । ಹರುಷದಿಂ ದೀಕ್ಷಿಸುತಖಿಳ ವಾ । ನರರ ಮಧ್ಯದೊಳಾಂಜ
ನೇಯನ । ಸಿರದೆಸಲೆ ಕೊಂಡಾಡಿದನು ತಲೆದಡವಿ ಹರ್ಷದಲಿ ॥ ೨೬ ॥
ಪವನಸಂಭವನಿಂದ ಕೇಳ್ದು ರ । ಘುವರನಾ ದಶಕಂಧರನ ಸಕ । ಲವಿ
ಭವಾತ್ರಿಶಯಂಗಳನು ಬಹುಕೋಪವನು ತಾಳ್ದು ॥ ರವಿತನಯ ನಪ್ಪಣೆ
ಯನಾಂತ ಕ । ಪಿವರರೆಲ್ಲರ ಸೇನೆಸಹಿತತಿ । ಜವದೊಳೈತಂದ ಸುಖದಾ
ಕಿಷ್ಕಿಂಧೆಯನುಕೂಡೆ ॥ ೨೭ ॥ ಪ್ಲವಗ ವೀರರ ಸೇನೆಸಹಿತ ರ । ಘು
ವರನಾ ಕಿಷ್ಕಿಂಧೆಯನುಳಿದು । ತವಕದಿಂದೈತಂದನಾ ದಕ್ಷಿಣ ಜಲಧಿ
ತಟಕೆ ॥ ಅವನಿಪಾಲಕ ರಾಮನೀಕ್ಷಿಸು ॥ ತವನಧಿಯ ನಚ್ಚರಿವಡೆದು
ಗಾ । ರವದೊಳಾ ಸುಗ್ರೀವನನು ಕರೆಯುಸುತಲಿಂತೆಂದ ॥ ೨೮ ಎಂ

ತುಕಪಿಗಳು ಕಡಲದಾಟುವ । ರೆಂತು ಲಂಕೆಗೆ ನಾವು ಪೋಗುವೆ । ವೆಂ
ತು ದಶಕಂಧರನ ಸಂಹರಿಸುವೆನು ಸಂಗರದಿ ॥ ಎಂತುಸೀತೆಯ ಪಡೆವೆ
ನೆಂದೆನು । ತಂತವಿಲ್ಲದೆ ರಾಮಚಂದ್ರನು । ಚಿಂತಿಸುತ ಕೇಳಿದನು
ನೀಂ ತಿಳಿಸೆನುತ ರವಿಸುತನ ॥ ೨೯ ॥ ಅನಿತರೊಳು ರಾವಣನ ಸೋದ
ರ । ನೆನಿಸುವ ವಿಭೀಷಣನು ರಘುನಂ । ದನನ ಬಳಿಗೈತಂದು ನಾಲ್ವರು
ಮಂತ್ರಿಗಳ ಸಹಿತ ॥ ಮನುಕುಲೋತ್ತಮ ನನ್ನ ರಕ್ಷಿಸು । ನಿನಗೆ ಶರ
ಣಾಗತನು ನಾನೆಂ । ದೆನುತ ರಾಮನ ಪದಕೆರಗಿದನು ಭಕ್ತಿಭಾವದಲಿ ॥
॥ ೩೦ ॥ ಪರಸಿ ಮನ್ನಿಸಿ ರಾಮನಂದತಿ । ಕರುಣೆಯಿಂದ ವಿಭೀಷಣನಿ
ಗಾ । ಶರಧಿತೀರದೊಳಿತ್ತು ಲಂಕಾರಾಜ್ಯ ಪದವಿಯನು ॥ ಹರುಷದಿಂ
ದಭಿಷೇಕವನು ತಾಂ । ವಿರಚಿಸುತ್ತವೆ ನಭಿಮತದೊಳಾ । ಶರಧಿಯನು
ಬೇಡಿದನು ದಾರಿಯ ನೀವುದೆಮಗೆನುತ ॥ ೩೧ ॥ ಜಲಧಿಪತಿ ವೈದೋ
ರದಿರೆ ರವಿ ।ಕುಲತಿಲಕನಂದೊಂದು ಶರವನು । ಮುಳಿದು ಬಿಡಲಾ ಬಾ
ಣಾವತಿಭರದಿಂದೆ ಸಾಗರದ ॥ ಜಲವ ಶೋಷಿಸಲೊಡ ನೆಸಗಿದನು ।
ನಳನುಸೇತುವ ನೈದು ದಿವಸಂ । ಗಳಲಿ ವಾರ್ಧಿಗೆ ಕಪಿಗಳ ಸಹಾಯ
ವನು ತಾಪಡೆದು ॥ ೩೨ ॥ ಸೇತುವನು ಕಂಡುತಲೆದೂಗು । ತ್ತಾ ತರಣಿ
ಕುಲತಿಲಕರಾಘವ । ನಾತಟದೊಳೀಕ್ಷಿಸಿದ ನುತ್ತಮತರವಶಕುನಗಳ ॥
ಪ್ರೀತಿಯಿಂದಲೆ ಸಕಲಕಪಿ ಸಂ । ಘಾತವನು ಮನ್ನಿಸಿ ರವಿಸುತನ ।
ಮಾತನಾಲಿಸುತಾಗ ಲಂಕೆಗೆ ಪೋಗಲನುವಾದ ॥ ೩೩ ॥ ನೂರುಗಾವುದ
ಸೇತುವನು ಕಂ । ಡಾ ರಘೂತ್ತಮ ನನುಜನೊಡನೆಯೆ । ವಿಹಾರಿದಾನಂ
ದವನು ಪೊಂದುತ ತರಣಿಸಂಭವನ ॥ ಪ್ರೇರಣೆಯೊಳನಿಲಾತ್ಮಜನ
ಭುಜ । ವೇರಿನಡೆದನು ಲಂಕೆಗಂಗದ । ನೇರಿಬಂದನು ಲಕ್ಷ್ಮಣನು ರಾ
ಘವನಪಕ್ಕದಲಿ ॥ ೩೪ ॥ ಕೆಲರುಬಂದರು ಗಗನಮಾರ್ಗದೆ । ಕೆಲರು
ತೆಪ್ಪಗಳಿಂದೆಬಂದರು । ಕೆಲರುಬಂದರು ಕಡಲೊಳೀಜುತ ರಾವಣನ
ಪುರಿಗೆ ॥ ಕೆಲರುಬಂದರು ಲಂಘಿಸುತ್ತಲೆ । ಕೆಲರುಬಂದರು ನಡೆದು ಲಂ
ಕೆಗೆ । ಕೆಲರುಬಂದರು ಕಲಕಲಾರವದಿಂದೆ ಗರ್ಜಿಸುತ ॥ ೩೫ ॥
ಪ್ಲವಗವೀರರ ಸೈನ್ಯಸಹಿತ ರ । ಘುವರನಾಲಂಕೆಯನು ಸೇರ್ದನು ।
ದಿವಿಜರಿಪು ರಾವಣನಮೇಲಾಗ್ರಹಿಸಿ ಶೀಘ್ರದಲಿ ॥ ಬವರಕುಜ್ಜುಗಿಸುತ್ತ
ನೀಲನ । ನುವರ ವಾನರಸೈನ್ಯರಕ್ಷೆಗೆ । ತವಕದಿಂದಂದಿರಿಸಿ ಲಂಕಾಪು
ರವನೀಕ್ಷಿಸಿದ ॥ ೩೬ ॥ ಬಂದುಹೊಕ್ಕನು ಲಂಕೆಯನು ರಘು । ನಂದ
ನನು ಪುರವರದ ಹೊರಗತಿ । ಚಂದವಾಗಿಹ ಶೈಲವನನದಿ ಕೂಪಸರಸಿ

ಗಳ ॥ ಅಂದವಾಗಿಹ ಸಂಪದಂಗಳ । ನಂದುನೋಡುತ ಹೊಗಳದನು ದಶ । ಕಂಧರನ ಭಾಗ್ಯಾತಿಶಯವನು ಸಲೆವಿವರಿಸುತ್ತ ॥ ೩೭ ॥ ಬಳಿಕ ರಾಘವನಾಕಪೀಂದ್ರರ । ಬಲವನೊಡಗೊಂಡಂದು ಬಂದನು । ತಳುವದೆ ಸುವೇಲಾಚಲದ ತಪ್ಪಲಿನಹತ್ತಿರಕೆ ॥ ತಿಳಿದು ಯುದ್ಧ ಚಮತ್ಕೃತಿಯ ನತಿ । ಬಲಯುತರೆನಿಪ ವಾನರರನು ಜ । ಗಳಕೆ ತಾನಿರಿಸಿದನು ಲಂಕೆಯ ನಾಲ್ಕುದೆಸೆಗಳಲಿ ॥ ೩೮ ॥ ತನ್ನಪಡೆಯನು ನೋಡಬೇಕೆಂ । ದೆನ್ನುತೈತಂದ ಶುಕನಿಗೆ ಸಂ । ಪನ್ನಮತಿ ರಾಘವನು ಹಿಂಸೆಯನಂದು ಮಾಡಿಸದೆ ॥ ತನ್ನ ಸೈನ್ಯವನೆಲ್ಲ ಕಾಣಿಸು । ತಿನ್ನು ಹೋಗೆಂದವನ ಕಳುಹಿದ । ನುನ್ನತ ಸುವೇಲಾಚಲದ ಕಿಬ್ಬಿಯೊಳು ನಲವಿಂದೆ ॥ ೩೯ ॥ ಗರುಡನಾಕಾರದವೊಲಾ ರಘು । ವರನು ತನ್ನಯಪಡೆಯನಿಲ್ಲಿಸಿ । ವರ ವಿಭೀಷಣ ತರಣಿನಂದನ ಲಕ್ಷ್ಮಣರಸಹಿತ ॥ ಭರದೊಳರದೆ ಸುವೇಲಗಿರಿಯ ಶಿ । ಖರವನಾರೋಹಿಸುವ ರೀತಿಯ । ನರುಹಿದನು ಕಾಳಗವನೆಸಗುವ ಕೌತುಕದೊಳಂದು ॥ ೪೦ ॥

ಇಂತು ಇಪ್ಪತ್ತೊಂದನೆಯ ಅಧ್ಯಾಯ ಸಂಪೂರ್ಣವು.
ಪದ್ಯಗಳು ೧೦೭.

ಇಪ್ಪತ್ತೆರಡನೆಯ ಅಧ್ಯಾಯ.

ಸೂಚನೆ ॥ ಪತಿಯ ಮಾಯಾಶಿರವ ನೀಕ್ಷಿಸು ।
ತ ತಡೆಯದೆ ದುಃಖವನು ಧರಣೀ ।
ಸುತೆ ವಿಲಾಪಿಸಿ ಮರುಗುತಿದ್ದಳು ಭಯದೆನಡುನಡುಗಿ ॥

ಜಲನಿಧಿಗೆ ಸೇತುವನುಕಟ್ಟಿ ಸ । ಕಲ ಕಪೀಂದ್ರರ ಸೈನ್ಯಸಹಿತವ । ಹಿಲದೊಳು ಸುವೇಲಾಚಲದ ಕಿಬ್ಬಿಯಸಮೀಪದಲಿ ॥ ಇಳಿಸಿ ನಿಜಸೈನ್ಯವನು ಸಂಗರ । ಕೆಳಸಿನಿಂದಿಹ ರಾಮನನು ತಾ । ತಿಳಿದನಾದಶಶಿರನು ಶುಕಸಾರಣರ ಮುಖದಿಂದ ॥ ೧ ॥ ಸಾರಣನಮಾತಿಂದೆ ಲಂಕೆಗೆ । ವೀರರಾಮನು ಬಂದರೀತಿಯ । ನಾ ರಜನಿಚರನಾಥನಾಲಿಸಿ ತಾಳ್ದುಭೀತಿಯನು ॥ ಕ್ರೂರಬುದ್ಧಿಯೊಳೊಂದು ಮಾಯವ । ನಾರುಮರಿಯದತೆರದೆಯೋಚಿಸಿ । ಘೋರವಿದ್ಯುಜ್ಜಿಹ್ವನನು ಕರೆಯಿಸುತಲಿಂತೆಂದ ॥ ೨ ॥ ನೀನು ರಾಮನಶಿರದವೋಲು ನಿ । ದಾನಿಸದೆ ತಲೆಯೊಂದನಾಗಿಸಿ । ದಾನ

ವರು ಸಂಹರಿಸಿದರು ರಘುನಂದನನನೆನುತ ॥ ಜಾನಕಿಯು ತಿಳಿವಂತೆ ನನಗನು | ಮಾನಿಸದೆ ನೀಂ ಮನದೆ ತೋರಿಸು | ನಾನುಪೋಪೆನಶೋಕ ವನಕೆನುತ ಕಳುಹಿಸಿದ ॥ ೩ ॥ ಒಡನೆ ವಿದ್ಯುಜ್ಜಿಹ್ವನೈತಂ | ದೊಡೆಯ ನಾಣತ್ತಿಯಂತೆ ಸಂತಸ | ಮಡೆದೆಸಗಿ ಕಾರ್ಮ್ಮುಕಶಿರಂಗಳ ನೆರಡನತಿ ಜವದೆ ॥ ಪಿಡಿದುಕೊಂಡೈತಂದು ರಾವಣ | ನಡಿಗೆರಗಿ ಪೇಳಿದನು ರಾಮನು | ಮಡಿದನು ದನುಜರಿಂದೆ ನೋಡೈ ಶಿರಧನುಗಳೆನುತ ॥ ೪ ॥ ಜನಕಜಾತೆಗೆ ಕಾರ್ಮ್ಮುಕಶಿರಗ | ಳನು ಮುದದೆ ತೋರಿಸುತ ರಘುನಂ | ದನನು ಸತ್ತನು ದನುಜರಿಂದೆಂದಸುರಪತಿ ನುಡಿಯೆ ॥ ಘನಕುಸುಮ ಗಂಧಾಕ್ಷತೆಗಳಿಂ | ದ ನೆರೆಶೋಭಿಸ ಧನುವನೀಕ್ಷಿಸು | ತಿನಯನ ಶಿರವ ಪಿಡಿದು ಗೋಳಾಡಿದಳು ವೈದೇಹಿ ॥ ೫ ॥ ನನ್ನ ಗಂಡನಳಿದನೆ ಹಾ ನನ | ಗಿನ್ನು ವೈಧವ್ಯ ಮೊದಗಿದುದೇ | ನಿನ್ನ ಕೋರಿಕೆ ಸಫಲಮಾದುದೆ ಕೈಕೆ ತಾನಿಂದು ॥ ತನ್ನ ತನಯನ ಮರಣವನು ಕಂ | ಡಿನ್ನು ಕೌಸಲ್ಯೆ ಬದುಕುವಳೇ | ತೆನ್ನುತಂಮರೆ ಶೋಕಿಸಿದಳಾ ಸೀತೆರೋದಿಸುತ ॥ ೬ ॥ ನಿನಗೆ ರಾಘವ ನಾವತೊಂದರೆ | ಯು ನೆಸಗಿವನೆಲೆ ಕೈಕೆ ನಿನ್ನಿಂ | ದಿನ ಕುಲವೆ ನಾಶವನು ಹೊಂದಿದುದಲ್ತೆ ಭೂಮಿಯಲಿ ॥ ವನಕೆ ಬಂದೆವು ನಾವು ಮೂವರು | ಮನುಕುಲೋತ್ತಮ ದಶರಥನು ಸ ತ್ತನಸುರೇಂ ದ್ರನ ಬಂಧನಕೆನಾನಿಲ್ಲಿ ಸಿಕ್ಕಿದೆನು ॥ ೭ ॥ ಎನುತ ಸೀತೆ ಮುಹೂರ್ತ ಕಾಲದ ॥ ತನಕ ಮೂರ್ಛೆಯನೈದಿ ಬಳಿಕಾ | ವನದೊಳಂತಿರದೊಡನೆ ಚೇತರಿಸುತ್ತ ಬಿಸುಸುಯ್ದು ॥ ಘನತರದಲಂಕೃತಿಯ ಮಸ್ತಕ | ಮನಿರ ದಾಘ್ರಾಣಿಸಿಯೆ ಕಾರ್ಮ್ಮುಕ | ಮನವಲೋಕಿಸುತಂದು ಗೋಳಾಡಿದಳು ಸೈರಿಸದೆ ॥ ೮ ॥ ಮುರಿದಬಾಳೆಯ ಗಿಡದತೆರದಿಂ | ದೊರಗಿದುಃಖವ ನಾಂತು ಗಂಡನ | ಮರಣವೆ ಮೊದಲಸಾವೆನುತ ಪೇಳುವರಬಲೆಯರಿಗೆ ॥ ಪಿರಿದೆನಿಪ ಶೋಕಾಬ್ಧಿಯೊಳು ಮುಳು | ಗಿರುವೆನನ್ನನು ಮೇಲಕೆತ್ತಲು | ಭರದೊಳೈತಂದೆನ್ನ ಗಂಡನಳಿದನೆ ತಾನಿಂದು ॥ ೯ ॥ ಜ್ಞಾನಿಗಳು ನುಡಿದಿದ್ದರು ಮೊದಲು | ನೀನು ದೀರ್ಘಾಯುಷ್ಯನೆನುತಿಂ | ದಾನುಡಿಯು ಸುಳ್ಳಾದುದಲ್ಲವೆ ನನ್ನ ಬಿಟ್ಟೀಗ ॥ ನೀನು ಭೂದೇವಿಯನು ಸಲೆ ಸ | ನ್ಮಾನಿಸುತಾಲಿಂಗಿಸಿರುವೆ ಮ | ಹಾನುರಾಗದೊಳೆಂದು ಜಾನಕಿ ದುಃಖಿಸಿದಳಲ್ಲಿ ॥ ೧೦ ॥ ತಂದೆ ದಶರಥನೊಡನೆ ಕೂಡಿದೆ | ಹಿಂದೆ ಮರಣವನಾಂತ ಪಿತೃಗಳೊ | ಳಂದು ಸೇರಿದೆಯಲ್ತೆ ನೀನಳಿದಮರಲೋಕದಲಿ ॥ ಸಂದಸುಕೃತಗಳನ್ನು ವಿರಚಿಸಿ | ಚಂದದಿಂದುರೆ ಮೆರೆವತಾರಕ |

ದಂವದೆ ನೆರೆವಿರಾಜಿಸುತ್ತಿಹೆ ಗಗನಮಂಡಲದಿ ‖ ೧೧ ‖ ಹುಡುಗಿಯಾಗಿ
ಹಕಾಲದಿಂದಲು । ಬಿಡದೆ ನಿನ್ನನುಸೇರಿ ಸಂತತ । ಅಡಿಗಡಿಗೆ ನಿನ್ನನತಿ
ಭಕ್ತಿಯೊಳ್ಪೊರೆದೆ ಸೇವಿಸುತ ‖ ನಡೆಮ ಸಹಧರ್ಮಿಣಿಯೆನಿಪನ । ನ್ನೊ
ಡನೆ ನೀನೇಕಿಂದು ಕರುಣಿಸಿ । ನುಡಿವುದಿಲ್ಲವದೇಕೆ ನನ್ನನು ನೀನು
ನೋಡದಿಪೆ ‖ ೧೨ ‖ ಮದುವೆಕಾಲದೊಳೆನ್ನ ಮುಂಗಡೆ । ವಿದಿತನೀತಿ
ಪಥವನು ತಪ್ಪದ । ನುದಿನ ನಿನ್ನೊಡನಾಂ ಚರಿಪೆನೆಂದೊರೆದನುಡಿಗಳ
ನು ‖ ಹೃದಯದೊಳು ನೆನೆಯುತ್ತ ನನ್ನನು । ಪದೆದುಸಗ್ಗಕೆ ಕರೆದು
ಕೊಂಡ್ಯೆ । ದದಿರುತಿಹೆ ನೀನಿಂದು ನನಗಿನ್ನೇನುಗತಿಯುಂದೆ ‖ ೧೩ ‖
ಹಗಲಿರುಳು ದುಃಖಿಸುತ ನನ್ನಬ । ಳಗವಕಾಣದೆ ಪರವಶಕೆ ಸಿ । ಕ್ಕಿ
ಗತಗಡನೆಯೆ ನಡುಗುವೆನ್ನನುಬಿಟ್ಟು ನೀನಿಂದು ‖ ಸೊಗಸಿನಿಂದೀಲೋ
ಕವನು ತೊರೆ । ದು ಗಮಿಸಬಹುದೆ ನಾಕಲೋಕಕೆ । ಜಗದೊಳಸ್ಮ
ರೆನಗೆ ಗತಿಯೆಂದತ್ತಳಾಸೀತೆ ‖ ೧೪ ‖ ಮಂಗಳಕರಮೆನಿಸುತ ನಿರತ
ವು । ಕಂಗೊಳಿಸುವೆನ್ನ ಘನತರದಂ । ಗಂಗಳಂದಡಿಗಡಿಗೆ ನಾನಾಲಿಂಗಿ
ಸಿದನಿನ್ನ ‖ ಅಂಗವನು ತಿನ್ನುವುವು ಕೂಗುತ । ಸಂಗಳಿಸಿ ಗೋಮಾ
ಯು ರಣಗೃ । ಧ್ರಂಗಳೆಂದುರೆ ದುಃಖಿಸಿದಳಾಸೀತೆ ವನದೊಳಗೆ ‖ ೧೫ ‖
ಅಗ್ನಿಹೋತ್ರಗಳಂತೆ ನಿನಗಿಂ । ದಗ್ನಿಸಂಸ್ಕಾರ ನಡಿಯದಿಪುದೆ ! ಭಗ್ನ
ವಾದುದೆ ನನ್ನ ಕೋರಿಕೆ ಧಾರಿಣಿಯೊಳಿಂದು ‖ ಅಗ್ನಿಯೊಳು ನಿನ್ನೊಡನೆ
ಬೀಳುತ । ಮಗ್ನಳಾಗದೆಪೋದೆ ಚಿತಿಯೊಳು । ಲಗ್ನಕಾಲದೊಳಾದಸ
ಖತನ ಮಿಂದಳಿದುದಲ್ತೆ ‖ ೧೬ ‖ ವನಕೆಬಂದೆವು ನಾವುಮೂವರು ।
ನಿನಗೆಬಂದುದು ಸಾವು ನಾನೀ । ದನುಜನಾಥ ನಧೀನವಾದೆನು ನಮ್ಮನ
ಗಲುತ್ತ ‖ ಘನಮನೋವ್ಯಥೆಯಿಂದ ಲಕ್ಷ್ಮಣ ‖ ನು ನಿಜನಗರಿಗೆ ಪೋಗ
ಲಿಂದಾ । ತನನು ಕೇಳ್ವಳು ತನಯನಕ್ಷೇಮವನು ಕೌಸಲ್ಯೆ ‖ ೧೭ ‖
ದನುಜರಿಂದಲೆ ನೀನಳಿದುದನು । ದನುಜನಾಥ ನಧೀನವಾದೆ । ನ್ನನು
ತಿಳುಹಲಾ ಲಕ್ಷ್ಮಣನು ಕೌಸಲ್ಯೆರೋದಿಸುತ ‖ ಘನತರದ ದುಃಖವನು
ಪೊಂದುತ । ತನುವನುಳಿದ್ಯೆದುವಳು ಮರಣವ । ನೆನಗೆ ಬಾರದುಸಾವ
ದೇಪೆನೆನುತ್ತ ಮರುಗಿದಳು ‖ ೧೮ ‖ ತರಣಿನಂದನನಿಂದೆ ಸಖ್ಯವ ।
ವಿರಚಿಸುತ ವಾನರರಸಹಿತೀ । ಶರಧಿಯನುದಾಟುತ್ತ ಲಂಕಾಪುರಿಗೆ ನಡೆ
ತಂದು ‖ ಭರದೆ ನನ್ನೊಡಗೊಂಡಯೋಧ್ಯೆಗೆ । ತೆರಳಬೇಕೆಂದಿದ್ದ ರಾ
ಮನು । ಧುರದೊಳೆನ್ನ ನಿಮಿತ್ತವಾಗಿಯೆ ಮಡಿದನೀಪರಿದಿ ‖ ೧೯ ‖
ದಶಶಿರನೆ ಕೇಳ್ರಘುವರಂಗೀ । ವಸುಧೆಯೊಳು ನಾಂ ಮೃತ್ಯುವಾಗಿಯೆ ।

ದಶರಥನ ಮಂದಿರವಸೇರಿದೆ ನಿಂದುನೀನಿರದೆ ॥ ಎಸೆವ ರಘುನಂದನನ
ಶಿರಕೆ । ನ್ನ ಶಿರವನು ದೇಹಕ್ಕೆದೇಹವ । ನೊಸೆದುಸೇರಿಸಿ ಬೀಳಿಸೆನ್ನನು
ರಾಘವನಮೇಲೆ ॥ ೨೦ ॥ ಪತಿಯೊಡನೆ ವಹ್ನಿಯೊಳು ಸಾನೆ । ನ್ನ
ತನುವನು ಬೇಯಿಸಲು ನನಗೀ । ಕ್ಷಿತಿಯೊಳದು ಮಂಗಳಕರವೆನಿಪ್ಪು
ದಲ್ತೆ ಯೋಚಿಸಲು ॥ ಪತಿಯುಸದ್ಗತಿಯನ್ನು ಹೊಂದುವೆ । ನು ತಳು
ವದೆ ನಾನೀಮುಹೂರ್ತದೊ । ಳು ತನುವನುನೀಗುತ್ತ ಕೇಳೆಂದತ್ತಳ
ವನಿಜೆಯು ॥ ೨೧ ॥ ಪತಿಯೆದೈವವು ಪತಿಯೆಸದ್ಗತಿ । ಪತಿಯೆ ಸತ್ಯವು
ಪತಿಯೆ ಧರ್ಮವು । ಪತಿಯೆ ಸತಿಯರಿಗುತ್ತಮತರದ ಲೋಕಗಳೆನಿಪ್ಪವು ।
ಪತಿಯೆ ದಮೆಯು ಕ್ಷಮೆಯು ಪತಿಯೆ ವ । ನಿತೆಯರಿಗಹಿಂಸಾಗುಣವು
ಕೇ । ಳ್ಪತಿಯೆ ಭೋಗತ್ಯಾಗ ಪುಣ್ಯಗಳೆನಿಸಿಕೊಂಡಿಹನು ॥ ೨೨ ॥
ಎನುತಕೇಳಿಹೆ ನೋಡಲಿಂ ದಿನ । ಯನನು ಬಿಟ್ಟೆನಗಾವಗತಿಯುಂ । ಟೆ
ನುತ ಗಂಡನ ಶಿರಶರಾಸನಗಳನು ನೆರೆನೋಡಿ ॥ ಜನಕನಂದನೆ ರೋದಿ
ಸಿದಳಾ । ವನದಮಧ್ಯದೊಳಂದು ರಘುನಂ । ದನನ ಸಾವನುಕೇಳ್ದು
ಸೈರಿಸದತ್ತಮನದಲ್ಲಿ ॥ ೨೩ ॥ ದನುಜನಾಥನೆ ನಿನ್ನದರ್ಶನ । ಕೆನುತ
ಕಾದಿಹರಖಿಳರಾಕ್ಷಸ । ರೆನುತ ಸೇವಕನೊಬ್ಬ ನೈತಂದೆರಗಿಬಿನ್ನವಿಸೆ ॥
ಮನವನುಳ ದತ್ಯಾತುರದೊಳಂ । ದು ನಡೆತಂದನು ಸಭೆಗಮಾತ್ಯರೊ ।
ಡನಸುರೇಂದ್ರನು ಯುದ್ಧದಾಲೋಚನೆಯನಾಗಿಸಲು ॥ ೨೪ ॥ ಚರನ
ಮಾತನುಕೇಳ್ದು ದಶಕಂ । ಧರನು ಸೇವಕರೊಡನೆ ನಿಜಮಂ । ದಿರಕೆ
ತೆರಳಿದಬಳಿಕ ಜಾನಕಿನೋಡುತಿರಲಂದು ॥ ಶಿರಶರಾಸನ ಗಳೆರಡಲ್ಲಿಯೆ ।
ಭರದಿಕಾಣದೆ ಮಾಯವಾದವು । ಧರಣಿಜಾತೆಗೆ ವಿಸ್ಮಯವನಾಗಿಸುತ ವನ
ದೊಳಗೆ ॥ ೨೫ ॥ ಈತೆರದ ಮೋಹವನು ಪಡೆದಾ । ಸೀತೆಯನುನೋ
ಡುತ ಸರಮೆ ಸಂ । ಪ್ರೀತಿಯಿಂದಲೆ ಪೇಳಿದಳು ಶೀಘ್ರದೊಳು ನಡೆತಂ
ದು ॥ ಸೀತೆಕೇಳೆಲೆ ತಾಯೆ ನೀನಿಂ । ದೇತಕೆ ಮನದೊಳಂತು ನೋ
ಯುವೆ । ಭೀತಿಯನುಬಿಡು ರಾಮನಳಿಯದೆ ಕುಶಲವಾಗಿಹನು ॥ ೨೬ ॥
ಅಮ್ಮ ಜಾನಕಿ ಕೇಳಸುರಪತಿ । ಸುಮ್ಮನೀತೆರದಿಂದೆ ಹೆದರಿಸಿ । ನಮ್ಮ
ಮುಂದೀವನದೊಳಗೆ ಮಾಯೆಯನುಕಲ್ಪಿಸಿದ ॥ ತಮ್ಮನೊಡನಾ ರಾಮ
ಚಂದ್ರನು । ನೆಮ್ಮದಿಯೊಳಿಹ ನೆನ್ನಮಾತನು । ನೆಮ್ಮಿನೀನಿರುಭಯ
ಪಡದೆ ಯಂದರುಹಿದಳುಸರಮೆ ॥ ೨೭ ॥ ಮರಸುವೇಲಾಚಲದ ಕಿಬ್ಬ
ಯೊ । ಳುರವಣಿಸಿ ನಿಂದಿಹನು ದಶಕಂ । ಧರನ ಸಂಗರಕೆನುತ ವಾ
ನರರೊಡನೆ ರಾಘವನು ॥ ಹರುಷದಿಂದಿಹ ನಾರಘುವರನು । ಧರೆಯೊ

ಳಾತನ ತಮ್ಮ ಲಕ್ಷ್ಮಣ । ನಿರುವನು ಕ್ಷೇಮದಲಿ ರಾಮನನೊಲಿದು ಸೇ
ವಿಸುತ ‖ ೨೮ ‖ ಕ್ಷೇಮದಿಂದಿಹ ರಖಿಳವಾನರ । ರೀಮಹಿಯೊಳಾ
ತರಣಿಸುತನು । ಕ್ಷೇಮವಾಗಿಹ ನೆನ್ನ ಮಾತನು ಕೇಳು ಸತ್ಯವಿದು ‖
ಭೂಮಿಸುತೆ ನಿನಗಾಗಿ ನನ್ನ । ಕ್ಷೇಮವನು ನೋಡುವವಳಲ್ಲವು ।
ನೇಮದಿಂದಾವವಿಧ ಕಷ್ಟವನಾದರು ಸಹಿಸುವೆ ‖ ೨೯ ‖ ಜಾನಕಿ
ಯೆ ಕೇಳು ನಿನಗೋಸುಗ । ನಾನುಸಾಯಲು ಸಿದ್ಧವಾಗಿಹೆ । ನೀನೆ
ಲದೊಳಿಂದಿದನು ನಿಶ್ಚಯವೆಂದು ತಿಳಿನೀನು ‖ ದಾನವೇಂದ್ರನು ಮಂ
ತ್ರಿಗಳೊಡನೆ । ತಾನು ರಾಮನಮೇಲೆ ಕಾರ್ಯವಿ । ಧಾನವನು ಯೋ
ಚಿಸುತ ಸಭೆಯಲಿ ಕುಳಿತುಕೊಂಡಿಹನು ‖ ೩೦ ‖ ದನುಜನಾಥನು
ಯುದ್ಧಸನ್ನ । ದ್ಧನೆನಿಸಿ ನಗರದಿಂದೆ ಪೊರಮಡು । ವನು ಮಹೀಸುತೆ
ಕದನ ಕೋಲಾಹಲ ನಿನಾದವನು ‖ ಮನವಿರಿಸಿನೀಂ ಕೇಳು ರಘುನಂ ।
ದನನು ದಶಕಂಠನವಧಿಸಿ ನಿ । ನ್ನನು ಕರೆದುಕೊಂಡೊಯ್ವ ನಾತನ
ಪುರಕೆಶೀಘ್ರದಲಿ ‖ ೩೧ ‖ ನಿನ್ನ ದುಃಖವುತೀರಿದುದು ಕೇ । ಳಿನ್ನು ನೀ
ನು ಪತಿಯನುಸೇರುವೆ । ನಿನ್ನಗಂಡನಕೂಡೆ ಸೌಖ್ಯಂಗಳನು ಪಡೆಯು
ತ್ತ ‖ ಸನ್ನುತವೆನಿಪ ಯಜ್ಞಯಾಗಗ । ಳನ್ನು ಮಾಡುವೆ ಪತಿಸಹಿತ
ಕೇ । ಳೆನ್ನ ಮಾತನೆನುತ್ತ ಸೀತೆಗೆಪೇಳ್ದಳಾಸರಮೆ ‖ ೩೨ ‖ ಸರಮೆ
ಪೇಳಿದ ಮಾತನಾಲಿಸಿ । ಧರಣಿನಂದನೆ ಸಂತಸವನಾಂ । ತಿರದೆ ಮನ್ನಿಸಿ
ಕೈವಿಡಿದು ಕೂಡಿಸುತಲುಪಚರಿಸಿ ‖ ಸರಮೆ ಕೇಳೆನ್ನಲ್ಲಿ ನಿನಗತಿ । ಕ
ರುಣೆಯಿದ್ದರೆ ದನುಜನಾಥನ । ಪರಿಯನರಿಯುತೆ ನನಗೆತಿಳುಹಿಸೆನುತ್ತ
ಪೇಳಿದಳು ‖ ೩೩ ‖ ಆಗಬಹುದೆಂದಾ ಸರಮೆಯನು । ರಾಗದಿಂದೆ ಮ
ಹೀಸುತೆಗೆ ನುಡಿ । ದಾಗಳಾವನದಿಂದೆ ಬಂದಾರಾವಣನಬಳಿಗೆ ‖ ಪೋಗಿ
ತನ್ನನು ತಿಳಿಯದಂತಿರೆ ‖ ಬೇಗ ದನುಜೇಶ್ವರನ ಯುದ್ಧೋ । ದ್ಯೋ
ಗವೆಲ್ಲವ ನರಿತುಬಂದಳಶೋಕವನಕಾಗಿ ‖ ೩೪ ‖ ಬಂದಶೋಕವನಕ್ಕೆ
ಸೀತೆಯು । ಮುಂದೆನಿಲ್ಲಲು ಸರಮೆಯನು ಸಾ । ನಂದದಿಂ ಕಂಡವಳ
ಮನ್ನಿಸಿ ಕೆಲದೆಕೂಡಿಸುತ ‖ ಇಂದು ನೀನೇನೇನನರಿತೈ । ತಂದೆ ತಾಯೆ
ಕರುಣಿಸಿತಿಳಿಸೆನ । ಗೆಂದುಕೇಳಲು ಸರಮೆಪೇಳಿದಳೊಲಿದು ಜಾನಕಿಗೆ ‖
‖ ೩೫ ‖ ಜನಕನಂದನೆ ಕೇಳು ರಘುನಾ । ಥನಿಗೆ ನಿನ್ನನು ಕೊಡುವು
ದೆನ್ನುತ । ದನುಜನಾಥಂಗರುಹೆ ಪಲತೆರದಿಂದೆ ಮಂತ್ರಿಗಳು ‖ ಮನಕೆ
ತಾರದೆ ಕೋಪಿದರು ಪೇ । ಳ್ದ ನುಡಿಗಳನಾ ದಶಶಿರನು ರಾ । ಮನೊ
ಳು ಯುದ್ಧಕೆ ಸಿದ್ಧವಾಗಿಹನವನ ಬಲಸಹಿತ ‖ ೩೬ ‖ ಪುರದನಾಲ್ದೆಸೆ

ಗಳಲಿ ಕಾಳಗ । ಕುರವಣಿಸಿ ನಿಲ್ಲುವುದೆನುತ ದಶ । ಶಿರನು ಸೇನಾಪತಿ ಗಳಿಗೆ ತಾನಪ್ಪಣೆಯಕೊಡಲು ॥ ಭರದೊಳೆಲ್ಲರು ಕೋಪಿಸುತ ವಾ । ನರರೊಡನೆ ಸಂಗರಕೆ ಸನ್ನ । ದ್ಧರೆನಿಸುತ ಚತುರಂಗಬಲಸಹಿತೀಗ ಹೊರಡುವರು ॥ ೩೭ ॥ ಮುಂದೆಭೀಕರವೆನಿಪ ಯುದ್ಧದೊ । ಳಂದಗೆ ಟ್ಟಳಿವರು ದನುಜರೆನು । ತಿಂದು ನಂಬಿಕೆಯಾಗಿಹುದೆನಗೆ ಜಾನಕಿಯೆ ಕೇಳು ॥ ನೊಂದು ಬಾಂಧವರೊಡನೆ ರಾಘವ । ನಿಂದೆ ದಶಕಂಧರನು ಸಾಯುವ । ನೆಂದುತಿಳಿ ಲಯವಹುದು ಲಂಕಾಪುರವುನಿಜವಾಗಿ ॥ ೩೮॥ ತಾಯೆ ಕರುಣಿಸಿಕೇಳು ಬಂಧುನಿ । ಕಾಯಸಹಿತೀ ದಶಶಿರನ ರಘು । ರಾಯನು ವಧಿಸಿ ನಿನ್ನ ಕರೆದೊಯ್ಯುವನು ಶೀಘ್ರದಲಿ ॥ ವಾಯುವೇಗ ದೊಳೀ ನಗರದಿಂ । ದಾಯುಯೋಧ್ಯೆಗೆ ಪೋಗುತಿಹನೀ । ಮಾಯೆಯು ನು ನೀಂ ತಿಳಿಯದೇತಕೆ ಬರಿದೆದುಃಖಿಸುವೆ ॥ ೩೯ ॥ ನಿನಗೆ ಒಳ್ಳೆಯ ದಾಗವುದು ಮೇ । ದಿನಿಯಣುಗಿ ಕೇಳೆನ್ನ ಮಾತುಗ । ಳನು ನಿಜವೆ ನುತನಂಬು ಸಂದೇಹವನುಳಿದು ನೀನು ॥ ದಿನಮಣಿಗೆ ನೀಂ ಭಕುತಿ ಯಿಂದೆರ । ಗು ನಿನಗಾತನು ಶುಭವನೀಯುವ । ನೆನುತಸೀತೆಗೆ ಪೇಳ್ದ ಳ್ಳೊದಳು ಸರಮೆತನ್ನೆಡೆಗೆ ॥ ೪೦ ॥ ಬಳಿಕಜಾನಕಿ ದುಃಖವನು ತಾ । ನುಳಿದು ರಾಮನ ಚರಣಕಮಲಂ । ಗಳನು ತನ್ನಯಮನದೆ ಜಾನಿಸು ತಾವನದ ನಡುವೆ ॥ ಬಳಸಿತನ್ನನು ಭೀತಿವಡಿಸುವ । ಖಿಳ ನಿಶಾಚರ ವನಿತೆಯರ ನುಡಿ । ಗಳನು ಕೇಳುತ ನೋಡುತಿದ್ದಳು ರಾವನಾ ಗಮವ ॥ ೪೧ ॥

ಇಂತು ಇಪ್ಪತ್ತೆರಡನೆಯ ಅಧ್ಯಾಯ ಸಂಪೂರ್ಣವು.
ಪದ್ಯಗಳು ೧೧೧೨.

ಇಪ್ಪತ್ತಮೂರನೆಯ ಅಧ್ಯಾಯ.

ಸೂಚನೆ॥ ಸೇರಿಲಂಕಾಪುರವ ನಾಜಿಯೊ ।
ಳಾ ರಜನಿಚರರೊಡನೆ ಕಾದು ।
ತ್ತಾ ರಘುವರನು ಮೂರ್ಛೆಹೋದನು ಸುರಪಜಿತುವಿಂದ ॥

ಅತ್ತಲಿಂತಿರಲಾ ರಘೂದ್ವಹ । ನಿತ್ತ ಖಿಳವಾನರರ ಸಹಿತಲಿ । ರು ತ್ತ ಮೆರೆವಸುವೇಲಗಿರಿಯ ಸಮೀಪದೊಳು ತಾನು ॥ ಚಿತ್ತರದಕಪಿಸೈ

ಸ್ಯವನು ನೋ । ಡುತ್ತ ದಶಕಂಧರ ನನುಜನನು । ಪತ್ತಿರಕೆಬರಮಾ
ಡಿಸುತ ಪೇಳಿದನು ವೈದಡವಿ ॥ ೧ ॥ ದನುಜವಲ್ಲಭ ಕೇಳು ದಶಕಂ । ಠ
ನನು ಸಂಹರಿಸುವುದಕಾಗಿಯೆ । ಘನಜವದೊಳೀ ಲಂಕೆಗೆತೆರಳಬೇಕು
ರಾವಣನ ॥ ಮನೆಯುನಾತನ ಪಟ್ಟಣವನಿಂ । ದು ನೆರೆಪರಿಕಿಸಬೇಕೆನು
ತೊರೆದು । ಘನಸುವೇಲಾಚಲದ ಸಾನುವನೇರಿದನು ಕೂಡೆ ॥ ೨ ॥ ಒಡ
ನೆಲಕ್ಷ್ಮಣ ಹನುಮವಾನರ । ರೊಡೆಯು ಸುಗ್ರೀವಾಂಗದ ಶರಭ ।
ಕಡುಗಲಿಗವಯ ಗಂಧಮಾದನ ಮುಖ್ಯಸೈನಿಕರು ॥ ಕಡುಜವದೊಳಾ
ರಾಘವನ ಹಿಂ । ಗಡೆಯೊಳೇರಿದರಾ ಗಿರೀಂದ್ರದ । ನಡುವೆರಂಜಿಪತ
ಪ್ಪಲನು ಕಲಕಲನಿನಾದದಲಿ ॥ ೩ ॥ ಬಳಿಕನೋಡಿದರಾ ತ್ರಿಕೂಟಾ । ಚಲ
ದ ಶೃಂಗದೊಳನವರತ ಕಂ । ಗೊಳಿಪ ಲಂಕೆಯನಖಿಳ ವಾನರವೀರ
ರೈತಂದು ॥ ಹೊಸವಸೌಧಗಳಿಂದೆ ಸಲೆಥಳ । ಥಳಿಪ ಬೀದಿಗಳಿಂದೆಸೆವ
ಬಾ । ಗಿಲುಗಳಿಂದಾ ಲಂಕೆಕಾಣಿಸಿತಂದು ಕಪಿಗಳಿಗೆ ॥ ೪ ॥ ವನಗಿರಿ
ನದೀ ಕೂಪಗೋಪುರ । ಘನಪತಾಕೆ ವಿಮಾನ ಸಚ್ಛ । ತ್ರಸುತಚಾಮ
ರ ಮಕರತೋರಣ ಸಿಂಗುರಿಗಳಿಂದ ॥ ಅನುದಿನವೆಸೆವ ಲಂಕೆಯನುಬಂ ।
ದು ನೆರೆನೋಡಿದ ರಖಿಳವಾನರ । ರಿನಕುಲೇಂದ್ರನು ಕಂಡು ಲಂಕೆಯ
ನಾಂತನಚ್ಚರಿಯ ॥ ೫ ॥ ಎರಡುಗಾವುದದಗಲ ದಿಂದುರೆ । ಮೆರೆವವಿನು
ತ ಸುವೇಲಗಿರಿಯ ಶಿ । ಖರವನಾರಘುವರನು ಹತ್ತಿದ ನಖಿಳಬಲಸಹಿತ ॥
ಭರದೊಳಂದಿನದಾತ್ರಿಕೂಟ ಶಿ । ಖರದಗೋಪುರದೊಳು ಕುಳಿತುಕೊಂ ।
ಡಿರುವ ದಶಕಂಠನನು ಕಂಡನು ತನ್ನಮುಂದುಗಡೆ ॥ ೬ ॥ ಧರಿಸಿ ರತ್ನಾಭ
ರಣಗಳ ಕೇ । ಸರಿಸುಗಂಧವ ನಂಗದಲ್ಲಿ ಸ । ವರಿಕೊಳುತ ಪೀತಾಂಬ
ರವನಾಚ್ಛಾದಿಸುತ ನಲಿದು ॥ ಮೆರೆವಸತ್ತಿಗೆಯನು ಹಿಡಿಸಿಕೊಂ । ಡೆರಡು
ಚಾಮರಗಳನು ಬೀಸುತಿ । ಹ ರಮಣಿಯರಿಂದೆಸೆವ ರಾವಣನನ್ನು
ನೋಡಿದನು ॥ ೭ ॥ ತರಣಿಸುತ ಸುಗ್ರೀವನಾ ದಶ । ಶಿರನಕಂಡತಿಕೋ
ಪವನು ತಾ । ಳ್ದುರದೆ ಗಗನಕೆಹಾರಿ ಬಂದೈತಂದುರಾವಣನ ॥ ವರಕಿರೀ
ಟವ ನಿಳೆಗೆಬೀಳಿಸಿ । ಧುರದೊಳಸುರೇಂದ್ರನನು ಸೋಲಿಸಿ । ಭರದೊಳಾ
ರಾಮನ ಸಮೀಪಕೆಬಂದನಲ್ಲಿಂದ ॥ ೮ ॥ ಬಳಿಕರಾಘವನಾ ಸುವೇಲಾ ।
ಚಲದ ಮೇಲಿಂದಿಳಿದು ಧಾರಿಣಿ । ತಳಕೆ ಕಪಿಗಳಸಹಿತ ಲಂಕಾನಗರಿ
ಗಿದಿರಿನಲಿ ॥ ಖಳನಿಶಾಚರ ನಾಥನೊಡನೆ ಜ । ಗಳವನಾಗಿಸಬೇಕೆನುತ
ಸಲೆ । ಮುಳಿಮನಿಂದನು ಲಂಕೆಗುತ್ತರಕಡೆಯ ಬಾಗಿಲಲಿ ॥ ೯ ॥ ವಾನ
ರರ ಕೋಲಾಹಲಗಳನು । ದಾನವರು ಕೇಳಿದರು ಕಿವಿಗೊ । ಟ್ಟಾನಗ

ರದೊಳು ತಮ್ಮ ಸದನಂಗಳೊಳು ತಾವಿದ್ದು ॥ ದಾನವರು ಭೀತಿಯನು
ಹೊಂದಿದ । ರಾನಿಶಾಚರನಾರಿಯರು ಶೋ । ಕಾನಲನ ಕೀಡಾಗಿಪೋದ
ರು ಲಂಕೆಕಂಪಿಸಿತು ॥ ೧೦ ॥ ಸ್ಮರಿಸಿಕೊಳ್ಳುತ ರಾಜನೀತಿಯು । ನು ರ
ಘುವರನಾ ವಾಲಿಸುತನಂ । ಕರೆದುಪೇಳಿದನಾ ವಿಭೀಷಣ ನನುಮತಿಯ
ನಾಂತು ॥ ಇರವೆ ನೀನಾರಾವಣನ ಹ । ತ್ತಿರಕೆ ಪೋಗಿಯೆತಿಳುಹು ಸೀ
ತೆಯ । ನು ರಘುನಾಥನಿಗಿತ್ತು ಬಾಂಧವರೊಡನೆ ಸುಖಿಸೆನುತ ॥ ೧೧ ॥
ಧರಣಿಜಾತೆಯನಿತ್ತು ಬಂಧುನಿ । ಕರಸಹಿತ ನೀಂ ಸೌಖ್ಯವನು ಹೊಂ ।
ದಿರುವುದುತ್ತಮ ವಿಲ್ಲದಿದ್ದರೆ ಮುಳಿದುರಾಘವನು ॥ ಧುರದೆದಾನವರೆಲ್ಲರ
ಸಹಿತ । ಭರದೆನಿನ್ನನು ಸಂಹರಿಪನೆಂ । ದರುಹಿ ಬಹುದೆಂದೆನುತ ಕಳು
ಹಿದ ರಾಮನಂಗದನ ॥ ೧೨ ॥ ಆಗಲೆಂದೆನುತಾ ರಘುವರಂ । ಗಾಗಕೈ
ಮುಗಿದೆರಗಿ ಯಂಗದ । ನಾಗಸಕೆ ನೆಗೆದಸುರನಾಥನರಾಜಮಂದಿರಕೆ ॥
ಬೇಗನೈತಂದಾತನ ಸಭೆಗೆ । ಪೋಗಿ ಭೀತಿಯನುಳಿದವನ ಮುಂ । ಭಾ
ಗದಲಿ ನಿಲ್ಲುತ್ತಪೇಳ್ದನು ರಾಮನಪ್ಪಣೆಯ ॥ ೧೩ ॥ ದಾನವಾಧಿಪ ರಾವ
ಣನೆ ಕೇ । ಳ್ನಾನು ರಾಮನ ದೂತನೆನ್ನನು । ವಾನರಾಧಿಪ ವಾಲಿನಂದ
ನನಂಗದನೆನುತ್ತ ॥ ನೀನುತಿಳಿ ನಿನ್ನಬಳಿಗೆನ್ನನು । ಭಾನುವಂಶಲಲಾ
ಮ ರಾಮನು । ತಾನು ಕಳುಹಿಸಿರುವನು ಕೇಳಾತನ ವಚನಗಳನು ॥
॥ ೧೪ ॥ ದನುಜರಾವಣ ಕೇಳುನೀನಾ । ಮನುಕುಲೇಂದ್ರನ ಚರಣ
ಪಂಕಜ । ಕೆನಮಿಸಿ ಮಹೀಸುತೆಯನಾತನಿಗಿತ್ತು ವಿನಯದಲಿ ॥ ಅನು
ದಿನನಖಿಳ ಬಂಧುವರ್ಗದ । ಜನರನೊಲಿಸುತ ಸೌಖ್ಯದಿಂದಿಹು । ದುನಿನ
ಗಿದು ಸುಕ್ಷೇಮವೆನ್ನುತ ನೀನುತಿಳಿಯುವುದು ॥ ೧೫ ॥ ಇಲ್ಲದಿದ್ದರೆ
ನಿನ್ನ ಬಂಧುಗ । ರೆಲ್ಲರೊಡನಾ ರಾಘವೇಂದ್ರನು । ಕೊಲ್ಲುವನು ರಣ
ದೊಳಗೆ ನಿನ್ನನುಮುಳಿದು ಮುಂದಿರದೆ ॥ ಎಲ್ಲಿಪೋದರು ನಿನಗೆ ರಕ್ಷ
ಕ । ರಿಲ್ಲ ಕಾಲಗೆಕರುಣ ನಿನ್ನೊಳ । ಗಿಲ್ಲ ರಾಮನೊಳೇಕೆ ಹಗೆತನ
ಮೊಳ್ಪಸುಮ್ಮನೆಯೆ ॥ ೧೬ ॥ ನೀತಿಬಾಹಿರ ನಿನಗೆ ಧರಣೀ । ಜಾತೆ
ಯೇ ಮೃತ್ಯುವೆನಿಸಿಹಳಂ । ದೇತಕಿದನು ತಿಳಿಯದೆ ನೀನತಿಗರ್ವದಿಂ
ದಿರುವೆ ॥ ಭೂತಳದೊಳತಿ ಪಾಪವನೆಸಗಿ । ದಾತನಿಗಹುದು ತಕ್ಕಫಲ
ವೀ । ಭೂತಲದೊಳೆಂಬುದ ನರಿಯದಿಹೆ ನೀನುಗರ್ವಿಸುತ ॥ ೧೭ ॥
ನಿನ್ನ ತಮ್ಮವಿಭೀಷಣನು ಸಂ । ಪನ್ನಮತಿ ಯಿಂದಾರಘುವರನ । ಸನ್ನು
ತ ಚರಣಪಂಕಜಕೆರಗಿ ಮಂತ್ರಿಗಳಸಹಿತ ॥ ಮುನ್ನಲಂಕಾರಾಜ್ಯದೈ
ಸಿರಿ । ಯನ್ನುಪಡೆದನು ಬುದ್ಧಿಯಿಲ್ಲದೆ । ನಿನ್ನ ಬಾಂಧವರೊಡನೆ ನೀ

ನೀಕಳಿವೆ ರಣದೊಳಗೆ ॥ ೧೮ ॥ ನೀನು ನನ್ನಯ ನುಡಿಯಕೇಳ್ದು ।
ಭಾನುವಂಶಲಲಾಮ ರಾಮನಿ । ಗಾನೆಂದಣುಗಿಯನ್ನು ಕೊಟ್ಟರು ಸಾ
ಖ್ಯಯುತನಾಗಿ ॥ ನೀನು ಸೀತೆಯನೀಯದಿದ್ದರೆ । ವಾನರರೊಡನೆ ರಾ
ಮನೈತಂ । ದೀ ನಗರವನು ಹಾಳುಮಾಡುವನೆಂದು ತಿಳಿಸೀನು ॥ ೧೯ ॥
ಎನುತ ದಶಕಂಠನಿಗೆ ವಾಲಿಸು । ತನು ತಿಳಿಹಲಂದಾ ದಸುರನಾ । ಘನು
ರೆಕೋಪಿಸಿ ಪಲ್ಗಳನು ಕಡಿಕಡಿದು ಕಂಗಳಲಿ ॥ ಅನಲಕಣಗಳ ನುದು
ರಿಸುತ ಕಪಿ । ಯನು ಕೊಲುವುದೀಕ್ಷಣ ದೊಳೆಂದೆನು । ತ ನುಡಿದನು
ದೂತರಿಗೆ ಗರ್ಜಿಸುತಟ್ಟಹಾಸದಲಿ ॥ ೨೦ ॥ ಎಂದೊಡನೆ ನಾಲ್ಕುಜನರಕ್ಕ
ಸ । ರಂದುಬಂದಂಗದನನು ಹಿಡಿಯ । ಲಂದಗೆಡವವರೊಡನೆ ತಾಂ ನೆಗೆ
ದಂಬರಸ್ಥಳಕೆ ॥ ಕೊಂದನೆಲ್ಲರ ನವನಿತಳ ಕ । ಲ್ಲಿಂದೆಬೀಳಿಸಿ ಬೆಕ್ಕಸ
ದಿ ದಶ । ಕಂಧರನು ನೋಡುವವೊಲಾಗಸದಲ್ಲಿ ತಾನಿರುತ ॥ ೨೧ ॥
ದಾನವಾಧಿಪ ನೀಕ್ಷಿಸುತ್ತಿರೆ । ವಾನರಾಧಿಪ ಗಗನವನು ಬಿ । ಟ್ಟಾನಗರ
ಮಧ್ಯದೊಳಿಹ ಪ್ರಾಸಾದಶಿಖರದೊಳು ॥ ತಾನುದುಮ್ಮಿಡುತದನು ಪಿಡಿ
ದುನಿ । ದಾನಿಸದೆ ಕಿತ್ತಿಳೆಗೆ ಕೆಡಹುತ । ಭಾನುಮಂಡಲಕಂದು ಹಾರಿದ
ನಾಪುರವನಡುವೆ ॥ ೨೨ ॥ ದನುಜವಲ್ಲಭನಿಗೆ ವಿವೇಕ ವ । ಚನಗಳ
ನು ತಾತಿಳಿಸಿ ರಕ್ಕಸ । ರನಿರಿದು ಪ್ರಾಸಾದಶಿಖರವ ಮುರಿದುಕೆಡಹು
ತ್ತ ॥ ಮನದೊಳಂಜದೆ ಯಂಗದನಖಿಳ । ದನುಜರಿಗೆ ತನ್ನ ಪೆಸರನರು
ಹು । ತಿನಕುಲೇಂದ್ರನ ಬಳಿಗೆಬಂದೆರಗಿದನು ಭಕ್ತಿಯಲಿ ॥ ೨೩ ॥
ಈಕ್ಷಿಸಿ ದನುಜವಲ್ಲಭನು ತಾ । ನಾಕ್ಷಣದೊಳಾ ವಾಲಿನಂದನ । ನೀಕ್ಷಿತಿ
ಗೆ ಕೆಡಹಿದ ಘನಪ್ರಾಸಾದಶಿಖರವನು ॥ ರಾಕ್ಷಸರ ನಾಶನಕೆ ತನ್ನಯ ।
ಮೋಕ್ಷಕೀ ಪ್ರಾಸಾದಭಂಗವೆ । ಸಾಕ್ಷಿಯಾಗಿಹುದೆನುತ ತಿಳಿದನು ತನ್ನ
ಮನದೊಳಗೆ ॥ ೨೪ ॥ ದನುಜರೆಲ್ಲರು ಸಿಂಹನಾದಗ । ಳನೆಸಗುತ್ತಲೆ
ಕೂಡೆ ರಘುನಂ । ದನನಮೇಲೆ ಜಗಳಕೆಬಂದರು ಮುಳಿದು ಬಲಸಹಿತ ॥
ಘನತರದ ಚತುರಂಗಸೈನ್ಯವ । ನು ನಡೆಸುತ ಮೂವತ್ತೆರಡುವಿಧ ।
ಮೆನಿಸುವಾಯುಧಗಳನು ಧರಿಸುತನಿಂದರಾಹವಕೆ ॥ ೨೫ ॥ ಪ್ಲವಗ
ವೀರರ ಸೈನ್ಯಸಹಿತಾ । ರವಿಕುಲತಿಲಕ ರಾಘವೇಂದ್ರನು । ಬವರಕ್ಕೈ
ತಂದನತಿ ಶೀಘ್ರದೊಳಂದು ಕೋಪಿಸುತ ॥ ತವಕದಿಂದೀ ಲಂಕೆಯನು
ಮು । ತ್ತುವುದು ನಾಲ್ಕುಕಡೆಗಳೊಳೆಂ ದತಿ । ಜವದೊಳೆನುತ ಸುಷೇಣ
ನುಡಿದನು ಸಕಲಕಪಿಗಳಿಗೆ ॥ ೨೬ ॥ ಪುರವನಾಲ್ಕು ದೆಸೆಗಳೊಳೈತಂ ।
ದಿರದೆ ಮುತ್ತಿಗೆ ಹಾಕಿದಾಕಪಿ । ವರರಸೀಕ್ಷಿಸಿ ದನುಜನಾಥನು ತನ್ನ ಚಿ

ತ್ತದಲಿ ‖ ಧುರದೊಳಂತು ಜಯಿಸುವೆನೀ ವಾ । ನರರನೆನ್ನುತ ಮನದೆ ಯೋಚಿಸಿ । ಬರಿಸಿ ಧೈರ್ಯವಬಳಿಕ ಕಾಳಗಕಾಗಿ ನಡೆತಂದ ‖ ೭೭ ‖ ಬಂದು ಸಂಗರಮಧ್ಯದೊಳು ದಶ । ಕಂಧರನು ತಾಂನಿಂದು ನೋಡಿದ । ನಂದು ಮುಂಗಡೆನಿಂದ ರಾಘವನನ್ನು ಶೀಘ್ರದಲಿ । ಸಂದಣಿಸಿನಿಂದಾ ರ ಜನಿಚರ । ರಿಂದಿಡಿದ ರಣರಂಗವನು ರಘು । ನಂದನನು ಕಾಣುತ್ತ ಯುದ್ಧಕೆ ಮೊದಲುಮಾಡಿದನು ‖ ೭೮ ‖ ಸ್ಮರಿಸಿಕೊಳ್ಳುತ ರಾಮನಾಗಳೆ । ಧರಣಿಜಾತೆಯ ನಂದುದುಃಖಿಸು । ತಿರದೆ ಕೋಪವನಾಂತ ಸುರರನು ಸಂಹರಿಸುವಂತೆ ‖ ಭರದೊಳಾಜ್ಞಾಪಿಸಲು ಕಪಿವೀ । ರರು ರವಣಿಸುತ ಜಗಳಕ್ಕೈತಂ । ದರು ಪಿಡಿದುಕೊಳ್ಳುತ್ತ ಮರಗಿಡ ಬೆಟ್ಟಕಲ್ಲಗಳನು ‖ ೭೯ ‖ ಅನಸನಾಜ್ಞೆಯನಾಂತಖಿಳ ವಾ । ನರರು ಬಂದರು ಲಂಕೆ ಗಂವತಿ । ಭರದೆಗರ್ಜಿಸಿ ಸಿಂಹನಾದಂಗಳನು ವಿರಚಿಸುತ ‖ ಮೆರವ ತೋರಣ ಗೋಪುರಗಳನು । ಮುರಿದು ಭಂಗಿಸಿ ತಾವು ಬೀಳಿಸಿ । ಧರೆಗೆ ಬಂದರು ತಳುವದೆ ಪ್ರಾಸಾದವನು ಕುರಿತು ‖ ೩೦ ‖ ನಿಂತುಕೊಂಡನು ಪೂರ್ವದಿಶೆಯೊಳು । ಸಂತಸವನಾಂತಾ ಕುಮುದನವ । ನಂತೆ ನಿಂದನು ದಕ್ಷಿಣದ ದಿಶೆಯೊಳಗೆ ಶತಬಲಿಯು ‖ ಚಿಂತಿಸದೆ ಪಶ್ಚಿಮದಕಡೆಯೊಳು । ನಿಂತನು ಸುಷೇಣನತಿಜವದಿಂ । ದಂತಕನತೆರದಿಂದೆ ನಿಂದನು ರಾಮನುತ್ತರದಿ ‖ ೩೧ ‖ ನೀವು ವಾನರರೊಡನೆ ಯುದ್ಧವ । ಗೈವುದೆನ್ನುತ ರಕ್ಕಸರ ನಾ । ರಾವಣನು ಕಾಳಗಕೆ ಕಳುಹಿಸಲಂದು ಸೈನಿಕರು ‖ ಸಾವಕಾಶವ ನಾಗಿಸದೆ ನರ । ದೇವರಾಮನ ಮೇಲೆ ಜಗಳಕೆ । ತಾವು ಬಂದರು ಕೂಡೆ ಘನಚತುರಂಗಬಲಸಹಿತ ‖ ೩೨ ‖ ಬಳಿಯ ಶಂಖಂಗಳನು ರಕ್ಕಸ । ರೊಲಿಯುತೂದಿಸಿ ತಮ್ಮ ಮುಂಗಡೆ । ಯೊಳಗೆ ಘನರಣಭೇರಿಗಳಹೊಡಿಸುತ್ತ ಚರರಿಂದ ‖ ಹೊಳೆವ ದಿವ್ಯ ರಥಂಗಳ ನಡರಿ । ತಳುವ ದೈತ್ಯಂದರಿಗಳೊಡನುರೆ । ಮುಳಿದು ನಿಂದರು ಕಾಳಗಕೆ ರಣರಂಗಮಧ್ಯದಲಿ ‖ ೩೩ ‖ ಘೋರಯುದ್ಧವು ನಡೆಮುದಾಗಳ್ । ವೀರವಾನರ ದಾನವರುಗಳ । ಗಾ ರಣಮಹಿಯೊಳಂದು ಜಯವನು ಹೊಂದಬೇಕೆನುತ ‖ ವಿಸ್ತರಿವ ಪರಾಕ್ರಮದೊಳಾ ಕಪಿ । ವೀರರನು ಗುರಿಯಿಟ್ಟು ಹೊಡೆದರು । ಭೂರಿಪಟ್ಟಸ ಶಕ್ತಿ ತೋಮರ ಪರಶು ಗದೆಗಳಲಿ ‖ ೩೪ ‖ ಮರಗಳಿಂದಲು ಗಿಡಗಳಿಂದಲು । ಗಿರಿಗಳಿಂದಲು ಶಿಲೆಗಳಿಂದಲು । ಗುರುಗಳಿಂದಲು ಪಲ್ಲಗಳಿಂದಲು ತಮ್ಮ ಬಾಹುಗಳ ‖ ತರತರದ ಹೊಡೆತಂಗಳಿಂದಲು । ಗಿರಿಶಿಖರಗಳ ಹತಿಗಳಿಂದಲು । ಧುರದೆ ಕಪಿಗಳು

ನೋಯಿಸಿದರಾ ದನುಜರನು ಮುಳಿದು ॥ ೩೫ ॥ ಖಡಗದಲಿ ಶೂಲದಲಿ ಗದೆಯಲಿ । ಹೊಡೆದರು ಪ್ರಾಕಾರಗಳೊಳ್ । ದ್ದಡಿಗಡಿಗೆ ದಾನವರು ಭೂಮಿಯೊಳಿದ್ದ ಕಪಿಗಳನು । ಬಿಡದೆ ಮೇಲಕೆ ಹಾರಿ ವಾನರ । ರೊಡನೆ ಕಡಿಸಿದ ರಸುರಭಟರನು । ಪೊಡವಿಗೆ ಪ್ರಾಕಾರದಿಂದತಿ ರಭಸದೊಳು ಕೊಂದು ॥ ೩೬ ॥ ದನುಜರಿಗೆ ವಾನರರಿಗೆ ನಡೆದು । ದನಿತಲೊಳಗಾ ದ್ವಂದ್ವಯುದ್ಧವು । ದನುಜರನು ಹಿಂಸಿಸಿದರಾ ಕಪಿವರರು ಹೊಡೆಹೊಡೆದು ॥ ಘನಪರಾಕ್ರಮದಿಂದೆ ವಾನರ । ರನು ಬಿಡದೆ ಪೀಡಿಸಿದರು ದನುಜ । ರು ನಿಶಿತಾಯುಧಗಳನು ಕಪಿಗಳಮೇಲೆ ಸುರಿಸುತ್ತ ॥ ೩೭ ॥ ಒಡನೆ ಸಾಯಂಕಾಲವಾದುದು । ಬಿಡದೆ ಮುತ್ತಿದ ಕತ್ತಲೆಯೊಳಡಿ । ಗಡಿಗೆ ದನುಜರರಿಯದೆ ಹಿಂಸಿಸುತ್ತಿದ್ದ ರಸುರರನು ॥ ಕಡುಮುಳಿದು ನೋಯಿಸಿದ ರೆಡೆವಿಡ । ದಿಡಿವಕತ್ತಲೆ ಯೊಳವಸಿತಳಕೆ । ಕೆಡಹುತಾ ಕಪಿವೀರರನು ಕಪಿವರರು ಯುದ್ಧದಲಿ ॥ ೩೮ ॥ ಕಡಸು ಕವಿತ್ತಿವಿತಲೆಯು ಕತ್ತರಿ । ಸಿಡು ಪಗೆಗಳನು ಕೊಲ್ಲು ಕಾಲನು । ಪಿಡಿದು ಪೊಯ್ಮಾನೀತಕೋಡುವೆ ದಿಗಿಲುಪಡಬೇಡ ॥ ನಿಡುಸರಳ ತೊಡುಬಾಣವಿದಾಪಕೆ । ಪಿಡಿನಡೆಕಡಿಬಿಡೆಂಬ ಮಾತುಗ । ಳಡಿಗಡಿಗೆ ಕೇಳಿಸುತಲಿದ್ದವು ರಾತ್ರಿ ಶಿಬಿರದಲಿ ॥ ೩೯ ॥ ಇರದೆ ಕೋಪಾವಿಷ್ಟರಾಗಿಯು । ಸುರರು ಭಕ್ಷಿಸಬೇಕೆನುತ ವಾ । ನರರಮೇಲಂದಿರದೆ ಬಿದ್ದರು ಮಧ್ಯರಾತ್ರಿಯಲಿ ॥ ಕರಿರಥಪತಾಕೆ ಹಯಸಾರಥಿ । ವರಥವಳ ಚಮರಾದಿಗಳನಂ । ದಿರಿದು ಬೀಳಿಸಿದರು ಸವಾರರನಲ್ಲಿ ವಾನರರು ॥ ೪೦ ॥ ಹೊಡೆಯುತ್ತಿದ್ದರು ರಾಮ ಲಕ್ಷ್ಮಣ । ರಡಿಗಡಿಗೆ ಶಸ್ತ್ರಾಸ್ತ್ರಚಯದಿಂ । ದೊಡನೆ ಕಾಣಿಸಿ ಕಾಣಿಸದಿರುವ ದನುಜರೆಲ್ಲರನು ॥ ಬಿಡದೆ ರಕ್ತವು ನದಿಗಳಂತಾ । ಪೊಡವಿಯೊಳು ಸಲೆ ಪರಿದುದಾರಣ । ಕಡುಭಯಂಕರವಾಗಿ ಕಾಣಿಸಿತಂದು ರಾತ್ರಿಯಲಿ ॥ ೪೧ ॥ ನೆಟ್ಟನೆ ರಘುವರನನು ರಕ್ಕಸ । ರಟ್ಟಿಕೊಂಡೈತಂದರಾಗಳೆ । ಬಿಟ್ಟನಾ ರಘುವೀರ ನಾರುಶರಂಗಳನವರಿಗೆ ॥ ಇಟ್ಟಣಿಸಿದವು ಯುದ್ಧಭೂಮಿಯೊ । ಳೊಟ್ಟುಗೂಡು ತಖಿಳ ದೆಸೆಗಳಲಿ । ಥಟ್ಟನೆಬಿಡದೆ ರಾಮನಾಮಾಂಕಿತದ ಬಾಣಂಗಳು ॥ ೪೨ ॥ ಕೊಂದನಾಗಳೆ ರಣದೊಳು ರಘು । ನಂದನನು ಬಹುಮಂದಿ ದನುಜರ । ನಂದು ಕಪಿಗಳ ಸಿಂಹನಾದಗಳೊಡನೆ ಮೊಳಗಿದವು ॥ ಅಂಧಕಾರದೊಳಾದ ಕಾಳಗ । ದಿಂದೆ ಸಮರಾಂಗಣವಧಿಕ ಭಯ । ವೆಂದೆನಿಸು ತಲೆದೋರುತಿದ್ದುದು ಸಕಲವೀರರಿಗೆ ॥ ೪೩ ॥ ಸುರಪಸಂಭವ ತನಯನಾಗಳ ।

ಸುರಪಜಿತುವಿನ ತುರಗ ಸಾರಥಿ । ವರವರೂಥಂಗಳನು ಖಂಡಿಸಿ ನೆಲ
ಕೆಬೀಳಿಸಿದ ॥ ಧುರದೊಳೆಲ್ಲರು ನೋಡುತಿರಲಂ । ಬರದೊಳಾ ವಿಬು
ಧೇಂದ್ರಜಿತು ತಾ । ನರರು ಕಾಣನತೆರದೊಳಂತರ್ಧಾನ ನೆನಿಸಿದನು ।
॥ ೪೪ ॥ ಸುರರು ಕೊಂಡಾಡಿದರು ವಾಲಿಜ । ನುರುಪರಾಕ್ರಮವನ್ನು
ಹರ್ಷದೊ । ಳರದೆ ಮೆಚ್ಚಿದರಾಮುನೀಂದ್ರರು ರಾಮಲಕ್ಷ್ಮಣರು ।
ಭರದೊಳಾತನ ನಪ್ಪಿಕೊಂಡರು । ಪರಮಸಂತಸದಿಂದೆ ಹೊಗಳುತ ।
ಸುರಪಜಿತು ಖತಿಗೊಂಡ ನಂಗದನಸ್ತ್ರಘಾತದಲಿ ॥ ೪೫ ॥ ಅಂಗದನಿಗೆ ಸ
ಹಾಯವಾಗಿಯೆ । ಸಂಗಳಿಸಿ ನೀವೆಲ್ಲರೀ ರಣ । ರಂಗದೊಳು ಯುದ್ಧ
ವನು ಮಾಳ್ಪುದು ಧೈರ್ಯದಿಂದೆನುತ ॥ ರಂಗನಾಥನು ಕಪಿಗೆ ಪೇಳ್ದನು ।
ಮುಂಗಡೆಯೊಳಿಹ ವಾನರವರರಿ । ಗಂಗದನ ಸಾಮರ್ಥ್ಯಕೆ ಮನದೊ
ಳಾಂತುಸಂತಸವ ॥ ೪೬ ॥ ಸರಸಿಜಾಸನನಿಂ ದುರುತರದ । ವರಗಳನು
ಪಡೆದಿಂದ್ರಜಿತು ಸಂ । ಗರದೊಳತಿ ಮಾಯೆಗಳನಾಗಿಸಿ ಯುದ್ಧಮಾಡು
ವನು ॥ ಮರಣಕಾಲವು ಹತ್ತಿರಕೆ ಬಂ । ದಿರುವುದೀಖಳ ನಿಗದರಿಂದೆ
ಬ । ವರಕೆಬಂದಿಹ ನೆವೊಡನೆನುತ ನುಡಿದನಾರಾಮ ॥ ೪೭ ॥ ಕ್ರೂರ
ಕೃತ್ಯದೊಳಿಂದ್ರಜಿತು ತಾ । ನಾರಜನಿಯೊಳು ಕಾಣಿಸದೆ ಕಪಿ । ವೀರ
ರೆಲ್ಲರನಂದು ಕೊಂದನು ತೀಕ್ಷ್ಣಶರಗಳಲಿ ॥ ಘೋರಸರ್ಪಮಯ ಶರಗ
ಳನು ಮ । ಹಾರಣದೊಳು ಸುರಿಸುತನುಜನೊಡ । ನಾರಘುಪತಿಯು
ನಿರದೆಬಿಗಿದನು ನಾಗಪಾಶದಲಿ ॥ ೪೮ ॥ ನಾಗಪಾಶಗಳಿಂದೆ ಬಂಧಿಸಿ ।
ಬೇಗನುಮೂರ್ಛೆಯ ನೈದಿಸಿದನಾ । ಮೇಘನಾದನು ರಾಮ ಲಕ್ಷ್ಮಣರಿಬ್ಬ
ರನು ಕೆಡಹಿ ॥ ಬೇಗಬೇಗನೆ ಘೋರಶರಗಳ । ನಾಗ ಸುರಿಸುತ ನೋ
ಯಿಸಿದನಾ । ರಾಘವೇಂದ್ರರ ನವರ ಮರ್ಮಸ್ಥಾನಗಳೊಳಂದು ॥ ೪೯ ॥
ಕ್ರೂರಬಾಣಗಳಿಂದೆ ಗರ್ಜಿಸು । ತಾರಘುವರರನಂದು ನಿರ್ಜರ । ವೈರಿ
ಹೊಡೆದನು ಸಕಲ ಮರ್ಮಸ್ಥಾನಗಳೊಳಡಗಿ ॥ ಬಾರಿಬಾರಿಗೆ ಬಾಣ
ಪಾತವ । ಸೈರಿಸದೆಬಿದ್ದರು ರಕುತವನು । ಕಾರುತವನಿಗೆ ರಾಮಲಕ್ಷ್ಮ
ಣರೈದಿ ಮೂರ್ಛೆಯನು ॥ ೫೦ ॥ ನೆಲಕೆಬಿದ್ದು ಪ್ರಜ್ಞೆಯಿಲ್ಲದೆ ।
ಮಲಗಿಕೊಂಡಿಹ ರಾಮಲಕ್ಷ್ಮಣ । ರ ಲಲಿತಾಂಗಂಗಳನು ನೋಡಿದ
ರುಳಿದವಾನರರು ॥ ತಳೆದುದುಃಖವ ನೊಡನೆ ನೊಂದರ । ಖಿಳಕಪಿಗಳಾ
ಧರಣಿಪಾಲ ರೊ । ಡಲುಗಳಿಂದಲೆ ರಕ್ತಹರಿದುದು ನದಿಗಳಂದದಲಿ ॥
॥ ೫೧ ॥ ಸಕಲ ವಾನರವೀರರನು ಮೂ । ರ್ಛೆಕೆಡಹುತ ರಣರಂಗದೊ
ಳನೇ । ಕ ಕಪಿಗಳನಮರೇಂದ್ರಜಿತು ಸಂಹರಿಸಿಬೊಬ್ಬಿರಿದು ॥ ಪ್ರಕ

ಿಸುತ್ತಲೆ ತನ್ನ ಜಯವೆ । ಲ್ಲಕಡೆಯೊಳು ಸಂತ್ರಸವೆಡಿಸ ಸೈ । ನಿಕರ
ಂದಾಲಂಕೆಗೈತಂದ ನತ್ರಿಶೀಘ್ರದಲಿ ॥ ೫೨ ॥ ಜಡನೆ ಜಯಭೇರಿಯನು
ುಂಗತೆ । ಮೊಳಗಿಸಿಕೊಂಡೈತಂದು ಲಂಕೆಗೆ । ಸಡಗರದೊಳಂದಾ ದ
ರನ ಚರಣಪಂಕಜಕೆ ॥ ಬಿಡಲನೀಡಿ ನಮಿಸುತ ರಕ್ಕಸ ॥ ರೊಡೆಯ
ೆ ಪೇಳದನು ಸತ್ತರು । ಪಡೆಯೊಳಂದಾ ರಾಮಲಕ್ಷ್ಮಣರೆನುತಹರ್ಷ
ಲಿ । ೫೩ ॥ ಘೋರ ಶರಬಂಧಂಗಳಿಂದಂ । ದ ರಣದೊಳಾ ವಾನರರೊ
ನೆ । ವೀರರಾಘವ ನವನತಮ್ಮನಸಹಿತ ಜವದಿಂದೆ ॥ ಧಾರಿಣಿಗೆ ಬಿದ್ದಿರ
ರಕ್ತವ । ಕಾರಿ ಮೂರ್ಛೆಯ ನಾಂತುದನು ಕೇ । ಳ್ದಾ ರಜನಿಚರ
ಘನೈದಿದ ನಧಿಕಹರ್ಷವನು ॥ ೫೪ ॥ ತನಯನಂ ಕೊಂಡಾಡಿ ಮು
ಿಸಿ । ದನುಜವಲ್ಲಭನಿರದೆ ಮನ್ನಿಸಿ । ಘನತರದ ಬಹುಮಾನವನು
ೊಟ್ಟಲಿಮ ತಕ್ಷೈಸಿ ॥ ಮನೆಗೆ ಬೀಳ್ಕೊಟ್ಟಿಂದ್ರಜಿತುವನು । ಮನ
ೊಳಾನಂದವ ತಳೆದು ಬಿ । ಟ್ಟನು ತನಗೆ ರಾಘವನದೆಸೆಯಿಂ ದೊದಗಿ
ಭಯನ । ೫೫ । ಕೊಂದರಣದೊಳಗಿಂದ್ರಜಿತು ರಘು ॥ ನಂದನರ
ನುತಸುರವಲ್ಲಭ । ನಂದು ಡಂಗುರವೊಯ್ಸಿದನು ತಾನೊಲಿದು ಲಂಕೆ
ಲಿ ॥ ಂದನುಗೆ ಕೈಗೂಡಿದುದು ಜಯ । ವೆಂದೆನುತ ಸಂತಸವನೈ
ತ । ಬಂಧು ಮಿತ್ರರಿಗೆಲ್ಲರಿಗೆ ಪೇಳದನು ಸುರವೈರಿ ॥ ೫೬ ॥ ಕರೆದು
ತೆಗೆ ಕಾವಲಿದ್ದ । ಶರವನಿತೆಯರ ದನುಜನೆಂದನು । ಧರಣಿನಂದನೆ
ತೆಯಬಳಿಗೆ ಪೋಗಿನೀವೀಗ ॥ ವರವಿಮಾನದೊಳೊಸೆದು ಕೂಡಿಸಿ ।
ರೆನುಕೊಂಡೈದಿ ರಣರಂಗಕೆ । ಭರದೆತೋರಿಸಿ ರಾಮಲಕ್ಷ್ಮಣರಳಿದ
ಂಬುದನು ॥ ೫೭ ॥ ಪತಿಯಸಾವನು ಕಾಣುತ ಮಹೀ । ಸುತೆ ನಿರಾಶೆ
ನೈದಿ ದಶರಥ । ಸುತನೊಳಾ ಬಳಕೆನ್ನ ಹೊಂದುವಳು ಪರವಶಳಾಗಿ ॥
ತ್ರಿಸುತೆಗೆ ತೋರಿಸುತ ರಾಘವ । ನ ತನುವನು ಪೇಳುವುದು ನೀವ್ಪ
। ವು ತೆರದಿಂದಲೆ ನನ್ನನುವರಿಸುವಂತೆ ಯುಕ್ತಿಯಲಿ ॥ ೫೮ ॥
ೋಗಿನೀವೆಂದೆನುತ ದಶಶಿರ । ನಾಗರಕ್ಕಸಿಯರಿಗೆ ಪೇಳ್ದತಿ । ಬೇಗ
ಹಿಸಿಕೊಟ್ಟನವರ ನಶೋಕವನಕಿರದೆ ॥ ಬಾಗಿನಮಿಸಿ ದಶಾನನಂಗೆ
। ರಾಗದಿಂ ದವನೀಸುತೆಯ ಬಳಿ । ಗಾಗಿಬಂದರು ತೆಗಿಸಿಕೊಂಡಾ ವ
ವಿಮಾನವನು ॥ ೫೯ ॥ ಬಂದು ಸೀತೆಯಹತ್ತಿರಕೆ ತಾ । ವೆಂದುಕಾವ
ನಬಲೆಯರು ದಶ । ಕಂಧರನ ನೇಮವನು ಕೈಕೊಂಡಾ ಜನಕಸುತೆ
॥ ಮುಂದುಗಡೆಯೊಳಿರಿಸಿ ವಿಮಾನವ । ನೆಂದರು ತಮಗೆ ರಾವಣ
ನುಡಿ । ದಂದವನು ಧರಣೀಸುತೆಗೆ ಕೇಳುತಿರಲಾತ್ರಿಜಟೆ ॥ ೬೦ ॥

ಇಂತು ಇಪ್ಪತ್ತು ಮೂರನೆಯ ಅಧ್ಯಾಯ ಸಂಪೂರ್ಣವು.

ಪದ್ಯಗಳು ೧೮೩೩.

ಇಪ್ಪತ್ತನಾಲ್ಕನೆಯ ಅಧ್ಯಾಯ.

ಸೂಚನೆ॥ ನಾಗಪಾಶದ ಬಂಧನದೊಳತಿ ।
ಬೇಗ ಮೂರ್ಛೆಯನಾಂತ ಪತಿಯನು ।
ಪೋಗಿಕಂಡಳಲಿದಳು ಪಲತೆರದಿಂದಲಾಸೀತೆ ॥

ಧರಣಿಜಾತೆಯೆಕೇಳು ದಶಕಂ । ಧರನಸುತ ನಿಂದ್ರಜಿತ್ತು ಕೊಂದನು । ಧುರದೊಳಂದಾ ರಾಮ ಲಕ್ಷ್ಮಣರನ್ನು ಬಲಸಹಿತ ॥ ವರವಿಮಾನದೆ ಸೀತೆಯನು ಕು । ಳ್ಳಿರಿಸಿಕೊಂಡಾ ರಣಮುಖಗೆ ಪೋ । ಗಿ ರಘುವರನನು ತೋರಿಸೆಂದೆಮಗಸುರಪತಿ ನುಡಿದ ॥ ೧ ॥ ವರವಿಮಾನದೊಳಿವಳೊಡನೆ ಕುಳಿ । ತು ರಣಭೂಮಿಗೆ ನೀನು ಬಹುದೆಂ । ದರುಹಿ ಕೂಡಿಸುತಾ ತ್ರಿಜಟೆಯುಸಹಿತ ವಿಮಾನದಲಿ ॥ ತ್ವರಿತದಿಂದಲೆ ರಕ್ಕಸಾಂಗನೆ । ಯರುಗಳಾ ರಣರಂಗಕೈತಂ । ದರು ಬಳಿಕ ತೋರಿದರು ವ್ಯೋಮರೆದಾ ರಘೂದ್ವಹರ ॥ ೨ ॥ ಕೂತುಕೊಂಡಾತ್ರಿಜಟೆ ಸಹಿತಾ । ಸೀತೆ ಪುಷ್ಪಕ ವರವಿಮಾನದೆ । ತಾತಪಿಸುತಾ ಯುದ್ಧರಂಗದ ಮಧ್ಯಭಾಗದೊಳು ॥ ಮಾತನಾಡದೆ ಸತ್ತಕಪಿ ಸಂ । ಘಾತವನವರ ಹತ್ತಿರದೊಳತಿ । ಭೀತಿಯಿಂದುರೆ ದುಃಖಿಸುವ ಕಪಿಗಳನು ನೋಡಿದಳು ॥ ೩ ॥ ರಾಮಲಕ್ಷ್ಮಣರನ್ನು ಬಳಸು । ತ್ತಾ ಮಹಾ ರಣರಂಗಮಧ್ಯದೆ । ಕೈಮೆಯುಳಿದತಿ ದುಃಖಪೀಡಿತರಾದ ಕಪಿಗಳನು ॥ ಭೂಮಿಸುತೆ ನೋಡಿದಳು ಬಳಿಕಾ । ರಾಮಲಕ್ಷ್ಮಣ ರಿಬ್ಬರತಿ ಘನ । ಕೋಮಲಾಂಗಂಗಳನುಕಂಡಳು ಮುಂದಕೈತರುತ ॥ ೪ ॥ ಶರಗಳಿಂದುರೆ ಪೀಡಿತರೆನಿಸಿ । ಧುರದೆಘನಶರ ತಲ್ಪದೊಳು ತಾ । ಪೊರಗಿಕಡಿದಾ ಕವಚಬಾಣಂಗಳನು ಧರಿಸುತ್ತ ॥ ಉರುತರದ ಶರಪಾತಕಡಿಗಡಿ । ಗಿರದೆ ರಕ್ತವಕಾರುತ ಕದಲ । ದಿರುವ ಪತಿದೇವರರನೀಕ್ಷಿಸಿದಳವನೀಸುತೆಯು ॥ ೫ ॥ ಜನಕನಂದನೆ ಕಪಿಗಳೊಡನೆ ಕ । ದನದೆ ಮಡಿದಾ ರಾಮಲಕ್ಷ್ಮಣ । ರನುಮಣಿಮನೋಡುತವ ರಿಬ್ಬರಮರಣವನು ಕುರಿತು ॥ ಮನದೊಳನುಮಾನಿಸುತ ಬಲಗೈ । ಯನಿರಿಸಿ ತಲೆಯಮೇಲೆ ದುಃಖಿಸು । ತ ನಡುಗಿ

ಕಲಪುತ್ರರಂದೊಳೆಂದುರೆ ರೋದಿಸಿದಳಲ್ಲಿ ॥ ೬ ॥ ಜ್ಞಾನಿಗಳು ಮುನ್ನನು
ಡಿದ್ದರು । ನೀನು ಮಕ್ಕಳಸಹಿತ ಬಾಳುವೆ । ನೀನು ವೈಧವ್ಯವನು
ಹೊಂದುವಳಲ್ಲ ಭೂಮಿಯುಲಿ ॥ ನೀನು ಅಶ್ವಮೇಧಗಳ ನಾಗಿಪ ।
ಮಾನವೇಂದ್ರನ ಪತ್ನಿಯೆನುತಾ । ಜ್ಞಾನಿಗಳ ವಚನಂಗಳಿಂದಿನ ಸುಳ್ಳ
ಸಿತಲ್ಲ ॥ ೭ ॥ ಜನಕನಂದನೆ ನೀನು ಶುಭಕರ । ಮುನಿಪವ ಯುವಂಗ
ನು ಪೊಂದಿರು । ವೆ ಸುತಿವಡೆದತಿ ಶೂರನೆನಿಸುತ್ತಿಳಯು ಪಾಲಿಸುವ ॥
ನಪತಿಗೆನಿಂ ಪಟ್ಟದಮಹಿಷಿ । ಯೆನಿಸುವೆ ಮಹಾ ಧನ್ಯಳಾಗುವೆ ।
ರೆನುತಪೇಳ್ದ ವಿಬುಧರನುಡಿಗಳು ಸುಳ್ಳೆನಿಸಿತಲ್ಲ ॥ ೮ ॥ ಧರಣಿಪಾ
ನ ಮದುವೆಯಾಗು । ತ್ತ ರಮಣನೊಡನೆ ತನ್ನ ರಾಜ್ಯದೊ । ಳಿರು
ದವ ಪಟ್ಟಾಭಿಷೇಕವ ಸಾಂತ್ವನಾಕ್ಯವನು ॥ ಹರುಷದಿಂ ದನುಭವಿಪ
ತ್ರಿಯು । ನಿರದೆ ಸೂಚಿಸುವಂಥ ಕಮಲವ । ರೆಗಳಸ್ನಯು ಪದಪ್ರೊ
ದ್ದರು ನಿಷ್ಫಲವೆನಿಸಿತು ॥ ೯ ॥ ವನಿತೆಯರಿಗೀ ಧಾರಿಣಿಯೊಳತಿ ॥
ನತರದ ಸೌಭಾಗ್ಯಕರವೆಂ । ದೆನಿಪ ಲಕ್ಷಣಗಳನು ಸತ್ಯವೆನಿಸುತ
ತೋರಿಸುವ ॥ ವಿನುತ್ರಿನೆತ್ತ ಕಮಲದರೇಖೆಗ । ಳೆನಗೆ ಯಿದ್ದುಂ ವ್ಯ
ರ್ಥವಾದವು । ಮನುಕುಲೋತ್ತಮ ರಾಮನಾದುದ ರಿಂದನುಜನೊಡನೆ ।
॥ ೧೦ ॥ ಅವನಿಯೊಳು ನಾರಿಯರು ವೈಧ । ವ್ಯವನು ಹೊಂದುವ ಲಕ್ಷಣ
ಗಳ । ನ್ನವರುಗಳೆಲ್ಲ ನಿತ್ಯ ಸುಮಾಸಿನಿಯೆನಿಸುವ । ವಿವಿಧವಂ
ಗಳ ಕರಗಳೆಂದೆನಿ । ಸುವ ಸಕಲ ಲಕ್ಷಣಗಳಿದ್ದರು । ಭುವಿಯೊಳಿಂದೆ
ನಗೆಂತು ವೈಧವ್ಯವೊದಗಿರುತಿಹುದು ॥ ೧೧ ॥ ನನ್ನ ಕೂದಲು ಸೂ
ಕ್ಷ್ಮವಾಗಿವೆ । ಕಣ್ಣಿಗೆ ಕರಿಯುಬಣ್ಣದಿಂದತಿ । ಚೆನ್ನವೆನೆ ಮೃದುವಾಗಿ
ತೋರುವುದಲ್ಲ ಜನಗಳಿಗೆ ॥ ನನ್ನ ಹುಬ್ಬುಗಳೆರ ಡವಿರಳವ । ಪನ್ನಿಸು
ವವು ನನ್ನ ಜಂಘೆಗ । ಳುನ್ನತಿವಡೆಯು ಕೂದಲಿಲ್ಲದೆನೆವುವುಗುಂಡಾ
॥ ೧೨ ॥ ನನ್ನ ಕೈಗಳು ನನ್ನಕಾಲ್ಗಳು । ನನ್ನ ಕಂಗಳು ನನ್ನ
ತೊಡೆಗಳು । ನನ್ನ ಗುಲ್ಫಗಳೆಲ್ಲ ಸಮವೆನುತೊಪ್ಪಿಕಾಣುವುವು ॥ ನನ್ನ
ಬೆರಳ್ಗಳು ಕೂಡಿಕೊಂಡಿವೆ । ನನ್ನ ಬೆರಳುಗಳತಿ ಲಲಿತವೆಂ । ದೆನ್ನಿಸುತ
ಗುಂಡಾಗಿಹ ನಖಗಳಿಂದೆಕೂಡಿಹವು ॥ ೧೩ ॥ ಮೊಲೆಗಳೆರಡುಂ ಸೇರಿ
ಕೊಳುತಲೆ । ಬಲಿತುಕೊಂಡಿವೆ ಚೂಚುಕಂಗಳು । ಮೊಲೆಗಳೊಳಡಗಿ
ರುಗ್ನವೆನಿಸುತ ಕಾಣಿಸುತ್ತಿಹವು ॥ ಬಳಗಿಳದು ಗಂಭೀರವೆನಿಸುತ ।
ಮೊಳೆವ ಪರ್ಯಂತಪ್ರದೇಶವ । ತಳೆದ ನಾಭಿಯುು ನನ್ನದೇಹದೊಳದ್ದು
ರಂಜಿಸ್ಯದು ॥ ೧೪ ॥ ನನ್ನ ಬಣ್ಣವು ರತ್ನದಂತಿದೆ । ನನ್ನ ಕೂದಲು

ಮೃದುಲವಾಗಿವೆ । ನನ್ನ ಪಾದಗಳೆರಡು ಮೆರೆವೈದು ಬೆರಳುಗಳ ॥ ಚೆ
ನ್ನಮಂಬಂ ತೋರಿನಿಲ್ಲುವು । ನನ್ನ ಕರಚರಣಂಗಳೊಳು ಸಂ । ಪನ್ನ
ವಾಗಿಹವರಯವಾ ರೇಖೆಗಳು ತುಂಬಿಹವು ॥ ೧೫ ॥ ಇಸಿತು ಶುಭ
ಲಕ್ಷಣಗಳಿದ್ದರು । ನನಗೆ ನಿಷ್ಫಲಮೆನಿಸಿತಲ್ಲವೆ । ಮನುಕುಲೋತ್ತಮ
ರಾಮನಳಿದುದರಿಂದೆ ಕದನದೊಳು ॥ ನನಗೆ ರಕ್ಷಕರಿನ್ನು ಯಾರಿಹ ।
ರೆನುತ ಜಾನಕಿ ರಾಮಲಕ್ಷ್ಮಣ । ರ ನಡಿಗಡಿಗೀಕ್ಷಿಸುತ ಬಿಸುಸುಯ್ದು
ತ್ತಳಂದಿರದೆ ॥ ೧೬ ॥ ನೀನು ಮಂದಸ್ಮಿತೆ ಯೆನಿಸಿರುವೆ । ನೀನುಮಣಿ
ಮಯ ಪೀಠದೊಳು ಸಂ । ಮಾನದಿಂದಲೆ ಪತಿಯುಬಲಗಡೆ ಕುಳಿತು ವಿ
ಭವದಲಿ ॥ ಈನೆಲದ ಪಟ್ಟಾಭಿಷೇಕವ । ನಾನುಮೆಯೆನುತ ಮುನ್ನ ನು
ಡಿದಾ । ಜ್ಞಾನನಿಧಿಗಳ ಮಾತುಗಳು ಸುಳ್ಳಾದುವೆನಗಿಂದು ॥ ೧೭ ॥
ಹುಡುಕುತ ಜನಸ್ಥಾನದೆ ಹಲವು । ಕಡೆಗಳೊಳಗಾ ರಾಮಲಕ್ಷ್ಮಣ ।
ರೊಡನೆ ಗೋವಿನಪಾದದಂತೀ ದಕ್ಷಿಣಾಬ್ಧಿಯನು ॥ ಬಿಡದೆಲಂಘಿಸಿ ನನ್ನ
ಸನಿಹಕೆ । ಕಡುಜವದೊಳೈತಂದು ಸತ್ತರು । ಪಡೆಯೊಳೆನ್ನ ನಿಮಿತ್ತ
ವಾಗಿಯೆ ಸುರಪಜಿತುವಿಂದೆ ॥ ೧೮ ॥ ಇವರುಬಲ್ಲರು ವಾರುಣಾಸ್ತ್ರವ ।
ನಿವರುಬಲ್ಲರು ಪಾವಕಾಸ್ತ್ರವ । ಇವರರಿವರಾ ಬ್ರಹ್ಮಶಿರವೆಂಬಸ್ತ್ರ
ವಿವರವನು ॥ ಇವರುಬಲ್ಲರು ವಾಸವಾಸ್ತ್ರವ । ನಿವರುಬಲ್ಲರು ಮಾರು
ತಾಸ್ತ್ರವ । ನಿವರನಾವಿಬುಧೇಂದ್ರಜಿತು ವಧಿಸಿದನು ಮಾಯೆಯಲಿ ॥
॥೧೯॥ ವೀರರೆನಿಸಿದ ರಾಮಲಕ್ಷ್ಮಣ । ರೀರಣದೊಳಾ ಶಕ್ರವೈರಿಯ ।
ಘೋರಶರಬಂಧಂಗಳಿಂದಲೆ ಮಡಿದುರುಳ್ದಿಹರು ॥ ಆ ರಜನಿಚರನಿವರಿಗಿಂ
ದು ಶ । ರೀರವನು ತೋರಿಸವೆ ಮಾಯಾ । ಕಾರ ಯುದ್ಧವ ನಾಡಿಕೊಂ
ದನು ವಂಚಿಸುತಿವರನು ॥೨೦॥ ಇವರಕಣ್ಣಿಗೆ ಕಾಣಿಸಿದ್ದರೆ । ಬವರ
ದೊಳು ಶಕ್ರಜಿತು ಜೀವಿಸು । ತವನ ತಂದೆಯುಬಳಿಗೆ ಬರುತಿರಲಿಲ್ಲ ಹಿಂತಿ
ರುಗಿ ॥ ಇವರಸಾವನು ಕಂಡಕಟ ನಾ । ನವನಿಯೊಳುಜೀವಿಸುವು
ದೆಂತೆಂ । ದವನಿಜೆಯು ಗೋಳಾಡಿದಳು ನೋಡುತ್ತ ರಘುಜನರನು
॥ ೨೧ ॥ ಅತ್ತೆ ಕೌಸಲ್ಯೆಯನು ಕುರಿತೀ । ಹೊತ್ತಿನೊಳು ನಾನಿನ್ನ
ಮನದೊಳು । ಮತ್ತೆಮತ್ತಳುತಿರದೆ ದುಃಖಿಸುವಂತೆ ಕದನದೊಳು ॥
ಸತ್ತ ಪತಿದೇವರರನು ಕುರಿತು । ತತ್ತರಿಸುವವಳಲ್ಲ ನನ್ನನು । ಮತ್ತ
ನನ್ನಯ ತಂದೆತಾಯ್ಗಳ ಕುರಿತಳುವವಳಲ್ಲ ॥ ೨೨ ॥ ವನವಾಸವ
ಮುಗಿಸಿಕೊಂಡು ನಿ । ಜನಗರಿಗೆ ಸತಿಸೋದರರೊಡನೆ । ತನಯುತಾನಾ
ವಾಗ ಬರುತಿಹನೆಂದು ಕೌಸಲ್ಯೆ ॥ ಅನುದಿನವು ಚಿಂತಿಸುತಿರುವಳೆ । ನನ್ನ

ನು ಭರದೊಳೀಕ್ಷಿಸುವೆನೆಂದಾ । ಕೆ ನೆರೆಕಾತರಿಸುತ್ತಿಹಳು ಮನದೊಳ
ಗನವರತವು ॥ ೨೩ ॥ ಇಂತು ಪಲತೆರದಿಂದೆ ಜಾನಕಿ । ಚಿಂತಿಸುತ್ತಿರ
ಲಾ ತ್ರಿಜಟೆ ಸಮ । ನಂತರದೊಳಾ ಧರಣಿಜಾತೆಯ ಹಸ್ತವನುಪಿಡಿದು ॥
ಸಂತಸದೊಳೆಂದಳಿಲೆ ಸೀತೆಯೆ । ಚಿಂತೆಯನುಬಿಡು ಚಿತ್ತವನುಮೋದ ।
ಲಂತೆ ನಿಲ್ಲಿಸು ನೀಂವಿಷಾದಿಸಬೇಡ ದುಃಖಿಸುತ ॥ ೨೪ ॥ ನಿನ್ನ ಗಂಡನು
ಜೀವಿಸಿರುವನು । ಅಣ್ಣತಮ್ಮಂದಿರು ಬದುಕಿರುವ । ದನ್ನು ಸೂಚಿಸು
ವಂಥ ಲಕ್ಷಣಗಳನು ನೋಡುವೆವು ॥ ನಿನ್ನಗಂಡನು ಮಡಿದುಯಿದ್ದರೆ ।
ಮುನ್ನಿನಂದದೊಳೀತನ ಮುಖವಿ । ದಿನ್ನೆಗಂ ತೋರುತಿರಲಿಲ್ಲವು ಶುಭ
ಕರವಿದೆನಿಸಿ ॥ ೨೫ ॥ ಮರಣವನು ಹೊಂದಿದ ಜನರಿಗೀ । ಧರೆಯೊಳಂತಾ
ನನಗಳತಿಶುಭ । ಕರವೆನಿಸಿ ಕಾಣಿಸುವುದಿಲ್ಲವು ರಾಮಲಕ್ಷ್ಮಣರ ॥ ಎರ
ಡುಮುಖಗಳು ಕೋಪವನು ತಳೆ । ದುರುತರದ ಸಂತೋಷವನು ವಿ ।
ಸ್ತರಿಸಿ ಕಂಗೊಳಸುತಿವೆ ಜಾನಕಿನೀನು ನೆರೆನೋಡು ॥ ೨೬ ॥ ಧುರ
ದೊಳಿದಿ ರಾಮಲಕ್ಷ್ಮಣ । ರಿರುವರಳಿದಿದ್ದಲ್ಲಿ ಪುಷ್ಪಕ । ವರವಿಮಾ
ನವು ನಿನ್ನಧರಿಸುತ ಲಿಲ್ಲಿಗೆಂದಿರದು ॥ ಮುರಿದ ಸೇನಾಪತಿಗಳಿಂದಲು ।
ತೊರೆವ ಸಮರೋದ್ಯೋಗದಿಂದಲು । ಕೊರಗುತ್ತಿಹಪಡೆ ತಿರುಗುತಿದೆ
ತಾನಾಂತುಭೀತಿಯನು ॥ ೨೭ ॥ ಹರುಷವಿಲ್ಲದೆ ಸಕಲಸೈನ್ಯವು । ತಿರು
ಗುತಿದೆ ಸಂಗರದ ಮಧ್ಯದೊ । ಳುರುಭಯವತಾನಾಂತು ಕದನೋತ್ಸಾ
ಹವನು ತೊರೆದು ॥ ನೆರೆದು ಸುತ್ತಲು ಬಳಸಿಕೊಂಡು ಬ । ವರದೊ
ಳು ಸಕಲ ಕಪಿಗಳೆಲ್ಲರು । ಪೊರೆವುತಿಹರೀ ರಾಮಲಕ್ಷ್ಮಣರನತಿ ಜಾಗ
ರದೆ ॥ ೨೮ ॥ ಬಿಡುಭಯವನೆಲೆ ಸೀತೆ ಸಾಧ್ವಿಯೆ । ನೊಡರಿಸುವ ಲಕ್ಷಣಗ
ಳಂಬಲೆ । ಪಡೆಯದವರೆಂದರಿತು ನೋಡೀ ರಾಮಲಕ್ಷ್ಮಣರ ॥ ಪೊಡವಿ
ಯೊಳಳಿದ ಜನರಿಗಿಂತಿರ । ದೊಡಲಕಾಂತಿಯು ಕೇಳುಜಾನಕಿ । ನುಡಿದಿ
ರುವೆನಿಂದೆನಗೆ ನಿನ್ನೊಳಿರುತಿಹ ಸಖತನದೆ ॥ ೨೯ ॥ ನಾನುನಿನಗೀ ಸಂಗ
ತಿಯ ನನು । ಮಾನವಿಲ್ಲದಹಾಗೆ ಪೇಳದೆ । ಜಾನಕಿಯೆ ಕೇಳನೃತವನು
ನುಡಿವವಳುನಾನಲ್ಲ ॥ ನಾನು ನಿಶ್ಚಯವಾಗಿ ನುಡಿದೆನು । ನೀನು ನನ್ನ
ಮನದೊಳು ಸೇರಿದೆ । ಮಾನಿನೀಮಣಿ ನಿನ್ನ ಸಚ್ಚರಿತೆಗಳಬಲದಿಂದ ॥
॥ ೩೦ ॥ ಜನಕಸುತೆನೀಂ ಕೇಳು ಬವರದೊ । ಳನಕುಲೋತ್ತಮ ರಾ
ಮಲಕ್ಷ್ಮಣ । ರನದೆಬೇಂದ್ರನು ಜಯಿಸಲಾರನು ತನ್ನ ಬಲಸಹಿತ ॥
ಘನಪರಾಕ್ರಮದಿಂದೆ ನಿರ್ಜರ । ದನುಜಕಿನ್ನರ ಯಕ್ಷರೊಳಗೀ ।
ರ್ವನು ಸಮರ್ಥನೆನಿಸನು ರಘುನಂದನರ ಜಯಿಸಲ್ಕೆ ॥ ೩೧ ॥ ಇನಿತು

ಸರ್ವೋತ್ಕೃಷ್ಟವೆಂದೆನಿ | ಸಿ ನುತಿವಡೆದ ಸುಲಕ್ಷಣಂಗಳ | ನು
ನೆರೆನೋಡುತ ರಾಮಲಕ್ಷ್ಮಣ ರಂಗಗಳೊಳೀಗ || ನಿನಗೆನಾಂ ಪೇಳದೆನು
ನೋಡೆಲೆ | ಜನಕನಂದನೆ ನೀನು ರಘುನಂ | ದನರ ದೇಹದೊಳಿರ್ಪ ಸ
ಲ್ಲಕ್ಷಣಗಳಿಲ್ಲವೆನು ||೧೦|| ಚಲಿಸಲಾರದೆ ರಾಮಲಕ್ಷ್ಮಣ | ರಿಳೆಯೊಳ
ಗೆ ಬಿದ್ದಿದ್ದರಿಬ್ಬರ | ನುಳಿಯದಿರ್ಪುದು ಭಾಗ್ಯಲಕ್ಷ್ಮಿಯು ಮೇದಿನೀತ
ಳದಿ || ಅಳಿದ ಮಾನವರೆಲ್ಲರಿಗೆ ಮುಖ | ಗಳು ವಿಕಾರವೆನಿಸುತ ಕಳೆ
ಗುಂ | ದಿಳೆಯೊಳಂತು ವಿರಾಜಿಸವೆ ಕಾಣಿಸುವುವೆಲ್ಲರಿಗೆ ||೧೧|| ಇ
ವರು ಸಾವನು ಹೊಂದುವವರ | ಲ್ಲವನಿಯೊಳು ಮಾನವರ ರೂಪವ | ನು
ವಹಿಸಿದ ದೇವತೆಗಳಲ್ಲವೆ ರಾಮಲಕ್ಷ್ಮಣರು || ಇವರನೀ ಹದಿನಾಲ್ಕು
ಲೋಕದೊ | ಳು ವಧಿಸುವರಾರಿಹರು ಕೇಳಂ | ದವನಿಜೆಯನಾ ತ್ರಿಜ
ಟೆ ಸಂತೈಸಿದಳು ಪಲತೆರದೆ ||೧೨|| ಧರಣಿಜಾತೆಯೆ ಕೇಳು ನಾನು ವಿ |
ವರಿಸಿ ಪೇಳಿದ ಲಕ್ಷಣಂಗಳ | ನರಿತು ಬಿಡು ಭಯ ಶೋಕ ಮೋಹಂಗಳ
ನು ಚಿತ್ತದಲಿ || ಹರುಷವನು ತಾಳುತ್ತ ಚಿತ್ತವ | ನಿರಿಸು ಸುಸ್ಥಾಯಿ
ಯೊಳಗೆಂದೆನು | ತರುಹಿದಳತಿ ರಹಸ್ಯದಿಂದಾ ತ್ರಿಜಟೆ ಜಾನಕಿಗೆ ||೧೩||
ಜನಕಸುತೆ ತನಗಾ ತ್ರಿಜಟೆ ಪೇ | ಳ್ದನುಡಿಗಳ ನೊಲಿದಾಲಿಸುತ್ತತಿ |
ವಿನಯದಿಂದಲೆ ಕೈವಿಡಿದು ಗೌರವಿಸುತಾಕೆಯನು || ಮನುಕುಲೋತ್ತ
ಮರಿಬ್ಬರಿಗೆ ನೀ | ನು ನುಡಿದಂದದೆ ಶುಭಗಳೊಡರಿಸ | ಲೆನುತ ಪೇಳ್ದ
ವಳೊಡನಿಳಿದಳಾ ವರವಿಮಾನವನು ||೧೪|| ವರವಿಮಾನವನಿಳಿದು ರಾಘ
ವೆ | ನರಸಿ ಬಳಿಕಾ ತ್ರಿಜಟೆಸಹಿತಾ | ಧರಣಿಯೊಳಿರಲು ಕಾವಲಿನ ರಾಕ್ಷ
ಸಿಯರೈತಂದು || ಭರದೊಳವನೀಜಾತೆಯನ್ನು ಹೆ | ದರಿಸುತ ಕರೆದು
ಕೊಂಡುಬಂದರು | ಮೊರೆವ ಶೋಕಾವನಕೆ ಸುತ್ತಲು ಸುತ್ತಿಕೊಂ
ಡಿರದೆ ||೧೫|| ಜನಕನಂದನೆ ಯುದ್ಧಭೂಮಿಗೆ | ದನುಜ ನಾರಿ
ಯರೊಡನೆ ನಡೆತಂ | ದು ನೆಲದೊಳು ಬಿದ್ದಿದ್ದ ಪತಿದೇವರರ ನೀ
ಕ್ಷಿಸುತ || ಮನದೊಳು ವಿಷಾದವನು ತಳೆದಾ | ವನಕೆ ಮತ್ತೆ
ಬರುತ್ತಡಿಗಡಿಗೆ | ಘನ ಮನೋವ್ಯಥೆಯಿಂದೆ ಯೋಚಿಸುತಿದ್ದಳಂದಿರ
ದೆ ||೧೬|| ತನ್ನಿನಯ ದೇವರರ ಕಷ್ಟಗ | ಳನ್ನು ತಪ್ಪಿಸಬೇಕೆನು
ತ ಸಂ | ಪನ್ನಮತಿ ಭೂಜಾತೆ ಭಕ್ತಿಯೊಳಾವನದ ನಡುವೆ || ತನ್ನೆರಡು
ಕೈಗಳನು ಜೋಡಿಸಿ | ಬಿನ್ನವಿಸಿ ನಮಿಸುತ್ತ ಭಾಸ್ಕರ | ನನ್ನು ಜಾನಿಸು
ತಿದ್ದಳನುಪಮ ಸಂಸ್ತುತಿಗಳಿಂದೆ ||೧೭|| ಸುರಪವೈರಿಯ ಬಾಣತತಿ
ಯಿಂ | ದುರೆ ಬಳಲಿ ರಣರಂಗದೊಳು ಚೇ | ತರಿಸಿಕೊಳ್ಳದೆ ಮೂರ್ಛೆ

ಯಿಂದಲೆ ಬಿದ್ದುಕೊಂಡಿರುವ ॥ ತರಣಿವಂಶ ಲಲಾಮರೆನ್ನಿಸಿ । ದರಘುನಂದನರನ್ನು ಕುರಿತನ । ವರತಚಿಂತಿಸುತಿದ್ದಳಾವನದೊಳಗೆವೈದೇಹಿ ॥೪೦॥

ಇಂತು ಇಪ್ಪತ್ತು ನಾಲ್ಕನೆಯ ಅಧ್ಯಾಯ ಸಂಪೂರ್ಣವು.
ಪದ್ಯಗಳು ೧೨೧೩.

ಇಪ್ಪತ್ತೈದನೆಯ ಅಧ್ಯಾಯ.

ಸೂಚನೆ ॥ ಬಂದು ಕಾಳಗದೊಳು ಸುರಪಜಿತು ।
ವಿಂದೆ ಮೂರ್ಛೆಯನಾಂತ ದಶರಥ ।
ನಂದನರನಾ ಗರುಡವೈದಡವುತ್ತ ಲೆಬ್ಬಿಸಿದ ॥

ಧುರದೊಳಾ ಕಪಿವೀರರೆಲ್ಲರು । ಕೊರಗುತತಿ ಖೇದವನು ತಾಪಾಂ । ತು ರಘುನಂದನರಿಬ್ಬರನು ತಾವ್ಸುತ್ತಿಕೊಂಡಿರದೆ ॥ ನೆರೆಮರುಗಿ ಕೊರಗುತ್ತ ಮುಂದಿನ । ಪರಿಯಕಾಣದೆ ಧೈರ್ಯವನುಳಿದು । ಶಿರವಬಾಗಿಸಿ ಮರುಗುತ್ತಿದ್ದರು ಸುರಿಸಿಕಂಬನಿಯ ॥ ೧ ॥ ಸುರಪಜಿತು ಮಾಯಾಕವಚವನು । ವಿರಚಿಸು ತ್ತಂಬರದೊಳಡಗಿ ಬ । ವರದೊಳೋರ್ವರು ತನ್ನನರಿಯದತೆರದೆ ಕಡುಮುಳಿದು ॥ ತರತರದ ಶಸ್ತ್ರಾಸ್ತ್ರ ಪಾತವ । ನಿರದೆ ಬೀಳಿಸುತೆಲ್ಲರನು ಕೊಂ । ದು ರಘುನಂದನರನ್ನು ಮೂರ್ಛೆಗೆ ಡಹಿದನೀದಿನದೆ ॥ ೨ ॥ ಇವರು ಭೂಮಿಯೊಳೆಂತು ಬದುಕುವ । ರಿವರು ಮೊದಲಂತಾಹವ ದೊಳಂ । ದಿವರ ಶತ್ರುಗಳೊಡನೆ ಜಗಳವನೆಂತು ಮಾಡುವರು ॥ ಇವರ ಕಷ್ಟವನೀಗ ತಪ್ಪಿಸು । ವವರದಾರಿಹ ರಕಟನೆನುತ್ತ ಕ । ಪಿವರರೆಲ್ಲರು ಕೊರಗಿ ಗೋಳಿಡುತಿದ್ದರಡಿಗಡಿಗೆ ॥ ೩ ॥ ಇಂತು ವಾನರರ್ವೈದೆ ರಣದೊಳು । ಚಿಂತಿಸುತಿರಲು ರಾಘವನು ಸಮ । ನಂತರದೆ ಚೇತರಿಸುತೆದ್ದನು ತಾನೆತನ್ನೊಳಗೆ ॥ ಅಂತರಂಗದೊಳೆಲ್ಲ ಕಪಿಗಳು । ಸಂತಸವನೈದಿದರು ರಾಘವ । ನಂತುಬಿದ್ದಿಹ ಲಕ್ಷ್ಮಣನಕಂಡಿರದೆ ದುಃಖಿಸಿದ ॥ ೪ ॥ ತಮ್ಮ ಲಕ್ಷ್ಮಣ ಸತ್ತೆಯಾ ನೀ । ನೆಮ್ಮೊಡವೆರಸಿ ವನಕೆ ನಡೆತಂ । ದೆಮ್ಮನು ಪಲಪ್ರತೆರಗಳಿಂದಲೆ ರಕ್ಷಿಸಿದೆಯಲ್ಲ ॥ ನೆಮ್ಮದಿಯನಾಂತಿರದೆ ರಣದೊಳು । ಸುಮ್ಮನಸುವನು ತೊರೆದೆಯಾ ಚಿ । ಕ್ಕಪ್ಪನಿಗೆ ನಾನೇನಹೇಳುವೆನೆಂದು ಮರುಗಿದನು ॥ ೫ ॥ ನನ್ನೊಡನೆನೀಂ ವ

ನಕೆ ಬಂದಂ । ತಿನ್ನು ಯಮಪುರಿಗಾನು ಬರುತಿಹೆ । ನಿನ್ನೊಡನೆ ರಣ ರಂಗದೊಳು ಜೀವವನುಬಿಡುತಿಹೆ ॥ ನಿನ್ನನುಳಿದಂ ತವನಿಯೊಳು ನಾ । ನಿನ್ನಬದುಕಲಿ ತಮ್ಮ ಹೇಳೆಂ । ದೆನ್ನುತತ್ತನು ರಾಮನುಂದಡಿ ಗಡಿಗೆ ಬಿಸುಸುಯ್ದು ॥ ೬ ॥ ನಿನ್ನ ಪಂಙತಿಗೇನಹೇಳಲಿ । ನಿನ್ನಬಂದವನೆ ನೆನೆದು ನಿತ್ಯವು । ತನ್ನಮನದೊಳು ಬೆಂದುಬೆಂಡಾಗಿಹ ಸುಮಿತ್ರೆಗೆ ನಾಂ ॥ ನನ್ನ ಮುಖವನದೆಂತು ತೋರಿಸ । ಲೆನ್ನುತಾ ರಘುವರನು ಲಕ್ಷ್ಮಣ । ನನ್ನು ಕಂಡಡಿಗಡಿಗೆ ರೋದಿಸುತಿದ್ದನನುಪರಮ ॥ ೭ ॥ ನನಗೆ ಜಾನಕಿಯೇತಕಿನ್ನು ಕ । ದನವಗೆಯ್ವುದಿದೇಕೆ ರಾಜ್ಯದ । ನೆನಪದೇತಕೆ ಲಕ್ಷ್ಮಣಾ ನೀನಳಿದಮೇಲಿನ್ನು ॥ ನನಗದಾರ್ಯೈದಿಕ್ಕು ಕಾಡಿನೊ । ಳೆನುತ ಸೌಮಿತ್ರಿಯನು ಕಂಡಳು । ತ ನಯನಗಳೊಳು ನೀರಸುರಿಸುತ್ತಿದ್ದನಾ ರಾಮ ॥ ೮ ॥ ಇಂತು ತಮ್ಮನಕಂಡು ರಾಮನು । ಸಂತತವು ಮರುಗಿ ಸುತಿರಲು ಸಮ । ನಂತರದೊಳಾ ವೈನತೇಯನು ತೀವ್ರ ತಾನಿದನು ॥ ಅಂತರಿಕ್ಷದೊಳೈತರುತ ಬಹು । ಸಂತ್ರಸವನಾಗಿಸಲು ಸಾಗರ । ದಂತೆ ಕಾಣುವ ಯುದ್ಧಭೂಮಿಗೆ ಬಂದನತಿಭರದೆ ॥ ೯ ॥ ಗರುಡನನು ನೋಡಿವರಖಿಳ ವಾ । ನರರು ಮೇಲೆ ನಭಸ್ಥಳದೊಳಾ । ಗರುಡನನು ಕಂಡೊಡನೆ ರಘುವೀರರನು ಬಿಗಿದಿದ್ದ ॥ ಉರಗಗಳು ಭೀತಿಯನುಪೊಂದುತ । ಭರದೊಳಲ್ಲಿರ ದೋಡಿಪೋದವು । ಗರಿಗೆದರುತಾ ವೈನತೇಯನಿಳಿದನು ಧಾರಿಣಿಗೆ ॥ ೧೦ ॥ ಆಗಸವನುಳಿದಾ ಗರುಡ ಬಲು । ಬೇಗಬಂದವನು ಯುದ್ಧಭೂಮಿಗೆ । ರಾಘವೇಂದ್ರನು ಲಕ್ಷ್ಮಣನಸಹಿತಧಿಕ ಭಕ್ತಿಯಲಿ ॥ ಬಾಗಿ ನಮಿಸಲು ವೈನತೇಯನು । ಕೈಗಳಿಂದಲೆ ಮೈದಡವುತನು । ರಾಗದಿಂದಾಶೀರ್ವದಿಸಿ ತಕ್ಕೈಸಿದನು ಪದೆದು ॥ ೧೧ ॥ ವೈನತೇಯನು ಮತ್ತೆ ದಶರಥ । ಸೂನುಗಳನಿಪ ರಾಮಲಕ್ಷ್ಮಣ । ರಾನನಂಗಳ ನೊಲಿದು ಸವರಿವನಂದು ಗರಿಗಳಲಿ ॥ ಜ್ಞಾನವಪಡೆದು ಸೋದರರಿರುವ । ರಾ ನೆಲದೊಳೊಡನೆದ್ದು ಕುಳಿತರು । ದಾನವೇಂದ್ರನ ಬಾಧೆಯನುಪರಿಹರಿಸಿಕೊಳುತಲ್ಲಿ ॥ ೧೨ ॥ ನೋವು ಕುಂದುಗಳಿಲ್ಲದಾ ನರ । ದೇವತೆಗಳವ ರಾಮಲಕ್ಷ್ಮಣ । ರಾ ವಸುಮತಿಯೊಳೆದ್ದು ಕುಳಿತರು ಪೂರ್ವದಂದಲಿ ॥ ಆವಿಧದ ಮೂರ್ಛೆಯನು ಬಿಡುತಲೆ । ದೀವಿಯಿಂದೆ ವಿರಾಜಿಸಿದರಂ । ದಾವಿಭಂಗಳಿಂ ಮಿಗಿಲೆನಿಸಿದ ಪರಾಕ್ರಮಗಳಿಂದೆ ॥ ೧೩ ॥ ಕರುಣೆಯಿಂದಲೆ ಪದೆದುನೋಡುತ । ಗರುಡನಂದಾ ರಾಮಲಕ್ಷ್ಮಣ । ರಿರುವರನು ಜವದಿಂದಲೆಬ್ಬಿಸಿ ತನ್ನತೊಡೆಯೊಳಗೆ ॥ ಭರದೆಕೂಡಿಸಿ ಮೈದಡ

ವಿ ತ । ನ್ನೆರಡು ಕರತಳದಿಂದೆ ತಕ್ಕೈ । ಸಿ ರಣದೊಳವರ ಶಿರವನಾ
ಘೋಷಿಸಿದನಾ ಬಳಿಕ ॥ ೧೪ ॥ ಪರಿಹರಿಸಿಕೊಂಡೊಡನೆ ಮೂರ್ಛೆಯು ।
ನು ರಘುನಾಥನು ಲಕ್ಷ್ಮಣನಸಹಿ । ತ ರಣರಂಗದೊಳಧಿಕಸಂತೋ
ಷವನು ತಾಳ್ದು ॥ ಶಿರದೊಳಂಜಲಿ ಬದ್ಧನಾಗುತ । ಗರುಡನನತಿ ವಿಧೇ
ಯುತೆಯೊಳಾ । ದರಿಸಿ ಪ್ರಾರ್ಥಿಸಿದನತಿ ಮೃದುಮಧುರ ವಚನದಲಿ ॥
॥ ೧೫ ॥ ಆರುನೀನೆಲೆ ದೇವ ನಿನಗಿಂ । ದಾರುನುಡಿದರು ನಮ್ಮ ಕಷ್ಟ
ವ । ನೀರಣಕೆ ನೀನೆಂತು ಕರುಣಿಸಿಬಂದೆ ನಮ್ಮೆಡೆಗೆ ॥ ಘೋರ ಶರಬಂ
ಧಂಗಳಿಂದೆಮ । ಗಾ ರಚಿಸಿಚರನಾಗಿಸಿದತಿ ಕ । ಠೋರತರ ಬಾಧೆಯನು
ತಪ್ಪಿಸಿ ನಮ್ಮ ರಕ್ಷಿಸಿದೆ ॥ ೧೬ ॥ ಪರಿಮಳಸುಗಂಧವ ನುದರಕೆ ಸ । ವ
ರಿಕೊಳುತ ನೀಂ ದಿವ್ಯವಾಗಿಹ । ವರಕುಸುಮ ಹಾರಂಗಳನು ಕಂಠ
ದೊಳರಿಸಿಕೊಂಡು ॥ ಮೆರೆವ ಕನಕಾಭರಣಗಳ ನಾಂ । ತು ರಮಣೀ
ಯಮೆನಿಸುತ ನಿರ್ಮಲ । ತರ ದುಕೂಲಂಗಳನು ಧರಿಸಿಹೆದೇವ ನೀ
ನಾರು ॥ ೧೭ ॥ ತಂದೆ ದಶರಥರಾಯನನುನಾ । ನಿಂದು ಕಂಡಂತಾಯ್ತು
ತಂದೆಯು । ತಂದೆ ಯಜಭೂಪನನು ಕಂಡವೊಲಾಯ್ತು ಸಂತಸವು ॥
ಬಂದು ನಮ್ಮನು ರಕ್ಷಿಸಿದೆ ದಯೆ । ಯಿಂದ ನೀನೆಲೆದೇವ ನನಗೊಲ ।
ದಿಂ ತಿಳುಹಿಸು ನಿನ್ನ ರೀತಿಯನೆಂದನಾ ರಾಮ ॥ ೧೮ ॥ ಮುನ್ನ ಮಾಡಿದ
ಪುಣ್ಯಫಲದಿಂ । ದೆನ್ನ ಕಷ್ಟವ ನೀನು ಪರಿಸಿದೆ । ನಿನ್ನ ದರ್ಶನದಿಂದೆ ಧ
ನ್ಯನೆನಿಸಿದೆನಾನಿಂದು ॥ ಪನ್ನಗಾಂತಕ ಕರುಣಿಸುತೆನಗೆ । ನಿನ್ನ ತೆರವ
ನು ತಿಳುಹಬೇಕೆಂ । ದೆನ್ನುತ ಕರವಮುಗಿದು ಬೇಡಿದನಾ ರಘೂದ್ವಹ
ನು ॥ ೧೯ ॥ ಎನಲು ಕೇಳ್ದಾ ವೈನತೇಯನು । ಮನದೊಳತಿ ಸಂತೋ
ಷವನು ತಾ । ಳ್ದು ನೆರೆಮನ್ನಿಸುತಾಗ ರಾಮನನೊಡನೆ ವಿನಯದಲಿ ॥
ಘನ ದಯಾರಸದಿಂದೆ ನೋಡುತ । ಮನವೊಲಿದು ಪೇಳದನು ಮೃದು
ಮಧು । ರ ನುಡಿಯಿಂದಲೆ ತನ್ನ ರೀತಿಯ ನಂದುನಿವರಿಸುತ ॥ ೨೦ ॥
ರಾಮಕೇಳೈ ನಾನು ದಶರಥ । ಭೂಮಿಪಾಲನ ಮಿತ್ರನೀ ಸಂ । ಗ್ರಾಮ
ದೊಳು ಮೂರ್ಛೆಯನು ಪೊಂದಿದ ನಿಮ್ಮಗಳನಿಂದು ॥ ನಾಮನದೊಳ
ಗೆ ತಿಳಿದು ಬೇಗನೆ । ತಾಮಸವನಾಗಿಸದೆ ಬಂದಿಹೆ । ನೀ ಮಹಿಗೆನು
ತ್ತಾಗ ಗರುಡನು ತಿಳಿಸುತಿಂತೆಂದ ॥ ೨೧ ॥ ಕ್ಷತ್ರಿಯಕುಲೋತ್ತಮನೆ
ಕೇಳು ಧ । ರಿತ್ರಿತಲದೊಳೆನಗೆ ದಶರಥನು । ಮಿತ್ರನೆನಿಸುವ ನೆನ್ನ ಗ
ರುಡನೆನುತ್ತ ತಿಳಿನೀನು ॥ ಶತ್ರುವಿಂದುರೆ ನೊಂದನಿಮ್ಮನು । ಮಿತ್ರಪು
ತ್ರರೆನುತ್ತ ನೆನೆದಾ । ವೃತ್ರವೈರಿಯ ಶತ್ರುಬಾಧೆಯ ಹರಿಸಲೈತಂದೆ ॥

॥ ೨೨ ॥ ನಾನು ಪಕ್ಷಿಗಳೊಡೆಯನಾಗಿಹೆ । ಭಾನುವಂಶಲಲಾಮ ದಶರಥ । ಮಾನವೇಂದ್ರನಿಗಾಪ್ತ ಸಖನೆಂದೆನಿಸಿಕೊಂಡಿಹೆನು ॥ ನಾನು ನಿಮ್ಮಯಪಿತನಿಗೆ ಬಹಿಃ । ಪ್ರಾಣದಂತಿರ ತಕ್ಕವನು ತಿಳಿ । ನೀನು ನನ್ನನು ಹಿತನು ಮಿತ್ರನು ನಿಮ್ಮಪಿತಗೆನುತ ॥ ೨೩ ॥ ಉರಗಗಳಿವಾ ಕದ್ರುಮಕ್ಕಳು । ಧರಣಿಯೊಳತಿ ಕಠೋರವಿಷವನು । ಧರಿಸಿರುತ್ತಿಹವು ತೀಕ್ಷ್ಣರದನಂಗಳನು ತಾಳ್ದಿಹವು ॥ ಶರದರೂಪಿಂದಿಂದು ನಿಮ್ಮನು ಧುರದೊಳಿವು ನೆರೆಬಾಧಿಸಿದವೀ । ಧರೆಯೊಳಾವನು ಶಕ್ತನಲ್ಲವು ಪರಿಹರಿಸಲಿವನು ॥ ೨೪ ॥ ಸುರರು ದೈತ್ಯರು ನರರು ವಿದ್ಯಾ । ಧರರು ಯಕ್ಷರು ಸಿದ್ಧರು ಪುರಂ । ದರನ ನೊಡವೆರಸುತ್ತಲೀ ರಣರಂಗಕೈತಂದು ॥ ಉರಗಮಯ ಶರಬಂಧವನು ಪರಿ । ಹರಿಸಲಾರರು ಮಾಯೆಯಿಂದಿವು । ಶರಗಳಾಗುತ ನಿಮ್ಮನಾಶ್ರಯಿಸಿದವು ನೆರೆನೆರೆದು ॥ ೨೫ ॥ ಹಗಲಿರುಳು ನೀವೀ ರಣಮಹಿಯೊ । ಳಗತಿ ಜಾಗ್ರತೆಯನ್ನು ಹೊಂದುತ । ನಗಗಳೊಳು ಕಾಳಗವನಾಗಿಸಬೇಕು ಮುಂದಿನ್ನು ॥ ಬಗೆಬಗೆಯಮಾಯೆಗಳನಾಗಿಸು । ತ ಗಗನದೊಳಡಗಿಂದ್ರಜಿತುವು ನಿ । ಮಗೆ ತಲೆಯತೋರಿಸದೆ ಯುದ್ಧವನೆಸಗುವನು ಮುಳಿದು ॥ ೨೬ ॥ ಅಸುರರೊಳುದಾಸೀನವನುಸೀ । ವೆಸಗಲಾಗದು ಕರುಣವನು ಬಿ । ಟ್ಟು ಸಮರವನಾಗಿಸುವುದೀ ರಜನೀಚರರೊಳನ್ನು ॥ ಜಸವಡೆದಿಹರು ಕೂಟಯುದ್ಧದೊ । ಳಸುರರೆಲ್ಲರು ನೀವು ರಣದೊಳು । ಬಸವಳಿದುದೇಸಾಕ್ಷಿ ಯೆನುತಾ ಗರುಡಪೇಳಿದನು ॥ ೨೭ ॥ ಕೇಳುರಾಘವ ನೀನು ರಣದೊಳು । ಲೀಲೆಯಿಂದಲೆ ಸಕಲರಾಕ್ಷಸ । ಜಾಲವನು ಸಂಹರಿಸಿ ದಶಕಂಧರನ ತಲೆಗಳನು ॥ ಸೀಳಿ ನಿಶಿತಾಸ್ತ್ರಂಗಳಿಂದೆ ವಿ । ಶಾಲಲೋಚನೆ ಜಾನಕಿಸಹಿತ । ಪಾಲಿಸುವೆ ಭೂವಲಯವ ನಯೋಧ್ಯಾಪುರಿಗೆಪೋಗಿ ॥ ೨೮ ॥ ನಿನಗೆಮಂಗಳವಾಗಲಿ ದಶಶಿ । ರನನು ವಧಿಸುತ ಮೇದಿನೀಸುತೆ । ಯನು ಪಡೆದಯೋಧ್ಯೆಯನು ಸೇರುತ ಭರತನನ್ನೊಲಿಸಿ ॥ ಮನವೊಲಿದು ನೀಂ ಪಾಲಿಸು ಧರಣಿ । ಯನೆಲೆ ರಾಘವ ನಾನುಹೋಗುವೆ । ನೆನುತ ರಾಮನಿಗೆರಗಿಸುತ್ತುಬಳಸಿದ ನಾಗರುಡ ॥ ೨೯ ॥ ಅನುಜ ಲಕ್ಷ್ಮಣನೊಡನೆ ರಘುನಾ । ಥನತಿ ಭಕ್ತಿಯೊಳೆರಗಿ ಕೈಮುಗಿ । ದು ನುತಿಸಿದನಾ ವೈನತೇಯನನಂದು ಸಂತಸದೆ ॥ ಘನವಯಾರಸದಿಂದೆ ಮೈದಡ । ವಿ ನೆರೆಮನ್ನಿಸಿ ರಾಮಲಕ್ಷ್ಮಣ । ರನುಪದೆದು ತಕ್ಕೈಸಿ ಗರುಡನು ನಭಕೆಹಾರಿದನು ॥ ೩೦ ॥ ಪರಮಭಕ್ತಿಯ ಸಾಂತಖಿಳ ಕಪಿ । ವರರು ಬಳಿಕಾಕ್ಷೇಮಕಾರಿಗೆ । ಶಿರವ

ಬಾಗಿಸಿ ನಮಿಸಿದರು ಕೈಗಳನುಜೋಡಿಸುತ ॥ ಹರಿಸಿವಾನರರೆಲ್ಲರ ನಧಿ
ಕ । ಹರುಷದೊಳು ಬಂದಂತೆಗಗನದೊ । ಳರದೆಪೋದನು ಗರುಡನಂ
ದಚ್ಚರಿಯನಾಗಿಸುತ ॥ ೨೧ ॥ ತಿಳಿದು ಮೂರ್ಛೆಯನಿಂತು ಮುದವನು ।
ತಳೆದು ರಘುಕುಲವಾರ್ಧಿ ಚಂದ್ರನು । ಬಳಿಕಖಿಳವಾನರರ ನೊಲಿಸಿದ
ನಾರಣಾಂಗಣದೆ ॥ ಬಲಪರಾಕ್ರಮ ಕಾಂತ್ರಿಶಕ್ತಿಗ । ಳೊಳಗೆ ತಾವೆರಡ
ಷ್ಟ್ಯನಿಸಿ ಕಂ । ಗೊಳಿಸಿ ಯುದ್ಧಕೆಸಿದ್ಧರಾದರು ರಾಮಲಕ್ಷ್ಮಣರು ॥
೨೨ ॥ ಚೇತರಿಸಿ ತಾವ್ರೊದಲಿನಂತಾ । ಭೂತಲದೆ ಕಾಳಗಕನಡೆತಂ ।
ದಾತರಣಿಕುಲ ಸಾರ್ವಭೌಮರ ನಲ್ಲಿನೋಡುತ್ತ ॥ ಭೀತಿಯನುಳಿದು ಕ
ಪಿಗಳೆಲ್ಲರು । ಮಾತನಾಡುತ ಸಂತಸವಡೆದ । ರಾತೆರದೊಳು ವಿಭೀಷಣ
ನು ಸಂತಸವನ್ನೈದಿದನು ॥ ೨೩ ॥ ಪರಮಸಂತಸದಿಂದಿರದೆ ಸಂ । ಗರ
ದೊಳು ಸಕಲ ಕಪಿಗಳೆಲ್ಲರು । ನೆರೆನೆರೆದೊಡನೆ ಸಿಂಹನಾದಗಳನ್ನು ವಿ
ರಚಿಸುತ ॥ ಭರದೊಳಾ ಕಪಿಚೇಷ್ಟೆಗಳ ನೊಲಿ । ದು ರಚಿಸುತ್ತವನೀ
ತಲವಹೊಡೆ । ದರತಿ ದೀರ್ಘವೆನಿಸಿದ ಬಾಲಗಳಿಂದೆವಲ್ಗಿರಿನು ॥ ೨೪ ॥
ಧರಿಸಿಕಾರ್ಮುಕ ಶರಗಳನು ತಾ । ವರಿಗಳೊಡನೆ ಕದನಕೆನಿಂದರು । ಭ
ರದೊಳಂದಾ ರಾಮಲಕ್ಷ್ಮಣ ರಿಬ್ಬರುರವಣಿಸಿ ॥ ತರಣಿಸುತ ಸುಗ್ರೀವ
ನಾಕಪಿ । ವರರನೊಲಿಸುತ ಕೂಡೆದೈತೇ । ಯರೊಳು ಕಾಳಗಕೆಬ್ಬಿಸಿ
ದನಾ ರಾಮನಾಜ್ಞೆಯಲಿ ॥ ೨೫ ॥ ಘನತರವ ಕೋಲಾಹಲಗಳನು ।
ದನಕೆಬಂದಂತೆಸಗಿ ಬಂಡೆಗ । ಳನುಪಿಡಿದು ವಾನರರುನಿಂದರು ಯುದ್ಧ
ಭೂಮಿಯಲಿ ॥ ದನುಜರೊಡೆಯ ವಿಭೀಷಣನು ನಿಂ । ದನು ದಶಶಿರನ
ಮೇಲೆ ಮುಳಿದು ಕ । ದನಕೆ ನಾಲ್ವರುಮಂತ್ರಿಗಳೊಡನೆ ತಾಳ್ದು ಚಾ
ರ್ಮುಕವ ॥ ೨೬ ॥ ತ್ವರಿತದಿಂದೈತಂದು ದಶಕಂ । ಧರನ ಪದಪಂಕೇಜಕೆ
ನಮಿಸಿ । ಚರರುಪೇಳ್ದರು ದೇವಕೇಳೈ ಭರದೊಳಿಂದ್ರಜಿತು ॥ ಉರಗ
ಪಾಶಗಳಿಂದೆ ಬಂಧಿಸು । ತ ರಣದೊಳು ಮೂರ್ಛೆಯನು ಹೊಂದಿಸಿ ।
ದ ರಘುವೀರರನಾ ಗರುಡನೆಬ್ಬಿಸಿದನೆಂದೆನುತ ॥ ೨೭ ॥ ಏಸಿದೆತ್ತಣವಾ
ರು ನನಗನು । ಮಾನವಾಗಿಹು ದುರಗಬಂಧವ । ನೀನೆಲದೊಳಗೆ ಪರಿ
ಹರಿಪರಾರಿಹರು ಯೋಚಿಸಲು ॥ ವೈನತೇಯನು ಕರುಣದಿಂದಾ । ಮಾ
ನವೇಂದ್ರರ ನೆಬ್ಬಿಸಿದೊಡಿಂ । ನೇನಮಾಡುವುದೆಂದೆನುತ ರಾವಣನು
ದುಃಖಿಸಿದ ॥ ೨೮ ॥ ನನ್ನ ಸುತನಿಂದ್ರಜಿತು ರಣದೊಳು । ತನ್ನರಿಗಳಹ
ರಾಮ ಲಕ್ಷ್ಮಣ । ರನ್ನು ಕೊಂದೈತಂದನು ಭುಜಗಪಾಶ ಬಂಧದಲಿ ॥
ಯನ್ನಿನಂತಿವರೆದ್ದು ಜೀವಿಸ । ಲಿನ್ನುಮಾಡುವುದೇನು ಬಂದುದು ।

ನನ್ನ ಮರಣದ ಕಾಲವೆನುತಸುರೇಂದ್ರ ಬಿಸುಸುಯ್ದ ॥ ೩೯ ॥ ಇವರು ಮಾನುಷಮಾತ್ರದವರ । ಲ್ಲಿವರು ನನ್ನನು ಭರದೆ ಕೊಲ್ಲುವ । ರಿವರು ವಿಷ್ಣುವಿನಂಶದಿಂ ದಲವನಿಯೊಳುದಿಸಿಹರು ॥ ಇವರ ಜಸೆಯಿಂ ದನ್ನಖಿಳ ಬಲಂ । ಧವರಿಗೆ ನನಗೆ ಲಂಕೆಗೆ ವಿನಾ । ಶ ವೊದಗಿದುದೆಂದೆನುತ ರಾವಣನಳುಕಿ ಶೋಕಿಸಿದ ॥ ೪೦ ॥

ಇಂತು ಇಪ್ಪತ್ತೈದನೆಯ ಅಧ್ಯಾಯ ಸಂಪೂರ್ಣವು.
ಪದ್ಯಗಳು ೧೨೫೩.

ಇಪ್ಪತ್ತಾರನೆಯ ಅಧ್ಯಾಯ.

ಸೂಚನೆ ॥ ದನುಜರೆಲ್ಲರು ಸತ್ತ ಬಳಿಕಾ ।
ದನುಜನಾಥನ ಕೊಂದು ರಘುನಾ ।
ಥ ನವನೀಸುತೆಯೆಡೆಗೆ ಕಳುಹಿದನಾಂಜನೇಯನನು ॥

ಬಳಿಕ ದಶಕಂಧರನು ದುಃಖವ । ನುಳಿದು ಧೈರ್ಯವನಾಂತು ತನ್ನಯ । ಬಳಿಗೆ ಧೂಮ್ರಾಕ್ಷನನು ಕರೆಯಿಸಿ ರಣಕೆ ನೀಂ ಪೋಗಿ ॥ ತಳುವದೆ ಸಕಲ ವಾನರ । ಬಲಸಹಿತ ರಘುವರನ ಕೊಂದುವ । ಹಿಲದೊಳೈತಹುದೆನ್ನೆಡೆಗೆನುತ ರಣಕೆ ಕಳುಹಿದನು ॥ ೧ ॥ ಒಡೆಯನಾಜ್ಞೆಯನಾಂತು ಜಗಳಕೆ । ಪಡೆ ಸಹಿತ ನಡೆತಂದು ನಿಂದಾ । ಕಡುಪರಾಕ್ರಮಿಯೆನಿಪ ಧೂಮ್ರಾಕ್ಷನನು ಸಂಗರದೆ ॥ ಬಿಡದೆ ಕೊಂದನು ಪವನಸಂಭವ । ತಡೆಯ ಗರ್ಜಿಪ ವಜ್ರದಂಷ್ಟ್ರನ । ಕಡಿದು ಹಾಕಿದ ನಂದು ವಾಲಿಜ ನೊಂದು ಕಲ್ಲಿನಲಿ ॥ ೨ ॥ ಪವನಸಂಭವ ನಾಯುಕಂಪನ । ನು ವಧಿಸಿದನಾಬಳಿಕ ಕೊಂದನು । ಬವರದೊಳಗಾ ನೀಲನುರೆಮುಳಿದಾ ಪ್ರಹಸ್ತನನು ॥ ವಿವಿಧ ಶಸ್ತ್ರಾಸ್ತ್ರಂಗಳ ನಿಡುತ । ಜವದೊಳೈತಂದಾ ದಶಾಸ್ಯನ । ರವಿಕುಲತಿಲಕ ರಾಘವನು ಸೋಲಿಸಿದನನುವರದೆ ॥ ೩ ॥ ಪ್ಲವಗವೀರರ ನಡಿಗಡಿಗೆ ಕೊಂ । ದವಸರದೊಳೆಲ್ಲರನು ಭಕ್ಷಿಸಿ । ಬವರದೊಳು ತನ್ನ ನಿದುರಿಸಿದಾ ಕುಂಭಕರ್ಣನನು । ಜವದೊಳಂದೀಕ್ಷಿಸುತ ಕಡುಮುಳಿ । ದು ವಧಿಸಿದನಾ ರಾಘವೇಂದ್ರನು । ತವಕದಿಂದಲೆ ಪೋಗಿಸುತ ಕಪಿವರರ ಭೀತಿಯನು ॥ ೪ ॥ ಕೊಂದನು

ನರಾಂತಕನ ವಾಸವ । ನಂದನಾತ್ಮಜ ಸಂಹರಿಸಿದನು । ಗಂಧವಹ ಸು
ತನಾ ತ್ರಿಶಿರ ದೇವಾಂತಕರುಗಳನು ॥ ಬಂದುನಿಂದ ಮಹೋದರನ
ಮೇ । ಲಂದು ಬೀಳುತ ಕೊಂದನನಲನ । ನಂದನನೆನಿಪ ನೀಲನುರೆಮು
ಳಿದಬ್ಬರಿಸುತೊಡನೆ ॥ ೫ ॥ ಮುಳಿದುಕೊಂದನು ಮತ್ತನನು ರಣ ।
ದೊಳು ಋಷಭನೆಂದೆಂಬ ಕಪಿವರ । ಬಳಿಕಲುನ್ಮತ್ತನನುಕೂಡೆ ಗವಾ
ಕ್ಷವಧಿಸಿದನು ॥ ಕಲಿತನದೊಳಗ್ಗಳ ನೆನಿಸಿಕೊಂ । ಡಿಳೆಯೊಳತ್ಯು
ನ್ನತ ಶರೀರವ । ತಳೆದು ಮೆರೆವತಿಕಾಯನನು ಲಕ್ಷ್ಮಣನು ಬೀಳಿಸಿದ॥
॥ ೬ ॥ ಸುರಪಜಿತು ನಡೆತಂದು ಮತ್ತೆ ಬ । ವರಕೆ ನಭದೊಳು ತಾನಡ
ಗುತೊ । ಬ್ಬರಿಗೆ ಕಾಣಿಸದಂತೆಶಸ್ತ್ರಾಸ್ತ್ರಂಗಳನು ಸುರಿಸಿ॥ ಧರೆಗುರು
ಳ್ದಿ ಕಪೀಂದ್ರ ರೆಲ್ಲರ । ನಿರದೆಬಳಿಕಾ ರಾಮಲಕ್ಷ್ಮಣ । ರಿರುವರನು
ಮೂರ್ಛೆಗೊಳಿಸುತ ಪಿತನೆಡೆಗೆ ನಡೆತಂದ ॥ ೭ ॥ ತಿಳಿದು ಮೂರ್ಛೆಯು
ನಾ ಪವನಸುತ । ನೊಲವಿನಿಂದಾ ಜಾಂಬವಂತನ । ಬಳಿಗೆ ನಡೆತಂದೆರ
ಗಲಾ ಕಪಿವರನು ಸಂತಸದಿ ॥ ತಲೆದಡವು ತಾಶೀರ್ವದಿಸಿ ತಾಂ । ತಿಳು
ಹಿಸಿದ ನಾಬಳಿಕ ಮನ್ನಿಸಿ । ತಳುವದಾತನಿ ಗೆಸಗಬೇಕಾಗಿರ್ಪ ಕಾ
ರ್ಯವನು ॥ ೮ ॥ ಮರುತತನಯನಿಗೆನೆ ಕೇಳು ನೀನತಿ । ಭರದೊಳಾತು
ಹಿ ನಾದ್ರಿಗೈದುತ । ದರೊಳೆಸೆವ ಕೈಲಾಸ ಋಷಭಾದ್ರಿಗಳ ಮಧ್ಯದಲಿ॥
ತರತರದ ಮೂಲಿಕೆಗಳಿಂದನ । ವರತ ಶೋಭಿತ ಮೆರೆಯುವೋಷಧಿ ।
ಗಿರಿಗೆ ಪೋಪುದು ಶೀಘ್ರಗಮನವೆನಾಂತು ಗಗನದಲಿ ॥ ೯ ॥ ಮೆರೆವ ಘನ
ಸಂಜೀವಕರಣಿಯು । ವರ ವಿಶಲ್ಯಕರಣಿಯು ಪಾವನ । ತರದ ಸಾವ
ರ್ಣ್ಯಕರಣಿಯು ಸಂಧಾನಕರಣಿಗಳು ॥ ಇರುತಿಹವು ವೋಷಧ ಗಿರೀಂ
ದ್ರದೊ । ಳರಸಿ ನೀನವುಗಳನು ತಂದು ಬ । ವರದೊಳೊರಗಿದ ರಾಮ
ಲಕ್ಷ್ಮಣರಸುವ ನುಳುಹೆಂದ ॥ ೧೦ ॥ ಬಳ್ಳಿತೆಂದೆನು ತಾಪವನಸುತ ।
ನಲ್ಲಿನಿಲ್ಲದೆ ನೆಗೆದು ಸುರಪಥ । ದಲ್ಲಿ ಸಾವಿರ ಗಾವುದಂಗಳ ದೂರನಡೆತ
ರುತ ॥ ಎಲ್ಲಗಿರಿಗಳಿಗಿಂತ ಧಾರುಣಿ । ಯಲ್ಲಿ ಯುನ್ನತವೆನಿಸುತಾವಗ ।
ಮೆಲ್ಲಗೆ ಕಾಣುತಿಹ ತುಹಿನಾಚಲಕೆ ನಡೆತಂದ ॥ ೧೧ ॥ ಅಲ್ಲಿರುವ
ಪುಣ್ಯಾಶ್ರಮಂಗಳ । ನೆಲ್ಲನೋಡುತ ಮಾರುತಾತ್ಮಜ । ಮೆಲ್ಲನೈತರುತಿ
ರಲು ಔಷಧಗಿರಿಯು ಹತ್ತಿರಕೆ ॥ ಎಲ್ಲಕಾಲದೊಳಾ ಮಹೀಧರ । ದಲ್ಲಿ
ಮೆರೆವಾ ಮೂಲಿಕೆಗಳಂ । ದಲ್ಲಿಕಾಣದೆ ಮಾಯವಾದವು ಕಂಡು ಮಾ
ರುತಿಯು ॥ ೧೨ ॥ ಬಳಿಕಮಾರುತಿ ತನ್ನಬಾಲವ । ಬೆಳೆಯಿಸು ತೌ
ಷಧ ಗಿರೀಂದ್ರಕೆ । ತಳುವದಂ ದಡಿಗಡಿಗೆ ಸುತ್ತುತಕಿತ್ತು ಬೆಟ್ಟವನು ॥

ಬಲದಕ್ಕೈಯೊಳು ಪಿಡಿದುಕೊಳ್ಳುತ । ಬಳಲಬಂ ದಾಗಸಕೆ ಲಂಘಿಸಿ । ತಳುವದೈತಂದಿಳಿದ ನತಿಶೀಘ್ರದೊಳು ಲಂಕೆಯಲಿ ॥ ೧೩ ॥ ಬಂದು ಜಾಂಬವನಡಿಗೆರಗಿ ನಲ । ವಿಂದೆ ಕೇಸರಿ ತನಯ ನಾತನ । ಮುಂದೆ ಯೋಷಧಿ ಶೈಲವನಿರಿಸಿ ತಾತಚಿತ್ತೈಸು ॥ ಇಂದು ಮೂಲಿಕೆಗಳನು ಕಾಣದೆ । ನೊಂದು ಗಿರಿಯನೆ ತಂದಿಹೆನು ನಾ । ನೆಂದುಪೇಳ್ದು ವಿಭೀಷಣನ ನಾಲಿಂಗಿಸಿದ ನೊಲಿದು ॥ ೧೪ ॥ ಗಿರಿಯಮೂಲಿಕೆಗಳ ಸುಗಂಧವ । ನಿರದೆಯುಚ್ಛ್ವಾಸಿಸಿದಮಾತ್ರಕೆ । ತೊರೆದುಮೂರ್ಛೆಯ ನೆದ್ದುಕುಳಿತರು ರಾಮಲಕ್ಷ್ಮಣರು ॥ ಧುರದೊಳಳಿದಾ ಸಕಲಕಪಿ ವೀ । ರರು ಮಲಗಿದವರೆದ್ದು ಕೂಡುವ । ತೆರದೆ ಶೀಘ್ರದೊಳೆದ್ದು ಕುಳಿತರು ತೊರೆದುಮೂರ್ಛೆಯನು ॥ ೧೫ ॥ ಮೊದಲಿನಂತಾ ರಘುವರ ನತಿಭ । ರದೊಳು ವಾನರ ರೆಲ್ಲರ ಸಹಿತ । ಲೊದಗಿದಾಘನ ಮೂರ್ಛೆಯನು ಪರಿಹರಿಸಿಕೊಂಡೆದ್ದು ॥ ಸದಯದಿಂದಾ ವಾಯುಸುತನನು । ಪದೆದುಮನ್ನಿಸಿ ತಬ್ಬಿಕೊಳ್ಳುತ । ಕದನಕೊಡನೆಯೆ ಸಿದ್ಧವಾದನು ರಾಕ್ಷಸರಮೇಲೇ ॥ ೧೬ ॥ ಸತ್ತದೈತ್ಯರನೆಲ್ಲ ರಾವಣ । ನತ್ತಸುಡಿಸದೆ ಬಿಟ್ಟಿರುವನಿದು । ಉತ್ತಮವೆನಿಸದಾ ದಶಶಿರನಿಗಿಂದು ಯೋಚಿಸಲು ॥ ಸುತ್ತಲುಂ ಲಂಕೆಯನು ಬೇಗನೆ । ಮುತ್ತಿಕೊಳ್ಳುತ ನೀವು ಸುಡುವುದೆ । ನುತ್ತಲಾ ಸುಗ್ರೀವನಿತ್ತನು ಭಟರಿಗಪ್ಪಣೆಯ ॥ ೧೭ ॥ ಉರಿವಬೆಂಕಿಯ ಕೊಳ್ಳಿಗಳನಾಂ । ತುರವಣಿಸಿ ವಾನರರು ನಡೆತಂ । ದಿರದೆಸುಟ್ಟರು ಮಹಡಿ ಗುಡಿ ಮನೆ ಮಂಟಪಂಗಳನು ॥ ಉರಿಸಿದರು ಲಂಕೆಯೊಳಗತಿ ಸುಂ । ದರವೆನಿಪ ವಸ್ತುಗಳನಾ ದನು । ಜರಖಿಳ ಪದಾರ್ಥಗಳ ದಹಿಸುತೆ ಭಸ್ಮಮಾಡಿದರು ॥ ೧೮ ॥ ದ್ವಿವಿದನಾಕಲಿ ಶೋಣಿತಾಕ್ಷನ । ಸುವತೆಗೆದನಾ ಮೈಂದನೆಂಬ ಕ । ಪಿವರನಾ ಯೂಪಾಕ್ಷನನು ಸಂಹರಿಸಿದನು ಬಿಡದೆ ॥ ಪ್ಲವಗವಲ್ಲಭ ವಾಲಿಸುತನಾ । ಬವರದೊಳುಕಂಪನನು ಕೊಂದನು । ರವಿಸುತನು ಕೊಂದಾನಿಕುಂಭನ ನಬ್ಧಿಗುರುಳಿಸಿದ ॥ ೧೯ ॥ ಅನಿಲಸಂಭವ ಕುಂಭನನು ಕೊಂ । ದನು ಮುಳಿದುಸಂಹರಿಸಿದನು ರಾ । ಮನಿರದಾ ಮಕರಾಕ್ಷನನು ತಾನೊಂದುಬಾಣದಲಿ ॥ ಘನಪರಾಕ್ರಮಿ ಶಕ್ರಜಿತುವನು । ಮನಗೆಡದೆ ಸೌಮಿತ್ರಿವಧಿಸುತ । ವನಿಗುರುಳ್ಚಿದ ನಮಿತ ಕೋಪಾಟೋಪವನು ತಾಳ್ದು ॥ ೨೦ ॥ ಮತ್ತೆ ದಶಕಂಧರನು ಹುಂಕರಿ । ಸುತ್ತ ರಾಮನಮೇಲೆ ಜಗಳಕೆ । ಬಿತ್ತರದ ಪಡೆಯೊಡನೆ ನಡೆತಂದಧಿಕಕೋಪದಲಿ ॥ ಸುತ್ತುಬಳಸಿದ ಕಪಿಗಳನು ಕೊ । ಲ್ಲುತ್ತ ಬಂದನು ಬಿಡದೆ ಸಲೆಮುಸೆ ।

ವೆತ್ತ ಕತ್ತಿಗಳಿಂದೆ ಖಂಡಿಸಿ ನೆಲಕೆಬೀಳಿಸುತ ॥ ೨೧ ॥ ತರಣಿಸುತ ಸು
ಗ್ರೀವನು ಮಹೋ । ದರನ ಕಳುಹಿದನಂತಕನ ಮನೆ । ಗುರುಳಿಸಿದ
ನುವಾ ಮಹಾಪಾರ್ಶ್ವನನ್ನುನ್ಮಾಲಿಸುತ ॥ ತರತರದ ಬಾಣಂಗಳಿಂದೆ ಸ ।
ವರುತಿರಲು ವಾನರರನಾ ದಶ । ಶಿರನು ಲಕ್ಷ್ಮಣನಾತನಿದಿರೊಳು ನಿಂದ
ನಾಹವಕೆ ॥ ೨೨ ॥ ಮುಳಿದು ಲಕ್ಷ್ಮಣನೈದೆ ಸಂಗರ । ದೊಳಸುರೇಂ
ದ್ರನಮೇಲೆ ಬಾಣಂ । ಗಳನು ಸುರಿಸುತ್ತಿರಲವನು ಕತ್ತರಿಸಿ ರಾವಣ
ನು ॥ ಬಳಿಕ ಶಕ್ತ್ಯಾಯುಧವ ಕಾರ್ಮುಕ । ದೊಳನುಸಂಧಿಸಿ ಮಂತ್ರಿ
ಸುತ್ತ ಬಿ । ಡಲದು ಮೂರ್ಛೆಗೊಳಿಸುತ ಬೀಳಿಸಿತಿಳೆಗೆ ಲಕ್ಷ್ಮಣನ ॥
॥ ೨೩ ॥ ಇಳೆಯೊಳೊರಗಿ ಪ್ರಜ್ಞೆಯಿಲ್ಲದೆ । ಬಳಲಿ ಮೂರ್ಛೆಯನಾಂ
ತ ತಮ್ಮನ । ಲಲಿತ ದೇಹವನೀಕ್ಷಿಸುತ ರಘುವರನು ಬಿಸುಸುಯ್ದು ॥
ತಳೆದು ದುಃಖವ ನಡಿಗಡಿಗೆ ತಾ । ನಳುತ ದೈನ್ಯವನಾಂತು ತಪಿಸು
ತಿ । ರಲು ಸುಷೇಣನುಸಂತವಿಸಿ ರಾಘವನನಾಬಳಿಕ ॥ ೨೪ ॥ ಮರುತನ
ಣುಗನ ಕರೆದುಮನ್ನಿಸಿ । ಕರವಿಡಿದು ಕೊಂಡೊಲಿಸಿ ನುಡಿದನು । ಭರ
ದೊಳಿಂದಾ ವೋಷಧಿಗಿರಿಗೆ ಪೋಗಿಮೊದಲಂತೆ ॥ ಸರಸಿಜೋದ್ಭವ ತನ
ಯ ಜಾಂಬವ । ಕರುಣಿಸುತ ಪೂರ್ವದೊಳು ನಿನಗೊರೆ । ದಿರುವ
ಮೂಲಿಕೆಗಳನು ತರಬೇಕೆನುತ ತಲೆದಡವಿ ॥ ೨೫ ॥ ಆಗಬಹುದೆಂದೆ
ನುತ ನುಡಿದಂ । ದಾಗಸಕೆ ನೆಗೆದಾಂಜನೇಯನು । ಬೇಗಬಂದನು ನಭ
ದೆ ಚಂದ್ರದ್ರೋಣ ಪರ್ವತಕೆ ॥ ಆಗಿರಿಯೊಳರಸುತ್ತ ಲತೆಗಳ । ನಾಗ
ಕಾಣದೆ ಚಿತ್ತದೊಳು ಬೆರ । ಗಾಗಿ ನಗವನೆ ಕಿತ್ತುಕೊಂಡೈತಂದ ನತಿ
ಭರದೆ ॥ ೨೬ ॥ ಬಂದುಲಂಕೆಗೆ ಜವದೊಳಾಗಸ । ದಿಂದಿಳಿದು ಪವಮಾ
ನಸಂಭವ । ನಂದುಶೈಲವನಾ ಸುಷೇಣನಮುಂದೆ ತಾನಿಡಲು ॥ ತಂದ
ಮೂಲಿಕೆಗಳನು ಕೊಂಡದ । ರಿಂದೆ ಚೂರ್ಣವನೆಸಗಿ ಸಂತಸ । ದಿಂದೆ
ಕೊಟ್ಟನು ಲಕ್ಷ್ಮಣನ ಮೂಗಿಗತಿಜವದಿಂದೆ ॥ ೨೭ ॥ ಜನರುನಿದ್ದಿಸುತೆ
ದ್ದುಕುಳಿತಂ । ತನಿತರೊಳು ಸೌಮಿತ್ರಿ ಬೇಗನೆ । ತನಗೊದಗಿದಾ ಮೂ
ರ್ಛೆಯನು ಪರಿಹರಿಸಿಕೊಂಡೆದ್ದು ॥ ವಿನಯದಿಂದಾ ರಾಮನಿಗೆರಗಿ । ಯ
ನಿಲನಂದನನಂ ಪೊಗಳುತ ಕ । ದನಕೆನಿಂದನು ಮೊದಲಿನಂದದೆ ಮತ್ತೆ
ಗರ್ಜಿಸುತ ॥ ೨೮ ॥ ದನುಜವಲ್ಲಭ ನಬ್ಬರಿಸುತಾ । ಮನುಜಪಾಲಕ
ನೊಡನೆನಿಂದು ಕ । ದನಕೆ ಕಾದಿದನಖಿಳ ಶಸ್ತ್ರಾಸ್ತ್ರಂಗಳನುಸುರಿಸಿ ॥
ಮನುಕುಲೋತ್ತಮ ರಾಮನಸುರೇಂ । ದ್ರನ ಶರಂಗಳನೆಲ್ಲ ಕಡಿದಾ ।
ದನುಜನಾಥನ ಸೋಲಿಸಿದನಾ ಯುದ್ಧಭೂಮಿಯಲಿ ॥ ೨೯ ॥ ಮತ್ತೆ

ದಶಕಂಧರನು ರಾಮನ । ಹತ್ತಿರಕೆ ನಡೆತಂದು ಹೂಂಕರಿ । ಸುತ್ತ ಹೊಡೆದನು ಶಸ್ತ್ರಸಂಚಯದಿಂದೆ ರಾಘವನ ॥ ಕತ್ತರಿಸುತಾ ಬಾಣಜಾಲವ । ನತ್ತರಾಯ ರಘುವರನಾ ಮಸೆ । ಪೆತ್ತ ಬ್ರಹ್ಮಾಸ್ತ್ರದೊಳು ವಧಿಸಿದನಾ ದಶಶಿರನನು ॥ ೩೦ ॥ ಸುರರು ಕೊಂಡಾಡಿದರು ಪೂಮಳೆ । ಗರೆದುದು ಗಗನಮಂಡಲದೊಳತಿ । ಭರದೆ ದುಂದುಭಿಗಳನು ಬಾರಿಸಿದರು ದಿವೌಕಸರು ॥ ತರಣಿಸಂತಸದಿಂದೆ ನಭದೊಳು । ತಿರುಗಿದನು ಗಂಧವಹನಿಗೆ ಬಲು । ಹರುಷವಾದುದು ರಾವಣಾಸುರ ಸತ್ತುದದರಿಂದೆ ॥ ॥ ೩೧ ॥ ತನ್ನ ಪಗೆಯಹ ರಾವಣಾಸುರ । ನನ್ನು ರಣದೊಳು ರಾಘವೇಶ್ವರ । ನುನ್ನತ ಬ್ರಹ್ಮಾಸ್ತ್ರದಿಂದಲೆ ಕೊಂದುಕೆಡಹುತ್ತ । ಮನ್ನಿಸಿ ಸಕಲ ಕಪಿಗಳನು ಸಂ । ಪನ್ನಮಿತ್ರಿಯೊಳ ಗಪರಕರ್ಮಗ । ಳನ್ನು ಮಾಡಿಸಿದನು ವಿಭೀಷಣನಿಂದೆ ಲಂಕೆಯಲಿ ॥ ೩೨ ॥ ಬಳಿಕ ರಘುಭೂವರನು ಸಂತಸ । ದಳೆದು ತಮ್ಮನಕರೆದು ಪೇಳಿದ । ನೆಲೆಸುಮಿತ್ರಾಸುತನೆ ಕೇಳುವಿಭೀಷಣನನಿಂದು ॥ ತಳುವಮಾಡದೆ ರತ್ನಪೀಠದೊ । ಳೊಲವಿನಿಂದಲೆ ಕೂಡಿಸುತ ನೀಂ । ಬಲುಜವದೆ ಪಟ್ಟಾಭಿಷೇಕವ ನ್ನಾಗಿಸೆಂದೆನುತ ॥ ೩೩ ॥ ಆಗಲೆಂದೆನು ತಣ್ಣನಿಗೆ ಪೇ । ಳ್ದಾಗಲಾ ಸೌಮಿತ್ರಿ ಲಂಕೆಗೆ । ಬೇಗಬಂದು ವಿಭೀಷಣಂಗಾ ಲಂಕೆಯೊಡೆತನವ ॥ ರಾಘವನ ನೇಮದೊಳು ಕೊಟ್ಟನು । ರಾಗದಿಂದಲೆ ರತ್ನಪೀಠದೊ । ಳಾಗಮಾಡಿಸಿದನಭಿಷೇಕವ ನೊಲಿದುಕೂಡಿಸುತ ॥ ೩೪ ॥ ತಳೆದು ಲಂಕಾರಾಜ್ಯಪದವಿಯ । ನೊಲವಿನಿಂದ ವಿಭೀಷಣನು ತಾಂ । ತಳುವದಾ ರಘುನಂದನನ ಸನ್ನಿಧಿಗೆನಡೆತಂದು ॥ ವಲಿಮುಖರು ನೋಡುತ್ತಿರಲಾ ರವಿ । ಕುಲತಿಲಕ ರಾಘವನಚರಣಕ । ಮಲಕೆರಗಿ ಕೊಂಡಾಡಿದನನುಪಮ ಸ್ತುತಿಗಳಿಂದ ॥ ೩೫ ॥ ಕರುಣದಿಂದಾ ರಾಘವೇಂದ್ರನು । ಶಿರವಪಿಡಿದೊಲಿದೆತ್ತಿ ಮನ್ನಿಸಿ । ವರವಿಭೀಷಣನನ್ನು ತಬ್ಬಿಕೊಳುತ್ತ ಕೈಗಳಲಿ ॥ ಪರಮಮಿತ್ರನೆ ಕೇಳುನಿನ್ನಯ । ನೆರವಿಯಿಂದೆ ಜಯಿಸಿದೆನೀ ದಶ । ಶಿರನನಿಂದೆನಗಧಿಕ ಸಂತಸವಾಯ್ತು ನಿನ್ನಿಂದ ॥ ೩೬ ॥ ಧರೆಯೊಳಾ ರವಿಶಶಿಗಳಿರುವನ । ಕರಸನೆನ್ನಿಸಿ ಲಂಕೆಯನುನೀಂ । ಪೊರೆನ್ವದೊಬ್ಬರು ನಿನ್ನನು ಜಯಿಸನಂತೆ ನಾಂನಿನಗೆ । ವರವಕೊಟ್ಟೆಹೆನೆಲೆ ವಿಭೀಷಣ । ಹರುಷದಿಂದಿ ಮೇದಿನಿಯೊಳಗ । ವರತ ಚಿರಜೀವಿಯೆನಿಸಿರೆನುತ ಪೇಳ್ದನಾರಾಮ ॥ ೩೭ ॥ ದನುಜರೊಡೆಯ ವಿಭೀಷಣಂಗಾ । ಮನುಜಪಾಲಕನಿಂತು ವರಗಳ । ನನುಗೊಳಿಸುತಾ ಬಳಿಕ ಕೇಸರಿತನಯನನು ಕರೆದು ॥ ಮನ

ದಾಸಿಯ ತಕ್ಕೈಸುತಲವನ । ತನುವನಾಘ್ರಾಣಿಸುತ ತಲೆಯನು । ಮನದಭೀಷ್ಟವನಂದು ಪೇಳ್ದನು ಬಹುಳಹರ್ಷದಲಿ ॥ ೩೮ ॥ ಮರುತನನುಗನೆ ಕೇಳ್ ಲಂಕೆಗೆ । ಭರದೊಳೀಗಲೆ ಪೋಗಿ ಸೀಸೀ । ವರವಿಭೀಷಣನನುಮತಿಯ ನಾಂತಸುರವಲ್ಲಭನ । ಅರಮನೆಯ ಸೇರುತ್ತ ಜಾನಕಿ । ಗರುಹು ರಾಮನುವಧಿಸಿದನು ಸಂ । ಗರದೊಳಾ ದಶಕಂಠನೆನುತ ಸಂತಸವನಾಂತು ॥ ೩೯ ॥ ಬಳಿಕ ಜಾನಕಿನಿನಗೆ ಸಂತಸ । ದಳೆದು ಪೇಳುವ ನುಡಿಗಳನು ಕೇಳ್ । ಕೊಳ್ದುಲವಿನಿಂದಾಕೆ ಯಭಿಲಾಷೆಯನರಿವುತ್ತಲ್ಲಿಂದ ॥ ತೆಳುವದಿಲ್ಲಿಗೆ ನೀಂಬರುವೆನುತ । ಕಳುಹಿಕೊಟ್ಟನು ರಾಘವೇಂದ್ರನು । ಇಳೆಯಮಗಿಯಾ ಬಳಿಗೆ ಮನ್ನಿಸಿ ವಾಯುನಂದನನ ॥ ೪೦ ॥

ಇಂತು ಇಪ್ಪತ್ತಾರನೆಯ ಅಧ್ಯಾಯ ಸಂಪೂರ್ಣವು.

ಪದ್ಯಗಳು ೧೯೩.

ಇಪ್ಪತ್ತೇಳನೆಯ ಅಧ್ಯಾಯ.

ಸೂಚನೆ ॥ ಬಳಿಗೆಬಂದಾ ಜನಕಜಾತೆಯ ।
ನೊಲಿದು ನೋಡದೆ ರಾಮಚಂದ್ರನು ।
ಹಲವುಬಗೆಯೊಳು ನಿಂದಿಸಿದನತಿ ಕೋಪವೆನುತಾಳ್ದು ॥

ಹನುಮನಾ ರಘುನಂದನಂಗತಿ । ವಿನಯದೊಳೆರಗಿ ದನುಜನಾಥನ । ಮನೆಗೆಬರುತ ವಿಭೀಷಣನ ಹಿಂದುಗಡೆಹರ್ಷದಲಿ ॥ ಅನವರತ ಕಂಗೊಳಿಪ ಶೋಕಾ । ವನಕೆ ತಾನೈತರುತ ಕಂಡನು । ಜನಕಜೆಯ ಶಿಂಶುಪದ ವೃಕ್ಷದಕೆಳಗೆ ಶೀಘ್ರದಲಿ ॥ ೧ ॥ ಉಳಿದು ನಿದ್ರಾಹಾರಗಳನಳು । ತಳುತ ಬಹುಭೀತಿಯನು ಮಾಡುವ । ಪಲಲಭಕ್ಷಕರೆನಿಪ ರಾಕ್ಷಸನಾರಿಯರ ನಡುವೆ ॥ ತಳೆದುದುಃಖವನಿರದೆ ರೋದಿಸು । ತ್ತಿಳೆಯ ಸೀಕ್ಷಿಸಿಕೊಂಡು ಸಾಖ್ಯವ । ನುಳಿದ ಸೀತೆಯಬಳಿಗೆ ಬಂದಾಹನುಮ ವಂದಿಸಿದ ॥ ೨ ॥ ಬಡನೆಸೀತೆಗೆ ಮಣಿದೆರಗಲಾ । ಪೊಡವಿನಂದನೆ ವಾಯುನಂದನ । ನಡಿಗಡಿಗೆ ತಾನೀಕ್ಷಿಸುತಶೋಕವನ ಮಧ್ಯದಲಿ ॥ ನುಡಿಯದತಿ ಸಂತೋಷವನು ತಾಂ । ಪಡೆವದನು ತೋರಿಸಲು ರಾವಣ । ಮಡದಿಗೆಂದನು ರಾಮಚಂದ್ರನು ಪೇಳ್ದನುಡಿಗಳನು ॥ ೩ ॥ ತಾಯೆ

ಜಾನಕಿಕೇಳು ರಾಘವ । ರಾಯ ಸುಖದಿಂದಿಹನು ಕಪಿಸಮು । ದಾಯ ದೊಳು ಸುಗ್ರೀವಲಕ್ಷ್ಮಣರೊಡನೆ ಹರ್ಷದಲಿ ॥ ಜೇಯರಾಘವ ಕೊಂದ ನಿಂದ್ಯ । ತೋಯಪತಿ ದಶಕಂಠನನು ನಿಶಿ । ತಾಯುಧದೊಳಾ ಯುದ್ಧರಂ ಗದೊಳಿಂದು ಮನಗೆಡದೆ ॥ ೪ ॥ ನಿನಗೆ ತನ್ನ ಕ್ಷೇಮವನು ತಿಳಿ । ಸೆನುತ ನಿನ್ನಸಮೀಪಕೆ ಕಳುಹಿ । ದನತಿಶೀಘ್ರದೊಳೆನ್ನನೆಲೆ ಭೂಜಾತೆ ರಾಘವನು ॥ ನಿನಗೆ ಬಹುಸಂತೋಷಕರವೆಂ । ದೆನಿಪ ನುಡಿಗಳನಾಲಿಸು ಜನನಿ । ಮನದದುಃಖವನೆಲ್ಲ ಬಿಡು ದಶಶಿರನು ಸತ್ತಿಹನು ॥ ೫ ॥ ವರವಿಭೀಷಣನೆಸಗಿದಾ ಘನ । ತರದ ಸಾಯಗಳಿಂದಲು ಸಹೋ । ದರನಶೌರ್ಯಾಧಿಕ್ಯದಿಂದಲು ಸಕಲವಾನರರು ॥ ಉರವಣಿಸಿ ತೋರಿಸಿದತಿಭಯಂ । ಕರದ ಕಾಳಗದಿಂದಲಾ ರಘು । ವರನುಕೊಂದನು ಬಂಧುಗಳಸಹಿತಾ ದಶಾಸ್ಯನನು ॥ ೬ ॥ ಕೊಂದುಹಗೆಯನು ರಾಘವನು ನಿನ । ಗಿಂದುತನ್ನಯ ಕುಶಲವನು ಪೇ । ಳೆಂದು ಹೇಳಿಕಳುಹಿದನೆನ್ನನು ನಿನ್ನ ಹತ್ತಿರಕೆ । ಕುಂದದಿರುನೀಂ ದೈವವಶದೊಳು । ಬಂದಕಷ್ಟವ ಪರಿಹರಿಸಿಕೊಂ । ಡಿಂದಿನವರೆಗೆ ಜೀವಿಸಿರುತಿಹೆ ತಾಯೆಲಂಕೆಯಲಿ ॥ ೭ ॥ ನನ್ನ ದೆಸೆಯಿಂ ಜಯವು ಲಭಿಸಿದು । ದಿನ್ನು ನೀಂ ವ್ಯಥೆಯನ್ನು ಕಳೆಯುತೆ । ನಿನ್ನ ಚಿತ್ತವನಿನ್ನು ಸುಸ್ಥಿತಿಯೊಳಿರಿಸೆಲೆ ತಾಯೆ ॥ ತನ್ನಪಗೆಯಹ ರಾವಣಾಸುರ । ನನ್ನು ರಾಮನುಕೊಂದು ಗುಣಸಂ । ಪನ್ನನೆನಿಪ ವಿಭೀಷಣಂಗೊಡೆತನವ ತಾನಿತ್ತ ॥ ೮ ॥ ತೊರೆದು ನಿದ್ರಾಹಾರಗಳ ನೀ । ಶರಧಿಗಾಗಿಸಿ ಸೇತುವನು ರಘು । ವರನನಿಲ್ಲಿಗೆಬರಿಸಿ ಸಂಗರದಲ್ಲಿ ದಶಶಿರನು ॥ ಮರಣವೈದುವ ವೊಲೆಸಗಿದೆನೆಲೆ । ಧರಣಿಜಾತೆಯೆ ಫಲಿಸಿತೆನ್ನುರು । ತರದಶಪಥ ವಿಭೀಷಣನ ವಶದೊಳಿಹುದೀಲಂಕೆ ॥ ೯ ॥ ಮನದೊಳು ಸಮಾಧಾನವನು ಪಡೆ । ಜನನಿ ನಿನ್ನಯಮನೆಯೊಳಿಹೆನೀ । ನೆನಗೆ ನಿನ್ನನು ಕಂಡು ಬಹುಸಂತೋಷವಾಯ್ತೆನಲು ॥ ಜನಕನಂದನೆ ಪದೆದು ನೋಡು । ತ್ತನಿಲನಂದನನನ್ನು ನುಡಿಯದೆ । ಮನದೊಳಿದ್ದಳು ಮೌನಭಾವವನಾಂತು ಹರ್ಷದಲಿ ॥ ೧೦ ॥ ಎಲೆ ಮಹೀಸುತೆ ನೀನು ಸಂತಸ । ದಳೆದು ನನ್ನೊಳದೇಕೆ ನುಡಿಯದೆ । ಬಲಿದಚಿಂತೆಯನಾಂತು ತಲೆವಾಗಿರುವೆಹೇಳೆನಲು ॥ ಎಲೆಪವನಸುತ ಕೇಳು ಗಂಡನ । ಗೆಲವನಾಲಿಸಿ ನನ್ನ ಮನವೊಳು । ಬೆಳೆದಸಂಮೊದದಿಂದೆ ನುಡಿಯಲ್ಕಾರದವಳಾದೆ ॥ ೧೧ ॥ ನನಗೆ ಸಂತೋಷವನೆಸಗಬೇ । ಕೆನುತ ಶುಭ ವಾರ್ತೆಯನು ಪೇಳುವ । ನಿನಗೆ ನಾನಿಂದೇನು ಬಹುಮಾನವನೆಸಗಲೆನುತ ॥ ಮನ

ದೊಳಾಲೋಚಿಸುವೆ ನೀವೇ । ದಿನಿಯೊಳಹ ವಸ್ತುಗಳೊಳಾವುದ ।
ನಿನಗೆ ಕೊಟ್ಟರು ಸಾಂದೆನುತಾ ಸೀತೆ ಪೇಳಿದಳು ॥ ೧೨ ॥ ಪತಿಯೊ
ಳನುರಾಗವ ನಿರಿಸುತಾ । ಪತಿಯಜಯುವನೆ ಸಿತ್ಯವ್ರುಂ ಬಯು । ಸುತಿಹ
ಸೀತೆಯೆ ನೀನು ತಕ್ಕವಳಂತು ನುಡಿಯಲ್ಕೆ ॥ ಕ್ಷಿತಿಸುತೆಯೆ ಕೇಳ್ನಿನ್ನ
ನುಡಿಗಳೆ । ನುತಿವಡೆದ ಶಕ್ರನ ಪದವಿಗಿಂ । ತತಿಶಯದ ಬಹುಮಾನವಾ
ಗಿಹುದೆನಗೆ ಕೇಳಮ್ಮ ॥ ೧೩ ॥ ವೈರಿಯನು ಸಂಹರಿಸಿ ಜಯವನು ।
ಘೋರಯುದ್ಧದೊಳೈದಿದಾ ರಘು । ವೀರನನು ನೀಂ ಕಾಣ್ಬುದೆಂದಾ
ಹನುಮ ನುಡಿಯಲ್ಕೆ ॥ ಧಾರಿಣೀಸುತೆ ಸೀತೆಕೇಳ್ದಾ । ಮಾರುತಿಯ
ನುಡಿಗಳನು ಕೂಡೆ ಸ । ಮೀರಸುತನನುಹೊಗಳಿದಳು ಘನಸಂತಸವ
ನಾಂತು ॥ ೧೪ ॥ ಮರುತನಣುಗನೆ ಕೇಳು ನೀನೀ । ಧರಣಿಯೊಳತಿ ಶ್ಲಾ
ಘ್ಯತೆಯನಾಂ । ತಿರುವೆ ನಿನ್ನೊಳು ಶೌರ್ಯಧೈರ್ಯಸ್ಥೈರ್ಯವಿನಯಗಳು ॥
ಮೆರೆವ ಸತ್ಯಪರಾಕ್ರಮ ಕ್ಷಮೆ । ಕರುಣೆಶಮೆದಮೆ ದಾನದಯೆಗಳು ।
ನೆರೆದು ತುಂಬಿಹವೆನುತ ಜಾನಕಿ ಪೇಳ್ದುನುತಿಸಿದಳು ॥ ೧೫ ॥ ಮತ್ತೆ
ಸೀತೆಯು ಪಾದಗಳಿಗೆರ । ಗುತ್ತ ಪೇಳಿದನೆಲೆಮಹೀಸುತೆ । ಸುತ್ತ ನಿನ್ನ
ನು ಬಳಿಸಿಕೊಂಡೀ ವನದಮಧ್ಯದಲಿ ॥ ಹೊತ್ತು ಹೊತ್ತಿಗೆ ಬಾಧೆಯನು
ಮಾ । ಡುತ್ತ ಪೀಡಿಸಿ ದೀವನಿತೆಯರ । ನಿತ್ತ ಸಂಹರಿಸುವೆನೆನಗೆ ಬೆಸ
ನೀವುದೆಂದೆನುತ ॥ ೧೬ ॥ ಕೇಳು ವಾನರವೀರ ಧರಣೀ । ಪಾಲನಪ್ಪಣೆ
ಗಳನು ಶಿರದೊಳು । ತಾಳಿ ನನ್ನನು ಪೀಡಿಸಿದರಿವರೊಳಗೆತಪ್ಪಿಲ್ಲ ॥
ಖೂಳರಾವಣ ನಾಜ್ಞೆಯಂತೀ । ಬಾಲೆಯರು ಹೆದರಿಸಿದರೆನ್ನನು ।
ಕಾಲವಶದಿಂದೆನಗೆ ಸಂಭವಿಸಿರ್ದುದೀಕಷ್ಟ ॥ ೧೭ ॥ ಅರಸನಪ್ಪಣೆ
ಯಂತೆ ನಡೆಯುವ । ವರೊಳು ಕೋಪವ ಮಾಡಲಾಗದು । ಮರುತ
ನಣುಗನೆ ಕೇಳು ಹಿಂದಣ ಜನ್ಮದಲಿ ನಾನು ॥ ವಿರಚಿಸಿದ ದುರಿತಂಗ
ಳಿಂದಲು । ಪರಮದೌರ್ಭಾಗ್ಯ ದೆಸೆಯಿಂದಲು । ಧರೆಯೊಳೀವಿಧವಾದ
ಕಷ್ಟಂಗಳನು ಹೊಂದಿದೆನು ॥ ೧೮ ॥ ರಾವಣನಳಿದು ಹೋದನದರಿಂ ।
ದೀವನಿತೆಯರು ಮೊದಲಿನಂತೆ ನ । ಗಾವನೋವನು ಮಾಡಲಾರರೆನು
ತ್ತ ಜಾನಕಿಯು । ಭಾವಿಸುತ ಮನದೊಳಗೆಪೇಳಲು । ದೇವಿನಿನಗೀನು
ಡಿವಿಹಿತ ವಹು । ದೀವಸುಧೆಯೊಳು ನೀನೆಸತಿಯರೊಳುತ್ತಮಳೆನಿ
ಸುವೆ ॥ ೧೯ ॥ ಜನಕನಂದನೆ ಕೇಳು ಜಗದೊಳು । ಘನತರದ ಕೀರ್ತಿ
ಯನು ಹೊಂದಿದೆ । ಮನುಕುಲೋತ್ತಮ ರಾಮನಿಗೆ ನೀಂ ಧರ್ಮಪತ್ನಿ
ಯಹೆ ॥ ನನಗೆ ನೀ ನಪ್ಪಣೆಯಕೊಡು ನಿ । ನ್ನಿನಯನೆಡೆಗೈದುವೆನು

ನಾನೆಂ । ದೆನುತ ಕೇಳಲು ಸೀತೆ ಪೇಳಿದಳಾಂಜನೇಯನಿಗೆ ॥ ೨೦ ॥ ಅನಿಲ
ನಂದನ ಕೇಳ್ ರಘುನಂ । ದನನ ನೀಕ್ಷಿಸಲಾನಪೇಕ್ಷಿಪೆ । ನೆನೆಯು ಸೀತೆಯ
ನುಡಿಯ ನಾಲಿಸುತಂಜನಾಸುತನು ॥ ಜನಕಜಾತೆಯೆ ಹಾಗೆಯಾಗಲಿ । ಯ
ನುಜನಿಂದೊಡಗೂಡಿ ದಶಕಂ । ಠನನು ವಧಿಸಿದ ಪತಿಯನೋಡುವೆನೀಸು
ಶೀಘ್ರದಲಿ ॥ ೨೧ ॥ ಎಂದು ಬಿನ್ನವಿಸುತ್ತ ಜಾನಕಿ । ಗಂದತಿಭಕುತಿಯಿಂತೆ
ಕೇಸರಿ । ನಂದನನೆರಗಿ ಬಳಿಕ ಶೋಕವನವನು ತಾನುಳಿದು ॥ ಸಂದಸಂ
ತಸದಿಂದೆ ದಶರಥ । ನಂದನನ ಬಳಿಗೈದಿ ಕೈಮುಗಿ । ದೆಂದನು ಶಿರವ ಬಾಗಿ
ನಮಿಸುತಲಧಿಕ ವಿನಯವಲಿ ॥ ೨೨ ॥ ದೇವ ರಾಘವ ಚಿತ್ತವಿಸು ನೀ । ನಾ
ವನೆವ ದಿಂದೀರಣದೊಳಾ । ರಾವಣನ ಸಂಹರಿಸಿ ಲಂಕಾಪುರವ ಜಯಿಸಿದೆ
ಯೋ ॥ ಭಾವಿಸುತದನು ಸೀತೆಯನು ಸಂ । ಭಾವಿಸಿ ವಿಲೋಕಿಪ್ಪುದು ಜಾ
ನಕಿ । ತೀವಿದ ಜಯವ ನಾಲಿಸುತ ಸಂತಸವನೈದಿವಳು ॥ ೨೩ ॥ ಆಕೆ
ನಿನ್ನನು ನೋಡಬೇಕೆಂ । ಬಾಕುತೂಹಲದಿಂದಿಹಳು ಕರು । ಣಾಕರ
ನೆನೀಂ ಚಿತ್ತವಿಸೆನುತ ಬಿನ್ನವಿಸಲೆರಗಿ ॥ ಆಕಪಿವರನ ನುಡಿಯನಾಲಿಸು ।
ತಾ ಕಮಲದಳ ನೇತ್ರನೆನೆದು ವ । ನೌಕಸರ ಮಧ್ಯದೊಳು ಕರೆಯಿಸಿದ
ನು ವಿಭೀಷಣನ ॥ ೨೪ ॥ ವರವಿಭೀಷಣ ಕೇಳು ನೀನಾ । ಧರಣಿಜಾತೆಸ್ನಾ
ನವನೆಸಗಿ । ಮೆರೆವ ದಿವ್ಯಾಭರಣವಂಗಳ ವಸ್ತುಗಳನೆಲ್ಲ ॥ ಧರಿಸಿಕೊಂ
ಡೆನ್ನಯ ಸಮೀಪಕೆ । ಭರದೊಳೈತರುವಂತೆ ಪೇಳುತ । ಕರೆತರುವುದೆಂ
ದಾತನನು ಕಳುಹಿಸಿದನಾರಾಮ ॥ ೨೫ ॥ ತಳೆದು ರಾಘವನಪ್ಪಣೆಯ ನಾ ॥
ಬಳಿಕ ತನ್ನಂತಃಪುರವರಕೆ । ತಳುವದೈತಂದಾ ವಿಭೀಷಣನಧಿಕ ಹರ್ಷ
ದಲಿ ॥ ಬಳಿಗೆ ಬರಿಸುತ ಸೇವಕಿಯರಾ । ಬಳಗವನು ಮಿಗೆ ಯುಪಚರಿಸಿ
ಸ । ಲ್ಲಲಿತ ಮಧುರವಚೋರಚನೆಯಿಂದಿಂತು ಪೇಳಿದನು ॥ ೨೬ ॥ ಜನ
ಕಸುತೆ ದಿವ್ಯಾಂಗರಾಗವ । ತನುವಿನೊಳು ತಾ ನಿರಿಸಿಕೊಳ್ಳುತ । ವಿನು
ತ ದಿವ್ಯಾಭರಣ ವಸ್ತ್ರಂಗಳನು ತಾ ಧರಿಸಿ ॥ ಇನಯನೆಡೆಗಾ ಶಿಬಿಕೆ
ಯೊಳು ತಾ । ಮನವೊಲಿದು ಕುಳಿತೈತರುವುದೆಂ । ದೆನುತ ಪೇ
ಳುವುದೆಂದು ನುಡಿದನು ಸೇವಕೀಜನಕೆ ॥ ೨೭ ॥ ಅರಸನಾಜ್ಞೆಯ
ನಾಂತು ರಜನೀ । ಚರಿಯರು ವಿಭೀಷಣನೊಡನೆ ನಡೆ । ತರುತ ಶೋಕವ
ನಕ್ಕೆ ಜಾನಕಿಗೆರಗಿ ಭಕ್ತಿಯಲಿ ॥ ಧರಣಿಜಾತೆಯೆ ಕೇಳು ನೀನಾ ।
ತರಣಿವಂಶಲಲಾಮ ನೆಡೆಗೈ । ತರುವುದೀಗಳೆನುತ್ತ ಬಿನ್ನವಿಸಿದರು ಕೈ
ಮುಗಿದು ॥ ೨೮ ॥ ಆನುಡಿಯನಾಲಿಸುತ ಘನಸಂ । ಮಾನದನು
ತಾನೈದಿ ಮನದೊಳು । ಜಾನಕಿ ವಿಭೀಷಣನ ಮುಖವನು ನೋಡಿ

ತಲೆವಾಗಿ ॥ ಸ್ನಾನವನೆಸಗಿ ಗಂಡನಬಳಿಗೆ । ನಾನು ಬರುವೆನೆನುತ್ತ ಪೇ
ಳಲು । ಮಾನವೇಂದ್ರನು ಪೇಳದಂತೆಸಗೆನುತ ಪೇಳದನು ॥ ೨೯ ॥ ಧರ
ಣಿನಂದನೆ ಮಜ್ಜನವೆಸಗಿ । ಮೆರೆವ ರತ್ನಾಭರಣಗಳ ತಾ । ನಿರಿಸಿಕೊ
ಳ್ಳುತ ದಿವ್ಯವಸ್ತ್ರವನುಟ್ಟು ಹರ್ಷದಲಿ ॥ ಮೆರೆವಪಲ್ಲಕ್ಕಿಯೊಳು ಕುಳ್ಳಿ
ರೆ । ಭರವೊಳಾಕೆಯ ನಾವಿಭೀಷಣ । ಕರೆದುಕೊಂಡಾ ಮನುಕುಲೇಂ
ದ್ರನಬಳಿಗೆ ನಡೆತಂದ ॥ ೩೦ ॥ ರಾಯನೀಂಚಿತ್ತವಿಪ್ರದು ಜನಕ । ರಾಯ
ನ ಮಗಳು ಬಂದಿರುವಳೆನು । ತಾಯುಸುರಪತಿ ಬಿನ್ನವಿಸಲಾ ಮನುಕು
ಲೋತ್ತಮನು ॥ ತೋಯಜಾಕ್ಷಿಯನೀಗ ಕಪಿಸಮು । ದಾಯ ಮಧ್ಯ
ದೊಳೆನ್ನ ಹತ್ತಿರ । ಕೀಯೆಡೆಗೆ ಬರಿಸೆನುತ ಪೇಳದನಾ ವಿಭೀಷಣಗೆ
॥ ೩೧ ॥ ಒಡನೆ ರಾಮನ ನೇಮದಂತಾ । ಪೊಡವಿಯಮಗಳಿಯ ನಾ
ವಿಭೀಷಣ । ನಿಡಿವಸಂತಸದಿಂದೆ ಬರಿಸಲು ರಾಘವನಬಳಿಗೆ ॥ ಮಡದಿ
ಜಾನಕಿಯನು ವಿಲೋಕಿಸಿ । ದೊಡನೆ ಸಂತಸದೈನ್ಯಕೋಪಗ । ಳೊಡ
ಗಿಸಿದವಾ ರಾಘವೇಶ್ವರನಿಗತಿ ಶೀಘ್ರದಲಿ ॥ ೩೨ ॥ ಧರಣಿನಂದನೆ ಲಜ್ಜೆ
ಯನು ತಾ । ಳ್ದಿರದ ವಯವಂಗಳೊಳು ಮುಳುಗುತ । ಹರುಷದಿಂದೆ
ವಿಭೀಷಣನ ನೇಮವನು ಕೈಕೊಂಡು ॥ ಭರದೆ ನಡೆತಂದಾ ರಘುವ
ರನಿ । ದಿರೊಳು ನಿಂದಳು ಸಕಲ ವಾನರ । ವರರು ನೋಡುತ್ತಿರಲಧಿಕ
ಸಂತೋಷವನುತಾಳ್ದು ॥ ೩೩ ॥ ವಸನದಿಂದಲೆ ಮುಖವನಿರದಾ ।
ವಸುಮತೀಸುತೆ ಮರಸಿಕೊಳ್ಳುತ । ತಿಶಯವಾಗಿಹ ನಾಚಿಕೆಯನಾಂ
ತಿಳೆಯನೀಕ್ಷಿಸುತ ॥ ಬಿಸರುಹಾಂಬಕ ರಾಘವೇಶ್ವರ । ನೆಸೆವಮುಖವನು
ಕಾಣುತಲೆ ರೋ । ದಿಸಿದಳು ತಳುವದಾರ್ಯಪುತ್ರನೆ ಯೆನುತ ತಾಂ ನು
ಡಿದು ॥ ೩೪ ॥ ಪತಿಯೆದೈವವೆನುತ್ತ ತಿಳದಾ । ಕ್ಷಿತಿತನುಜೆಯಾಶ್ಚರ್ಯ
ದಿಂದಲು । ವಿತತಸಂತಸದಿಂದಲು ಸ್ನೇಹತನದಿಂದಲು ತಾಂ । ಅತಿಶಯ
ದ ಸಾಮ್ಯವೆನಿಸಿಮೆರೆವ । ಪತಿಯಮುಖವನು ನೋಡಿದಳು ಕಪಿ ।
ತತಿಯಮಧ್ಯದೊಳಧಿಕ ಲಜ್ಜೆಯನಾಂತು ಶೀಘ್ರದಲಿ ॥ ೩೫ ॥ ಮನದ
ದುಃಖವನೆಲ್ಲ ಬಿಡುತಾ । ಜನಕಸುತೆ ಬಹುಕಾಲದಿಂದಲು । ತನಗೆ ದರ್ಶನ
ವಿಲ್ಲ ದಾರಘುನಾಥನಾನನವ ॥ ಮನದಣಿಯೆ ನೋಡುತ್ತ ಹುಣ್ಣಿಮೆ ।
ದಿನದೆ ಮೂಡಿದ ಪೂರ್ಣಚಂದ್ರನಿ । ಗೆಣೆಯೆನಿಪ ಮುಖದಿಂದೆ ಕಂಗೊ
ಳಸುತ್ತ ತೋರಿದಳು ॥ ೩೬ ॥ ತನ್ನಮುಂಗಡೆ ನಿಂವಜಾನಕಿ । ಯನ್ನು
ನೋಡುತ ರಾಮಚಂದ್ರನು । ಮುನ್ನ ಚಿತ್ತದಕೋಪವೆನು ಹೊರವಡಿ
ಸಬುಜ್ಜುಗಿಸಿ । ಸನ್ನುತಚರಿತೆ ಧರಣಿನಂದನೆ । ಯನ್ನು ಕುರಿತೆಲೆ ಸೀತೆ

ರಾವಣ । ನಿನ್ನು ಸಂಹರಿಸುತ್ತ ನಿನ್ನನು ನಾನು ಜಯಿಸಿದೆನು ‖ ೩೭ ‖ ಜನಕನಂದನೆ ಕೇಳವನಿಯೊಳು । ಘನಪರಾಕ್ರಮದಿಂದೆ ಪಡೆದೆನು । ಮನುಜಪಾಲಕರ್ಗೈದ ಬೇಕಾಗಿರುವಕೀರ್ತಿಯನು ‖ ವಿನುತಪೌರುಷ ವನ್ನು ತೋರಿದೆ । ನನುವರದೊಳಗೆ ಫಲಿಸಿತೆನ್ನಯ । ಮನವಕೋರಿಕೆ ದೈವವಶದಿಂದೆನುತ ಲಿಂತೆಂದ ‖ ೩೮ ‖ ಧರಣಿಸುತೆನೀಂ ಕೇಳು ದಶಕಂ । ಧರನು ನಿನ್ನನು ಕೊಂಡುಬಂದುರು । ತರದದೋಷವಕಳೆದುಕೊಂಡೆನು ನಾನು ಭೂಮಿಯಲಿ ‖ ಧರೆಯೊಳಾದಪಕೀರ್ತಿಯನು ಪರಿ । ಹರಿಸಿಕೊಳ್ಳಲು ಶಕ್ತಿಯಿಲ್ಲದ । ನರನಿಗೆಂದಿಗೆ ತಾನೆ ಲಭಿಸುವುದಾವಪುರುಷಾರ್ಥ ‖ ೩೯ ‖ ಜನಕಸುತೆ ಕೇಳ್ಕಳೆದುಕೊಂಡೆನು । ಮನುಜಮಾತ್ರದವನೆನಿಸ್ಸಿದನಾ । ನೆನಗೆ ಬಂದಾನಿಂದ ನೆಯನಾದೈವವಶದಿಂದೆ ‖ ಹನುಮನ ಪರಾಕ್ರಮವು ಸುಗ್ರೀ । ವನತಿ ಸಾಹಸವಾವರವಿಭೀ । ಷಣನ ಸಾಯವು ಸಫಲವಾದವು ಯುದ್ಧ ಭೂಮಿಯಲಿ ‖ ೪೦ ‖ ಎನುತಪೇಳುವವಚನಗಳನಾ । ವನಿತೆಕೇಳುತ್ತಿರಲನಿತರೊಳು । ಜನಕಜೆಯ ಕಂಗಳೊಳು ಕಂಬನಿ ತುಂಬಿ ತಧಿಕವೆನೆ ‖ ಜನಕಜಾತೆಯನೀಕ್ಷಿಸುವರಾ । ಮನವಮುಖದೊಳುಂಟಾಯ್ತು ಕೋಪವ । ವನಿಯೊಳುಜ್ವಲಿ ಪನ್ನಿಯಂದದೆ ಭಯವನಾಗಿಸುತ ‖ ೪೧ ‖ ಲಲನೆಜಾನಕಿ ಕೇಳು ನಾನಾ । ಖಳದಶಶಿರನು ತಂದನಿನ್ನನು । ಬೆಳೆದವಿಕ್ರಮದಿಂದೆ ಜಯಿಸಿದೆ ನೆನ್ನ ಪಯಶವನು ‖ ಕಳೆದುಕೊಂಡೆನು ಜಯವನಾಂತೆನು । ಲಲನೆನಿನ್ನನು ಪಡೆಯಬೇಕೆನು । ತಿಳಿಯೊಳಾ ದಶಕಂಠನನು ಸಂಹರಿಸಿದವನಲ್ಲ ‖ ೪೨ ‖ ನನ್ನ ಸಚ್ಚರಿತೆಯನು ರಕ್ಷಿಸ । ಲುನ್ನತಬಲಾಢ್ಯನಹರಾವಣ । ನನ್ನು ಕೊಂದೆನು ಘೋರಸಂಗರದೊಳಲವೈದೇಹಿ ‖ ನನ್ನ ನೇಮವನಾಂತು ಭರದೊಳು । ನಿನ್ನ ಮನಬಂದಂತೆ ನೀಂ ಪೋ । ಗಿನ್ನು ದಶದಿಶೆಗಳೊಳಗಾ ವೆಡೆಗಾದರೆಯು ಸರಿಯೆ ‖ ೪೩ ‖ ಇಳೆಯನಂದನೆ ಕೇಳು ನನಗೀ । ನೆಲದೊಳಗೆ ನಿನ್ನಿಂದಮಿನಿ ಸುಂ । ಕೆಲಸಮಿಲ್ಲವು ಪೋಗುನಿನಗಿಷ್ಟಮೆನಿಸಿದಕಡೆಗೆ ‖ ನೆಲದೊಳಾವನು ತಾನೆ ಬಗೆಯ । ಲ್ಪಲವು ದಿನಮೆಂತನ್ಯರ ಮನೆಗ । ಳೊಳಿರುತಿದ್ದ ಸತಿಯನುಬಿಡದೆಮೆ ಮರಳಿಹೊಂದುವನು ‖ ೪೪ ‖ ರಾವಣನತೊಡೆಯಲ್ಲಿ ಕುಳಿತಾ । ರಾವಣನ ಕಾಮಾತುರದ ನಯ । ನಾವಲೋಕನ ಕೊಳಗೆನಿಸಿದಾನಿನ್ನ ನಾನರಿತು ‖ ಆವಕಾರಣದಿಂದ ಹೊಂದುವೆ । ನೀವಸುಧೆಯೊಳು ಮತ್ತೆ ಕೇಳೆಂ । ದೀವಿಚಾರವತಿಳಿದು ನಿನ್ನನುನಾನು ಜಯಿಸಿದೆನು ‖ ೪೫ ‖

ಜನಕನಂದನೆ ಕೇಳುನಿನ್ನೊಳು । ನನಗೆಸಖತನ ವೆಂಬುದಿನಿತಿ । ಲ್ಲನು
ದಿನವು ಸೌಖ್ಯವನು ನೀಂಪಡೆವಂತೆಭೂಮಿಯೊಳು ॥ ಮನವಿರಿಸುಲಕ್ಷ್ಮ
ಣನೊಳಾಗಲಿ । ಮನುಜರೊಡೆಯ ಭರತನೊಳಾಗಲಿ । ನನಗೆಬೇಕಾಗಿಲ್ಲ
ನೀಂತಿಳಿ ನಿನ್ನ ಚಿತ್ತದೊಳು ॥ ೪೬ ॥ ನಿನಗೆ ಸುಖವಪ್ಪಂತೆ ಸಂತತ ।
ಮನವನಿರಿಸಿನ ಸುತನೊಳಾಗಲಿ । ವಿನಯದೆ ವಿಭೀಷಣನೊಳಾಗಲಿ ಸೀತೆ
ನೀನಿಂದು ॥ ದನುಜಪತಿ ದಶಶಿರನು ತನ್ನಯ । ಮನೆಯೊಳಿದ್ದತಿ ದಿವ್ಯ
ತರವೆಂ । ದೆನಿಪ ರೂಪವನಾಂತ ನಿನ್ನೊಳು ಸುಖಿಸದಿಹನೇನು ॥ ೪೭ ॥
ಪ್ರಿಯವಚನವನೆ ನಿತ್ಯವಾಲಿಪ । ಬಯಕೆಯನು ಪಡೆದಾಮಹೀಸುತೆ ।
ಭಯವನಾಗಿಪ ಗಂಡನ ಪ್ರಿಯವಚನವನು ಕೇಳ್ದು ॥ ಪ್ರಿಯನಮುಂ
ಗಡೆನಿಂದು ಬಹುವಿ । ಸ್ಮಯದೆ ಕಂಪಿಸುತೊಣಗಿದಾ ಕಿಸ । ಲಯದ
ಪೊಲ್ಕೆಗುಂದಿ ರೋದಿಸುತಿದ್ದಳಡಿಗಡಿಗೆ ॥ ೪೮ ॥ ಮುಳಿದಗಂಡನ
ಕಠಿನವಚನಂ । ಗಳನುಕೇಳುತ ಜನಕನಂದನೆ । ಬಳೆದರೋಮಾಂಚನ
ವನೀಕ್ಷಿಸಿ ತನ್ನದೇಹವೊಳು ॥ ತಳೆದು ಬಹುಲಜ್ಜೆಯ ನವಯವಂ ।
ಗಳೊಳು ತಾಂಮುಳುಗುತ್ತ ದುಃಖಿಸಿ । ದಳಡಿಗಡಿಗಾ ರಾಮಚಂದ್ರನ
ಮುಂಗಡೆಯೊಳಳುತ ॥ ೪೯ ॥ ಪತಿಯ ಕರ್ಕಶವಚನಗಳ ನಾ । ಕ್ಷಿತಿ
ಜೆಕೇಳುತ ನೊಂದುಮನದೊಳು । ವಿತತ ನಯನಾಂಬುವನು ಸುರಿಸು
ತ್ತಿರಡು ಕಂಗಳಲಿ ॥ ಹಿತದೆಧೈರ್ಯವನಾಂತು ದುಃಖವಿ । ತತಿಯನಡಗಿಸಿ
ಕೊಂಡು ನುಡಿದಳು । ಚತುರತನದಿಂದಿಂತು ಗದ್ಗದಕಂಠದಿಂದಳುತ ॥
॥ ೫೦ ॥ ಧರಣಿನಂದನೆತನ್ನಕಣ್ಣೊಳು । ಸುರಿವಜಲದಿಂದಿರದೆ ವಕ್ತ್ರವ ।
ನೊರಸಿಕೊಳ್ಳುತ ಶಿರವಬಾಗಿಸಿ ನೆಲವನೀಕ್ಷಿಸುತ । ನೆರೆದಖಿಳವಾನರರ
ಮಧ್ಯದೊ । ಳಿರದೆ ಗಂಡನ ಚರಣಪಂಕಜ । ಕೆರಗಿಪೇಳಿದಳಿಂತು ಕೈ
ಮುಗಿದತಿ ವಿನಯದಿಂದ ॥ ೫೧ ॥ ವೀರನೀನೇಕಿಂತು ನನ್ನವಿ । ಚಾರ
ದೊಳು ಸಂದೇಹಪಡುವೆ ಕ । ಠೋರತರವೆಂದೆನಿಪ ನುಡಿಗಳನೇಕೆ
ಹೇಳುತಿಹೆ ॥ ಭೂರಿಕೋಪವನಾಂತು ಚಿತ್ತಕೆ । ತೋರಿದಂದದೆ ನುಡಿ
ಯಬೇಡ ವಿ । ಚಾರಿಸಲುನೀಂ ಪೇಳಿದಂತೆನಿಸಿಲ್ಲ ನನ್ನೊಳಗೆ ॥ ೫೨ ॥
ನನ್ನ ಪಾತಿವ್ರತ್ಯಮಹಿಮೆಯ । ನನ್ನ ನಾನೀ ಕಪಿಗಳನಡುವೆ । ನಿ
ನ್ನ ಸಂದೇಹಕ್ಕೆ ಪರಿಹಾರವನು ತೋರಿಸುವೆ ॥ ನನ್ನನುಕುರಿತುನೀನು
ನುಡಿದ । ತೆನ್ನೊಳು ದುರಿತವಿಲ್ಲವೀನುಡಿ । ಯನ್ನು ಘನತರಶಪಥ
ಮೂಲಕನಾಗಿ ಪೇಳುವೆನು ॥ ೫೩ ॥ ಇತರವಧುಗಳ ನಡತೆಗಳನೇ ।
ಸತತವೀಕ್ಷಿಸುತ ನ್ನನುಕುರಿತು । ಹಿತದೊಳೀತೆರದಿಂದೆ ಪೇಳುವೆ

ಮನಕೆಬಂದಂತೆ । ಪತಿಯೆ ನಿನಗಿಂದಂಥ ಸಂಶಯ । ಮತ್ರಿಯೊಳಂಕು
ರಿಸದವೊಲಿದಕೀ । ಕ್ಷಿತಿಯೊಳು ಪ್ರತ್ಯಕ್ಷವಾಳ್ಪನು ನೋಡುನೀನೀಗ ॥
॥ ೫೪ ॥ ದೇವಚಿತ್ತ ವಿಸಾದನುಜ ವರ । ನಾವನದೊಳಗೆ ನನ್ನ ಪಿಡಿ
ಯುತ । ಲಾವಿಹಾಯಸ ಪಥದೊಳೈತಂದಾಗನಾ ಸವನ ॥ ಕೈವಶಗನಿ
ಸಿ ಯತ್ನವಿಲ್ಲದೆ । ನೋವನೈದುತ ನೆರವಕಾಣದೆ । ರಾವಣನದೇಹವನು
ಸೋಂಕಿದೆ ವಿವಶಳೆನಿಸುತ್ತ ॥ ೫೫ ॥ ಅದನು ಕಾಮವಿಕಾರದಿಂದೆಸ ।
ಗಿದವಳಲ್ಲವು ದೈವದಾ ತ । ಪ್ಪದರೊಳಿಹುದೇ ಹೊರತು ನನ್ನಪರಾಧ
ಮಿನಿತಿಲ್ಲ ॥ ಇದರೊಳೇಕಸುಮಾನ ವೆನ್ನಯ । ಹೃದಯ ನಿನ್ನಲಿಮಗ್ನ
ವಾಗಿ । ತ್ತಿದನು ನಿಶ್ಚಯವಾಗಿಪೇಳುವೆನೀಗ ನಿನ್ನೊಡನೆ ॥ ೫೬ ॥
ಪ್ರಾಣನಾಥನೆ ಕೇಳು ಪರರಿಗ । ಧೀನವಾದಂಗಂಗಳೊಳು ನಾ । ನೇನ
ಮಾಡಲನಾಥ ಳೆನ್ನಿಸುತಂದು ವಿಪಿನದಲಿ ॥ ನೀನುನನ್ನಯ ಪತಿಭಕುತಿ
ಯನು । ಕಾಣದವನಂತಿಂತು ಪೇಳುವೆ । ನಾನು ನಿನಗನುಮಾನವಿಲ್ಲದಹಾ
ಗೆಮಾಡುವೆನು ॥ ೫೭ ॥ ದೇವಚಿತ್ತವಿಸೆನ್ನ ಮನದಾ । ಭಾವನಿನಗಂ ತಿ
ಳಿಯಲಿಲ್ಲವು । ಹೇವರಿಸದೆ ನಿದಾನಿಸಿತಿಳಿದುನೋಡು ಮನದೊಳಗೆ । ಈ
ವಸುಮತಿಯೊಳೆನ್ನ ಮೇಲೆನಿ । ಪಾ ವಿಮಲತರ ಶೀಲವನುನೀ । ನಾವ ।
ವಿಧದಿಂದಿಂತು ದೂಷಿಸುತಿರ್ದಪೆ ತಿಳಿಯದೆ ॥ ೫೮ ॥ ನನ್ನೊಳಿಹಪತಿ
ಭಕ್ತಿಯನು ನೀ । ನಿನ್ನೆಗಂ ತಿಳಿಯದವನಂತಿಹೆ । ನಿನ್ನನೇಮವನಾಂ
ತು ಕೇಸರಿಸುತನು ಪೂರ್ವದಲಿ ॥ ನನ್ನನರಸುತ ಲಂಕೆಗೈದಂ । ಚೆನ್ನ
ಶೀಲವನೆಲ್ಲ ಕಾಣುತ । ನಿನ್ನಸಂಗಡ ಪೇಳಹನೆನುತ ನಾನುನಂಬುವೆನು ॥
॥ ೫೯ ॥ ಪ್ರಾಣಕಾಂತನೆ ಕೇಳುನಾನೀ । ಭಾನುಸುತಸುಗ್ರೀವನಿದಿ
ರೊಳು । ನೀನುಪೇಳುವ ಮಾತುಗಳನಾಲಿಸುತ ಚಿಂತಿಸದೆ ॥ ಪ್ರಾಣವ
ನುಬಿಡುತಿರ್ಪೆ ನಿನ್ನನು । ನಾನುಬಿಟ್ಟಿರಲಾರೆ ನೆನ್ನುತ । ಜಾನಕಿ ಪತಿಗೆ
ಪೇಳ್ದು ಮತ್ತಿಂತೆಂದಳಂದಿರದೆ ॥ ೬೦ ॥ ಪ್ರಾಣವನು ಸಂದೇಹದೊಳಿ
ರಿಸಿ । ನೀನುತೋರಿಸಿದಂಥ ಸಾಹಸ । ಮೇನು ಕೆಲಸಕೆಬಾರದಂತಾಯ್ತು
ಕಟ ಯೋಚಿಸಲು ॥ ಭಾನುನಂದನ ನಾದಿಯಾಗಿಹ । ವಾನರರು ತೋ
ರಿಸಿದಕಷ್ಟವು । ಹೀನವೆಂದೆನಿಸುತ್ತ ನಿಷ್ಫಲವಾಗಿತೋರುವುದು ॥
॥ ೬೧ ॥ ಮನುಜಪಾಲಕ ಕೇಳುತಿಳಿಯದ । ಮನುಜನಂತೆ ಸ್ತ್ರೀತ್ವ
ವನು ನಿಜ । ಮನದೊಳಂದತಿ ಮುಖ್ಯವಾಗೆಣಿಸುತ್ತನನ್ನೊಳಗೆ ॥ ಘನ
ತರದಕೋಪವನು ಮಾಡುವೆ । ನಿನಗೆ ನನ್ನಯಶೀಲವೀದಿನ । ಮನಕೆ
ಬಾರದೆಹೋಯಿತಲ್ಲವೆಸೆಂದು ಕೇಳಿದಳು ॥ ೬೨ ॥ ನನ್ನ ಜನ್ಮಸಾರ್ಥ

ಸವನು ಮ । ತ್ತಿನ್ನ ಸಚ್ಚ ರಿತೆಯನು ಚಿತ್ತದೊ । ಳಿನ್ನು ತಿಳಿದು ವಿಚಾರ ಮಾಡಿದೊಡಿಂದು ಮೊದಲಂತೆ ॥ ನನ್ನೊಳನುಮಾನಿಸದಿರುವೆ ನೀ । ನೆನ್ನು ತವನೀನಂದನೆ ಪತಿಯು । ಸನ್ನಿಧಿಯೊಳಳುತಳುತ ನುಡಿದಳುನೊಂದು ಕ್ಕೈಮುಗಿದು ॥ ೬೭ ॥ ಜನಕಭೂಪನ ಹೇತುವಿಂದಲ । ವನಿಯೊಳುದ್ಭವಿಸಿಮುನ ನಾಶಿಸು । ತನದ ಮೊದಲಿಂದಾಚರಿಸಿದಾ ನನ್ನ ನಡತೆಯನು ॥ ವಿನುತಿವೆತ್ತ ಸುಜನಸಮ್ಮತ । ಮೆನಿಪ ಪಾಣಿಗ್ರಹಣವನು ನೀ । ನೆಣಿಸಲಿಂದಿಂತ ಪ್ರಮಾಣವೆನುತ್ತ ತಿಳಿದಿರುವೆ ॥ ೬೮ ॥ ನನ್ನ ಮದುವೆಯು ನನ್ನಭಕ್ತಿಯು । ನನ್ನ ಶೀಲವು ನನ್ನನಡತೆಯು । ನನ್ನ ಪಾತಿವ್ರತ್ಯ ಧರ್ಮವು ನನ್ನ ಸುಚರಿತೆಯು ॥ ನಿನ್ನಮುಂಗಡೆ ವಿಫಲವೆನಿಸಿದು । ದೆನ್ನುತತ್ತಳು ಧಾರಿಣೀಸುತೆ । ತನ್ನೆರಡು ಕಂಗಳೊಳು ನೀರನುಸುರಿಸುತ ಡಿಗಡಿಗೆ ॥ ೬೯ ॥ ಪತಿಯುಸಕ್ಕದೆನಿಂತು ಬಹುದೈ । ನ್ಯತೆಯೊಳವನೀ ತಳವನೀಕ್ಷಿಸು । ತತಿವಿಷಾದವನ್ನೈದಿದಾ ಸೌಮಿತ್ರಿಯನುಕಂಡು ॥ ವಿತತ ದುಃಖವ ತಾಳಲಾರದೆ । ಚತುರತೆಯೊಳಿಂತೆಂದು ನುಡಿದಳು । ಸತಿಶಿರೋಮಣಿಸೀತೆ ಗದ್ಗದನಿನದದಿಂದಳುತ ॥ ೭೦ ॥

ಇಂತು ಇಪ್ಪತ್ತೇಳನೆಯ ಅಧ್ಯಾಯ ಸಂಪೂರ್ಣವು.
ಪದ್ಯಗಳು ೧೨೪೯.

ಇಪ್ಪತ್ತೆಂಟನೆಯ ಅಧ್ಯಾಯ.

ಸೂಚನೆ॥ ಉರಿವ ವೈಶ್ವಾನರನೊಳಂಜದೆ ।
ಧರಣಿನಂದನೆ ಬೀಳಲಗ್ನಿಯು ।
ಪೊರೆವುತಾಕೆಯ ನಿತ್ತನಾ ರಘುನಂದನಂಗೊಲಿದು ॥

ತಂಪೆಲಕ್ಷ್ಮಣಕೇಳು ರಾಘವ । ನಿಂದುನನ್ನನು ಕೆಟ್ಟಮಾತುಗ । ಳಿಂದೆದೂಷಿಸಿಬಿಟ್ಟ ನೆನುತಲಿ ನುಡಿದನೆನ್ನೊಡನೆ ॥ ನೊಂದುಕೊಳ್ಳುವುದೇಕೆ ಮರ್ಕಟ । ವೃಂದವಿಡುವೆ ನನ್ನಗಂಡನ । ಕಂದುಕಸರಿಕೆಯನ್ನು ಪರಿಸುವೆನೀಗ ಶೀಘ್ರದಲಿ ॥ ೧ ॥ ಕೆಟ್ಟಮಾತನು ನಾನುಪಡೆದಿ । ಹೊಟ್ಟೆಯ ನದೆಂತಿರಿಸಿಕೊಳ್ಳಲಿ । ನೆಟ್ಟನೆ ಪ್ರಾಣವನುಬಿಡುವೆನು ಕೇಳುಮೈದುನನೆ ॥ ಕಟ್ಟಿಗೆಗಳಿಂ ಚಿತಿಯಗೆಯ್ಯುವತೆ । ಮುಟ್ಟಿಸಗ್ನಿಯನದ

ರೊಳೀಗಲೆ । ಥಟ್ಟನುರುಳುತ್ತಿದಕೆ ತೋರಿಪೆನಾನು ನಿಷ್ಕೃತಿಯ ॥
॥ ೨ ॥ ವಿನುತ ಪಾತಿವ್ರತ್ಯಮಹಿಮೆಗೆ । ಮನವೊಲಿಯ ದಾಪತಿಯ
ದೆಸೆಯಿಂ । ಘನಸಭಾಮಧ್ಯದೊಳಗಲಿಕೆಯನಾಂತ ನನಗಿಂದು ॥ ಅನಲ
ನೊಳುಬೀಳುವುದೆ ಸಮ್ಮತ । ಮೆನಿಪುದೆಲೆ ಸೌಮಿತ್ರಿ ಚಿತ್ತದೊ । ಳೆ
ಣಿಕೆಗೊಳ್ಳದೆ ಚಿತಿಯನೆಸಗೆಂದೆನುತ ಪೇಳಿದಳು ॥ ೩ ॥ ಜನಕಸುತೆ ತ
ನ್ನೊಡನೆ ಪೇಳ್ದತಿ । ವಿನಯವಚನಂಗಳನು ಕೇಳುತ । ಮನಮರುಗಿ
ಸೌಮಿತ್ರಿ ರಾಮನ ಮುಖವನೀಕ್ಷಿಸಲು ॥ ಮನದಭೀಷ್ಟವ ನರುಹು
ವಂದದೊ । ಳನುಜನಿಗೆ ತಿಳುಹಿದನು ರಘುನಂ । ದನನು ಲೋಚನಸಂ
ಜ್ಞೆಯಿಂದಲೆ ಚಿತಿಯನೆಸಗೆನುತ ॥ ೪ ॥ ತಿಳಿದುರಾಮನ ಮನದಭೀಷ್ಟ
ವ । ಬೆಳೆದಚಿಂತೆಯನಾಂತು ಮನನೊಂ । ದಳುತ ಲಕ್ಷ್ಮಣನಲ್ಲಿ ಚಿತಿ
ಯನು ನಿರ್ಮಿಸುತ್ತದಕೆ ॥ ತಳುವದಗ್ನಿಯ ನಿಡಲದುಪ್ರ । ಜ್ವಲಿಸುತ ನ
ಭೋಮಂಡಲತನಕ । ಬೆಳೆದು ಧಗಧಗನುರಿಯುತಿದ್ದುದು ಭಯವನಾ
ಗಿಸುತ ॥ ೫ ॥ ಕ್ಷಿತಿಯನೀಕ್ಷಿಸುತಾಗ ನಿಂದಿಹ । ಪತಿಯಬಳಿಗೈತಂದು
ಧರಣೀ । ಸುತೆಯು ಭಕ್ತಿಯೊಳು ಪ್ರದಕ್ಷಿಣೆಬಂದು ಮೂರುಸಲ ॥ ವಿ
ತತ ವಿನಯದೊಳೆರಗಿ ಕೈಮುಗಿ । ದತಿ ಭರದೊಳೈತಂದಳು ಜ್ವಲಿ । ಸು
ತಿಪ ವಹ್ನಿಯಹತ್ತಿರಕೆ ವಿಸ್ಮಯವನಾಗಿಸುತ ॥ ೬ ॥ ಬಳಿಕಜಾನಕಿವೀತಿ
ಹೋತ್ರನ । ಬಳಿಗೆತಾನೈತಂದು ಬದ್ಧಾಂ । ಜಲಿಪುಟಳೆನಿಸಿ ರಾಮನಾ
ಮವ ಜಪಿಸುತಡಿಗಡಿಗೆ ॥ ತಲೆಯಬಾಗಿಸಿ ಸಕಲದೇವತೆ । ಗಳಿಗೆವಿಪ್ರ
ರಿಗೆರಗಿ ಪೇಳ್ದಳ । ನಲನಮುಂಗಡೆನಿಂದು ತಾನೀತೆರದೆ ಕೈಮುಗಿದು ॥
॥ ೭ ॥ ನನ್ನಚಿತ್ತವದೆಂತು ರಾಘವ । ನನ್ನು ಬಿಟ್ಟಿರಲಿಲ್ಲವಂತಿಂ । ದಿನ್ನೆ
ಗಂ ನೀಂತಿಳಿದಪಕ್ಷದೊಳೀಗ ಕರುಣಿಸುತ ॥ ನನ್ನಪಾಲಿಸು ವೀತಿಹೋ
ತ್ರನೆ । ನಿನ್ನಬಿಟ್ಟರೆ ಕಾವರಿಲ್ಲವು । ನಿನ್ನನೀಲೋಕಕ್ಕೆ ಸಾಕ್ಷಿಯೆನುತ್ತ
ಪೇಳುವರು ॥ ೮ ॥ ಧರಣಿಮಂಡಲ ದೊಳತಿಪಾವನ । ಚರಿತಳೆಂದೆನಿಪೆ
ನ್ನ ನೀರಘು । ವರನು ದುಷ್ಟಚರಿತ್ರೆಯೆನ್ನು ತವೆಂತುತಿಳಿದಿಹನೋ ॥
ಕರುಣಿಸುತ ನೀನಿಂದುರಕ್ಷಿಸು । ಭರದೊಳೆನ್ನನು ದೇವ ವೈಶ್ವಾ । ನ
ರನೆ ನೀಂ ಪ್ರತ್ಯಕ್ಷ ಸಾಕ್ಷಿ ಯೆನಿಸುವೆ ಲೋಕಕ್ಕೆ ॥ ೯ ॥ ಮನಸಿನಿಂದ
ಲು ನುಡಿಗಳಿಂದಲು । ತನುವಿನಿಂದಲು ಕಜ್ಜದಿಂದಲು । ವಿನುತಿ ವಡೆದಿಂ
ದ್ರಿಯಗಳಿಂದಲು ಹೇಗೆ ಸಂತತವು ॥ ಮನುಕುಲೋತ್ತಮ ಸಂದೆನಿಪ
ರಾ । ಮನನು ಬಿಡದಿಹೆನೆಂತು ಚಿತ್ತದೊ । ಳನಲದೇವನೆ ರಕ್ಷಿಸುವು
ದಂತೆನ್ನ ನೀನೊಲಿದು ॥ ೧೦ ॥ ರವಿಯುಚಂದ್ರನು ಹಗಲುರಾತ್ರಿಯು ।

ಪವನನು ಸಕಲದಿಕ್ಕುಗಳು ಗಗ । ನವು ವಸುಮತಿಯು ಸಂಧ್ಯೆ ಜಲ
ನಿಧಿ ಸಪ್ತಶೈಲಗಳು ॥ ಅವನಿಮಂಡಲ ದೊಳಿಪ ಪಾವನ । ವಿವಿಧವಸ್ತು
ಗಳಿಂತು ಸುಚರಿತೆ । ಯಿವಳೆನುತ ತಿಳಿದಿರುವು ವಂತೊಲಿದೆನ್ನ ರಕ್ಷಿ
ಪುದು ॥ ೧೧ ॥ ಇಂತು ನುತಿಸುತ ಮೇದಿನೀಸುತೆ । ಚಿಂತಿಸದೆ ಮೂರು
ಸಲ ವಹ್ನಿಗೆ । ಸಂತಸವನಾಂತು ಪ್ರದಕ್ಷಿಣೆ ಬಂದು ನಮಿಸುತ್ತ ॥ ಅಂತ
ರಂಗದೊಳಾಗ ಭಯಪಡ । ದಂತರಿಕ್ಷದ ತನಕಕೆಂದಳ । ರಂತು
ರಿವ ಬೆಂಕಿಯೊಳು ಬಿದ್ದಳು ಪತಿಯು ಜಾನಿಸುತ ॥ ೧೨ ॥ ಧರಣಿಸುತೆ
ದೇಹಾಭಿಮಾನವ । ತೊರೆದು ಭೀತಿಯು ನಾಗಿಸುತ್ತಂ । ದುರಿವವೈಶ್ವಾ
ನರನೊಳಂಜದೆ ಬೀಳುತಿರಲಲ್ಲಿ ॥ ನೆರೆದ ಜೀವಿಗಳೆಲ್ಲ ಶೀಕ್ಷಿಸಿ । ದರತಿ
ಶಯದ ವ್ಯಾಕುಲವನಾಂ । ತಿರದೆ ನಯನೋದಕವ ಸುರಿಸುತ ಲಧಿಕದೈ
ನ್ಯದಲಿ ॥ ೧೩ ॥ ಹೊಳೆವ ಚಿನ್ನದ ಕಾಂತಿ ಯಂತುರೆ । ಥಳಥಳಿಪತನು
ಕಾಂತಿಯನು ತಾಂ । ತಳೆದ ಜಾನಕಿ ಚಿನ್ನದೊಡವೆಗಳಿಂದೆ ಶೋಭಿಸು
ತ ॥ ಬಳಸನಿಂದ ಸಮಸ್ತ ಜನಗಳು । ತಿಳಿಯುವಂದದೆ ಬಿದ್ದಳಂಜದ ।
ನುನೊಳಾ ರಾಘವನನಾಮವ ಜಾನಿಸುತಕೂಡೆ ॥ ೧೪ ॥ ವಿನುತಿವೆತ್ತ ತಿ
ಪ್ರಾಜ್ಯಕರವೆಂ । ದೆನಿಸುವಾಜ್ಯಾಹುತಿಯು ತೆರದಿಂ । ದನಲನೊಳುತಾಂ
ಬೀಳುತಿರಲಾ ಮೇದಿನೀಸುತೆಯು ॥ ಘನಮನೋವ್ಯಥೆಯಿಂದ ಲಾತ್ರಿ
ಭು । ವನದಜೀವಿಗಳೆಲ್ಲ ಕಂಡರು । ಮನಮರುಗಿ ಬಹುವಿಸ್ಮಯವನಾಂ
ತಳುತ ಲಂಕೆಯಲಿ ॥ ೧೫ ॥ ಪರಮಪಾವನವೆನಿಪ ಯಜ್ಞದೊ । ಳು
ರಿವವಹ್ನಿಗೆ ಮಂತ್ರಗಳನು । ಚ್ಚರಿಸಿಸಂತತ ಸುರಿಸುವಾಜ್ಯಾಹುತಿಯ
ತೆರದಿಂದೆ ॥ ಉರಿವಪಾವಕನೊಳಗೆ ಬೀಳು । ತ್ತಿರುವ ಧರಣೀಸುತೆಯ
ನೀಕ್ಷಿಸು । ತಿರದೆ ಖೇದವನಾಂತು ಕೊರಗಿದರಖಿಳವಾನರರು ॥ ೧೬ ॥
ಘೋರಶಾಪವನಾಂತು ನೊಂದು ವಿ । ಚಾರವಿಲ್ಲದೆ ತೊಲೆದುಸಗ್ಗವ ।
ನಾರಕದೊಳಗೆ ಬೀಳ್ವದೇವತೆಯಂತೆ ವಹ್ನಿಯಲಿ ॥ ಧಾರಿಣೀಸುತೆ ಬೀ
ಳುತಿರಲಾ । ಮೂರುಲೋಕದ ಜೀವಿಗಳು ಬೃಂ । ದಾರಕರು ಗಂಧ
ರ್ವರು ಗಳೀಕ್ಷಿಸಿದರತಿಭಯದೆ ॥ ೧೭ ॥ ಧರಣಿಸುತೆಬೀಳುತಿರ ಲಗ್ನಿ
ಯೊ । ಳರದೆ ದನುಜರು ಸಕಲವಾನರ । ವೆರರು ಹಾಹಾಕಾರಗಳನೆಸ
ಗಿದರು ರೋದಿಸುತ । ತರಣಿವಂಶಲಲಾಮ ನಂದಾ । ತೆರದನುಡಿಗಳನೆ
ಲ್ಲ ಕೇಳುತ । ಸುರಿಸಿಕಂಬನಿಗಳನು ದುಃಖಿಸುತಿದ್ದನಡಿಗಡಿಗೆ ॥ ೧೮ ॥
ಪರಮಧಾರ್ಮಿಕನೆನಿಸುವಾ ರಘು । ವರನು ದುಃಖವನಾಂತು ಮನದೊ
ಳು । ಧರಣಿಜಾತೆಯ ನೀಕ್ಷಿಸುತ ನಯನೋದಕವಸುರಿಸಿ ॥ ಶಿರವಬಾ

ಗಿಸಿ ಮಾತನಾಡದೆ । ಬೆರಳಮೂಗಿನೊಳೊಂದು ಗಳಿಗೆಯು । ಪರಿಗೆ ಚಿಂ
ತಾವಿಷ್ಟನಾವನು ತಿಳಿಯದವನಂತೆ ॥ ೧೯ ॥ ಅನಲಸುಷ್ನಾವ ನಾಗಿಸದೆ
ಮೇ । ದಿನಿಯಣುಗಿಗಾ ಮಂಜಿನಂದದಿ । ಘನತರದಕೃತ್ಯವನು ಮಾಡಿದ
ನಂದು ಚಿತಿಯೊಳಗೆ ॥ ಜನಕನಂದನೆ ಮುಡಿದಹೂಗಳು । ಜನಗಳಿಗೆ
ಕಾಣಿಸಿದುದಾ ಯನ । ಲನೊಳುಬಾಡದೆ ಬಿರಿದಮೊಗ್ಗೆಗಳಂತೆ ಕಂಗೊ
ಳಿಸಿ ॥ ೨೦ ॥ ಧರಣಿಜಾತೆಯ ಮುಖವು ಧಗಧಗ । ನುರಿವ ವಹ್ನಿಯೊ
ಳಿನಿಸುಬಾಡದೆ ॥ ಸುರುಚಿರಮದೆಂದೆನ್ನಿಸಿದುದು ಬಹುಳಕಾಂತ್ರಿಯು
ಲಿ ॥ ಧರಿಸಿದಂಬರ ವಗ್ನಿಯೊಳಿನಿಸು । ಮುರಿಯದಿದ್ದುದು ಕಾಣಿಸಿದ
ಳಾ । ಧರಣಿಸುತೆ ಪ್ರಟವಿಟ್ಟಚಿನ್ನದತೆರದೆ ಸಕಲರಿಗೆ ॥ ೨೧ ॥ ಪಿತನ
ಮಂದಿರದೊಳಿರುವಂತಾ । ಕ್ಷಿತಿಸುತೆವಿಚಾರವ ನುಳಿದುರಿವ । ಚಿತಿಯ
ಮಧ್ಯದೊಳಿದ್ದಳಂಜದೆ ಬಹುವಿನೋದದಲಿ ॥ ಪತಿಪರಾಯಣೆಯುಗ್ರ
ದುಃಖ । ಪ್ರತತಿಗಳು ಪರಿಹಾರ ವಹುದೀ । ಕ್ಷಿತಿಯೊಳೀಕ್ಷಿಸ ಲೆಂತೊ ಪ
ತ್ರಿಭಕ್ತಿ ಪ್ರಭಾವವದು ॥ ೨೨ ॥ ಸುರಪತಿ ಯಮ ಕುಬೇರ ಶಂಕರ ।
ವರುಣ ಚತುರಾ ನನನು ಮೊದಲಹ । ಸುರರು ಸಂಗಳಿಸುತ್ತ ಸೂರ್ಯಗೆ
ಸಮಮೆನಿಸಿ ಮೆರೆವ ॥ ವರವಿ ಮಾನಂಗಳೊಳು ಕೂಡುತ । ಭರದೊ
ಳೈ ತುದಿಳಿಗೆ ಲಂಕಾ । ಪುರವ ಸೇರುತ ಬಂದುನಿಂದರು ರಾಮನಿದಿರಿನ
ಲಿ ॥ ೨೩ ॥ ಇದಿರೊಳಂಜಲಿ ಬದ್ಧನಾಗುತ । ಮುದದೆ ನಿಂದಿಹ ರಾಘವ
ನನಾ । ತ್ರಿದಶವರ ರೀಕ್ಷಿಸುತ ಹಸ್ತಾ ಭರಣಗಳ ನಾಂತು ॥ ಮುದವಡಿಪ
ಕೈ ಗಳನು ಚಾಚುತ । ಸದಯ ದಿಂದಲೆ ರಾಮನಿಗೆ ಪೇ । ಳಿದರೊಲಿದು
ಮೃದು ಮಧುರ ಗಂಭೀರ ವಚನಂಗಳಲಿ ॥ ೨೪ ॥ ಸಕಲ ಲೋಕಂಗಳಿ
ಗೆ ನೀಂ ರ । ಕ್ಷಕ ನೆನಿಸಿ ಕೊಂಡಿರುವೆ ನುತಿವೆ । ತ್ತಖಿಳ ಸುಜ್ಞಾನಿಗ
ಳೊಳುತ್ತಮ ನಾಗಿ ಕಾಣಿಸುವೆ ॥ ಶಿಖಿಯೊಳಂಜುತ ಬೀಳುತಿಹ ಜಾ ।
ನಕಿಯ ನೀಕ್ಷಿಸು ತೆಂತು ಪೇಕ್ಷಿಪೆ । ವಿಕಟ ಮಾನವ ನಂತೆ ನೀಂ ನಲ
ವಿಂದೆ ರಕ್ಷಿಸದೆ ॥ ೨೫ ॥ ಸುರರ ಸಂದೋಹದೊಳ ಗಗ್ರೇ । ಸರನೆನಿ
ಸಿ ಕೊಂಡಿರುವ ನೀನೆಂ । ತರಿಯ ದಿದ್ದಪೆ ಕೇಳು ನಿನ್ನನು ರಾಘವೇ
ಶ್ವರನೆ ॥ ನೆರೆವಿರಾಜಿಸು ವಷ್ಟ ವಸುಗಳ । ನೆರವಿಯೊಳು ಋತು ಧಾಮ
ನೆಂದೆನಿ । ಪುರುತರದ ಪೆಸರಾಂತು ನೀಂ ವಿಖ್ಯಾತ ನಾಗಿರುವೆ ॥ ೨೬ ॥ ಜ
ನಗಳೆಲ್ಲರಿ ಗರಸನಾಗಿಹೆ । ವಿನುತಿ ವೆತ್ತಾ ತ್ರಿಭುವನಕೆ ಮೊದ । ಲನೆ
ಯು ದೇವರೆನಿಸುವೆ ರುದ್ರರೊಳೆಂಟನೆಯವನಹೆ ॥ ಘನತರದ ಸಾಧ್ಯರೊ
ಳು ನೀ ನೈ । ದನೆಯವನೆನಿಪೆ ಕಿವಿಗಳೆನಿಪರು । ನಿನಗು ಭಯಪಾರ್ಶ್ವ

ದೊಳಗಶ್ವಿನಿ ದೇವತೆಗಳರಿಯೆ ॥ ೬೭ ॥ ನಿನಗೆ ಕಣ್ಣುಗಳಾಗಿರುತ್ತಿಹ । ರಿನಶಶಿಗಳೀರ್ವರು ಸಮಸ್ತ ಭು । ವನಗಳಾದ್ಯಂತಂಗಳಲಿ ಕಾಣಿಸುತಿರುವೆ ನೀನು ॥ ವನಜನಾಭನೆ ಸುರರೊಳುತ್ತಮ । ನೆನಿಸಿಕೊಂಡಿಹೆ ನೀನದೆಂತೀ । ಗನಲನೊಳು ಬೀಳುತಿಹ ಸತಿಯ ನುಪೇಕ್ಷಿಸುವೆ ಪೇಳೈ ॥ ೬೮ ॥ ಎನುತ ಪೇಳ್ದ ದಿಕ್ಪತಿಗಳತಿ । ವಿನುತ ವಚನಗಳನ್ನು ಕೇಳುತೆ । ಮನುಜಪತಿ ಕೈಗಳನುಜೋಡಿಸುತೆರಗಿ ದಿವಿಜರಿಗೆ ॥ ಮನುಕುಲೋತ್ತಮ ದಶರಥನ ಸುತ । ನೆನುತ ನನ್ನನು ತಿಳಿದುಕೊಂಡಿಹೆ । ಮನುಜಮಾತ್ರದವನೆನುತ ತಿಳಿದುಕೊಂಡಿರುವೆನಾನು ॥ ೬೯ ॥ ಆರುನಾನೆಂಬುದನು ನನ್ನನು । ಧಾರಿಣಿಯೊಳೆಂತಪ್ಪನೆಂದು ವಿ । ಚಾರಿಸಿ ತಿಳಿದುಕೊಂಡಿರುವಿರೆಂಬುದನು ನನ್ನೊಳಗೆ ॥ ಮಾರಿದಾಕೃಪೆಯು ನಿರಿಸುತವಿ । ಸ್ತಾರವಾಗಿಮೆ ತಿಳಿಸಬೇಕೆಂ । ದಾ ರಘುವರನು ಬೇಡಿದನು ದೇವತೆಗಳೆಲ್ಲರನು ॥ ೭೦ ॥ ಪರಮ ಭಕ್ತಿಯೊಳಂತು ಬೇಡುವ । ಧರಣಿಪಾಲನ ಮಾತುಗಳ ನಾ । ದರದೊಳಾಲಿದಾಲಿಸುತ ಬುಜಭವನಾರಘೂದ್ವಹನ ॥ ಕುರಿತು ಸಂತಸದಿಂದ ಪೇಳ್ದನು । ಭರದಿಕೇಳಲೆ ರಾಘವನೆ ಮನ । ಮಿರಿಸುತೆನ್ನಯ ಸತ್ಯಮೆನಿಸುವ ವಚನಗಳನೊಲಿದು ॥ ೭೧ ॥ ನೀನು ಚಕ್ರಾಯುಧವನಾಂತಿಹೆ । ನೀನು ದೇವೋತ್ತಮನೆನಿಸಿರುವೆ । ನೀನು ಲಕ್ಷ್ಮೀರಮಣನಾಗಿಹೆ ದೇವಲೋಕದಲಿ ॥ ನೀನೆ ನಾರಾಯಣನು ಲಕ್ಷ್ಮಿಯೆ । ಜಾನಕಿಯು ಮಧುಕೈಟಭಾಂತಕ । ನೀನೆ ವಾಮನರೂಪವನು ಪಡೆದಾದಿಕೇಶವನು ॥ ೭೨ ॥ ನೀನು ಮಧುಕೈಟ ಭರವಧಿಸಿದೆ । ನೀನು ಯುದ್ಧದೊಳು ದಶಶಿರನ । ಪ್ರಾಣವನು ಪೋಗಿಸಿದೆ ಪರಮಾತ್ಮಸ್ವರೂಪನಹೆ ॥ ನೀನೆ ಅಕ್ಷರದ ಸ್ವರೂಪನು । ನೀನು ಶಾಶ್ವತ ನಜನನಾಮಯ । ನೀನೆಲದೆವರ ಶಾರ್ಙಧರನೆಂದೆನಿಸಿಕೊಂಡಿರುವೆ ॥ ೭೩ ॥ ನೀನು ಜಗದೊಳು ತುಂಬಿಕೊಂಡಿಹೆ । ನೀ ನಖಿಳಲೋಕಂಗಳಲಿ ಸ । ನ್ಮಾನವನು ಪಡೆದುತ್ತಮೋತ್ತಮ ಧರ್ಮವೆನಿಸಿರ್ಪೆ ॥ ನೀನು ಪುರುಷೋತ್ತಮನು ನೀನಾ । ದಾನವಾಂತಕನೆನಿಪೆ ಕೇಳೈ । ನೀನೆ ವಿಷ್ವಕ್ಸೇನನೆಂ ಚಾಪಿಸರನಾಂತಿರುವೆ ॥ ೭೪ ॥ ನೀನುಜಯಿಸಲಸಾಧ್ಯನಾಗಿಹೆ । ನೀನು ಮೇಲೆನಿಪಿಂದ್ರಿಯಂಗಳ । ಗೀ ನೆಲದೊಳಗರಸನೆನಿಸಿಕೊಂಡಿರುವೆ ಸಂತತವು ॥ ನೀನು ನಾಲ್ಕು ಭುಜಗಳನಾಂತಿಹೆ । ನೀನು ಸರ್ವವ್ಯಾಪಿಯಾಗಿಹೆ । ನೀನೆ ನಂದಕವೆಂಬ ಖಡ್ಗವನಾಂತು ಕಾಣಿಸುವೆ ॥ ೭೫ ॥ ನೀನೆ ವಿಷ್ಣುವು ನೀನೆ ಕೃಷ್ಣನು । ನೀನೆ ಸುರಗುರು ನೀನೆ

ವಿಬುಧರ । ಸೇನೆಯನು ಸಂರಕ್ಷಿಸುತ್ತಿಹ ವೀರನಾಗಿರುವೆ ॥ ನೀನೆ ದಿವ್ಯ ಪುರಗಳ ಪೊರೆಯುವೆ । ನೀನೆ ಬುದ್ಧಿಯು ನೀನೆ ಶಕ್ತಿಯು । ನೀನೆ ಸುರಪತಿಯಂತೆ ಬಹುಸಂಪದವನಾಂತಿರುವೆ ॥ ೩೬ ॥ ನೀನೆ ನಾರಾಯ ಣನುಪೇಂದ್ರನು । ನೀನೆ ಕೇಳೆಲೆ ರಾಘವೇಶ್ವರ । ನೀನೆ ದಮೆಯುಕ್ಷ ಮೆಯು ನೀನಾಗಿರುವೆ ಲೋಕದಲಿ ॥ ನೀನೆ ಪಾಲಕ ನೀನೆ ನಾಶಕ । ನೀನೆ ಜಿಷ್ಣುವು ನೀನೆ ಶರ್ವನು । ನೀನೆ ಶತ್ರುವಿನಾಶಕನೆನಿಸಿಕೊಂಡು ತೋರುತಿಹೆ ॥ ೩೭ ॥ ನೀನೆ ಪ್ರಭವವು ನೀನೆ ನಿಧನವು । ನೀನೆ ಶತಜಿಹ್ವ ನೆಲೆರಾಘವ । ನೀನೆ ಯಜ್ಞವು ನೀನೆ ಓಂಕಾರಸ್ವರೂಪನಹೆ ॥ ನೀನು ದಶರೂಪ ಧರನಾಗಿಹೆ । ನೀನು ಪಂಕಜನಾಭನೆನಿಸಿಹೆ । ನೀನೆ ಮೂಲೋ ಕಕ್ಕೆ ಮೊದಲನೆ ದೇವರಾಗಿರುವೆ ॥ ೩೮ ॥ ದೇವಯೋಗ್ಯರೆನಿಸುವ ತಾಪಸ । ರೀವಸುಧೆಯೊಳಗಿರುತಿಹ ಸಕಲ । ಜೀವಿಗಳ ಪಾಲಿಸುವೆ ನೀ ನೆಂದೆನುತ ಪೇಳುವರು ॥ ಭಾವಿಸಲು ಸಿದ್ಧರಿಗೆ ಸಾಧ್ಯರಿ । ಗಾವಗಂ ನೀ ನಾಶ್ರಯನೆನಿಪೆ । ದೇವರಾಘವ ಸಾವಧಾನದಿ ಕೇಳು ನೀನೊಲಿದು ॥ ೩೯ ॥ ನೀನು ಯಾರೆಂದರಿಯಲಿಲ್ಲವೆ । ಮಾನವಾಗ್ರಣಿ ನೀನು ನಿನ್ನ ನು । ನೀ ನಖಿಳಭೂತಂಗಳೊಳು ವಿಪ್ರರೊಳು ಕಾಣಿಸುವೆ ॥ ನೀನು ಗೋವುಗಳೊಳು ನದಿಗಳೊಳು । ಕಾಣಿಸುವೆ ಗಿರಿಗಳೊಳು ನಭದೊ ಳು । ನೀನು ಕಾಣಿಸುತಿರುವೆ ದಿಕ್ಕುಗಳೊಳು ನಿರಂತರವು ॥ ೪೦ ॥ ಸಾಮವೇದದ ರೂಪಿನಿಂದಲೆ । ಭೂಮಿತಲದಲಿ ನೀನು ತೋರುವೆ । ರಾಮಚಂದ್ರನೆ ವಿಬುಧರೊಳು ನೀಂ ಶ್ರೇಷ್ಠನಾಗಿರುವೆ ॥ ವ್ಯೋಮಕೇ ಶನ ಮಿತ್ರನಾಗಿಹೆ । ಕಾಮಿತಾರ್ಥವ ನೀಯುತಿಹೆ ಯುಭಿ । ರಾಮನಾ ಗಿರುವಾ ವಷಟ್ಕಾರವೆನಿಸುತ್ತಿರುವೆ ॥ ೪೧ ॥ ಸಾವಿರ ತಲೆಗಳನ್ನು ಧರಿ ಸಿಹೆ । ಸಾವಿರ ಪದಗಳನ್ನು ಪಡೆದಿಹೆ । ಸಾವಿರ ನಯನಗಳನು ನೀಂ ತಳೆ ದಿರುತ ಕಾಣಿಸುವೆ ॥ ಆವಗಂ ಸಚರಾಚರದಖಿಳ । ಜೀವಿಗಳ ನಾಶೈಲಗ ಳನಾಂ । ತೀವಸುಧೆಯನು ಧರಿಸಿಕೊಂಡಿಹೆ ನೀನು ಸಂತತವು ॥ ೪೨ ॥ ಉರಗತಲ್ಪದೆ ಮಲಗಿ ದೇವಾ । ಸುರಗರುಡ ಗಂಧರ್ವ ವಿದ್ಯಾ । ಧರರ ಸಂಚಯದಿಂದೆ ಕೂಡಿದ ಮೂಜಗಂಗಳನು ॥ ಇರಿಸಿಕೊಳ್ಳುತ ನಿನ್ನು ದರದೊಳು । ನಿರುತಸಲೆಕಂಗೊಳಿಸಿ ತೋರು । ತ್ತಿರುವೆ ರಾಘವ ನಿನ್ನ ಭಕ್ತರನೊಲಿದು ರಕ್ಷಿಸುತ ॥ ೪೩ ॥ ನಾನು ನಿನ್ನಯ ಹೃದಯವೆನಿಸುವೆ । ವಾಣಿನಿನ್ನಯ ನಾಲಗೆಯು ಗೀ । ರ್ವಾಣರೆಲ್ಲರು ನಿನ್ನ ದೇಹದ ರೋಮ ಲಾಗಿಹರು । ನಾನೆ ಪೂರ್ವದೊಳಂತು ವಿಧಿಸಿದೆ । ಮಾನವೋತ್ತಮ

ಕೇಳು ಯೋಚಿಪ | ಲೀ ನೆಲದೊಳಗೆ ನಿನ್ನನುಳಿದೊಂದಿಲ್ಲ ಸರ್ವತ್ರ ||೪೪|| ನಿನಗೆ ರಾತ್ರಿ ನಿಮೇಷವೆನಿಪ್ಪುದು | ಮನುಜನಾಥನೆ ಕೇಳ್ವುದುನ್ಮೇ | ಷಣವು ಹಗಲಾಗಿಹುದು ಪರಿಕಿಸೆ ನಾಲ್ಕುವೇದಗಳು || ನಿನಗೆ ಸಂಸ್ಕಾರವೆನಿಪವು ಮೇ | ದಿನಿಯೆ ನಿನ್ನ ಸ್ಥೈರ್ಯವಾಗಿಪು | ದಿನಕುಲೋತ್ತಮ ವಹ್ನಿ ನಿನ್ನಯ ಕೋಪವಾಗಿಹುದು || ೪೫ || ರವಿಕುಲೋತ್ತಮ ಕೇಳು ಚಂದ್ರನೆ | ಸುವಿಮಲವೆನಿಪ ನಿನ್ನ ಸೌಮ್ಯಗು | ಣವೆನಿಸಿರುವನು ಸಕಲ ಲೋಕವೆ ನಿನ್ನ ತನುವಹುದು || ತವಕದಿಂ ಬಲಿಯನ್ನು ಬಂಧಿಸಿ | ದಿವಿಜನಾಥನಿಗಿತ್ತೆ ಇಂದ್ರಪ | ದವನು ವಾಮನರೂಪದೊಳು ಮೂಜಗವನಾಕ್ರಮಿಸಿ || ೪೬ || ಸೀತೆ ಲಕ್ಷ್ಮಿಯು ನೀನೆ ವಿಷ್ಣುವು | ಭೂತಲದೊಳತಿಶೂರನೆನಿಸಿ | ಖ್ಯಾತಿವಡೆದಿಪ ರಾವಣನ ಸಂಹಾರಕೋಸುಗವೆ || ಈತೆರದ ಮನುಜಾವತಾರದೊ | ಳೀತರಣಿಕುಲದೊಳುದಿಸಿದೆ ಭೂ | ನಾಥ ದಶರಥ ಚಕ್ರವರ್ತಿಗೆ ಮಗನೆನಿಸಿಕೊಂಡು || ೪೭ || ನೀನುನಮ್ಮ ಕೆಲಸವನೆಸಗಿದೆ | ದಾನವಾಧಿಪ ರಾವಣನಳಿದ | ನೀನು ಸಗ್ಗವಕುರಿತುಬರ್ಪುದು ಪೊರೆದುಭೂಮಿಯನು || ಮಾನವಶರೀರವನು ಧರಿಸು | ತ್ತೀ ನೆಲದಭಾರವನು ಹರಿಸಿದೆ | ಭಾನುವಂಶಲಲಾಮ ನಿನಗೆಣೆಯಾರು ಮೂಜಗದೆ || ೪೮ || ನಿನ್ನ ವೀರ್ಯವ ಮೋಘವಾದುದು | ನಿನ್ನಶಕ್ತಿಯು ಮೋಘವಾದುದು | ನಿನ್ನತಿಪರಾಕ್ರಮವಮೋಘವೆನಿಪುದು ಲೋಕದಲಿ || ನಿನ್ನರೂಪವಮೋಘವಾದುದು | ನಿನ್ನನಾಮವಮೋಘವಾದುದು | ನಿನ್ನಭಕ್ತರಮೋಘ ವಿದ್ಯಾನಿಧಿಗಳೆನಿಸುವರು || ೪೯ || ಪರಮಭಕ್ತಿಯನಾಂತು ನಿನ್ನನು | ಧರಣಿಮಂಡಲದಲ್ಲಿ ಸಂತತ | ವರಿದುಪಾಸನೆ ಮಾಳ್ಪಮಾನವನಿಹಪರಂಗಳಲಿ || ನಿರುತಮಿಷ್ಟಾರ್ಥಂಗಳನು ಹೊಂ | ದಿರುವನೀ ಘನಕಥೆಯನೋದುವ | ನರರಿಗೆ ಪರಾಭವಗಳುಂಟಾಗದು ಧರಿತ್ರಿಯಲಿ || ೫೦ || ಈ ಕಥೆಪುರಾತನವೆನಿಸಿರುವು | ದೀ ಕಥೆಯು ಶಾಶ್ವತವೆನಿಸುತಿಹು | ದೀಕಥೆ ರಚಿತವಾಗಿಹುದು ವಾಲ್ಮೀಕಿಮುನಿಯಿಂದೆ || ಈ ಕಥೆ ಮನೋರಥವನಾಗಿಪು | ದೀ ಕಥೆದುರಿತಗಳನು ಪೋಗಿಪು | ದೀ ಕಥೆ ಶುಭಾವಹವೆನಿಸಿ ಕೊಡುತಿಹುದು ಮುಕ್ತಿಯನು || ೫೧ || ಕಮಲಸಂಭವನಿಂತು ಪೇಳ್ದತಿ | ವಿಮಲವಾಗಿಹ ವಚನಗಳ ನಂ | ದಮಲಮನದಿ ದಾಲಿಸುತ ವೈಶ್ವಾನರನೊಡನೆಯೆ || ಅಮರರೀಕ್ಷಿಸುತಿರಲು ಶೀಘ್ರದಿ | ಕಮಲನೇತ್ರಿಯ ನೆತ್ತಿಕೊಳ್ಳುತ | ಸಮೆದಚಿತಿಯಿಂದೆದ್ದು ನಿಂದನು ತಾನು ಮೇಲುಗಡೆ || ೫೨ || ಚಿತಿಯನುಳಿದಾ ವೀತಿಹೋ

ತ್ರನು । ವಿತತರತ್ನಾಭರಣಗಳನಾಂ । ತತಿ ಮನೋಹರವೆನಿಸಿದ ಪೀತಾಂಬರವ ಧರಿಸುತ್ತ ॥ ಅತಿಶಯದ ಕಾಂತಿಯನು ತಾಳುತ । ಸತತವೆಸೆವಾಜಾನಕಿಯ ನತಿ। ಹಿತದೆ ಕೊಟ್ಟನು ನಮಿಸಿ ರಘುಭೂಪತಿಗೆ ನಡೆತಂದು ॥ ೫೭ ॥ ಬಾಲಸೂರ್ಯ ಸಮಾನರುಚಿಯುತೆ । ನೀಲಕುಂಚಿತ ಮೂರ್ಧಜೆಕುಸುಮ । ಮಾಲಿಕಾನ್ವಿತೆ ಸುಂದರೀಮಣಿ ಯೆನಿಪಸೀತೆಯನು ॥ ಲೀಲೆಯಿಂದಾ ದಶರಥಮಹೀ । ಪಾಲನ ಸುತಂಗಿತ್ತು ನುಡಿದನು । ಲಾಲಿಸೆನ್ನುತ ಲೋಕಸಾಕ್ಷಿಯೆನಿಸಿಪ ಧನಂಜಯನು ॥ ೫೪ ॥ ಈಕೆ ಜನಕಮಹೀವರನ ಮಗ । ಳೀಕೆಯೊಳನಿತು ಪಾಪವಿಲ್ಲವು । ಈಕೆ ನಿನ್ನನು ಬಿಟ್ಟುತರರನು ನೆನೆದಿರುವಳಲ್ಲ ॥ ಈಕೆಯನು ಪಂಚವಟಿಯೊಳಗಾ । ಲೋಕಕಂಟಕ ರಾವಣನು ಬಹು । ಭೀಕರ ಬಲಾತ್ಕಾರದಿಂದಲೆ ತಂದಿರುವನೆಂದು ॥ ೫೫ ॥ ಮನಸಿನಿಂದಲು ವಚನದಿಂದಲು । ನೆನಪಿನಿಂದಲು ನಯನದಿಂದಲು । ಜನಕನಂದನೆ ಬಿಟ್ಟು ನಿನ್ನನು ಚರಿಸಿದವಳಲ್ಲ ॥ ವಿನುತ ಸಾಧ್ವೀಮಣಿಯು ತಾನೆಂ । ದೆನಿಸಿ ಸದ್ವರ್ತನೆಯ ನಾನುತ । ವಿನುತಿವೆತ್ತಿಹ ಳಿಳೆಯೊಳತಿ ಧರ್ಮಿಷ್ಠಳೆಂದೆನಿಸಿ ॥ ೫೬ ॥ ಮನುಜರಿಲ್ಲದ ಪಂಚವಟಿಯೊಳು । ಜನಕನಂದನೆ ನಿನ್ನ ನಗಲುತ ॥ ಮನದೆ ಭೀತಿಯೊಳಂಜಿ ಪರವಶಳಾಗಿ ರೋದಿಸುತ ॥ ದನುಜನಾಥನಧೀನಕೆ ಸಿಲುಕಿ । ಮನದೆನಿನ್ನನು ಜಾನಿಸುತ್ತ ಗ । ಗನಪಥದೊಳೀ ಲಂಕೆಗೆ ತರಲ್ಪಟ್ಟಹಳು ಹಿಂದೆ ॥ ೫೭ ॥ ಘೋರರೂಪುಗಳನ್ನು ತಾಳ್ದ ವಿಕಾರಿಗಳೆನಿಸ ರಕ್ಕಸಿಯರಿಂ । ದೀ ರಮಣಿದಶಕಂಠ ನಂತಃಪುರದೊಳನುದಿನವು ॥ ಬಾರಿಬಾರಿಗೆ ರಕ್ಷಿಸಲ್ಪಡು । ತಾರನೆರವಿಯ ನೈದದಿದ್ದರು । ಕೋರಿನಿನ್ನನೆ ಭಜಿಸುತಿದ್ದಳು ಪರಮಭಕ್ತಿಯಲಿ ॥ ೫೮ ॥ ಕಾಮಭಾಧೆಯನಾಂತು ರಾವಣ ॥ ನೀಮಹೀಸುತೆಯ ನಡಿಗಡಿಗೆ । ಪ್ರೇಮವಚನಗಳಿಂದೆ ಕಾಲ್ಗೆರಗುತ್ತ ಬೇಡಿದರು ॥ ಕಾಮುರೂಪವನಾಂತು ತಾನೀ । ಕೋಮಲೆಗೆ ಭೀತಿಯನೆಸಗಿದರು । ರಾಮಕೇಳವನಲ್ಲಿ ಚಿತ್ತವನಿರಿಸಿದವಳಲ್ಲ ॥ ೫೯ ॥ ಪಾಪರಹಿತಳು ಸೀತೆ ನೀಂಬಿಡು । ಕೋಪವನು ನಿನಗೆಳ್ಳನಿತು ಬೇ । ಡೀ ಪತಿವ್ರತೆಯಲ್ಲಿ ಸಂಶಯಬೇರೆವಿಧವಾಗಿ ॥ ಭೂಪರಾಘವ ಕೇಳು ನಿನಗಾ । ಜ್ಞಾಪಿಪಿಸಿ ನುಡಿವೆನೀಕೆ ನಿನಗನು । ರೂಪಳಾಗಿರುತಿಹಳು ನಿರ್ಮಲಭಾವನೆಯನಾಂತು ॥ ೬೦ ॥ ಎನುತಪೇಳ್ದಾ ವೀತಿಹೋತ್ರನು । ವನಜಮುಖಿ ಸೀತೆಯನು ರಾಮನಿ । ಗನುನಯದೊಳಂ ದಿತ್ತುನುಡಿಯುದೆ ಮೌನದಿಂದಿರಲು ॥ ಮನುಜಪಾಲಕ ರಾಘವೇ

ಶ್ವರ । ನನಲನನುಡಿಯು ನಾಲಿಸುತ ನಿಜ । ಮನದೆಯೋಚಿಸುತಿದ್ದ ನೊಂದುಮುಹೂರ್ತಪರ್ಯಂತ ॥ ೬೧ ॥ ಭೂರಿಶೋಕವನಾಂತು ಚಿಂತಿಸಿ । ಬಾರಿಬಾರಿಗೆ ರಾಘವನು ಕ । ಣ್ಣೀರಿನಿಂದಲೆ ತುಂಬಿಕೊಂಡಿರುವೆರಡುಕಂಗಳಲಿ ॥ ಕಾರಿಸಿಜಲವ ನೈದೆ ಬಿಸುಸು । ಯ್ದಾರಸೆಯು ನೀಕ್ಷಿಸುತ ನೊಂದನು । ಮಿಾರಿದ ಮನೋವ್ಯಥೆಯುನಾಂತು ಮುಹೂರ್ತ ಪರ್ಯಂತ ॥ ೬೨ ॥ ಅನಲನಾಡಿದ ಮಾತುಗಳನಾ । ಮನುಕುಲೋತ್ತಮ ರಾಮನಾಲಿಸಿ । ಘನಭಕುತಿಯಿಂ ದಿಂತುಪೇಳ್ದನು ದಿವಿಜನಾಥನಿಗೆ ॥ ಜನಕಜಾತೆಯೊಳಿಲ್ಲ ಪಾಪವು । ದನುಜವರನಂತಃಪುರದೊಳೀ । ವನಿತೆ ಬಹುದಿನ ವಾಸಿಸಿದ್ದಳು ಬಂಧುಗಳನಗಲಿ ॥ ೬೩ ॥ ಜನಕತನುಜೆಯು ನನ್ಯಚಿತ್ತಳು । ವಿನುತ ಭಕ್ತಿಯನಾಂತು ನನ್ನಲಿ । ಮನವಿರಿಸಿ ನಡೆಯುತ್ತಿರುವಳು ನಿರಂತರವುತಿಳಿದು ॥ ನನಗೆ ಸೀತೆಯ ನಡತೆಗೊತ್ತಿಹು । ದನಲನೊಳು ಬೀಳುತ್ತಿರಲು ನಾಂ । ಮನದೊಳಗುದಾಸೀನನೆನಿಸಿದೆ ಮೂಜಗವರಿಯಲು ॥ ೬೪ ॥ ಧರಣಿಸುತೆಯನು ಶೋಧಿಸದೆ ನಾಂ । ಕರೆದುಕೊಂಡೆನ್ನೊಡನೆ ಪೋದರೆ । ಪುರವರಕೆ ಸತ್ಪುರುಷರೆಲ್ಲರು ಕಾಮುಕನೆನುತ್ತ ॥ ಜರೆವರೆನ್ನನು ಮೂಢನೆನ್ನುತ । ಕರೆಯುವರುನಾನು ತ್ರಿಲೋಕದೊ । ಳುರುತರವೆನಿಪನಿಂದೆ ಗೀಡಾಗುವೆನುಸಂತತವು ॥ ೬೫ ॥ ಮೂರುಜಗಕೆ ಪ್ರತ್ಯಯಾರ್ಥವೆ । ತೋರಿಸಲುದಾಸೀನ ವಾಡಿದೆ । ನೀ ರಮಣಿತಾಂ ಬೀಳುತಿರಲಾ ವೀತಿಹೋತ್ರನಲಿ ॥ ವಾರಿಧಿವಡವೆನೆಂತನುದಿನವು । ಮಿಾರದಿಹುದಂತು ದಶಶಿರನೀ । ನಾರಿಯನು ಹೊಂದಲವನಿ ಗಸಾಧ್ಯವೆನಿಸುತ್ತಿಹುದು ॥ ೬೬ ॥ ಸರಸಿಜಾಕ್ಷಿಯು ನಾ ದಶಶಿರನು । ಪೊರೆವುತಿದ್ದರು ತನ್ನ ಸಾಧದೊ । ಳುರುತರದ ನಿಜತೇಜದಿಂದಲೆ ಬಹುಳದಿನತನಕ ॥ ಉರಿವ ವಹ್ನಿಜ್ವಾಲೆಯನರಿಯೆ । ನರರು ಹಿಡಿಯದಿರುವ ವೊಲಾ ದಶ । ಶಿರನು ಹೊಂದಲಶಕ್ತನಹನೀ ಪರಮ ಸಾಧ್ವಿಯನು ॥ ೬೭ ॥ ಇವಳು ದಶಕಂಧರನ ಸುಂದರ । ಭವನದೊಳು ಸಂಪತ್ತುಗಳನನು । ಭವಿಪಳಲ್ಲವು ಕಾಂತಿರವಿಯನದೆಂತು ಬಿಡದಿಹುದೊ ॥ ಇವಳು ತಾನಂತೆನ್ನನು ಬಿಡದಿ । ರುವಳು ಜಾನಕಿ ಸನ್ನುತಿವಡೆದಿ । ರುವಳು ಪರಿಶುದ್ಧಳೆನಿಸಿಕೊಳುತ ಮೂರುಲೋಕದಲಿ ॥ ೬೮ ॥ ಜನರು ತಮ್ಮಯ ಕೀರ್ತಿಯನು ಮೇ । ದಿನಿಯೊಳು ಬಿಡದ ಹಾಗೆನಾ ನೀ । ವನಿತೆಯನು ಕೈಕೊಳ್ಳುವೆ ಬಿಡದೆ ಹರ್ಷವನುತಾಳ್ದು ॥ ಮನದೊಳೆನ್ನ ಸುಖವನೆ ಕೋರುತ । ನನಗೆ ಹಿತವನೆ ಪೇಳ್ವನಿಮ್ಮ

ಯ | ವಿನುತವಚನಂಗಳನು ಕೇಳುವೆನೆಂದಸಾರಃವು ‖ ೬೯ ‖ ನೀವು ಜಗದೊಳು ಪೂಜ್ಯರೆನಿಪಿರಿ | ತೀವಿದ ಕರುಣೆಯುಳ್ಳವರು ಸಂ | ಭಾವಿಗಳೆನುತ ದೇವಪತಿಗಾರಘುವರನು ಪೇಳ್ದು ‖ ರಾವಣನ ಸಂಹಾರಕೋಸುಗ | ಭೂವಲಯದೊಳು ಜನ್ಮವನುಪಡೆ | ದಾ ವಧೂಮಣಿಜಾನಕಿ ಸಹಿತ ಸುಖವನೈದಿದನು ‖ ೭೦ ‖

ಇಂತು ಇಪ್ಪತ್ತೆಂಟನೆಯ ಅಧ್ಯಾಯ ಸಂಪೂರ್ಣವು.

ಪದ್ಯಗಳು ೧೪೨೯.

ಇಪ್ಪತ್ತೊಂಬತ್ತನೆಯ ಅಧ್ಯಾಯ.

ಸೂಚನೆ‖ ಧರಣಿಸುತೆ ಲಂಕಾನಗರವನು |
ತೊರೆದುಬಂದಳು ಪತಿಯುಸಹಿತತಿ |
ಭರದೆ ನಂದಿಗ್ರಾಮಕೆ ವಿಮಾನದೊಳು ತಾಕಳತು ‖

ರವಿಕುಲೋತ್ತಮ ರಾಮನಾಡಿದ | ಸುವಿಮಲೋಕ್ತಿಗಳನ್ನು ಕೇಳ್ದು | ದಿವಿಜ ವಲ್ಲಭ ನಂತರಂಗದೆ ಸಂತಸವನಾಂತು ‖ ಜವದೊಳಾ ದಶರಥ ನರೇಂದ್ರನ | ಕುವರನಿಗೆ ತಾನಿಂತು ನುಡಿದನು | ದಿವಿಜರೆಲ್ಲರು ಕೇಳುತಿರಲತಿ ಮಧುರ ವಚನದಲಿ ‖ ೧ ‖ ವನಜಲೋಚನ ಕೇಳು ರಘುನಂ | ದನನೆ ಭುವನತ್ರಯಕೆ ಯೋಚಿಸ | ಲನುದಿನ ಪ್ರಬಲಕರವಾಗಿ ವ್ಯಾಪಿಸುತಲಿದ್ದ ‖ ದನುಜ ರಾವಣ ನಿಂದಡಿಗಡಿಗೆ | ಜನಿಸಿದತಿ ಭಯ ಮೊಂಬತಮವನು | ಮನವೊಲಿದು ಪರಿಹರಿಸಿ ಸಂರಕ್ಷಿಸಿದೆ ಭೂಮಿಯನು ‖ ೨ ‖ ದೈವಬಲದಿಂ ದೀದನುಜಪತಿ | ರಾವಣನ ಸಂಹರಿಸಿದೈ ರಾ | ಜೀವ ಲೋಚನ ರಾಘವೇಂದ್ರನೆ ಕೇಳು ನೀನಿನ್ನು | ಸಾವಕಾಶವ ನಾಗಿ ಸದಯೋ | ಧ್ಯಾ ವರಪುರಿಗೆ ಪೋಗಿ ನಿನ್ನ ಸೆ | ಭಾವಿಸುತ ಲಿರ್ಪ ಭರತನನು ಬೇಗಸಂತವಿಸು ‖ ೩ ‖ ಸಂತಸಂಗೊಳಿಸೈಯ್ಯ ರಾಮನಿ | ರಂತರವು ನೀಂ ಘನತರ ಯಶೋ | ವಂತರಹ ಕೌಸಲ್ಯೆ ಕೈಕೆ ಸುಮಿತ್ರೆಯರ ನೊಲಿದು ‖ ಸ್ವಂತ ರಾಜ್ಯವ ನಾಂತು ಪಾಲಿಸು | ಸಂತತವು ಸುತರಂತೆ ಜನರನು | ಸಂತವಿ ಸಖಿಳ ಮಿತ್ರರ ನಯೋಧ್ಯಾ ಪುರವರದೊಳು ‖ ೪ ‖ ರವಿಕುಲವ ನುದ್ಧರಿಸು ಜಯಮಂ | ಧವನೆಸಗಿ ಕೀರ್ತಿಯ

ನು ಹೊಂದುಥ । ಸವೆನು ಕೊಡು ಭೂಸುರರುಸಲೆಸಂತುಷ್ಟಿ ಯುಪ್ಪಂತೆ ॥
ಅವನಿಯನು ಸಂರಕ್ಷಿಸಿ ಬಳಿಕ । ದಿವಕೆ ಬಾರೈ ರಾಘವೇಂದ್ರನೆ । ಜವೆ
ದೊಳ್ಳೈ ತಂದಿಹನು ನಿನ್ನಯ ತಂದೆ ದಶರಥನು ॥ ೫ ॥ ವರವಿಮಾನದೆ
ಕೂಡುತ್ತಿಲ್ಲಿಗೆ । ಪರಮ ಸಂತಸದಿಂದೆ ನಡೆತಂ । ದಿರುವ ನಿಂದ್ರನ ಲೋ
ಕದಿಂದಲೆ ದಶರಥ ನೃಪತಿಯು ॥ ಗುರುವೆನಿಸಿ ಕೊಂಡಿದ್ದ ನಲ್ಲವೆ । ಧರಣಿ
ಲೋಕದೊಳೀತನು ನಿನಗೆ । ಚರಣ ಕೆರಗೈ ಪಿತಗೆ ಸತಿಸೋದರ ರೊ
ಡನೆ ನೀನು ॥ ೬ ॥ ತನಯ ನಾಗಿಹ ನಿನ್ನ ದೆಸೆಯಿಂ । ದಿನ ಕುಲೋತ್ತ
ಮ ದಶರಥನು ಸ । ನ್ಮನದೆ ತಾರಿತ ನಾದ ನೆಲೆ ರಾಘವನೆ ಕೇಳೆನಲು ॥
ಅನುಜ ಲಕ್ಷ್ಮಣ ನೊಡನೆ ಸಂಕ್ರಂ । ದನನ ವಚನವ ಕೇಳ್ದು ರಘು
ನಂ । ದನ ನೆರಗಿದನು ವರವಿ ಮಾನದೊಳಿದ್ದ ದಶರಥಗೆ ॥ ೭ ॥ ವಿಮಲ
ವಸ್ತ್ರಂಗಳನು ಧರಿಸು । ತ್ತಮರ ಪಥದೆ ವಿಮಾನ ದೊಳ್ಳುಳಿ । ತಮ
ಲ ನಿಜತನು ಕಾಂತಿ ಯಿಂದುರೆ ಮೆರೆವ ತಂದೆಯನು ॥ ಕಮಲ ಲೋ
ಚನೆ ಸೀತೆ ಯೊಡನಾ । ದ್ಯುಮಣಿ ವಂಶಲಲಾಮ ರಾಘವ । ನಮಲ
ಮನದಿಂ ದೀಕ್ಷಿಸಿದ ನಾ ಲಕ್ಷ್ಮಣನ ಸಹಿತ ॥ ೮ ॥ ತನ್ನ ಸುವಿಗಿಂ ತ
ಧಿಕನಾಗಿಹ । ತನ್ನ ಸುತನನು ಕಂಡು ಘನ ಸಂ । ಪನ್ನ ಮತಿ ದಶರಥ
ಮಹೀಂ ವರ ನಂದು ಹರ್ಷದಲಿ ॥ ತನ್ನ ತೊಡೆಯೊಳು ರಾಮ ಲಕ್ಷ್ಮ
ಣ । ರನ್ನು ಕೂಡಿಸಿ ತಬ್ಬಿ ಕೊಳ್ಳುತ । ಮನ್ನಿಸಿ ಬಳಿಕ ನುಡಿದಸಿಂ
ತಾ ರಾಮಚಂದ್ರನಿಗೆ ॥ ೯ ॥ ಮಗನೆ ಕೇಳೈ ನಿನ್ನ ನಗಲಿದೆ । ನಗೆವಿ
ಬುಧವರ ರಿಂದನು ದಿನ ಮೊ । ದಗು ತಿರುವ ಮನ್ನಣೆ ಗಳೆಲ್ಲವು ರುಚಿ
ಸದಿರುತಿಹವು ॥ ಸೊಗಸ ದೆನಗಾ ಸ್ವರ್ಗ ವಾಸವು । ಪಗೆಗಳ ನಿರಿದು
ವಿಪಿನ ವಾಸವ । ಮುಗಿಸ್ಸ ಕೊಂಡಿಹ ನಿನ್ನ ಕಂಡತಿ ಹರ್ಷ ವಾಯ್ತೆನ
ಗೆ ॥ ೧೦ ॥ ವನಕೆ ಪೋಗೆಲೆ ರಾಘವನೆ ನೀ । ನೆನುತ ನಿನ್ನನು ಕುರಿತು
ರಾಜ ಭ । ವನದೊಳಾಡಿದ ಕೈಕೆಯ ನುಡಿಗಳಿನ್ನ ಮನದೊಳಿವೆ ॥ ತ
ನಯ ಕೇಳ್ಸತಿ ಸೋದರರ್ಗಳ । ಸನಿಹದೆ ಕುಶಲ ದೊಳಿಹ ನಿನ್ನನು ।
ಮನದಣಿಸಿ ಕಾಣುತ್ತ ಕಳೆದೆನು ಸಕಲ ದುಃಖಗಳ ॥ ೧೧ ॥ ತೀವಿ
ದ ಹಿಮವ ನುಳಿದವರ ರಾ । ಜೀವ ಸಖನಂತೆನ್ನ ಚಿತ್ತದ । ನೋವನು
ಳಿದೆನು ರಾಮ ಚಂದ್ರನೆ ನಿನ್ನ ದೆಸೆಯಿಂದ ॥ ರಾವಣನ ಸಂಹಾರ ಕೋ
ಸುಗ । ದೈವ ವಶದಿಂ ದಿತು ನಡೆವಿಸು । ದೀವಸುಧೆ ಯೊಳು ನಾನು
ತಾರಿದ ನಾದೆ ನಿನ್ನಿಂದೆ ॥ ೧೨ ॥ ಸುತನೆ ಅಷ್ಟಾ ವಕ್ರ ನೆನ್ನಿಪ । ಸುತನ
ದೆಸೆಯಿಂ ತಾರಿತ ನೆನಿಸಿ । ನುತಿವಡೆದಿಹಾ ಧಾರ್ಮಿಕ ನೆನಿಪ ವಿಪ್ರ ನಂದ

ದಲಿ ॥ ಕ್ಷಿತಿಯೊಳು ಸುಪುತ್ರ ನಹ ನಿನ್ನಯ । ವಿತತ ವರ್ತನೆ ಯಿಂದೆ ನಾಂತಾ । ರಿತನೆಸಿಸಿರುವೆ ನೆಂದನಾದಶರಥನು ಸುತನೊಡನೆ ॥ ೧೩ ॥ ಸ ತಿ ಸಹೋದರ ರೊಡನೆ ಲಂಕೆಯು । ನತಿಭರದೆ ಬಿಡುತಿಂದ ಯೋಧ್ಯೆಗೆ । ಜತನದಿಂದಲೆಪೋಗು ನಿನ್ನನು ಕಂಡು ಕೌಸಲ್ಯೆ ॥ ವಿತತ ಸಂತಸ ದಿಂ ದೆತಾಂ ಥ । ನ್ಯತೆಯ ನೈದುವಳು ಪುರವನು ಸೇ । ರುತಿಹ ನಿನ್ನನು ನೋಳ್ಪ ಮನುಜರು ಧನ್ಯ ರೆನಿಸುವರು ॥ ೧೪ ॥ ಪುರದೊಳಭಿಷೇಕ ವನು ತಾಳ್ದೀ । ಧರಣಿಯನು ಪಾಲಿಸುವ ನಿನ್ನನು । ಪರಮ ಸಂಮದ ದಿಂದೆ ನೋಡುವಜನರು ಧನ್ಯರಲಾ ॥ ಭರತನನು ಸಂತವಿಸು ಸತಿ ಸೋ । ದರರಸಹಿತೀ ವನದೆ ವಾಸಿಸು । ತಿರುವ ನಿನಗಾಗಿಹವು ಕೇಳ್ದಿನಾಲ್ಕು ವರುಷಗಳು ॥ ೧೫ ॥ ನಿನ್ನ ಕಾನನ ವಾಸ ಮುಗಿದುದು । ನಿನ್ನ ಮೇ ಲೆನಿಪ ಪ್ರತಿಜ್ಞೆಯು । ಮನ್ನಣೆಯ ನಾಂತೈದಿತು ಸಫಲವ ನೆಲರಾಘವ ನೆ ॥ ನಿನ್ನ ಹಗೆಯುಹ ರಾವಣಾಸುರ । ನನ್ನು ವಧಿಸಿದೆ ಸಕಲ ನಿರ್ಜರ । ರನ್ನು ಸಂತಸ ಪಡಿಸಿ ಘನತರ ಕಾರ್ಯವ ನೆಸಗಿದೆ ॥ ೧೬ ॥ ಅನುಜ ನಿಂ ದಲೆ ಕೂಡಿಕೊಂಡನು । ದಿನವು ರಾಜ್ಯವ ನಾಳುತ ಬದುಕ । ವನಿಯೊಳ ಗೆ ಚಿರಕಾಲದ ತನಕ ನಿನ್ನ ಸತಿ ಸಹಿತ ॥ ಘನತರದ ಕೀರ್ತಿಯನುಹೊಂ ದಿಧೆ । ಯೆನುತ ಸಂತವಿಸುತ್ತ ರಘುನಂ । ದನಿಗೆ ಪೇಳ್ದನಾ ದಶರಥ ಮ ಹೀ ವರನು ನಲಿದು ॥ ೧೭ ॥ ತಂದೆ ನುಡಿಗಳ ನಾಲಿಸುತ ರಘು । ನಂದ ನನು ಕೈ ಮುಗಿದೆರಗಿ ತಾ । ನಂದು ದಶರಥ ಭೂಮಿಪತಿ ಗೆಂದ ನತಿ ವಿನಯದಲಿ ॥ ತಂದೆ ಕೇಳಾ ಕೈಕೆಗೆ ತನಯ । ನಿಂದೆ ಕೂಡಿದ ನಿನ್ನನು ಬಿಡುವೆ । ನೆಂದು ಕೊಟ್ಟಹ ಶಾಪವನು ಪರಿಹರಿಸು ನೀನೆ ನುತ ॥ ೧೮ ॥ ಭರತನೊಳು ಕೈಕೆಯೊಳು ನೀಸಿಡು । ಪರಮ ವಿಶ್ವಾಸವ ನೆನುತ್ತಂ । ದೆರಗಿ ದಶರಥ ನಡಿಗೆ ರಘುನಂದನನು ಬೇ ಡುತಿರೆ ॥ ಹರುಷ ದೊಳ ಗಂತಾಗಲೆನುತತಿ । ಕರುಣೆ ಯಿಂದಲೆ ಪೇಳ್ದು ರಘುಭೂ । ವರನ ನಾಲಿಂಗಿಸುತಪೇಳ್ದನು ಕುರಿತು ಲಕ್ಷ್ಮಣನ ॥ ೧೯ ॥ ತನಯ ಕೇಳಲೆ ಲಕ್ಷ್ಮಣನೆ ನೀ । ನನುದಿನವು ಭಕ್ತಿಯನು ತಾಳು ತ । ಜನಕ ನಂದನೆ ಯಿಂದೆ ಕೂಡಿದ ರಾಮಚಂದ್ರನನು ॥ ಮನವೊಲಿ ದು ಸೇವಿಸಿದೆ ಯದರಿಂ । ದೆನಗೆ ಮಹದಾ ನಂದ ವಾಗಿಹು । ದಿನಕು ಲದೆ ನೀನಧಿಕ ಪುಣ್ಯವ ಪಡೆದು ಪೆಸರಾಂತೆ ॥ ೨೦ ॥ ನಿನಗೆಬಂದುದು ಬಹುಳ ಕೀರ್ತಿಯು । ನಿನಗೆ ಮಂಗಳ ಮಕ್ಕೆ ರಘು ನಂ । ದನನು ಹ ರ್ಷವ ನೈದಿದರೆ ಸಗ್ಗದೊಳು ಮರ್ತ್ಯದೆ ॥ ನಿನಗೆ ಬಂದಾತೆಹುದು ಸ

ಕಲಭು । ವನಗಳ ಶುಭಂಗಳೊಳಗೆ ನಿರತ । ನೆನಿಸಿಕೊಳ್ಳುತ ರಾ
ಮನುನ್ನತಿ ಮೆತ್ತು ತೋರುವನು ॥ ೨೧ ॥ ಅಮರ ವಲ್ಲಭ ನರ್ಚಿಸು
ವನೀ । ಕಮಲ ನಾಭನ ನೊಲಿದು ಪೂಜಿಪ । ರಮಲ ಮನದೊಳು ಸು
ರರು ಸಿದ್ಧರು ನರರು ತಾಪಸರು ॥ ಕಮಲಸಂಭವ ನಿಂತು ವಿಧಿಸಿದ । ನ
ಮಮ ಇದುಬಹುಗೆಟ್ಟಿಪ್ಯ ಮರ್ಗಿಹು । ದಮರಪತಿ ರಾಘವನೆ ವೇದಕೆ
ಹೃದಯ ವಾಗಿಹನು ॥ ೨೨ ॥ ಜನಕ ನಂದನೆ ಸಹಿತರಘುನಾ । ಥನನು
ನಿತ್ಯವು ಭಕ್ತಿಯಿಂದಲೆ । ಮನವೊಲಿದು ಸೇವಿಸಿದ ನಿನಗೀ ಮೇದಿನೀತ
ಲದೆ ॥ ಘನತೆ ವೆತ್ತಿಹ ಕೀರ್ತಿ ಬಂದುದು । ವಿನುತ ಧರ್ಮ್ಮ ಚರಣೆ ನೆಲ
ಸಿತು । ತನಯ ನಿನ್ನೊಳೆನುತ್ತ ಪೇಳ್ದಂತೆಂದ ನವನಿಜೆಗೆ ॥ ೨೩ ॥
ಜನಕನಂದನೆ ಕೇಳು ರಘುಸಂ । ದನನು ನಿನ್ನನು ಬಿಟ್ಟಿರುವೆ ನೆಂ ।
ದೆನುತ ಪೇಳ್ದುದ ಕಾಗಿ ಕೋಪಿಸ ಬೇಡ ಚಿತ್ತದಲಿ ॥ ನಿನಗೆ ಹಿತವನ
ಪೇಕ್ಷಿಸು ತಿಳಿಯ । ಜನರ ನೊಪ್ಪಿಸ ಲಿಂತು ನುಡಿದನು । ನಿನಗೆ ಮೂ
ಜಗ ದೊಳಪ ಕೀರ್ತಿಯು ಬಾರದಂದದಲಿ ॥ ೨೪ ॥ ಪತಿಯ ಶುಶ್ರೂಷೆ
ಯನು ವಿರಚಿಸು । ಸತತ ನನ್ನಯ ನುಡಿಯ ಕೇಳ್ದತಿ । ಹಿತದೆಪತಿಸೇ
ವೆಯೊಳುದಾಸೀನವನು ಮಾಡದಿರು ॥ ಪತಿ ಪರಾಯಣೆ ನೀನೆನುತರು
ಹಿ । ಸುತರ ನಾಭೂಜಾತೆಯನು ದಶ । ರಥನು ಸಂತಸ ಪಡಿಸಿ ತೆರಳಿದ
ನಿಂದ್ರಲೋಕಕ್ಕೆ ॥ ೨೫ ॥ ವರವಿಮಾನದೊ ಳಾದಶರಥನು । ಸುರಪಲೋ
ಕಕೆ ಪೋದೊಡನೆ ಬಲು । ಹರುಷ ದಿಂದಮರೇಂದ್ರ ನಾರಘು ವೀರನನು
ಕುರಿತು ॥ ಭರದೊ ಳಿಂತೆಂದನೆಲೆ ರಾಘವ । ಧರಣಿಯೊಳ್ ಮಗ ಮೋ
ಘ ಮೆನಿಸಿತು । ಸರಸಿಜಾಕ್ಷ ನೆನಿಸಿದ ನಿನ್ನಯ ದಿವ್ಯದರ್ಶನವು ॥ ೨೬ ॥
ನೀನು ಮನದೊಳ ಪೇಕ್ಷಿಸಿದುದನು । ನಾನು ಕೊಡುವೆನು ಮಾನವೇಂ
ದ್ರನೆ । ನೀನು ತಿಳುಹಿಸು ನಿನ್ನ ಚಿತ್ತದ ಕೋರಿಕೆಯ ನೆಸಲು ॥ ಜಾನ
ಕೀಸೌಮಿತ್ರಿಯ ರೊಡನೆ । ಯಾನುಡಿಯ ನಾಲಿಸುತ ಘನಸುಂ । ಮಾನ
ದೊಳು ಸುರಪತಿಗೆಪೇಳಿದನಿಂತು ರಾಘವನು ॥ ೨೭ ॥ ನಿನಗೆ ನನ್ನೊ
ಳು ಕರುಣೆಯಿದ್ದರೆ । ರಣದೊಳೆನ್ನ ನಿಮಿತ್ತದಿಂದೆ ಮ । ರಣವನೈದಿದ
ಕಪಿಗಳೆಲ್ಲರು ಜೀವಿಸಂದದಲಿ ॥ ಮನಕೆತರುವುದು ನನ್ನ ಹಿತಕೆಂ । ದೆ
ನುತ ಹೆಂಡತಿ ಮಕ್ಕಳನು ತೊರೆ । ದನುವರದೊಳೀತೆರದೆ ಮರಣವನಾಂ
ತಿಹರು ಬಂದು ॥ ೨೮ ॥ ದಿವಿಜನಾಥನೆ ನಿನ್ನ ದೆಸೆಯಿಂ । ದಿವರುಬದುಕಲಿ
ಸತ್ತ ವಾನರ । ರವಯವಂಗಳು ಮಕ್ಷತಗಳಾಗಿರಲಿ ಲೇಸೆನಿಸಿ ॥ ಇವರು
ನಿಲ್ಲುವ ಕಡೆಗಳಲ್ಲಿರು । ವನನಿರುಹಗಳ ಕಾಲದೊಳಗೆ ಫ । ಲವನು

ಬಿಡುವೆಂತಾಗಲಿ ಸತತವೀಮಹೀತಲದೆ ॥ ೨೯ ॥ ನದಿಗಳವಮಲೋದಕವೆ ನಾಂತಿರ । ಲೊದಗಿಸೆನಗೀ ವರಗಳನೆನುತ । ಪದುಮನಾಭನು ಬೇಡುತಿರಲಂದಮರ ನಾಥನನು ॥ ಇದುವಮಹತ್ತರ ಮೆನಿಸಿಕೊಂಬುದು । ಸದಯದಿಂದಲೆ ಕೊಟ್ಟೆಹೆನಿದನು । ಬದುಕುವರಳಿದ ಕಪಿಗಳೆಲ್ಲರು ನಿನ್ನಭಿಮತದೊಲು ॥ ೩೦ ॥ ಇವರು ರೋಗವ್ರಣಗಳಿಲ್ಲದೆ । ಬುವಿಯೊಳತಿಬಲ ಪೌರುಷವ ನಾಂ । ತಿವರ ಬಾಂಧವ ಪುತ್ರ ಮಿತ್ರರಸಹಿತ ಲನುದಿನವು ॥ ವಿವಿಧ ಸೌಖ್ಯವ ನಾಂತಧಿಕ ಹ । ರ್ಷವನು ಹೊಂದಿರುತಿಹರು ಧರಣಿಯೊ । ಳವರಿರುವ ಕಡೆಫಲವನೀವುವು ಸಕಲವೃಕ್ಷಗಳು ॥ ೩೧ ॥ ಇವರುವಾಸಿಸ ಕಡೆಯೊಳಿರ್ಪುದು । ಸುವಿಮಲೋದಕ ದಿಂದೆನದನದಿ । ನಿವಹವೆಂದೆನು ತಮರವರನೆಂದೊಡನೆ ನಿದ್ರಿಪರು ॥ ಅವನಿಯೊಳುತಾ ವೆದ್ದುಕುಳಿತಂ । ತೆವೊಲುಶಕ್ರನು ನೋಡುತಿರಲಾ । ಪ್ಲವಗವೀರರು ಮೇಲಕೆದ್ದುಕುಳಿತರು ಶೀಘ್ರದಲಿ ॥ ೩೨ ॥ ಮುರಿದತೋಳ್ತೊಡೆ ಕೈಗಳಿಂದಲು । ಧುರದೊಳಳಿದಾ ಕಪಿಗಳೆಲ್ಲರು । ಪರಮವಿಸ್ಮಯ ಮನುತಚಿತ್ತದೊಳಂದುಕೊಂಡಿರದೆ ॥ ಭರದೊಳಂದೆದ್ದು ರಘುವರನ । ಚರಣಪಂಕಜ ಕತಿವಿನಯದಿಂ । ದೆರಗಿಕೊಂಡಾಡಿದರು ಹರುಷದೊಳಾತ ನಿದಿರಿನಲಿ ॥ ೩೩ ॥ ಬಳಿಕನಿರ್ಜರ ರೆಲ್ಲಸಂತಸ । ದಳೆದುರಘುನಾ ಥನನುಹೊಗಳುತ । ಕಳುಹಿಸೀಕಪಿಗಳನ ವರನೆಲೆಗೆಲೆ ಮಹಾತ್ಮಕನೇ ॥ ತಳುವದೆತೆರಳ ಯೋಧ್ಯೆಗೆಸತಿಯು । ನೊಲಿದುಸಂತಸ ಪಡಿಸುವನ್ನಿಸಿ । ಸಲಹಿಸೇವಿಸಿ ತೃಪ್ತಿಪಡಿಸುವು ದಖಿಳಜನನಿಯರ ॥ ೩೪ ॥ ಅನುಜ ಶತ್ರುಘ್ನನಿಗೆ ಹರ್ಷವ । ನನುಗೊಳಿಸುಧರ್ಮಿಷ್ಠ ನಹಭರ । ತನಿಗೆ ದರ್ಶನವನ್ನುಕೊಡು ಪಟ್ಟಾಭಿಷೇಕವನು ॥ ಮನವೊಲಿದು ನೀಂ ತಳೆವಯೋಧ್ಯೆಯ । ಜನರನೊಲಿಸೆಂದೊರೆದು ರಘುನಂ । ದನನಿಗೆ ವಿಬುಧರೆಲ್ಲಪೋದರು ತಮ್ಮನೆಲೆಗಳಿಗೆ ॥ ೩೫ ॥ ಸೀತೆಲಕ್ಷ್ಮಣ ರೊಡನಧಿಕ ಸಂ । ಪ್ರೀತಿಯಿಂದೆ ಸಮಸ್ತವಿಬುಧರಿ । ಗಾತರಣಿ ಕುಲತಿಲಕ ರಾಘವನೆರಗಿ ಕೈಮುಗಿದು ॥ ಖ್ಯಾತಿವಡೆದೆಸೆ ವಖಿಳಕಪಿಸಂ । ಘಾತದಿಂದಾರಾತ್ರಿ ಧರಣೀ । ಜಾತೆಯೊದನಾಲಂಕೆಯುಲಿ ವಾಸವನುಮಾಡಿದನು ॥ ೩೬ ॥ ಮರುದಿವಸ ಸೂರ್ಯೋದಯದೊಳಾ । ವರವಿಭೀಷಣ ನತಿವಿನಯದಿಂ । ದಿರದೆರಾಮನಬಳಿಗೆ ನಡೆತಂದೆರಗಿ ಭಕ್ತಿಯಲಿ ॥ ಪರಮಕರುಣಾ ನಿಧಿಯೆ ನೀನೀ । ಧರಣಿಜಾ ಸೌಮಿತ್ರಿವಾನರ । ವರರ ನೊಡಗೊಂಡಿತ್ತ ಪರಿನೈತರಲು ಬೇಡುವೆನು ॥ ೩೭ ॥ ಮಂಗಳಸ್ನಾನವ ನೆಸಗಿನಿ । ನ್ನಂಗಸವೆರಸಿ ಮೇಲೆನಿಪವಸ ॥

ನಂಗಳನು ಕೈಕೊಂಡಖಿಳ ರತ್ನಾಭರಣಸಹಿತ ॥ ರಂಗನಾಥನೆ ನಿನ್ನ ಪ
ದಕಮಲ । ಲಂಗಳಿಗೆ ನಾನಾಗಿಸುತ್ತಿಹ । ಸಿಂಗರವೆನಿಪ ಪೂಜೆಯನು ತ
ಳೆದೆನ್ನ ನುದ್ಧರಿಸು ॥ ೩೮ ॥ ಬಳಿಕಯೋಧ್ಯೆಗೆ ಪೋಗಬಹುದೆಂ । ದೊ
ಲಿದುಬೇಡಲು ಕಮಲಸಖಕುಲ । ತಿಲಕನಂದಾ ನುಡಿಯನಾಲಿಸುತಾ ವಿ
ಭೀಷಣನ ॥ ತಲೆದಡವಿ ಪೇಳಿದನು ಮನದೊಳು । ತಳೆದು ಮುದವನು
ಮಧುರತರ ಕೋ । ಮಲವಚನಗಳ ನಖಿಳಕಪಿಗಳ ಮನವನೊಲಿಸು
ತ್ತ ॥ ೩೯ ॥ ದನುಜನಾಥನೆ ಕೇಳುದವಿನಂ । ದನನುಮೊದಲಪ ಕಪಿಗ
ಳೆಲ್ಲರ । ಮನದಣಿಯೆನೀಂ ಮಂಗಳಸ್ನಾನವನು ಮಾಡಿಸುತ ॥ ಘನಕ
ನಕ ವಸ್ತ್ರಾಭರಣ ವಾ । ಹನಗಳಿಂದಲೆ ತುಷ್ಟಿಪಡಿಸಿಂ । ದೆನಗೆ ಬೇ
ಕಾಗಿಲ್ಲ ಮಂಗಳವೆನಿಪ ಮಜ್ಜನವು ॥ ೪೦ ॥ ಧರಣಿಯೊಳು ಧರ್ಮಾತ್ಮನೆ
ನಿಸಿದ । ಭರತನನುಳಿದು ನಾನು ಮಂಗಳ । ಕರವೆನಿಪ ಮಜ್ಜನವ ನೆ
ಸಗುವುದಿಲ್ಲ ಮೇಲೆನಿಪ ॥ ಮೆರೆವ ದಿವ್ಯಾಂಬರಗಳ ನೊಲಿದು । ಧರಿಸು
ವವನಲ್ಲಖಿಳ ರತ್ನಾ । ಭರಣಗಳ ಸಂಗದೊಳು ತಾಳುವನಲ್ಲ ಸಂತಸ
ದೆ ॥ ೪೧ ॥ ಹಿತದಲಂಕೆಯ ನುಳಿದಯೋಧ್ಯೆಗೆ । ಸತಿಸಹೋದರರೊ
ಡನೆ ಪೋಗುವೆ । ನತಿಭರದೆ ಬಹುದುರ್ಗಮ ವೆನಿಸಿರುತಿಹುದಾದಾರಿ ॥
ಜತನದಿಂದಲೆ ಪೋಗಬೇಕೆನೆ । ಮತಿವಿಶಾರದ ನಾನುಡಿಯನತಿ । ಹಿತ
ದೆ ಕೇಳುತ ಪದಕೆರಗಿ ಪೇಳಿದನು ರಾಘವನ ॥ ೪೨ ॥ ಸ್ವಾಮಿರಾಘವ
ಕೇಳುನಿಮ್ಮನು । ರಾಮಣೀಯಕ ವೆನಿಪಪುಷ್ಪಕ । ನಾಮಕ ವಿಮಾ
ನದೊಳು ಕೂಡಿಸು ತೆರಡು ಜಾವದಲಿ ॥ ಭೂಮ ಸಂಪನ್ನಿಲಯ ವಿ
ದೆನಿಸು । ವಾ ಮಹಾಯೋಧ್ಯೆಯನು ಸೇರಿಪೆ । ರಾಮಚಂದ್ರನೆ ಸಂಶ
ಯವನುಳಿದಿದನು ಕೇಳುವುದು ॥ ೪೩ ॥ ರವಿಗೆಣೆ ಯೆನಿಸುವಾ ವರವಿ
ಮಾ । ನವಿದಲಂಕೆಯೊಳದನುತಂದಿರು । ವವನುವೈಶ್ರವಣ ನನುಸೋಲಿ
ಸಿ ರಾವಣಾಸುರನು ॥ ಅವನಿಪತಿಕೇಳಾ ದಶಾಸ್ಯನ । ಭವನದೊಳಿಹು
ದು ಪುಷ್ಪಕ ವಿಮಾ । ನವದರೊಳು ಕೂಡುತ್ತ ಪೋಪು ದಯೋಧ್ಯೆಗಿ
ಲ್ಲಿಂದೆ ॥ ೪೪ ॥ ನಿನಗೆನನ್ನೊಳು ಕರುಣೆಯಿದ್ದರೆ । ಮನದೊಳೆನ್ನಯ
ಬಿನ್ನಪವನೀ । ನೆನೆದು ಸೀತಾ ಲಕ್ಷ್ಮಣರೊಡನೆ ಲಂಕೆಗೈತಂದು ॥ ಮ
ನವೊಲಿದು ನಾನಿಂದೆಸಗುವ । ಸ್ನಾನಗಳನು ಕೈಕೊಂಡು ನಾಳೆಯ । ದಿ
ನವೆಪೋಗಬಹುದು ದಿದರಿಂದಲೆ ಧನ್ಯನಾಗುವೆನು ॥ ೪೫ ॥ ಭಕುತನಾಗಿಹ
ನನ್ನೊಳುನಿನಗೆ । ಸುತನವುದಿರು ತಿದ್ದರೆನ್ನಯ । ಯುಕ್ತಿಗಳ ಲಾ
ಲಿಸುತಬಿಜಯಂಗೈದುನಾನೆಸಪ ॥ ಸಕಲ ಪೂಜೆಗಳನ್ನು ಕೈಕೊಂ । ಡ

ಖಿಳವಾನರರೊಡನೆ ಪೋಪುದು । ಸುಖದೊಳೆನ್ನುತ ನಮಿಸಿಪೇಳಿದ ನಾವಿ
ಭೀಷಣನು ॥ ೪೬ ॥ ಆನುಡಿಗಳನು ಕೇಳುತಂದಾ । ಭಾನುವಂಶಲಲಾ
ಮನೊಲಿದಾ । ವಾನರವರರು ನೋಡುತಿರೆ ಕುರಿತಾವಿಭೀಷಣನ ॥ ದಾನ
ವೋತ್ತಮ ಕೇಳೆಲೆಸಖನೆ । ನಾನುನಿನ್ನ ಸಹಾಯದಿಂದನು । ಮಾನವಿ
ಲ್ಲದೆ ಪೂಜಿಸಲ್ಪಟ್ಟಿರುವೆ ನನವರತ ॥ ೪೭ ॥ ಭರತನನುನಾಂ ನೋಡಬೇ
ಕೆಂ । ದಿರುವೆ ನಾತುರ ಗೊಂಡಿದೆಮನವು । ಭರತನಂದಾ ಚಿತ್ರಕೂಟ
ಗಿರೀಂದ್ರಕ್ಕೈತಂದು ॥ ಪುರದಮಾನವ ರೊಡನೆನನ್ನನು । ಪರಿಪರಿವಿಧದೆ
ಬೇಡಿದನುನೀ । ನರಸನಾಗು ನಗರಿಗೆಬಂದೆನು ತಧಿಕಭಕ್ತಿಯುಲಿ ॥ ೪೮ ॥
ಭರತನಾಡಿದ ಮಾತಿಗೊಪ್ಪದೆ । ಪುರಕೆನಾಸಾತನನು ಕಳುಹಿದೆ । ನಿರು
ವೆಹದಿನಾಲ್ಕಬುದವನದೊಳೆನುತ್ತ ಸಮ್ಮತಿಸಿ ॥ ಗುರುವಸಿಷ್ಠಾದಿಗಳ
ಚರಣ । ಕ್ಕೆರಗ ಬೇಕೆಂದಿರುವೆನು ಜನನಿ । ಯರನು ನೋಡಲಪೇಕ್ಷಪ
ಡುವೆನು ಕೇಳುನೀನಿವನು ॥ ೪೯ ॥ ಕೆಲಸವಾದ ಬಳಿಕೆನಗೀಪುರ । ದೊಳಿ
ರೆ ಮನವೊಪ್ಪುವುದೆ ನೀಂತರಿ । ಸೆಲೆ ವಿಭೀಷಣ ಭರದೆ ಪುಷ್ಪಕವರ ವಿ
ಮಾನವನು ॥ ತಳುವದೀಗಲೆ ಹೊರಡುವೆನು ಮನ । ದೊಳತಿ ಸಂತೋ
ಷವನುಪಡು ಖತಿ । ಗೊಳಲು ಬೇಡೆನು ತಂದುರಾಘವ ನೊಲಿಸಿಪೇಳಿದ
ನು ॥ ೫೦ ॥ ರಾಮನಾಡಿದ ನುಡಿಯಕೇಳುತ । ಕೈಮುಗಿದೆರಗಿ ವರವಿ
ಮಾನವ । ನಾಮನುಕುಲೋತ್ತಮನ ಬಳಿಗೆತರಿಸಿ ವಿಭೀಷಣನು ॥
ಪ್ರೇಮದಿಂದದನೊಪ್ಪಿಸಿ ನನಗೆ । ನೇಮವೇನೆನು ತೊಲಿದುನುಡಿದನು । ತಾ
ಮರಸ ನೇತ್ರಂಗೆತಾನತಿ ವಿನಯವಚನದಲಿ ॥ ೫೧ ॥ ಆನುಡಿಯ ನಾಲಿ
ಸುತ ಘನಸುಂ । ಮಾನದಿಂದಿಂತೆಂ ದರುಹಿದನು । ಮಾನವೋತ್ತಮ ನಾ
ವಿಭೀಷಣನಿ ಗತಿಹರ್ಷದಲಿ ॥ ಪ್ರಾಣಭೀತಿಯ ನುಳಿದುರಣದೊಳು ।
ವಾನರರು ಯುದ್ಧವನೆಸಗಿಹರು । ನೀನುಸಂತಸವಡಿಸಿ ವರನೆನುತ ತ್ರಿಳು
ಹಿವನೊಲಿಸಿ ॥ ೫೨ ॥ ಮನುಕುಲೋತ್ತಮ ನಾಡಿದವಚನ । ವನತಿಭ
ಕ್ತಿಯೊಳ್ಕೈದೆ ಕೇಳುತ । ದನುಜನಾಥನು ನಲಿದುಮನ್ನಿಸು ತಖಿಳಕಪಿಗ
ಳನು ॥ ಧನಕನಕಮಣಿ ವಸ್ತ್ರವರ ವಾ । ಹನಗಳನು ತಾನಿತ್ತು ರಘು
ನಂ । ದನನು ಮುದವಡೆವಂತೆ ಮನೆಯೊಳು ಪೂಜಿಸಿದನೊಲಿದು ॥ ೫೩ ॥
ದಾನವಾಧಿಪ ನರ್ಚಿಸಿದಖಿಳ । ವಾನರವರರ ನೀಕ್ಷಿಸುತ್ತಾ । ಮಾನವೇಂ
ದ್ರನು ಪುಷ್ಪಕವರ ವಿಮಾನವನು ಭರದೆ ॥ ಜಾನಕೀ ಸೌಮಿತ್ರಿಗಳೊಡ
ನೆ । ತಾನುಹತ್ತಿದ ನಾಬಳಿಕ ರವಿ । ಸೂನುವನು ಕುರಿತಿಂತುಪೇಳಿದ ನಧಿ
ಕಹರ್ಷದಲಿ ॥ ೫೪ ॥ ಸಖನಕಾರ್ಯವ ನೆಲ್ಲಮಾಡಿದೆ । ಸಖನೆ ಕೇಳ್ನೀನಿ

ಷ್ಟ ಬಂದಂ । ತಖಿಳಕಪಿಗಳ ಸಹಿತಕಿಷ್ಕಿಂಧಾ ಪುರಿಗೆಪೋಗು ॥ ಸಕಲಕಪಿಗಳ್ ನಿಮ್ಮೆಡೆಗಳಿಗೆ । ಸುಖದೆಪೋಗಿರಿ ನಿನ್ನರಾಜ್ಯದೊ । ಳಖಿಳ ಸಂಪದದಿಂದೆ ನೀಂವಸಿಸೆಲೆ ವಿಭೀಷಣನೆ ॥ ೫೫ ॥ ದಿವಿಜವಲ್ಲಭ ನಾದಿಯಾಗಿಹ । ದಿವಿಷದರು ನಿನ್ನನುತಿರಸ್ಕರಿ । ಸುವುದಕಿಲ್ಲವು ನಿನಗೆಲಂಕಾ ರಾಜ್ಯವೆಲ್ಲವನು ॥ ಅವನಿಮಂಡಲ ಬೊಳನಶಶಿಗಳ್ । ರುವತನಕ ಕೊಟ್ಟಿರುವೆನಿವನುಪೊ । ರೆವುದು ನಾಂಪೋಗುವೆ ನಯೋಧ್ಯೆ ಗೆನುತ್ತಪೇಳಿದನು ॥ ೫೬ ॥ ಆನುಡಿಗಳನು ಕೇಳುತಸಕಲ । ವಾನರರು ಕೈ ಮುಗಿದು ಭಕ್ತಿಯೊ । ಳಾನರೇಂದ್ರಂಗಿಂತು ಬಿನ್ನವಿಸಿದರು ತಲೆವಾಗಿ ॥ ನೀನುನಮ್ಮಗ ಳೆಲ್ಲರನಯೋ । ಧ್ಯಾನಗರಿ ಗೊಡಗೊಂಡು ಪೋಗುವು । ದಾನಗರದೊಳು ನಾವು ವಿಹರಿಸುವೆವು ವನಂಗಳಲಿ ॥ ೫೭ ॥ ಸತಿಸಹಿತ ಪಟ್ಟಾಭಿಷೇಕವ । ಹಿತವೆತಾಳುತ ಭೂತಲವನಾ । ಳುತಿಹನಿನ್ನನು ಕಂಡು ಕೌಸಲ್ಯೆಯು ಚರಣಕೆರಗಿ ॥ ಅತಿಹರುಷ ದಿಂದೆಮ್ಮೆಡೆಗಳಿಗೆ । ನುತಿಸುತ್ತೈದುವ ವೆಂದುನುಡಿದರು । ವಿತತಭಕ್ತಿಯೊಳಾರಘುವರಂಗಖಿಳ ವಾನರರು ॥ ೫೮ ॥ ಭರದೆ ಸುಗ್ರೀವಾದಿ ವಾನರ । ವರರು ಬಿನ್ನಹಗೈದ ನುಡಿಗಳ । ಪರಮ ಕರುಣಾತಿಶಯ ದಿಂದಾಲಿಸುತ ರಾಘವನು ॥ ತ್ವರಿತದೊಳು ನಿನ್ನೊಡ ನಯೋಧ್ಯಾ । ಪುರಿಗೆಪೋಗುವೆ ನೀವುಪೇಳದ । ತೆರದೊಳಾಗಬಹುದೆನು ತೆಂದನು ನೋಡುತೆಲ್ಲರನು ॥ ೫೯ ॥ ನಿಮ್ಮನೊಡಗೊಂಡೈದಿ ಯೆನ್ನಯ । ತಮ್ಮನನು ಸಂತವಿಸಿ ನಗರದೊ । ಳೆಮ್ಮಬಂಧುಗಳ ಸಹಿತಾನಂದವನು ಹೊಂದುವೆನು ॥ ನಿಮ್ಮ ಸಂತಸವೆನನಗಿಂದತಿ । ಸಮ್ಮತ ಮೆನಿಪುದೆಂದು ಪೇಳುತ । ಹೊಮ್ಮಿ ದೊಲವಿಂದ ಸುರಪತಿಗಿಂತೆಂದ ನಾರಾಮ ॥ ೬೦ ॥ ಎಲೆವಿಭೀಷಣ ನಿನ್ನ ಸಚಿವರು । ಗಳೊಡವೆರಸಿ ವಿಮಾನವನು ಹ । ತ್ತೆಲೆ ರವಿತನಯ ನಿನ್ನಖಿಳ ವಾನರರ ಸಹಿತೀಗ ॥ ತಳುವ ದೇರುವು ದೀಸ್ಥಳವನೆನೆ । ಬಳಿಕಹತ್ತಿದ ನಧಿಕಸಂಮದ । ದೊಳಸುರೇಂದ್ರನು ನಾಲ್ಕುಜನ ಮಂತ್ರಿಗಳನೊಡವೆರಸಿ ॥ ೬೧ ॥ ತರಣಿಸಂಭವ ನೊಲಿದಖಿಳವಾ । ನರರ ನೊಡಗೊಂಡೇರಿದ ನಧಿಕ । ಹರುಷದಿಂದಾ ಪುಷ್ಪಕವಿಮಾನವನು ಜವದಿಂದೆ । ತ್ವರಿತದಿಂದಲೆ ಸಕಲ ವಾನರ । ವರರೊಲಿದೊಲಿದು ಕುಳಿತುಕೊಂಡರು । ಧರಣಿಪತಿ ರಾಘವನ ಪೊಗಳುತ್ತಧಿಕ ಭಕ್ತಿಯುಲಿ ॥ ೬೨ ॥ ವರವಿಮಾನದೊಳಖಿಳ ಕಪಿಗಳು । ಹರುಷದಿಂದಲೆ ಕುಳಿತು ಕೊಳ್ಳು । ತ್ತಿರಲು ರಘುವರ ನಾಕುಬೇರನ ತೆರದೆರಂಜಿಸುತ ॥ ಭರದೊಳಂಬರ ಮಾರ್ಗದೊಳು ನೀಂ । ತೆರಳ

ಯೋಧ್ಯಾ ನಗರಿಗೆಂದೆನು । ತಿರದೆ ತಾನಾವ್ಯೋಮ ಯಾನಕೆ ಕೊಟ್ಟನ
ಪ್ಪಣೆಯ । ೬೩ ॥ ಪಡೆದುರಾಘವ ನಾಜ್ಞೆಯನು ತಾ । ನೊಡನೆಪ್ರಷ್ಕ
ರ ಮಾರ್ಗ ಕೈದಿತು । ಪೊಡವಿಯ ನುಳಿದು ಪರವಿಮಾನವು ಬಹುಳಶೀ
ಘ್ರದಲಿ ॥ ನಡೆದುದಂಬರ ಪಥದೊಳನಿಲನ । ಹೊಡೆತದಿಂದೋಡುವ ಮು
ಗಿಲ್ಗಳ । ಪಡೆಯ ಪೋಲುತ್ತರದ ದಿಶೆಗಂದನಿಲ ವೇಗದಲಿ ॥ ೬೪ ॥ ಧರ
ಣಿಮಂಡಲ ವನೊಲಿದೀಕ್ಷಿಸು । ತಿರದೆ ಸೀತೆಯ ನಾರಘುವರನು । ಕುರಿ
ತುಪೇಳಿದ ನೆಲೆಮಹೀಸುತೆ ನೋಡು ಲಂಕೆಯನು ॥ ಮೆರೆವುದೀಪುರ ವೀ
ತ್ರಿಕೂಟ ಶಿ । ಖರದೊಳಿದನಾ ವಿಶ್ವಕರ್ಮನು । ವಿರಚಿಸಿರುವ ನಧಿಕಚ
ಮತ್ಕೃತಿಯಿಂದೆ ಪೂರ್ವದಲಿ ॥ ೬೫ ॥ ಕ್ಷೋಣಿಸುತೆ ರಣರಂಗವಿಲ್ಲಿ
ಯೆ । ಕಾಣಿಸುತ್ತಿದೆ ನೋಡಳಿದಿಹರು । ಪ್ರಾಣಗಳನುಳಿದೆಲ್ಲ ರಕ್ಕಸರೆ
ಮ್ಮಪೆಟ್ಟಿನಲಿ ॥ ಕಾಣುತಿದೆ ರಕ್ತಾಮಿಷಗಳೀ । ತಾಣದೊಳುನೆರೆನೆರೆದು
ನನ್ನಯ । ಬಾಣಗಳು ವಧಿಸಿದವು ನಿನ್ನನಿಮಿತ್ತದನುಜರನು ॥ ೬೬ ॥
ಇಲ್ಲಿರಾವಣನನ್ನು ವಧಿಸಿದೆ । ನಿಲ್ಲಿಕೊಂದೆನು ಕುಂಭಕರ್ಣನ । ನಿಲ್ಲಿ
ವಧಿಸಿದ ನಿಂದ್ರಜಿತುವನು ಮುಳಿದು ಲಕ್ಷ್ಮಣನು ॥ ಇಲ್ಲಿವಿಕಟನಕೊಂ
ದನಂಗದ । ನಿಲ್ಲಿನೀಲನು ಸಂಹರಿಸಿದನು । ಕಲ್ಲದೆಯ ಕಟ್ಟಾಳುವೆಂದೆ
ನಿಪ ಪ್ರಹಸ್ತನನು ॥ ೬೭ ॥ ಹನುಮನಿಂದೆ ಮಡಿದನು ಧೂಮ್ರಾ ।
ಕ್ಷನು ವಿರೂಪಾಕ್ಷನು ಮಹಾಪಾ । ರ್ಶ್ವನು ಮಹೋದರ ನಾಯಕಂ
ಪನನಾದಿದಾನವರು ॥ ತನುವನುಳಿದಿಹರಿಲ್ಲಿ ದಶಕಂ । ಠನ ಮರಣವನು
ಕಂಡು ಸಾವಿರ । ಜನ ಸಪತ್ನಿಯರೊಡನೆ ಮಂಡೋದರಿವಿಲಪಿಸಿದಳು ॥
॥ ೬೮ ॥ ಇದುವೆಸಾಗರತೀರ್ಥ ವೀತಾ । ಣದೊಳುಲಂಘಿಸಿ ಜಲಧಿಯನು
ವಸಿ । ಸಿವೆವು ನಾವಾರಾತ್ರಿ ಕೇಳೆಲೆಸೀತೆ ಪಡೆಯೊಡನೆ ॥ ಉದಧಿಯೊಳು
ಸೇತುವೆಯನು ವಿರಚಿ । ಸಿದೆನು ನಿನ್ನನಿಮಿತ್ತವಾಗಿಯೆ । ಮುದದೊ
ಳೀಕ್ಷಿಸು ದಕ್ಷಿಣಾಬ್ಧಿಯ ತೀರವನುನೀನು ॥ ೬೯ ॥ ಹನುಮನಾಯಾಸ
ಪರಿಹಾರ । ಕ್ಕೆನುತ ಮೈನಾಕಗಿರಿ ಮುನ್ನೀ । ವನಧಿ ಮಧ್ಯದೊಳು
ಪಚರಿಸಿದುದು ನಿಂದುಮೇಲುಗಡೆ ॥ ವನಿತೆ ಸೀನಾಗಿರಿಯನೀಕ್ಷಿಸು । ವ
ನಧಿಯುದಕವು ಕಾಣಿಸುತ್ತಿದೆ । ವಿನುತಿಪೆತ್ತಿದೆ ಸೇತುಬಂಧುವೆನುತ್ತಿದು
ಮೂಜಗದಿ ॥ ೭೦ ॥ ಸೀತೆನೀಂ ಮನವೊಲಿದು ಕೇಳೀ । ಸೇತು ಪರಮ
ಪವಿತ್ರಮೆನಿಪುದು । ಪಾತಕಂಗಳನೆಲ್ಲ ನಾಶನಮಾಳ್ಪುದನುದಿನವು । ಭೂ
ತಳದೊಳಿದು ವಿನುತಿವೆತ್ತಿಹು । ದೀತಟದೊಳಾ ಶಂಕರನು ಸಂ । ಪ್ರೀ
ತಿಯಿಂದೆನಗೆ ಪ್ರಸಾದವನಿತ್ತನಾದಿನದಿ ॥ ೭೧ ॥ ಭರದೊಳೈತಂದೆನ್ನನಿಲ್ಲಿ

ಯೆ । ಶರಣುಹೊಂದಿದನೀ ವಿಭೀಷಣ । ಪೊರೆವುದನುತ ವಿಚಿತ್ರವನಗಳ ನಾಂತು ಸಂತತವು ॥ ಮೆರೆವ ಕಿಷ್ಕಿಂಧಾಪುರವರವಿ । ದರೊಳದೋರ್ಕಾಣುತಿದೆ ನೋಡಿದ । ಕರಸನಾಗಿಹ ಸೀರವಿಸುತನು ತಾಳ್ದುಪಟ್ಟವನು ॥ ೨೦ ॥ ಮಾನಿನೀಮಣಿ ಕೇಳು ವಾಲಿಯು । ನೀನಗರದಹೊರಗಡೆಯಲ್ಲಿಯೆ। ನಾನು ಕೊಂದೆನು ತೀಕ್ಷ್ಣಶರವೊಂದರಲಿಘಾತಿಸುತ ॥ ನೀನಿದೆಲ್ಲವನರಿವುದೆಂದಾ । ಭಾನುವಂಶಲಲಾಮ ನುಡಿಯು । ಲ್ಕಾ ನೆಲದಣುಗಿ ಬಿನ್ನವಿಸಿದಳು ನಮಿಸಿರಾಮನಿಗೆ ॥ ೨೩ ॥ ಅರಸಕೇಳ್ಕಪಿಕಾಂತೆಯರು ಮೊಡ। ವೆರಸಿಬರ್ಕೆಮ ನಮ್ಮಯೋಧ್ಯಾ । ಪುರಿಗೆ ನಿಮ್ಮಯ ರಾಜ್ಯಪಟ್ಟದ ಮಂಜುಳೋತ್ಸವವ ॥ ಪರಮಸಂಮುದದಿಂದೆ ನೋಳ್ಕಮ । ಸಿರುಕಿಸೆನ್ನಯ ಬಿನ್ನಪವಸಾ । ದರದೊಳೆನುತೆರಗಲ್ಕೆ ರಾಘವನಿನಜಗಿಂತೆಂದ ॥ ೨೪ ॥ ವಾನರೇಂದ್ರನೆ ಕೇಳುಕಿಷ್ಕಿಂ । ಧಾನಗರದೊಳು ವಾಸಮಾಡುವ । ವಾನರರಪತ್ನಿಯರು ಬರುವಂತೆನ್ನಪಟ್ಟಣಕೆ ॥ ನೀನುತಾರೆಗೆ ತಿಳುಹಿಸೆಂದನ । ಲಾ ನುಡಿಯನಾಲಿಸುತ ಬಂದನು । ಮಾನಿಸದೆ ಸುಗ್ರೀವನಿಂತೆಂದರುಹಿದನು ಸತಿಗೆ ॥ ೨೫ ॥ ಸತಿಯೆಕೇಳು ಸಮಸ್ತಕಪಿಗಳ । ಸತಿಯರನು ನೀಂ ಬರಿಸಿಕೊಂಡಾ । ಕ್ಷಿತಿಸುತೆಯೊಡನಯೋಧ್ಯೆಗೈತರಬೇಕೆನುತರುಹಲು । ಪತಿಯಮಾತನು ಕೇಳ್ದಖಿಳಕಪಿ । ಸತಿಯರವೆರಸಿ ಪುಷ್ಪಕವಬಳಿ । ಗತಿಭರದೊಳೈತಂದೆರಗಿದಳು ತಾರೆರಾಮನಿಗೆ ॥ ೨೬ ॥ ವೀರರಾಘವನಪ್ಪಣೆಯ ನಾಂ । ತಾ ರವಿಸುತನು ಸಂತಸದೊಳಂ । ದೇರಲು ಪರವಿಮಾನವನು ಕಪಿಪತ್ನಿಯರಸಹಿತ ॥ ಧಾರಿಣೀಸುತೆ ವೆರಸಿ ಪೋಗುತ । ದಾರಿಯೊಳಗಾ ಋಷ್ಯಮೂಕವ । ನಾ ರಘುವರನು ತೋರಿದನು ಕೈವೆರಲಸನ್ನೆಯಲಿ ॥೨೭॥ ಇಲ್ಲಿನಜನಿಂದಾಯ್ತು ಸಖತನ । ಮಿಲ್ಲಿ ವಾಲಿಯನೊಂದುಶರದಿಂ । ಕೊಲ್ಲುವೆನೆನುತ ಭಾಷೆಕೊಟ್ಟೆನು ಮಾಡಿಶಪಥವನು ॥ ಅಲ್ಲಿಪಂಪೆಯು ಕಾಣುತಿದೆ ನೋ । ಡಲ್ಲಿ ನಿನ್ನ ನಗಲಿದೆ ನಗೆಮೊಗ । ತಲ್ಲಣಿಸಿದುದು ಸೀತೆನಿನ್ನಯ ವಿರಹತಾಪದಲಿ ॥ ೨೮ ॥ ಅಲ್ಲಿಕಂಡೆನು ಶಬರಿಯನು ನಾ । ನಲ್ಲಿವಧಿಸಿದೆ ನಾಕಬಂಧನ । ನಲ್ಲಿ ರಾವಣನಿಂದೆ ಸತ್ತ ಜಟಾಯುವನು ಕಂಡೆ ॥ ಅಲ್ಲಿ ಖರದೂಷಣರ ವಧಿಸಿದೆ । ನಲ್ಲಿ ನಾನಾತ್ರಿಶಿರನಸಿರಿದೆ । ನಲ್ಲಿ ಕೆಡಹಿದೆನು ಪದಿನಾಲ್ಸಾಸಿರದದೈತ್ಯರನು ॥ ॥ ೨೯ ॥ ಇದೆಜನಸ್ಥಾನವೆಲೆ ಜಾನಕಿ । ಮುದದೊಳಿದ ನೀಕ್ಷಿಸುವುದಲ್ಲಿರು । ವುವದೆ ನಮ್ಮಯ ಪರ್ಣಶಾಲೆಯು ನಮಗೆಕಾಣುತಿದೆ ॥ ಪೆದರಿಸುತ ದಶಕಂಠನಂದೀ । ಸದನದೊಳ ಗಪಹರಿಸಿನಿನ್ನ ರ । ಥದೊಳಗಕೂಡಿಸಿ

ಕೊಂಡು ಪೋದನು ಗಗನಮಾರ್ಗದಲಿ ‖ ೮೦ ‖ ಇದುವೆಗೋದಾವರಿಯು
ಕಾಣಿಸು । ತಿದೆ ಅಗಸ್ತ್ಯಮುನೀಂದ್ರನಾಶ್ರಮ । ವದೆ ಸುತೀಕ್ಷ್ಣಮು
ನಿವರನಾಶ್ರಮ ವಿಲ್ಲಿತೋರುತಿದೆ ‖ ಅದುವೆ ಶರಭಂಗಾಶ್ರಮವು ನೋ ।
ಡದರೆಡೆಗೆ ಬಂದಿದ್ದನಂದಾ । ತ್ರಿದಶಪತಿ ಸಂಭಾಷಿಸಲು ಶರಭಂಗಮುನಿ
ಪನೊಳು ‖ ೮೧ ‖ ಅದೆವಿರಾಧನುಸತ್ತ ಕಾನನ । ವಿದಿರೊಳು ವಿರಾಜಿ
ಸುತಿವೆ ತಪೋ । ನಿಧಿಗಳಾಶ್ರಮಗಳದೆ ಅತ್ರಿಮುನೀಂದ್ರನಾಶ್ರಮವು ‖
ಇದರೊಳಂದನುಸೂಯೆ ನಿಸಗಾ । ಹದಿಬದೆಯರಾ ಧರ್ಮವೆನುಪೇ । ಳಿ
ದಳು ನೋಡಾ ಚಿತ್ರಕೂಟಗಿರೀಂದ್ರವನು ನೀನು ‖ ೮೨ ‖ ಹಿಂದೆಭರ
ತನು ಚಿತ್ರಕೂಟಕೆ । ಬಂದು ನನ್ನನಯೋಧ್ಯೆಗೈತಹು । ದೆಂದುಬೇ
ಡಿದನರಸನಾಗೆನುತೆನ್ನ ಪದಕೆರಗಿ ‖ ಮುಂದೆ ಯಮುನಾನದಿಯು ಕಾ
ಣ್ಬುದು । ಸುಂದರಾಂಗಿಯೆ ನೀನುನೋಡಾ । ನಂದವನು ತಾಳ್ದಾ ಭರ
ದ್ವಾಜಾಶ್ರಮವನಲ್ಲಿ ‖ ೮೩ ‖ ಮುಂಗಡೆಯೊಳಗೆ ಕಾಣಿಸುತ್ತಿದೆ । ಗಂ
ಗೆಯದೆನೋಡತ್ತ ನೀನಾ । ಶೃಂಗಿಬೇರಪುರವನು ಗುಹನೈತಂದುಪಚ
ರಿಸಿದ ‖ ಅಂಗನಾಮಣಿಯೆ ಸರಯೂನದಿ । ಕಂಗೊಳಿಸುತಿಹುದಲ್ಲಿ ನ
ಮ್ಮಯ । ಕಂಗಳಗದೋ ಕಾಣುತಿದೆನೀಂ ನೋಡಯೋಧ್ಯೆಯನು ‖
‖ ೮೪ ‖ ವಿನುತ ಪುಷ್ಪಪರಿಮಳದಿಂದನು । ದಿನವುರಂಜಿಸಿ ಕಾಣಿಸುತ್ತಿ
ಹ । ವನಗಳನು ತಾಳ್ದಿಸೆವಯೋಧ್ಯಾಪುರವರಕೆ ನೀನು ‖ ಬನವನುಳಿ
ದಿಂದೆನ್ನೊಡವೆರಸಿ । ವಿನಯದಿಬರುತ ಮತ್ತೆನಮಿಸೆಂ । ದೆನುತ ಪೇಳಿ
ದನಾ ಮಹೀಸುತೆಗಾ ರಘೂದ್ವಹನು ‖ ೮೫ ‖ ಇಂತೆರುಹುತಾ ಜನಕಸು
ತೆಗ । ತ್ಯಂತ ಹರ್ಷದೊಳಂದು ರಾಘವ । ನಂತರಿಕ್ಷದೊಳಾ ಭರದ್ವಾ
ಜಾಶ್ರಮದಬಳಿಗೆ ‖ ಚಿಂತೆಯುಳಿದೈತರಲು ವನವಾ । ಸಾಂತಮೆನಿಸಿದ
ಪಂಚಮಿಯು ಬಲು । ಸಂತಸವನಾಗಿಸುತಿರದೆ ತಲೆದೋರ್ದುದಷ್ಟ
ರೊಳು ‖ ೮೬ ‖ ಸತಿಸಹೋದರರೊಡನೆ ಸೈನ್ಯಸ । ಹಿತ ವಿಮಾನವ
ನಿಳಿದು ರಾಘವ । ನತಿಭಕುತಿಯಿಂದಾ ಭರದ್ವಾಜಮುನಿಪನಪದಕೆ ‖
ಸತಿಸಹಿತ ತಾಂ ನಮಿಸಿ ತನ್ನ ಚ । ರಿತೆಯ ನಾತಂಗರುಹಿ ಪಡೆದನು ।
ಹಿತದೆ ಮುನಿವರ ನಿತ್ತಸತ್ಕೃತಿ ಗಳನು ಹರ್ಷದಲಿ ‖ ೮೭ ‖ ತಳೆದು ರಾ
ಘವ ನಾಮುನೀಶ್ವರ । ನೊಲಿದು ಕೊಟ್ಟ ಸುಭೋಜನವನು ಸ । ಕಲ
ಜನಸಹಿತ ಸೌಖ್ಯದಿಂದಾ ಪಂಚಮಿ ದಿನದೊಳು ‖ ಬಳಿಕಮುನಿವರ
ನಿಂದೆರಡು ವರ । ಗಳನು ಪಡೆದಾಲೋಚಿಸುತ ಮನ । ದೊಳಗನಿಲ
ಸಂಭವನ ಕರೆದಿಂತೆಂದು ಪೇಳಿದನು ‖ ೮೮ ‖ ಮರುತನಣುಗನೆ ಕೇಳು

ನೀನಿಂ । ದಿರದೆ ನಂದಿಗ್ರಾಮವನು ಸಾ । ರ್ದರಗಿ ಭರತಂ ಗರುಹುವು
ದು ನಾನಿತ್ತ ಲಿರ್ಪುದನು ॥ ಭರತನಿಗೆ ನೀನೆನ್ನ ಕುಶಲವ । ನರುಹುತಾ
ತನ ಚಿತ್ತದ ಪರಿಯು । ನರಿತು ಬಹುದೆಂದೆನುತ ತಮ್ಮನ ಬಳಿಗೆ ಕಳು
ಹಿದನು ॥ ೪೯ ॥ ಶಿರದೊಳಾಂತು ರಘುವರನಾಜ್ಞೆಯ । ನೆರಗಿ ಕೇಸರಿ
ತನಯನಂವತಿ । ಭರದೊಳಂಬರ ಪಥದಿನಂದಿ ಗ್ರಾಮಕೈತಂದು ॥ ಪರ
ಜಟಾ ವಲ್ಕಲಗಳನು ತಾ । ಳ್ದಿರಿವ ಪಿಚ್ಛಿಗೆ ಸುತ್ತುತಿರುವಾ । ಭರತ
ನನು ಕಂಡೆರಗಿ ಪೇಳ್ದನು ರಾಮನಾಗಮವ ॥ ೫೦ ॥ ನಿರಶನವ್ರತ ವ
ನುತಳೆದು ಸೋ । ದರನೊಡನೆ ರಾಮಾ ಗಮನವನು । ಪರಿಕಿಸುತವ
ಧಿಯುಂತವನು ಕಂಡಗ್ನಿಕುಂಡವನು ॥ ಉರಿಸಿ ಪಿಚ್ಛಿಗೆ ಮೂರು ಸುತ್ತ
ನು । ತಿರುಗಿಬೀಳುವ ಯೋಚನೆಯೊಳಿಹ । ಭರತನಿಗೆ ರಾಮನಕುಶಲವ
ನು ಪೇಳ್ದನಾ ಹನುಮ ॥ ೫೧ ॥ ತಿಳಿದು ರಾಮನ ಸಂಗತಿಗಳನ । ನಿಲ
ಸುತನ ಮುಖ ದಿಂದೆಸಂತಸ । ದಳೆದುಮನ್ನಿಸಿ ಭರತನಾಪವ ಮಾನ
ಸೂನುವನು ॥ ತಲೆದಡವಿ ತಕ್ಕೈಸಿ ತನ್ನಯ । ಬಳಿಯೊಳುತ್ತಮ ಪೀಠ
ದೊಳು ತಾ । ನೊಲಿದು ಕೂಡಿಸಿ ಪೇಳಿದನು ಶತ್ರುಘ್ನನಿಗೆಕೂಡೆ ॥ ೫೨ ॥
ಭರದೆ ಪುರವರವೆಲ್ಲವನು ಸಿಂ । ಗರಿಸಬೇಕೆಂದೆನುತ ತಮ್ಮನಿ । ಗರುಹಿ
ಶೀಘ್ರದೊಳಾಂಜನೇಯನ ಸಹಿತಹೊರಟಂಟು ॥ ಭರತನೊಲಿದೈ ತಂದ
ನಾ ರಘು । ವರನ ಸನಿಹಕೆಭಕ್ತಿಭರದಿಂ । ದಿರದೆ ಪಾದುಕೆಗಳನು ಧರಿ
ಸುತ ತನ್ನತಲೆಯೊಳಗೆ ॥ ೫೩ ॥ ಮರುತನಣುಗನ ಕೂಡೆಪರಮಾ ।
ದರದೆ ನಂದಿಗ್ರಾಮವನುಳಿದು । ಭರತನಾ ದಕ್ಷಿಣದಮಾರ್ಗದೊಳೈತ
ರುತಿದಿರಲಿ ॥ ವರವಿಮಾನದೊಳಖಿಳ ಕಪಿಪೀ । ರರೊಡನೆಕುಳಿತುಕೊಂ
ಡು ಸತಿಸೋ । ದರರಸಹಿತೈತರುವ ರಾಮನ ನೀಕ್ಷಿಸಿದನಲ್ಲಿ ॥ ೫೪ ॥
ಬಡನೆ ಕರಗಳಜೋಡಿಸುತ ತ । ನ್ನೊಡಲನೀಡಿ ನಮಸ್ಕರಿಸಿದನು । ಕ
ಡುಬಕುತಿಯಿಂ ಭರತನಣ್ಣನ ಚರಣಪಂಕಜಕೆ ॥ ಪೊಡವಿಗಿಳಿವಂತಾ
ವಿಮಾನಕೆ । ನುಡಿದು ರಾಮನು ತಮ್ಮನಕರವ । ಪಿಡಿದು ಹತ್ತಿಸಿಕೊಂ
ಡನು ವಿಮಾನಕತಿಹರ್ಷದಲಿ ॥ ೫೫ ॥ ಪರಮ ಭಕ್ತಿಯನಾಂತು ಪ
ತ್ತ । ಭರತನಣ್ಣನಿಗೆರಗಿ ಸೀತೆಯ । ಚರಣಪಂಕಜಕೆರಗಿ ಸೌಮಿತ್ರಿ
ಯನು ಬಿಗಿದಪ್ಪಿ ॥ ತರಣಿಸಂಭವ ವರವಿಭೀಷಣ । ರಿರುವರನುಸಂತೈಸಿ
ಮಿಕ್ಕನಿ । ಬರನುಸಂತವಿಸಿದನು ಸವಿನಯಮಧುರ ವಚನದಲಿ ॥ ೫೬ ॥
ಅಲಿಸೈತಂದೆ ರಘುನಾಥನೆ । ತಾಳನಿನ್ನಾಜ್ಞೆಯ ನವನಿಯನು । ಪಾಲಿಸಿ
ದೆ ಪದಿನಾಲ್ಕುವರ್ಷಗಳಿಂದ ಮಿದುವರೆಗೆ ॥ ಹೇಳಲಾರೆನು ನನ್ನಸುಕ್ಖ

ತದ । ಲೀಲೆಯನು ಧನ್ಯನೆನಿಸಿದೆ ಜನ । ಪಾಲಕನೆ ಕಾಣುತ್ತ ನಿನ್ನಯ ಪಾದಪದ್ಮಗಳ ॥ ೯೭ ॥ ನೀನುಪಾಲಿಸು ರಾಜ್ಯವೆಲ್ಲವ । ನಾನುಭೂಮಿಯನಾಳಲಾರೆನು । ಮಾನವೇಂದ್ರನೆ ನನ್ನಬಿನ್ನಹವಾಲಿಸೆಂದೆನಲು ॥ ಆನುಡಿಗಳನು ಕೇಳ್ದು ಬಹುಸುಂ । ಮಾನದಿಂದಲೆ ಬಂದನು ವರವಿ । ಮಾನದೊಳು ಕೂಡುತ್ತ ನಂದಿಗ್ರಾಮಕಲ್ಲಿಂದ ॥ ೯೮ ॥ ಬಂದುನಂದಿಗ್ರಾಮಕಾ ರಘು । ನಂದನನು ಪುಷ್ಪಕವಿಮಾನವ । ನಂದಿೞದು ನೀನಾ ಕುಬೇರನಬಳಿಗೆ ಪೋಗೆನುತ ॥ ಚಂದದಿಂದದ ಕಪ್ಪಣೆಯನಿ । ತ್ತಂದು ಕಳುಹಿಸಿ ಬಳಿಕತಾನ್ಯೆ । ತಂದೆರಗಿದನು ಮುನಿವಸಿಷ್ಠನ ಪಾದಪಂಕಜಕೆ ॥ ೯೯ ॥ ಜನನಿಯರ್ಕಳಿಗೆಲ್ಲ ನಮಿಸುತ । ವಿನಯದಿಂದೆ ವಸಿಷ್ಠನಸಹಿತ । ಮನುಕುಲೋತ್ತಮ ನುತ್ತಮಾಸನದೊಳ್ಕುಳಿತುಕೊಂಡು ॥ ತನಗೆ ಕೈಮುಗಿದೆರಗುವ ಜನರ । ಮನಕೆ ಸಂತೋಷವನುಮಾಡುತ । ವಿನಯದಿಂದಲೆ ಕೇಳ್ದನೆಲ್ಲರ ಕುಶಲವನುಕೂಡೆ ॥ ೧೦೦ ॥

ಇಂತು ಇಪ್ಪತ್ತೊಂಭತ್ತನೆಯ ಅಧ್ಯಾಯ ಸಂಪೂರ್ಣವು.

ಪದ್ಯಗಳು ೧೫೩೯.

ಮೂವತ್ತನೆಯ ಅಧ್ಯಾಯ.

ಸೂಚನೆ ॥ ಪತಿಯೊಡನೆ ಪಟ್ಟಾಭಿಷೇಕವ ।
ನತಿಹರುಷದಿಂದಾಂತು ಧರಣೀ ।
ಸುತೆ ವಿತತಸೌಖ್ಯಂಗಳನು ಹೊಂದಿದಳಯೋಧ್ಯೆಯಲಿ ॥

ಶಿರದೊಳಂಜಲಿ ಬದ್ಧನಾಗುತ । ಲೆರಗಿ ಸತ್ಯಪರಾಕ್ರಮಿಯೆನಿಸಿ । ಧರೆಯೊಳುನ್ನತಿ ವೆತ್ತರಾಮನ ಚರಣಪಂಕಜಕೆ ॥ ಭರತನೆಂದೆನು ತಂದೆಕೇಳೀ । ಧರೆಯೊಡೆತನವ ನಂದೆನಗೆನೀಂ । ಕರುಣೆ ಸಿತ್ತಂತೀವೆನುನಿನಗೆ ಮತ್ತೆ ನಾನಿಂದು ॥ ೧ ॥ ಬಲಿತು ಕೊಬ್ಬಿದ ಯೆತ್ತಿನ ಹೆಗಲಿ । ನೊಳರಿಪಾಭಾರವನು ಮೇದಿನಿ । ತಲದೊಳೆಳಗರು ತಾನು ಪೊರಲಾರದ ಪೊಲಾನಿಂದು ॥ ತಳೆಯಲಾರೆನು ರಾಜ್ಯಭಾರವ । ನೆಲೆಮಹಾತ್ಮನೆ ನೀನು ಕೈಕೊಂ । ಡೊಲಿದು ಪಾಲಿಸು ತಳೆದುಪಟ್ಟವ ನೀಮಹೀತಳವ ॥ ೨ ॥ ತುರಗಗಾರ್ದಭ ಗಳಿಗೆ ತಾನೆಂ । ತಿರುವುದಂತರ ವವನಿಯೊಳಗಾ । ಗರು

ಡವಾಯುಸ ಗಳಿಗೆ ತಾನೆಂತಿರುವು ದಂತರವು ॥ ಪರಿಕಿಸಲು ನಿನಗೆನಗೆ
ತೋರು । ತ್ತಿರುವು ನಾತೆರ ದಂತರವುರಘು । ವರನೆನಾನನು ಸರಿಸಲಾರೆ
ನು ನಿನ್ನ ಮಾರ್ಗವನು ॥ ೩ ॥ ವಾರಿವೇಗದೆ ಭಿನ್ನವಾಗುತ । ತೋ
ರುವಾಸೇತುವೆಯು ತೆರದಿಂ । ದೀರಸೆಯೊಳತಿ ಕಷ್ಟ ಮಾಗಿಹುದೆನಗೆ
ದೊರೆತನವು ॥ ವೀರರಾಘವ ಕೇಳು ರಾಜ್ಯದ । ಭಾರವನು ನೀಂ ವಹಿ
ಸಿಪಾಲಿಸು । ಬೇರೆನುಡಿಯುದಿರೆಂದು ವಿಜ್ಞಾಪಿಸಿದ ನಾಭರತ ॥ ೪ ॥ ನಿನ್ನ
ಪ್ರೊಲು ಭೂಮಿಯುನು ಪೂರೆವುದ । ಕನ್ನಕೈಯೊಳ ಗಾಗುವದೆ ಕೇ ।
ಳಣ್ಣ ಸರ್ವ ವಿಧದೊಳೆನಗೆ ಬೇಡರಸುತನವಿನ್ನು ॥ ಸನ್ನ ಬಿನ್ನಪ
ವನವ ಧರಿಸುವು । ದಿನ್ನು ನಿನ್ನಯು ಚರಣ ಸೇವೆಗ । ಳನ್ನು ವಿರಚಿಸಿ
ಕೊಂಡಿರುವೆ ನೆಂದೆಂದನಾಭರತ ॥ ೫ ॥ ಧರಣಿಮಂಡಲ ಮಿರ್ಪವರೆಗಂ ।
ತರಣಿಶಶಿಧರ ರಿರ್ಪವರೆಗಂ । ಗಿರಿನದಿನವಗ ಳಿರ್ಪವರೆಗಂ ಮೇದಿನೀತ
ಲಕೆ ॥ ಅರಸನಾಗುತ ನೀನು ಪಾಲಿಸು । ಪುರದೊಳಗೆ ಪಟ್ಟಾಭಿಷೇಕವ ।
ನುರುತರದ ವೈಭವದೊಳಾಂತತಿ ಶಯುದಹರ್ಷದಲಿ ॥ ೬ ॥ ನನ್ನ ತಾಯಿ
ಗೆ ಕೀರ್ತಿ ಬಂದುದು । ನಿನ್ನ ಧೀನವು ರಾಜ್ಯವೆಲ್ಲವು । ಮುನ್ನ ನೀಂ ನು
ಡಿದಂತೆ ದೊರೆತನ ವನ್ನು ಕೈಕೊಂಡು ॥ ನಿನ್ನ ಸೇವಕ ನಾಗಿರುತ್ತಿಹ । ನ
ನ್ನನುದ್ಧರಿ ಸೆಂದಡಿಗೆರಗಿ । ಬಿನ್ನವಿಸಿದನು ಭರತನಣ್ಣನಿಗತಿ ವಿನಯು
ದಿಂದ ॥ ೭ ॥ ಭರತನಾಡಿದ ನುಡಿಗಳೆಲ್ಲವ । ನಿರದೆರಾಘವ ನಾಲಿಸುತಧಿಕ ।
ಹರುಷದಿಂದಾ ಭರತನನು ತಕ್ಕೈಸಿ ತಲೆದಡವಿ ॥ ಅರಸನಾಗುವೆ ನೆಂದುತ
ಮ್ಮನಿ । ಗರುಹಿ ಸಮ್ಮತಿ ಪಡಿಸುತಾಗಳೆ । ಮೆರೆವ ಭದ್ರಾಸನದೊಳು
ಕುಳಿತುಕೊಂಡ ನೊಲವಿಂದೆ ॥ ೮ ॥ ಭರತನಿಂಗಿತವನ್ನು ತಿಳಿದತಿ ।
ಹರುಷವನು ತಾನಾಂತು ನಾಯಿಂ । ದರನು ಕರೆಯಿಸಿ ತನ್ನೆಡೆಗೆ ಶತ್ರು
ಘ್ನನೊಲಿಸುತ್ತ ॥ ಅರಿತತಿಚಮತ್ಕಾರ ದಿಂದಲೆ । ಧರಣಿಪತಿ ರಾಮನಿಗೆ
ಭದ್ರಾ । ಕರಣವನು ಮಾಡುವುದೆನುತ ಪೇಳದನುಶೀಘ್ರದಲಿ ॥ ೯ ॥
ಅತಿವಿಶಾರದರೆನುತ ಜನಸಂ । ನುತಿವಡೆದ ನಾಯಿಂದರೈತಂ । ದತಿಭರದೆ
ಶತ್ರುಘ್ನನಾಜ್ಞೆಯುನಾಲಿಸುತ ಕೂಡೆ ॥ ವಿತತಸಾಖ್ಯವ ನಾಗಿಸುತ ಬ
ಹು । ಹಿತವಡೆಂ ಬಂದದೊಳು ರಾಜ ವಿ । ಹಿತಸುಪದ್ಧತಿಯಂತೆ ಭದ್ರಾ
ಕರಣವೆಸಗಿದರು ॥ ೧೦ ॥ ಜಡೆಗಳೆಲ್ಲವನಾ ರಘುವರನು । ಬಿಡಿಸಿ
ಶೋಧಿಸಿ ಕೊಳ್ಳುತಾಗಳೆ । ಸಡಗರದೊಳಭ್ಯಂಜನ ಸ್ನಾನವನು ತಾನೆ
ಸಗಿ ॥ ಕಡುಬೆಲೆಯು ನಾಂತೊಪ್ಪಿರಂಜಿಸು । ವುಡಿಗೆ ತೊಡಿಗೆಗಳೆಲ್ಲವ
ನು ತಾ । ಳ್ದಿಡಿಗಡಿಗೆ ಕಂಗೊಳಿಸಿದನು ಪೂಮಾಲೆಗಳನಾಂತು ॥ ೧೧ ॥

ಭರತ ಶತ್ರುಘ್ನರುಗಳಿಬ್ಬರು । ಶಿರದೊಳೆಣ್ಣೆಯನಿರಿಸಿ ಕೊಳ್ಳುತ । ಘ
ರದೊಳೊಲಿದಭ್ಯಂಜನ ಸ್ನಾನವನುಮಾಡಿದರು ॥ ತ್ವರಿತಗೊಳ್ಳುತ ಲ
ಕ್ಷ್ಮಣನೊಡನೆ । ತರಣಿನಂದನನಾ ವಿಭೀಷಣ । ರಿರುವರಾಚರಿಸಿದರು
ಮಂಗಳಮಜ್ಜನಂಗಳನು ॥ ೧೨ ॥ ಸ್ನಾನಗಳನಂದೆಸಗಿ ದೊಡನೆಯು ।
ವಾನರರು ಸಂತೋಷದಿಂದಲೆ । ಜಾನಕಿಗೆ ಯಭ್ಯಂಜನ ಸ್ನಾನವನು
ಮಾಡಿಸುತ ॥ ಕ್ಷೋಣಿತಲದಲ್ಲಿದು ಪೊಸತೆನೆನಿ । ದಾನಿಸುತಲಂಕರಿಸಿದರಿ
ರಿಸಿ । ಜಾಣತನದೊಳು ಸಕಲ ವಸನಾಭರಣಗಳನೊಲಿದು ॥ ೧೩ ॥
ಪರಮ ಸಂಭ್ರಮದಿಂ ದಖಿಳನಾ । ನರರ ಪತ್ನಿಯರೆಲ್ಲರಿ ಗಲಂ । ಕರಿಸಿ
ದಳುಕೌಸಲ್ಯೆ ಬಹುವಿಧಯತ್ನದಲಿ ನಲಿದು ॥ ಭರತನಾಜ್ಞೆಯನಾಂ
ತೆರಗಿ ತಂ । ದಿರಿಸಿದರು ಸೇವಕರು ನಾಲ್ಕು ಕು । ದುರೆಗಳಿಂದಲೆ ಕಂ
ಗೊಳಿಪ ರಥವನತಿಶೀಘ್ರದಲಿ ॥ ೧೪ ॥ ಸತಿಯೊಡನೆರಾಘವನು ಹತ್ತಿದ ।
ನತಿಹರುಷದಿಂದೆ ಸಲೆಕಂಗೊಳಿ । ಸುತಿಹ ನಾಲ್ಕು ಕುದುರೆಗಳಿಂದೆಸೆವಾ
ವರೂಥವನು ॥ ಜತನದಿಂದಾ ಸ್ಯಂದನವನು ಭ । ರತನುನಡಿಸಿದನಂದು
ಪಥದೊಳು । ಹಿತದೆ ಹಗ್ಗವಪಿಡಿದುಕೊಳ್ಳುತ ತನ್ನ ಕೈಗಳೊಳು ॥೧೫॥
ಭೇರಿಗಳನು ಹೊಡೆದರು ಮುಂಗಡೆ । ವಾರವನಿತೆಯರು ಕರ್ಪೂರದಾಡಿದ ।
ರಾರತಿಯನೆತ್ತಿದರು ಕನ್ಯೆಯರಿದಿರೊಳೈತಂದು ॥ ಸಾರಿ ಬಿರುದುಗಳೆಲ್ಲ
ವನು ಕೈ । ವಾರಿಸಿದರಡಿಗಡಿಗೆ ಭೂಪನೆ । ಬಾರಿಸಿದರಾ ಸಕಲವಿಧವಾ
ದ್ಯಂಗಳೆಲ್ಲವನು ॥ ೧೬ ॥ ಒಡನೆ ಶತ್ರುಘ್ನನು ಮೆರೆವ ಬಿಳು । ಗೊಡೆ
ಯನಿಟ್ಟನು ರಾಘವೇಂದ್ರಂ । ಗೆಡಬಲಂಗಳೊಳಾ ವಿಭೀಷಣ ತರಣಿಸಂ
ಭವರು ॥ ಪಿಡಿದು ಚಾಮರಗಳನು ಬೀಸಿದ । ರಿಡಿದಸಂತಸದಿಂದ ಹೊ
ಗಳಿದ । ರಡಿಗಡಿಗೆ ರಾಮನನು ತಾಪಸರೆಲ್ಲ ಬಳಬಳಸಿ ॥ ೧೭ ॥ ಕಪಿ
ಗಳೆಲ್ಲರು ಮನುಜರೂಪವ । ಸಪರಿವಾರದೊಳಾಂತು ರಾಮನ । ನುಪ
ಚರಿಸು ತೊಂಬತ್ತು ಸಾವಿರ ಗಜಗಳನಡರ್ದು ॥ ಚಪಲಭಾವವನುಳಿದು
ರಾಮನ । ವಿಪುಲವೈಭವ ಕಚ್ಚರಿವಡೆದು । ಸುಪಥದೊಳಯೋಧ್ಯಾ ನ
ಗರಿಗೈತಂದರಾದಿನದೆ ॥ ೧೮ ॥ ಸರಸಿಜಾನನೆ ಜಾನಕಿಸಹಿತ । ತರಣಿ
ವಂಶಲಲಾಮ ರಾಘವ । ನುರೆ ಮೆರೆವ ಘನದಿವ್ಯರಥದೊಳು ಕುಳಿತು
ವೈಭವದೆ ॥ ಪರಿಪರಿಯ ನಿಜನಿಖಿಳಸೇನೆಯು । ವರನೊಲಿಸು ತೈತಂದವನು
ನಿಜನ । ಗರ ಮೆನಿಸಯೋಧ್ಯಾ ಪುರವರಕೆ ರಾಜತೇಜದಲಿ ॥ ೧೯ ॥
ಪರಮಭಕ್ತಿಯನಾಂತು ರಾಮನ । ಚರಣವನೆನೆದು ನಡೆಯಿಸಿದನಾ ।
ಭರತಹಗ್ಗವಪಿಡಿದು ಕೈಯೊಳು ವರವರೂಥವನು ॥ ಪುರದ ಮಾನವ

ರೆಲ್ಲ ರೊಡನತಿ । ಭರದೊಳಾ ರಾಘವನು ಬಂದನು । ಮೆರೆವಯೋಧ್ಯಾ ಪಟ್ಟಣವ ಘನರಾಜವೀಥಿಯಲಿ ॥ ೨೦ ॥ ಬಂದುಹೊಕ್ಕನು ಪಟ್ಟಣದೊಳತಿ । ಚಂದದಿಂದುರೆ ಮೆರೆವ ತನ್ನಯ । ತಂದೆಯ ಮನೆಯನಾರಘವನಿಳಯುತ್ತ ರಾಘವನು ॥ ಸಂದಸಂತಸದಿಂದೆ ಭಾಸ್ಕರ । ನಂದನನ ಮನ್ನಿಸುತ ತನ್ನಯ । ಮಂದಿರದೊಳಿಳಿಸಿದನು ಮನವೊಪ್ಪುವವೊಲುಪಚರಿಸಿ ॥ ೨೧ ॥ ಸಾರಿಸಿದರು ಸುವಾಸನೆಯ ಪ । ನ್ನೀರಿನಿಂದಲೆ ಪಟ್ಟಣದೊಳಹ । ಕೇರಿಕೇರಿಗಳಲ್ಲವ ನಖಿಳಬೀದಿಗಳಸಹಿತ ॥ ತೋರಿಸಿ ಚಮತ್ಕಾರವನು ಶೃಂ । ಗಾರಮಾಡಿದ ರಿಟ್ಟುವರ ಕ । ರ್ಪೂರರಜದಿಂದೆಸೆವ ರಂಗವಲಿಗಳನೆಲ್ಲಡೆಗೆ ॥ ೨೨ ॥ ವಾಸನೆಯನಾಗಿಪ ಸುಗಂಧದ । ಕೇಸರಿಯುಕೆಸರಿಂದೆ ರಚಿಸಿದ ರಾ ಸಕಲ ವೀಥಿಗಳಗತಿಚಂದವಮನೆಕಾರಣೆಯ ॥ ಬೀಸಿಮಾಡಿದ ಬಣ್ಣಪುಡಿಗಳ । ರಾಸಿಗಳನಾತುರದೆ ತಂದು ಸು । ವಾಸಿನಿಯರು ತರತರದೊಳಾಕೃತಿಗಳನು ಲಿಖಿಸಿದರು ॥ ೨೩ ॥ ಕಳಸಕನ್ನಡಿ ಮಕರತೋರಣ । ತಳಿರದೋರಣ ಸಿಂಧಸೀಗುರಿ । ಬೆಳುಗೊಡೆ ಪತಾಕೆಗಳನಿರಿಸಿದರಲ್ಲಿ ಸಿಂಗರಿಸಿ ॥ ತಳುವದಾ ಪುರದಖಿಳ ಭವನಂ । ಗಳಗೆ ಸುಣ್ಣವಬಳಿದು ಕಾರಣೆ । ಗಳನಿರಿಸಿ ಲೋವೆಗಳಿಗಿಟ್ಟರು ಬಣ್ಣಪಟ್ಟೆಗಳ ॥ ೨೪ ॥ ಮಂದಿರಂಗಳಿಗೆಲ್ಲ ಕಟ್ಟಿದ । ರಂದು ಕದಳೀಸ್ತಂಭಗಳ ನೊಲ । ವಿಂದೆ ಮಾವಿನತೋರಣಂಗಳ ನವಕಬಿಗಿಸಿದರು ॥ ಚಂದವೆನೆ ಕರುಮಾಡಗಳ ಮೇ । ಲಂದವಹ ಕೇತನಗಳನು ಭರ । ದಿಂದಿರಿಸಿದರು ಸಿಂಗರಂಗೊಳಿಸುತ್ತಯೋಧ್ಯೆಯಲಿ ॥ ೨೫ ॥ ಅಲ್ಲಿಗಲ್ಲಿಗೆ ಚಪ್ಪರಂಗಳ । ನಲ್ಲಿಗಲ್ಲಿಗೆ ಮಂಟಪಂಗಳ । ನಲ್ಲಿಗಲ್ಲಿಗೆ ರಚಿಸಿದರು ಕೊಟ್ಟಾರಗಳನೊಲಿದು ॥ ಅಲ್ಲಿಗಲ್ಲಿಗೆ ಮೇಲ್ಬಿಡಾರವ । ನಲ್ಲಿಗಲ್ಲಿಗೆ ಯೆಲೆಮನೆಗಳನು । ಮಲ್ಲಿಗಲ್ಲಿಗೆ ಮೇಲುಗೂಡಾರಗಳ ನೆಸಗಿದರು ॥ ೨೬ ॥ ಹಿಂದೆ ಶಕ್ರಂ ಗಷ್ಟವಸುಗಳು । ಚಂದದಿಂದಭಿಷೇಕವ ನೆಸಗು । ವಂದು ಸುರನಗರಿಯ ನಲಂಕರಿಸಿದ್ದರೀತಿಯಲಿ ॥ ಸಂದತಿ ಚಮತ್ಕಾರವನು ನಲ । ವಿಂದಿರಿಸಿ ಸಿಂಗರಿಸಿದರು ರಘು । ನಂದನನ ಪಟ್ಟಾಭಿಷೇಕಕೆ ಪದೆದಯೋಧ್ಯೆಯನು ॥ ೨೭ ॥ ಗುರುವಸಿಷ್ಟ ಮುನೀಂದ್ರನಾ ರಘು ॥ ವರನ ಘನಪಟ್ಟಾಭಿಷೇಕಕೆ । ವರಮುಹೂರ್ತವ ನಿರಿಸಿದನುಶುಭವಸ್ತುಗಳನೆಲ್ಲ ॥ ತ್ವರಿತದಿಂದಲೆ ಸಿದ್ಧಗೊಳಿಸುತ । ಭರತನೆಂದನು ಭಾನುಸುತಸಿಗೆ । ತರಿಸು ನಾಲ್ಕುಸಮುದ್ರಗಳ ವಾರಿಯನು ನೀನೆನುತ ॥ ೨೮ ॥ ಅನುಣಿಯನಾಲಿಸುತ ಬಹುಸಂ । ಮಾನದೊಳು ಸುಗ್ರೀವನಾ ಪವ ।

ಮಾನನಂದನ ಮುಖ್ಯರಹ ಕಪಿವೀರರನು ಕರೆದು ॥ ಭಾನುಮೂಡದ
ಮುನ್ನ ನೀವು ನಿ । ದಾನಿಸದೆ ತರಬೇಕು ಬಿಟ್ಟನು । ಮಾನವನು ಚ
ತುರೋದಧಿ ಜಲವನೆಂದು ನೇಮಿಸಿದ ॥ ೧೯ ॥ ಒಡೆಯನಾಜ್ಞೆಯನಾಂ
ತು ವಾನರ । ರೊಡನೆಪೋದರು ನಾಲ್ಕು ದಿಕ್ಕಿನ । ಕಡಲುಗಳಗತಿ ಶೀಘ್ರ
ದೊಳು ನೆಗೆದಂಬರಸ್ಥಳಕೆ ॥ ಪಿಡಿದಕಾಂಚನ ಕುಂಭಗಳೊಳಾ । ಜಡಧಿ
ಗಳವಾರಿಯನು ತಂದರು । ಕಡುಜವದೊಳೈನೂರು ನದಿಗಳನೀರನೊಳ
ಕೊಂಡು ॥ ೨೦ ॥ ನಲಿದುಕಪಿಗಳುತಂದಸಾಗರ । ಜಲವನಾ ಶತ್ರುಘ್ನ ನಿ
ಕ್ಷೆಸಿ । ಕುಲಪುರೋಹಿತನಹ ವಸಿಷ್ಠಮುನೀಂದ್ರನಿಗೆ ನೀವು ॥ ತಿಳುಹುವು
ದೆನುತ ತನ್ನಮಿತ್ರರಿ । ಗೊಲಿದು ಪೇಳಲವರುಗಳಾ ಮುನಿ । ಕುಲಲಲಾ
ಮಂಗೆರಗುತಾ ಸಂಗತಿಯ ನರುಹಿದರು ॥ ೨೧ ॥ ಮುನಿವಸಿಷ್ಠ
ನು ಬಳಿಕ ವಿಪ್ರರೊ । ಡನತಿ ಸಂತೋಷದನು ತಾಳುತ । ವಿನುತಮಂ
ಗಳ ಮಂಟಪದ ಮಧ್ಯದೊಳು ಕಂಗೊಳಿಪ ॥ ವಿನುತ ನವರತ್ನಮ
ಯ ಪೀಠವೆ । ಜನಕನಂದನೆಸಹಿತ ರಘುವೀ । ರನನು ಕುಳ್ಳಿರಿಸಿದ
ನು ಪಠಿಸುತ ವೇದಮಂತ್ರಗಳ ॥ ೨೨ ॥ ಮುನಿವಸಿಷ್ಠ ಸುಯಜ್ಞಕಾ
ತ್ಯಾ । ಯನ ವಿಜಯಜಾಬಾಲಿ ಕಾಶ್ಯಪ । ವಿನುತಗೌತಮ ವಾಮದೇ
ವಾದಿ ಮುನಿಪ್ರೋತ್ತಮರು ॥ ಘನಸುಗಂಧದ ವಿಮಲಜಲದಿಂ । ವನುನ
ಯದೊಳಭಿಷೇಕ ವೆಸಗಿದ । ರಿನಕುಲೇಂದ್ರನಿಗಾ ವಸುಗಳಿಂದ್ರನಿಗೆಸ
ಗಿದಂತೆ ॥ ೨೩ ॥ ಪರಮಪಾವನ ರೆಂದೆನಿಸಿಕೊಂ । ಡಿರುವ ಋತ್ವಿಕ್ಕು
ಗಳು ಧರಣೀ । ಸುರರು ಕನ್ಯೆಯರಖಿಳ ಸೇನಾಧಿಪರು ಮಂತ್ರಿಗಳು ॥
ಹರುಷದಿಂದಭಿಷೇಕವನು ರಘು । ವರನಿಗೆಸಗಿದರಾ ಮುನಿಪತಿಗ । ಳೊರೆ
ದ ಮಂತ್ರಂಗಳನು ಕೇಳುತ ವಿಧಿವಿಧಾನದಲಿ ॥ ೨೪ ॥ ವಿಮಲವಾರಿಯ
ನಾಂತು ನಭದೊಳ । ಗಮರರಾ ದಿಕ್ಪಾಲಕರ ಸಹಿ । ತಮಲತರ ಸ
ರ್ವೌಷಧಿ ರಸಗಳಿಂದೆರಾಮನಿಗೆ ॥ ವಿಮಲವರ ಶುಭಲಗ್ನದೊಳೊಡನೆ ।
ತಮತಮಗೆ ಸಂತಸವತಳೆದಾ । ಗಮವಿಧಿ ವಿಧಾನದೊಳ ಗಭಿಷೇಕವನು
ಮಾಡಿದರು ॥ ೨೫ ॥ ವನಜಸಂಭವನಿಂದೆ ನಿರ್ಮಿತ । ಮೆನಿಸಿ ರತ್ನಗಳಿಂ
ದೆ ಶೋಭಿಪ । ಘನಕಿರೀಟವನಿಟ್ಟು ರಘುನಂದನನ ಮಸ್ತಕಕೆ ॥ ಮು
ನಿಗಳೆಲ್ಲರು ಮತ್ತೆ ಪೇಳುತ । ವಿನುತ ಮಂತ್ರಂಗಳನು ರಘುನಾ । ಥನಿ
ಗೆ ಪದೆದಭಿಷೇಕವನು ಮಾಡಿದರು ಸಭೆಯೊಳಗೆ ॥ ೨೬ ॥ ಒಡನೆ ರಘು
ನಾಥಂಗೆಸೆವ ಬೆಳು । ಗೊಡೆಯನಾ ಶತ್ರುಘ್ನನಿರಿಸಿದ । ನೆಡಬಲಂಗಳೊ
ಳಾ ವಿಭೀಷಣ ತರಣಿಸಂಭವರು । ಪಿಡಿದು ಚಾಮರಗಳನು ಬೀಸಿದ ।

ಅಡಿಗಡಿಗೆ ಬಿರುದಾವಳಿಯ ನುತಿ । ಸಡಗರದೊಳಾ ವಂದಿಮಾಗಧರೈದೆ ಪೊ
ಗಳುವರು ॥ ೩೭ ॥ ಹೊಳೆವ ಶತಪುಷ್ಕರಗಳಿಂದುರೆ । ಥಳಥಳಿಪ ಕಾಂಚ
ನದ ಹಾರವ । ನೊಲಿದಮರವರನಾ ಸಮೀರನಕೈಗೆ ಕೊಟ್ಟದನು ॥ ತ
ಳುವದೀವುದು ರಾಮನಿಗೆನುತ । ಕಳುಹಲೈತಂದಿತ್ತ ನಾಮನು । ಕುಲ
ಲಲಾಮಂಗತಿ ಭರದೊಳಾ ಗಂಧವಾಹನನು ॥ ೩೮ ॥ ದೇವದುಂದುಭಿಗ
ಳು ಮೊಳಗಿದವು । ದೇವತೆಗಳೆಲ್ಲರು ನೆರೆನೆರೆದು । ಠೀವಿಯಿಂದಲೆ ಕು
ಸುಮವೃಷ್ಟಿಯನೊಲಿದು ಸುರಿಸಿದರು ॥ ದೇವಗಂಧರ್ವರುರೆ ಪಾಡಿದ ।
ರಾವಿಭುವಿನಭಿಷೇಕ ಕಾಲದೆ । ಸಾವಧಾನದೊಳಾಡಿದರು ನರ್ತನವನ
ಪ್ಸರರು ॥ ೩೯ ॥ ಧರಣಿಮಂಡಲವೆಲ್ಲ ಹೊಳೆದುದು । ತರತರದ ಪೈರು
ಗಳನಾನುತ । ಮೆರೆವುದು ಫಲಗಳಿಂದ ವೃಕ್ಷಗಳೆಲ್ಲ ಶೀಘ್ರದಲಿ ॥ ಪರಿಪ
ರಿಯ ಪುಷ್ಪಂಗಳೆಲ್ಲವು । ಪರಿಮಳಾತಿಶಯವನು ತಾಳುತ । ಮೆರೆದವಾ
ಪಟ್ಟಾಭಿಷೇಕ ಮಹೋತ್ಸವಸಮಯದೆ ॥ ೪೦ ॥ ಒಂದುಲಕ್ಷದಘೋಟಕಂ
ಗಳ । ನೊಂದುಲಕ್ಷದ ಗೋವುಗಳನಂ । ತೊಂದುಲಕ್ಷದ ಧೇನುಗಳನಾ
ರವಿಕುಲೋತ್ತಮನು ॥ ಸಂದ ಸಂತಸದಿಂದೆ ಕೊಟ್ಟನು । ಬಂದ ಭೂ
ಸುರರೆಲ್ಲರಿಗೆ ಮನ । ಬಂದರೀತಿಯೊಳಂತು ದಕ್ಷಿಣೆಗಳನು ಕೈಯೊಳ
ಗೆ ॥ ೪೧ ॥ ವಿನಯಭಾವವನಾಂತು ರಘುನಂ । ದನನು ಧರಣೀಸುರರಿ
ಗಿತ್ತನು । ಮನದಣಿಯೆ ಮೂವತ್ತುಕೋಟಿಯ ರಾಮಟಂಕಿಗಳ ॥ ಧನ
ಮಣಿಕನಕ ವಸ್ತ್ರಗಳನಾ । ದಿನದೆ ಕೊಟ್ಟನು ಮತ್ತೆ ಭೂಸುರ । ಗಣ
ಕೊಲಿದು ಪಟ್ಟಾಭಿಷೇಕ ಮಹೋತ್ಸವದೊಳಂದು ॥ ೪೨ ॥ ತರಣಿಕಿರ
ಣಗಳಂತೆ ಸಂತತ । ಮೆರೆವ ಮಣಿಗಣದಿಂದೆ ಕಂಗೊಳಿ । ಪ್ಪುರುತರದ
ಕಾಂಚನದ ಹಾರವನಿತ್ತು ದಿನಸುತಗೆ ॥ ಸುರಪತಿಯಸುತ ನಂಗದನಿಗು
ರೆ । ಮೆರೆಯುವಂಗದಗಳನು ಕೊಟ್ಟನು । ಧರಣಿಪಾಲಕ ರಾಘವೇಶ್ವರ
ನತಿವಿನೋದದಲಿ ॥ ೪೩ ॥ ವರಮಣಿಗಳಿಂದೆಸೆವ ಮೌಕ್ತಿಕ । ಸರವನಾ
ರಾಘವನು ಕೊಟ್ಟನು । ಧರಣಿಜಾತೆಯಕೈಗೆ ಬಹು ಸಂತೋಷವನು
ತಾಳ್ದು ॥ ಕೊರಳೊಳಾ ಹಾರವನು ಜಾನಕಿ । ಧರಿಸುತೀಕ್ಷಿಸುತಿದ್ದಳಂ
ದತಿ । ಹರುಷದಿಂದಾ ರಾಘವೇಂದ್ರನ ಮುಖವ ನಡಿಗಡಿಗೆ ॥ ೪೪ ॥ ಜನಕ
ನಂದನೆ ಯಿಂಗಿತವನರಿ । ದಿನಕುಲೋತ್ತಮ ನೆಂದನೆಲೆ ಸತಿ । ನಿನಗ
ದಾವಕಪೀಂದ್ರನಾಗಿಸಿದ ನತಿಹರ್ಷವನು ॥ ವಿನುತಪೌರುಷ ವಿಕ್ರಮ
ಮತಿಗ । ಳನವರತವಾವಕಪಿವರನೊಳು । ವಿನುತಿವಡೆದಿಹು ದಾತಗೀ
ವುದು ಸರವನೀಸೆನುತ ॥ ೪೫ ॥ ಆ ನುಡಿಯನಾಲಿಸುತ ಬೇಗನೆ ।

ಜಾನಕಿ ತೆಗೆದುಹಾರವನು ಪವ । ಮಾನಸುತನಿಗೆ ಕೊಟ್ಟಳತಿ ಸಂತೋ
ಷವನುತಾಳ್ದು ॥ ವಾನರೇಂದ್ರನ ಮನ್ನಿಸುತಲಾ । ಮಾನಿನೀಮಣಿ ಮನ
ದಣಿಯೆ ಸುಂ । ಮಾನವನುತಾಳುತ್ತ ಕೊಟ್ಟಳು ವಸ್ತ್ರಭೂಷಣವ
॥೪೬॥ ದ್ವಿವಿದಮೈಂದಗ ವಾಕ್ಷಕೇಸರಿ । ಗವಯಶತಬಲಿ ನೀಳನಳಜಾಂ ।
ಬವರು ಮೊದಲಾದಖಿಳ ವಾನರವರರಭೀಷ್ಟಗಳ ॥ ತವಕದಿಂದಿದಿತ್ತ
ನಾ ರಾ । ಘವನು ಸಂತೋಷವನು ತಾಳ್ದವ । ರವರ ಮನವೊಪ್ಪ
ವವೊಲುತ್ತಮ ರತ್ನದೊಡವೆಗಳ ॥ ೪೭ ॥ ಸಕಲವಾನರವೀರರಾಂತು ।
ಪ್ರಕಟ ವಸ್ತ್ರಾಭರಣಗಳ ನತಿ । ಸುಖದೆ ಹೊಗಳುತ ನಡೆದರಾಗಳೆ ತ
ಮ್ಮನೆಲೆಗಳಿಗೆ ॥ ಸಕಲ ಮರ್ಯಾದೆಗಳ ಸಾಂತತಿ । ಭಕುತಿಯಿಂದಾರಘು
ಪತಿಗೆರಗಿ । ಸುಖದೊಳಾ ಸುಗ್ರೀವನಾತನ ಪುರಕೆನಡೆತಂದ ॥೪೮॥ ಮ
ನುಕುಲೋತ್ತಮ ರಾಮಚಂದ್ರನ । ಘನವಿನುತ ಪಟ್ಟಾಭಿಷೇಕವ । ಮ
ನವೊಲಿದು ನೋಡುತ ವಿಭೀಷಣನಾಂತು ಮನ್ನಣೆಯನು ॥ ತನಗೆ ರಾಘ
ವನಿತ್ತ ನಿಜಕುಲ । ಧನವನಾಂತು ಸಚಿವರೊಡನೆ ರಾ । ಮನನುಹೊ
ಗಳುತ ಲಂಕೆಗೈತಂದನತಿ ವೇಗದಲಿ ॥ ೪೯ ॥ ಸತಿಸಹಿತ ಪಟ್ಟಾಭಿಷೇ
ಕವ । ಹಿತದೆ ರಾಘವನಾಂತು ಶತ್ರುರ । ಹಿತನೆನಿಸಿ ಕೊಂಡವನಿತಲವೆಲ್ಲ
ವನು ಪಾಲಿಸುತ ॥ ಅತಿಭರದೆ ಯುವರಾಜಪದದೆ ಭ । ರತನನಿರಿಸುತ ಸ
ಕಲತರದ । ಕ್ರತುಗಳನು ಮಾಡಿದನು ವಿಪ್ರರಿಗಿತ್ತು ದಕ್ಷಿಣೆಯ ॥ ೫೦ ॥
ಅವನಿಪತಿರಾಘವ ನಖಿಳ ಬಾಂ । ಧವರೊಡನೆ ಸಲಹಿದನು ನಲವಿಂ । ದ
ವನಿಯನು ಹನ್ನೊಂದುಸಾವಿರ ವರ್ಷಗಳತನಕ ॥ ದಿವಿಜರನು ಸಂತು
ಷ್ಟವಡಿಸುತ । ಸವಿನಯದೊಳಾಗಿಸಿದನು ಸಕಲ । ವಿಧದ ಪೌಂಡರಿಕಾ
ಶ್ವಮೇಧ ಸುವಾಜಪೇಯಗಳ ॥ ೫೧ ॥ ಭೂರಿದಕ್ಷಿಣೆಗಳನು ವಿಪ್ರರಿ ।
ಗಾ ರಘುವರನು ಕೊಡುತೆಸಗಿದನು । ನೂರು ಹಯಮೇಧಂಗಳ ನಡಿ
ಗಡಿಗತಿ ಹರ್ಷದಲಿ ॥ ಧಾರಿಣೀಸುತೆಯ ನೊಲಿಸುತ ರಘು । ವೀರನೀ ಧ
ರಣೀತಲವನು ವಿ । ಚಾರಿಸುತ ಸಲಹಿದನು ಸಂತಸವಡಿಸುತೆಲ್ಲರನು ॥
॥ ೫೨ ॥ ಉರಗಬಾಧೆಗಳಿಲ್ಲ ರೋಗ ನಿ । ಕರದಭೀತಿಗಳಿಲ್ಲ ಹೆಂಗಸ ।
ರರಿತು ತಿಳಿದವರಲ್ಲವು ಪತಿವಿಹೀನ ದುಃಖವನು ॥ ಧರೆಯೊಳೆಲ್ಲಿಯು
ಮಿಲ್ಲ ಕಳ್ಳಜ । ನರ ಭಯಗಳು ವಿಷಾದವನೆಸಗು । ತಿರುವ ಬಾಧೆಗಳಿ
ಲ್ಲ ರಾಮಸ್ವಾಮಿರಾಜ್ಯದಲಿ ॥ ೫೩ ॥ ಮನುಜರೊಳ ನರ್ಥಂಗಳೆಲ್ಲಿಯು ।
ಜನಿಸುತಿರಲಿಲ್ಲೆಂದಿಗು ಮರಿಯೆ । ಮನುಜನಾವನು ಪುಸಿಯಮಾತನು
ಪೇಳುತಿರಲಿಲ್ಲ ॥ ತನಯರಿಗೆ ಮಾಡುತಿರಲಿಲ್ಲವು । ಜನರಪರಕರ್ಮವನು

ಪರವಂ । ಚನೆಯು ಯೋಚನೆಯಿಲ್ಲ ರಾಮಸ್ವಾಮಿರಾಜ್ಯದಲಿ ॥ ೫೪ ॥ ಎಲ್ಲರುಂ ಸಂತೋಷದಿಂದಿಹ । ರೆಲ್ಲರುಂ ದುಃಖವನು ತೊರೆದಿಹ । ರೆಲ್ಲರುಂ ಕ್ಷೇಮವನುಹೊಂ ದಿರುತಿದ್ದರನುದಿನವು ॥ ಎಲ್ಲರುಂ ಪರಹಿತವನೆಸಗುವ । ರೆಲ್ಲರುಂ ಧರ್ಮನಿರತರೆನಿಪ । ರೆಲ್ಲಕಾಲದೊಳೈದೆ ರಾಮಸ್ವಾಮಿ ರಾಜ್ಯದಲಿ ॥ ೫೫ ॥ ಪುತ್ರರನು ಪೌತ್ರರನು ಪಡೆದು ಕ । ಳತ್ರರಿಂದೆ ನಲಿಯುತಖಿಳ ಸ । ನ್ಮಿತ್ರರೊಡನೆ ಸಹಸ್ರ ವತ್ಸರತನಕ ಮಾನವರು ॥ ಸತ್ರಮಂಟಪ ವನಗಳನುಸ । ರ್ವತ್ರಕಟ್ಟಿಸಿ ಬಾಳುತಿದ್ದರು । ಮಿತ್ರಕುಲತಿಲಕನಹ ರಾಮಸ್ವಾಮಿರಾಜ್ಯದಲಿ ॥ ೫೬ ॥ ನಿತ್ಯಪುಷ್ಪಂಗಳನು ಬಿಡುವುವು । ನಿತ್ಯಫಲಗಳ ನೀವುತಿರ್ಪವು । ನಿತ್ಯವುಂ ಪಿರಿಪಿರಿಯ ಶಾಖೆಗಳಾಂತು ವಿಟಪಿಗಳು ॥ ಭೃತ್ಯರಾಗುತ ರಾಮನಾಮವನೆ । ನತ್ಯಧಿಕಭಕ್ತಿಯೊಳು ನೆನೆವರು । ನಿತ್ಯವುಂ ಜನರೆಲ್ಲ ರಾಮಸ್ವಾಮಿ ರಾಜ್ಯದಲಿ ॥ ೫೭ ॥ ರಾಮ ಕರುಣಾಧಾಮ ಸೀತಾ । ರಾಮ ಸುಜನಪ್ರೇಮ ಶುಭಕರ । ನಾಮ ರವಿಕುಲದುಗ್ಧ ವಾರಿಧಿಸೋಮ ರಣಭೀಮ ॥ ಸೋಮಧರ ಕೋದಂಡ ದಳನೋ । ದ್ದಾಮ ಯೆನ್ನುತ ಹೊಗಳುತಿದ್ದರು । ರಾಮನನು ಜನರೆಲ್ಲ ರಾಮಸ್ವಾಮಿರಾಜ್ಯದಲಿ ॥ ೫೮ ॥ ರಾಮಮಯವಾಯ್ತು ಜಗವೆಲ್ಲವು । ಭೂಮಿಸುತೆಯೊಡನಾ ರಘೂತ್ತಮ । ನೀ ಮಹೀತಲವೆಲ್ಲವನು ಸಲಹುತಿರೆಸಂತತವು ॥ ಕಾಮಲೋಭಾದಿಗಳತೊರೆದು । ಪ್ರೇಮದಿಂ ದಿರುತಿದ್ದರೆಲ್ಲರು । ರಾಮನಂ ಜಾನಿಸುತ ರಾಮಸ್ವಾಮಿರಾಜ್ಯದಲಿ ॥ ೫೯ ॥ ಕಾಲಕಾಲಕೆ ಮಳೆಯುತಪ್ಪದೆ । ಬೀಳುತಿದ್ದುದು ಸೌಖ್ಯಕರಮೆನೆ । ಗಾಳಿಬೀಸುತಲಿದ್ದುದತಿ ಸಂಮುದವನಾಗಿಸುತ ॥ ಶೀಲವನುಕೈಕೊಂಡು ರಘುಭೂ । ಪಾಲಕಥೆಯನು ಮನೆಮನೆಗಳಲಿ । ಕೇಳುತಿದ್ದರು ಜನರು ರಾಮಸ್ವಾಮಿರಾಜ್ಯದಲಿ ॥ ೬೦ ॥ ಧರಣಿಸುರರು ಕ್ಷತ್ರಿಯರು ವೈ । ಶ್ಯರು ಸಕಲಶೂದ್ರರು ಮೊದಲಹ ಜ । ನರು ನಿರತರಾಗಿದ್ದರವರವರ ಸ್ವಕರ್ಮದಲಿ ॥ ಪರಿಪರಿಯ ಸದ್ಧರ್ಮಗಳನಾ । ಚರಿಸುತ ಮನುಜರೆಲ್ಲಪುಣ್ಯಾ । ತ್ಮರೆನಿಸಿದ್ದರನುದಿನ ರಾಮಸ್ವಾಮಿರಾಜ್ಯದಲಿ ॥ ೬೧ ॥ ಈತಿಬಾಧೆಗಳನ್ನು ಕಾಣದೆ । ಭೂತಹಿತರೆಂದೆನಿಸಿ ನಿತ್ಯವು । ನೀತಿಮಾರ್ಗದೆನಡೆಯುತಾ ಕುಲಧರ್ಮವನು ಬಿಡದೆ ॥ ಭೂತಲದಜನರೆಲ್ಲ ರತಿಸಂ । ಪ್ರೀತಿಯಿಂದಲೆ ಹೊಗಳುತಿದ್ದರು । ಸೀತೆಯನು ಸಂತತವು ರಾಮಸ್ವಾಮಿರಾಜ್ಯದಲಿ ॥ ೬೨ ॥ ಮಡದಿ ತಮ್ಮಂದಿರಸಹಿತ ಜನ । ರೊಡೆಯ ರಘುನಾಥನು ಪೊರೆದನೀ । ಪೊಡವಿಯನು ಹ

ನ್ನೊಂದುಸಾವಿರ ವರ್ಷಪರಿಯಂತ ॥ ಪೊಡವಿಪಮಗಳಹ ಸೀತೆರಾಘವ ।
ನೊಡನೆ ಸಕಲವಿಧದ ಸುಖಂಗಳ । ನಡಿಗಡಿಗೆ ತಾನನುಭವಿಸುತಿದ್ದಳರ
ಮನೆಯೊಳಗೆ ॥ ೬೩ ॥ ಆ ಕುಶಲವರಿಗೊಲಿದು ಮುನಿವಾ । ಲ್ಮೀಕಿಪೇ
ಳಿರುನಾದಿಕಾವ್ಯದೊ । ಳೀ ಕಥೆಯು ಸಂಮಿಳಿತಮಾಗಿಹುದು ಜನಜನಿತ
ಮೆನೆ ॥ ಈ ಕಥೆ ಪರಮಪಾವನಮೆನಿಪು । ದೀಕಥೆ ದುರಿತಗಳನುಹರಿಸು
ವು । ದೀಕಥಗೆ ಸರಿಯುಂಟೆ ಭೂತಲದೊಳತರಕಥೆಗಳು ॥ ೬೪ ॥ ಇದು
ವಿಮಲ ಕೀರ್ತಿಕರಮಾಗಿಹು । ದಿದುಮಹೀಪಾಲರಿಗೆ ವಿಜಯವ । ನೊ
ದಗಿಸುತ್ತಿಹುದಿದು ವಿವಿಧಸೌಖ್ಯಗಳನಾಗಿಪುದು ॥ ಇದುಜಗದೊಳತಿ ಧ
ನ್ಯಮೆನಿಸಿಹು । ದಿದುಸಕಲ ಸಂಪದಗಳ ನೆಸಗು । ವುದಿದು ಮುನಿವಾ
ಲ್ಮೀಕಿಯಿಂದೆ ವಿರಚಿತಮಾಗಿಹುದು ॥ ೬೫ ॥ ಮೇದಿನೀಬಾಲಕಿಯ ಚ
ರಿತೆಯ । ನಾದರದೊಳನುದಿನವು ಮೆಡಬಿಡ । ದೋದಿದರೆಕೇಳಿದರೆ ಮಾ
ನವನಾವನಾದೊಡೆಯು ॥ ಈ ಧರಣಿಯೊಳು ತನ್ನಕಿಲ್ಬಿಷ । ಬಾಧೆಗಳ
ಪರಿಹರಿಸಿಕೊಳ್ಳುತ । ಸಾಧಿಸುವ ನವಸಾನದೊಳು ಕೈವಲ್ಯಪದವಿಯ
ನು ॥ ೬೬ ॥ ಧನವಿಹೀನರು ಧನವಪಡೆವರು । ತನಯರಿಲ್ಲದ ಜನರು ಸ
ಜ್ಜನ । ರೆನಿಪಮಕ್ಕಳನೈದುವರು ಕೇಳುತ್ತಲೀಕಥೆಯ ॥ ಮನುಜಪಾ
ಲಕನೀ ವಿಮಲಕಥೆ । ಯನು ಮನವೊಲಿದು ಕೇಳದೊಡೆ ಮೇ । ದಿನಿ
ಯನಾಳುವನು ಚಿರಕಾಲವು ಜಯಿಸಿಹಗೆಗಳನು ॥ ೬೭ ॥ ಪುತ್ರರನು
ಪೌತ್ರರನು ಹೊಂದಿ ಧ । ರಿತ್ರಿಯೊಳು ಸುಖಿಸಿದಪರೀ ಸುಚ । ರಿತ್ರ
ಯನು ಕೇಳದೊಡಬಲೆಯರು ಭಕ್ತಿಭಾವದಲಿ ॥ ಶತ್ರುಗಳಗೊಳಗಾಗ
ದೆ ಸ । ರ್ವತ್ರ ಸಂತೋಷಪಡುತಿಹನು ಪ । ವಿತ್ರಮೆಂದೆನಿಪೀ ಕಥೆ
ಯನಾಲಿಸುವ ಮಾನವನು ॥ ೬೮ ॥ ಪಿರಿಯ ದುರ್ಗಂಗಳನು ಕಳೆದು ।
ತ್ವರಿತದಿಂದೈದುವರು ತಮ್ಮ ನ । ಗರಿಗೆ ಸೀತಾಕಥೆಯನಾಲಿಪ ಮಾನವ
ರಿಳೆಯೊಳು ॥ ನರರು ಸದ್ಭಕ್ತಿಯನು ತಾಳ್ದೀ । ಚರಿತೆಯನುಕೇಳದೊ
ಡೆ ಜೀವಿಸು । ವರು ಬಹುಳದಿನತನಕ ದೀರ್ಘಾಯುಷ್ಯವನುಪಡೆದು ॥
॥ ೬೯ ॥ ಪುರಕೆಸುಖವಾಗಿ ನಡೆತಂದನ । ವರತ ತನ್ನಯಮನೆಯೊಳಗೆ
ನಂ । ಟರೊಳು ಸೇರುತ್ತಪ್ರವಾಸಿ ಹರುಷವನೈದುವನು ॥ ನರರುಮನ
ದಿಷ್ಟಾರ್ಥಗಳ ಪಡೆ ॥ ವರಿಳೆಯೊಳು ದೇವತೆಗಳೆಲ್ಲರು । ಹರುಷವನು
ಹೊಂದುವರು ಸೀತಾಚರಿತೆಯನುಕೇಳ್ದು ॥ ೭೦ ॥ ಪರಮಭಕ್ತಿಯನಾಂ
ತು ಸೀತಾ । ಚರಿತೆಯನು ಕೇಳದೊಡೆ ಸತ್ಪು । ತ್ರರನು ಹೊಂದುತಿಹರು
ರಜಸ್ವಲೆಯಪ್ಪವನಿತೆಯರು । ಧರೆಯೊಳು ಪುರಾತನಮೆನಿಸಿ ದೀ । ಚ

ರಿತೆಯನು ಪೂಜಿಸಿಪರಿಸಿ ತರ । ತರದ ಪಾಪಗಳಿಂದೆ ಬಿಡುಗಡೆಯಾಗು ವರು ಜನರು ॥ ೩೧ ॥ ಧರಣಿಪಾಲಕರೀ ಚರಿತ್ರೆಯೊ । ಳರು ವೆಮರ್ಮಂ ಗಳನು ಧರಣೀ । ಸುರರಗೆಶೆಯಿಂದರಿತು ಕೊಂಡರೆ ಬಹುವಿಶದವಾಗಿ ॥ ಅರಿಗಳನು ಜಯಿಸುತ್ತ ಪೊರೆವರು । ಧರಣಿಮಂಡಲವೆಲ್ಲವನು ಸಂ । ಟ ರಸಹಿತಖಿಳ ಸಂಪದಂಗಳನಾಂತು ಸಂತತವು ॥ ೩೨ ॥ ಧರೆಯೊಳೀಕಥೆ ಯು ನೊಲಿದೋದುವವ । ನರನವಾ ರಘುನಾಥನೀಕ್ಷಿಸಿ । ಹರುಷವನು ಹೊಂದುವನು ಸೀತಾಚರಿತೆಯೆಲ್ಲರಿಗೆ ॥ ವಿರಚಿಪುದು ಧನಧಾನ್ಯವೃದ್ಧಿ ಯು । ನುರುತರಕುಟುಂಬ ದಭಿವೃದ್ಧಿಯು । ನುರೆವೆರೆವ ರಮಣಿಯರ ಸುತ್ತ ಮತರದ ಸುಖಗಳನು ॥ ೩೩ ॥ ಹಿಂದೆನಡೆದಿಹುದಿಂತು ಧರಣೀ । ನಂದನೆಯಕಥೆ ಯಿದನಮಲಮತಿ । ಯಿಂದೆಪಠಿಸಿರಿ ನಿಮಗೆ ಮಂಗಳ ಗಳೊದಗುತ್ತಿಹವು ॥ ಮುಂದಿದನು ಸಲೆವಿಸ್ತರಿಸಿರಿ ಮು । ಕುಂದನಬ ಲವು ಹೆಚ್ಚಲಿನಿಮಗೆ । ಬಂದುಸೇರುವುವು ಸಕಲವಿಧದ ಭೋಗಭಾಗ್ಯ ಗಳು ॥ ೩೪ ॥ ದೇವತೆಗಳೀ ಕಥೆಯನಾಲಿಸಿ । ತಾವು ಸಂತೋಷವನು ತಾಳುವ । ರೀ ವಿಮಲತರಸಚ್ಚರಿತೆಯನು ಕೇಳ್ದುಪಿತೃಗಳು ॥ ಸಾವ ಧಾನದೆ ತುಷ್ಟಿವಡೆವರು । ದೇವಲೋಕದೊಳುವಸಿಸುವನೀ । ಪಾವನ ತರ ಕಥೆಯನುಬರೆಯುವ ಮನುಜನನವರತ ॥ ೩೫ ॥ ಆದಿಕಾವ್ಯವೆ ದೆನಿಸುತನು ದಿನ । ಮೇದಿನಿಯೊಳತ್ಯುನ್ನತಿ ವಡೆದು । ಸಾಧಕವೆನಿಸಿ ಕೊಂಡಿರುವ ರಾಮಾಯಣಕಥೆಯೊಳು ॥ ಮೇದಿನೀಸುತೆಯ ಕಥೆಯೆಲ್ಲ ವ । ನಾದಿಯಿಂದವಲೋಕಿಸುತತಿ ವಿ । ನೋದದಿಂದೆ ವಿರಚಿಸಿದನು ನರ ಸಿಂಹನೀವಿಧದೆ ॥ ೩೬ ॥ ಮುನ್ನ ಕುಶಲವರಿಬ್ಬರಿಗೆ ಸಂ । ಪನ್ನಮತಿ ವಾಲ್ಮೀಕಿ ಪೇಳದ । ಸನ್ನುತಿಯನಾಂತೆಸೆವ ರಾಮಾಯಣದಕಥೆಯೊಳ ಗೆ ॥ ಮನ್ನಣೆವಡೆದು ರಂಜಿಪೀಕಥೆ । ಯನ್ನು ನರಸಿಂಹನು ರಚಿಸಿದ ನು । ಕನ್ನಡದೆ ವರಭಾಮಿನೀಷಟ್ಪದಿಯ ರೂಪದಲಿ ॥ ೩೭ ॥ ಇದು ನವೀನವೆನುತ ನಿರಾಕರಿ । ಸದೆ ಚಮತ್ಕೃತಿ ಲಕ್ಷಣ ರಸಗ । ಳದರೊ ಳಿಲ್ಲವೆನುತ್ತ ದೂಷಿಸದೆ ಸಲೆಕೋಪಿಸದೆ ॥ ಇದುಮಹೀಸುತೆಯ ಘನಕ ಥೆಯೆನು । ತ್ತಿದನು ನಿತ್ಯವುಮನವೊಲಿದು ಕೇ । ಳ್ವುದಿದರಲ್ಲಿ ವಿಚಾರವ ಸಿಡದೆ ಸತತ ಸಜ್ಜನರು ... ... ॥ ೩೮ ॥

ಇಂತು ಮೂವತ್ತನೆಯ ಅಧ್ಯಾಯು ಸಂಪೂರ್ಣವು.

ಪದ್ಯಗಳು ೧೬೦೩.

ಮೂವತ್ತೊಂದನೆಯ ಅಧ್ಯಾಯ.

ಸೂಚನೆ ॥ ಸುರತರಂಗಿಣಿಯ ನೋಲಿದರ್ಚಿಸಿ ।
ಧರಣಿಸುತೆ ಪತಿಯೊಡನೆ ಯಾತ್ರೆಯ ।
ವಿರಚಿಸುತ ನಡೆತಂದಳಾಚ್ಯವನಮುನಿ ಯಾಶ್ರಮಕೆ ॥

ಒಂದುದಿನ ಮೇಕಾಂತ ಭವನದೊ । ಳಿಂದುಮುಖಿ ಭೂಮಿಸುತೆ ಪತಿಗಿಂ । ತೆಂದು ನುಡಿದಳು ಚರಣಕಾನತಳಾಗಿ ಕೈಮುಗಿದು ॥ ಹಿಂದೆ ತಂದೆಯ ಮಾತ ನಾಲಿಸಿ । ಬಂಧು ಜಾಲವ ನುಳಿದು ಕಡುಜವ । ದಿಂದರಣ್ಯಕೆ ಪೋಗಿ ಗಂಗಾನದಿಯ ತೀರದೊಳು ॥ ೧ ॥ ನಾವೆ ಯೊಳು ಸತಿ ಸೋದರ ರೊಡನೆ । ನೀವು ಕುಳಿತಂದೈತರುತ್ತಿರೆ । ದೇವಗಂಗೆಯ ಮಧ್ಯಭಾಗದೊ ಳಂಜಿಕಂಪಿಸುತ ॥ ದೇವಿನಾಂ ವಂದಿಪೆನಿನಗೆ ನೀಂ । ಸಾವಕಾಶವ ನಾಗಿಸದೆ ಕರು । ಣಾವಲೋಕನ ದಿಂದೆ ಸೇರಿಸು ನಮ್ಮ ನಾಕಡೆಗೆ ॥ ೨ ॥ ವಿಪಿನ ವಾಸವನೆಲ್ಲ ಕಳೆಯುತ । ವಿಪುಲ ಸಂಮದದಿಂದೆ ನಗರಕೆ । ಸುಪಥನೊಳು ಪತಿದೇವರರೊಡನೆ ಪೋಗಿ ನಾಂಮತ್ತೆ ॥ ಸಪರಿ ವಾರದೊಳಲ್ಲಿ ಗೈತಂ । ದುಪಚರಿಸಿ ಪೂಜಿಸುವೆ ನಿನ್ನನು । ಚಪಲವಿಲ್ಲದೆ ನಿನಗೆ ಮಾಂಸಾದಿಗಳ ನರ್ಪಿಸುತ ॥ ೩ ॥ ನಿನಗೆ ಸಂತೋಷವನು ಮಾಡುವೆ । ನೆನುತ ಗಂಗಾನದಿಗೆ ನಮಿಸುತ । ವಿನಯದೆ ಹರಸಿಕೊಂಡಿಹೆನು ಲಂಕಾ ನಗರ ದಿಂದ ॥ ಧನದನ ವಿಮಾನದೊಳು ನಾನಾ । ದಿನದೊಳೈತರುವಾಗ ನನ್ನಯ । ಮನಕೆ ಬಾರದೆ ಹೋಯ್ತು ನೆನಪಿಗೆ ಬಂದಿಹುದ ದಿಂದು ॥ ೪ ॥ ಮನುಜಪತಿ ಕೇಳೆನ್ನಭೀಷ್ಟವ । ಮನಕೆ ತಂದೀಡೇರಿಸಲು ಬೇ । ಕೆನುತ ಬೇಡುವೆ ನಿನ್ನ ಪದಪಂಕೇಜ ಕಾನೆರಗಿ ॥ ಜನನಿ ಸೋದರ ಬಂಧು ಸುಹೃ । ಜ್ಜನರ ನೊಡಗೊಂಡು ತೆರಳುವುದಾ । ವಿನುತ ಗಂಗಾ ಸರಯು ಸಂಗಮ ಕೆನುತ ಬೇಡಿದಳು ॥ ೫ ॥ ಸತಿಯ ಮಾತನು ಕೇಳ್ದುರಾಘವ । ನತಿವಿನೋದವ ನಾಂತು ನಿನ್ನಭಿ । ಮತವ ನೀಡೇರಿಸುವೆ ನೆನ್ನುತ ಪೇಳ್ದು ಜಾನಕಿಗೆ ॥ ಅತಿ ಭರದೊಳಾ ಲಕ್ಷ್ಮಣಂಗತಿ । ಹಿತದೆಪೇಳ್ದನು ನಾಳೆ ಪುರದೊಳ । ರುತಿಹ ಜನಗಳ ಸಹಿತ ಯಾತ್ರೆಗೆ ಪೋಪೆ ನೆಂದೆನುತ ॥ ೬ ॥ ನೀನು ಬೇಕಾಗಿರ್ಪ ವ್ರುಗಳನು । ಸಾನು ನಯದಿಂದೊದಗಿ ಸುವುದು ನಿ । ದಾನ ಮಾಡದೆ ನಮ್ಮವು

ರದ ಸಮಸ್ತಮಾನವರು ॥ ಸಾನುರಾಗದೆ ನಮ್ಮೊಡನೆ ಗಂ । ಗಾನದಿಯ
ಬಳಿಗೆ ಬರುವಂದದೆ । ನೀನು ನೇಮಿಪುದೆಂದು ರಾಮನು ಪೇಳ್ದ ನನು
ಜನಿಗೆ ॥ ೭ ॥ ಅಣ್ಣ ನಾಜ್ಞೆಯ ನಾಂತು ಘನ ಸಂ । ಪನ್ನ ಮತಿ ಸಾ
ಮಿತ್ರಿ ಬೇಗನೆ । ತನ್ನ ಮನ ಬಂದಂದದೆ ಸಕಲ ಪರಿಕರಂಗಳನು ॥
ಮುನ್ನ ಸಿದ್ಧ ಗೊಳಿಸಿಯೆ ಪುರಜನ । ರನ್ನು ಯಾತ್ರೆಗೆ ನಾಳೆ ಹೊರ
ಡುವು । ದೆನ್ನುತ ತಿಳುಹಿ ಬಂದನಾರಘು ನಂದನನ ಬಳಿಗೆ ॥ ೮ ॥ ಚರ
ಣಕಾನತ ನಾಗಿ ಲಕ್ಷ್ಮಣ । ನುರುತರದ ಭಕ್ತಿಯನು ತಾನಾಂ । ತರು
ಹಿದನು ಕೇಳಣ್ಣ ರಾಘವ ನೀನು ನುಡಿದಂತೆ ॥ ಪರಿಪರಿಯ ವಸ್ತುಗಳ
ನಿಂದತಿ । ಭರದೊ ಳಣಿಮಾಡಿಸಿ ಸಮಸ್ತ ಜ । ನರನು ಯಾತ್ರೆಗೆ ನಾ
ಳೆಬರುವಂತರುಹಿಸಿವೆನೆನುತ ॥ ೯ ॥ ಮರುದಿನದೆ ರಘುನಾಥನೆದ್ದಾ । ತ
ರಣಿ ಮೂಡದ ಮುನ್ನ ನಿರ್ಮಲ । ತರದ ನೀರೊಳು ಮಿಂದು ವಿರಚಿಸಿ ನಿ
ತ್ಯಕರ್ಮಗಳ ॥ ಪುರದೊಳಿರುವ ಸಮಸ್ತ ಜನರನು । ಕರೆಯಿಸಿ ಕೊಳು
ತಮೇಲೆನಿಪ ಶುಭ । ಕರ ವರ ಮುಹೂರ್ತ ದೊಳು ಯಾತ್ರೆಗೆ ಪೋ
ಗಲನುವಾದ ॥ ೧೦ ॥ ಪುರದ ಕಾವಲಿ ಗಾಸುಮಂತ್ರನ । ನಿರಿಸಿ ನಗರ
ದಮಾನವ ರೊಡನೆ । ವರವಿಮಾನದೊಳಾ ಜನನಿಯರ ನೆಲ್ಲಕುಳ್ಳಿರಿ
ಸಿ ॥ ಕರಿಯ ಬೆನ್ನಿನ ಮೇಲೆ ಕೂಡಿಸಿ । ಧರಣಿ ಜೆಯನಾಬಳಿಕ ತಾನ
ತಿ । ಭರದೊಳೇರಿದ ನೊಂದು ಮದಕುಂಜರವ ನಾರಾಮ ॥ ೧೧ ॥ ಪೊ
ಡವಿ ಯಾಣ್ಮನಹ ರಘುಭೂವರ । ನೊಡನೆ ಗಂಗಾಸರಯು ನದಿಗಳ ।
ರಡರಸಂಗಮ ದೆಡೆಗೆ ಬಂದನು ರಾಜ ವಿಭವದಲಿ ॥ ಕಡು ಜವದೊಳಾ
ಸೀತೆ ಪೊರಮ । ಟ್ಟಡಿಗಡಿಗೆ ವನಸಿರಿಯ ನೋಡುತ । ನಡೆದಳು ಸಖೀ
ಜನಗಳ ಸಹಿತ ಯಾತ್ರೆ ಗೆಯ್ವುದಕೆ ॥ ೧೨ ॥ ನುಡಿದರು ಪಲತೆರದ ಬಿ
ರುದುಗಳ । ನಡಿಗಡಿಗೆ ವಾದ್ಯಂಗಳೆಲ್ಲವ । ಹೊಡಿಸಿದರು ಹೊಗಳದರು
ಮುಂಗಡೆ ವಂದಿ ಮಾಗಧರು ॥ ಒಡೆಯನಿಗೆ ಬೆಳುಗೊಡೆಯ ನಿಕ್ಕಿದ ।
ರೆಡಬಲಗಳೊಳು ಚಾಮರ ಗಳನು । ಪಿಡಿದು ಬೀಸಿದ ರಾಡಿದರು ಗ
ಣಿಕೆಯರು ನಾಟ್ಯವನು ॥ ೧೩ ॥ ಬಂದು ಹೊಕ್ಕನು ಕಂಗೊಳಿಪ ವನ ।
ಮಂದಿರವನಾ ಸತಿಸಹಿತ ರಘು । ನಂದನನಖಿಳ ಮಾನವರ ನೊಲಿಸು
ತ್ತ ಶೀಘ್ರದಲಿ ॥ ಬಂದ ಭೂಸುರ ರನ್ನು ಭೋಜನ । ದಿಂದೆ ತುಷ್ಟಿ ಪ
ಡಿಸುತ ಕೊಟ್ಟನು । ಚಂದನ ಕುಸುಮ ದಕ್ಷಿಣಾ ತಾಂಬೂಲ ಗಳ ನೊ
ಲಿದು ॥ ೧೪ ॥ ಬಂಧು ಮಿತ್ರರ ಕೂಡೆ ಸಂತಸ । ದಿಂದೆಭೋಜನ ವನ್ನು
ಮಾಡುತ । ಸುಂದರಾಂಗನೆ ಸೀತೆಸಹಿತಾ ರಾಘವೇಶ್ವರನು ॥ ಅಂದು

ವೇದ ಪುರಾಣ ಶಾಸ್ತ್ರಗ | ಳಂದವನು ಕೇಳುತ್ತ ಸಂಧ್ಯಾ | ವಂದನಾದಿ ಗಳೆಸಗಿ ಜಾನಕಿ ಸಹಿತ ನಿದ್ರಿಸಿದ ‖ ೧೫ ‖ ಹರುಷ ದಿಂದೆರಡನೆಯ ದಿನ ದಿಂ | ತಿರುತ ವನ ಮಂದಿರದೊಳಾ ರಘು | ವರನು ಬಳಿಕಾ ಮೂರ ನೆಯ ದಿನ ದುದಯ ಕಾಲದೊಳು ‖ ಪುರದ ಮಾನವ ರೆಲ್ಲರೊಡನತಿ| ಭ ರದೊಳಾ ವಿಪಿನದೊಳು ಬಂದನು | ಧರಣಿ ಜಾತೆಗೆ ತೋರಿಸುತ ಸಕಲ ವಿಭವಂಗಳನು ‖ ೧೬ ‖ ಮುಂದಕೆಬರುತ ಪುರದಮಾನವ | ರಿಂದೆರಾಘವ ನೊಂದು ತಾಣದೊ | ಳೊಂನು ದಿನ ವೊಂದೆಡೆಯೊ ಳೆರಡುದಿನಗಳು ವೊಂದುಕಡೆ ‖ ಚಂದದಿಂದಲೆ ಮೂರು ದಿನವಿರು | ತೊಂದು ತಿಂಗಳ ತನಕ ಪಯಣವ | ನಂದೆಸಗಿ ಮುದ್ಗಲ ಮುನಿಪ ನಾಶ್ರಮಕೆ ನಡೆತಂ ದ ‖ ೧೭ ‖ ಅರಸಿ ಯೊಡನಾ ಮುದ್ಗಲ ಮುನೀ | ಶ್ವರನಡಿಗೆರಗಿ ರಾಘವ ನು ಪರಿ | ಪರಿಯೊಳಾತನ ನೊಲಿದು ಪೂಜಿಸಿ ಕೂಡೆ ಮನ್ನಿಸುತ ‖ ಹ ರಿವ ಸರಯೂ ಜಾಹ್ನವಿಗಳಾ | ಚರಿತೆಯಾಲಿಸಿ ದದ್ರಿನಾಮಕ | ಪುರವ ಕಲ್ಪಿಸಿ ಮುನಿಗೆ ಕೊಟ್ಟನು ವಸಿಸಿನೀವೆನುತ ‖ ೧೮ ‖ ಕರೆದು ಸೀತೆಯ ನಿಂತು ರಘು ಭೂ | ವರನು ಪೇಳಿದ ನೆಲೆ ಮಹೀಸುತೆ | ಪುರದ ನಾರಿ ಯರೆಲ್ಲರ ನೊಲಿಸು ತತ್ತೆಯರ ಕೂಡಿ ‖ ಪರಮ ಪಾವನ ವೃದ್ಧಗಂಗಾ | ಸರಯುಗಳ ಸಂಗಮಕೆ ಸಾರ್ದೀ | ಗುರು ಜನಂಗಳು ಪೇಳುವಂದದೆ ನೀನು ಪೂಜಿಸಬಾ ‖ ೧೯ ‖ ಬಳಿಕ ನೀನುಂನಾನು ಮಾಮು | ದ್ಗಲ ಮು ನಿಪ ನಾಶ್ರಮ ದೊಳಗಿರೆ ಕಂ | ಗೊಳಿಸು ತಿರ್ಪಮರಾಪಗಾಸರ ಯುಗ ಳಸಂಗಮದೆ ‖ ನಲಿವು ಗಂಗೆಯ ನರ್ಚಿಸುವ ಕೇ | ಳೆಲೆ ಮಹೀಸುತೆ ಯೆನುತ ಪೇಳ್ದನ | ಕುಲ ಲಲಾಮನು ಕಳುಹಿ ಕೊಟ್ಟನು ಕೂಡೆ ಮ ಡದಿಯನು ‖ ೨೦ ‖ ಜನಕಸುತೆ ಪೂಜೋಪ ಕರಣ ಗ | ಳ ನಣಿಮಾಡಿ ಸಿಕೊಂಡು ರಂಜಿಸ | ಕನಕ ಪಾತ್ರೆಯೊಳಿರಿಸಿ ಕೊಳ್ಳುತ ಬಹುಳ ಶೀ ಘ್ರದಲಿ ‖ ಧನದನ ವಿಮಾನವ ನಡರಿದಳು | ವಿನಯ ದಿಂದತ್ತೆಯರ ಸಹಿ ತಿನ | ಯನ ಪದಕಮಲವನ್ನು ಜಾನಿಸಿ ತನ್ನಮನದೊಳಗೆ ‖ ೨೧ ‖ ನಿಮಿಷ ಮಾತ್ರದೊ ಳಾವಿಮಾನವು | ಸುಮನಸರಮಾರ್ಗ ದೊಳುನಡೆ ತಂ | ದಮಲ ಗಂಗಾಸರಯುಗಳ ಸಂಗಮಕೆ ಸರಿಯಾಗಿ ‖ ಕ್ರಮದೆ ಇ ಳಾಗಸ ದಿಂದಿಳಿಯಲೊಡ | ನಮಿತವೋದದೆ ಮಹಿಗಿಳಿದ ಳಾ | ಕ್ಷಮೆ ಯ ಸುತೆ ಯಿಕ್ಕೆಲವೆ ಕೈಗೊಡುತಿರಲು ಗೆಳತಿಯರು ‖ ೨೨ ‖ ಗಂ ಗೆಯಬಳಿಗೆ ಬಂದು ವಂದಿಸಿ | ಮಂಗಳಾಂಗನೆ ಸೀತೆಕೊಟ್ಟಳು | ಗಂ ಗೆಗಾಮೊರ ಬಾಯಿಸಂಗಳ ನಧಿಕಭಕ್ತಿಯಲಿ ‖ ಕಂಗೊಳಿಪ ಗಂಗಾಸರ

ಯುಗಳ । ಸಂಗಮದೊಳು ಸ್ನಾನವ ನೆಸಗಿ । ಗಂಗೆಯನು ಪೂಜಿಸಿದ
ಳು ಪುರೋಹಿತನ ನೇಮದಲಿ ॥ ೧೩ ॥ ಪರಿಪರಿಯ ಭಕ್ಷ್ಯಂಗಳನು ಪ
ರಿ । ಪರಿಯ ಪಕ್ವಾನ್ನಂಗಳನು ಪರಿ । ಪರಿಯ ಮಾಂಸಂಗಳನು ಸಕ
ಲವಿಧದ ಫಲಂಗಳನು ॥ ಪರಿಪರಿಯ ಮದ್ಯಂಗಳನು ತರ । ತರದಕುರಿ
ಕೋಣಂಗಳನು ತರ । ತರದ ಚಿತ್ರಾನ್ನಗಳ ಬಲಿಗೊಟ್ಟರ್ಚಿಸಿದ
ಳಾಕೆ ॥ ೧೪ ॥ ಪರಿಮಳ ಸುಗಂಧ ಕುಸುಮಂಗಳ । ನುರುತರದ
ತಾಂಬೂಲಗಳ ನಾ । ವರಸುದಕ್ಷಿಣೆಗಳನು ಸರ್ವಾಭ್ನ ಭರಣಗಳನು ॥
ತೆರತರದ ವಸ್ತ್ರಂಗಳನು ಶುಭ । ಕರದ ಮುಕ್ತಾ ಹಾರಗಳನಾ ।
ಧರಣಿಸುತೆ ಗಂಗಾನದಿಗೆ ಕೊಟ್ಟರ್ಚಿಸಿದ ಳೊಲಿದು ॥ ೧೫ ॥ ಪತಿ
ಪರಾಯಣೆ ಯರೆನಿಸುವರುಂ । ಧತಿಮೊದಲಹ ಸುವಾಸಿನಿ ಜನರ ।
ನತಿವಿನಯ ದಿಂದರ್ಚಿಸುತಧಿಕ ಭಕ್ತಿ ಭಾವದಲಿ ॥ ಕ್ಷಿತಿಸುತೆ ವಸಿ
ಷ್ಠಾದಿ ಮುನಿಗಳ । ವಿತತಿಗಂದು ಸುಭೋಜ ನಂಗಳ । ಹಿತದೆತಾನಾ
ಗಿಸಿದ ಳಾನಂದವನು ತಾಳುತ್ತ ॥ ೧೬ ॥ ಅಂದಮೆನೆ ಮೃಷ್ಟಾನ್ನ
ಪಾನಗ । ಳಂದೆ ವಿಪ್ರರ ನೆಲ್ಲ ದಣಿಸುತ । ಚಂದನ ಕುಸುಮ ದಕ್ಷಿಣಾ
ತಾಂಬೂಲ ಗಳನಿತ್ತು ॥ ಬಂದ ಜನರನು ತೃಪ್ತಿ ಪಡಿಸುತ । ಬಂದಳು
ಪವಾಸದೊಳ ಗಾರಘು । ನಂದನ ನೆಡೆಗೆ ಸೀತೆಕುಳಿತಾ ವರವಿಮಾನದ
ಲಿ ॥ ೧೭ ॥ ಜನನಿ ಕೌಸಲ್ಯೆ ಮೊದಲಾಗಿಹ । ವನಿತೆಯರ ಮಧ್ಯದೊಳು
ಸತಿಸಹಿ । ತಿನಕುಲೋತ್ತಮನಾ ಪುರೋಹಿತ ರೊಡನೆ ಶೀಘ್ರದಲಿ ॥
ವಿನುತಿ ಪಡೆದನ ವೀನಗಂಗಾ । ಘನಸರಯು ಗಳ ಸಂಗಮಕೆ ಬಂ ।
ದನತಿವಿಭವದೊ ಳೆಲ್ಲರಿಗೆ ಸಂತಸವ ನಾಗಿಸುತ ॥ ೧೮ ॥ ಮಡದಿ ಮಾ
ಡಿದ ಪೂಜೆಗಿಂತಲು । ಪೊಡವಿ ಯಾಣ್ಮನು ರಾಘವನು ನೂ । ರ್ಮಡಿ
ಯಧಿಕ ಮೆಂಬಂತೆ ಗಂಗೆಯ ನಧಿಕ ಭಕ್ತಿಯಲಿ ॥ ಒಡನೆ ಪೂಜಿಸಿ ನಲ
ವಿ ನಿಂದಡಿ । ಗಡಿಗೆ ದಕ್ಷಿಣೆ ಸಹಿತ ಕೊಟ್ಟನು । ಸಡಗರದೆ ಗಜ
ತುರಗ ಗೋರಥ ಗಳನು ವಿಪ್ರರಿಗೆ ॥ ೧೯ ॥ ನೆರೆದ ವಿಪ್ರೋತ್ತಮರಿ
ಗಾರಘು । ವರನು ಸಾವಿರ ಗಟ್ಲೆ ಯಾಗಿಯೆ । ವರಸು ಭೋಜನ ಗಳ
ನು ಮಾಡಿಸಿ ತನ್ನ ನಂಟರನು ॥ ಕರೆದು ಮನ್ನಿಸಿ ಹತ್ತಿರದೆ ಕು । ಳ್ಳಿರಿ
ಸಿ ಕೊಂಡೂಟವನು ಮಾಡಿದ । ನರಸಿಯ ನೊಲಿಸು ತೊಡನೆ ಬಹು ಸಂ
ತೋಷವನು ತಾಳ್ದು ॥ ೨೦ ॥ ಅಲ್ಲಿ ಒಂಬತ್ತು ದಿನ ತಾನಿರು । ತೆಲ್ಲರಿಂದೆ
ರಘುವರನ ವನಿಯೊ । ಳೆಲ್ಲ ಯಾತ್ರೆಗಳನ್ನು ಮಾಡಲು ಬಗೆದು ಚಿತ್ತದ
ಲಿ ॥ ಎಲ್ಲ ವಸ್ತುಗಳನು ನಗರದಿಂ । ದಲ್ಲಿಗೆ ತರಿಸಿ ಕೊಂಡು ಮನುಜರ ।

ನೆಲ್ಲ ಮನ್ನಿಸಿ ತನ್ನ ಸತಿಸಹಿತಲ್ಲಿ ಮಲಗಿದನು ‖ ೩೧ ‖ ಪಿರಿಯ ರೂಪವ ತಾಳುವಂತೆಯು । ಕಿರಿಯ ರೂಪವ ನೈದುವಂತೆಯು । ವರವಿಮಾನಕೆ ವರವನಿತ್ತನು ಮುದದೆ ರಾಘವನು ‖ ಧರಿಸಿತು ವಿಮಾನವು ಭರದೆಹ । ನ್ನೆರಡು ಗಾವುದ ದುದ್ದವಾಗಿಯು । ಮೆರಡು ಗಾವುದ ದಗಲ ಮಾಗಿಯು ವಿಪುಲ ರೂಪವನು ‖ ೩೨ ‖ ಮಾನವೇಂದ್ರನು ಸೀತೆಸಹಿತ ವಿ। ಮಾನವನು ತಾನೇರಿದನು ಸುಂ । ಮಾನದಲಿ ಹಿತ ಬಂಧುಮಿತ್ರ ಪುರೋಹಿತರ ಕೂಡಿ ‖ ಬಾನೆಡೆಯೊಳತಿ ಭರದೆ ಬರುತ ವಿ । ಮಾನ ಪಾದಿನ ದಲ್ಲಿ ಬಂದುದು । ಸಾನು ರಾಗದೊಳಾ ಪ್ರಯಾಗ ಕ್ಷೇತ್ರಕಲ್ಲಿಂದೆ ‖ ೩೩ ‖ ಇಳಿದು ಜಾನಕಿ ಯೊಡನೆ ಸಂತಸ । ದೊಳು ವಿಮಾನವ ನಾರಘು ವರನು । ನಲಿದು ಸೇವಿಸುತಾಪ್ರಯಾಗ ಕ್ಷೇತ್ರ ವನು ಸಾದರ ‖ ಬಳಿಕವರ ಗಂಗಾತ್ರಿವೇಣೀ । ಗಳೆರಡರ ಸಂಗಮಕೆ ಬಂದನು । ತಳುವದೈತಹ ಸಕಲಬಾಂಧವ ಮಿತ್ರ ಜನಸಹಿತ ‖ ೩೪ ‖ ಸೇರಿಗಂಗಾ ವೇಣಿಸಂಗಮ । ತೀರವನು ಪರಮಾ ದರದೊಳಾ । ಧಾರಿಣೀ ಸುತೆ ನಾರಿಕೇಳದ ಬಾಯಿನಂಗಳನು ‖ ನೀರಿನೊಳ ಗರ್ಪಿಸುತ ಸಾಲಂ । ಕಾರ ಜಡೆಯೊಳು ಕತ್ತರಿಸಿ ರಘು । ವೀರ ನಪ್ಪಣೆ ಯಿಂದ ಕೊಟ್ಟಳು ನಾಲ್ಕು ಬೆರಳನಿತು ‖ ೩೫ ‖ ಅನುಜ ರೊಡನಾಬಳಿಕ ತಾನು ವ । ಪನವ ನಾಗಿಸಿಕೊಂಡು ರಘುನಂ । ದನನು ಪೋಷ್ಯವಮಾಡಿ ಯಾದಿನ ಬಳಿಕ ಪಾರನೆಯ ‖ ದಿನದಿ ತೀರ್ಥ ಶ್ರಾದ್ಧವ ನೆಸಗಿ । ಜನರ ನೊಲಿಸುತ ಮಾಘ ಮಾಸದ । ಕೊನೆಯ ವರಿಗಿರು ತಷ್ಟ ತೀರ್ಥಂಗಳಿಗೆ ನಡೆತಂದ ‖ ೩೬ ‖ ಅಲ್ಲಿ ದಕ್ಷಿಣೆ ಸಹಿತರಾಘವ । ನೆಲ್ಲದಾನಂಗಳನು ಕೊಟ್ಟು ಸ । ಮುಲ್ಲಸದೊಳಕ್ಷಯವ ಟಾವನಿಜ ದೆಡೆ ಗೈತಂದು ‖ ಎಲ್ಲ ರೊಡನಾ ಮರವ ಪೂಜಿಸು । ತಲ್ಲಿಕಂಗೊಳಿಪ ವರವಸ್ತ್ರಗ । ಳೆಲ್ಲವನು ಕೊಟ್ಟಾ ತ್ರಿವೇಣಿಯ ನೊಲಿದು ಪೂಜಿಸಿದ ‖ ೩೭ ‖ ಧನಕನಕ ವಸನಗಳ ನೀಯುತ । ಮಣಿದುಪೂಜಿಸಿ ತೀರ್ಥ ವಾಸಿಗ । ಳೆನಿಪ ಪಾರೋಹಿತರ ನವರಾಜ್ಞೆಯನು ತಾನಾಂತು ‖ ಘನ ವಿಮಾನದೊಳು ಕುಳಿತೆಲ್ಲಾ । ಜನಗಳೊಡನಾ ರಾಘವೇಂದ್ರನು । ವಿನುತ ವಿಂಧ್ಯಾರಣ್ಯ ಕೈತಂದಿಳಿದ ನಲ್ಲಿಂದ ‖ ೩೮ ‖ ಬಂದು ದುರ್ಗಾ ಸನ್ನಿಧಿಗೆ ರಘು । ನಂದನನು ಸತಿಸಹಿತ ಮಿಂದಾ । ನಂದದಿಂದೆಸಗಿದ ನಖಿಳ ದಾನಂಗಳನು ಕೂಡೆ ‖ ಅಂದ ಮಾಗಿಹ ಕುಸುಮ ಸಂಚಯ । ದಿಂದೆಪೂಜಿಸಿ ಶಾಂಭವಿಯನೈ । ತಂದನು ವಿಮಾನ ದೊಳು ಕಾಶಿಗೆ ಬಂಧುಗಳಸಹಿತ ‖ ೩೯ ‖ ಮನುಕುಲೇಂದ್ರನು ಯಾತ್ರೆಗೆಂದೆ

ನು । ತ್ರಿನಿಯಮಳೊಡನೈತಂದುದ ನರಿತು । ವಿನಯ ದೊಳದಿರುಗೊಳಲು
ಬಂದನು ಪರನುರಾಘವನ ॥ ತನಗಿದಿರುವಂದಾ ಶಿವನಕಂ । ಡಿನಕುಲೋ
ತ್ತಮನೆರಗಿ ಕೈಕೊಂ । ಡನು ಪದೆದುಶಂಕರನು ನೀಡಿದುಪಾಯನಂಗ
ಳನು ॥ ೪೦ ॥ ಪರನಪೂಜೆಸಿ ರಾಘವನು ಶಂ । ಕರನೊಡನೆ ನಡೆತಂದ
ನಂದಾ । ದರದೆ ಮಣಿಕರ್ಣಿಕೆಗೆ ಕಾಶೀಪುರವನೀಕ್ಷಿಸುತ ॥ ಮೆರೆವಚ
ಕ್ರಾಭಿದ ಸುತೀರ್ಥದೊ । ಳರಸಿಯೊಡನಾ ಶ್ರೀಫಲವನಾ । ದರದೆಕೊ
ಟ್ಟವರೊಳು ಸಚೇಲಸ್ನಾನವನೆಸಗಿದ ॥ ೪೧ ॥ ರವಿಕುಲೇಂದ್ರನು ನಿತ್ಯ
ಯಾತ್ರೆಯ । ಜವದೊಳಂದೆಸಗುತ್ತ ಲುಪವಾ । ಸವನು ತಾನಾಗಿಸುತ
ತೀರ್ಥಶ್ರಾದ್ಧವನುಮಾಡಿ ॥ ಅವನಿತಲದೊಳ ಗುನ್ನತಿವಡೆದ । ಸೆವ ವಿ
ನುತ ಕಾಶಿಯೊಳು ಕಂಗೊಳ । ಸುವ ಸಕಲಪುಣ್ಯಸ್ಥಳಂಗಳಿಗಾಗಿನಡೆ
ತಂದ ॥ ೪೨ ॥ ಮುನಿನುತಾಂತರ್ಗೃಹದಯಾತ್ರೆಯ । ಘನಮಹಾಯಾತ್ರೆ
ಯಘನಾಶಕ । ವೆನಿಪೆರಡು ಮಾನಸಿಕಯಾತ್ರೆಗಳನ್ನು ವಿರಚಿಸುತ ॥
ಜನರದುರಿತಂಗಳನು ಪೋಗಿಪು । ದೆನಿಪನಾಲ್ವತ್ತೆರಡು ಲಿಂಗದ । ವಿನು
ತವರಯಾತ್ರೆಯನು ತಾನಾಚರಿಸಿನಡೆತಂದ ॥ ೪೩ ॥ ಅಷ್ಟಲಿಂಗದಯಾ
ತ್ರೆಯನು ತ । ನ್ನಿಷ್ಟಸತಿಸಹಿತಾಚರಿಸಿ ಯು । ತ್ಕೃಷ್ಟಷಟ್ಪಂಚಾ
ಶತು ಗಣಪತಿಗಳಯಾತ್ರೆಯನು ॥ ಅಷ್ಟವಿಧ ಭಕ್ತಿಯೊಳು ಮಾಡು ।
ತ್ತಷ್ಟಭೈರವಯಾತ್ರೆ ಸುಚತು । ಷ್ಷಷ್ಟಿಯೋಗಿನಿಯಾತ್ರೆಗಳನಾ
ರಾಮನೆಸಗಿದನು ॥ ೪೪ ॥ ಮೆರೆವನವದೇವೀಸುಯಾತ್ರೆಯ । ನುರೆ ವಿನು
ತಿವಡೆವಷ್ಟದಿಕ್ಪಾ । ಲರ ವಿಮಲಯಾತ್ರೆಯನು ನಲವಿಂದೆಸಗಿರಾಘವ
ನು ॥ ವರ ನವಗ್ರಹಯಾತ್ರೆಯ ನೊಲಿದು । ವಿರಚಿಸುತ ಸತಿಯೊಡನೆ
ಬಂದನು । ಧರದೊಳಾಕ್ಷೇತ್ರ ಪ್ರದಕ್ಷಿಣಯಾತ್ರೆಗೆಂದೆನುತ ॥ ೪೫ ॥
ಬಂದು ಪಂಚಕ್ರೋಶಯಾತ್ರೆಯ । ನಂದುಮಾಡುತ ಸೀತೆಸಹಿತಾ ।
ನಂದವನು ತಾಳ್ದಂತು ಹದಿನಾಲ್ಕುಬಗೆ ಯಾತ್ರೆಗಳ ॥ ಚಂದದಿಂದಾಗಿ
ಸುತ ರಾಮನು । ಬಂದುವರುಣಾತೀರದೊಳು ನಲ । ವಿಂದೆರಾಮೇ
ಶ್ವರದಲಿಂಗವನು ಪ್ರತಿಷ್ಠಿಸಿದ ॥ ೪೬ ॥ ಮನುಕುಲೇಂದ್ರನು ತನ್ನ ಪೆಸ
ರೊಳು । ವಿನುತಕಾಶೀಪತ್ತನದ ಪಾ । ವನಮೆನಿಪ ವಾಯುವ್ಯಭಾಗ
ದೊಳೊಂದು ತೀರ್ಥವನು ॥ ವಿನುತಿವೆತ್ತೆಸೆವಂತೆನಿರ್ಮಿಸು । ವನಿತರೊಳ
ಗೈತಂದ ನಲ್ಲಿಗೆ । ಹನುಮನಾ ರಾಘವನುಬಂದುದನರಿತು ಸತಿಸಹಿತ ॥
॥ ೪೭ ॥ ಬಂದು ಸೀತಾರಾಮರಿಬ್ಬರಿ । ಗಂದಧಿಕಭಕ್ತಿಯಲಿ ಮಾರುತ ।
ನಂದನನೆರಗಿ ಚಂದ್ರಶೇಖರನನ್ನು ಪೂಜಿಸುತ ॥ ಬಂದುತೀರ್ಥವನಲ್ಲಿಕ

ಲ್ಪಿಸು । ತೊಂದುಘಟ್ಟವ ಕಟ್ಟಿದನು ನಲ । ವಿಂದೆ ಹನುಮದ್ಘಟ್ಟವೆನು
ತದು ವಿನುತಿವೆತ್ತಿಹುದು ॥ ೪೮ ॥ ಅದಕೆ ಶಾಶ್ವತಮಾಗಿರಲೆನುತ । ಪದೆ
ದುರಾಘವ ನೊಂದುವರವನೊ । ಲಿದುಕೊಡುತ ತಾನೊಂದುತೀರ್ಥವನ
ಲ್ಲಿ ಕಲ್ಪಿಸುತ ॥ ಸದಮಲವೆನಿಪ ಪಂಚಗಂಗೆಯೊ । ಳೊದವಿದ ಹರುಷ
ದಿಂದೆ ತಾನೆಸ । ಗಿದನು ಕಾರ್ತಿಕಮಾಸದ ಸ್ನಾನವನು ಸತಿಸಹಿತ ॥
॥ ೪೯ ॥ ಒಂದುವರ್ಷದವರೆಗು ಮಾರಘು । ನಂದನನು ಜಾನಕಿಸಹಿತ
ನಲ । ವಿಂದೆ ಕಾಶೀನಗರದೊಳು ವಾಸಿಸುತ ಭಕ್ತಿಯಲಿ ॥ ಒಂದುತೀರ್ಥ
ವರಚಿಸಿ ಮಹದಾ । ನಂದವನು ತಾಳ್ದಲ್ಲಿಮಾಡಿದ । ನೊಂದುಳಿಯದಂತ
ಖಿಳ ಯಾತ್ರೆಗಳನ್ನು ನೇಮದಲಿ ॥ ೫೦ ॥ ಧನಕನಕ ಮಣಿಮೌಕ್ತಿಕಾ
ದಿಗ । ಳನಮಲಾಭರಣಂಗಳನು ಮೋ । ಲೆನಿಸಿತೋರುವ ತುರಗಕರಿರಥ
ಗೋಮಹಿಷಗಳನು ॥ ಘನತರದ ದಿವ್ಯವಸನಗಳನು । ವಿನುತ ನವಧಾ
ನ್ಯಂಗಳನು ಕೊ । ಟ್ಟನು ರಘುವರನು ತೀರ್ಥವಾಸಿಗಳೆನಿಪವಿಪ್ರರಿಗೆ ॥
॥ ೫೧ ॥ ಸವಿವಡೆದ ಷಡ್ರಸಗಳನುತಾ । ಳ್ದಿಸೆವ ವರಮೃಷ್ಟಾನ್ನಗಳ
ನಾ । ವಿವಿಧ ಭಕ್ಷ್ಯಂಗಳನು ಮಾಡಿಸಿ ದಿನದಿನಂಗಳಲಿ ॥ ಅವನಿದೇವತೆ
ಗಳನು ತಾಂ ಪ್ರತಿ । ದಿವಸ ತೃಪ್ತಿಪಡಿಸುತ ಕೊಟ್ಟನು । ವಿವಿಧ ಫಲ
ತಾಂಬೂಲಚಂದನ ಕುಸುಮಗಳನೊಲಿದು ॥ ೫೨ ॥ ಕಂಗೊಳಪಪರ್ಯಂ
ಕಗಳನುರೆ । ಸಿಂಗರವೆನಿಪ ವಸ್ತುಗಳನು । ತುಂಗದರ್ಪಣ ದೀಪಭ
ವನಂಗಳನುತಾ ನಿತ್ತು ॥ ಮಂಗಳಾಂಗನೆ ಸೀತೆಸಹಿತತಿ । ಮಂಗಳಕರ
ವ್ರತಗಳನು ರಘು । ಪುಂಗವನೆಸಗಿ ತುಷ್ಟಿವಡಿಸಿದನಾ ಪುರಜನರನು
॥ ೫೩ ॥ ಪ್ರತಿದಿನವು ಭಿಕ್ಷೆಗಳನಾಗಿಸಿ । ಯತಿಗಳನು ಸಂತುಷ್ಟಿವಡಿ
ಸಿದ । ನತಿಶಯದ ಕೌಪೀನ ದಂಡಕಮಂಡಲಂಗಳನು ॥ ನುತಿವಡೆದ
ಕೃಷ್ಣಾಜಿನಗಳನು । ಹಿತದೊಳಿತ್ತು ರಘುವರನು ರೆಮೆರೆ । ಮತಿಹಕಾ
ವೀ ಶಾಠೆ ಪಾದುಕೆಗಳನು ಕೊಡುತೊಲಿದು ॥ ೫೪ ॥ ಅವರಿಗೆ ಮಠಂ
ಗಳನು ಕಟ್ಟಿಸಿ । ರವಿಕುಲೇಂದ್ರನು ಪೀಠಗಳನತಿ ॥ ಜವದೊಳೀಯು
ತ ಭಿಕ್ಷುಕರ ಸೇವೆಯನು ಮಾಳ್ಪುದಕೆ ॥ ತವಕದಿಂದಲೆ ನೇಮಿಸಿದ
ನಾ । ಸುವಿನಯಮನಾಂತಿರುವ ಸೇವಕ । ನಿವಹವನು ವಿದ್ಯಾರ್ಥಿಗಳನಾ
ಯಾಮಠಂಗಳಲಿ ॥ ೫೫ ॥ ವಿನುತವಿದ್ಯಾಶಾಲೆಗಳನಾ । ಮನುಕುಲೇಂ
ದ್ರನು ಕಾಶಿಯೊಳು ತಾ । ನನುಗೊಳಿಸಿ ವರಪುಸ್ತಕದ ಭಂಡಾರಗಳನಿರಿ
ಸಿ ॥ ವಿನುತರಹವೈದ್ಯರನು ನೇಮಿಸು । ತನುದಿನವು ಮನುಜರಿಗೆ ವರ
ಘೋ । ಜನವನಾಗಿಪ ಬಹುಳಸತ್ರಂಗಳನು ಕಲ್ಪಿಸಿದ ॥ ೫೬ ॥ ಒಂ

ದು ವತ್ಸರ ಕಾಶಿಯೊಳಿರುತ । ಬಂಧುಗಳೊಡನಪರಿಮಿತ ಬಕುತಿ ।
ಯಿಂದಖಿಳ ದೇವಾಲಯಂಗಳನಾ ರಘೂದ್ವಹನು ॥ ಅಂದು ಜೀರ್ಣೋ
ದ್ಧಾರವಮಾಡಿಸಿ । ಕುಂದುನಿಂದೆಗಳೆಂದಿಗು ನಡೆಯ । ದಂದದಲಿ ಪೂಜೆಗ
ಳ ನಾಗಿಸುವಂತೆಮಾಡಿದನು ॥ ೫೭ ॥ ಪರಮಪಾವನವೆನಿಪ ಕಾಶೀ ।
ಪುರದೊಳಾ ರಘುವರನು ನಿತ್ಯವು । ಹರನಪೂಜಿಸಿ ಬ್ರಹ್ಮಚರ್ಯ ವ್ರತ
ವ ಕೈಕೊಂಡು ॥ ಸುರರುಮೆಚ್ಚುವ ಸತ್ಯಭಾಷಣ । ದುರುತರದನಿಯ
ಮವನುಹೊಂದುತ । ವಿರಚಿಸಿದನಾ ತೀರ್ಥವಾಸವ್ರತವ ನತಿಹಿತದೆ
॥ ೫೮ ॥ ಪುರದಮಧ್ಯದೊಳೆಸೆವ ವಿಶ್ವೇ । ಶ್ವರನನರ್ಚಿಸಿ ಯನ್ನಪೂರ್ಣೆ
ಯ । ಚರಣಕಾನತನಾಗಿ ಧುಂಡಿವಿನಾಯಕಂಗೆರಗಿ ॥ ಧರಣಿನಂದನೆಯೊ
ಡನೆ ರಾಮನು । ನೆರೆವಿಲೋಕಿಸಿ ದಂಡಪಾಣಿಯ । ನುರುತರದ ವರಕಾ
ಲಭೈರವನ ನೊಲಿದರ್ಚಿಸಿದ ॥ ೫೯ ॥ ಬಾರಿಬಾರಿಗೆ ನೋಡಿನೋಡುತ ।
ವಾರಣಾಸೀಪುರದೊಳಾ ರಘು । ವೀರನಾ ವಿಶ್ವೇಶ್ವರಸ್ವಾಮಿಯನು ಭ
ಕ್ತಿಯಲಿ ॥ ಪಾರಮಾರ್ಥಿಕದಿಂದೆ ಪೂಜಿಸಿ । ಚಾರುಗಂಗಾನದಿಯ ದಕ್ಷಿ
ಣ । ತೀರಕೆ ಸಕಲಬಾಂಧವರೊಡನೆ ಬಂದನಲ್ಲಿಂದ ॥ ೬೦ ॥ ಘನವಿಮಾ
ನದೊಳಲ್ಲ ನಂಟರೊ । ಡನೆ ಕುಳಿತುಕೊಂಡಾ ರಘುವರನ । ವನಿಜೆಯ
ನೊಲಿಸುತಂಬರಪಥದೊಳಂದು ಶೀಘ್ರದಲಿ ॥ ವಿನುತ ಗಂಗಾನದಿಯುವರ
ದ । ಕ್ಷಿಣಕೆಬರುತಾ ಕರ್ಮನಾಶನ । ವೆನು ನುತಿಸುತಾ ಚ್ಯವನಮುನಿ
ಯಾಶ್ರಮಕೆಸಡೆತಂದ ... ... ॥ ೬೧ ॥

ಇಂತು ಮೂವತ್ತೊಂದನೆಯ ಅಧ್ಯಾಯ ಸಂಪೂರ್ಣವು
ಪದ್ಯಗಳು ೧೬೬೮.

ಮೂವತ್ತೆರಡನೆಯ ಅಧ್ಯಾಯ.

ಸೂಚನೆ ॥ ಧರಣಿಮಂಡಲದೊಳತಿ ಪಾವನ ।
ತರವೆನಿಪ ಪುಣ್ಯಸ್ಥಳಗಳಿಗೆ ।
ತೆರಳಜಾನಕಿ ಯಾತ್ರೆಯನುಮಾಡಿದಳು ಪತಿಸಹಿತ ॥

ಚ್ಯವನಮುನಿಯಾಶ್ರಮಕೆ ನಡೆತಂ । ದವನಿಜೆಯ ಸಹಿತಲ್ಲಿಯಿಂ
ದಾ । ರವಿಕುಲೋತ್ತಮನಾ ಮುನೀಂದ್ರನಿಗೆರಗಿ ಭಕ್ತಿಯಲಿ ॥ ತವಕ
ದಿಂದಲೆ ರಾಮತೀರ್ಥವ । ನವೆದುವರ ರಾಮೇಶ್ವರನನಾ । ಭುವಿಯೊ

ಳು ಸ್ಥಾಪಿಸುತಬಿಳದಿಃನಗಳ ನೆಸಗಿದನು ॥ ೧ ॥ ಬಳಿಕಗಂಗಾಶೋಣಭ
ದ್ರಂ । ಗಳೆರಡರ ಸಂಗಮಕೆ ಬಂದವ । ರೊಳವನೀಸುತೆವೆರಸಿ ರಘು
ಭೂವರನು ಮಿಂದದರ ॥ ಬಳಿಯೊಳೆಲ್ಲರಸಹಿತ ಮೂರ್ದಿನ । ಗಳ ತನಕ
ತಾಸಿದ್ದು ಬಂದನು । ಬಳಿಕ ಗಂಗಾಗಂಡಕೀನದಿ ಸಂಗಮಸ್ಥಳಕೆ ॥ ೨ ॥
ಸ್ನಾನವನು ಸತಿಸಹಿತಮಾಡುತೆ । ಮಾನವೇಂದ್ರನು ಗಂಡಕಿಯೊಳು
ನಿ । ದಾನಿಸದೆ ನೇಪಾಳದೊಳಿರುವ ಪಶುಪತೀಶ್ವರನ ॥ ಸಾನುರಾಗದೊ
ಳರ್ಚಿಸುತ ಸುಂ । ಮಾನವನು ತಾಳ್ದೆಲ್ಲರೊಡನೆ ವಿ । ಮಾನದೊಳಗಾ
ಹರಿಹರಾಕ್ಷೇತ್ರಕ್ಕೆ ನಡೆತಂದ ॥ ೩ ॥ ಬಂದು ಜಲದೊಳುಮಿಂದು ಧರ
ಣೀ । ನಂದನೆವೆರಸಿ ರಾಮನುಭಕುತಿ । ಯಿಂದೆಪೂಜಿಸಿ ಹರಿಹರಸ್ವಾ
ಮಿಯನು ಕೈಮುಗಿದು ॥ ಅಂದು ಗಂಗೆಯದಕ್ಷಿಣದೊಳತಿ । ಸುಂದರ
ಮೆನಿಪ ಸಂಗಮಗಳಿಗೆ । ಬಂದು ಬಂದೀಕ್ಷಿಸುತ ವೈಕುಂಠಪುರಕ್ಕೈತಂ
ದ ॥ ೪ ॥ ಈಕ್ಷಿಸಿ ಜರಾಸಂಧನಗರವ । ನಾಕ್ಷಿತಿಸುತೆಯೊಡನೆ ಸರಸಿಜ
ದ । ಳಾಕ್ಷನು ಸ್ನಾನವನೆಸಗಿ ವೈಕುಂಠತೀರ್ಥದೊಳು ॥ ಯಕ್ಷಪತಿಯ
ವಿಮಾನದೊಳು ಕುಳಿ । ತಾಕ್ಷಣದೊಳಲ್ಲಿಂದ ಬಂದನು । ಮೋಕ್ಷದಾ
ಯಕವಹ ಗಯಾಕ್ಷೇತ್ರಕತಿಹರ್ಷದಲಿ ॥ ೫ ॥ ವರಗಯಾಕ್ಷೇತ್ರಕ್ಕೆ ನ
ಡೆತಂ । ದರಸಿವೆರಸಿ ವಿಮಾನದಿಂದಿಳಿ । ದಿರದೆ ರಾಮನು ಫಲ್ಗುನದಿಯಾ
ಪೂರ್ವತೀರದಲಿ ॥ ನೆರೆಮೆರೆವ ವರವಿಷ್ಣುಪಾದದ । ಪರಮಪಾವನದೆಡೆಗೆ
ಬಂದತಿ । ಭರದೊಳಂದೆರಗಿದನು ಕೈಮುಗಿದತಿ ವಿನಯದಿಂದ ॥ ೬ ॥
ಮರುದಿವಸವಾ ಫಲ್ಗುನೊಳು ತ । ನ್ನರಸಿವೆರಸಿ ಸ್ನಾನಕೆನುತೈ । ತರ
ಲು ರಾಘವನನಿತರೊಳ್ಸಖಿಯರೊಡ ನವನಿಜೆಯು ॥ ಹರಿವ ಫಲ್ಗುನ
ದೀದಡಕೆ ಬಂ । ದೆರಗಿ ಮಿಂದವರೊಳು ಸುವಾಸಿನಿ । ಯರನು ಧನಕನ
ಕಾಂಬರಗಳಿಂ ದರ್ಚಿಸಿದಳೊಲಿದು ॥ ೭ ॥ ಮರಳದಿಬ್ಬಿಯಮೇಲೆ ಕುಳಿ
ತಾ । ಧರಣಿಜೆಯು ಗೌರಿಯನು ಪೂಜಿಸು । ತೆರಗುವೆನೆನುತೆಣಿಸಿಚಿತ್ತ
ದೊಳಂದು ಭಕ್ತಿಯಲಿ ॥ ಮರಳ ಮುದ್ದೆಗಳೈದರಿಂದಲೆ । ಪರಮಪಾವ
ನೆಯೆನಿಪ ಗಂಗಾ । ಧರನರಾಣಿಯನಾಗಿಸ್ಪುದ ಕಾರಂಭಿಸಿದಳಲ್ಲಿ ॥ ೮ ॥
ನೆನೆವಸ್ಮೈಕತವ ನೆಡೆಗೈಯೊಳು । ಜನಕನಂದನೆ ತೆಗೆದುಕೊಳ್ಳುತ । ದನು
ಬಲದಕೈಯಿಂದೆ ಮುದ್ದೆಯನೆಸಗಿ ಭೂಮಿಯಲಿ ॥ ಅನುಗೊಳಿಸುತಿಹು
ವಷ್ಟರೊಳಗಾ । ಮನುಕುಲೋತ್ತಮ ದಶರಥನರೇಂ । ದ್ರನು ಕರವ
ನೀಡಿರುವುದನು ನೋಡಿದಳುತಲೆವಾಗಿ ॥ ೯ ॥ ಧರಣಿಯೊಳು ವೈದೇಹಿ
ಮುದ್ದೆಯ । ನಿರಿಸಲಾದಶರಥನು ಕೊಂಡ । ಲ್ಲಿರದೆಹೋಗಿರುವುದನುಕಂ

ಡಳು ನದಿಯತೀರದಲಿ ॥ ಧರಣಿಜೆಯು ನೂರೆಂಟುಸಲ ವಿಂ । ತಿರಿಸಲಾ ಮುದ್ದೆಗಳನೆಲ್ಲವ । ಶಂಭನುತೆಗೆದುಕೊಂಡು ಪೋದನುಕಣ್ಗೆ ಕಾಣಿಸದೆ ॥ ॥ ೧೦ ॥ ನೂರಮೇಲೆಂಟುಂಡೆ ಗಳರದೆ । ತೀರದಲ್ಲಿಯೆ ಮಾಯವಾಗಲು । ಧಾರಿಣೀಸುತೆ ಯಚ್ಚರಿಯನಾಂತಲ್ಲಿ ಮನದೊಳಗೆ ॥ ಗೌರಿಯನುಪೂಜಿ ಸಿವಿವರ್ತನವ । ನೇರಿಬಂದಳು ತನ್ನ ಮಂದಿರ । ಕಾರೊಡನೆ ತಾನೀರಹಸ್ಯ ವನರುಪನತಿಭರದೆ ॥ ೧೧ ॥ ಸ್ನಾನವನೆಸಗಿ ಪಂಚತೀರ್ಥದೊ । ಳಾನ ರ್ರೇಂದ್ರನು ಹತ್ತಿದನು ಸುಂ । ಮಾನವೊಳಗಾ ಪ್ರೇತಪರ್ವತವನತಿವೇ ಗವಲಿ ॥ ತಾನುಬೆರಳುಂಗುರವನು ತೆಗೆದು । ಸಾನುರಾಗದೆ ಮೂರುಗೆರೆ ಗಳ । ನಾನೆಲದೆಗೀಚಿವನು ದಕ್ಷಿಣದಿಕ್ಕಿಗಿದಿರಾಗಿ ॥ ೧೨ ॥ ರವಿಕುಲತಿಲ ಕ ರಾಮಚಂದ್ರನು । ತವೆಕಗೊಳುತಾ ದಶರಥಮಹೀ । ಧವನಿಗೆಪದೆದು ಪಿಂಡದಾನವನಾಗಿಸುವೆನೆಂದು ॥ ಅವನಿಯೊಳು ದರ್ಭೆಯನುಹಾಸುತ । ನವಸುಗೋಘೃತ ಮಧು ತಿಲೋದನ । ವಿವಿಧವಸ್ತುಗಳಿಂದೆ ಪಿಂಡಗಳ ನ್ನುಮಾಡಿವನು ॥ ೧೩ ॥ ರವಿಕುಲೇಂದ್ರನು ಕೈಯೊಳಗೆಪಿಂ । ಡವಪಿಡಿ ದುಕೊಂಡೆಷ್ಟು ನೋಡಿದ । ರವನಿಪತಿ ದಶರಥನು ಕೈಯನುನೀಡದಿರ ಲಾಗ ॥ ಅವನಿಸುರರೈದುತ್ತ ಲಾಶ್ಚ । ರ್ಯವನುರಾಘವನೊಡನಪೇಳ್ದರು । ಜವದೊಳೊಂದು ಮುಹೂರ್ತಪರಿಯಂತರವಿಲೋಕಿಸುತ ॥ ೧೪ ॥ ಜನ ಪಕೇಳೀ ಕ್ಷೇತ್ರದೊಳು ಪಾ । ವನ ಗಯಾಶ್ರಾದ್ಧವನು ಮಾಡುತ । ಜ ನರು ಪಿಂಡವನೀವಕಾಲದೊಳವರ ಪಿತೃಚಯವು ॥ ಮನವೊಲಿದು ಕೈ ನೀಡಿಪಿಂಡಗ । ಳನು ತೆಗೆದುಕೊಳ್ಳುವುದು ನಿನ್ನಪಿ । ತನು ಕರವನೀಡ ದಿಪನಿಲ್ಲಿಹುದೇನು ಕಾರಣವೋ ॥ ೧೫ ॥ ತಿಳಿಯದೆಮಗೆಂದೆನುತ ವಿಪ್ರ ರು । ತಿಳಿದಲಾಶ್ಚರ್ಯವನು ತಾಳ್ದನ । ಕುಲಲಲಾಮನು ಲಕ್ಷ್ಮಣನ ಮುಖವನವಲೋಕಿಸುತ ॥ ತಿಳಿವುದೇನೈ ನಿನಗೆನುತಕೇ । ಳಲವನಾತ ನ ಚರಣಕಮಲಂ । ಗಳಗೆರಗಿ ಬಿನ್ನೈಸಿದನು ಕೈಮುಗಿದುತಲೆವಾಗಿ ॥ ॥ ೧೬ ॥ ಹಿಂದೆಗೋದಾವರಿಯ ತೀರದೊ । ಳಂದುತಂದೆಗೆ ಪಿಂಡಗಳ ನೊಲ । ವಿಂದೆನೀಂಕೊಡುವಾಗ ನೋಡಿದೆನಾತನಕರವನು ॥ ಇಂದುನನ ಗವರಂತೆ ಕಾಣಿಸ । ದೆಂದು ಪೇಳ್ದವನೀಸುತೆಯು ಕೇ । ಳೆಂದು ನುಡಿ ದನು ರಾಘವನಪದಕೆರಗಿ ಸಾಮಿತ್ರಿ ॥ ೧೭ ॥ ಆನುಡಿಯನಾಲಿಸುತ ರಾ ಮನು । ಜಾನಕಿಯನು ವಿಚಾರಿಸಲ್ಕಾ । ಮಾನಿನೀಮಣಿ ಬಹುಳಭೀ ತಿಯುನೈದಿ ಕಂಪಿಸುತ ॥ ಪ್ರಾಣನಾಥನೆ ನೀನುಮನ್ನಿಸು । ನಾನುಮಾಡಿ ದ ತಪ್ಪಿತವನೆಂ । ದಾಸರಪತಿಗೆ ಕೂಡೆಬಿನ್ನವಿಸಿದಳು ಕೈಮುಗಿದು ॥

‖ ೧೮ ‖ ಜನಕನಂದನೆ ಕೇಳುನೀಂ ಭಯು । ವೆನುಳದೆನ್ನೊಳು ಸತ್ಯವ
ನು ಪೇ । ಳೆನುತ ರಘುನಂದನನು ಕೇಳ್ದೊಡೆ ಸೀತೆಕೈಮುಗಿದು ‖
ವಿನುತಫಲ್ಗುನದಿಯೊಳು ಮಿಂದು ತು । ಹಿನಗಿರಿಸುತೆಯು ನರ್ಚಿಸುವೆ
ನೆಂ । ದೆನುತ ನಾಂಮರಳುಂಡೆಗಳನಾ ಗೌರಿದೇವಿಯುನು ‖ ೧೯ ‖ ಮಾ
ಡಲೆತ್ನಿಸಿ ಮರಳಮುದ್ದೆಯು । ಮಾಡಿರಿಸುವನಿತರೊಳು ಕೈಯುನು ।
ನೀಡಿ ದಶರಥಭೂವರನದನು ಕೊಂಡುಪೋದುದನು ‖ ಕೂಡೆಕಾಣಿಸಿಮ
ರಳಿನುಂಡೆಗೆ । ನೀಡಿಕರವನು ಕೊಂಡುದನು ನಾಂ । ನೋಡಿದೆನು ನೂ
ರೆಂಟುಸಲ ಮಾತೆರದೊಳೀದಿವಸ ‖ ೨೦ ‖ ಗೌರಿಯಾರ್ಚನೆಯುನು ಮ
ನದೆನೆರ । ವೇರಿಸಿ ಮನೆಗೆಬಂದೆನೆನುತಾ । ಧಾರಿಣೀಸುತೆ ಬಿನ್ನವಿಸಲಾ
ರಾಘವೇಂದ್ರನಿಗೆ ‖ ಆರಿಹರಿದಕೆ ಸಾಕ್ಷಿಯೆನುತ ವಿ । ಚಾರಿಸಲು ಕಂಡಿ
ಹುದುಚತೂಮ । ಹೀರುಹಮೆನುತ ಪೇಳಿದಳು ರಾಘವನಿಗಾಸೀತೆ ‖
‖ ೨೧ ‖ ಅದನುಕೇಳಲು ರಾಘವನು ಸನ । ಗಿದುತ್ತಿಳಿಯದೆಂದಾಮರವು
ಪೇ । ಳದೊಡೆ ನಿನ್ನೊಳುಹುಳವುಬೀಳಲಿ ವಿಫಲವಾಗೆನುತ ‖ ಸುದತಿಮಾ
ವಿನಮರಕೆ ಶಾಪವ । ನೊದವಿಸುತ ಫಲ್ಗುನದಿ ನೋಡಿರು । ವುದೆನುತ
ನುಡಿದುತೋರಿದಳದನು ರಾಮಚಂದ್ರನಿಗೆ ‖ ೨೨ ‖ ನನಗೆತಿಳಿಯದೆನುತ್ತ
ಪೇಳಲು । ವಿನುತಫಲ್ಗುತಟನಿಯು ಜಾನಕಿ । ಮುನಿದುನೀಂ ನಿಜವ
ನ್ನು ಹೇಳದೆಹೋದೆಯುದರಿಂದ ‖ ಜನರರಿಯದಂತೊಳಗೆ ಹರಿಯುವು ।
ದೆನುತಶಾಪವನಿತ್ತು ವಿಪ್ರರಿ । ದನರಿತಿಹರೆಂದೆನುತ ತೋರ್ದಳವರನು
ಗಂಡನಿಗೆ ‖ ೨೩ ‖ ಅವರನಾರಘುವರನು ಕೇಳಲು । ರವಿಕುಲೋತ್ತ
ಮನಾವಿದನುತ್ತಿಳಿ । ಯೆವೆನುತಂನುಡಿಯಲ್ಕೆ ಜಾನಕಿಕುರಿತುವಿಪ್ರರನು ‖
ಅವನಿಯೊಳು ನಿಮಗೆಷ್ಟುದಕ್ಷಿಣೆ । ಸವನಿಸಿದೊಡಂ ತೃಪ್ತರಾಗದ । ನ
ವರತವು ದೇಶಗಳನುಚ್ಚರಿಸಿರೆಂದು ಶಪಿಸಿದಳು ‖ ೨೪ ‖ ತಿಳಿದಿಹುದು
ಮಾರ್ಜಾಲಕೆಂದಾ । ನೆಲದಣುಗಿ ರಾಘವನೊಡನೆಪೇ । ಳಲದುನಾಂ
ಕಾಣೆನೆನುತ ನುಡಿದೊಡಾಬಿಡಾಲವನು ‖ ಮುಳದುನೋಡುತ ನಿನ್ನಬಾ
ಲವೆ । ನಿಳೆಯೊಳೊಬ್ಬರು ಮುಟ್ಟದಿರಲೆಂ । ದಲಸದಿತ್ತಳು ರಾಘವನಿದಿ
ರೊಳದಕೆ ಶಾಪವನು ‖ ೨೫ ‖ ಗೋವುಕಂಡಿಹುದೆಂದು ಹೇಳಲು । ಭೂ
ವರನೆ ನಾನಿವನರಿಯೆನೆಂ । ದಾವಸುಮತೀಶ್ವರನಿಗದು ಪೇಳಲವನೀಕ್ಷಿ
ಸುತ ‖ ಈವಸುಧೆಯೊಳು ನಿನ್ನವದನವು । ಪಾವನಮೆನಿಸದಿರಲೆನು
ತ್ತಾ । ಗೋವನುಶಪಿಸಿ ತೋರಿಸಿದಳಶ್ವತ್ಥವೃಕ್ಷವನು ‖ ೨೬ ‖ ಆವನು
ಕೇಳಲು ರಾಘವನು ನಾ । ನಿವನುಕಾಣೆನೆನುತ್ತ ಪೇಳಲು । ಸುದತಿಜಾ

ನಕೆ ನೀನಚಲದಳವಾಗೆನುತ ಕೂಡೆ ‖ ಅದಕೆಶಾಪವನಿತ್ತು ಭಾಸ್ಕರ । ನಿ
ವನು ಕಂಡಿಹನೆಂದು ಸಾಕ್ಷಿಯು । ನೊವವಿಸಲು ರಾಘವನು ಸೂರ್ಯನನಂ
ದು ಕೇಳಿದನು ‖ ೨೭ ‖ ತಂದೆಕೇಳೈ ನಿನ್ನಪಿತನೈ । ತಂದು ತೃಪ್ತಿಯು
ನೈದಿದನು ನಲ । ವಿಂದೆ ಜಾನಕಿಕೊಟ್ಟ ಮರಳಿನಪಿಂಡಗಳನುಂಡು ‖
ಎಂದು ಭಾಸ್ಕರನೆನ್ನುವಷ್ಟರೊ । ಳಂದು ದಶರಥಭೂವರನು ನಡೆ ।
ತಂದು ಬಿಗಿದಪ್ಪುತ್ತ ಸುತನಿಗೆ ನುಡಿದನಿಂತೆಂದು ‖ ೨೮ ‖ ಸುತನೆ ನನ್ನ
ನು ತಪ್ಪಿಸಿದನೀ । ನತಿಕಠಿನವಹ ನರಕದಿಂದೀ । ಕ್ಷಿತಿತನುಜೆ ಪದೆದಿತ್ತ
ಮರಳಿನಪಿಂಡದಿಂದೆನಗೆ ‖ ಅತಿಶಯದ ಸಂತುಷ್ಟಿಯಾದುದು । ಹಿತದೆ
ನೀನಿಂದಾಚರಿಸು ಜನ । ತತಿಗರಿವನೀಯುಲು ಗಯಾಶ್ರಾದ್ಧವನು ಭಕ್ತಿ
ಯಲಿ ‖ ೨೯ ‖ ಎಂದುಪೇಳಿದ ಪಿತನವಚನವ । ನಂದು ಕೇಳುತ ಕೈ
ಮುಗಿದು ರಘು । ನಂದನನು ನೀನೇತಕಿಲ್ಲೀ ಮರಳವುದ್ದೆಯನು ।
ಇಂದುಕೈಕೊಂಡಿರ್ಪೆ ಯದತಿಳು । ಹೆಂದುಬೇಡಲು ಕೂಡೆದಶರಥ ।
ನೆಂದನಾ ರಘುಭೂವರನನೊಲಿಸುತ್ತ ವೈದಡವಿ ‖ ೩೦ ‖ ಈಗಯಾಶ್ರಾ
ದ್ಧವನು ವಿರಚಿಸು । ವಾಗ ಬಹುವಿಘ್ನಗಳು ಬಹುವದ । ಕಾಗಿ ನಾನಾ
ಪರಿಯೊಳತಿವೇಗದಲಿ ಕೈಕೊಂಡೆ ‖ ರಾಘವನೆಕೇಳೆನುತ ತಿಳುಹಿಸ । ರಾ
ಗದಿಂದಲೆ ಹೊರಟುಹೋದನು ‖ ಬೇಗನೆಸುತನುಕೊಟ್ಟ ಪಿಂಡವನುಂ
ಡು ತನ್ನೆಡೆಗೆ ‖ ೩೧ ‖ ಪ್ರೇತಗಿರಿಯಲಿ ಪಿಂಡದಾನವ । ನಾತರಣಿಕುಲ
ತಿಲಕನಿತ್ತಾ । ಪ್ರೇತಶಿಲೆಗೈತಂದು ಕಾಕಬಲಿಯನುತಾಕೊಟ್ಟು ‖ ಪಾತ
ಕಂಗಳಪೋಗಿಸುತವಿ । ಖ್ಯಾತಿವಡೆದಾ ಧರ್ಮವಿಪಿನ । ಕ್ಕಾತುರದೆ ನಡೆ
ತಂದಬಾಂಧವ ಭೃತ್ಯರೊಡವೆರಸಿ ‖ ೩೨ ‖ ಮೆರೆವಧರ್ಮಾರಣ್ಯದೊಳು
ರಘು । ವರನು ಪಾಯಸವಾಜ್ಯ ತಿಲಶ । ರ್ಕರೆಗಳನು ಸೇರಿಸುತಮಾಡಿ
ದ ಪಿಷ್ಟಪಿಂಡಗಳ ‖ ಪರಮಭಕ್ತಿಯನಾಂತು ಕೊಡುತಲೆ । ವಿರಚಿಸಿ
ವಟಶ್ರಾದ್ಧವನುಸಾ । ದರದೆ ಮೇಲೆಸಿಪಷ್ಟತೀರ್ಥಂಗಳನು ನಿರ್ಮಿಸಿದ ‖
‖ ೩೩ ‖ ಸ್ನಾನಮಾಡಿ ತ್ರಿಸ್ಥಲದೊಳು ನಿ । ದಾನಿಸದಖಿಳ ಕರ್ಮವನೆಸ
ಗಿ । ಮಾನವಾಧಿಪನಲ್ಲಿ ನೆರೆದ ಬ್ರಾಹ್ಮಣರಿಗೆಲ್ಲ ‖ ಸಾನುರಾಗದೊಳಂದ
ಖಿಳವಿಧ । ದಾನಗಳತಾನಿತ್ತು ಮನದೊಳು । ಜಾನಿಸುತ್ತ ಗದಾಧರಸ್ವಾ
ಮಿಯನುಪೂಜಿಸಿದ ‖ ೩೪ ‖ ಆದಿವಾಕರಕುಲ ಲಲಾಮನು । ಸಾದರ
ದೊಳಾವಿನ ಸಕೀಟಕ । ವಾದ ಮಾವಿನಮರವನು ಮುಳುಗಿಸಿದನು ನೀ
ರಿನಲಿ ‖ ವೇದವಿಧಿಯೊಳು ವಿಷ್ಣುಪಾದವ । ನಾದಿನವೆ ಪೂಜಿಸಿದನು ಬ
ಹುವಿ । ನೋದದಿಂದಲೆ ತೃಪ್ತಿಪಟ್ಟರು ಸಕಲಪಿತೃವರರು ‖ ೩೫ ‖ ವರ

ಗಯಾಕ್ಷೇತ್ರದೊಳು ಬಂಧುಜ । ನರೊಡನಿದ್ದನು ಮೂರುತಿಂಗಳ ।
ವರೆಗೆ ರಾಘವನೊಂದು ಸುಕ್ಷೇತ್ರವನು ನಿರ್ಮಿಸುತ ॥ ಧರಣಿಯೊಳು ರಾ
ಮಗಯೆಯೆಂಬ ಪೆ । ಸರಿನೊಳಾ ಸುಕ್ಷೇತ್ರಮೆಸೆವುದು । ನರರದುರಿ
ತಂಗಳನು ಪರಿಹರಿಸುತ್ತ ನುತಿವಡೆದು ॥ ೩೬ ॥ ರಾಮತೀರ್ಥವನಲ್ಲಿ
ಕಲ್ಪಿಸಿ । ಭೂಮಿಪಾಲಕನಾ ಗಯೆಯೊಳಭಿ । ರಾಮ ರಾಮೇಶ್ವರನ
ಲಿಂಗವತಾಂ ಪ್ರತಿಷ್ಠಿಸುತ ॥ ತಾಮಸವನಾಗಿಸದೆ ಬಂದನು । ವಾಮ
ಲೋಚನೆ ಜಾನಕಿಯುಸಹಿ । ತಾಮಹಿತ ಫಲ್ಗುನದಿ ಗಂಗಾಸಂಗಮಸ್ಥ
ಳಕೆ ॥ ೩೭ ॥ ಬಂದು ಮೂಡಣದೆಸೆಗೆ ಪೃಥ್ವೀ । ನಂದನೆವೆರಸಿ ರಾಘವ
ನುನಲ । ವಿಂದೆ ಹೊಕ್ಕನು ಗಂಗೆಜಾಹ್ನವಿ ಯೆನಿಸುತುತ್ತರಕೆ ॥ ಚಂ
ದದಿಂದಲೆ ಹರಿವತಾಣದೊ । ಳಂದವಾಗಿಹ ಮುದ್ಗಲಮುನಿಪ । ನಿಂದೆ
ಸೆವ ಪುಣ್ಯಾಶ್ರಮವ ನತ್ಯಧಿಕಹರ್ಷದಲಿ ॥ ೩೮ ॥ ಅಲ್ಲಿಜಾನಕಿ ತನ್ನ
ತೇಜವ । ನಿಲ್ಲಿಸುತ್ತವನಿಯೊಳು ರಚಿಸಿದ । ಳುಲ್ಲಸದೊಳತಿ ಪಾವನಪ್ರ
ದವೆನಿಪ ತೀರ್ಥವನು ॥ ಎಲ್ಲಬಾಂಧವರೊಡನೆ ಬಂದನು । ನಿಲ್ಲದಾರಘು
ವರನು ಸಾಗರ । ದಲ್ಲಿ ಗಂಗೆ ಸಹಸ್ರವಾಹಿನಿಯಾಗಿಬೀಳ್ವೆಡೆಗೆ ॥ ೩೯ ॥
ಮಿಂದು ಸಾಗರತೀರ್ಥದೊಳು ರಘು । ನಂದನನು ಸಾಗರದೆ ಯಮುನೆ
ಯು । ಬಂದು ಸಂಗಮವಾಗುವಲ್ಲಿಗೆ ಭರದೊಳೈತಂದು ॥ ಸುಂದರಮೆ
ನಿಪ ಪುಣ್ಯದೆಡೆಗಳ । ನಂದದಿಂದೆ ವಿಲೋಕಿಸುತ ನಡೆ । ತಂದನಾ ಸತಿ
ಸಹಿತ ವರಪುರುಷೋತ್ತಮಸ್ಥಳಕೆ ॥ ೪೦ ॥ ಮಿಂದು ಪೂರ್ವಸಮುದ್ರ
ತೀರದೊ । ಳಿಂದುಮುಖಿ ಜಾನಕಿಯೊಡನೆ ನಲ । ವಿಂದೆ ಬಹುವಿಧ ದಾ
ನಧರ್ಮಂಗಳನುತಾನೆಸಗಿ ॥ ಬಂದುಗೋದಾವರಿಯತೀರಕೆ । ಚಂದದಿಂದಲೆ
ತನ್ನಪೆಸರಿನೊ । ಳೊಂದು ಪಟ್ಟವನಿರ್ಮಿಸಿದನಾ ರಾಘವೇಶ್ವರನು ॥ ೪೧ ॥
ಪರಮಪಾವನ ಸಪ್ತಗೋದಾ । ವರಿಯ ಸಂಗಮತೀರಮೆನಿಪಾ । ಶರಧಿ
ಯೊಳು ಮಿಂದವನಿನಂದನೆವೆರಸಿ ರಾಘವನು ॥ ಹರುಷದಿಂದಲೆ ದಕ್ಷಿಣಾಶೆ
ಗೆ । ಬರುತ ಮೂಡಣದೆಸೆಯ ಯಾತ್ರೆಯ । ನಿರದೆಮುಗಿಸುತ್ತಂದು
ಬಂದನು ವರಮಹಾನದಿಗೆ ॥ ೪೨ ॥ ಸ್ನಾನವನುತಾಂ ಮಾಡಿ ರಘುಜ
ಮ । ಹಾನದಿಯೊಳಾದಿನ ಮುದದೊಳಾ । ಪಾನಕದ ನರಸಿಂಹಮೂರ್ತಿಗೆ
ನಮಿಸಿಭಕ್ತಿಯುಲಿ ॥ ಜಾನಕಿಸಹಿತ ಸಾಗರಕೆ ಕೃ । ಷ್ಣಾನದಿಯು ಬೀ
ಳುವವಡದೊಳು । ಸ್ನಾನವನೆಸಗಿ ಬಂದನು ಶ್ರೀಶೈಲಪರ್ವತಕೆ ॥ ೪೩ ॥
ನೀಲಗಂಗೆಯೊಳಾ ರಘುಪತಿ ವಿ । ಶಾಲಲೋಚನೆ ಯೊಡನೆಮಿಂದಯುತ
ಶೈಲದೊಳು ವರಮಲ್ಲಿಕಾರ್ಜುನನನ್ನು ಪೂಜಿಸುತ ॥ ಮೇಲೆನಿಸುವ ಬ್ರ

ಸ್ತ್ಯಕುಂಡದೊ । ಳೊಳಗೆವಡೆದ ಭೀಮಕುಂಡದೊ । ಳಾ ಲಕುಮಿನಾಯ
ಕನು ಮಿಂದನು ಭಕ್ತಿಭಾವದಲಿ ॥ ೪೪ ॥ ಮಂಗಳಾಕರವೆಹ ನಿವೃತ್ತಿ
ಯು । ಸಂಗಮದೊಳಾ ತುಂಗಭದ್ರಾ । ಸಂಗಮದೊಳಾ ಪಿನುತಭವನಾ
ಶಿನಿಯೊಳಾತೆರದೆ ॥ ಅಂಗನಾಮಣಿಯು ನೊಲಿಸುತ ರಘು । ಪುಂಗವನು
ಸಂತೋಷದಿಂದಲೆ । ಕಂಗೊಳಸುವ ಮಹಾನದೀಸರದಲ್ಲಿ ಮುಳುಗಿದ
ನು ॥ ೪೫ ॥ ಬಳಕಹೋಬಿಲ ನಾರಸಿಂಹನ । ನೊಲಿದುಪೂಜೆಸಿ ಕಂಬ
ಕತಿಭರ । ದೊಳರದಾಗಿಸುತ ಪ್ರದಕ್ಷಣೆಗಳನು ಮೂರುಸಲ ॥ ತಳು
ವೆದಾಗಲೆ ಪುಷ್ಪಗಿರಿಯಾ । ಬಳಿಗೆ ನಡೆತಂದಾಪಿನಾಕಿನಿ । ಯೊಳು ಮು
ಳುಗಿ ಪುಣ್ಯಸ್ಥಳಗಳನು ನೋಡುತ್ತೈತಂದ ॥ ೪೬ ॥ ಈಕ್ಷಿಸಿ ಮಹಾಲಿಂಗ
ವನು ಕವ । ಲಾಕ್ಷನಾ ಪಂಪಾಸರೋವರ । ಕಾಕ್ಷಣದೊಳೈತಂದು ಕಿ
ಷ್ಕಿಂಧಾಪುರವಪಾರ್ದು ॥ ಋಕ್ಷವಾನರವೀರರನೊಲಿಸು । ತಾಕ್ಷಣವೆಸು
ಗ್ರೀವನನು ಪದೆ । ದೀಕ್ಷಿಸುತ ಮೆರೆವಾಪ್ರವರ್ಷಣಗಿರಿಗೆ ನಡೆತಂದ ॥
॥ ೪೭ ॥ ಭೀಮಕುಂಡದೊಳಂದು ಮಿಯುತ । ಭೂಮಿಪಾಲಕನಾ
ಕುಮಾರ । ಸ್ವಾಮಿಯನು ಕಂಡರ್ಚಿಸುತ್ತಗಸ್ತ್ಯಕುಂಡದಲಿ ॥ ಆ
ಮಹೀಸುತೆಸಹಿತ ಮಿಂದಾ । ಹೇಮಗಿರಿಯೊಳು ಕಂಗೊಳಸುವಾ ।
ಕೋಮಲತರದ ಶಂಭುದೇವನ ಪದವನರ್ಚಿಸಿದ ॥ ೪೮ ॥ ವೀರಭದ್ರನ
ನೀಕ್ಷಿಸುತ ರಘು । ವೀರನಾ ವೇಂಕಟಗಿರಿಗೆ ಸರ । ಸೀರುಹಾನನೆಯೊ
ಡನೆವಂದಿಸಿ ಬಂದುತಿರುಪತಿಗೆ ॥ ಚಾರುತರದಾಕೃತಿಯು ನಾಂತುರೆ ।
ತೋರುತಿಹ ಗೋವಿಂದರಾಜನ । ಭೂರಿಪದಪಂಕೇಜಕೆರಗಿದ ನಧಿಕಭ
ಕ್ತಿಯಲಿ ॥ ೪೯ ॥ ಘನಕಪಿಲಧಾರೆಯೊಳು ಮಿಂದಾ । ಮನುಕುಲೇಂದ್ರ
ನು ತೀರ್ಥಕರ್ಮವ । ವಿನಯದೊಳೆಸಗಿ ಬಂದುಶೇಷಾಚಲಕೆಶೀಘ್ರದಲಿ ॥
ವಿನುತ ಪುಷ್ಕರಣಿಯಲಿ ಮುಳುಗುತ । ವನಿಜೆಯಸಹಿತ ವೇಂಕಟೇ
ಶ್ವರ । ನನೊಲಿದರ್ಚಿಸಿ ಪಂಚತೀರ್ಥಕೆ ಬಂದನಲ್ಲಿಂದೆ ॥ ೫೦ ॥
ಅದರೊಳು ಸ್ನಾನವನುಮಾಡಿಮು । ದದಿವೆರಸಿ ತಾಂಸ್ವರ್ಣ ಮುಖಿಶ್ರೀ ।
ರದಲಿಪೂಜಿಸಿ ಕಾಳಹಸ್ತೀಶ್ವರನ ಪದಗಳನು ॥ ಮುದದೆಕಾಂಚೀನಗರ
ಕೈತಂ । ದೊದಗಿದ ಹರುಷದಿಂದೆ ತಾಂಮುಳು । ಗಿದನು ಪಾವನಸರ್ವ
ತೀರ್ಥದೊಳಧಿಕಭಕ್ತಿಯಲಿ ॥ ೫೧ ॥ ತಳುವದೇಕಾಮ್ರೇಶ್ವರನ ಪದ ।
ಗಳನು ಪೂಜೆಸಿರಾಮಚಂದ್ರನು । ಬಳಕ ಕಾಮಾಕ್ಷಿಯನು ಪೂಜೆಸಿ
ವೇಗವತಿಯೊಳಗೆ ॥ ಮುಳುಗಿತನ್ನಯ ಸತಿಸಹಿತ ಕಂ । ಗೊಳಸುವ
ರದರಾಜನ ಪದಕ । ಮಲವಪೂಜೆಸ ಪಕ್ಷಿತೀರ್ಥಕೆಬಂದನಲ್ಲಿಂದ ॥

॥ ೫೨ ॥ ಮೆರೆವ ಪೂಷವಿಧಾತೃಗಳೆನಿಸು । ವೆರಡುಹಕ್ಕಿಗಳನ್ನು ತಾಂ
ಸ । ತ್ಕರಿಸುತ ಕ್ಷೀರನದಿಯೊಳು ಮಿಂದೊಡನೆ ರಾಘವನು ॥ ಭರದೆ ಮ
ಣಿದೆರಗಿ ತ್ರಿವಿಕ್ರಮ । ನುರುಚರಣ ಕರುಣಾಚಲಕೆ ಬಂ । ದಿರದೆ
ಪೂಜಿಸಿದನರುಣಾಚಲ ಮೂರ್ತಿಯನುನಲಿದು ॥ ೫೩ ॥ ಬಂದುವೃದ್ಧಾ
ಚಲಕೆ ಕಡುಜವ । ದಿಂದೆರಾಮನು ಪೂಜಿಸಿದನೊಲ । ವಿಂದೊಡನೆ ವೃ
ದ್ಧಾಚಲೇಶ್ವರ ಚರಣಪಂಕಜವ ॥ ಇಂದುಮುಖಿ ಸಹಿತೊಡನೆ ತಾಂ
ನಡೆ । ತಂದು ವಟಪಾಲನಕೆಸಂತಸ । ದಿಂದೆ ವಟಪಾಲೇಶ್ವರಂಗೆರಗಿದನು
ಪೂಜಿಸುತ ॥ ೫೪ ॥ ವಿನಯದೆ ಶ್ರೀಮುಷ್ಟಿಯೊಳು ಮೋ । ಲೆನಿಪ ಯ
ಜ್ಞವರಾಹಮೂರ್ತಿಯ । ನಿನಕುಲೋತ್ತಮನರ್ಚಿಸಿ ಚಿದಂಬರವನೀ
ಕ್ಷಿಸುತ ॥ ಜನಕಜೆಯೊಡನೆ ಬಂದುಮಿಂದನು । ಜನರದುರಿತವನೆಲ್ಲಪೋ
ಗಿಪ । ಮುನಿವಿನುತ ಕಾವೇರಿನದಿಯೊಳು ತಳೆದುಹರ್ಷವನು ॥ ೫೫ ॥
ಬಂದುಸಿಂಹಕ್ಷೇತ್ರಕಾ ರಘು । ನಂದನನು ಬ್ರಹ್ಮೇಶ್ವರನಿಗಾ । ನಂದ
ದಿಂಪುಣಿದಲ್ಲಿ ವೈದ್ಯೇಶ್ವರನನರ್ಚಿಸುತ ॥ ಬಂಧುಮಿತ್ರರ ನೊಲಿಸುತಲೆ
ತ । ವ್ಮಂದಿರಸಹಿತ ಮರಪಥದೊಳೈ । ತಂದನು ಶ್ವೇತಾಟವಿಗೆ ಬಹು
ಸಂತಸವನಾಂತು ॥ ೫೬ ॥ ಸ್ನಾನವನೆಸಗಿ ಶಂಖಮುಖ್ಯದೊ । ಳಾನ
ರೇಂದ್ರನು ಪುಷ್ಪಕವರ ವಿ । ಮಾನದೊಳು ನಡೆತಂದುಛಾಯಾವನವ
ನೀಕ್ಷಿಸುತ ॥ ಜಾನಕಿಯೊಡನೆ ತಾಳ್ದುಬಹುಸಂ । ಮಾನವನು ಗೌರೀ
ಮಯೂರಕೆ । ಸಾನುರಾಗದೆಬಂದು ವೇದಾರಣ್ಯವನುಕಳೆದು ॥ ೫೭ ॥
ಎರಗಿಮಧ್ಯಾರ್ಜುನನ ಪದಪಂ । ಕರುಹಕರ್ಚಿಸಿ ಬಳಿಕಲಾರಘು । ವ
ರನು ಸನ್ನುತ ವೃದ್ಧಕಾವೇರಿಯೊಳು ಮಿಯುತ್ತ ॥ ಅರಸಿಯೊಡನಾ
ಕುಂಭಕೋಣಕೆ । ಬರುತಪೂಜಿಸಿ ಪದ್ಮನಾಭನ । ಚರಣವನೆಸೆವವಿನು
ತ ಬೃಂದಾವನಕೆ ನಡೆತಂದ ॥ ೫೮ ॥ ಮನುಕುಲೇಂದ್ರನು ಸಾರನಾಥ
ಗೆ । ಮಣಿಯುತ ಶ್ರೀವಾಂಛನನು ಕಂ । ಡನುನಯದೆ ಪೂಜಿಸುತಕಂಡು
ಪ್ರಯಾಗಮಾಧವನ ॥ ಮುನಿನುತಾಭ್ರ ಶಿರಸ್ಥಳಕೆ ಬಂ । ದಿನಿಯಳ
ಸಹಿತ ಕಂಡುಪೂಜಿಸಿ । ದನೊಡನೆ ತ್ಯಾಗೇಶ್ವರನನಂದು ಕಮಲಾಲ
ಯದೆ ॥ ೫೯ ॥ ವರಗಯಾತೀರ್ಥದೊಳು ಮಿಂದು । ತ್ವರಿತದಿಂದಖಿಳ
ಜನಸಹಿತಾ । ಧರಣಿನಾಥನು ದಕ್ಷಿಣದ್ವಾರಕೆಗೆನಡೆತಂದು । ಮೆರೆವಗೋ
ವಿಂದ ನಡಿದಾವರೆ । ಗೆರಗಿ ಚೇಪಾಪುರದೊಳು ಶುಭ । ಕರನೆನಿಸಿ
ಕೊಂಡು ಮೆರೆವ ಭಮೇಶ್ವರನನರ್ಚಿಸಿದ ॥ ೬೦ ॥ ಮುನ್ನನೆಲೆಗೊಳಿಸಿ
ದ ವಿನಾಯಕ । ನನ್ನು ಪೂಜಿಸುತಲ್ಲಿ ರಾಮನು । ತನ್ನಬಂಧುಗಳೊಡ

ನೆ ನವಪಾಷಾಣದೊಳುಮಿಂದು ॥ ಮನ್ನಿಸುತಖಿಳ ಮನುಜರನುಸಲೆ । ಸನ್ನುತಿವಡೆದು ಧಾರಿಣಿತಲದೊ । ಳುನ್ನತಿಯನಾಂತೆಸೆವ ದೇವೀನಗರ ಕೈತಂದ ॥ ೬೧ ॥ ಅಲ್ಲಿರುವ ವೇತಾಳತೀರ್ಥದೊ । ಳೆಲ್ಲರೊಡನೆ ಸ್ನಾನವನೆಸಗಿ । ಯುಲ್ಲಸವನಾಂತಾ ಸಮುದ್ರೋದಕವ ಕಳೆಯುತ್ತ ॥ ಎಲ್ಲಪುಣ್ಯಸ್ಥಳಗಳನು ತಾ । ನಲ್ಲಿನೋಡುತ ಬಂದುಮುಂಗಡೆ । ಯಲ್ಲಿ ಭೈರವತೀರ್ಥದೊಳು ಮುಳುಗಿದನು ರಾಘವನು ॥ ೬೨ ॥ ಬಳಿಕ ರಾಮೇಶ್ವರಕೆ ನಡೆತಂ । ದಿಳಿದು ಪುಷ್ಪಕವರವಿಮಾನವ । ಮುಳುಗಿ ಲಕ್ಷ್ಮಣಕುಂಡದೊಳೆಮಲ ರಾಮಕುಂಡದೊಳು ॥ ತಳುವದದರಂತಗ್ನಿಕುಂಡದೊ । ಳೊಲಿದುಮಿಾಯುತ ದಕ್ಷಿಣದದೆಸೆ । ಯೊಳೆಸೆವ ಧನುಷ್ಕೋಟಿಗೊಲಿದೈತಂದನಾರಾಮ ॥ ೬೩ ॥ ವರಧನುಷ್ಕೋಟಿಯೊಳುಮಿಂದು ದ । ಶರಥಭೂಪಾಲಸುತ ನತ್ಯಾ । ದರದೊಳು ಸ್ನಾನವನುಮಾಡಿ ಜಟಾಯುತೀರ್ಥದೊಳು ॥ ಹರುಷದಿಂದಲೆ ಗಂಧಮಾದನ । ಗಿರಿಯನವಲೋಕಿಸುತ ವಿಶ್ವೇ । ಶ್ವರನಪಾದವ ಪೂಜಿಸಿದನಾ ಜನಕಸುತೆಸಹಿತ ॥ ॥ ೬೪ ॥ ಬಳಿಕರಾಮೇಶ್ವರನ ಪಾದಕ । ಮಲವನರ್ಚಿಸಿ ವಿನುತಗಂಗಾ । ಜಲದೊಳಭಿಷೇಕವನು ಸಂತಸದಿಂದೆ ತಾನೆಸಗಿ ॥ ಬಳಿಯುಮೊದಲಾದವ್ರುಗಳೆಲ್ಲವ । ತಳುವದೆ ಧನುಷ್ಕೋಟಿಯೊಳು ಬಿ । ಟ್ಟೊಲವಿನಿಂದಲೆ ಕೋಟಿತೀರ್ಥವನಲ್ಲಿ ಕಲ್ಪಿಸಿದ ॥ ೬೫ ॥ ಶ್ವೇತಮಾಧವ ದೇವರನು ಸಂ । ಪ್ರೀತಿಯಿಂದಲೆಕಂಡು ರಾಮನು । ಸೀತೆಯನೊಲಿಸುತೊಂದು ತಿಂಗಳವರೆಗಮಲ್ಲಿದ್ದು ॥ ಭೂತಪತಿಯ ನೊಲಿಸುತ ಸಂತೋ । ಷಾತಿಶಯದಿಂದಖಿಳ ದಾನವ । ನಾತನೊಲಿದಿತ್ತನುಪಚರಿಸುತ ವಿಪ್ರರೆಲ್ಲರಿಗೆ ॥ ॥ ೬೬ ॥ ಸ್ನಾನವನೆಸಗಿ ಕೋಟಿತೀರ್ಥದೊ । ಳಾನರೇಂದ್ರನು ಬಾಗಿಲೊಳಹ ಗ । ಜಾನನಂಗಭಿನಮಿಸಿ ಸಾಗರಜಲವನುತ್ತರಿಸಿ ॥ ಸಾನುರಾಗದೊಳೊಲಿಸುತೆಲ್ಲರ । ನಾನಿಮಿಷದೊಳು ದರ್ಭಶಯನಕೆ । ತಾನು ಬಂದು ಮುಳುಗಿದನಾ ನಿಕ್ಷೇಪಿಕಜಲದಲಿ ॥ ೬೭ ॥ ಬಂದುರಾಮನು ತಾಮ್ರಪರ್ಣೀ । ಸಿಂಧುಸಂಗಮದಲ್ಲಿ ಮುಳುಗಿ । ಸ್ಕಂದಮೂರ್ತಿಯನರ್ಚಿಸುತ ನವವೇಂಕಟೇಶನನು ॥ ಸಂದಸಂತಸದಿಂದೆ ಪೂಜಿಸಿ । ಮುಂದೆಸೆವ ತೋತಾದ್ರಿಯನು ಕಂ । ಡಂದು ವರಕನ್ಯಾಕುಮಾರಿಗೆ ಬಂದನಲ್ಲಿಂದೆ ॥ ೬೮ ॥ ಘನಸುಚೇಂದ್ರಕೆ ಪೋಗಿರಘುನಾ । ಥನು ಪಯೋಷ್ಣಿಯೊಳು ಮುಳುಗಿದನಾ । ಜನಕಸುತೆಸಹಿತರ್ಚಿಸುತ್ತಲನಂತಮೂರ್ತಿಯನು । ವಿನುತಿವಡೆದೆಸೆವಾ ಅನಂತಶ । ಯನಕೆಬಂದು ಸ್ನಾನವನೆಸಗಿ ।

ದನಮಲ ಪದುಮತೀರ್ಥ ಶಂಖಸುತೀರ್ಥಗಳೊಳಲ್ಲಿ ॥೯॥ ಪೆತ್ತೆ ಮ ತ್ಸ್ಯನದಿಯೊಳು ರಾಘವ । ನುತ್ತರದಿಶೆ ಗಳಿಮುಖಿಸೆಂಡೆನಿ । ಸುತ್ತಿ ವಿಂದನು ಜಾನಕಿಯೊಡನೆ ಸಂತಸವನಾಂತು ॥ ಉತ್ತಮೋತ್ತಮಮಾಗಿ ಕಂಗೊಳಿ । ಸುತ್ತವನಿ ಮಂಡಲದೊಳುನ್ನತಿ । ವೆತ್ತ ಧರ್ಮಾಧರ್ಮಸರಸಿಯೊಳಲ್ಲಿಮುಳುಗಿದನು ॥ ೨೦ ॥ ವನಧಿತೀರದೊಳಿರುತಿಹ ಜನಾ । ರ್ದನನ ಸುಕ್ಷೇತ್ರಕಿನಕುಲನಾ । ಥನು ಬರುತಮಾವಾಸ್ಯೆ ಹುಣ್ಣಿಮೆಯು ದಿವಸಂಗಳಲಿ ॥ ವಿನುತಗಂಗಾಧಾರ ಸಾಗರ । ಘನತರದಸಂಗಮದೊಳು ಮುಳುಗಿ । ವಿನಯದಿಂದೆ ಜನಾರ್ದನಸ್ವಾಮಿಯನು ಪೂಜಿಸಿದ ॥ ೨೧ ॥ ಕಾಣುತ ಸ್ತ್ರೀರಾಜ್ಯವನುಬಲು । ಜಾಣತನದಿಂದಲ್ಲಿ ಪೋಗದೆ । ರಾಣಿಯನೊಲಿಸುತಾ ರಘುವರನು ಬಹುವಿನೋದದಲಿ ॥ ಕ್ಷೋಣಿಮಂಡಲ ದಕ್ಷಿಣಾಗ್ರ । ಸ್ಥಾನದೊಳು ಘೃತಮಾಲಕೃತ ಮಾ । ಲಾನದಿಗಳೊಳು ಮಿಂದು ಸಿಂಧೂನದಿಗೆನಡೆತಂದ ॥ ೨೨ ॥ ಮಿಂದು ಸಿಂಧೂನದಿಯೊಳು ಧರಾ । ನಂದನೆಯನೊಲಿಸುತ್ತ ಬಂದನು । ಸುಂದರತರ ಗಜೇಂದ್ರ ಮೋಕ್ಷ ಕ್ಷೇತ್ರಕತಿಭರದೆ ॥ ಚೆಂದಮೆನಿಪಾ ತಾಮ್ರಪರ್ಣಿಯೊ । ಳಂದ ಮಹ ವೈನಾಕತೀರ್ಥದೊ । ಳಂದುಮಿಂದನು ರಾಘವೇಂದ್ರನು ತನ್ನ ಸತಿಸಹಿತ ॥ ೨೩ ॥ ಮೆರೆವ ಚಂದ್ರಕುಮಾರಗಿರಿಯನು । ಭರದೊಳೀಕ್ಷಿಸಿ ರಾಘವೇಶ್ವರ । ನಿರದೆ ದಕ್ಷಿಣಕಾಶಿಗೈತಂದೊಲಿಸಿ ಶಂಭುವನು ॥ ತ್ವರೆಪಡುತ ಚಂಪಕವನವ ಕಂ । ಡಿರದೆ ಚಿತ್ರದ್ಯುನದಿಜಲದೊಳು । ಹರುಷದಿಂದಲೆಮುಳುಗಿ ಹರಿಹರರನೊಲಿದರ್ಚಿಸಿದ ॥ ೨೪ ॥ ಬಂದು ಮಧುರೆಗೆ ವೇಗವತಿಯೊಳು । ಮಿಂದುವರ ಮೀನಾಕ್ಷಿಗೆನಮಿಸಿ । ಸುಂದರೇಶ್ವರನನ್ನು ಪೂಜಿಸಿ ರಾಘವೇಶ್ವರನು ॥ ವಂದಿಸಿ ದ್ರವಿಡಗಿರಿಯೊಳುಸಾ । ನಂದದಿಂದಲೆ ವೆಂಕಟೇಶನಿ । ಗಂದುಬಂದನು ಭರದೊಳಾ ಶ್ರೀರಂಗಕತಿಮುದದೆ ॥ ೨೫ ॥ ಹರಿವಕಾವೇರಿಯೊಳು ಮಿಾಯುತ । ಹರುಷದಿಂದಲೆ ರಂಗನಾಥನ । ಚರಣಕೆನಮಿಸಿ ಜಂಬುಕೇಶ್ವರನಿಗವನತನಾಗಿ ॥ ಕರವ ಮುಗಿದಾ ಮಾತೃಭೂತೇ । ಶ್ವರನವಂದಿಸಿ ಮುದದೆರಾಮನು । ಭರದೊಳವಿನಾಶಿಯನು ನೋಡುತಮುಂದಕೈತಂದ ॥ ೨೬ ॥ ರಾಮನಾ ಶ್ರೀರಂಗಪಟ್ಟಣ । ಕಾ ಮಹೀಸುತೆಯ ನೊಲಿಸುತ್ತಾ । ವ್ಯೋಮಯಾನದೆ ಕುಳಿತುಕೊಂಡೈತಂದು ಭಕ್ತಿಯಲಿ ॥ ಹೈಮವತಿಯೊಳು ಮಿಂದು ಸಾಲ । ಗ್ರಾಮವನು ಪೂಜಿಸುತಬಂದನು । ರಾಮನಾಥನಗರಿಗೆ ಬಂಧೂ ಜನರನೊಲಿಸುತ್ತ ॥ ೨೭ ॥ ಅಲ್ಲಿಮೆರೆವ ಕುಮಾರಧಾರೆಯೊ । ಳೆಲ್ಲಮ

ನುಜರೊಡನೆ ಮುಳುಗಿ ಮ । ತ್ತಿಲ್ಲಿನಿಲ್ಲದೆ ಯುಡುಪಿಗೈತಂದಾ ರಘೂ
ದ್ವಹನು ॥ ಸಲ್ಲಲಿತ ವಸ್ತುಗಳನೊಪ್ಪಿಸಿ । ನಲ್ಲಳನೊಲಿಸು ತರ್ಚಿಸಿದ
ಮನ । ವಲ್ಲಿ ಸುಬ್ರಹ್ಮಣ್ಯ ಕೃಷ್ಣಸ್ವಾಮಿಗಳನೆನೆದು ॥ ೭೮ ॥ ಬಂ
ದು ಶೃಂಗಾಭ್ರಮಕೆ ಸಂತಸ । ದಿಂದೆ ತುಂಗಾನದಿಯೊಳು ಮುಳುಗಿ ।
ವಂದಿಸುತ ಶೃಂಗಗಿರಿಯೊಳು ಶಾರದೆಗೆಭಕ್ತಿಯುಲಿ ॥ ಬಂದುನೋಡುತ
ಕುಂಭಕಾಶಿಯು । ನಂದುಕೋಟೀಶ್ವರಕೆ ತಾನೈ । ತಂದನಾ ರಘುವರನು
ಸೀತೆಗೆಸಂತಸವನೆಸಗಿ ॥ ೭೯ ॥ ಹರನಪೂಜಿಸಿ ವೀರರಾಘವ । ನೆರಗಿ
ಮೂಕಾಂಬಿಕೆಗೆ ವಂದಿಸಿ । ವರಗುಣವತೀಶ್ವರನಿಗೆ ಮಣಿದುಸುಂದರೇಶ
ನಿಗೆ ॥ ಮೆರೆವಧಾರೇಶ್ವರನ ಪಾದವ । ನಿರದೆಪೂಜಿಸಿ ವಿನುತಗೌರೀ ।
ಶ್ವರಗೆರಗಿ ಸರ್ಜೇಶ್ವರನನಾದರದೆ ಪೂಜಿಸಿದ ॥ ೮೦ ॥ ಬಳಿಕಗೋಕ
ರ್ಣಕ್ಕೆ ಬಂದಿನ । ಕುಲತಿಲಕನು ಮಹಾಬಲೇಶ್ವರ । ದೊಳು ಮಹೇ
ಶನಪದವನರ್ಚಿಸಿ ಹರಿಹರೇಶ್ವರಕೆ ॥ ತಳುವದೈತಂದಖಿಳ ತೀರ್ಥಂ ।
ಗಳೊಳು ಮುಳುಗಿಮಹೇಂದ್ರಗಿರಿಗಾ । ಗಲೆ ನಡೆತರುತ ಪೂಜಿಸಿದನಾ
ಪರಶುರಾಮನನು ॥ ೮೧ ॥ ಬಂದುಭೀಮೇಶ್ವರಕೆ ರಾಘವ । ನಂದು
ಭೌಮಮಹಾಬಲನಿಗಾ । ನಂದದಿಂದೆರಗುತ್ತ ಕರವೀರಪುರಕೈತಂದು ॥
ಮಿಂದು ಕೃಷ್ಣಾವೇಣಿಸಂಗಮ । ದಿಂದೆಸೆವತೀರದೊಳು ಸಂತಸ । ದಿಂ
ದೆಬಂದನು ವರಗದಾಲಕ್ಷ್ಮೀಶ್ವರಕೆಕೂಡೆ ॥ ೮೨ ॥ ವರಘಟಪ್ರಭೆ
ಯಲ್ಲಿ ಮಿಂದುರು । ತರದ ಮಲ್ಲಾರೀಶ್ವರನ ಪದ । ಕೆರಗಿ ರಾಘವನಾಘನ
ಶರಾನದಿಯುತೀರದಲಿ ॥ ಮೆರೆವಪಾವನ ವಕ್ರತುಂಡನ । ಚರಣಕರ್ಚಿಸಿ
ಮುಂದಕೆಬರುತ । ಹರಿವಸೀರಾನದಿಯೊಳು ಸ್ನಾನವನುಮಾಡಿವನು ॥
॥ ೮೩ ॥ ವಿನುತನರಸಿಂಹನನು ಪೂಜಿಸಿ । ತನುವನೀಡುತ ಪಾಂಡು
ರಂಗನಿ । ಗಿನಕುಲೇಂದ್ರನು ಚಂದ್ರಭಾಗಾನದಿಯೊಳಗೆ ಮಿಂದು ॥ ಜನ
ವಿನುತ ಭೀಮಾನದಿಯೊಳಾ । ದಿನವೆ ಮೀಯುತಬಂದು ಚಂದ । ಲ್ಲನು
ತಳುವದೀಕ್ಷಿಸುತಲಾ ಪ್ರೇಮಪುರಕೈತಂದ ॥ ೮೪ ॥ ಎರಗಿ ಮಾರ್ತಾಂ
ಡೇಶ್ವರನ ಪದ । ಕರಸಿಯುನೊಲಿಸುತಾ ರಘೂದ್ವಹ । ನಿರದೆ ನಳದು
ರ್ಗವನು ಕಾಣುತ್ತತಲಜಾಪುರಿಗೆ ॥ ಬರುತ ಮಾಣಿಕ್ಯಾಂಬಿಕೆಗೆರಗಿ । ಗಿರಿ
ಜೆಯನು ಪೂಜಿಸುತ ಲಂಬಾ । ಪುರಿಯೊಳು ವರಾಂಬೆಯನು ವಂದಿಸಿದ
ನತಿಭಕ್ತಿಯುಲಿ ॥ ೮೫ ॥ ಬಳಿಕಪೂಜಿಸಿ ವೈಜನಾಥನ । ನೊಲವಿನಿಂ
ದಾರಾಘವೇಂದ್ರನು । ಲಲನೆಯುಸಹಿತವೆಂ ಜರಾಸಂಗಮಕೆನಡೆತಂದು ॥
ತಿಳಿವಾನಾಗೇಶ್ವರನ ಪಾವಕ । ಮಲವನರ್ಚಿಸಿ ಬಂಧುಗಳೊಡನೆ । ಕ

ಲೆತುಬಂಗನು ಹರಿವಪೂರ್ಣಾನದಿಯುಸಂಗಮಕೆ ॥ ೮೬ ॥ ಅಲ್ಲಿಗೋ
ದಾತಟನಿಗುತ್ತರ । ದಲ್ಲಿ ರಾಮನು ತನ್ನಯುಪೆಸರಿ । ನಲ್ಲಿ ಪುರವನದೊಂ
ದನಿರ್ಮಿಸಿ ಮುದ್ಗಲಾಶ್ರಮಕೆ ॥ ಎಲ್ಲರೊಡನೈತಂದು ಮುಂಗಡೆ । ಯಲ್ಲಿ
ಫೇನಾ ಸಿಂಧುಸಂಗಮ । ದಲ್ಲಿಮಿಂದನು ಬಾಣತೀರ್ಥದೊಳಂತೆ ಮಿಾ
ಯುತ್ತ ॥ ೮೭ ॥ ಮೆರೆವೆಗೋದಾವರಿಯ ತೀರದೆ । ಸುರುಚಿರಾಬ್ಧಕ
ತೀರ್ಥದೊಳು ಮಿಂ । ದರಸಿಯೊಡನಾ ರಾಘವೇಂದ್ರನು ನಮಿಸುತಂಬಿ
ಕೆಗೆ ॥ ಭರದೊಳು ತ್ರಿವಿಕ್ರಮನ ನರ್ಚಿಸು । ತಿರದೆಚಂಡಿಕೆಯನ್ನು
ಪೂಜಿಸಿ । ಹರುಷದಿಂದರ್ಚಿಸಿದ ವಿಜ್ಞಾನೇಶ್ವರನ ನೊಲಿದು ॥ ೮೮ ॥
ಪೊಡಮಡುತ ಲಕ್ಷ್ಮಿಯನು ಪೂಜಿಸಿ । ಕಡುಜವದೆಬಡಬಾಸು ಸಂಗ
ಮ । ಕೊಡನೆನಡೆತಂದಾ ಪ್ರತಿಷ್ಠಾನವನು ಕಂಡಿರದೆ ॥ ನಡೆದುವೃದ್ಧೆ
ಲಾಖ್ಯ ಸಂಗಮ । ದೆಡೆಯೊಳು ಸ್ನಾನವನೆಸಗಿ ಮುಂ । ಗಡೆಯೊಳೆಸೆವ
ಘನಶಿವನಂದಾ ಸಂಗಮಕೆಬಂದ ॥ ೮೯ ॥ ಮೆರೆವನರಸಿಂಹನನು ಪೂಜಿ
ಸು । ತೆರಗಿಸಿದ್ಧೇಶ್ವರನ ನರ್ಚಿಸಿ । ಭರದೊಳಾಪ್ರವರಾನದೀ ಸಂಗಮ
ದೆ ರಾಘವನು ॥ ಬರುತಲೆ ನಿವಾಸಪುರಿನೂಪ್ರರ । ಪುರಿಗಳೆರಡನು
ಕಂಡುಬಂದನು । ಹರಿಪಕದ್ರೂನದಿಯ ಸಂಗಮಕಾಗಿಸತಿಸಹಿತ ॥ ೯೦ ॥
ಮಿಂದು ವಿನತಾಸಂಗಮಕೆ ನಡೆ । ತಂದುರಾಘವನಲ್ಲಿ ಮುಳುಗುತ ।
ಬಂದನುಜನಸ್ಥಾನಕೆ ಮಹೀಸುತೆಯುನೊಡಗೊಂಡು ॥ ಬಂಧುಗಳಸಹಿ
ತಲ್ಲಿಕಾಣುವ । ಸುಂದರಸ್ಥಳಗಳನು ನೋಡುತ । ಬಂದನೆಸೆವ ತ್ರ್ಯಂ
ಬಕಕ್ಷೇತ್ರಕತಿ ಭರದಿಂದ ॥ ೯೧ ॥ ವೀರರಾಘವನಲ್ಲಿಮುದದೊಳು ।
ಮೂರುದಿನಗಳತನಕ ವಾಸಿಸಿ । ಧಾರಿಣೀಸುತೆಸಹಿತ ಶಂಭುವನೊಲಿದು
ಪೂಜಿಸುತ ॥ ತೀರವಾಸಿಗಳನ್ನು ದಣಿಸುತ । ಬಾರಿಬಾರಿಗೆ ದಕ್ಷಿಣದೆಸೆ
ಯ । ಚಾರುತರಘನಯಾತ್ರೆಯನು ತಾಂಮುಗಿಸುತೈತಂದ ॥ ೯೨ ॥
ಮುಂಗಡೆಮೆರೆವ ಸಪ್ತಶೃಂಗಕೆ । ಮಂಗಳಾಂಗನೆ ಸತಿಸಹಿತರಘು । ಪುಂ
ಗವನು ನಡೆತಂದುಬಳಿಕಾ ಗಸ್ತ್ಯಮುನಿಗೆರಗಿ ॥ ಕಂಗೊಳಸುವಸುತೀ
ಕ್ಷ್ಣಮುನಿಪಾ । ಲಂಗೆರಗಿ ಯೇಲಾಖ್ಯಪುರಕೆ ಜ । ನಂಗಳೊಡನೈತಂ
ದುಘೃಷ್ಣೇಶ್ವರನನರ್ಚಿಸಿದ ॥ ೯೩ ॥ ಮುಳುಗಿ ಶಿವತೀರ್ಥದೊಳುಭಾ
ಸ್ಕರ । ಕುಲಲಲಾಮನು ದೇವಗಿರಿಯನು । ನಲವಿನಿಂದೀಕ್ಷಿಸುತ ವಿರ
ಜಾಕ್ಷೇತ್ರಕೈತಂದು ॥ ತಳುವದರ್ಚಿಸಿ ಕಂಗೊಳಿಪ ಗುಡಿ । ಯೊಳಹ
ದೇವಿಯ ನಂದುಬಂದನು । ಬಳಿಕಮುಂದಿಹದೇವವಾಟಕೆ ಬಂಧುಗಳಸ
ಹಿತ ॥ ೯೪ ॥ ನಮಿಸಿ ನರಸಿಂಹನಿಗೆರಾಮನು । ವಿಮಲಸುಪಯೋಷ್ಣಿ

ಯೊಳು ಕಂಗೊಳಿ । ಪಮಲ ತಾಪೀನದಿಯಮೂಲದೊಳೊಂದು ಬೆಟ್ಟ
ವನು ॥ ಸಮೆದುನಿರ್ಮಿಸಿ ತನ್ನ ಪೆಸರೊಳು । ಕಮಲಲೋಚನೆ ಸಹಿತ
ಮಿಂದನು । ವಿಮಲ ಮನದೊಳು ಹರಿವರೇವಾನದಿಯ ಸೀರಿನಲಿ ॥
॥ ೯೫ ॥ ಮುನಿನುತೋಂಕಾರವನು ಪೂಜಿಸಿ । ಮನುಜನಾಥನು ಬಹು
ವಿಧಮುನಿಪ । ಘನತರದ ಪುಣ್ಯಸ್ಥಳಂಗಳ ನೀಕ್ಷಿಸುತ್ತೊಲಿದು ॥ ಜನಕ
ಜಾತೆಯಸಹಿತ ಪಾವನ । ಮುನಿಪ ತಾಪೀನದಿಯೊಳು ಮುಳುಗಿ । ವಿ
ನುತರೇವಾಸಂಗಮದೊಳು ಸ್ನಾನವಮಾಡಿದನು ॥ ೯೬ ॥ ಪರಮಹಾನದಿ
ಯಲ್ಲಿ ಮಿಂದು ದ । ಶರಥಭೂಪಾಲಕನ ಸುತ ತ । ನ್ನರಸಿಯನೊಲಿಸು
ತಾಪ್ರಭಾವಕ್ಷೇತ್ರಕ್ಕೈತಂದು ॥ ಮೆರೆವ ಸಿರ್ಮಲಜಲವನಾಂತತಿ । ಭರದೊ
ಳು ಪ್ರವಹಿಸುವಪಾವನ । ತರದ ಪಂಚಸರಸ್ವತೀಸಂಗಮದೆ ಮುಳು
ಗಿದನು ॥ ೯೭ ॥ ಬಂದುಸಾರಾಷ್ಟ್ರಕತಿ ಶೀಘ್ರದೊ । ಳಂದಮಾಗಿಹ
ಸೋಮನಾಥನ । ನಂದುಪೂಜಿಸಿ ಸಾಭ್ರಮತಿನದಿಯಲ್ಲಿಮುಳುಗುತ್ತ ॥
ಬಂದು ಶಂಖೋದ್ಧಾರಕಕೆ ನಲ । ವಿಂದೆಗೋಮತಿನದಿಯೊಳು ಮು
ಳುಗಿ । ಬಂದನುದ್ವಾರಾವತಿಗೆ ರಾಘವನುಸತಿಸಹಿತ ॥ ೯೮ ॥ ಧರಣಿ
ಯೊಳೆಸೆವ ಸಪ್ತಮೋಕ್ಷ ನ । ಗರಿಗೆಬಂದಾ ದ್ವಾರವತಿಯನು । ನೆರೆವಿ
ಲೋಕಿಸಿ ತೀರ್ಥವಿಧಿಗಳನೆಲ್ಲತಾನೆಸಗಿ ॥ ಮೆರೆವಖಿಳ ಪುಣ್ಯಸ್ಥಳಂಗ
ಳ । ನಿರದೆನೋಡುತ ಮುಗಿಸಿದನು ರಘು । ವರನು ಪಶ್ಚಿಮದಿಶೆಯಯಾ
ತ್ರೆಯನೆಲ್ಲಸಂತಸದೆ ॥ ೯೯ ॥ ಮುಂದೆಬಡಗಣ ದೆಸೆಗೆಬರುತಲೆ । ಸಂದ
ಸಂತಸದಿಂದೆ ರಾಘವ । ನಂದುಪರ್ವತ ತೀರ್ಥಕ್ಕೈತಂದವನಿಜೆಯಸಹಿತ ॥
ಸುಂದರಜ್ವಾಲಾಮುಖಿಗೆ ನಡೆ । ತಂದದನುಕಂಡಲ್ಲಿ ನಿಲ್ಲದೆ । ಬಂದನತಿಭ
ರದಿಂದೆ ಮಣಿಕರ್ಣಿಕೆಗೆ ಹರ್ಷದಲಿ ॥ ೧೦೦ ॥ ಮಿಂದುಕರತೋಯಾ
ನದಿಯೊಳಾ । ನಂದದೊಳು ದೇವಪ್ರಯಾಗಕೆ । ಬಂದುರಾಮನು ಸತಿ
ಸಹಿತಲಕನಂದೆಯದಡದಲಿ ॥ ಅಂದವಡೆದಾ ಬದರಿಕಾಶ್ರಮ । ಕಂದು
ನಡೆತಂದರ್ಚಿಸಿದನಾ । ನಂದದಿಂದೆರಗುತ್ತ ನರನಾರಾಯಣರನೊಲಿದು ॥
॥ ೧೦೧ ॥ ಎರಗಿಕೇದಾರೇಶ್ವರನ ವರ । ಚರಣಕಾ ರಘುನಾಥನು ತು
ಹಿನ । ಗಿರಿಯನೀಕ್ಷಿಸಿಬಂದು ವರಮಾನಸಸರೋವರಕೆ ॥ ಭರದೊಳಲ್ಲಿ
ಸ್ನಾನವನೆಸಗಿ । ಮೆರೆವ ಬಿಂದುಸರೋವರಕೆ ಬಂ । ದರಸಿವೆರಸಿಮು
ಳುಗಿದನಾ ಕೊಳದಮಲತೀರ್ಥದಲಿ ॥ ೧೦೨ ॥ ಕನಕಗಿರಿಗೈತಂದು ರ
ಘುನಂ । ದನನು ಬಳಿಕಲ್ಲಿರುವ ಕಮಲಾ । ಸನನ ಸಭೆಯನುಕಂಡು
ಬೊಮ್ಮನನಪ್ಪಿಕೊಂಡಿರದೆ ॥ ಮನಮೊಲಿದು ಸತ್ಕರಿಸಲಬ್ಜಭ । ವನು

ರಘುವರಂಗೆರಗಿ ಪೂಜೆಸಿ । ದನೊಲಿದು ವಿನುತಕಾಮಧೇನುವನಿತ್ತು ಭ
ಕ್ತಿಯಲಿ ॥ ೧೦೩ ॥ ಅವನುಳಿದು ಕೈಲಾಸಶೈಲಕೆ । ಪದೆದುರಘುಭೂವರ
ನು ಬರುತಿರ । ಲಿದನು ತಿಳಿದಾಶಂಕರನು ಸತಿಸಹಿತಿಹಿರುವಂದು ॥ ಸುದತಿ
ಸಹಿತವಿಮಾನವ ನಿಳಿದ । ಪದುಮನಾಭನ ಸಪ್ಪಿಕೊಳ್ಳುತ । ಮುದದೆಪೂ
ಜೆಸಿದನತಿ ಭಕ್ತಿಯೊಳೆರಗಿ ಕೈಮುಗಿದು ॥ ೧೦೪ ॥ ಧರಣಿಜಾತೆಗೆಶೈಲ
ನಂದನೆ । ಕರಗಳನುಮುಗಿಯುತ್ತ ಮನ್ನಿಸಿ । ವರವಸನ ಧನಕ
ನಕನವ ರತ್ನಾಭರಣಗಳನು ॥ ತರತರದ ಪೀತಾಂಬರಂಗಳ । ನು
ರುತರದ ಗಂಧಕುಸುಮಂಗಳ । ನಿರದೆ ತಾಪದೆವಿತ್ತು ಪೂಜೆಸಿದಳ
ತಿಹರ್ಷದಲಿ ॥ ೧೦೫ ॥ ಹರನುಮಾಡಿದ ಪೂಜೆಯನು ರಘು । ವರ
ನು ಕೈಕೊಂಡಲ್ಲಿನಿಲ್ಲದೆ । ಬರುತಮುಂದಕೆ ವರಹರಿದ್ವಾರವನು ನೆ
ರೆನೋಡಿ ॥ ಭರದೊಳು ಕುರುಕ್ಷೇತ್ರವನು ಕಂ । ಡಿರದೆ ಇಂದ್ರ
ಪ್ರಸ್ಥಪುರವನು । ನೆರೆವಿಲೋಕಿಸುತಾ ಮಧುವನಕೆಬಂದನಲ್ಲಿಂದ ॥
॥ ೧೦೬ ॥ ಅದನುಕಂಡಾ ರಘುವರನತಿ ಭ । ರದೊಳು ಬೃಂದಾವನ
ಕೆಬಂದು ಮು । ದದೊಳದನುನೋಡುತ್ತ ಬಳಿಕ್ಕೈತಂದು ಗೋಕುಲಕೆ ॥
ಸುದತಿಸಹಿತೆಲ್ಲೆಡೆಗಳನು ಕಂ । ಡೊದಗಿದಾನಂದದೊಳು ಧರಣಿತ । ಲ
ದೊಳೆಸೆವ ಗೋವರ್ಧನಾದ್ರಿಗೆ ಬಂದನಾದಿವಸ ॥ ೧೦೭ ॥ ಬಳಿಕವಂ
ತೀಪುರಕೆ ಬಂದಿನ । ಕುಲಲಲಾಮನು ಪೂಜೆಸಿಭಕುತಿ । ಯೊಳುಮಹಾ
ಕಾಲನನು ನಡೆತಂದಾಪುರವನುಳಿದು ॥ ಹೊಳೆವ ಗರುಡಕ್ಷೇತ್ರವನುತಾ ।
ತಳುವದೀಕ್ಷಿಸಿ ಜಲಧಿಕೂಪವ । ಕಳೆದುಬಂದನು ನೈಮಿಶಾರಣ್ಯಕೆ ವಿ
ಮಾನದಲಿ ॥ ೧೦೮ ॥ ವಿನುತ ಗೋಮತಿತೀರ್ಥದೊಳು ತ । ನ್ನಿಸಿ
ಯಳವೆರಸಿ ಮಿಂದು ರಘುನಂ । ದನನು ಬೇಗನೆಸೂತಶೌನಕರಾದಿಯಾ
ಗಿರುವ ॥ ಮುನಿಗಳೆಲ್ಲರಿಗೆರಗಿ ಬಹುವಿಧ । ಮನಿಪ ನೀತಿಗಳರಿತುಬಂ
ದನು । ವಿನುತಿವೆತ್ತಾ ಬ್ರಹ್ಮವೈವರ್ತದಸರೋವರಕೆ ॥ ೧೦೯ ॥ ಮು
ದದೆತಾನಾ ಬ್ರಹ್ಮವೈವ । ರ್ತದ ಸರೋವರದಲ್ಲಿ ಮೀಯುತ । ಸುದತಿ
ಸಹಿತೈತಂದು ತಮಸಾನದಿಗೆ ರಾಘವನು ॥ ಅವರೊಳು ಸ್ನಾನವೆಸಗಿ ವಿ
ಮಾ । ನದೊಳುಕೂಡುತ ಭರದೆಬಂದನು । ಮುದದೊಳಾಗಿಸಿಕೊಂಡ
ಯೋಧ್ಯಾಪುರಕೆ ಯಾತ್ರೆಯನು ॥ ೧೧೦ ॥ ಸತಿಸಹಿತಯಾತ್ರೆಯನು
ಪೂರೈ । ಸುತ ರಘುಕುಲೋತ್ತಮನು ಬಂದುದ । ನತಿಭರದೆ ಕೇಳ್ದಾ
ಸುಮಂತ್ರನಯೋಧ್ಯೆಯೆಲ್ಲವನು ॥ ವಿತತಸಂಮದದಿಂದ ಲಂಕರಿ । ಸುತ
ಸಕಲವಿಧ ವೈಭವದೊಳಾ । ಕ್ಷಿತಿಪತಿಗಿದಿರುವಂದು ಕೈಮುಗಿದೆರಗಿದನು

ಪದಕೆ ॥ ೧೧೧ ॥ ವರಸುಮಂತ್ರನ ನೊಲಿದುಮನ್ನಿಸಿ । ತರತರದ ಬಿರು ದಾವಳಿಗಳಿಂ । ದುರಿಮೆರೆವಖಿಳ ರಾಜವಿಭವದೊಳಾ ರಘೂದ್ವಹನು ॥ ಬರುತಯೋಧ್ಯಾ ಪುರದಮಧ್ಯದೊ । ಳಿರುವ ತನ್ನರಮನೆಗೆಬಂದನು । ಹರುಷದಿಂದಲೆ ಪುರವನೀಕ್ಷಿಸುತಖಿಳ ಜನಸಹಿತ ॥ ೧೧೨ ॥ ತನ್ನಜತೆ ಯೊಳು ಬಂದಮಾನವ । ರನ್ನು ಮನ್ನಿಸುತಾ ರಘೂತ್ತಮ । ನುನ್ನತ ಪತಾಕಾವಳಿಗಳಿಂ ದೆಸೆವರಮನೆಯನು ॥ ಮುನ್ನಸೇರುತ ವಂದಿಸುವ ಜನ । ರನ್ನು ಸಂತಸದಿಂದೆಕಾಣುತ । ಮನ್ನಿಸಿದನು ವಿಚಾರಿಸುತವರ ಕುಶಲವಾರ್ತೆಗಳ ॥ ೧೧೩ ॥ ಒಡನೆಬಂದಿಹ ನಾಲ್ಕುದಿಕ್ಕಿನ । ಪೊಡವಿ ಯಾಣ್ಮರಿಗಖಿಳ ಜನರಿಗೆ । ಕಡುಜವದೆ ಸುಗ್ರೀವನುಮೊದಲೆನಿಸುವಕ ಪಿಗಳಿಗೆ ॥ ಇಡಿವಸಂತಸದಿಂದೆ ರಾಘವ । ನಡಿಗಡಿಗೆ ಸುಖಭೋಜನಂಗ ಳ । ನಿಡಿಸಿ ತುಷ್ಟಿವಡಿಸಿದ ನೈದುದಿನಗಳಪರಿಯಂತ ॥ ೧೧೪ ॥ ಐದು ದಿವಸಂಗಳವರೆಗೆ ವಸು । ಧಾಧಿಪನಿರಿಸಿಕೊಂಡು ವಾನರ । ರಾದಿಯಾಗಿ ಹ ನಾಲ್ಕುದಿಕ್ಕಿನ ರಾಜರೆಲ್ಲರನು ॥ ಆದರಿಸಿ ಮನ್ನಿಸುತಖಿಳ ಮ । ರ್ಯಾ ದೆಗಳನಾಗಿಸಿ ಕಳುಹಿದನು । ಮೇದಿನಿಯೊಳವರವರ ದೇಶಂಗಳಿಗೆಹರ್ಷ ದಲಿ ॥ ೧೧೫ ॥ ಧರಣಿಸುತೆ ರಘುಭೂವರನೊಡನೆ । ಹರುಷದಿಂದೀ ಭರತಖಂಡದೊ । ಳಿರುತಿಹ ಸಕಲಪುಣ್ಯತೀರ್ಥಂಗಳನು ಸೇವಿಸುತ ॥ ವರಮಹಾಯಾತ್ರೆಯನು ತಾನಾ । ಚರಿಸಿ ರಾಜಸುಖಂಗಳನುತ । ನ್ನ ರಮನೆಯೊಳನುಭವಿಸುತಿದ್ದಳು ಬಹುವಿನೋದದಲಿ ॥ ೧೧೬ ॥ ಮನ ವೊಲಿದು ವಾಲ್ಮೀಕಿ ಮುನಿನಾ । ಥನು ಕುಶಲವರಿಗಂದು ಪೇಳದ । ವಿನುತಿವೆತ್ತಾನಂದ ರಾಮಾಯಣದೊಳೀ ತೆರದೆ ॥ ಜನಕಸುತೆ ಪತಿ ಸಹಿತಯಾತ್ರೆಗ । ಳನೆಸಗಿದಕಥೆ ಕಂಗೊಳಿಸುವುದು । ಜನರದುರಿ ತಂಗಳನು ಪರಿಹರಿಸುತ್ತ ಸಂತತವು ॥ ೧೧೭ ॥ ಜನಕಸುತೆಯಾತ್ರೆ ಯನುಮಾಡಿದ । ವಿನುತಸತ್ಕಥೆಯು ನತಿಭಕ್ತಿಯೊ । ಳನುದಿನವು ಮೋದುತಿಹ ಮಾನವರೀಧರಣಿಯೊಳಗೆ । ಘನಕಠಿನ ದುರಿತಂಗಳನು ಕ ಳೆ । ದನವರತ ತಾವನುಭವಿಸುವರು । ಧನಕನಕ ವಸ್ತ್ರಾಭರಣಮೊದ ಲಾದ ಭಾಗ್ಯವನು ॥ ೧೧೮ ॥ ವಿನುತಯಾತ್ರಾಧ್ಯಾಯಗಳನನು । ದಿನವು ತಪ್ಪದವನಿಯೊಳೋದುವ । ಜನರಿಗುಂಟಾಗುವುದು ಯಾತ್ರೆಯನಾಗಿಸಿದ ಫಲವು ॥ ಮನವೊಲಿದು ಮೇದಿನಿಯೊಳೀ ಕಥೆ । ಯನು ಪಠಿಸುವಬರೆ ಯುವ ಕೇಳುವ । ಮನುಜರಸಕಲಪಾಪಗಳು ನಾಶನವನೈದುವುವು ॥ ॥ ೧೧೯ ॥ ಈಕಥೆಯನೋದುವಜನರಿಗಾ । ಲೋಕನಾಥನು ತಪ್ಪದೀವ

ನ | ನೇಕವಿಧ ಸೌಖ್ಯಂಗಳನು ಸಂಪ್ರೀತಿಯಿಂನುತಾಳ್ದು ‖ ಬೇಕುಬೇ
ಕಾದ ಸುಖಗಳನಿಹ | ಲೋಕದೊಳನುಭವಿಸಿ ಕೊನೆಗಮರ | ಲೋ
ಕದೊಳು ಸದ್ಗತಿಯನೈದುವರಿದನು ಪಠಿಸುವರು ... ‖ ೧೨೦ ‖

ಇಂತು ಮೂವತ್ತೆರಡನೆಯ ಅಧ್ಯಾಯ ಸಂಪೂರ್ಣವು.

ಪದ್ಯಗಳು ೧೩೮೯.

ಮೂವತ್ಮೂರನೆಯ ಅಧ್ಯಾಯ.

ಸೂಚನೆ‖ ಧರಣಿಜಾತೆಯ ನೊಲಿಸುತಾ ರಘು |
ವರನು ಹಯಮೇಧಾಧ್ವರಗಳನು |
ವಿರಚಿಸಿದನು ವಸಿಷ್ಠಮುನಿಪಾಲಕ ನನುಜ್ಞೆಯಲಿ ‖

ಬಳಿಕರಾಘವನೊಂದುದಿನದೊಳು | ಕುಲಪುರೋಹಿತನನ್ನು ತನ್ನ
ಯ | ಬಳಿಗೆಬರಿಸಿ ಸಮುಚಿತಪೀಠವನಿತ್ತು ಕುಳ್ಳಿರಿಸಿ ‖ ತಳುವದಾತನಿ
ಗರ್ಘ್ಯಪಾದ್ಯಂ | ಗಳನುಕೊಟ್ಟರ್ಚಿಸುತತಿ ವಿನಯ | ದೊಳು ತಿಳು
ಹಿದನು ತನ್ನಭೀಷ್ಟವನಿಂತು ಕೈಮುಗಿದು ‖ ೧‖ ಮುನಿಪನಿಮ್ಮಾಜ್ಞೆ
ಯೊಳು ಪಾವನ | ಮೆನಿಪ ವರಹಯಮೇಧ ಯಾಗವ | ಮನವೊಲಿದೆಸ
ಗಬೇಕೆನುತಿರುವೆ ನಿದಕೆಬೇಕಾದ ‖ ವಿನುತಸಾಮಗ್ರಿಗಳನು ಜವದೊ |
ಳನುಗೊಳಿಸು ವಂತರುಹುವುದು ಲ | ಕ್ಷ್ಮಣನಿಗೆನ್ನುತ ಪವಕೆರಗಿಪೇ
ಳಿದನು ರಾಘವನು ‖ ೨ ‖ ಆಗಬಹುದೀ ನಿನ್ನಕೋರಿಕೆ | ಬೇಗನೆಸಫ
ಲವಾಗುವುದಮಲ | ಯಾಗಗಳನೆಸಗುವುದು ನಿಮ್ಮನ್ವಯಕೆ ಸಹಜವ
ಲಾ ‖ ಆಗಮ ವಿಧಾನಂಗಳಿಂದಿದ | ನಾಗಿಸುವೆನೆಂದಾ ವಸಿಷ್ಠನು | ರಾ
ಘವಂಗರುಹುತ್ತ ಬಂದನು ತನ್ನ ಮನೆಗಾಗಿ ‖ ೩ ‖ ಕರೆದು ಲಕ್ಷ್ಮಣನ
ನ್ನು ಶೀಘ್ರದೊ | ಳರದೆ ಮುನಿಪವಸಿಷ್ಠನೆಂದನು | ಕರುಣಿಸುತ್ತಲೆ
ಲಕ್ಷ್ಮಣನೆ ನೀನತಿಭರದೊಳೀಗ ‖ ಧರಣಿಪತಿರಾಘವನು ಮಾಡುವ |
ತುರಗಮೇಧಾಧ್ವರಕೆ ಬೇಕಾ | ಗಿರುವ ವಸ್ತುಗಳೆಲ್ಲವ ನನುಗೊಳಿಸು
ವುದೆಂದೆನುತ ‖ ೪ ‖ ಮುನಿವಸಿಷ್ಠನ ಪದಸರೋಜಕೆ | ಮಣಿದು
ವಂದಿಸಿ ಕರವಮುಗಿದತಿ | ವಿನಯದಿಂದಲೆ ಬಿನ್ನವಿಸಿದನು ನೀವುಪೇ
ಳ್ದಂತೆ ‖ ವಿನುತಹಯಮೇಧಾಧ್ವರಕೆ ಮೇ | ದಿನಿಯೊಳುತ್ತಮ ಮೆಂದೆ

ನಿಪಪಾ । ವನ ಪದಾರ್ಥಗಳೆಲ್ಲವನು ತರಿಸುವೆನುನಾನೆನುತ ॥ ೫ ॥ ಬ
ಳಿಕವಮುನಿಪ್ರೋತ್ತಮನು ಪೇಳವ । ಪೊಲಬಿಳ ಪದಾರ್ಥಗಳ ತರಿಸುತ ।
ಪಲವೃತರದಾ ಸೃಕ್ಸ್ರುವಾದಿಗಳೆಲ್ಲವನುಕೂಡೆ ॥ ತಳುವದಾಗಿಸಿ ಲಕ್ಷ್ಮ
ಣನುಕಂ । ಗೊಳಿಸ ಪಾವನ ಯಜ್ಞಶಾಲೆಯ । ನೊಲಿದುನಿರ್ಮಿಸಿ ಬಿನ್ನ
ವಿಸಿವನು ರಾಘವೇಂದ್ರನಿಗೆ ॥ ೬ ॥ ಒಡನೆ ಹಯಮೇಧಾಧ್ವರಕೆ ಬಲು ।
ಸಡಗರವೊಳಂದೆಲ್ಲವನು ತಾ । ನಡಿಗಡಿಗೆ ಮುನಿಪ್ರೋತ್ತಮನ ನೇಮ
ದೊಳನುಗೊಳಿಸುತ ॥ ಒಡೆಮರಾಘವ ಬಂದುಹೊಕ್ಕನು । ಮಡದಿಕೈ
ಯನುಪಿಡಿದು ಬಾಂಧವ । ರೊಡವೆರಸಿ ಶುಭಲಗ್ನದೊಳಗಾ ಯಾಗಶಾ
ಲೆಯನು ॥ ೭ ॥ ಕುಲಪುರೋಹಿತ ನಾಜ್ಞೆಯಾಂತಿನ । ಕುಲನರೇಂದ್ರ
ನು ಕೊಟ್ಟುವರಣಂ । ಗಳನು ಹದಿನಾರುಜನ ಋತ್ವಿಕ್ಕುಗಳಗಾಬಳಿ
ಕ ॥ ಬಿಳಿಯವೊಡಲಿನ ಪೀತಪುಚ್ಛದ । ವಿಲಸದಂಘ್ರಿಯ ನೀಲಕರ್ಣದ ।
ಲಲಿತತುರಗವ ನರ್ಚಿಸಿವನಾ ವಿಧಿವಿಧಾನದಲಿ ॥ ೮ ॥ ಧರಣಿಪತಿ ರಾಘವ
ನಪಾವನ । ತುರಗಮೇಧಾಧ್ವರವ ಹಯಮಿದು । ಧರಣಿಯೊಳಗತಿಶೂರ
ರೆನಿಸುವ ಜನಪರೀಹಯುವ ॥ ಭರದೆಕಟ್ಟುವುದವರ ಸೋಲಿಸಿ । ಧುರ
ದೊಳು ಬಿಡಿಸಿಕೊಂಬೆವೆನ್ನುತ । ಬರೆದಪಟ್ಟಿಕೆಯೊಂದನಾ ಹಯಮು
ಖದೆಕಟ್ಟಿಸಿದ ॥ ೯ ॥ ಹತ್ತುಸಾವಿರ ಸೈನ್ಯವನುಕೊಂ । ಡುತ್ತಮತು
ರಂಗವನು ನೀಂಸಲ । ಹುತ್ತವರ ಹಿಂಗಡೆಯೊಳೈದುವುದೆಂದು ರಾಘವೆ
ನು ॥ ಉತ್ತಮವಚನದೊಳು ಸುಮಂತ್ರನಿ । ಗತ್ತಮನ್ನಿಸಿ ನುಡಿದು
ಬಿಟ್ಟನು । ಬಿತ್ತರದವಿಭವದೊಳು ದೇಶದಮೇಲೆ ಕುದುರೆಯನು ॥
॥ ೧೦ ॥ ಸವನಶಾಲೆಗೆ ಕೋಟಿಸಂಖ್ಯೆಯೊ । ಳವರವರ ನಿಜಶಿಷ್ಯರೊ
ಡನತಿ । ಜವದೊಳೈತರುತಿದ್ದರಾ ಮುನಿವರರುದಿನದಿನದೆ ॥ ರವಿಕುಲೋ
ತ್ತಮ ನೆಲ್ಲರಿಗೆನಿ । ತೃವು ಸಮಾರಾಧನೆಯನಾಗಿಸಿ । ಸವಿಯಭೋಜನ
ಗಳನು ಮಾಡಿಸುತಿದ್ದನುಪಚರಿಸಿ ॥ ೧೧ ॥ ಭರತಖಂಡದನಾಲ್ಕುಕಡೆ ಗ
ಳೊ । ಳಿರುವದೇಶಗಳೆಲ್ಲವನು ಸಂ । ಚರಿಸಿ ಯಜ್ಞದಕುದುರೆ ತಡೆಯ
ಲ್ಪಡದೆನೃಪರಿಂದ ॥ ಬರುವಕಾಪಿನ ಸೈನ್ಯಸಹಿತ । ತ್ವರಿತದಿಂದಲೆವ-ತ್ತೆ
ಬಂದುದು । ವರೆವಯೋಧ್ಯಾಪುರವರಕೆರಡು ತಿಂಗಳೊಳಗಾಗಿ ॥ ೧೨ ॥
ಮನುಕುಲೋತ್ತಮ ರಾಘವೇಂದ್ರನು । ಜನಕಜೆಯು ನಾನಂದಪಡಿಸು
ತ । ವಿನುತಿವಡೆದಾ ಚೈತ್ರಶುದ್ಧದ ಪಾಡ್ಯಮಿದಿನದಲಿ ॥ ಮುನಿಗಳಪ್ಪ
ಣೆಪಡೆದು ಮಾಡಿಸಿ । ದನತಿ ವೈಭವದಿಂದೆ ಪಾವನ । ಮೆನಿಪ ವರವಿನು
ತಧ್ವಜಾರೋಪಣೆಯ ಕರ್ಮವನು ॥ ೧೩ ॥ ಸತಿಸಹಿತನಂದೀಶ್ವರನವೋ ।

ಲತಿಮುದದೊಳೇರುತ್ತ ತೊರೆದು ರ । ಜಿತಗಿರಿಯನಾ ಸವನಶಾಲೆಗೆಬಂ
ದಗಿರಿಶನನು ॥ ಕ್ಷಿತಿಸುತೆಸಹಿತ ರಾಘವೇಶ್ವರ । ನತಿಭರದೊಳಂ ದಿದಿರು
ಗೊಳ್ಳುತ । ಹಿತದೆಕರೆತಂದುಚಿತ ಪೀಠವನಿತ್ತು ಪೂಜಿಸಿದ ॥ ೧೪ ॥ ನೆರೆ
ದರಧ್ವರಶಾಲೆಯೊಳಖಿಳ । ಸುರರು ಧರಣೀಸುರರು ರಾಜರು । ವರವಿ
ಭೀಷಣ ಮುಖ್ಯರಾಕ್ಷಸರಖಿಳ ವಾನರರು ॥ ತರತರದ ಪಾತಾಳವಾಸಿಗ ।
ಳುರುತರದ ವೃಕ್ಷಾಭಿಮಾನದ । ಮರರುನಿತ್ಯವು ಬಂಧುಗಳನೊಡ
ಗೊಂಡು ನೆರೆನೆರೆದು ॥ ೧೫ ॥ ಬಂದವರುಗಳನೆಲ್ಲ ಸಂತಸ । ದಿಂದೆ
ಮನ್ನಿಸಿ ರಾಘವೇಶ್ವರ । ನಂದುಚಿತಪೀಠಂಗಳೊಳು ಕೂಡಿಸಿದನಾದರ
ದೆ ॥ ಬಂದುಕುಂಭೋದರನು ರಾಘವ । ನಿಂದೆಮನ್ನಣೆವಡೆದು ದಶರ
ಥ । ನಂದನನಹೊಗಳಿದನು ರಾಮಾಷ್ಟೋತ್ತರದೊಳಲ್ಲಿ ॥ ೧೬ ॥ ಮುನಿ
ವರರು ಚೈತ್ರಸಿತಪಂಚಮಿ । ದಿನದೆ ರಾಮನವಾಜಿಮೇಧಕೆ । ಘನಶುಭ
ಮುಹೂರ್ತದೊಳಗಾರಂಭವನು ಮಾಡುತ್ತ ॥ ವಿನುತ ಯೂಪಸ್ತಂಭ
ಕೆ ತುರಗ । ವನು ಬಿಗಿದುಕಟ್ಟುತ್ತ ಮಂತ್ರಗ । ಳನೊಲಿದುಚ್ಚರಿಸುತ
ಭಿಮಂತ್ರಿಸಿದರತಿಹರ್ಷದಲಿ ॥ ೧೭ ॥ ತುರಗವನುಛೇದಿಸುತ ತಾಪಸ ।
ವರರು ಗೋವಿನತುಪ್ಪದೊಳಗೆ ಕು । ದುರೆಯದೇಹದ ಮಾಂಸಖಂಡ
ಗಳೆಲ್ಲವ ನೆನೆಯಿಸಿ ॥ ಹರುಷದಿಂದಲೆ ಹೋಮಮಾಡಿಸಿ । ದರು ವಿನೋ
ದವನಾಂತು ವಹ್ನಿಯೊ । ಳುರುತರದಘನವೇದಮಂತ್ರಂಗಳನು ಪಠಿಸು
ತ್ತ ॥ ೧೮ ॥ ಕ್ಷಿತಿಸುತೆಯು ನೋಡುತಿರಲಾ ಮುನಿ । ಪತಿಗಳು ವಿಧಿ
ವಿಧಾನದಿಂದಲೆ । ಘೃತಚರುಪುರೋಡಾಶ ಪಾಯಸಮಧುತಿಲಂಗಳನು ॥
ಮುತುಕದ ಸಮಿತ್ಕುಶಗಳನುರಿವ । ಹುತವಹನೊಳರ್ಪಿಸುತ ಹೋ
ಮವ । ನತಿಭರದೊಳಾಗಿಸಿದರಾ ರಘುನಾಥನಿಂದೊಲಿದು ॥ ೧೯ ॥ ವೀರ
ರಾಘವನಿಂದಲೆ ವಸೋ । ರ್ಧಾರೆಯನು ಕೊಡಿಸಿದರು ವರಗಂ । ಭೀ
ರಭಾವದೊಳಾ ಮುನಿಪತಿಗಳುರಿವ ವಹ್ನಿಯಲಿ ॥ ಮೀರಿದತಿಸಂತೋಷ
ದಿಂದಲೆ । ಧಾರಿಣೀಸುತೆಯಾ ಮನವೊಲಿಸಿ । ಬಾರಿಬಾರಿಗೆ ಹೋಮ
ವನುಮಾಡಿದನು ರಾಘವನು ॥ ೨೦ ॥ ಪ್ರತಿದಿನವುರಾಘವನು ಸೀತೆಸ ।
ಹಿತ ಬೆಳಗಿನಾಸಮಯದೊಳಗೇ । ಳುತ ನಮಿಸಿ ಮುನಿಗಳಿಗೆಸುರರಿಗೆ
ರಾಮತೀರ್ಥದೊಳು ॥ ಅತಿಹರುಷದೆಸ್ನಾನವರಚಿಸಿ । ಹಿತದೊಳಗನು
ಷ್ಠಾನವ ನೆಸಗಿ । ವಿತತಭಕ್ತಿಯೊಳರ್ಚಿಸುವನಾ ಶಂಭುವನುಪದೆದು ॥
॥ ೨೧ ॥ ಬಂದು ಋತ್ವಿಕ್ಕುಗಳು ಸಂತಸ । ದಿಂದೆ ಮಂತ್ರಂಗಳ
ನುಪೇಳುತ । ತಂದಿರಿಸಿದಾ ಹೋಮವಸ್ತುಗಳೆಲ್ಲವನು ಕೊಂಡು ॥

ಮುಂದುರಿವ ವಹ್ನಿಯೊಳುಹೋಮವ । ನಂದುಮಾಡಿಸಿ ಭೂಮಿಸುತೆರಘು । ನಂದನರೊಡನೆತಂದರು ಪುರೋಡಾಶವನು ಪದೆಮ ॥ ೨೦ ॥ ಉದಯ ಮಧ್ಯಾಹ್ನಾಸ್ತಮಯ ಕಾ । ಲದೊಳಗನುದಿನ ಮಿಂತುತಾಪಸ । ರುದಿಸಿದಾನಂದದೊಳು ಹೋಮಂಗಳನು ಮಾಡಿಸುತ ॥ ವಿದಿತವಾಗಿಹ ಸಾಮಗಾನವ । ಪದುಮನಾಭನ ಮನಕೆಹರ್ಷವ । ನೊದವಿಪಂದದೆ ಮಾಡುತಿದ್ದರು ಯಾಗಶಾಲೆಯಲಿ ॥ ೨೩ ॥ ಸುರರು ಬಂದಿದಿರಲ್ಲಿ ನಿಂದೀ । ವರಹವಿರ್ಭಾಗಗಳನು ಸ್ವೀ । ಕರಿಸಿ ತಮ್ಮೆಡೆಗೈದುತಿದ್ದರು ಬಹುಳಹರ್ಷದಲಿ ॥ ನೆರೆದಮಾನವರೆಲ್ಲ ಮುದದಿಂ । ದೆರಡುವೇಳೆಯೊಳಧ್ವರವಿಧಿಯ । ನುರೆವಿಲೋಕಿಸುತಿದ್ದರಾ ವರಯಜ್ಞಶಾಲೆಯಲಿ ॥ ॥ ೨೪ ॥ ಬಂದುಸೇರಿದ ಜನರಿಗಾರಘು । ನಂದನನು ಮೃಷ್ಟಾನ್ನಭೋಜನ । ದಿಂದ ಸಂತುಷ್ಟಿಯನು ಮಾಡಿಸುತೆರಡುವೇಳೆಯಲಿ । ಚಂದನ ಕುಸುಮಗಳನು ಸಂತಸ । ದಿಂದಲೆಕೊಡಿಸಿ ಬಹುಳದಕ್ಷಿಣೆ । ಯಿಂದೆಸೆವ ತಾಂಬೂಲಗಳನೆಲ್ಲರಿಗೆ ಕೊಡಿಸಿದನು ॥ ೨೫ ॥ ನೃತ್ತಗೀತಾದಿಗಳನೀಕ್ಷಿಸಿ । ಯುತ್ತಮಪುರಾಣಂಗಳನು ಕೇ । ಳುತ್ತ ರಘುಭೂವರನು ಹಗಲನುಕಳೆದು ಹರ್ಷದಲಿ ॥ ಮತ್ತೆಸಾಯಂ ಸಂಧ್ಯೆಯನೆಸಗಿ । ಬಿತ್ತರಮೆನಿಸುವಗ್ನಿ ಹೋತ್ರವ । ನುತ್ತರಕ್ಷಣದಲ್ಲಿ ತಾನೆಸಗಿದನುಸತಿಸಹಿತ ॥ ॥ ೨೬ ॥ ವಿನುತ ಸತ್ಕಥೆಗಳನು ಕೇಳುತ । ಮನುಕುಲೋತ್ತಮ ನೆರಡುಜಾವಗ । ಳನುಕಳೆದು ನಿದ್ರಿಸುತಲಿದ್ದನು ರಾತ್ರಿಸತಿಸಹಿತ ॥ ದಿನದಿನದೊಳಂತೆಸಗಿ ಸೇರಿದ । ಮುನಿಗಳಿಗೆ ಸಂತಸವನಾಗಿಸಿ । ದನು ಕೊಡುತ ಬೇಕಾದ ವಸ್ತುಗಳೆಲ್ಲವನುಕೂಡೆ ॥ ೨೭ ॥ ತುರಗಮೇಧವನಿಂತು ಮುಗಿಸುತ । ಧರಣಿಪತಿ ರಾಘವನು ಸಮನಂ । ತರದೊಳಾ ವರಚೈತ್ರಶುದ್ಧನವಮಿಯದಿವಸದಲಿ ॥ ನೆರೆಮೆರೆವವರ ರಥದೊಳಂದಾ । ಧರಣಿನಂದನೆಯೊಡನೆ ಕುಳತತಿ । ಭರದೆಬಂದನವಭೃತದಸ್ನಾನಕ್ಕೆ ವಿಭವದೊಳು ॥ ॥ ೨೮ ॥ ತನ್ನಮುಂಗಡೆ ಯಗ್ನಿಹೋತ್ರಗ । ಳನ್ನಿರಿಸಿ ಕೊಂಡಾರಥದೆಸಂ । ಪನ್ನಮತಿ ರಾಘವನಖಿಳ ಋತ್ವಿಕ್ಕುಗಳಸಹಿತ ॥ ಉನ್ನತ ವಿಭವದಿಂದೆ ಬಂದನು । ಸನ್ನುತಿವಡೆದ ರಾಮತೀರ್ಥಕೆ । ಮನ್ನಿಸುತ ಜನರೆಲ್ಲರ ನಧಿಕಹರ್ಷವನುತಾಳ್ದು ॥ ೨೯ ॥ ಮುನಿವರರ ಮಂತ್ರಗಳನಾಲಿಸು । ತಿನಕುಲೇಂದ್ರನು ರಾಮತೀರ್ಥದೊ । ಳನಿಯುಳಸಹಿತವಭೃತದಸ್ನಾನವನುತಾನೆಸಗಿ ॥ ಜನಗಳೆಲ್ಲರ ಮೇಲೆರಚಿ ಜಲ । ವನುಸುವಿಮಲಾಭರಣ ವಸ್ತ್ರಗ । ಳನುಧರಿಸಿಕೊಂಡಂದು ಬಂದನು ರಾಜಮಂ

ದಿರಕೆ ॥ ೩೦ ॥ ಕರಿತುರಗ ಗೋಮಹಿಷ ಕಾಂಚನ । ವರವರೂಥ
ವಸುಮತಿಮೊದಲಹ । ತರತ್ತರದ ದಾನಂಗಳನು ದಕ್ಷಿಣೆಗಳಿಂದೊಡನೆ ॥
ನೆರೆದ ಋತ್ವಿಕ್ಕುಗಳಿಗಾ ರಘು । ವರನುಕೊಟ್ಟು ದಣಿಸಿದನತ್ಯಾ । ದರ
ದೊಳುರೆ ಮನ್ನಿಸುತಕ್ರ್ಯಮುಗಿದತಿ ವಿನಯದಿಂದೆ ॥ ೩೧ ॥ ಮುನಿವಸಿ
ಷ್ಠನು ಜನಕನಂದನೆ । ಯನು ನನಗೆನೀಂ ದಾನವೀಡೆಂ । ದೆನುತರಾ
ಘವನನ್ನು ಸಮನಂತರದೆಯಾಚಿಸಲು ॥ ಮನದೊಳಾಲೋಚಿಸದೆ ದ
ಕ್ಷಿಣೆ । ಯನು ತೆಗೆದುಕೊಂಡಾ ಮಹೀಸುತೆ । ಯನು ವಸಿಷ್ಠನಿಗಿತ
ನುಚ್ಚರಿಸುತ್ತ ಮಂತ್ರವನು ॥ ೩೨ ॥ ಕೆಲರುನಿಂದಿಸಿದರು ವಸಿಷ್ಠನ
ನಿಳೆಯೊಳೀನನ್ಯಾಯ ವೆನ್ನುತ । ಕೆಲರುಪೇಳ್ದರು ಕೆಲರುಬೈದರು
ರಾಘವೇಶ್ವರನ ॥ ಕೆಲರುಗೋಳಾಡಿದರು ದುಃಖದೆ । ಕೆಲರುಮನಬಂದಂ
ತೆ ನುಡಿದರು । ಕೆಲರು ಯಮನಂತಾ ಮುನಿವರನನಲ್ಲಿ ನೋಡಿದರು ॥
॥ ೩೩ ॥ ಬಳಿಕರಾಘವನಂ ಕರೆದು ಮುನಿ । ಕುಲತಿಲಕನಿಂತೆಂದು ನುಡಿ
ದನು । ನೆಲದಣಾಗಿ ಜಾನಕಿಯತೂಕಕೆ ಯೆಂಟರಷ್ಟೆನಿಪ ॥ ಹೊಳೆವಚಿ
ನ್ನವನಿತ್ತು ಸಂತಸ । ದೊಳೆನಗೆ ಮಹೀಸುತೆಯ ನೀಗಳೆ । ನಲಿವುಕೈ
ಕೊಳ್ಳುವುದು ಹಿಂದಕೆ ಮತ್ತೆನೀನೆನುತ ॥ ೩೪ ॥ ಆಗಲಾ ನುಡಿಗೇಳ್ದ
ನೃಪತಿ ಸ । ರಾಗದಿಂದಲೆ ತನ್ನಸತಿಯನು । ತೂಗುವತ್ರಾಸಿ ನೆಡಭಾಗ
ದಬಟ್ಟಲಿನೊಳಿರಿಸಿ ॥ ಹಾಗೆತುಂಬಿಸಿ ಚಿನ್ನವನು ಬಲ । ಭಾಗದೊಳ
ಮುನಿಪಗೆ ಕೊಟ್ಟನು । ತೂಗಿಸ ಸತಿಯತೂಕದೆಂಟು ಮಡಿಯಸು
ವರ್ಣವನು ॥ ೩೫ ॥ ಭೂಮಿಪಾಲಕನಿತ್ತ ಚಿನ್ನವ । ನಾಮುನೀಂದ
ನು ತೆಗೆದುಕೊಳ್ಳುತ । ಭೂಮಿಸುತೆಯನು ಕೊಟ್ಟರಾಘವನಿಗತಿ ಶೀಘ್ರ
ದಲಿ ॥ ಕಾಮಧೇನು ವಿಮಾನ ಕೌಸ್ತುಭ । ಭೂಮಿಸುತೆ ಪ್ರರರಾಷ್ಟ್ರ
ವರಚಿಂ । ತಾಮಣಿಗಳ ನದಾರ್ಗವಿಾಯದಿರೆಂದು ನೇಮಿಸಿದ ॥ ೩೬
ಯಾಗಶಾಲೆಗೆ ಮತ್ತೆ ಬಂದಾ । ರಾಘವನು ಮುನಿವರನ ನೇಮದೊ । ಳ
ಗ ಯಜ್ಞದಪಾತ್ರೆಗಳನು ವಿಸರ್ಜಿಸುತಬಳಿಕ ॥ ಬೇಗದಕ್ಷಿಣೆಗಳನ
ಕೊಟ್ಟನು । ರಾಗದಿಂದಲಿ ತೃಪ್ತಿಪಡಿಸಿದ । ನಾ ಗುರೂಕ್ತಿಯನಾಲಿಸು
ಋತ್ವಿಕ್ಕುಗಳನೊಲಿದು ॥ ೩೭ ॥ ನಿನ್ನೊಡನೆ ಋತ್ವಿಕ್ಕುಗಳನುರೆ । ವ
ನ್ನಿಸಿಕರೆದುಕೊಂಡು ಹೋಗಿ ಬಿ । ಡೆನ್ನ ಕೋಶಾಗಾರದೊಳವರು ವ
ನಕೆಬಂದಷ್ಟು ॥ ಚಿನ್ನವತೆಗೆದು ಕೊಳ್ಳಲಿ ಬಳಿಕ । ವನ್ನು ಕಳುಹಿಸ
ರವರಸ್ಥಳ । ಕೆನ್ನುತಾ ರಘುವರನುಪೇಳ್ದನು ಲಕ್ಷ್ಮಣಂಗೊಲಿದು ।
॥ ೩೮ ॥ ಆತನಪ್ಪಣೆಯಂತೆ ಲಕ್ಷ್ಮಣ । ನಾತುರದೊಳಂ ತೆಸಗಿದಬ

ಕ । ಭೂತಳಾಧಿಪ ರಾಘವೇಶ್ವರನವರುಗಳಿಗೆಲ್ಲ ॥ ಖ್ಯಾತಿವಡೆದ ಸುಭೋ
ಜನವ ಸಂ । ಪ್ರೀತಿಯಿಂದಾಗಿಸುತ ಸಂತೋ । ಷಾತಿಶಯದಿಂ ಕಳುಹಿ
ಕೊಟ್ಟನವರವರೆಡೆಗಳಿಗೆ ॥ ೩೯ ॥ ಹೊಳೆವರತ್ನಾಭರಣವಸನಂ । ಗಳನು
ರಾಘವನಿತ್ತು ಪೂಜಿಸಿ । ಕಳುಹಿಕೊಟ್ಟನು ಸಕಲದೇವತೆಗಳನು ಶಂಭು
ವನು ॥ ಬಳಿಕ ವಿಬುಧರು ಧಾರಿಣೀಪತಿ । ಗಳು ವಿಭವಕನುಸಾರವಾಗಿ
ಯೆ । ನಲಿದುಕೊಟ್ಟರು ಕಾಣಿಕೆಗಳನು ರಾಘವೇಂದ್ರನಿಗೆ ॥ ೪೦ ॥ ಧರಣಿ
ನಂದನೆಸಹಿತ ರಘುಭೂ । ವರನು ರಥದೊಳ್ಕುಳಿತು ಮುಂಗಡೆ । ನೆರೆ
ಮೆರೆವವಿಮಲಾಗ್ನಿಹೋತ್ರಂ ಗಳನಿರಿಸಿಕೊಂಡು ॥ ನೆರೆದಮಾನವರೊ
ಡನಯೋಧ್ಯಾ । ಪುರಿಗೆ ನಡೆತಂದಿಳಿದು ರಥದಿಂ । ದರಮನೆಯನತಿ ವಿಭ
ವದಿಂದಲೆ ಹೊಕ್ಕನಾದಿನದೆ ॥ ೪೧ ॥ ಬಳಿಕಜಾನಕಿಯೊಡನೆ ಸಂತಸ ।
ದಳೆದು ರಘುನಂದನನು ತನ್ನಯ । ನಿಳಯದೊಳಗಂ ದಗ್ನಿಹೋತ್ರಂ
ಗಳನುಶೀಘ್ರದಲಿ ॥ ನೆಲೆಗೊಳಿಸಿ ಸರ್ವೋತ್ತಮ ಸ್ಥಳ । ದೊಳಧಿಕ ವಿ
ಭವದಿಂದೆ ಬಂದನು । ತಳುವದೆ ಸಭಾಸ್ಥಳಕೆ ಸೋದರರೊಡನೆ ಹರ್ಷ
ದಲಿ ॥ ೪೨ ॥ ಗಿರಿಶನಾರಘುವರನ ಹೊಗಳುತ । ಹೊರಟುಹೋದನು ರ
ಜತಶೈಲಕೆ । ಧರಣಿಪತಿ ರಾಘವನೆಸಗಿದರ್ಚನೆಯ ಕೈಕೊಂಡು ॥ ಹೊರ
ಟುಪೋದರು ತಮ್ಮಡೆಗಳಿಗೆ । ಧರಣಿಪಾಲಕರೆಲ್ಲ ಬಳಿಕತಿ । ಹರುಷದಿಂ
ದಲೆಕೈಮುಗಿದು ರಾಮಾಜ್ಞೆಯನುತಳೆದು ॥ ೪೩ ॥ ಸಕಲಋತ್ವಿಕ್ಕಗ
ಳು ಬೃಂದಾ । ರಕರು ಮುನಿಗಳು ಬಂದುಸೇರ್ದರ । ಧಿಕಹರುಷದಿಂ
ದವರವರ ಮನೆಗಳಿಗೆಶೀಘ್ರದಲಿ ॥ ಸಕಲ ರಾಜಸುಖಂಗಳನು ಜಾ । ನಕಿ
ಯೊಡನನುಭವಿಸು ತಿನಕುಲತಿ । ಲಕನನವರತ ರಮಿಸುತಿದ್ದನು ಬಹು
ವಿನೋದದಲಿ ॥ ೪೪ ॥ ಮನುಕುಲೋತ್ತಮ ರಾಘವೇಂದ್ರ ನ । ವನಿಜೆ
ಯನು ಸಂತೋಷಪಡಿಸುತ । ಮುನಿಮತದೊಳಿಪ್ಪತ್ತು ಸಂವತ್ಸರಗ
ಳೊಳಗಾಗಿ ॥ ಮನವಣಿಯೆ ತಾನಿಂತು ಪಾವನ । ಮೆನಿಪ ದಶಹಯ
ಮೇಧಮಾಗಗ । ಳನೆಸಗಿದ ನತ್ಯಧಿಕವಕ್ಷಿಣೆಗಳನು ತಾನಿತ್ತು ॥ ೪೫ ॥
ಇಂತುಹಯಮೇಧ ಗಳನೆಸಗಿದ । ನಂತರದೊಳಾ ಜನಕಸುತೆ ಬಲು ।
ಸಂತಸವನಾಂತಾ ರಘುವರನ ಪದವಸೇವಿಸುತ ॥ ಅಂತಮಿಲ್ಲದ ಸೌಖ್ಯ
ವನು ತಾ । ನಾಂತಯೋಧ್ಯಾ ಪುರದೊಳಿರುತಿಹ । ಕಾಂತೆಯರನಾನಂ
ದಪಡಿಸುತ್ತಿದ್ದ ಳನುದಿನವು ॥ ೪೬ ॥ ಗಿರಿಜೆ ಕೈಲಾಸಾದ್ರಿಯೊಳುಶಂ ।
ಕರನೊಡನಖಿಳ ಸೌಖ್ಯಗಳ ನನ । ವರತ ತಾಳ್ದು ರಮಿಸಿ ವಿನೋದವ
ನೈದುವಂದದಲಿ ॥ ಧರಣಿಸುತೆ ಕಂಗೊಳಿಪ ನಿಜಮಂ । ದಿರದೊಳಾ ರಾ

ಮನೆೊಡನೆಲ್ಲಾ | ತೆರದಸೌಖ್ಯವನಾಂತು ರಮಿಸುತಲಿದ್ದಳನವರತ ॥ ೪೭ ॥ ಯಾಗಚರಿತೆಯು ನೀವುಹಿಯೊಳನು | ರಾಗದಿಂದಲೆ ಪಠಿಸುವಜನರು | ಬೇಗಪಡೆವರು ತುರಗಮೇಧವ ನೆಸಗಿದಫಲವನು ॥ ಭೋಗಭಾಗ್ಯಂಗಳನು ಹೊಂದಿ ಸು | ಖಾಗಮನಗಳ ನೀಕ್ಷಿಸುತ್ತ ಸ | ರಾಗದಿಂದಲೆ ಬಾಳುವರಖಿಳ ಬಾಂಧವರಸಹಿತ ... ... ॥ ೪೮ ॥

ಇಂತು ಮೂವತ್ತುಮೂರನೆಯ ಅಧ್ಯಾಯು ಸಂಪೂರ್ಣವು.

ಪದ್ಯಗಳು ೧೮೩೭.

ಮೂವತ್ತು ನಾಲ್ಕನೆಯ ಅಧ್ಯಾಯು.

ಸೂಚನೆ ॥ ಜನಕನಂದನೆ ಸಕಲಸೌಖ್ಯಗ |
ಳನನುಭವಿಸುತ ರಾಘವೇಂದ್ರನೊ |
ಡನಖಿಳವಿಲಾಸಗಳನೀಕ್ಷಿಸುತಿದ್ದ ಳಡಿಗಡಿಗೆ ॥

ಸತಿಸಹೋದರರೊಡನೆ ದಶರಥ | ಸುತ ನಧಿಕಸಂತೋಷವನು ತಾ | ಳ್ದತಿಕರುಣೆಯಿಂಪಾಲಿಸುತಖಿಳ ಜನಸಮೂಹವನು ॥ ವಿತತವೈಭವದಿಂದೆ ಕಂಗೊಳಿ | ಸುತಿಹ ತನ್ನರಮನೆಯೊಳವನೀ | ಸುತೆಸಹಿತಸುಖಿಸುತ್ತಲಿದ್ದನು ಪಲವುತೆರದಿಂದೆ ॥ ೧ ॥ ಹೊಳೆದುದಾರಾಜಗೃಹ ಸಲಿಕಂ | ಗೊಳಿಪ ವೈಕುಂಠಕ್ಕೆಣೆಯೆನಿಸಿ | ಥಳಥಳಿಪ ಶೈಯ್ಯಾಗೃಹವು ಚಂದಿರನವೊಲೆಸೆದುದು ॥ ನೆಲವು ಕಾಂಚನಮಯುವೆನಿಸಿ ಕಂ | ಗಳಿಗೆ ತೋರಿದುದಿಂದ್ರನೀಲಂ | ಗಳನು ಕೆತ್ತಿದಮಧ್ಯಮಾರ್ಗವು ರಂಜಿಸಿದುದಲ್ಲಿ ॥ ೨ ॥ ಚಿನ್ನದಪುಡಿಯು ಗಾರೆಯುನಿರಿಸಿ | ರನ್ನದಶಿಲೆಗಳಿಂದೆ ನಿರ್ಮಿಸಿ | ದುನ್ನತದಗೋಡೆಗಳು ಮೆರೆದವುನಾಲ್ಕುಕಡೆಗಳಲಿ ॥ ಸನ್ನುತಿವಡೆದ ಚಿತ್ರಚಿತ್ರದ | ಕನ್ನಡಿಗಳಿಂದುರೆ ವಿರಾಜಿಸಿ | ಕಣ್ಣುಗಳಿಗಾನಂದವನು ಮಾಡಿದವುಗೋಡೆಗಳು ॥ ೩ ॥ ಅಲ್ಲಿಕಂಗೊಳಿಸಿದುವು ಪಚ್ಚೆಯ | ಕಲ್ಲಿನಾಕಂಬಗಳು ಪಟಿಕದ | ಕಲ್ಲಿನಾಕಂಬಗಳು ಶಯ್ಯಾಗೃಹದಮಧ್ಯದಲಿ ॥ ಎಲ್ಲಕಡೆಯೊಳು ನಾಲ್ಕುದಿಕ್ಕಿಗೆ | ಳಲ್ಲಿ ಮೇಲ್ಗಡೆಕಾಣುತಿದ್ದುವು | ಬಿಳ್ಳಿಮುತ್ತಿನಕುಚ್ಚುಗಳು ಮುತ್ತುಗಳಹಾರಗಳು ॥ ೪ ॥ ಹೊಳೆವ ಚಿನ್ನದಸರಿಗೆ ಜವನಿಕೆ | ಗಳು ವಿರಾಜಿಸುತಿದ್ದವು ಕನಕ | ಕಲಶಗಳು

ಕಂಗೊಳಿಸುತ್ತಿದ್ದುವು ಸರ್ವಕಾಲದಲಿ ॥ ಬೆಳಗುತ್ತಿದ್ದುವು ರತ್ನದೀಪಂ ।
ಗಳತಿ ಹರ್ಷವನಾಗಿಸುತ ನೆರೆ । ಪೊಳೆದುರಂಜಿಸುತ್ತಿದ್ದವು ಕನಕಮ
ಯದಮಂಚಗಳು ॥ ೫ ॥ ಮೆರೆದವಾ ಮಂಚಗಳಗಲಂ । ಕರಿಸಿದಸರಿ
ಗೆವಸ್ತ್ರಗಳು ತರ । ತರದ ಮುತ್ತಿನಕುಚ್ಚುಗಳು ಮೇಲುಗಡೆತೋರಿದ
ವು ॥ ಉರಿವ ರತ್ನದದೀಪಗಳು ಹಗ । ಲಿರುಳು ಕಂಗೊಳಿಸಿದುವು ಚಿ
ನ್ನದ । ಪಿರಿಯಮಂಚದ ನಾಲ್ಕು ಮೂಲೆಗಳಲ್ಲಿ ಸಂತತವು ॥ ೬ ॥
ಪೊಳೆಯುತಿದ್ದುವು ಬೀಸಣಿಗೆಗಳು । ಬಿಳಿಯಚಾಮರಗಳು ಸುವರ್ಣ
ದ । ಪಲವುಬಟ್ಟಲುಗಳು ವಿಮಲತಾಂಬೂಲಪಾತ್ರೆಗಳು ॥ ಬೆಳೆದಸಂತ
ಸದಿಂದ ಚಾಮರ । ಗಳನುಬೀಸುತಲಿದ್ದರು ಹಗಲಿ । ರುಳುಗಳಲಿ ರಂ
ಭೆಗೆಣೆಯೆನಿಪಾ ಸೇವಕೀಜನರು ॥ ೭ ॥ ಕಲಕಲಧ್ವನಿಗಳನು ಮಾಡು ।
ತ್ತಲೆಸೆದುವು ಶಯ್ಯಾಗೃಹದೊಳು ಸ । ಕಲವಿಧಮೆನಿಪ ಕೋಕಿಶುಕಪಿಕ
ಶಾರಿಕಾಂಗಳು ॥ ನಳಿನಲೋಚನೆ ಸೀತೆ ರವಿಕುಲ । ತಿಲಕನಿಗೆ ಸಂ
ತೋಷವನೆಸಗಿ । ದಳು ಪಲವುತೆರದಾಟಕೂಟಗಳಿಂದೆ ಗೋಪ್ಯದಲಿ ॥
॥ ೮ ॥ ಇಂತಖಿಳ ವಿಭವಂಗಳಿಂದೆ ನಿ । ರಂತರಮೆಸೆವ ಸೆಜ್ಜೆವನೆಯೊ
ಳ । ಗಂತವಿಲ್ಲದ ಸಂತಸವನಾಂತಾ ರಘೂತ್ತಮನು ॥ ಅಂತರಂಗದೊ
ಳೀಕ್ಷಿಸುತ ನಿಜ । ಕಾಂತೆಯನು ಮನಬಂದತೆರದೊಳ । ಗಿಂತು ಪಲತೆ
ರದಿಂದೆ ಪೊಗಳಿದನತಿ ವಿನೋದದಲಿ ॥ ೯ ॥ ಜನಕಸುತೆ ಕೇಳ್ಮೂರುಲೋ
ಕದೆ । ನಿನಗೆ ಸಮನೆಂದೆನಿಪ ಲಲನಾ । ಮಣಿಯರಿಲ್ಲವು ಶುಕ್ಲಪಕ್ಷದ
ಪೂರ್ಣಶಶಿಯೊಲು ॥ ಅನವರತ ಕಂಗೊಳಿಸುತಿರ್ಪವು । ವನಿತೆ ನಿನ್ನ
ನಖಗಳು ಮೆರೆವುವು । ವಿನುತನಖಮಧ್ಯಗಳು ದಾಡಿಮಬೀಜಗಳತೆರದಿ ॥
॥ ೧೦ ॥ ವರಪುಷ್ಪಂಗಳ ಸಾವಗಂ ಸಕ । ಲರಿಗೆ ತೋರಿಸುವಂತೆ ಮಂ
ಗಳ । ಕರಮೆನಿಸುವ ಸ್ವಸ್ತಿಕಧ್ವಜಪದ್ಮಮೊದಲಾದ ॥ ಪರಿಪರಿಬಗೆಯ
ದಿವ್ಯರೇಖೆಗ । ಳುರುಜೆಯಿಂದುರೆ ರಂಜಿಪವು ನಿ । ನ್ನೆರಡು ಅಂಗಾಲು
ಗಳಬುಜದಳಮಧ್ಯಭಾಗದೊಳು ॥ ೧೧ ॥ ಎರಡು ಕೆಳಕಾಲುಗಳು
ಗುಂಡಾ । ಗಿರುತಿಪವ್ರ ಮಾವಳದಫಲದಂ । ತರಸಿ ಕೇಳ್ಪಿಂಡಾಲಕಣೆ
ಯುಪ ನಿನ್ನಯತೊಡೆಗಳು ॥ ಪರಮಸಾಮ್ಯವ ನಾಗಿಸುತೆಸಗೆ । ನೆರೆವಿ
ರಾಜಿಸುತ್ತಿಪವು ಮಂಜುಳ । ಹರಿತವರ್ಣವನಾಂತು ರೋಮರಹಿತಗಳಿಂ
ದೆನಿಸಿ ॥ ೧೨ ॥ ಬಲಿತು ಗುಂಡಾಗಿರುವ ಜಘನಂ । ಗಳು ಕರಿಯಕುಂ
ಭಗಳಂತುರೆ । ಪೊಳೆಯುತಿಹವಾ ರೋಮರಹಿತಂಗಳೆನಿಸಿ ಸತತವು ॥
ನಳಿನಲೋಚನೆ ನಿನ್ನನಾಭಿಯು । ಸಲೆವಿರಾಜಿಪ್ರ ದಾಳವೆನಿಸಿ ಬ । ಹು

ಳಸೊಗಸಿನಿಂದೆಸೆದು ಪರು ತ್ತಳವಾಗಿಕಾಣಿಸುತ ‖ ೧೩ ‖ ಅಂಗನಾಮ ಣಿಸೀತೆ ಕೇಳ್ನಿ । ನ್ನಂಗದೊಳಿರುವ ಮೂರುವಳಿಗಳು । ಕಂಗೊಳಿಸು ವುವು ಪಾವನವೆನಿಸುವಾ ತ್ರಿವೇಣಿಯೊಲು ‖ ಸಿಂಗದನಡುವಿಗೆ ಸಮನಾ ಗಿಹ । ಸಿಂಗರವೆನಿಸಿ ತೋರ್ಪುದು ಜನರ । ಕಂಗಳಿಗೆಸಂತತವು ನಿನ್ನ ಯ ಸೊಂಟಕಿರಿದೆನಿಸಿ ‖ ೧೪ ‖ ಪಳದಿಬಣ್ಣವನಾಂತ ದೇಹವು । ಸಲಮ ನೋಹರವೆನಿಸಿ ನಿತ್ಯವು । ಹೊಳೆವುದತಿಮೃದುವಾಗಿ ಪ್ರತ್ಯೋದಯುವ ಸೂಚಿಸುತ ‖ ಬಲಿತಬೆನ್ನೆಲುಬೆಸೆ ವುದತಿಕೋ । ಮಲವೆನಿಪ ಕಂಬದ ತೆರದೆಮಂ । ಜುಳವೆನಿಸಿ ಕೊಂಡುದ್ದವೆನಿಸುತ ಬಹುನಯವನಾಂತು ‖ ‖ ೧೫ ‖ ಬಲಿತುಚಿನ್ನಾಗಿರುತಿಹವು ಕೂ । ದಲುಗಳಲ್ಲದೆ ಪಕ್ಕಗಳು ಮಂ । ಜುಳವೆನಿಸುವುದು ನಿನ್ನ ಕುಕ್ಷಿಯು ಹಸಿರುಬಣ್ಣವನು ‖ ತಳೆ ದು ಎತ್ತರವಾಗಿಕಾಣುತ । ಜಲಜನೇತ್ರಿಯೆ ನಿನ್ನೆರಡುಭುಜ । ಗಳಿರೆ ರಂಜಿಸುತಿಹವು ವೃಕ್ಷದಶಾಖೆಗಳತೆರದೆ ‖ ೧೬ ‖ ನನಗೆ ಸಾಖ್ಯವನುಂಟು ಮಾಡುತ । ಕನಕವರ್ಣವನಾಂತು ಮಂಜುಳ । ಮೆನಿಸಿಕೊಂಡಿದೆ ನಿ ನ್ನದೆಯು ಬಹುಳೋನ್ನತಿಯನಾಂತು ‖ ಜನಕನಂದನೆ ಕೇಳುಕುಚಗ ಳು । ಕನಕಕುಂಭಗಳಂತೆ ಸುಂದರ । ಮೆನಿಸಿತೋರ್ಪುವು ಬಲಿತು ಗುಂಡಾಗಿರುತ ಪಿರಿದೆನಿಸಿ ‖ ೧೭ ‖ ಜಲಜಲೋಚನೆ ಕೇಳುನಿನ್ನ ಬೆ । ರಳುಗಳತಿ ಮೃದುವಾಗಿರುತ ಕಂ । ಗೊಳಿಸುಪವು ಸಂತತವುನುಣ್ಣಗೆ ಬಹುಳಸುಖವಾಗಿ ‖ ಹೊಳೆವಮತ್ಸ್ಯಪತಾಕೆ ಶಂಖವೊ । ದಲಹರೇಖೆ ಗಳಿಂದೆ ಸಲೆಘಳ । ಥಳಿಸುವುವು ಕೆಂಪಾಗಿನಿನ್ನಂಘ್ರಿಗಳನುದಿನವು ‖ ‖ ೧೮ ‖ ನಿನ್ನ ಕುತ್ತಿಗೆ ಶಂಖದಂತಿದೆ । ನಿನ್ನ ಗಡ್ಡವು ನಿನ್ನಸೊಂಟವು । ನುಣ್ಣಗಿಹವತಿ ಲಲಿತವೆಂದೆನಿಸುತ್ತ ಗುಂಡಾಗಿ ‖ ನಿನ್ನ ತುಟಿಗಳೆಸೆವುವು ತೊಂಡೆಯ । ಹಣ್ಣಿನಂದದೆ ಕಂಗೊಳಿಸುವುವು । ನಿನ್ನ ಪಲ್ಗಳು ಕುಂದ ಕುಟ್ಮಲವಂತೆ ಸೊಗಸಾಗಿ ‖ ೧೯ ‖ ಮಂಗಳಾಂಗಿಯೆ ಕೇಳುಜಿಂಕೆಯ । ಕಂಗಳಂತುರೆ ಮೆರೆವನಿನ್ನಯ । ಕಂಗಳು ಕಮಲಪತ್ರದಂತೆ ವಿಶಾಲ ವೆನಿಸುತ್ತ ‖ ಅಂಗಜನಶರದಂತೆ ನೋಳ್ಪ್ಪ ಜ । ನಂಗಳಿಗೆ ಪೆಚ್ಚಿಸುತ ಮದನನು । ಕಂಗೊಳಿಸುವುವು ಬಹುಳಸಂತೋಷವನು ವಿರಚಿಸುತ ‖ ‖ ೨೦ ‖ ಸನ್ನುತಾಂಗಿಯೆ ಕೇಳು ನಿನ್ನಯ । ಕೆನ್ನೆಗಳು ಸೊಗಸಾಗಿ ರುತಿಪವು । ಕನ್ನಡಿಗಳಂತೆತ್ತರ ವೆನಿಸಿನಿರ್ಮಲತೆಯನಾಂತು । ನಿನ್ನ ಕುರುಲು ಕೋಮಲವೆನಿಸಿ । ಚಿನ್ನದಸರಿಗೆಯಂತೆ ರಂಜಿಪವು । ದುನ್ನತಿ ಯುನಾಂತತಿ ಮನೋಹರವಾಗಿ ಕಾಣಿಸುತ ‖ ೨೧ ‖ ಪೊಳೆಯುತಿರ್ಪ

ದು ನಿನ್ನ ಹಣೆಯದಾಂ । ಸಲಗಳಿಂದೆ ವಿಶಾಲವೆನಿಸುತ । ತಲೆಯುಗುಂಡಾ
ಗಿಹುದು ಮಂಗಳಕರವೆನಿಸಿಕೊಂಡು ॥ ಲಲನೆಕೇಳ್ನಿನ್ನ ಜಡೆ ಜಘನಂ ।
ಗಳವರಿವಿಗೆ ವ್ಯಾಪಿಸುತ ಕಂ । ಗೊಳಿಸುತಿನೆ ಕನಕಾಭರಣಗಳನಾಂ
ತು ಸೊಗಸಾಗಿ ॥ ೨೨ ॥ ನಿನ್ನಲಂಕಾರ ಮನುದಿನದೊಳು । ಚಿನ್ನದ
ಕುಸುಮದಂತೆ ರಂಜಿಪು । ದೆನ್ನ ಚಿತ್ತಕೆ ಕೊಡುತ ಸುಖರಾಗವನು
ಸೊಂಪೆನಲು ॥ ಸನ್ನುತಾಂಗಿಯೆ ಕೇಳು ಸಂತತ । ಮೆನ್ನ ಕಣ್ಗಳಿಗಧಿಕ
ಸಂಮುದ । ವನ್ನು ಮಾಡುತ ಕನಕಪುತ್ಥಳಿಯಂತೆ ಕಾಣಿಸುವೆ ॥ ೨೩ ॥
ವನಜನೇತ್ರೆಯೆ ಕೇಳು ನಿನ್ನವ । ದನವನೀಕ್ಷಿಸಿ ಸಣ್ಣಗಾದ ನ । ವನಿ
ತಳದೊಳಾ ಚಂದ್ರನು ಕ್ಷಯರೋಗವನುತಾಳ್ದು ॥ ವನದೊಳೋಡು
ತ್ತಿಹವು ಹರಿಣಗ । ಳನುದಿನವು ನಿನ್ನೆರಡುಕಣ್ಣ್ಗಳ । ಳನವಲೋಕಿಸಿ
ಸೋತು ಪುರದೊಳುನಿಂತು ವಾಸಿಸದೆ ॥ ೨೪ ॥ ವನಜಮುಖಿಕೇಳ್ನಿನ್ನ
ಕಂಗಳೊ । ಡನೆಬೆರತು ಹೋರಾಡಲಾರದೆ । ಧನುಸುಭಂಗವನೈದಿತೆ
ನ್ನಿಂದೆರಡು ತುಂಡಾಗಿ ॥ ಜನಗಳೆಲ್ಲರು ನಿನ್ನ ಕಣ್ಣ್ಗಳ । ಳನು ವಿಲೋ
ಕಿಸುತೊಡನೆ ಪಂಚಶ । ರನ ಶರಹತಿಗೆಸಿಕ್ಕಿ ತತ್ತರಗೊಳ್ಳುವರು ಮನ
ದೆ ॥ ೨೫ ॥ ಧರಣಿಸುತೆಕೇಳ್ನಿನ್ನ ಕಂಗಳೊ । ಳಿರುವಚಾಂಚಲ್ಯವು ಸ
ಲಿಲದೊಳ । ಗಿರುವ ಮತ್ಸ್ಯಂಗಳಿಗೆ ಲಜ್ಜೆಯನಾಗಿಸುತಲಿಹುದು ॥
ಮೆರೆವಮೂಗನು ಕಂಡುಗಿಳಿಗಳು । ಕೊರಗುತಿರ್ಪವು ಮನದಿನಿತ್ಯವು ।
ಭರದೆನಿಂದಿಸಿ ಕೊಳ್ಳುತವುಗಳ ಮೂಗಿನಂದವನು ॥ ೨೬ ॥ ಅಂದವಾ
ಗಿಹ ನಿನ್ನ ತುಟಿಗಳ । ಚಂದವನುಕಾಣುತ್ತ ಮಾವಿನ । ಕೆಂದಳಿರುಳಿದು
ಕೆಂಪುಬಣ್ಣವ ಬಹುಳಶೀಘ್ರದಲಿ ॥ ಹೊಂದಿತು ಹಸಿರುಬಣ್ಣವನು ಕೇ ।
ಳಿಂದುಮುಖಿ ಮೇಘಗಳು ನಿನ್ನಯ । ಸುಂದರವಕಂಡಂಜಿ ಗಗನದೊ
ಳೋಡಿಪೋಗುತ್ತಿವೆ ॥ ೨೭ ॥ ಇಂತುಬಣ್ಣಿಪ ಗಂಡನನು ಬಹು । ಸಂ
ತಸದೊಳೀಕ್ಷಿಸುತ ಜಾನಕಿ । ಅಂತವಿಲ್ಲದ ನಾಚಿಕೆಯನಾಂತೊಡನೆ
ತಲೆವಾಗಿ ॥ ಸ್ವಾತಸದೆ ರಘುನಂದನನ ನೀ । ಕಾಂತಭವನದೆ ತಾನೊಲಿ
ಸುತ । ತ್ಯಂತ ಸಾಖ್ಯವನೈದುತಿದ್ದಳು ಪಲವುತೆರದಿಂದೆ ॥ ೨೮ ॥ ಒಂ
ದುದಿನ ಮೇಕಾಂತಭವನದೊ । ಳಿಂದುಮುಖಿ ವೈದೇಹಿಸಂತಸ । ದಿಂದೆ
ರಘುನಂದನನ ಪದಪಂಕೇಜಗಳಿಗೆರಗಿ ॥ ಇಂದು ವೇದಪುರಾಣಸಮ್ಮತ ।
ವೊಂದೆಸಿಪ ಸಂಜ್ಞಾನವ ನೆನಗೆ । ಚಂದದಿಂದುಪದೇಶಿಸೆನ್ನುತ ನಿಂದು
ಬೇಡಿದಳು ॥ ೨೯ ॥ ಆಗಲೆಂದೆನುತಾ ರಘೂತ್ತಮ । ನಾಗಜಾನಕಿಯೊ
ಡನೆಗೆಳ್ಳ ಸ । ರಾಗದಿಂದಲೆವೇದಶಾಸ್ತ್ರ ಪುರಾಣತತ್ವವನು ॥ ಬೇಗನೆ

ನೆನೆದು ಕರುಣಿಸುತ್ತನು । ರಾಗದಿಂದುಪದೇಶ ಮಾಡಿದ । ಾಗೆ ಸ್ವಜ್ಞಾ ಪೇಟಿಕೆಯುನಾ ಜನಕನಂದನೆಗೆ ॥ ೩೦ ॥ ವಿನುತಗೂಢಾರ್ಥವನು ತಾಳ್ದು ನು । ದಿನವು ಆತ್ಮಜ್ಞಾನದಾಯಕ । ವೆನಿಸು ತಜ್ಞಾನವನುಪ್ಪೋಗಿಪ ಸಂ ಜ್ಞಪೇಟಿಕೆಯು ॥ ನಿನಗೆಶ್ರೀಳಯಿತೆ ಸೀಂಪಿವರಿಸುತ । ನನಗದನುಶ್ರೀಳು ಹೆಂದು ರಘುನಂ । ದನನು ಜಾನಕಿಯುನ್ನು ಕೇಳದನತಿವಿನೋದದಲಿ ॥ ॥ ೩೧ ॥ ಪತ್ರಿಯುವಾತನು ಕೇಳ್ದು ಜಾನಕಿ । ವಿತತ್ರಸಂಮುದದಿಂದೆಪೇ ಳ್ದಳು । ಜತನದಿಂದಾ ರಾಘವೇಂದ್ರನ ಪದಕೆಮಣಿದೆರಗಿ ॥ ಪತ್ರಿಯೆಕೇ ಳ್ವಿಷ್ಣುವೆನಿಸಿಕೊಳುತ । ಸತತವಾವನು ಜೀವತತಿಯೊಳ । ರುತ್ರಿಪಾತ್ರ ನೆ ಸಚ್ಚಿದಾನಂದಮಯು ನಾಗಿಪನು ॥ ೩೨ ॥ ಅವನೆಸಾಗರನೆನಿಸಿಕೊಂ ಡಿಹ । ನವನ ಭೂಭಾರಹರಣೇಚ್ಛೆಯೆ । ತಪಕದಿಂದೆ ಚಲಿಪತ್ರರಂಗವ ದೆನಿಸಿಕೊಳ್ಳುವುದು ॥ ಅವನದೆಸೆಯಿಂ ಪೊರಡೆಹೊರಟಿ । ರುವನಭೋ ಬಿಂದುವೆ ಸಕಲರೊಳ । ರುವ ಪಿನುತಜೀವಾತ್ಮನಾಗಿಹ ರಾಮನೆನಿಸುವ ನು ॥ ೩೩ ॥ ಅವನತಾಯಿಯೆ ಬುದ್ಧಿಯೆಂದೆನಿ । ಸುವುದವನು ಕೌಸಲ್ಯೆ ಯೆನುತ ಕ । ರೆವರು ತತ್ವಜ್ಞಾನವೇದಿಗಳೀ ಧರಣಿತಲದೆ ॥ ಅವನತಂದೆ ಯೆನಿಪ ದಶರಥನೆ । ಅವನಿಮಂಡಲದೊಳು ನುತ್ರಿವಡೆದಿ । ರುವನುಪಾವ ನಶುದ್ಧ ಸತ್ವಾಂತಃಕರಣವೆನಿಸಿ ॥ ೩೪ ॥ ಮನುಜಪಾಲಕ ಕೇಳು ರಾ ಘವ । ನೆನಿಪ ವಿಷ್ಣುವಿನಾತ್ಮಭೇದಗ । ಳನೆ ಭರತಶತ್ರುಘ್ನ ಲಕ್ಷ್ಮಣರೆ ನುತ ಭೂಮಿಯಲಿ ॥ ಮುನಿಗಳೆಲ್ಲರು ಪೇಳುತಿರುವರು । ವಿನುತಿವೆತ್ತಿ ಹೆನೀನು ಪಾವನ । ಘನತುರೀಯಾವಸ್ಥೆಯನು ಛವದೀಪ್ತಿಯೆಂದೆನಿಸಿ ॥ ॥ ೩೫ ॥ ವಿನುತಜಾಗ್ರದವಸ್ಥೆ ಲಕ್ಷ್ಮಣ । ನೆನಿಸುವುದು ಕೇಳ್ಸ್ವಪ್ನನಿ ದ್ರೆಗ । ಳೆನಿಸಿಕೊಂಬವೆ ಭರತಶತ್ರುಘ್ನರೆನಿಸುತ್ತಿಹವು ॥ ವನಜನಾಭ ನೆ ನಿನ್ನಹೃದಯಗ । ಗನವೆನಿಪ್ಪದೆ ಮೇದಿನಿತಲದೆ । ವಿನುತಿವಡೆದೊ ಪ್ಪಿಹು ದಯೋಧ್ಯಾನಗರವೆನ್ನಿಸುತ ॥ ೩೬ ॥ ಘನತರ ಮನೋಯೋಗ ವೆಂಬುದೆ । ಮುನಿಪಗಾಧಿಜ ನವನಮಖಪಾ । ಲನೆಗೆ ನಿನ್ನನು ಕರೆದು ಕೊಂಡೈದಿರುವುದೆನಿಸುವ್ರದು ॥ ಮನದವುವೃತ್ತಿಯು ವಿನಾಶವೆ । ದನುಜೆ ತಾಟಕಿಯನ್ನು ಕೊಲ್ಲುವು । ದೆನಿಸ್ರದು ಮನೋವೇಗಭಂಗವೆ ಚಾಪಖಂ ಡನವು ॥ ೩೭ ॥ ಬಲಿತ ಮಾಯಾಯೋಗ ವೆಂಬುದೆ । ನೆಲದೊಳೆನ್ನ ವಿವಾ ಹವೆನಿಪ್ರದು । ಕಲಿತನದೊಳಾ ಪರಶುರಾಮನನಂದು ಜಯಿಸಿದುದೆ ॥ ಕಳೆದಖಿಳ ಜನ್ಮಾಂತರಂಗಳ । ಪಲತೆರದ ಸಂಸ್ಕಾರಗಳನೀ । ನೆಲದೆಸೀಂ ನಿಗ್ರಹಿಸುವಿಕೆ ಯೆಂದೆನಿಸಿಕೊಂಡಿಹುದು ॥ ೩೮ ॥ ಸುದಸಂಸಾರಾಟವಿ

ಯೊಳಾ । ನಂದವನು ನೀನಾಂತು ಬಹುಸುಖ । ದಿಂದೆ ಸಂಚರಿಸಿದುದೆ ವನಸಂಚಾರವೆನಿಸುವುದು ॥ ಬಂದುನಿಂದ ವಿರಾಧನನು ನೀಂ । ಕೊಂದುದೆಂಬುದೆ ದಂಭನಿಗ್ರಹ । ವೆಂದೆನಿಸುವುದು ದೇವದೇವನೆ ಕೇಳು ಬಿನ್ನವಿಪೆ ॥ ೩೯ ॥ ಸಕಲಜೀವಿಗಳಾ ಹೃದಯದೊಳು । ಸುಖಿಸುವಾತ್ಮನ ಪಂಚಭೂತಾ । ತ್ಮಕದ ಸುಸ್ಥಿರವೃತ್ತಿಯೆಂಬುದೆ ಪರ್ಣಶಾಲೆಯದು ॥ ಪ್ರಕಟತರವೆಂದೆನಿಪ ದೇಹವೆ । ವಿಕಟಪಕ್ಷಿ ಸಮೂಹಕನುದಿನ । ಸುಖವನಾಗಿಪ ಪಂಚವಟಿಯು ಕ್ಷೇತ್ರವಾಗಿಹುದು ॥ ೪೦ ॥ ಖರನುಸತ್ತುದೆ ಕಾಮನಾಶನ । ದುರುಳದೂಷಣ ನಳಿದನೆಂಬುದೆ । ಪಿರಿದೆನಿಸುವಾ ಕ್ರೋಧವಿಧ್ವಂಸನ ವೆನಿಸುತಿಹುದು ॥ ಧುರದೊಳಂದಾ ತ್ರಿಶಿರ ನಳಿದುದ । ನರಿಯೆ ಲೋಭವಿನಾಶ ಮೆನ್ನುತ । ಕರೆವರು ವಿಚಾರಿಸುತ ತತ್ವವಿಚಾರವಿದ್ಯೆಯನು ॥ ೪೧ ॥ ದನುಜಪತಿ ರಾವಣನಸೋದರಿ । ಯೆನಿಪ ಶೂರ್ಪನಖಿಯ ಸುನಾಸಿಕ । ದನುವಕೆಡಿಸಿದು ದಿಳೆಯೊಳಾಶಾನಾಶವೆನಿಸುವುವು । ವನದೆ ಮಾಯಾಮೃಗದ ವೇಷದೊ । ಳೆನಗೆ ವಂಚನೆಗೈದ ಮಾರೀ । ಚನನು ಕೊಂದುದೆ ಮೋಹನಿಗ ಹವೆನಿಸಿಕೊಳ್ಳುವುದು ॥ ೪೨ ॥ ಪತಿಯೆಕೇಳ್ಮಾಯಾ ಶ್ರಯವೆನಿಪ । ವಿತತ ದಂಡಕಕಾನನದೊಳತಿ । ಹಿತದೆವಸಿಸಿದ ಸತ್ವರೂಪವನಾಂತ ನನ್ನನ್ನು ॥ ಸತತವಾಮಾಂಗದೊಳು ನೀನತಿ । ಕುತುಕಿಯಾಗುತ ಹೊಂದಿದುದನೀ । ಕ್ಷಿತಿಯೊಳಗೆ ಸಾತ್ವಿಕದಮಾಯೆ ಯೆನುತ್ತ ಪೇಳುವರು ॥ ೪೩ ॥ ಇನಯಕೇಳಾ ರಾಜಸಾಕೃತಿ । ಯೆನಿಪ ಮಾಯೆಯು ಜಠರವಹ್ನಿಯೊ । ಳನವರತ ನೇರುವುದೆನುತ ಪೇಳ್ವುದನೆರಾಜಸದ ॥ ಜನಕನಂದನೆ ಬೆಂಕಿಯೊಳಗತಿ । ವಿನಯದಿಂದಲೆ ಬೀಳ್ವುದೆನ್ನುತ । ವಿನುತಿವೆತ್ತ ವಿಬುಧರುಪೇಳ್ವರು ತಿಳಿದುಯೋಚಿಸುತ ॥ ೪೪ ॥ ಮನುಜಪಾಲಕ ಕೇಳು ತಾಮಸಿ । ಯೆನಿಪ ಮಾಯೆಗು ಮಾತ್ಮನಿಗು ಮೇ । ದಿನಿತಳದೊಳು ವಿಯೋಗವಾಗುವುದೆನುತ ಪೇಳ್ವುದನೆ ॥ ಘನ ತಮೋಗುಣರೂಪಿಣಿ ಯೆನಿಪ । ಜನಕಜೆಯನಾ ದಶಶಿರನು ಕಾ । ನನದೊಳಪಹರಿ ಸಿರ್ಪುದೆನ್ನುತ ಬುಧರುಪೇಳುವರು ॥ ೪೫ ॥ ಅಂದು ವಿಪಿನದೊಳೆನ್ನಯ ವಿರಹ । ದಿಂದೆ ನಿನಗೊದಗಿರ್ದ ತಾಪವೆ । ಸಂದತಿಸುಖಾಬಂಧನ ಮಹಾಕ್ಲೇಶವೆನಿಸುವುದು ॥ ಬಂದುಬಾಣದೊಳಾ ಕಬಂಧನು । ನೊಂದುಸತ್ತುದೆ ಶೋಕಭಂಗವು । ಸುಂದರ ವಿವೇಕಾಶ್ರಯವೆ ಸುಗ್ರೀವನಾಶ್ರಯವು ॥ ೪೬ ॥ ನಿನಗೆ ಮಾರುತಿಯುಂದು ದೊರೆತುದೆ । ವಿನುತ ಭಕ್ತ್ಯುದ್ರೇಕ ಲಾಭವು । ದೆನಿಸಿ

ಕೊಂಬುದು ವಾಲಿವಧೆಯು ವಿವೇಕನಾಶನವು || ವನಧಿತೀರದೊಳಾ ವರವಿ
ಭೀ | ಷಣನು ನಿನ್ನನು ಶರಣುಹೊಕ್ಕುದೆ | ಜನಿಸಿದ ಮಹೋತ್ಸಾಹ
ಸಾಂಗತ್ಯ ವೆನಿಸುತ್ತಿಹುದು || ೪೭ || ಜಲನಿಧಿಗೆ ಸೇತುವೆನೆಸಗಿದುದೆ |
ನೆಲದೊಳಜ್ಞಾನವನು ದಾಟುವ | ಲಲಿತಯುಕ್ತಿ ಯೆನಿಸುವುದಾ ತ್ರಿಗು
ಣಾಶ್ರಯದ ತನುವೆ || ಸಲೆವಿರಾಜಿಸುವಾ ತ್ರಿಕೂಟಾ | ಚಲವೆನಿಸುವು
ದು ಲಿಂಗದೇಹವೆ | ಹೊಳೆವ ಲಂಕಾನಗರವೆನ್ನುತ ವಿನುತಿವಡೆದಿಹು
ದು || ೪೮ || ಮದವಿನಾಶವೆ ಕುಂಭಕರ್ಣನ | ವಧೆಯು ಮಾತ್ಸರ್ಯವನು
ಭಂಗಿಸಿ | ದುದೆ ಸುರೇಂದ್ರಜಿತುವಿನ ಸಂಹಾರವೆನಿಸುತ್ತಿಹುದು ||
ಕದನದೊಳು ದಶಕಂಧರನು ಸ | ತ್ತುದೆ ಯಹಂಕಾರವನು ಖಂಡಿಸು |
ವುದೆನುತಾಂ ತಿಳಿದಿಹೆನು ಯೋಗವಿಚಾರದೃಷ್ಟಿಯಲಿ | ೪೯ | ಲಿಂಗದೇ
ಹನಿವಾರಣೆಯೆ ನೀ | ನಂಗನಾಮಣಿಸಹಿತ ರಾಕ್ಷಸ | ಪುಂಗವನ ಲಂಕೆ
ಯ ನುಳಿದುಬಂದುದೆನಿಸುತ್ತಿಹುದು || ಅಂಗನೆಯೊಡನೆ ನೀನುಸೇರ್ದು
ದೆ | ಕಂಗೊಳಿಸುವಾ ತ್ರಿಗುಣಮಾಯಾ | ಸಂಗವೆನ್ನಿಸಿ ಕೊಂಡಿರುತಿ
ಹುದು ತಿಳಿದುಯೋಚಿಸಲು || ೫೦ || ಮೆರೆವಯೋಧ್ಯೆಗೆ ಸಕಲಕಪಿವೀ |
ರರಸಹಿತ ನೀನಂದು ಬಂದುದೆ | ಸುರುಚಿರದಹೃದಯ ಗಗನಗಮನ
ವೆಂದೆನಿಸುತಿಹುದು || ಪರಮಸಂತೋಷೈಕ ಸುಖವನು | ಧರೆ ಯೊ
ಳು ಹೊಂದಿದುದೆ ಮಂಜುಳ | ತರವೆನಿಪಖಿಳ ರಾಜ್ಯಭೋಗವದೆನಿಸಿ
ಕೊಂಡಿಹುದು || ೫೧ || ಚಲಿಪ ಮಾಯಾತ್ಯಾಗವೆಂಬುದೆ | ನೀದೊಳೆ
ನ್ನುಂ ಕೆಲವುದಿನಗಳ | ಬಳಿಕ ವಾಲ್ಮೀಕ್ಯಾಶ್ರಮಕೆ ನೀನೆನ್ನಕಳುಹು
ವಿಕೆ | ತಳುವದೆನ್ನನು ಮತ್ತೆ ಹೊಂದುವು | ದಿಳೆಯೊಳಗೆ ಸತ್ವಗುಣವ
ನು ಕೈ | ಕೊಳುವುದೆನ್ನುತ ತಿಳಿದುಕೊಂಡಿರುತಿಹೆನು ಚಿತ್ತದಲಿ ||
|| ೫೨ || ಪರಮಸಾತ್ವಿಕ ಮಾಯೆಸಲೆಸೇ | ರಿರುವಿಕೆಯೆ ನನ್ನೊಡನೆನಿ
ನ್ನರು | ತರವ ಯತ್ನವೆನಿಪ್ಪುದಯೋಧ್ಯಾಪುರದ ಮನುಜರನು | ಧರ
ದೊಳಾ ವೈಕುಂಠನಗರಕೆ | ಕರೆದುಕೊಂಡೈದುವುದೆ ಹೃದಯಾಂ | ಬ
ರವನು ಮಹಾಕಾಶದೊಡನೆ ಬೆರಸುವುದೆನಿಸುವುದು || ೫೩ || ಮನುಕು
ಲೋತ್ತಮ ಕೇಳವನಿಯೊಳು | ಮನುಜರೂಪವನುಳಿದು ಪಾವನ |
ವೆನಿಪಘನತರ ಸಚ್ಚಿದಾನಂದಮಯ ಸಂಜ್ಞೆಯಲಿ | ವಿನುತಿವಡೆದಾ ವಿ
ಷ್ಣುರೂಪವ | ಜನಕೆ ತೋರಿಸುವಿಕೆಯೆ ನೀನಾ | ವನಧಿಮಧ್ಯದಿ ಮ
ಲಗುವುದೆನುತ ತಿಳಿದುಕೊಂಡಿಹೆನು || ೫೪ || ನೀನನುಭವಿದ ತತ್ವವೆ
ಸಕಲ | ಮಾನವರಿ ಗೈಹಿಕಸುಖಂಗಳ | [illegible] ಘನ

ಸಾಯುಜ್ಯಪದವಿಯನು ‖ ತಾನು ಕೊಡುವುದು ಕೊನೆಗೆಕೇಳನು । ಮಾ
ನಿಸದೆ ಧರಿಸಿಹೆನು ಕೊರಳೊಳು । ನಾನು ಮಂಗಳದೇಹ ರಾಮಾಯಣ
ಸುಹಾರವನು ‖ ೫೫ ‖ ಇದನು ಜಾನಿಪಮನುಜರು ಪರಮ । ಪದವೆನಿ
ಪ ಜೀವನ್ಮುಕ್ತಿಯನು । ಮುದದೆ ಹೊಂದುವರೆನಗೆ ನೀನೊಲಿದಿಂದು
ತಿಳಿಸಿರುವೆ ‖ ಇದುವರೆವಿಗೀ ನೆಲದೊಳಾವನು । ಮಿದನು ಪೇಳಿರಲಿಲ್ಲವೆಮ್ಮಂ
ದೆ ನ; ಲಿವಿವನಾವನು ಪೇಳಲಾರನು ಗೋಪ್ಯವೆನಿಪ್ಪುದಿದು ‖ ೫೬ ‖
ಇವತ್ತಿ ರನ್ಯ್ವೆನಿಸುವ್ರು ದೂಹೆಗ । ಸವಳವೆಂದೆನಿಸಿಹುದು ಭೂಮಿ
ಯೊಳಿದು ಸಕಲವಿಧ ದುಷ್ಕೃತಗಳನು ಪರಿಹರಿಸುತಿಹುದು ‖ ಇದು
ವಿಮಲ ಸುಜ್ಞಾನವನು ಕೊಡುತು । ವುದಿದು ಬಹುಸೂಕ್ಷ್ಮ ಮೆನಿಸಿರುತಿ
ಹು । ದಿದು ಸಕಲಸಾಹಿತ್ಯಂಗಳನು ವಿರಚಿಸುವುದೆಲ್ಲರಿಗೆ ‖ ೫೭ ‖ ಎಂದು
ರಾಘವನೊರೆಯುತಿರೆ ಸಂತಸ । ದಿಂದೆ ಜಾನಕಿಪೇಳಲಾ ರಘು । ನಂದನನು
ನಲವಿಂದೆ ಸೀತೆಯು ಮುಖವನೀಕ್ಷಿಸುತ । ಸುಂದರಾಂಗಿಯೆ ಕೇಳುಮ
ಹಮಾ । ನಂದದಿಂದಲೆ ತಿಳಿದುಕೊಂಡಿಹೆ । ಬಂಧುರವೆನಿಪ ದೇಹರಾಮಾ
ಯಣವನೀನಿಂದು ‖ ೫೮ ‖ ನೀನುಧನ್ಯಳು ನಿನಗೆಮಾತ್ರವೆ । ನಾನು
ಪೇಳುವೆನಿದನು ಕೇಳಲಿ । ಜಾನಕಿಯೆ ಕೊಡುವುದಿದು ಭುಕ್ತಿಸುಭುಕ್ತಿ
ಮುಕ್ತಿಗಳ ‖ ನೀನು ಪೇಳದಿರವನಿಯೊಳಿತರ । ಮಾನವರ್ಗಿದನೆಂದೆ
ನುತ ಸುಂ । ಮಾನದಿಂದರುಹುತ್ತ ಮಲಗಿದನಂದುರಾಘವನು ‖ ೫೯ ‖
ಅರಸಿಯನು ಸಂತವಿಸುತಾ ರಘು । ವರನು ದಿವ್ಯಮಣಿಗಣದಿಂದುರೆ ।
ಮೆರೆವ ಪರ್ಯಂಕದೊಳು ಸುಖನಿದ್ರೆಯನುಮಾಡಿದನು ‖ ತರಣಿ ಮೂಡ
ಣಮುನ್ನ ನಡೆತಂ । ದಿರದೆ ಬಿರುದಾವಳಿಗಳಿಂದಾ । ಧರಣಿಪಾಲನನೆಬ್ಬಿಸಿ
ದರಾ ವಂದಿಮಾಗಧರು ‖ ೬೦ ‖ ಮೊದಲುಜಾನಕಿ ಬಳಿಕರಾಘವ । ನು
ದಯಕಾಲದೊಳೆದ್ದು ಸಕಲವಿ । ಬುಧಸಮೂಹಕೆ ಭಕ್ತಿಯಿಂದಲೆನಮಿ
ಸುತಾ ಬಳಿಕ ‖ ಸದನದೊಳು ಮಿಾಯುತ್ತ ರಾಮನು । ವಿಧಿವಿಧಾನದೊ
ಳೊಡನೆ ತಾನೆಸ । ಗಿದನು ಸಂಧ್ಯಾವಂದನಾದಿ ಸಮಸ್ತ ಕರ್ಮಗಳ ‖ ೬೧ ‖
ಧರಣಿಸುತೆ ಯುಷ್ಟ್ರದೊಳು ಮಿಂದತಿ । ಭರದೊಳಾ ಗಿರಿಸುತೆಯನರ್ಚಿ
ಸಿ । ಹರುಷದಿಂದಾ ಕಾಮಧೇನುವನೊಲಿದು ಪೂಜಿಸುತ ‖ ಸುರಭಿಕೊ
ಟ್ಟಾಹಾರದ ಪಲವು । ತೆರನ ವಸ್ತುಗಳೆಲ್ಲವನು ತುಂ । ಬಿರಿಸಿದಳುನಲ
ವಿಂದೆ ಚಿನ್ನದಪಾತ್ರೆಗಳೊಳಂದು ‖ ೬೨ ‖ ಅಸಿತರೊಳು ರಾಘವನರಾ
ಜಪ । ವನಕೆ ಬಂದರು ಕೋಟಿಸಂಖ್ಯೆಯ । ಮುನಿವರರು ಭೋಜನಕೆ
ತಮ್ಮಯ ಶಿಷ್ಯರೊಡವೆರಸಿ ‖ ಕನಕಪೀಠಂಗಳೊಳು ರಘುನಂ । ದನ

ನು ಮುನಿಗಳನೆಲ್ಲ ಕೂಡಿಸಿ । ಜನಕಸುತೆಗಾಜ್ಞಾಪಿಸಿದ ನೂಟಕ್ಕೆ ಬಡಿ
ಸೆನುತ ॥ ೬೩ ॥ ಪತಿಯುವೂತನು ಕೇಳ್ದು ಜಾನಕಿ । ವಿತತವಸ್ತ್ರೂತ್ರ
ರವನಂದತಿ । ಜತನದಿಂದೆ ಬಡಿಸುತಭಿಘರಣೆಯನ್ನು ತಾನೆಸಗೆ ॥ ವಿತತ
ಸಂತೋಷವನು ತಾಳ್ದು । ಕ್ಷಿತಿಸುರರು ರಾಘವನನಂದತಿ । ಹಿತದೆಹೊ
ಗಳುತ ಮನದಣಿಯೆ ಭೋಜನವಮಾಡಿದರು ॥ ೬೪ ॥ ತಂಗಿಯರನಾ
ಸಖಿಯರನೊಲಿಸು । ತಂಗನಾಮಣಿ ಸೀತೆರಂಜಿಪ । ಮಂಗಳಾಸನದೊ
ಳುಕುಳಿತು ಭೋಜನವತಾನೆಸಗಿ ॥ ಕಂಗೊಳಿಪ ವೀಳೆಯವಮೆಯು
ತ । ಶೃಂಗರಿಸಿಕೊಂಡೊಡನೆ ಬಂದಳು । ಹಿಂಗಡೆಯೊಳುರೆ ಮೆರೆವನಂ
ದನವನಕೆ ಹರ್ಷದಲಿ ॥ ೬೫ ॥ ಮುಗಿಸಿಕೊಂಡು ರಘುವರನೊಡ್ಡೋ ।
ಲಗವನಾ ವೃಪವನಕೆಬರಲಿದಿ । ರುಗೊಳುತಾ ಭೂಮಿಸುತೆ ಯಾರತಿಯ
ನು ನಿವಾಳಿಸಲು ॥ ಸೊಗಸಿನಿಂದೆಸೆವಾ ಸನದೊಳಾ । ರಘುವರೇಣ್ಯನು
ಕುಳಿತು ಜಲವನು । ಸೊಗದೊಳೀಂಟುತ ಬಂದನಾವಿನುತ ಜಲವಾಟ
ಕೆಗೆ ॥ ೬೬ ॥ ಬಡನೆ ಸೀತಾರಾಘವರ ನಡಿ । ಗಡಿಗೆ ದಾಸೀಜನವುಸೇವಿ
ಸ । ಲಿಡಿವಸಂತಸದಿಂದೆ ರಾಘವನೆಲ್ಲರನು ಕಳುಹಿ ॥ ಪ್ರೊಡವಿಯಣುಗಿ
ಯನೊಲಿಸಿ ಕರವನು । ಪಿಡಿದು ತಾನೇಕಾಂತವಾಗಿಯೆ । ಕಡುವಿನೋ
ದವನಾಂತು ಜಲಕೇಳಿಗಳನಾಡಿದನು ॥ ೬೭ ॥ ಜನಕನಂದನೆ ರಾಮಚಂ
ದ್ರನ । ಮನವು ಸಂತುಷ್ಟಿವಡೆವಂದದೆ । ಮನವೊಲಿದು ಬಹುಕಾಲ
ಜಲಕೇಳಿಯನು ತಾನೆಸಗಿ ॥ ವನವನುಳಿದೈ ತಂದಳಾರಾ । ಮನಸಹಿತ
ಸಂತೋಷದೊಳು ಭೋ । ಜನದಶಾಲೆಗೆ ಕೂಡೆಸೇವಾಜನ ರೊಲಿಸುತಿ
ರಲು ॥ ೬೮ ॥ ಧರಣಿಪತಿ ರಾಘವನು ಸಮನಂ । ತರದೆ ಸುಖಭೋಜ
ನವನಾಗಿಸಿ । ಮೆರೆವ ತಾಂಬೂಲವನು ಮೆದ್ದು ಪುರಾಣಗಳನೆಲ್ಲ ॥ ಪರ
ಮಭಕ್ತಿಯೊಳೊಲಿದು ಕೇಳು । ತ್ತಿರಲು ಭೋಜನವನ್ನು ವಿರಚಿಸಿ ।
ಧರಣಿಸುತೆ ಶಯ್ಯಾಗೃಹಕೆ ಬಂದಳತಿಹರ್ಷದಲಿ ॥ ೬೯ ॥ ಮೆರೆವಶಯ್ಯಾ
ಗೃಹದೊಳಾ ರಘು । ವರನಬರವನೆ ನೋಡುತಿದ್ದಳು । ಧರಣಿಸುತೆಯು
ಷ್ಟರೊಳು ರಾಘವನೆಲ್ಲರನು ಕಳುಹಿ ॥ ಬರಲು ನಿದ್ರಾಶಾಲೆಗತ್ಯಾ । ತು
ರದೊಳಾ ಜನಕಸುತೆ ರಾಮನಿ । ಗೆರಗಿ ಕುಳ್ಳಿರಿಸಿದಳು ಕರಲಾಘವವ
ನಿತ್ತೊಲಿದು ॥ ೭೦ ॥ ಕನಕಮಣಿ ಪರ್ಯಂಕದೊಳು ರಾ । ಮನನು ಕೂ
ಡಿ ಮೇದಿನೀಸುತೆ । ಘನವಿಮಲ ಪಾನೀಯವನು ತಾನಿತ್ತು ಕಂಗೊಳಿ
ಪ ॥ ವಿನುತ ತಾಂಬೂಲವನು ಕೊಟ್ಟತಿ । ವಿನಯದಿ ಸ್ವಾನಂದಸಿದ್ಧಿಯ ।
ನನುಭವಿಸಿದಳು ಬಹುವಿನೋದವನಾಂತು ರಮಿಸುತ್ತ ॥ ೭೧ ॥ ಉದ

ಮುಕಾಂಬೊಳಿದ್ದ ಗಂಡನ | ಪದಕೆರಗಿ ಭೂಮಿಸುತೆ ಕೊಟ್ಟಳು | ಸವಮಲ ಸುಪಾನೀಯ ತಾಂಬೂಲಂಗಳನು ಪತಿಗೆ || ಸುದತಿಸೀತೆಯು ಕೈವಿಡಿದುಕೊಂ | ಡೊವಗಿದಾನಂದದೊಳು ಬಂದನು | ಸದನದ ದ್ರಾಕ್ಷಾ ಲತಾ ಮಂಟಪವಹತ್ತಿರಕೆ || ೨೨ || ಕುಳಿತು ದಿವ್ಯಾಸನದೊಳಾ ರಘು | ಕುಲಲಲಾಮನು ಜಾನಕಿಯೊಡನೆ | ಪಲವುಬಗೆ ಯಾಟಗಳನಾಡುತ ಪಂಜರಂಗಳೊಳು || ನಲಿದುಕೂಗುವ ಪಕ್ಷಿಗಳನಂ | ದೊಲಿದುಪಿಡಿದಾಡಿಸುತ ಮುಂಗಡೆ | ಯೊಳಗೆಕಂಡನು ಸೂಳೆಯರ ನಾಟ್ಯಂಗಳನುಕೂಡೆ || ೨೩ || ಇರುತರಾಮನ ಚರಣಪಂಕಜ | ಕೆರಗಿ ಬೇಡಿದಳಾಮಹೀಸುತೆ | ಪುರದೊಳಂಗಡಿಗಳ ವಿನೋದವ ನೀಕ್ಷಿಸುವೆನೆನುತ || ಭರದೊಳಾಕರುಮಾಡವನು ತ | ನ್ನರಸಿಯೊಡನೇರುತ್ತ ತೋರ್ದನು | ಬೆರಳ ನೀಡುತ ಕುಳಿತುಕೊಂಡು ಸಮುಚಿತಪೀಠದಲಿ || ೨೪ || ಬೆರಳತೋರಿಸಿ ರಾಘವನು ತ | ನ್ನರಸಿ ಗಂಗಡಿಗಳೊಳು ನಡೆಯು | ತ್ತಿರುವ ಸಕಲವಿನೋದಗಳ ಸಲೆತೋರಿಸುತ್ತಿರಲು || ಧರಣಿಸುತೆ ಯುಪ್ಪರೊಳುರತ್ನಾ | ಭರಣವಿಲ್ಲದೆ ಬೀದಿಯೊಳು ಸಂ | ಚರಿಸುತಿಹ ಬಡಪೆಣ್ಣನೋರ್ವಳನಂದುನೋಡಿದಳು || ೨೫ || ಕಳುಹಿ ದಾಸೀಜನರ ನಾಕೆಯು | ಬಳಿಗೆ ಜಾನಕಿಕೂಡೆ ತನ್ನಯ | ಬಳಿಗೆ ಕರೆಯಿಸಿಕೊಳ್ಳುತಾ ಬಡಹೆಂಗಸನು ಕುರಿತು || ಎಲೆವನಿತೆ ನೀನೇಕೆಹರ್ಷವ | ನುಳಿದು ಬೀದಿಗಳಲ್ಲಿತಿರುಗುವೆ | ತಿಳುಹುನಿನ್ನ ವಿಚಾರವನೆನುತ ಪದೆದುಕೇಳಿದಳು || ೨೬ || ಜನನಿ ಕೇಳೆನ್ನಪತಿ ಪೋಗಿರು | ವನುವಿದೇಶಕೆ ಯಾತ್ರೆಗಾಗಿ ಪಿ | ತನಳಿದಿಹನೆನಗಾರು ರಕ್ಷಕರಿಲ್ಲದುದರಿಂದ || ದಿನದಿನವು ಭಿಕ್ಷವನುಬೇಡುತ | ವಿನಯದಿಂದೀ ಮಗುವಿನೊಡನೆಯೆ | ಮನದೆದುಃಖಿಸಿ ತಿರುಗುತಿಹೆನೀತೆರದೆ ಯಾಚಿಸುತ || ೨೭ || ಎನುತಪೇಳಿದ ಮಾತುಗಳನಾ | ಜನಕಸುತೆಕೇಳುತ್ತ ಮನ್ನಿಸಿ || ಮನದಣಿಯೆ ತನ್ನುಡಿಗೆತೊಡಿಗೆಗಳೆಲ್ಲವನು ತೆಗೆದು || ವನಿತೆಗಿತ್ತುಪಚರಿಸಿ ಕೊಡಿಸಿದ | ಳನಯುನಿದಿರೊಳು ಲಕ್ಷವರಹಗ | ಳನುಸುಮಿತ್ರಾಸುತನ ಕಡೆಯಿಂದಾ ನಿತಂಬಿನಿಗೆ || ೨೮ || ಅವನಿನಂದನೆ ತನ್ನ ದೇಶದೆ | ನಿವಸಿಸುವ ಬಡಬಗ್ಗರನುತಾಂ | ತವೆ ವಿಚಾರಿಸಿಕರೆಯಿಸುತ ನಿಜಮಂದಿರದ ಪೊರೆಗೆ || ಸವಿನುಡಿಗಳಿಂ ದುಪಚರಿಸುತೊಡ | ನವರಮನದಣಿವಂತೆ ಮನ್ನಿಸಿ | ಜವದೆ ಕೊಡುವಳನುದಿನ ಧನಕನಕ ವಸನಂಗಳನು || ೨೯ || ಇಂತನೇಕ ಸುಖಂಗಳನು ಬಲು | ಸಂತಸದೊಳಾ ಮೇದಿನೀಸುತೆ | ಸಂತತವನುಭವಿಸುತ ವಿವಿಧವಿನೋದಗಳನೆಲ್ಲ ||

ಸ್ವಾಂತ ಭವನದೊಳೀಕ್ಷಿಸುತ ಸಮು । ನ್ನಂತರದೊಳು ವಿಹರಿಸುತ್ತಿದ್ದಳು ।
ಚಿಂತೆಯಿಲ್ಲದೆ ಪತಿಯೊಡನೆ ಸಿಂಗರಬನಂಗಳಲಿ ॥ ೮೦ ॥ ಅಂಗಳದಬೆಳ
ದಿಂಗಳಲ್ಲಿಯು । ರಂಗಶಾಲೆಗಳಲ್ಲಿಯು ಮೆರೆವ । ಮಂಗಳಕರದ ಚಂದ್ರ
ಶಾಲೆಗಳಲ್ಲಿಯು ಚರಿಸುತ ॥ ಕಂಗೊಳಿಸುವೇಕಾಂತ ಭವನದ । ಸಂಗ
ಳಲ್ಲಿಯು ದಾರುಪರ್ಯಂ । ಕಂಗಳಲ್ಲಿಯು ವಿಹರಿಸಿದಳಾ ರಘುವರನಸಹಿ
ತ ॥ ೮೧ ॥ ಕಂಗೊಳಿಸುತಿಹ ಸುಂದರತರವ । ನಂಗಳಲ್ಲಿಯು ಮೆರೆವ
ಕರುಮಾ । ಡಂಗಳ ಕೊನೆಗಳಲ್ಲಿಯು ಸ್ಫಟಿಕಸ್ಥಳಂಗಳೊಳು ॥ ಕಂಗ
ಳಿಗೆಸೆವ ವಿಮಲಜಲಯಂ । ತ್ರಂಗಳೆಡೆಯೊಳು ಚರಿಸುತ್ತಿದ್ದಳು । ಮಂ
ಗಳಾಂಗನೆಸೀತೆ ದಶರಥನಂದನನ ಸಹಿತ ॥ ೮೨ ॥ ಮೆರೆವಕಾಂಚನ ದೆ
ಡೆಗಳೊಳು ಸುಂ । ದರವೆನಿಪ ಪುಷ್ಪಕವಿಮಾನದೊ । ಳುರೆಮೆರೆವ
ಹೂವಿನಮನೆಗಳೊಳು ತುಲಸಿವನಗಳೊಳು ॥ ತರತರದ ಮಂಚಂಗ
ಳೊಳು ಮೇ । ಣ್ದೊರೆವಡೆದ ಸರಗಳೊಳು ಬಾಳೆಹೊ । ದರುಗ
ಳೊಳು ಸಂಚರಿಸುತಿದ್ದಳು ಸೀತೆಪತಿಸಹಿತ ॥ ೮೩ ॥ ಹೊಳೆವುತಿಹ
ಲಾ ಮಂಚದತಡಿಕೆ । ಗಳ ಬಳಗದಿಂದೆಸೆವಮಂಟಪ । ಗಳೊಳು
ಮರದೇಪಾಲಯಂಗಳ ಮಧ್ಯಭಾಗದೊಳು ॥ ಹೊಳೆದುರಂಜಿಪ ಚಿತ್ರ
ಶಾಲೆಗ । ಳೊಳು ವಿರಾಜಿಪ ಪುಷ್ಪವಾಟಿಕೆ । ಗಳೊಳು ಸೀತೆ
ವಿಹರಿಸುತ್ತಿದ್ದಳು ರಾಘವನಸಹಿತ ॥ ೮೪ ॥ ಬೆಳೆದಿಪ ದ್ರಾಕ್ಷಾಲ
ತಾಳಿಯ । ನೆಳಲಿನೊಳು ಸಂತತವುಮಂದಾ । ನಿಲನು ಸಂಚರಿಪತಿ
ಮನೋಹರಸುಸ್ಥಳಂಗಳೊಳು ॥ ಹೊಳೆವ ಪರ್ಯಂಕಂಗಳೊಳು ಥ
ಳ । ಥಳಿಪತರುಗಳಮೇಲೆ ಸಲೆಕಂ । ಗೊಳಿಪ ಕೇಳೀಗೃಹಗಳೊಳು
ವಿಹರಿಸಿದಳಾಸೀತೆ ॥ ೮೫ ॥ ವರಸಭಾಮಧ್ಯದೊಳು ನಿಜಮಂ । ದಿರ
ದದೇವಳಿಗಳೊಳು ಸುಂದರ । ತರವೆನಿಪ ಬೃಂದಾವನಸ್ಥಳಗಳ ಸಮಾ
ಪದೊಳು ॥ ಉರುತರದ್ವಾರೋರ್ಧ್ವ ಸೌಧನಿ । ಕರಗಳೊಳು ರಘುವೀ
ರನೊಡನೆ ವಿ । ಹರಿಸುತ್ತಿದ್ದಳು ಸೀತೆ ಬಹುಸಂತೋಷವನುತಾಳ್ದು ॥
॥ ೮೬ ॥ ಬಂದು ಕಂಬಿದಮೇಲೆಕಟ್ಟಿದ । ಸುಂದರತರದ ಮಂದಿರದೊ
ಳು । ಸುಂದರಾಂಗನೆ ಸೀತೆರಾಘವನೊಡನೆ ವಿಹರಿಸುತ ॥ ಚಂದದಿಂದೆಸೆ
[illegible]ದಗಳೊ । ಳಂದವಾಗಿಹ ವಸ್ತುಗಳನಾ । ನಂದದಿಂದೀಕ್ಷಿಸುತಲಿ
[illegible]ಲಿಸುತ ॥ ೮೭ ॥ ಪಲವು ದಿನಗಳಿಂದ ರಾಮನ ।
ನೊಲಿಸುತಿರಲಾ ಮಹೀಸುತೆ । ಬಳಿಕವೇದವ್ಯಾಸ ಮುನಿಯೊಂದು
ದಿನರಾಘವನ । ಬಳಿಗೆಬರಲಾ ಮುನಿಪತಿಗೆರಗಿ । ನಲಿದುರಾಘವನರ್ಘ್ಯ

ಪೊನ್ನಂ | ಗಳನುಕೊಟ್ಟುಪಚರಿಸಿ ಕುಳ್ಳಿರಿಸಿದನು ಪೀಠದಲಿ ॥ ೮೮ ॥
ಮುನಿಕುಲೇಂದ್ರನ ಪದಕೆ ಜಾನಕಿ | ವಿನಯದೊಳೆರಗಿ ದಿವ್ಯಪದಭೋ |
ಜನವನಾಗಿಸಲಾ ರಘುವರನು ತಾಪಸೇಂದ್ರನಿಗೆ ॥ ವಿನುತ [illegible]
ನಿರಿಸಿ ಮೇ | ಲೆನಿಪ ತಾಂಬೂಲವನು ಕೊಟ್ಟತಿ | ವಿನಯದಿಂದುಪಚ
ರಿಸಿದನು ಬೀಸುತಿರಲವನಿಜೆಯು ॥ ೮೯ ॥ ತನ್ನ ಕುಶಲವನಾ ಮು
ನೀಂದ್ರನು | ಮುನ್ನ ಪೇಳ್ದು ರಘುವರನ ಕುಶಲ | ವನ್ನು ಕೇಳ್ದತಿ ಹ
ರುಷದಿಂದಲೆ ರಾಮಚಂದ್ರನನು ॥ ತನ್ನ ಹತ್ತಿರ ಕುಳ್ಳಿರಿಸಿಕೊಂ | ಡು
ನ್ನತಾಸನದೊಳು ಪಲತೆರದೆ | ಮನ್ನಿಸುತಲಿಂತೆಂದು ನುಡಿದನು ಸಭೆಯ
ಮಧ್ಯದಲಿ ॥ ೯೦ ॥ ಧರಣಿಪಾಲಕ ಕೇಳು ಶಾಸ್ತ್ರನಿ | ಕರದೊಳುನ್ನತಿ
ವಡೆದ ಪಾವನ | ತರಮೆನಿಸುತಿರ್ಪೇಕಪತ್ನೀವ್ರತವ ನೀಯುಗದೆ ॥
ಪರಮಭಕ್ತಿಯನಾಂತು ನೀನಾ | ಚರಿಪೆ ಮುಂದೆ ದ್ವಾಪರಯುಗದೆ |
ನಿರುತಸುಖಿಸುವೆ ಬಹುವನಿತೆಯರೊಳದರ ಫಲದಿಂದ ॥ ೯೧ ॥ ಕ್ಷಿತಿಸುತೆ
ಯುತ ರೂಕಕ್ಕೆ ಸಮಮೆನಿ | ಸುತಿಹ ಚಿನ್ನದೊಳೊಂದರಂತೆ | ಪ್ರತಿಮೆ
ಗಳು ಹದಿನಾರನಾಗಿಸಿ ದಕ್ಷಿಣೆಯಸಹಿತ ॥ ಕ್ಷಿತಿಸುರರ್ಗೀವ ನೀವುದಲೆ
ರಘು | ಪತಿಯೆ ಕೇಳ್ದು ದಿನಾರುಸಾವಿರ | ಸತಿಯರಿಂದೆ ಸುಖಿಸುವೆ ಮುಂ
ದಿನಯುಗದೊಳನರಿಂದ ॥ ೯೨ ॥ ಎನುತಪೇಳ್ದಾ ಮುನಿವಚನಗಳ |
ನನುನಯದೊಳಾಲಿಸುತ ರಘುನಂ | ದನನು ಸಂತಸದಿಂದೆ ಬಳಿಕಾಗ
ಪ್ರತಿಮೆಗಳನು ॥ ಕನಕದಿಂದಲೆ ಮಾಡಿಸಿ ಬ್ರಾ | ಹ್ಮಣರಿಗಿತ್ತನು ದ
ಕ್ಷಿಣೆಸಹಿತ | ವಿನುತಸರಯೂನದಿಯ ತೀರದೊಳಧಿಕಭಕ್ತಿಯಲಿ ॥
॥ ೯೩ ॥ ತೆರಳಿದನು ಬಂದಂತೆತಾಪಸ | ವರನು ರಾಘವನಿಂದೆ ಪಡೆದು
ರು | ತರದ ಮನ್ನಣೆಗಳನು ಪರಸುತ ತನ್ನ ಯಾಶ್ರಮಕೆ ॥ ಇಂತಿಂಬ
ಳಿಕೊಂದುದಿನ ನಿದ್ರಿಸು | ತಿರಲು ಜಾನಕಿಸಹಿತ ರಾಘವೆ | ನಿರತದಿಂದ
ಳು ಪಿಂಗಳೆಯೆನಿಪ ಗಣಿಕೆಶೀಘ್ರದಲಿ ॥ ೯೪ ॥ ದ್ವಾರಪಾಲಕರನ್ನು ವಂ
ಚಿಸು | ತಾರಮಣಿ ಬಂದೊಳಹೊಗುತ್ತಾ | ಧಾರಿಣೀಸುತೆ ತಿಳಿಯದಂದದೆ
ಬಂದು ರಾತ್ರಿಯಲಿ ॥ ವಿಹಾರಿದಾನಂದವನು ತಾಳುತ | ವೀರರಾಮನ ಪದ
ವನೊತ್ತಿದೊ | ಡಾ ರಘುಕುಲಲಾಮ ನೆಚ್ಚರುಗೊಂಡನೆಲೆ ಪದೆ ॥
॥ ೯೫ ॥ ಭರದೊಳೀಕ್ಷಿಸಿ ಪಿಂಗಳೆಯನಾ | ಧರಣಿಪಾಲಕ ನಚ್ಚರಿಯ
ನಾಂ | ತಿರದೆ ನೀನೇತಕ್ಕೆ ಬಂದೆಯೆನುತ ವಿಚಾರಿಸಲು ॥ [illegible]
ಜೋಡಿಸಿದಳು ರಘು | ವರನ ಪದಪಂಕೇರುಹಯುಗಳ | ಕ್ಕೆರಗಿ ನೀಂದಿ
ನೆನ್ನ ಹಸೆನುತ ಕೂಡಿ ಬಿನ್ನವಿಸಿ ॥ ೯೬ ॥ ಬರುತಿಹದ್ವಾಪರ [illegible]

ಳೀ । ಧರಣಿಯೊಳು ನೀಂಕುಬ್ಜೆಯಾಗವೆ । ತರಿಸಿ ನನ್ನನು ಪರಿಸೆಸುತ್ತ ವಳನೊಪ್ಪಿಸಿ ಕಳುಹಿಸಿ ॥ ಧರಣಿಸುತೆಗೀ ವರ್ತಮಾನವ । ನರುಪಲಾ ರಘುವರನು ಸಮನಂ । ತರದೊಳಾ ಭೂಮಿಸುತೆ ತಾಳಿದಳಧಿಕಕೋಪ ವನು ॥ ೯೭ ॥ ಇಳಿದುಪ್ಪಂಚವನಾ ಮಹೀಸುತೆ । ಮುಳಿದುಗಂಡನಸೀ ಕ್ಷಿಸುತೆನಗೆ । ತಿಳಿದಿಹುದು ನಿನ್ನೇಕಪತ್ನೀವ್ರತವು ಗೋಪ್ಯದಲಿ ॥ ನಲಿಮುಪಿಂಗಳೆಯೊಡನೆ ರವಿಸುತ । ವಳನು ನೀಂ ಕಳುಹಿಸಿಕೊಡು ತ್ತಾ । ಬಳಿಕ ನನ್ನನ್ನೆಬ್ಬಿಸಿದೆ ಸಾಕರ್ಧರಾತ್ರಿಯಲಿ ॥ ೯೮ ॥ ಅವಳು ಬಂದಿರುವಾಗ ಳೀತಕೆ । ಜವದೊಳೆಬ್ಬಿಸಲಿಲ್ಲ ನನ್ನನು । ಸವಿನಯದೊ ಳಾ ವ್ಯಾಸಮುನಿಮೊದಲಾದ ಜನರೊಡನೆ ॥ ಅವನಿಜಾತೆಯು ನುಳಿದುಜಗ ದೊಳ । ರುವವನಿತೆಯರು ಜನನಿಗೆಣಿಯೆನಿ । ಸುವರೆನುತಲಾ ನೇಕಪ ತ್ನೀ ವ್ರತನೆನುತಲೊರೆವೆ ॥ ೯೯ ॥ ಅನುದಿನದೆನೀ ನನ್ನೃತವಾಡುವೆ । ವಿನುತಮುನಿಪಾ ವ್ರತವದೇನಾ । ಯ್ತನಗೆ ಪೇಳದನುಡಿಗಳಿಂದೇನಾ ಯ್ತು ನಾನೀಗ ॥ ತನುವನೀಗುವೆ ಕೇಳು ರಘುನಂ । ದನನೆಸೋಕುವ ಳಲ್ಲ ವಾರಾಂ । ಗನೆಯುಮಲಗಿದ ಹಾಸಿಗೆಯನೆಡಗಾಲಿನೊಳು ನಾನು ॥ ॥ ೧೦೦ ॥ ನಾನಳಿದಮೇಲೆ ಸುಖಿಸುತ್ತಿರು । ನೀನು ಬೇಕಾದವಳೊಡನೆ ಕೇ । ಳೀನೆಲದೊಳಗೆ ಸೂಳೆಗಾರಿಕೆಗೈವ ರಾಜನಿಗೆ ॥ ಮಾನವುಳಿಯದು ರಾಜ್ಯನಿಲ್ಲದು । ಹಾನಿಬಹುದೆನು ತೊರೆದೊಡನೆ ಸರ । ಯೂನದಿಗೆಹೊ ರಟಳು ನಿರಾಕರಿಸುತ್ತ ಗಂಡನನು ॥ ೧೦೧ ॥ ಭರದೊಳೋಡಿ ಬರುತ್ತ ರಾಮನು । ಮರಳಗುಡ್ಡೆಯೊ ಳವನಿಜಾತೆಯು । ಕರವಪಿಡಿದಿಂತೆಂದು ನುಡಿದನು ಕಾಂತೆಕೇಳಿಂದು ॥ ಮರುಳುಗೊಂಡಾ ಪಿಂಗಳೆಯೊಡನೆ । ನೆರೆದುದಿಲ್ಲವು ಕೇಳಪ್ರಮಾಣವ । ವಿರಚಿಸುತ ಪೇಳುವೆನು ಸಂದೇಹವ ನುಬಿಡುನೀನು ॥ ೧೦೨ ॥ ಎಂದುಪಲತೆರದಿಂದೆ ಸೀತೆಯು । ನಂದುಬೇ ಡಿಕೊಳುತಿರಲಾ ರಘು । ನಂದನನು ಧರಣೀಸುತೆ ವಸಿಷ್ಠರಪದವಪಿಡಿ ದು ॥ ಇಂದುನೀಂ ಪೇಳದೊಡೆ ನಂಬುವೆ । ನೆಂದುರೋದಿಸಿ ಪೇಳ ಲತಿಜವ । ದಿಂದೆಲಕ್ಷ್ಮಣನನ್ನು ಕಳುಹಿಕರೆಯಿಸಿದನು ಮುನಿಯು ॥ ॥ ೧೦೩ ॥ ಸತಿಯರುಂಧತಿ ಸಹಿತವಶರಥ । ಸುತನಹತ್ತಿರಕಾ ವಸಿ ಷ್ಠನು । ಹಿತದೊಳೈತರ ಲಾತನಚರಣ ಪಂಕಜಕ್ಕೆರಗಿ ॥ ವಿತತ ಭಕ್ತಿಯೊ ಳರುಹಲೀ ಸಂ । ಗತಿಯನಾತನ ಪದವಪಿಡಿದಾ । ಕ್ಷಿತಿ ಸುತೆಗೆ ಪರಿಹಾರವಾಯಿತು ಮನವಸಂಶಯವು ॥ ೧೦೪ ॥ ಬಳಿಕ ರುಂಧತಿಗಾ ಮಹೀಸುತೆ । ಬೆಳವಡೆವ ವಸ್ತ್ರಾಭರಣಗಳ । ನೊ

ಲಿನುಕೊಟ್ಟಳು ವಿನಯದಿಂದುಪಚರಿಸಿ ಪದಕೆರಗಿ ॥ ತಳುವದಾಕುಲ ಗುರುವಿನಪನಕ । ಮೊಳಕೆರಗಿ ರಾಘವನು ಮನ್ನಿಸಿ । ಕಳುಹಿಸಿಕೊಡುತ ನಿದ್ರೆಮಾಡಿದನರ್ಧ ರಾತ್ರಿಯಲಿ ॥ ೧೦೫ ॥ ಬಂದುಸಲ ಸತಿಸೋದರರೊಡನೆ । ಬಂಧುಜನಗಳ ಸಹಿತದಶರಥ । ನಂದನನುಸೂರ್ಯಗ್ರಹಣದ ಸ್ನಾನಕೆಂದೆನುತ ॥ ಬಂದಿರೆ ಕುರುಕ್ಷೇತ್ರಕಾದಿನ । ಬಂದರಲ್ಲಿಗೆ ಮುನಿಗಳೆಲ್ಲರು । ಸುದಸುಂತಸದಿಂದೆ ತಮ್ಮಯಶಿಷ್ಯರೊಡವೆರಸಿ ॥ ೧೦೬ ॥ ಸ್ನಾನವಮಾಡುತ ರಾಘವನಖಿಳ । ದಾನಗಳ ನೆಸಗಿದನು ವಿಪ್ರರಿ । ಗಾನೆಲೆವಣುಗಿ ಬಂದಖಿಳ ಮುನಿಪತ್ನಿಯರಿಗೆಲ್ಲ ॥ ಸಾನುರಾಗದಿ ಮನ್ನಿಸುತಸುಂ । ಮಾನದೊಳು ಕೊಟ್ಟಳಡಿಗಡಿಗೆ ನಿ । ದಾನಿಸದೆ ಮೇಲೆನಿಸಿಪವರ ವಸ್ತ್ರಾಭರಣಗಳನು ॥ ೧೦೭ ॥ ಬಳಿಕಲೋಪಾಮುದ್ರೆ ರಾಮನ । ಲಲನೆಯನು ನೋಡುತ್ತ ಸಂತಸ । ವಳೆದುಕೇಳದಲೆ ಮಹೀಸುತೆಹಿಂದೆರಾಘವನು ॥ ಜಲನಿಧಿಗೆಸೇತುವ ನೆಸಗುವಂ । ದೊಲಿದಗಸ್ತ್ಯಮುನಿಯನು ಬರಿಸದೆ । ತೊಳಲಿವನದೇ ತಕ್ಕನಗೆನೀಂ ತಿಳಿಹಿಸವನೆನುತ । ॥ ೧೦೮ ॥ ಜನನಿಕೇಳ್ಪೂರ್ವದೊಳಗಸ್ತ್ಯರು । ವನಧಿವಾರಿಯನೀಂಟಿಬಿಟ್ಟರು । ಘನತೆಯೊಳದನು ಮತ್ತಮೂತ್ರದ ರೂಪಿನೊಳು ನೆಲದೆ ॥ ವನಧಿಜಲವದರಿಂದ ಲುಪ್ಪಿಂ । ದೆನಿಸಿಹುದದನು ಕುಡಿವುದೆಂತವೆ । ರೆನುತಸೋಚಿಸಿ ಕರಿಸಲಿಲ್ಲವು ಕುಂಭಸಂಭವನ ॥ ೧೦೯ ॥ ತನಗೆ ದುಷ್ಕೀರ್ತಿ ಬಹುದೆನ್ನುತ । ಮುನಿಕುಲೋತ್ತಮನ ಕರೆಯಿಸಲಿ । ಲ್ಲಿನಕುಲೇಂದ್ರನು ಸೇತುವನೆಸಗುವಂದು ಯೋಚಿಸುತ ॥ ಜನನಿಕೇಳಾ ಮುನಿವರೇಣ್ಯನ । ಘನತರದಕೃಪೆಯಿಂದೆ ರಘುನಂ । ದನನಿಗಿಂತು ಪರಾಕ್ರಮವೊದಗಿತೆನುತ ಪೇಳಿದಳು ॥ ೧೧೦ ॥ ಮುನಿಪನಾಶೀರ್ವಾದಬಲದಿಂ । ದಿನಕುಲೇಂದ್ರನಿ ಗೊದಗಿಹುದುಮೇ । ಲೆನಿಪಭುಜಬಲವಿಾತೆರದೊಳೆಂದೆನುತ ಲಾಕೆಯನು ॥ ಜನಕನಂದನೆ ಕಳುಹಿಕೊಟ್ಟಳು । ಮುನಿವರನೆಡೆಗೆ ಮನ್ನಿಸುತ್ತಲೆ । ವಿನುತ ಮಂಗಳವಸ್ತುಗಳ ನೊಲಿದಿತ್ತು ಪದಕೆರಗಿ ॥ ೧೧೧ ॥ ಬಂಧುಮಿತ್ರರಸಹಿ ತಯೋಧ್ಯೆಗೆ । ಬಂದು ನಿಜಮಂದಿರದೊಳಾ ರಘು । ನಂದನನು ಸತಿಸಹಿತಪಡೆದನು ಬಹಳಸಾಖ್ಯವನು ॥ ಇಂದುಮುಖಿ ಪತಿಯೊಡನೆ ಮಹದಾ । ನಂದದಿಂದೆ ವಿಹರಿಸುತಿದ್ದಳು । ಮಂದಿರದೊಳಾಶ್ಚರ್ಯದ ವಿನೋದಗಳನೀಕ್ಷಿಸುತ ॥ ೧೧೨ ॥

ಇಂತು ಮೂವತ್ತುನಾಲ್ಕನೆಯ ಅಧ್ಯಾಯ ಸಂಪೂರ್ಣವು

ಪದ್ಯಗಳು ೧೯೪೮.

ಮೂವತ್ತೆರಡನೆಯ ಅಧ್ಯಾಯ,

ಸೂಚನೆ॥ ಧರಣಿಸುತೆ ಗರ್ಭವನು ಪಡೆದಾ।
ಪುರದೊಳೆಲ್ಲರ ನೊಲಿಸುತ ಪಲವು।
ತೆರದೊಳಾ ರಘುವರನಿಗಾನಂದವನು ಮಾಡಿದಳು॥

ಇರಲಿರಲು ಬಳಿಕೊಂದುದಿನ ರಘು। ವರನು ಸೇವಕಿವಚನದಿಂದಲೆ। ಧರಣಿಸುತೆ ಗರ್ಭಿಣಿಯೆನಿಪ ಸುಗತಿಯನಾಲಿಸುತ॥ ಪರಮಸಂಮದದಿಂದೆ ಧರಣೀ। ಸುರರಕರೆಯಿಸಿ ಕೊಟ್ಟನಡಿಗಡಿ। ಗಿರದೆ ಮನ್ನಿಸಿ ದಕ್ಷಿಣೆಸಹಿತ ಸಕಲದಾನಗಳ ॥ ೧ ॥ ದಿನದಿನವು ಲಕ್ಷೋಪಲಕ್ಷದ। ಮುನಿವರರಿಗಾ ನಂದದಿಂದಲೆ। ಮನುಕುಲೋತ್ತಮ ನೊಲಿದುಸಂತರ್ಪಣೆಯನಾಗಿಸುತ॥ ಜನಕಜಾತೆಗೆ ತರಿಸಿಕೊಟ್ಟನು। ಕನಕ ಪೀತಾಂಬರಗಳನು ಮೇ। ಲೆನಿಪ ಬಹುವಿಧಗಳಹ ಸರಿಗೆಯಕುಪ್ಪಸಂಗಳನು॥ ॥ ೨ ॥ ಎರಡನೆಯ ತಿಂಗಳೊಳಯೋಧ್ಯೆಗೆ। ಕರೆಯಿಸಿ ಸುಮೇಧಾಜನಕರನು। ಧರಣಿಪಾಲಕನಾ ಗುರುವಸಿಷ್ಠಮುನಿಮೊದಲಾದ॥ ವರಮುನಿಗಳಿಂದಾ ಗಿಸಿದನತಿ। ಹರುಷದಿಂದಲೆ ಪುಂಸವನವಂ। ಬುರುತರ ಮಹೋತ್ಸವವನಾ ಧರಣೀಸುತೆಗೆನಲಿದು॥ ೩ ॥ ಸತಿಸಹಿತ ಪುಂಸವನ ಕರ್ಮವ। ಸತಿಹರುಷದಿಂ ದೀಕ್ಷಿಸಿಜನಕ। ಪತಿ ಪದೆದುರತ್ನಾಭರಣಚೀನಾಂಬರಾದಿಗಳ॥ ಸುತೆಗೆತಾನಿತ್ತಳಿಯನಹ ರಘು। ಪತಿಗೆಕೊಟ್ಟನು ಮೇಲೆನಿಪ ಘನ। ರಥಗಜತುರಗ ವಸ್ತ್ರರತ್ನಾಭರಣಗಳ ನೊಲಿದು॥ ॥ ೪ ॥ ಅಳಿಯನನು ಸಂತೋಷಪಡಿಸುತ। ಲಲನೆಯೊಡನಡಿಗಡಿಗೆಮನ್ನಣೆ। ಗಳನುಪಡೆದು ಮಿಥಿಳೆಗೆಬಂದನು ಜನಕಭೂವರನು॥ ಬಳಿಕ ಜಾನಕಿಯೊಂದುದಿನ ಪತಿ। ಬಳಿಗೆಬಂದೀ ಪುರದುಪವನಂ। ಗಳೊಳು ವಿಹರಿಸಬೇಕು ನಿನ್ನೊಡನೆಂದು ಬೇಡಿದಳು ॥ ೫ ॥ ಮಡದಿಪೇಳಿದ ಮಾತನಾಲಿಸಿ। ಸಡಗರದೆ ರಾಘವನುಪೇಳ್ದನು। ಮಡದಿಕೇಳ್ನಿಂ ಪೇಳಿನಂತಾಗಿಸುವೆ ನೆಂದೊಲಿಸಿ ॥ ಒಡನೆಲಕ್ಷ್ಮಣ ಗಂದುನುಡಿದನು। ಕಡುಜವದೊಳುದ್ಯಾನವನಕಾಂ। ನಡೆತರುವೆನೆಂದೀಗ ಸಾರಿಸುಪಟ್ಟಣದೊಳನುತ ॥ ೬ ॥ ತಿರದೊಳಾಂತು ರಘುವರನಾಜ್ಞೆಯ। ನಿಂದಲಕ್ಷ್ಮ

ಣನಾಗ ಕಂಚುಕಿ | ಯರನುಬರೆಯಿಸಿ ತನ್ನೆಡೆಗೆನೀ ವಿಪುಳವಸ್ತುಗಳ | ಇರಿಸಿಯುದ್ಯಾನ ವನದೊಳಲಂ | ಕರಿಸಿಬರಬೇಕೆನುತ ಪೇಳ್ದತಿ | ಭರದೊಳಂತಾಗಿಸುತ ಬಿನ್ನವಿಸಿದನು ರಾಮನಿಗೆ ॥೭॥ ಕುಳಿತು ರಾಘವ ನೊಂದುದಂಡಿಗೆ | ಯೊಳುಪವನಕೈತಂದನು ಬಿರುದು | ಗಳನು ಕೇಳುತವೈಭವದೊಳಾ ರಾಜವರನಗರದಲಿ ॥ ನೆಲದಣುಗಿ ಮತ್ತೊಂದು ದಂಡಿಗೆ | ಯೊಳು ಕುಳಿತುಕೊಳ್ಳುತ್ತ ಬಂದಳು | ತಳುವದಾರಾಘವನ ಹಿಂಗಡೆ ಪುರವನೀಕ್ಷಿಸುತ ॥೮॥ ತೆಂಗುನೇರಿಳೆ ಮಾವುಮಾದಳ | ಹೊಂಗೆಕಿತ್ತಿಳೆ ಬಾಳೆದಾಡಿಮ | ಕಾಂಗುಪೇರಿಳೆ ಹಲಸುನೆಲ್ಲಿಯು ಸೀಬೆ ಶೀತಾಳ ॥ ಹಿಂಗುಮುಳಚಿ ಚಕೋತಜಂಬೂಲ | ವಂಗ ಬೇವುಮೊದಲಹ ಫಲವೃಕ್ಷಂಗಳಿಂ ಶೋಭಿಸುವ ವನಕೆ ನಡೆತಂದಳಾಸೀತೆ ॥೯॥ ಬಕುಳ ಪಾದರಿ ಪಾರಿಜಾತತ್ರಿ | ಲಕ ಕಮಲಕರವೀರ ಕುರವಕ | ವಿಕಸಿತ ಸುಮಂದಾರಕೇತಕಿ ಜಾಜಿಬಂಧೂಕ ॥ ಪ್ರಕಟನಂದ್ಯಾವರ್ತ ಪರಚಂ | ಪಕಶಿರೀಷ ರಸಾಲಮೊದಲಹ | ಸಕಲ ಪುಷ್ಪಂಗಳನು ಜಾನಕಿಕಂಡಳಾವನದ ॥೧೦॥ ಗರುಡಸಾರಸ ಕೇಕಿಶುಕ ತಿ | ತ್ತಿರಿ ಬಕಭರದ್ವಾಜ ಶಾರಿಕ | ಸುರುಚಿರ ಕಪೋತಪಿಕವಾಯಸ ಶಕುನಿಮೊದಲಾದ ॥ ಮೆರೆವಸುಂದರ ಪಕ್ಷಿಗಣದಿಂ | ದುರೆವಿರಾಜಿಪ ವನವಪೊಕ್ಕಳು | ಧರಣಿಸುತೆರಾಘವನ ನೊಲಿಸುತ್ತಧಿಕ ಹರ್ಷದಲಿ ॥೧೧॥ ಮಾವಿನಾಮರಗಳ ತಳದೊಳಾ | ಪೂವಿನಾ ತೋಟಂಗಳಲ್ಲಿಯು | ಬಾವಿಗಳ ದಡದಲ್ಲಿಯು ಮರಳದಿಬ್ಬಗಳಡೆಯೊಳು | ಆವನಿತೆ ಗೂಡಾರಗಳೊಳಂ | ತಾವನದ ತೋಟಂಗಳೊಳೆಸೆವ | ಶೀವಿಮುಪ್ಪರಿಗೆಗಳೊಳು ಕ್ರೀಡಿಸಿದಳಡಿಗಡಿಗೆ ॥೧೨॥ ವರನದೀತೀರದೊಳು ರಂಜಿಪ | ತರತರದ ಜಲಯಂತ್ರಗಳ ಹ | ತ್ತಿರದೊಳಿಹ ಪೀಠಗಳಮೇಲ್ಗಡೆಗಳೊಳು ಸಂತತವು ॥ ಸರಿವಸರಯೂ ನದಿಯದಡದ | ಲ್ಲಿರುವ ದೋಣಿಗಳಲ್ಲಿಯು ಸಲೆವಿ | ಹರಿಸುತ್ತಿದ್ದಳು ಪತಿಯೊಡನೆಜಾನಕಿ ವಿನೋದದಲಿ ॥೧೩॥ ಘನತಟಾಕಂಗಳೊಳಿರುವ ಮೇ | ಲೆನಿಪ ನಾವೆಗಳಲ್ಲಿಯು ಮರದ | ಕೊನೆಯೊಳಿಹ ಮಂದಿರಗಳಲ್ಲಿಯು ಕದಳಿವನಗಳೊಳು ॥ ಇನಕುಲೇಂದ್ರನ ಸಹಿತಜಾನಕಿ | ಬಿನದದಿಂದೆ ವಿಹರಿಸುತ್ತಿದ್ದಳು | ಮನವೊಲಿದು ಹಗಲಿರುಳು ಜಲಕೇಳಿಗಳನಾಗಿಸುತ ॥೧೪॥ ಪುಷ್ಪಸದನಂಗಳೊಳು ಜಾನಕಿ | ಪುಷ್ಪಕವಿಮಾನದೊಳು ಕೇತಕಿ | ಪುಷ್ಪ ಭವನಂಗಳೊಳು ಕೃತ್ರಿಮ ಮಂದಿರಂಗಳೊಳು ॥ ಪುಷ್ಪಫಲಕಿಸಲಯವನಾಂತಚ | ತುಷ್ಪಥಂಗಳೊಳಿನಿಯನಸಹಿತ | ನಿಷ್ಫ

ಲವೆನಿಸದಂದು ವಿಹರಿಸುತಿದ್ದಳುಃವನದೆ ॥ ೧೫ ॥ ಹೊಳೆವ ಕಂಬದ ಮ
ನೆಗಳೊಳು ಕಂ । ಗೊಳಿಪ ದೋಣಿಯುವೇಲಿಪ ಮಹಡಿ । ಗಳೊಳು
ವಿಬುಧರು ಹೊಗಳುವಂತಾ ಮೇದಿನೀಸುತೆಯುು ॥ ಥಳಥಳಸುತಿಹ ಚಿ
ತ್ರಶಾಲೆಗ । ಳೊಳು ಮರಳದಿಬ್ಬೆಗಳೊಳಾ ರವಿ । ಕುಲಲಲಾಮನ
ಕೂಡೆ ವಿಹರಿಸುತಿದ್ದಳತಿಹಿತದೆ ॥ ೧೬ ॥ ಬಂದುಕಂಬದ ಮೇಲೆಕಟ್ಟಿ
ದ । ಸುಂದರವೆನಿಪ ಸೌಧಗಳೊಳತಿ । ಚಂದವಾಗಿಹ ದಾಡಿಮವನಂಗ
ಳೊಳು ಶೋಭಿಸುತ ॥ ಅಂದವಡೆದಿಹ ಮಂಚಗಳೊಳಾ । ನಂದದಿಂದೆ
ವಿಹರಿಸುತಿದ್ದಳು । ಬಂದುಜಾನಕಿ ರಾಮನೊಡನಾ ವನದಮಧ್ಯದಲಿ ॥
॥ ೧೭ ॥ ಎಳೆದಳಿರ ಮಧ್ಯದೊಳವಿತು ಕೊಂ । ಡಿಳೆಯುನಂದನೆ ಪತಿಯು
ಚಿತ್ತಕೆ । ತಳುವದೆ ವ್ಯಾಕುಲವನಾಗಿಸುವಳತಿ ಶೀಘ್ರದಲಿ ॥ ತಿಳಿದು
ತನ್ನನು ರಾಘವನುಪಿಡಿ । ಯುಲು ಮಹೀಸುತೆಮತ್ತೆ ಪತಿಯುಕೊ । ರ
ಳನು ಪಿಡಿದಾಲಂಗಿಸುತ ಸಂತಸವನಾಗಿಪಳು ॥ ೧೮ ॥ ಜನಕಸುತೆ ಸೂ
ಳೆಯುರನರ್ತನ । ವನವಲೋಕಿಸುತತಿ ಮನೋಹರ । ವೆನಿಪವಾದ್ಯಂ
ಗಳನು ಕೇಳುತಬಹುಳಹರ್ಷದಲಿ ॥ ಘನವಿನೋದಕರ ವೆನಿಪಕಥೆಗ ।
ಳನೊಲಿದಾಲಿಸು ತಿದ್ದಳಾರಾ । ಮನೊಡನಾ ರಾಮೆದನಡುವೆ ಸಂಭ್ರಮ
ವಿಲಾಸದಲಿ ॥ ೧೯ ॥ ಧರಣಿಸುತೆ ಸೂತ್ರಂಗಳಿಂದಲೆ । ನರರುಕಟ್ಟೆರಿಸಿವ
ತಿಘನತರ । ಕರಚಮತ್ಕಾರಗಳ ನೀಕ್ಷಿಸುತಧಿಕ ಹರ್ಷದಲಿ ॥ ತರತರದ
ವಿಸ್ಮಯುವನೆಲ್ಲ ಜ । ನರಿಗೆತೋರಿಸಿ ನಗಿಸುತಿಹ ದೊಂ । ಬರರಮೇಲೆನಿ
ಪಾಟಗಳ ನೊಲಿದಂದುನೋಡಿದಳು ॥ ೨೦ ॥ ವನದಮಧ್ಯದೊಳಾ ಮ
ಹೀಸುತೆ । ವಿನುತಿವಡೆದ ದಶಾವತಾರಗ । ಳನು ವಿಲೋಕಿಸುತಿಂದ್ರಜಾ
ಲ ಮಹೇಂದ್ರಜಾಲಗಳ ॥ ಮನುಕುಲೇಂದ್ರನ ಸಹಿತನೋಡುತ । ಘನ
ವಿಭವದಿಂದೊಂದು ತಿಂಗಳ । ತನಕ ವಿಹರಿಸುತ್ತಿದ್ದು ಬಂದಳಯೋಧ್ಯೆ
ಗಾಬಳಿಕ ॥ ೨೧ ॥ ಮಾತೆ ಧರಣೀಜಾತೆ ಸುಗುಣ । ವ್ರಾತೆ ಮಂಗಳ
ಭೂತೆ ವಂಶಪು । ನೀತೆ ಜನಸಂಪ್ರೀತೆ ಭೂತಲದೊಳತಿವಿಖ್ಯಾತೆ ॥ ನೀ
ತಿತತಿವಿಖ್ಯಾತೆ ದಾನವ । ಭೀತೆ ಸುಗುಣಾತೀತೆ ಕರುಣಾ । ಸ್ರೋತೆ
ಗರ್ಭವಧರಿಸಿದಳು ಸುವಿನೀತೆಯಾಸೀತೆ ॥ ೨೨ ॥ ಬಡನಡುಬಳೆದುದು
ತಿವಳಿಗಳೊಳ । ಗಡಗಿಕೊಂಡವು ಸುಂದರಮುಖದೊ । ಳೊಡನೆಬಿಳು
ಪೇರಿದುದು ಕಪ್ಪೆನಿಸಿದುದು ಚೂಚುಕವು ॥ ಪೊಡವಿಯುಣುಗಿಗೆ ಮೈಯೊ
ಳಲಸಿಕೆ । ಯುಡಿಗಡಿಗೆ ಸಂಜನಿಸಿತಾಕೆಯ । ನಡಿಗೆ ಮಂದತೆಯಾಂತು
ದಾಗರ್ಭವೊಡಲೊಳಿರುತಿರೆ ॥ ೨೩ ॥ ಅಡಿಗಡಿಗೆಮೈದೋರೆ ಬಳಲಿಕೆ ।

ಬೆಳಗಿತಲೆಯೊಳಗೆ ಬಿಳುಪೇರೆ ಕುಚಾಗ್ರಗಳು ಕಪ್ಪಾದುವು । ಪಡಿಯಾಪಾಲ್ತೆಗೆದೋರೆ ದೇಹ ದೆಡೆಗೆಲ್ಲ ಮುದವೇರೆ ನಡೆನುಡಿಗಳು ನಿಧಾನವೆನಿಸಿರೆ । ತೊಡೆವೆರೆಸೊಳ ಸಾಲೀನವಾಗಿರೆ । ಪ್ರೌಢವಿಯಾಗಿಗೆ ಪೆರ್ಚಿದುವು ಬಸಿರಿನಲಿಬಯಕೆಗಳು । ೨೪ । ನೆಲದೊಳುತ್ತಮ ಮೆನಿಸಿಕೊಂಡಿಹ । ಪಲತೆರದ ವಸ್ತುಗಳ ಮೇದಿರ । ದೊಳಸಿತ್ತಿದರ್ಶವನಾ ಬಯಕೆಗಳೊಳಗಾಗಿ ಜಾನಕಿಯು । ಬೆಳೆದಸಾಕಸದಿಂದೆಸಿತ್ತಿವು । ಲಲಿತಮಾ ದಾನವನು ತ್ರಿಸ್ತ್ರಿ ತ್ರಿದ್ದಳು । ತ್ರಿಳಿಮಾವಂತೆರೊಬ್ಬರಿಗೆ ಗರ್ಭವೊಡಲೊಳು ಬೆಳ್ಚುತ್ತಿರೆ । ೨೫ । ತಡೆಯಬಾರದೆ ಸೀತೆಭಾರವ । ನೊಡಲೊಳು ಧರಿಸದಿದ್ದಳುತ್ತಮ । ದೊಡವೆಗಳನಾವರಿಸೆ ಬಳುತೆಳುವೆನಿಸಿಕೊಂಡಿರ್ದ ॥ ಉಡಿಗೆತೊಡಿಗೆಗಳನ್ನು ಮಾಡಿಸಿ । ತೊಡುವವಳು ಸಖೀಜನರಸಂಗಡ । ನುಡಿಯುತಿದ್ದಳು ಮನದ ಕೋರಿಕೆಗಳನು ಬಯಕೆಯೊಳು ॥ ೨೬ ॥ ಪಲ್ಲವಾಧರೆ ಭೃಂಗಕುಂತಳೆ । ಮಲ್ಲಿಕಾಸ್ಮಿತರುಚಿರೆ ಕೋಮಲ । ಸಲ್ಲಲಿತಶುಭಗಾತ್ರೆ ಶುಕಪಿಕ ಶಾರಿಕಾಲಾಪೆ ॥ ಫುಲ್ಲಲೋಚನೆ ಪಂಕಜಾನನೆ । ನಲ್ಲನಮನಕದೊಂದು ಬಗೆಯು ಸ । ಮುಲ್ಲಸವನೆಸಗುತ್ತೆ ಮೆರೆದಳು ಧರಿಸಿಗರ್ಭವನು ॥ ೨೭ ॥ ಕುಂದಕುಟ್ಮಲ ರದನೆ ಮಂಜುಳ । ಮಂದಗಮನೆ ತಿಲಸುಮನಾಸಿಕೆ । ಚಂದನವರಸುಗಂಧಿ ಕಿಸಲಯಪಾಣಿ ಶುಕವಾಣೀ ॥ ಸುಂದರ ಘನಪಯೋಧರ ಯುಗಳೆ । ಚಂದದಿಂದೆ ವಿರಾಜಿಸಿದಳಾ । ನಂದವನು ಮಾಡುತ್ತ ಪ್ರಾಸತೆರದಿಂದೆ ಬಸಿರಿನೊಳು ॥ ೨೮ ॥ ಬಂದುದಿನವೊಳು ಕೈಕೆಸುತಸ । ಹಿಂದೆ ತನ್ನರಮನೆಗೆ ಧರಣೀ । ನಂದನೆಯನು ಕರೆಯಿಸಿ ವಿನಯದಿಂದೆ ಮನ್ನಿಸುತ ॥ ಇಂದುಮುಖಿ ರಾವಣನರೂಪವ । ನಂದು ನೀ ಕಂಡಂತೆ ಗೋಡೆಯೊ । ಳಂದು ಚಿತ್ರಿಸಿ ನನಗೆ ತೋರಿಸೆನುತ್ತ ಕೇಳಿದಳು ॥ ೨೯ ॥ ಮನದೊಳಾಶ್ಚರ್ಯವನು ತಾಳುತ । ಜನಕಸುತೆ ಕೈಕೆಯಸುತೆಗಳ । ವಿನಯದಿಂದಾಲಿಸುತ ಲೋಕೆಯ ಸವಕೆ ಮೊಣಿಸಿರಗಿ ॥ ದನುಜಪತಿ ಯಂಗುಷ್ಠವನು ನಾಂ । ವನದೊಳೀಕ್ಷಿಸಿ ರಾತ್ರಿಪೆನಲ್ಲದ । ವನ ಮೊಗವನೋಡಿದವಳಲ್ಲ ವೆನುತ್ತ ಪೇಳಿದಳು ॥ ೩೦ ॥ ಅದನೆಸೀನೀ ಗೋಡೆಯೊಳು ಬರೆ । ವುದೆನುತ ಮಹೀಸುತೆಯನು ಬಹುಳ । ವಿಧದೊಳರದಾಕ್ಕೈಕೆ ಪೀಡಿಸಲಾಸತೀಮಣಿಯು ॥ ಚದುರತನದಿಂದೊಡನೆ ಬರೆವುದ । ಷ್ಟದೊಳು ಬರೆವಳುಮುನ್ನ ತಾಂ ನೋ । ಡಿದವೊಲಾ ದಶಶಿರನ ಪೆಬ್ಬೆರಳನ್ನು ಗೋಡೆಯಲಿ ॥ ೩೧ ॥ ನೆರೆವಿಲೋಕಿಸಿ ಕೈಕೆದಶಕಂ । ಧರನ ಪದದಂಗುಷ್ಠವನ್ನು । ಚ್ಚರಿಯನಾಂ ತವನೀಸುತೆಯನು

ರೆಹೊಗಳತಕ್ಕೈಸಿ ॥ ಪರಮಸಂಮುದದಿಂದೆ ಮನ್ನಿಸಿ । ಧರದೊಳಾ
ದಿನ ಕಳುಹಿಕೊಟ್ಟಳು । ಮೆರೆವರತ್ನಾಭರಣ ವಸ್ತ್ರಂಗಳನುತಾನಿತ್ತು ॥
॥ ೩೦ ॥ ಕಳುಹಿಕೊಟ್ಟು ಮಹೀಸುತೆಯುನಾ । ಬಳಿಕಸದನಕೆ ಕೈಕೆ
ನಡೆತಂ । ದೊಲಿದು ದಶಕಂಧರನ ಹೆಬ್ಬೆರಳನುವಿಲೋಕಿಸುತ ॥ ಬಳೆ
ದಸಂತಸದಿಂದೆ ಬರೆದಳು । ಖಳನರೂಪವನೆಲ್ಲ ತಾಂಮನ । ದೊಳಗೆ
ಯೋಚಿಸಿ ತನ್ನಬುದ್ಧಿ ಕುಶಲತೆಯಿಂದೊಡನೆ ॥ ೩೩ ॥ ಧರಣಿಸುತೆಗಾ
ರನೆಯತಿಂಗಳು । ನೆರೆಯುಲಾ ರಘುವರನಯೋಧ್ಯಾ । ಪುರಿಗೆ ಮಿಥಿಲಾ
ನಗರದಿಂದೆ ಸುಮೇಧೆಜನಕರನು ॥ ಕರೆಯಿಸಿಕೊಳುತ ವೈಭವದೊ
ಳಾ । ಗುರುವಸಿಷ್ಠನ ಮಾತನಾಲಿಸು । ತರಸಿಗಂದು ವಿರಚಿಸಿದನು ಸೀ
ಮಂತಕರ್ಮವನು ॥ ೩೪ ॥ ಸುತೆಯುಸೀಮಂತವನು ಪಡೆದತಿ । ಹಿತದೆ
ನೋಡುತ ಜನಕಭೂಪತಿ । ಸತಿಸಹಿತ ಸೀತಾರಘುವರರ ನೊಲಿದುಮ
ನ್ನಿಸುತ ॥ ವಿತತನವರತ್ನಾ ಭರಣಗಳ । ನತಿಮುದದೆ ಕೊಟ್ಟುಪಚರಿ
ಸಿದನು । ಜತನದಿಂದಲೆ ದಿವ್ಯವಸ್ತ್ರಂಗಳನುಪಡೆದಿತ್ತು ॥ ೩೫ ॥ ಅಳ
ಯನಿಂದಲೆ ಪಲವುಮನ್ನಣೆ । ಗಳನು ತಾಳ್ದಾಜನಕಭೂಪನು । ತಳುವ
ದೈತಂದನು ಸತಿಸಹಿತ ತನ್ನ ಪಟ್ಟಣಕೆ ॥ ಬಳೆದಸಂತಸದಿಂದೆ ರವಿಕುಲ ।
ತಿಲಕನನುಪೂಜಿಸಿ ನಿಜನಿಳಯ । ಗಳಿಗೆಪೋದರು ಸಕಲರಾಜರು ಬಂದ
ತೆರದಿಂದೆ ॥ ೩೬ ॥ ಪುರದಮಾನವರೆಲ್ಲ ರತ್ಯಾ । ದರದೆ ಸೀತಾರಾಘವರನ
ತಿ । ಹರುಷದಿಂ ತಂತಮ್ಮಮನೆಗಳಗಿರದೆ ಕರೆತಂದು ॥ ವರಸುಭೋಜನ
ದಿಂದೆ ದಣಿಸುತ । ಮೆರೆವಘನದಿವ್ಯ ನವರತ್ನಾ । ಭರಣವಸನಂಗಳನು
ಕೊಟ್ಟುಕಳುಹುವರಾತನನು ॥ ೩೭ ॥ ಬಂದುಸೀತಾರಾಮರಿಗೆನಲ ।
ವಿಂದೆವಂದಿಸಿ ತಮ್ಮನಗರಗ । ಳಂದೆತಂದಿಹ ಕಾಣಿಕೆಗಳನುಕೊಟ್ಟುರಾ
ಮನಿಗೆ ॥ ಸುಂದರಮನಿಪ ದಿವ್ಯವಸ್ತ್ರಗ । ಳಂದೆ ಸಂತಸವಡಿಸಿಬೇಗನೆ ।
ಹಿಂದಕೆಬರುತಲಿದ್ದರು ಸಕಲದೇಶದಾನೃಪರು ॥ ೩೮ ॥ ಮೆರೆವಯೋ
ಧ್ಯಾಪುರಕೆ ನಡೆತಂ । ದೆರಗಿ ರಾಜಾಂಗನೆಯರೆಲ್ಲರು । ಧರಣಿನಂದನೆಗು
ತ್ತಮ ಮನಿಪವಸ್ತ್ರಗಳನಿತ್ತು ॥ ಪರಿಪರಿಯೊಳಂ ದೈಡೆಮನ್ನಿಸಿ । ನೆ
ರೆಯಲಂಕರಿಸಿಬರುತಿದ್ದರು । ಪರಮಸಂಮುದದಿಂದೆ ತಮ್ಮಯಪುರಕೆ ಶೀ
ಘ್ರದಲಿ ॥ ೩೯ ॥ ಇಂತಿರುತಿರಲು ಜನಕನಂದನೆ । ಸಂತಸವನಾಂತೊಂದು
ದಿನಮೇ । ಕಾಂತಭವನದೆ ರಾಘವೇಂದ್ರನಕೂಡೆ ವಿಹರಿಸುತ ॥ ಕಾಂತ
ಕೇಳ್ವೆಂ ವಿಪಿನದೊಳು ಮುನಿ । ಕಾಂತೆಯರಬಳಿ ವಸಿಸಿಬಂದಪೆ । ನಿಂ
ತು ಮನದೊಳುಬಯಕೆ ಯುಂಟಾಗಿಹುದುನನಗಿಂದು ॥ ೪೦ ॥ ವನ

ಕೆನನ್ನನುಕಳುಹು ತಾಪಸ । ವನಿತೆಯರ ಸತ್ಸಂಗದೊಳುನಾಂ । ಮನದಬೇಸರ ನೀಗಿಬರುವೆನು ಶೀಘ್ರದೊಳೆನುತ್ತ ॥ ಜನಕಸುತೆರಾಘವನ ಚರಣಕ । ವನತಳಾಗಿಯೆ ಪೇಳ್ದಳಂದತಿ । ವಿನಯದೊಳರಿಯದಂತೆ ಜನರೋರ್ವರಾರುರಹಸ್ಯದಲಿ ॥ ೪೧ ॥ ಆಗಲೆನುತಾ ಸತಿಯನೊಪ್ಪಿಸಿ । ರಾಘವನು ಸವಿನುಡಿಗಳಂದಲೆ । ಬೇಗನೆಮಹೀಸುತೆಯ ಚಿತ್ತಕೆಮುದವನಾಗಿಸುತ ॥ ರಾಗರಸದಿಂದನುದಿನವು ಮದ । ನಾಗಮಹಿತ ವಿಧಾನದೊಳು ಬಹು ।ಭೋಗಭಾಗ್ಯವ ನೈದುತಿದ್ದನು ತನ್ನ ಸತಿಸಹಿತ ॥ ೪೨ ॥

ಇಂತು ಮೂವತ್ತೈದನೆಯ ಅಧ್ಯಾಯ ಸಂಪೂರ್ಣವು
ಪದ್ಯಗಳು ೧೯೯೦.

ಮೂವತ್ತಾರನೆಯ ಅಧ್ಯಾಯ.

ಸೂಚನೆ ॥ ಧರಣಿಸುತೆ ಪತಿತೊರೆದನೆಂಬುದ ।
ನರಿತರಣ್ಯದೊಳೈದೆ ದುಃಖಿಸು ।
ತಿರದೆಬಂದಳು ತಿಳದು ಮುನಿವಾಲ್ಮೀಕಿಯಾಶ್ರಮಕೆ ॥

ಇರಲಿರಲು ಬಳಿಕೊಂದುದಿನ ರಘು । ವರನು ಜಾನಕಿಯೊಡನೆನಿದ್ರಿಸು । ತಿರುಳು ಮೂರನೆಜಾವದೊಳ ಗೊಂದುಕನಸನುಕಂಡು ॥ ತರಣಿಮೂಡದಮುನ್ನ ತಾನತಿ । ಭರದೊಳೆದ್ದು ವಸಿಷ್ಠಮುನಿಯಂ । ಬರಿಸಿಬಿನ್ನೈಸಿದನು ಕಂಡಕನಸಿನಸಂಗತಿಯ ॥ ೧ ॥ ಮುನಿಪಕೇಳೀ ಜನಕಸುತೆ ಪಾ । ವನಸುರತರಂಗಿಣಿಯ ಲಂಘಿಸಿ । ವನದೆ ಭೀತಿಯ ನಾಂತು ದೆಸೆಗಳನೆಲ್ಲ ತಿರುತಿರುಗಿ ॥ ಘನಮನೋವ್ಯಥೆಯಿಂದೆ ನೊಂದಂ । ತೆನಗೆಕಾಣಿಸಿ ತೊಂದುಕನಸಿದು । ಮನಕೆಲೇಸಾಗಿಹುದೆ ಪೇಳೆಂದೆನುತಬೆಸಗೊಂಡ ॥ ೨ ॥ ಎನಲುಕೇಳ್ದು ವಸಿಷ್ಠಮುನಿ ಮೇ । ಲೆನಿಸದೀ ಸ್ವಪ್ನವೆನುತನುಡಿದು । ಮನುಕುಲೋತ್ತಮನಿಂದೆ ಶಾಂತಿಯ ನದಕೆಮಾಡಿಸುತ ॥ ಮನೆಗೆಬಂದನು ರಾಘವೇಂದ್ರನ । ಮನವನೊಪ್ಪಿಸಿ ಪಲತೆರದ ಮ । ನ್ನಣೆಗಳನು ತಾನಾಂತುಶೀಘ್ರದೆ ಶಿಷ್ಯರೊಡವೆರಸಿ ॥ ॥ ೩ ॥ ಅದನೆಯೋಚಿಸುತಾ ರಘುವರನು । ಮೊದಲಿನಂತೆ ಮನುಜರ ನಾರೈ । ವುದನುಳದು ಚಿಂತೆಯನುತಾಳ್ದುರೆ ಕುಂದಿಕೊರಗುತ್ತ ॥ ಒದಗಿದಮನಃಖೇದ ದಿಂದಲೆ । ಕುದಿದು ಪುರಶೋಧನೆಯ ಚರನಂ । ಸದನಕೆ

ಕರೆಯಿಸುತ್ತ ತ್ರಿ ರಹಸ್ಯದೊಳಗಿಂತೆಂದ ॥ ೪ ॥ ವಿಜಯ ಕೇಳತಿ ಗುಪ್ತ
ದಿಂದೀ । ರಜನಿಯೊಳು ನಿನ್ನನ್ನು ಪುರದಮ । ನುಜರು ನೋಡದವೊಲಾಗೆ
ಬೀದಿಗಳಲ್ಲಿ ಸಂಚರಿಸಿ ॥ ನಿಜನಿವಾಸದ ಜನರು ನನ್ನನು । ಭಜಿಸುವ
ರೊ ಪೂಜಿಸರೊ ಜರೆವರೊ । ನಿಜವನಿಸಂಗತಿಯ ತಿಳಿದುಬಾಹೆಂದು
ನೇಮಿಸಿದ ॥ ೫ ॥ ಅರಸನಾಜ್ಞೆಯ ನಾಲಿಸುತ್ತ ತ್ರಿ । ಧರದೊಳಾ ರಘು
ನಾಥನ ಚರಣ । ಕೆರಗಿ ಬೇಸರದೇ ನಿಸಿಂ ನುಡಿವಂತೆ ನಾ ನಿಂದು ॥ ಪುರ
ದಬೀದಿಗಳಲ್ಲಿ ನನ್ನನು । ಚರರೊಡನೆ ಸಂಚರಿಸಿ ಕೇಳುವ । ಪರಿಯನೆಲ್ಲ
ವತಿಳುಹುವೆನೆನುತ ನಡೆದನಾ ವಿಜಯ ॥ ೬ ॥ ಪುರದಶೋಧನೆ ಜನರ ಸ
ಹಿತಾ । ಪುರದಬೀದಿಗಳಲ್ಲಿ ನಿಶಿಯೊಳು । ಚರಿಸಿ ವಿಜಯನು ತನ್ನನೊಬ್ಬ
ರರಿಯದತೆರದಿಂದೆ ॥ ಪರಿಪರಿಯ ರಾಘವನ ಪಾವನ । ಚರಿತೆಗಳನಾಲಿ
ಸುತ ಕೇಳ್ದನು । ಭರದೊಳೊಂದೆಡೆ ರಜಕನಾಡಿದ ನಿಷ್ಠುರೋಕ್ತಿಗಳ ॥
॥ ೭ ॥ ತಂದೆಯ ಮನೆಯೊಳಿದ್ದ ಮಾನ್ಯೆ । ತಂದ ಮಡದಿಯನೀಕ್ಷಿಸಿ
ರಜಕ । ನಂದು ಬಹುಕೋಪವನು ತಾಳ್ದು ರೆಬ್ಬಿದು ಗರ್ಜಿಸುತ ॥
ನೊಂದು ಕೊಳ್ಳದೆ ತನ್ನ ಚಿತ್ತಕೆ । ಬಂದತೆರದಿಂದುರೆ ಜರೆದು ನಿಜ । ಮಂ
ದಿರದೊಳಿಂತೆಂದು ನುಡಿದನು ಹೊಡೆದು ಹೆಂಡತಿಯನು ॥ ೮ ॥ ದನುಜ
ಪತಿ ರಾವಣನ ರಾಜ್ಯದ । ವನದೊಳಿದ್ದ ಮಹೀಸುತೆಯನು ಸ । ದನದೊ
ಳಗಿರಿಸಿಕೊಂಡ ರಾಘವನಂತೆ ಸಲಿದಿಂದು ॥ ಮನೆಗೆ ನಿನ್ನನು ಸೇರಿಸೆನು
ನಾ । ನೆನುತ ಗರ್ಜಿಸಿ ಪೇಳ್ದ ಗಸನ ವ । ಚನವನಾಲಿಸಿ ಮರಳಿಬಂದನು
ವಿಜಯನಲ್ಲಿಂದ ॥ ೯ ॥ ಮಲಗಿ ನಿದ್ದೆಯ ಮಾಡದೆ ರಜನಿ । ಯೊಳಗರಿದ
ಸಂಗತಿಯನೇ ಮನ । ದೊಳಗೆ ಯೋಚಿಸಿ ತುದಯಕಾಲದೊಳೆದ್ದು ಶೀ
ಘ್ರದಲಿ ॥ ಹಲವು ಜನರೊಡವೆರೆಸುತಾ ರಘು । ಕುಲಲಲಾಮನ ಸಭೆಗೆ ನ
ಡೆತಂ । ದೊಲಿದೆರಗಿ ಕೈಮುಗಿದು ನಿಂದ ನವನಿಯನೀಕ್ಷಿಸುತ ॥ ೧೦ ॥
ಪ್ರಾತರಾಹ್ನಿಕವನು ರಚಿಸಿಸಹ । ಜಾತರಿಂದೊಡ್ಡೋಲಗವ ನಿ । ತ್ರಾ
ತಪೋನಿಧಿಗಳ ಮಲಾಶೀರ್ವಾದಗಳನಾಂತು ॥ ಭೂತಳಾಧಿಪ ನೆಲ್ಲರಸು
ಖದ । ತಾತ್ರಿಳಿದು ಕೇಳುತ್ತ ನಿಜಸಂ । ಕೇತ ಭವನಕೆ ವಿಜಯನೊಡನೈ
ತಂದನತಿಭರದೆ ॥ ೧೧ ॥ ಪುರದ ಸಂಗತಿಯೇನು ತಿಳಿದಂ । ತರುಹುಸೀನೆ
ನುತಾ ರಘುವರನು । ಭರದೊಳಾ ವಿಜಯನನು ಕೇಳಲವನತಿ ವಿನಯ
ದಲಿ । ಶಿರವಬಾಗಿಸಿ ಕೈಮುಗಿದು ರಘು । ವರನ ಮುಂಗಡೆ ನಿಂದು ಪೇ
ಳ್ದನು । ನರವರೋತ್ತಮ ಕೇಳು ರಜಕನಾಡಿದ ವಚನಗಳನು ॥ ೧೨ ॥
ಅರಸ ಕೇಳೀ ಪುರದೊಳೆಲ್ಲರು । ಪರಿಪರಿವಿಧಗಳಿಂದ ನಿನ್ನನು । ನಿರಂತ

ಜಾನಿಸುತಿಹರು ಹಗಲಿರುಳಧಿಕಭಕ್ತಿಯುಳಿ । ತರತರದನಿನ್ನ ಚರಿತ್ರಂ
ಗಳ । ನಿರವಿಸಂತಸದಿಂದೆ ಪಠಿಸುತಿ । ಹರವಸೀಶನೆ ನೀನುಕೇಳೆನ್ನೊಂ
ದುವಾರ್ತೆಯನು । ೧೩ ॥ ತಂದೆಯುಮನೆಯೊಳಿದ್ದ ಮನೆಗೈ । ತಂದತ
ನ್ನ ಮೋದದಿಯು ನಿರೀಕ್ಷಿಸಿ । ಮಂದಮೈತ್ರಿಯೆನಿ ಪಗಸನೊಬ್ಬನುಬ್ಬೆದು ಕ
ಡುನುಡಿಯನು ॥ ಹಿಂದೆರಾಘವನಾ ದಶಿರನ । ಮಂದಿರದೊಳಿರುತಿದ್ದ ಸತಿ
ಯನು । ತುದಿರಿಸಿಕೊಂಡು ತಿರಿಸಿಕೊಳ್ಳುವನುನಾನಲ್ಲ ॥ ೧೪ ॥ ಎನುತ
ಪೆಂಡತಿಯನತಿ ಕಠಿನದ । ಬಾಗಗಳಿಂದುರೆ ನಿಂದಿಸಿವರಜ । ಕನ ನುಡಿ
ಯುನಾಲಿಸುತ ಕಿವಿಗಳ ಮುಚ್ಚಿಕೊಂಡಿರದೆ ॥ ಮನದೊಳತ್ರಿ ಖೇದವನು
ತಾಷ್ಟ್ರಸ । ದನಕೆಬಂದೆನು ನಿನ್ನನಾಮವ । ನೆನೆದು ಚಿತ್ತದೊಳೆನುತ
ಚಿನ್ನವಿಭವನು ಶಿರಬಾಗಿ ॥ ೧೫ ॥ ಆನುಡಿಯನಾಲಿಸುತ ಹಾಸನ ।
ಗೀನಲದೊಳಿಂತು ನೆಲೆಗೊಂಡು । ಹೀನವಾದಪವಾದ ಮೆನ್ನುತಕೂ
ರಗಿಚಿತ್ತದೊಳು ॥ ಮಾನವಾಧೀಶ ನುರೆದುಃಖಿಸಿ । ದೀನನಾಗುತ ಶಿರವ
ಬಾಗಿಸ । ಮೌನದಿಂದೈದಂವ ನಂತಃಪುರಕೆಬಿಸುಸುಯ್ದು ॥ ೧೬ ॥ ಅನಿ
ತರೊಳುಕೈಕೆ ರಘುನಾಥನ । ಮನೆಗೆಬಂದತಿ ಗುಪ್ತದಿಂದಾ । ತನನು
ತನ್ನಯುಸವನಕೆ ಕರೆದುಕೊಂಡು ಬಂದೊಲಿಸಿ । ವಿನುತಮಂಚಪೀಠದೊ
ಳು ಕೂಡಿಸಿ । ಮನವೊಲಿದು ಮನ್ನಿಸುತ ತೋರಿಸಿ । ದನುಜಪತಿ ರಾ
ವಣನರೂಪವನಿಂತು ಪೇಳಿದಳು ॥ ೧೭ ॥ ತರುಣಕೇಳೈ ಜಾನಕಿಗೆ
ದಶ । ಶಿರನೊಳುಂಟಾಗಿರುವ ಮನವಿದು । ಪರೆಗೆಬಿಟ್ಟಿಲ್ಲವನ ರೂಪವ
ನೆಲ್ಲಗೋಡೆಯೊಳು ॥ ಬರೆದಿಹಳು ಪೆಂಗಸರಚಿತ್ತವ । ನರುಹಲೆಂತಹ
ದು ನಿನಗೇನೆಂ । ದರುಹಲೆನ್ನುತ ಕೈಕೆಪೇಳ್ದಳು ರಾಮಭದ್ರನಿಗೆ ॥
॥ ೧೮ ॥ ಅವನುಕಂಡಾ ರಘುವರನು ಚಿ । ತ್ತದೊಳು ಕೋಪವನಾಂತು
ನನ್ನಮ । ಪದಿಮನಟ್ಟುವೆ ನಡವಿಗೆಂದಾಕೆಯನು ಸಮ್ಮತಿಸಿ ॥ ಒದಗಿದ
ಮನಃಖೇದದಿಂದಲೆ । ಸದನಕೈತಂದನತಿ ಭರದೊಳು । ಪದಕೆರಗಿನಿಂದ
ಪರನೋಡದೆ ಪೂರ್ವದಂಪದಲಿ ॥ ೧೯ ॥ ವನಕೆಪೋಗುವೆಳಾ ಮಹೀ
ಸುತೆ । ಮನುಜಪತಿ ರಾಘವನು ಸಾಯುವ । ನಿನಿಯಳನುಬಿಟ್ಟಿರದೆ ಭ
ರತಂಗರಸುತನವಡುದು ॥ ಘನವಿಭವದಿಂ ದಿರುತಿಹೆನುನಾ । ನೆನುತಸಂ
ತಸವಳೆದು ತನ್ನಯು । ಮನವೆ ಸಖಿಯರೊಡನೆ ವಿನೋದಿಸುತಿದ್ದಳಾ
ಕೈಕೆ ॥ ೨೦ ॥ ಬಗಂಗೊಡ ದಕ್ಷಿಳಧರಣೀ । ಪಾಲಕರನು ವಿಲೋಕಿ
ಸದಿಸಿಂ । ತಾಲತಾಂಗಿಯು ಧೀನಕೊಳಗಾಗಿಯೆ ವಿಷಾದಿಸುತ ॥ ನೀಲ
ಮೇಘಶ್ಯಾಮ ನಿರೆತಾ । ವಾಲಿಸುತ್ತೀ ವರ್ತಮಾನವ । ಸಾಲಕುಮಣಾ

ದಿಗಳು ಹೊಕ್ಕರು ಬೇಗನೆರಮನೆಯ ॥ ೨೧ ॥ ಬಂದು ರಘುನಂದನನ ಮುಂಗಡೆ । ನಿಂದು ಪದಪಂಕೇಜಯುಗ ಕೊಲ । ವಿಂದೆಲಕ್ಷ್ಮಣಭರತ ಶತ್ರುಘ್ನರು ನಮಿಸುತಿರಲು ॥ ಬಂದಸೋದರರನ್ನು ತನ್ನಯ । ಮುಂದೆ ಕೂಡಿಸಿಕೊಂಡು ಬಳಿಕಿಂ । ತೆಂದುನುಡಿದನು ತನಗೆಬಂದಪಕೀರ್ತಿಯ ನುರಾಮ ॥ ೨೨ ॥ ಧರಣಿಜಾತೆ ಯಶುದ್ಧಳನ್ನುತ । ಪುರದಜನರಾಡುತಿಹರೆನ್ನನು । ಪರಿಪರಿವಿಧಗಳಿಂದೆ ಮನಬಂದಂತೆ ದೂಷಿಪರು ॥ ನರರ ನಿಂದೆಗೆ ಸಿಕ್ಕಿನಾನೀ । ಧರೆಯೊಳಿದ್ದೇಂ ಫಲವುಸಹಜಾ । ತರೆ ಮಹೀಸುತೆಯನ್ನು ಬಿಡುವೆನೆನುತ್ತ ಪೇಳಿದನು ॥ ೨೩ ॥ ಇವಳಯೋನಿಜೆ ಮಂಗಳಮಹೋ । ತ್ಸವೆ ಸುಗುಣಸಂಪನ್ನೆ ಹದಿಬದೆ । ಭುವನಪಾವನೆ ಪುಣ್ಯಚರಿತೆ ಸುಶೀಲರೂಪವತಿ ॥ ರವಿಕುಲದೊಳತಿ ಪೂಜ್ಯಳೆಂದೆಂ । ಬುವುದನಾಂ ತಿಳಿದಿರುವೆ ನಾದೊಡ । ಮಿವಳನುಳಿವೆಂ ನಿಂದೆಗೊಳಗಾಗಿ ಬದುಕುವನಲ್ಲ ॥ ೨೪ ॥ ಜನಕಸುತೆಯಂ ಬಿಟ್ಟೆನಿದುನಿಜ । ವೆನುತ ರಾಘವನೆನಲು ಸೋದರ । ರಿನಕುಲೇಂದ್ರನಿಗೆರಗಿ ಜೀಯರಜಕನನುಡಿಗಾಗಿ ॥ ಅನಲಮುಖದಿಂ ದಂದುಜಾನಕಿ । ಯನು ಪರೀಕ್ಷಿಸಿತಿಳಿಯದವನಂ । ತಿನಿಯಳನದೆಂತುಳಿವೆ ನೀನಿಂದೆನುತಪೇಳಿದರು ॥ ೨೫ ॥ ಅವರ ಮಾತನು ಮನಕೆತಾರದೆ । ತವಕದೊಳು ಸೌಮಿತ್ರಿಯಂ ಕರೆ । ದವನಿಜಾತೆಯನೀಗ ರಥದೊಳುಕುಳ್ಳಿರಿಸಿಕೊಂಡು ॥ ಜವದೆ ಗಂಗಾನದಿಯ ದಾಟುತ । ಡವಿಯೊಳಗೆನೀಂ ಬಿಟ್ಟುವಳಿಡಭು । ಜವನು ಖಂಡಿಸಿತರುವುದೆನ್ನುತ ಪೇಳ್ದನಾರಾಮ ॥ ೨೬ ॥ ಅಣ್ಣನಾಡಿದ ಮಾತನಾಲಿಸಿ । ಪಣ್ಣಿದರಥವ ತರಿಸುತಾನೆಲ। ವೆಣ್ಣುಮಗಳರಮನೆಗೆ ಬಂದತಿದೂರದೊಳು ನಿಂದು ॥ ಕಣ್ಣೊಳೀಕ್ಷಿಸ ದಳುತಳುತನಿ । ರ್ವಿಣ್ಣಭಾವದೊಳಂದು ಸೀತೆಗೆ । ಬಿನ್ನವಿಸಿದನು ಕೈಮುಗಿದು ಸೌಮಿತ್ರಿತಲೆವಾಗಿ ॥ ೨೭ ॥ ತಾಯೆ ನಿನ್ನಸುಕಾನನಕೆ ರಘು । ರಾಯನಿಂದು ಕಳುಹಿಬಹುದೆನುತ । ಛಾಯೆಗಾಣಿಸ ನನಗೆನೇಮಿಸಿರುವನು ಗುಪ್ತದಲಿ ॥ ಪ್ರಿಯಮೊಳ್ನುಡೆ ರಾಘವೆನಭಿ । ಪ್ರಾಯದಂತೆ ವಿಪಿನಕೆಬಿಜಯಂ । ಗೈಯುವುದೆನುತ ಲಕ್ಷ್ಮಣ ನೆರಗಿಪೇಳ್ದನತ್ತಿಗೆಗೆ ॥ ೨೮ ॥ ಮನದಕೋರಿಕೆ ಫಲಿಸಿತೆಂದಾ । ಜನಕಸುತೆಬೇಕಾದ ವಸ್ತುಗ । ಳನು ವರೂಥದೊಳಿರಿಸಿ ಕೊಂಡತ್ತೆಯರಕಾಲ್ಗೆರಗಿ ॥ ಮನುಕುಲೇಂದ್ರನ ಪಾದುಕೆಗಳೆರ । ಡನು ತರಿಸಿಕೊಂಡೇರಿದಳುರಥ । ವನತಿಶೀಘ್ರದೊಳಂದು ನಿಜವೆಂದೆನುತನಿಶ್ಚೈಸಿ ॥ ೨೯ ॥ ಅತ್ತಿಗೆಯ ಸಂತಸವನೀಕ್ಷಿಸಿ । ಚಿತ್ತದಳಲನು ನಿಗ್ರಹಿಸಿಕೊಂ । ಡುತ್ತ

ರಕ್ಷಣದಲ್ಲಿ ಲಕ್ಷ್ಮಣನಾಗಸಾರಥಿಗೆ ॥ ಇತ್ತಕಡೆನೀಂ ರಥವನುನಡಿಸೆ ॥
ನುತ್ತ ಸೂಚಿಸಲತಿ ಜವದೊಳಾ । ಹೊತ್ತಿನೊಳು ದಕ್ಷಿಣದಿಶೆಗಾ ರಥವ
ನಡೆಯಿಸಿದ ॥ ೨೦ ॥ ಬಡನೆಬಲಗಣ್ಣದಿರಿ ತಂದಾ । ಪೊಡವಿಯಣುಗಿಗೆ
ಮುಂದೆಚಿತ್ತದೊ । ಳಡಿಗಡಿಗೆ ಬಹುಭೀತಿಯಾದುದು ತನ್ನ ಮುಂದುಗಡೆ॥
ಅಡವಿಯೊಳುಮಲಗಿದ್ದ ಮೃಗವೆ । ದ್ದೊಡನೆಭಯವನುವಿರಚಿಸಿದುದಾ ।
ಕಡೆಯೊಳತಿ ಘೋರತರವಾಗಿರುತಿರ್ದದಾವನವು ॥ ೨೧ ॥ ಚಿತ್ತದೊಳು
ಕೊರಗುತ್ತ ಲಕ್ಷ್ಮಣ । ನತ್ತಿಗೆಸಹಿತ ರಥದೊಳುಕುಳಿತು । ಮತ್ತೆ ಮ
ತ್ತೆನಗರದವರ ನೀಕ್ಷಿಸುತ ಪೊರಮಟ್ಟು ॥ ಸುತ್ತ ಸುಳವಾ ಮೃಗಗಳನು
ನೋ । ಡುತ್ತ ಗಂಗಾನದಿಯುತೀರದ । ಹತ್ತಿರಕೆಬಂದನತಿ ಭೀಕರವಾ
ದರಣ್ಯದಲಿ ॥ ೨೨ ॥ ತೆರತೆರದ ಕಲ್ಲೋಲಮಾಲೆಯು । ಪರಿಪರಿಯುಜಲ
ಬಿಂದುಗಳ ತಿರು । ತಿರುಗಿ ಕಾಣಿಸುತಿರ್ಪ ಭೀಕರಜಂತು ವಿತತಿಗಳ ॥
ಚರಿಪಹಂಸಾಳಿಗಳ ಬಳಗದಿ । ನುರುತರದ ಬೊಬ್ಬುಳಿಗಳಿಂದುರೆ । ಮೆರೆವ
ಗಂಗಾನದಿಯ ನವಲೋಕಿಸಿದಳಾಸೀತೆ ॥ ೨೩ ॥ ಇಳದುರಥದಿಂ ದೆರಗಿ
ಜಾನಕಿ । ಬಳಿಕನಾವಿಕರಿಂದೆ ನದಿಯಂ । ಕಳೆದು ತೆಂಕಣದಡಕೆನಡೆತಂ
ದೊಂದುನಾವೆಯೊಳು ॥ ಹೊಳೆವಗಂಗಾನದಿಯ ನಿರ್ಮಲ । ಜಲದೊಳು
ಸ್ನಾನವನೆಸಗಿ ಬಂ । ದಳು ಸುಮಿತ್ರಾಸುತನ ಸಹಿತಾವನದಮಧ್ಯದಲಿ
॥ ೨೪ ॥ ಹುಲಿಕರಡಿ ಕಾಡಾನೆಕೋಡಗ । ಮೊಲಕಿರುಬನರಿ ಹಂದಿಸಿಂಗ
ಮೊ ! ದಲಹ ಭೀಕರವನಮೃಗಂಗಳ ರವವನಾಲಿಸುತ ॥ ಪಲತೆರದ ಪ
ಕ್ಷಿಗಳಶಬ್ದಂ । ಗಳನುಕೇಳುತ ರಾಮನಾಮಂ । ಗಳನು ನೆನೆನೆನೆದೈತ
ರುತಲಿಂತೆಂದು ಪೇಳಿದಳು ॥ ೨೫ ॥ ಎಲ್ಲಿಋಷಿಗಳ ಪರ್ಣಶಾಲೆಗ । ಳೆಲ್ಲಿ
ಕಂಗೊಳಿಪಗ್ನಿಹೋತ್ರಗ । ಳೆಲ್ಲಿ ವೇದಪುರಾಣ ಶಾಸ್ತ್ರಧ್ವನಿಸಮೂಹ
ಗಳು ॥ ಎಲ್ಲಿಸಾವನ ಪುಣ್ಯತೀರ್ಥಗ । ಳೆಲ್ಲಿಪರಿಚಿತ ಹೋಮಧೂಮಗ ।
ಳಲ್ಲಿಗೇಕೈತಂದೆ ತಂದೆಯೆನುತ್ತ ಕೇಳಿದಳು ॥ ೨೬ ॥ ತಾಯೆಕರುಣಿಸು
ನಿನ್ನನಾರಘು । ರಾಯುನೀವನದಲ್ಲಿ ಬಿಟ್ಟುಸ । ಹಾಯುಮಾಡದೆ ನಿನ್ನಭು
ಜವನು ಕತ್ತರಿಸಿಕೊಂಡು ॥ ಬಾಯೆನುತೆನಗೆ ಪೇಳ್ದುಕಳುಹಿದ । ನೀ
ಯರಣ್ಯದೊಳಿಂತು ಬಿಡುವೆನು । ಹಾಯೆನುತಬಿಸುಸುಯ್ದು ಬಿನ್ನವಿಸಿ
ದನು ರೋದಿಸುತ ॥ ೨೭ ॥ ಸುಳಿವಜಂಝಾಮಾರುತಕೆ ಮುರಿ । ದಿಳಗೆ
ಬೀಳುವ ಬಾಳೆಗಿಡದಂ । ತಿಳೆಯಣುಗಿ ಲಕ್ಷ್ಮಣನವಚನವ ನಾಲಿಸು
ತ್ತೊಡನೆ ॥ ನೆಲಕೆಬಿದ್ದಳು ಮೂರ್ಛೆಹೋಗುತ । ಲೆಲೆಗಳಿಂದಲೆಕೊಡೆ
ವಿಡಿದು ನೀ । ರ್ದಳೆದು ಸೆರಗಿಂದಡಿಗಡಿಗೆ ಬೀಸಿದನುಸೌಮಿತ್ರಿ ॥ ೨೮ ॥

ಚೇತರಿಸಿಕೊಂಡೊಡನೆ ಜಾನಕಿ । ಭೀತಿಯಿಂದುರೆ ಕಂಪಿಸುತನರ । ನಾ
ಥನೆನ್ನನುಳಿದನೆ ಹಾಸಾವಿತ್ರಿನನಗಿಂದು ॥ ಭೂತಳದೊಳುಂಟಾದುದೆ ಅ
ಪ । ಖ್ಯಾತಿ ಕೊಲ್ಲದೆನನ್ನಯ ಭುಜವ । ನೀತಕತ್ತರುವುದೆಂದು ಪೇಳ್ದ
ನುರಾಘವೇಶ್ವರನು ॥ ೩೯ ॥ ನನಗೆಬಂದುದೆಸಿಂದೆ ರಘುನಂ । ದನನು
ಕೊಟ್ಟನೆನೇಮವನು ಕಾ । ನನದೊಳೆನ್ನನು ಬಿಟ್ಟುಬಹುದೆಂದೆನುತ
ನಿನಗಕಟಾ ॥ ವನದೊಳೆಂತು ಪಿಶಾಚಿಯಂತಿಹೆ । ನೆನಗೆಬಾರದೆಪ್ರೇಮದು
ದೆವರಣ । ವನದೊಳೆನ್ನನು ಬಿಟ್ಟುನೀನೆಂತೈದುತ್ತಿಹಮನೆಗೆ ॥ ೪೦ ॥
ಅಂದು ವನದೊಳುಪಚರಿಸಿದೆ ರಘು । ನಂದನನ ಹಿಂಪಡವಿಗಾಟನ ।
ಬಂದೆ ನಿದ್ರಾಹಾರವಿಲ್ಲದೆ ಸಲಹಿಕೊಂಡಿದ್ದೆ ॥ ಕೊಂದೆರಣದೊಳು ದೈ
ತ್ಯರನು ನಲ । ವಿಂದೆ ನಮ್ಮನುಸೇವಿಸಿದೆ ಮೊದ । ಲಿಂದೆನೀಂ ಮಾಡಿದು
ಪಕಾರವನೆಂತುಮರೆಯುವೆನು ॥ ೪೧ ॥ ರಾಮನಂ ರಣಭೀಮನಂ ಗು
ಣ । ಧಾಮನಂ ವರಸೀಲವೋಘ । ಶ್ಯಾಮನಂ ಜಿತಕಾಮನಂ ಶರಣಜನ
ಸಾಗರದ ॥ ಸೋಮನಂ ಕಾಕುತ್ಸ್ಥವಂಶಲ । ಲಾಮನಂ ಮನದಣಿಯೆ
ರಮಿಸದೆ । ಭೂಮಿಯೊಳ್ನಾನೆಂತು ಬದುಕುವೆನೆಂದು ಮರುಗಿದಳು ॥
॥ ೪೨ ॥ ರಮಣನಂತೊರೆದೀ ವನದೊಳುಂ । ಗವಿ ಸುತೆಂತು ವಸಿಸುವೆ
ಕೊಳದೊಳು । ದುಮುಕಿಸಾಯುವೆನೆನಲು ಗರ್ಭವಿರುತ್ತಿಹುದೊಡಲಿ
ನೊಳು ॥ ಅಮಮನನ ಗಿನ್ನೇನುಗತಿ ಹಾ । ರಮಣನ ಸನಿಹಕೆಂತು
ಪೋಗುವೆ । ಸುಮತಿನನ್ನನುಬಿಟ್ಟು ಪೇಳೆನುತತ್ತಳಾಸೀತೆ ॥ ೪೩ ॥
ಇಂತುರೋದಿಸಿ ಪತಿಯಗುಣಗಳ । ಚಿಂತಿಸುತ ಬಿಸುಸುಯ್ದುಮೂ
ರ್ಛೆಯ । ನಾಂತಿರದೆ ಚೇತರಿಸಿಕೊಂಡಡಿಗಡಿಗೆ ದುಃಖಿಸುವ ॥ ಕಾಂತೆ
ಯನುಕಂಡೆಲೆ ಜನನಿನಾ । ನೆಂತುನಿನ್ನನು ಬಿಟ್ಟುಪೋಗಲಿ । ಯೆಂತಿರಲಿ
ಹಿಂದಿರುಗದಿಲ್ಲೆಂದೆನುತ ರೋದಿಸಿದ ॥ ೪೪ ॥ ತಂದೆಲಕ್ಷ್ಮಣ ಪೋಗು
ನೀಂರಸ್ತು । ನಂದನನ ಬಳಿಗೆನ್ನ ಸಹಿಹದೆ । ಹಿಂದಣಂದದೊಳಿಲ್ಲಿರಲು
ಕೋಪಿಸುವನಗ್ರಜನು ॥ ವಂದಿಸಿದೆನೆಂದತ್ತೆಯರ್ಗಳು । ಪೇಳು ಜಾನ
ಕಿಪೇಳ್ದು ಬಳಲಿವ । ಳೆಂದು ಪಾಪಗಿಪಾಂಗಿಯಂದದೆ ಪೊರಳುತವನಿ
ಯೊಳು ॥ ೪೫ ॥ ಏತಕಿಲ್ಲಿಹೆ ಪೋಗುಲಕ್ಷ್ಮಣ । ನೀತಳುವಿದೊಡೆ ಮು
ಳಿವನಣ್ಣನು । ನೀತಿಯುಳ್ಳಿಮ ನಿನಗೆಮಂಗಳವಾಗಲಿ ಪಥದೊಳು ॥ ಭೂ
ತಳಾಧಿಪ ರಾಘವೇಂದ್ರನೆ । ಭೀತಿಯಿಲ್ಲದ ಪ್ರೋಲ್ವರೆಮನೆಂ । ದಾತರು
ಣಿಪೇಳಿವಳು ಲಕ್ಷ್ಮಣನೊಡನೆ ರೋದಿಸುತ ॥ ೪೬ ॥ ವನಜಸಂಭವನಾ
ಜ್ಞೆಯನು ತಾ । ಳ್ದನಿತರೊಳು ವರವಿಶ್ವಕರ್ಮನು । ಜನಕಸುತೆಲಕ್ಷ್ಮ

ಗದೆ ಬಳಿಗೈತಂದು ನಮಿಸುತ್ತ । ಘನಶೋಕವುತ್ಕೃತಿಯಿಂದೆ ಸೀತೆಯು ।
ವಿನುತ ಧರ್ಮದಂತ್ರಿಕೆನೆ ಭೂಜದಿಂ । ದನುನಲಿವುಕೊಟ್ಟಲ್ಲಿ ಕಾಣದೆ
ಪೋದ ಲಕ್ಷ್ಮಣನ ॥ ೨೭ ॥ ಭೂಜವನೀಕ್ಷಿಸಿ ವಿಸ್ಮಯಂಬಡುತ । ಭುಜಗ
ವೇಣಿಯಿನ್ನಲ್ಲಿ ಬಿಟ್ಟು । ಗೃಹಪತ್ತಿರಕೆ ಬರಲಾರದೆ ಬಳಿಕ ಲಕ್ಷ್ಮಣನು ।
ವಿಜನದಾರಿ ವನದೊಳ್ ಸಂತೈಸಿದೆ । ರಘುವರನೊಳಂದಾತ ಪೋಗಲಿ ।
ನಿಜವಾಂಗನೆಂದರುತ ಕೈಮುಗಿದಿಂತು ಪೇಳ್ದನು ॥ ೨೮ ॥ ಎಲೆವನಸ್ಥಳ
ಗಳರ ವೃಕ್ಷಂ । ಗಳರ ಕೀಟಕ್ರಿಮಿಗಳರ ಲತೆ । ಗಳರ ಪಶುಪಕ್ಷಿಗಳರ
ಸಲಹಿಕೊಂಬುದೀಕೆಯನು ॥ ಎಲೆ ಜನನಿ ಭೂದೇವಿ ಜಾಹ್ನವಿ ।
ಸಲಹಿಕೊಳ್ಳುವುದು ನಿಮ್ಮ ಮಗಳನು । ಸಲಹಿಕೊಂಬುದು ಪಂಚಭೂ
ತಂಗಳೆನುತೆರಗಿದನು ॥ ೨೯ ॥ ಪೋಗಲಾರನು ಮನದೊಳಿರ್ದಡೆ ।
ರಾಘವನ ನೇಮವನು ತೊರೆದಂ । ತಾಗುವುದೆನುತ ಜಾನಕಿಯು ಕಾಲ್ಗೆ
ರಗಿ ಲಕ್ಷ್ಮಣನು । ವೇಗನೆ ಬರುತ ಮತ್ತೆ ಹಿಂದಕೆ । ಪೋಗಿಪೊರಳುವ
ಜಾನಕಿಯಬಳಿ । ಗಾಗಿ ತಾನೈತಂದು ನಮಿಸುವುದ್ದತ್ತ ಸಡಗಡಿಗೆ ॥ ೩೦ ॥
ಬಳಲಿ ಬಾಯಾರಿ ಬಿಸುಸುಯ್ಯುತ । ತೊಳಲಿಸಲೆ ಕಂಗೆಟ್ಟು ಭಯವ
ನು । ತಳೆದು ನೆಲದೊಳು ಬಿದ್ದಳುವ ಭೂಜಾತೆಯನು ಕಂಡು ॥ ಅಳು
ತ ಲಕ್ಷ್ಮಣನಲ್ಲಿನಿಲ್ಲದೆ । ಚಲಿಸಿ ಬೆಂಡಾಗಿ ಬರಲಾರದೆ । ಬಳಿಕ ಬಂ
ದನು ತಿರುಗಿನೋಡುತ ಹಿಂದ ಕಡಿಗಡಿಗೆ ॥ ೩೧ ॥ ತಾಯು ನೆಳಗರುಬಿಟ್ಟು
ಬರುವಂ । ತಾಮುತಾಂಬಕಿಯನು ತೊರೆದು ತಾ । ನಾಯುಸದೊಳಂ
ದಮರನದಿಯಂ । ದಾಟಿ ಲಕ್ಷ್ಮಣನು ॥ ರಾಯರಾಘವ ನೆಡೆಗೆ ನಡೆತಂ ।
ದಾಯುವನಿಜೆಯ ಭುಜವನಿರಿಸಿದು ಹಾಯೆನುತ ಬಿನ್ನವಿಸಿ ಪೇಳ್ದನು ಜಾ
ನಕಿಯುತೆರನ ॥ ೩೨ ॥ ಧರಣಿಸುತೆಯಂ ಬಳಸಿ ಸಿಂದುರೆ । ಕೊರಗುತಿ
ದ್ದವು ಪಕ್ಷಿ ಮೃಗಗಳು । ತೊರೆದು ನಿಜವೈರವನುಳಿದು ಪ್ರಲ್ಮೇವುಗಳ
ನಲ್ಲಿ । ತರುಲತಾದಿಗಳೆಲ್ಲ ಬಾಡಿದ । ವಿರದೆ ಶಿಲೆಗಳ್ಕರಗುತಿದ್ದವು । ಧರೆ
ಯೊಳುಂಟೆ ಸುಜನರ ಕಷ್ಟವ ಕಂಡು ಸೈರಿಪರು ॥ ೩೩ ॥ ಮೊರೆಯ
ಲೊಲ್ಲವು ದುಂಬಿಗಳು ಮೇ । ಣ್ಬೆರೆಯಲೊಲ್ಲವು ಕೋಕಗಳು ಸಲೆ ।
ಮೊರೆಯುತೊಲ್ಲವು ಪರಿಗಳು ನುಡಿಯಲಿಲ್ಲವು ಗಿಳಿಗಳು ॥ ಸ್ಫುರಿಯ
ಲೊಲ್ಲವು ಚಮರಿ ಮೃಗಗಳು । ಚರಿಸಲೊಲ್ಲವು ನಾರಂಗಗಳು ।
ಧರಣಿಜೆಯು ದುಃಖವನೆ ತಮ್ಮಯ ದುಃಖವೆಂದರಿದು ॥ ೩೪ ॥ ತಳಿ
ರತಲ್ಪವ ನೆಸಗಿದುವು ಕರಿ । ಗಳು ಸಲಿಲದೊಳ್ಮುಂದು ತಂತುರು ।
ಗಳನು ಮುಚ್ಚಿದವಲ್ಲಿ ಕಲಹಂಸಂಗಳತಿಗತಿಗೆ । ಜಲಜನೇತ್ರೆಗೆ ಬಸ

ಲು ತಾಗದ । ಪೊಲುಕೊಡೆಯ ನಿಕ್ಕಿದವು ನವಿಲುಗ । ಳೊಲಿದು ಚಾಮರಗ
ಳನು ಬೀಸಿದವಲ್ಲಿ ಚಮರಿಗಳು ॥ ೫೫ ॥ ವನದ ದುಷ್ಟಮೃಗಂಗಳನು
ಮೀ । ದಿನಿಯಣುಗಿ ನೋಡುತ್ತ ಭೀಕರ । ವೆನಿಸ ಹಾವುಗಳಿಗೆ ಹೆದ
ರುತಾ ಪಥದೊಳಡಿಗಡಿಗೆ ॥ ಮನದೊಳತಿ ಭೀತಿಯನು ತಾಳುತೆ । ವನ
ದೆ ಸಾಯುವ ಕಾಣದೆಯೆ ಹಾ । ಯೆನುತ ಮೂರ್ಛೆಯನೈದಿದಳು ವನ
ಮಧ್ಯದೊಳುಬಿದ್ದು ॥ ೫೬ ॥ ಮೆಲ್ಲನೆ ಬಳಿಕ ಚೇತರಿಸಿಕೊಂ । ಡಲ್ಲಿ
ಸಿಲ್ಲದೆ ಸೀತೆ ಪಥದೊಳು । ಕಲ್ಲುಮುಳ್ಳುಗಳನು ತುಳಿದು ಹಾಯೆಂದು
ರೋದಿಸುತ ॥ ಚುಳ್ಳೆನುತ ಸುರಿವ ಬಿಸುನೆತ್ತರ । ನೆಲ್ಲ ಸೆರಗಿಂ ದಡಿಗೆ
ಡಿಗೊರಸಿ । ಕೊಳ್ಳುತಂದೈತಂದ ಳಾವನದೊಳಗೆ ಕಂಗೆಟ್ಟು ॥ ೫೭ ॥
ಮುಂದೆ ನನಗಿನ್ನೇನುಗತಿ ಹಾ । ಯೆಂದು ಜಾನಕಿ ದುಃಖಿಸುತ ಮನ ।
ನೊಂದು ಬಿಸುಸುಯ್ದುಳುತ ಕಣ್ದೆರೆದೊಡನೆ ಮುಚ್ಚುತ್ತ ॥ ಇಂದು
ಕೊಳದೊಳು ಬಿದ್ದು ಸಾಯುವೆ । ನೆಂದೊಡಹುದು ಭ್ರೂಣಹತ್ಯ
ಮ । ದೆಂದೆನುತ ಕೊರಗಿದಳು ಕಲ್ಮರಗಳು ಕರಗುವಂತೆ ॥ ೫೮ ॥
ಧರೆಯೊಳುದಿಸುತ ಜನಕಭೂಮೀ । ಶ್ವರನ ನಂದನೆಯಾಗಿ ರಘುಭೂ ।
ವರನಿಗೆ ಮಡದಿಯಾಗಿ ದಶರಥನೃಪನ ಸೊಸೆಯಾಗಿ ॥ ನೆರವ ಕಾಣದೆ
ಕಟ್ಟಡವಿಯೊಳು । ಮರಗುವಂತಾಯ್ತು ಮಮ ನಾನೀ । ತೆರದೆ ಮುಂ
ದಿಂನೆಂತು ಜೀವಿಸಲೆಂದು ಹಲುಬಿದಳು ॥ ೫೯ ॥ ಏನಮಾಡಲಿ ದೆಲ್ಲಿಪೋ
ಗಲಿ । ಕಾನನದೊಳಾರ್ಸಲಹುವರು ಮುಂ । ದೇನುಗತಿ ನನಗೆಂದೆನು
ತ ಬಿಸುಸುಯ್ದು ಬೆಂಡಾಗಿ ॥ ದೀನಳಾಗುತ ರಾಮನಾಮವ । ಜಾನಿಸು
ತ ನಡೆತಂದಳಡವಿಯೊ । ಳಾ ನೆಲದಣುಗಿ ಬಿಸಿವಬಿಸುನೆತ್ತರೊಸರಿ
ಡುವಂತೆ ॥ ೬೦ ॥ ಅಷ್ಟರೊಳು ವಾಲ್ಮೀಕಿಮುನಿ ತ । ನ್ನಿಷ್ಟ ಶಿಷ್ಯರ
ನೆರಸಿ ಮುಖಕು । ತ್ಕೃಷ್ಟವಾಗಿಹ ಯೂಪವ ನರಸುತಾ ವನಕೆ
ಬಂದು ॥ ಕಷ್ಟದಿಂ ದಡಿಗಡಿಗೆ ರೋದಿಸು । ತಿಷ್ಟಜನರನು ಕಾಣದೆ
ಹೊರಳಿ । ನಷ್ಟ ಸತ್ವಳೆನಿಸಿದ ಸೀತೆಯನಲ್ಲಿ ನೋಡಿದನು ॥ ೬೧ ॥
ಆರಿವಳಿದೇತಕೆರುತಿಹ ಳೀ । ಘೋರಕಾನನ ಮಧ್ಯದೊಳು ನಾ । ನೀ
ರಮಣಿಯುಂ ಕೇಳಿ ತಿಳಿಯುವೆನೆಂದು ನಡೆತಂದು ॥ ಆರು ನೀನಲೆ ತಾಯೆ
ನಿನ್ನ ವಿ । ಚಾರವರುಹೌ ನೋಡಿದಂತಿಹು । ದಾರು ನಾಂ ವಾಲ್ಮೀಕಿ
ಸುಮ್ಮನೆ ಪೋಪನಲ್ಲಿಂದ ॥ ೬೨ ॥ ಘೋರಕಾನನಕೆಂತು ಬಂದೆ ಕ ।
ಠೋರಮಾರ್ಗದೊಳೆಂತು ನೀಂ ಸಂ । ಚಾರಮಾಡುವೆ ಗಂಡನಾವನು
ನೆಲೆಯದೆಲ್ಲಿಹುದು । ಘೋರಶೋಕಾರ್ತರನು ಕಂಡು ವಿ । ಚಾರಿಸದೆ ನಾಂ

ಹಿಂದಕೆ ನಡೆಯ | ಲಾರೆ ನೆಂದವನೀಸುತೆಗೆ ಪೇಳಿದನು ವಾಲ್ಮೀಕಿ ||೬೩||
ಹರುಷಮುಬ್ಬಿದು ದವನಿಜಾತೆಗೆ | ಭರದೊಳಮ್ಮಡಿಸಿದುದು ಶೋಕವು |
ಬೆರಸಿದುದು ನೋಡುತ್ತ ಮುನಿಯನು ಲಜ್ಜೆಶೀಘ್ರದಲಿ || ಧರಣಿಪತಿ
ರಾಘವನುಳಿದನೆಂ | ದಿರಿಸಿ ಪೋದನು ಲಕ್ಷ್ಮಣನೆನುತ | ಶಿರವ ಬಾಗಿ
ಸಿ ಪೇಳಿದಳು ಪದಕೆರಗಿ ವೈದೇಹಿ || ೬೪ || ಧರೆಯೊಳಪವಾದ ಕೊಳ
ಗಾಗದ | ಪರಮಸಾಧ್ವಿಯೆನಿಸಿದ ನನ್ನನು | ತೊರೆದನಾರಘುವಂಶ ಸಂ
ಭವನೆ ನಕಟವುಂದಿನ್ನು || ಪೊರೆವರಾರಿಹ ರಳಿವೆನೆಂದೊಡು | ದರದೊಳಿ
ರ್ಪುದು ಗರ್ಭವೊಂದೆನು | ತೆರಗಿ ಬಿನ್ನೈಸಿದಳು ಜಾನಕಿ ಮುನಿಗೆ
ರೋದಿಸುತ || ೬೫ || ದೇವಿ ಬಿಡು ದುಃಖವನು ಚಿತ್ತದೊ | ಳಾವಯೋ
ಚನೆ ಗೈದುದಿರು ನೀಂ | ದೇವರಿಸಿದೆವಾಶ್ರಮಕೆ ನಡೆತಂದು ಸುಖ
ದೊಳಿರು | ನೋವ ನಾಸದೆ ಪುತ್ರಯುಗವಂ | ತೀವಿದತಿಶಯದಿಂದೆ
ಪೊಂದುವೆ | ದೇವದೇವನ ಕರುಣೆಯಿಂದಲೆ ಶುಭಮುಹೂರ್ತದಲಿ
|| ೬೬ || ಮಗಳೆ ಸುದೇಹವನುಳಿದು ತಂ | ದೆಗೆ ಹೊಸಬರೇನಲ್ಲ ನಾ
ವು ಮ | ರುಗದೆ ನಮ್ಮಾಶ್ರಮದೊಳಿರು ಬೇಕಾದ ಬಯಕೆಯನು ||
ಬಗೆದ ಭಕ್ತಿಯೊಳಾಗಿಸುತ ನಾಂ | ಹಗಲಿರುಳು ಪಾಲಿಸುವೆ ನೆಂದಾ |
ರಘುವರನರಾಣಿಯ ನೊಲಿಸಿ ಕರೆತಂದನಾ ಮುನಿಪ || ೬೭ || ಬಳಿಕ
ಸೀತೆಗೆ ಪರ್ಣಶಾಲೆಯ | ನೊಲಿದು ಕಟ್ಟಿಸಿ ಕೊಟ್ಟನತಿ ಭರ | ದೊಳು
ಬಹುವಿನೋದವ ನೆಸಗುವಂತಾಕೆ ಗನುದಿನವು || ತಳೆದು ತಾಪಸ ಪತ್ನಿ
ಯರೊಡನೆ | ಕೆಳೆತನವನಾಂತಿರುತ ಲಿದ್ದಳು | ನೆಲದೊಳುತ್ತಮ ಚರಿತ
ರಿಗೆ ವಿಪರೀತವಾದಪುದೇಂ || ೬೮ || ತಂದೆ ಮನೆಯೊಳಗಿರ್ದ ತೆರ
ದಿಂ | ದೊಂದು ಯೋಚನೆ ಯಿಲ್ಲದಾರಘು | ನಂದನನರಸಿ ತಾಪಸೋ
ತ್ತಮ ನಾಶ್ರಮದೊಳಿರುತ | ಬಂದು ಸೇವಿಸುವಾ ಮುನಿವಧುಗ | ಳಿಂ
ದೆ ಸಂತಸವಳೆದು ದಶರಥ | ನಂದನನ ನಾಮವನು ಜಾನಿಸುತಿದ್ದಳನು
ದಿನವು || ೬೯ || ಜಾತಿವೈರವ ಸುಳಿದ ಖಗಮೃಗ | ಜಾತದಿಂ ಖುತು
ಭೇದವಿಲ್ಲದೆ | ಪೂತು ಪುಷ್ಪಫಲಗಳ ನೀಯುವ ತರುಲತೆಗಳಿಂದ ||
ಪ್ರೀತಿಯಿಂದಾದರಿಪ ಪಟುಸಂ | ಘಾತದಿಂದನುದಿನವು ಕಂಗೊಳಿ | ಪಾ
ತಪೋವನದೊಳಿರುತಿದ್ದಳು ಸೀತೆ ಚಿಂತಿಸದೆ || ೭೦ ||

ಇಂತು ಮೂವತ್ತಾರನೆಯ ಅಧ್ಯಾಯ ಸಂಪೂರ್ಣವು.

ಪದ್ಯಗಳು ೨೦೬೦

ಮೂವತ್ತೇಳನೆಯ ಅಧ್ಯಾಯ.

ಸೂಚನೆ ॥ ತನಯರಂ ಪಡೆದಾ ಮಹೀಸುತೆ ।
ಮುನಿಪನಾಶ್ರಮದೊಳಿರೆ ಹರ್ಷದಿ ।
ಮುನಿಕುಲವರನಿವರ್ಗೆಲ್ಲ ವಿದ್ಯೆಗಳ ನುಪದೇಶಿಸಿದ ॥

ಮುನಿವಟುಗಳೆಡೆಯಾಡಿ ಪರಿಚಯು । ವನಿಸಗುವರಿಸಿದಾವ ಪ
ಸ್ತುಗ । ಳನು ಕೂಡುವರಾದರಿಸಿ ಮುನಿಪತ್ನಿಗಳು ಜಾನಕಿಗೆ । ದಿನದಿನ
ವು ಬೇಕಾದ ಬಯಕೆ । ಗಳನು ಸಲಿಸುವನು ಸಾದರದೊಳಾ । ಮುನಿಪವ
ರ ವಾಲ್ಮೀಕಿ ಸೀತೆಯ ಮನವು ನಲಿವಂತೆ ॥ ೧ ॥ ಮರೆದಖಿಳ ವಿಧರಾಜ
ಸುಖವ । ಸ್ಮರಿಸುತಿನಯನ ಪಾವನಸ್ಮರವ । ನೆರಹುವೇಳ್ದೊಳಾ ಮ
ಹೀಸುತೆ ತನ್ನ ಮನದೊಳಗೆ । ನಿರವಿಲೋಕಿಸುತಿದ್ದಳು ಸಿರಂ ।
ತರವು ಪ್ರತ್ರೋತ್ಸವದ ಕಾಲವ । ನಿರುತ ವಾಲ್ಮೀಕಿ ಮುನಿಪಾಲಕ
ನಾಶ್ರಮಾಂತರದೆ ॥ ೨ ॥ ಜನನಿಯಂ ಪ್ರೀತಿವಂತೆ ಜಾನಕಿ । ಯನತಿ
ಭಕ್ತಿಯೊಳೋವುತಿರಲಾ । ಮುನಿವರನು ಬೇಕಾದ ಕೋರಿಕೆಗಳನು
ಸಲಿಸುತ್ತ । ಮನದೊಳಾನಂದವನು ತಾಳ್ದರ । ಮನೆಯು ವಿಭವಂಗಳ
ನು ಮನದೊಳು । ನೆನೆಯುತಿದ್ದಳು ಸೀತೆ ಮುನಿವಾಲ್ಮೀಕಿ ವನದೊಳಗೆ
॥ ೩ ॥ ಜನಕಜೆಯು ಗರ್ಭಕ್ಕೆ ತುಂಬಿತು । ವನದೊಳಾನವ ಮಾಸಗಳವ
ಸಧಿ । ವಿಸುತಮೊಂದಿನಿ ಪ್ರೊಂದುದಿನ ರಾತ್ರಿ, ಶುಭಲಗ್ನದಲಿ । ಇನಕುಲಗ
ಳಂತುರ ವಿರಾಜಿಪ । ತನಯರಿಬ್ಬರ ನಲ್ಲಿ ಪೆತ್ತಳು । ಮುನಿವಟುಗಳಿ
ವನರುಹಿದರು ವಾಲ್ಮೀಕಿ ಮುನಿಪತಿಗೆ ॥ ೪ ॥ ಜವದೊಳಾಮುನಿಪ್ರೀತ್ತಿ
ಮನು ಬಂ । ದವನಿಜಾತೆಯು ಸುತರನೀಕ್ಷಿಸಿ । ಸುವಿಮಲಮುಹೂರ್ತ
ದೊಳು ಕಲಶೋದಕವ ಕೈಕೊಂಡು । ಅವಳಿ ಮಕ್ಕಳ ನಾದರದೆ ಕು
ಶ । ಲವಗಳೆಂದೆ ಪ್ರೋಕ್ಷಿಸಿಯೆ ಕುಶ । ಲವರೆನುತ ಪೆಸರಿಟ್ಟು ನಾಮ
ಕರಣವನಾಗಿಸಿದ ॥ ೫ ॥ ದೆಸೆಗಳತಿ ನಿರ್ಮಲತೆಯಿಂದೊಪ್ಪ । ನೆಸೆದುವು
ನಭೋಮಂಡಲದೊಳು ತು । ವಿಸರವೆಸೆದುದು ಗಾಳಿಪ್ರಸಂಕಂಪಿ ದಿ
ಚಾಸಿದುದು । ವಸುಧೆ ನಲಿದುದು ಜಲಧಿ ಪೆರ್ಚಿತು । ಪಸರಿಸಿ ಸಲಿಗ
ಳೆಲ್ಲ ಮಾವತ್ರು । ಶಶಿರವಿಗಳಂತೆಸೆವ ಲವಕುಶರುದಯಕಾಲದೊಳು ॥ ೬ ॥
ಮತ್ತೆ ಮುನಿವಾಲ್ಮೀಕಿ ಜಾನಕಿ । ಪೆತ್ತ ಮಕ್ಕಳ ಬಳಿಗೆ ನಡೆತಂ ।
ದುತ್ತಮೋನಿಪ ರಾಮ ರಕ್ಷಾಮಂತ್ರವನು ಪೇಳ್ದು । ಚಿತ್ತಶುದ್ಧಿಯೊ

ಲ ಕುಮಾರರ । ನೆತ್ತಿಯೊಳು ಧನ್ಯವ ನಿರಿಸಿ ಸನೆ । ರುತ್ತ ಕೈಯೊಳು ರಾಮರಕ್ಷೆಯನಿಟ್ಟ ನಾದರದೆ ॥ ೭ ॥ ಬಾಲಕೊಡನೆಯು ನಿಟ್ಟಿಸೋತ್ತುವ । ಬಾಲಲೀಲೆಯ ನಾಲಿಸಿ ನಲಿವ । ಬಾಲಕರಿಗಿಸಿದಾವ ವಸ್ತುಗಳೆಲ್ಲವನು ಕೊಟ್ಟು । ಲಾಲಿಸುವ ನಾ ಜಪತಪಂಗಳ । ಕಾಲವನು ತಾಂ ಬಗೆಯುವಾಮುನಿ । ಪಾಲ ನವನೀಸುತೆಯ ಮಕ್ಕಳ ನೊಲಿದು ಮನ್ನಿಸುತ ॥ ೮ ॥ ಧರಣಿಪಾಲಕ ರಾಮ ದಶರಥ । ನರಮನೆಯೊಳಭಿವೃದ್ಧಿಯಾಗುವ । ತರುಣರಿಗೆ ವನವಾಸವೆತ್ತಣದೆಂದು ಚಿತ್ತದೊಳು ॥ ನೆರೆಗಣಂತವನೀಸುತೆ ಕುಶಲ । ವರನು ರಕ್ಷಿಸುತಿದ್ದ ನಾ ಮುನಿ । ವರನತಿ ವಿಭವದಿಂದೆ ಬೇಕಾದುದನು ತಾನಿತ್ತು ॥ ೯ ॥ ತೊಟ್ಟಿಲೊಳು ನಲಿವ ನೆವವಿಲ್ಲದೆ । ಥಟ್ಟನೆ ನಗುವ ತಮ್ಮ ಬಾಯೊಳು । ಬಟ್ಟೆಗಳನಿರಿಸುತ್ತ ಪಿರ್ವ ಪಸಿದರೆ ಸಲೆಬೇರ್ವ ॥ ದಟ್ಟಡಿಯಿಡುವ ನಿಲ್ವ ಬೀಳುವ । ಬಟ್ಟೆಯೊಳು ಬಹ ತೊದಳುನುಡಿವಾ । ಪುಟ್ಟಮಕ್ಕಳ ನೆವರು ಜಾನಕಿಗಿತ್ತು ಸಂತಸವ ॥ ೧೦ ॥ ಒಮ್ಮೆ ತಾಪಸ ವರನ ನೊಲಿಸುವ । ರೊಮ್ಮೆ ಜನನಿಗೆ ಹರ್ಷವೆಸಗುವ । ರೊಮ್ಮೆ ಬೀದಿಯೊಳಾಡುವರೆಳೆಯಮಕ್ಕಳೊಡವೆರಸಿ ॥ ಒಮ್ಮೆ ನಗಿಸುವ ರೆಲ್ಲರನು ಮ । ತ್ತೊಮ್ಮೆ ವಿಸ್ಮಯವೆಸಗುತಿರ್ಪರು । ತಮ್ಮ ಚರ್ಯಗಳಿಂದೆ ಕುಶಲವರೆಂದು ಮುನಿವನದೆ ॥ ೧೧ ॥ ಇನಶಶಿಗಳಂತೆಸೆವ ರಾಮನ । ತನಯರಿಗೆ ವಾಲ್ಮೀಕಿಮುನಿ ಮೂ । ರನೆಯ ಸಂವತ್ಸರದೊಳೊಂದುದಿನ ಶುಭಲಗ್ನದಲಿ ॥ ಘನತರ ವಿಭವದಿಂದೆ ಸೀತೆಯ । ಮನಕೆ ಸಂತಸ ವೊದಗುವಂದದೆ । ವಿನುತ ಚೌಲವನಾಗಿಸಿದನತಿ ವೈಭವಂಗಳಲಿ ॥ ೧೨ ॥ ಐದನೆಯ ಸಂವತ್ಸರದೊಳಾ । ಮೇದಿನೀಸುತೆ ನಂದನರಿಗ । ತ್ಯಾದರದೆ ನಲಿವಕ್ಷರಾಭ್ಯಾಸವನು ಮಾಡಿಸುತ ॥ ಆದಿನವೆ ಮೊದಲುಗೊಂಡು ಮುನಿವರ । ನೋದು ಬರಹಂಗಳನು ನಿತ್ಯವು । ಬೋಧಿಸುತ್ತಲೆ ಕಲಿಸಿಕೊಟ್ಟನು ಬಹಳಹರ್ಷದಲಿ ॥ ೧೩ ॥ ರಾಮಚಂದ್ರನ ರಾಮಣೀಯಕ । ಕೋಮಲತರದ ರೂಪವನು ಮದ । ನಾಮ ಜನಕನ ಕಾಮನೀಯಸು ಮೋಹನಾಂಗವನು ॥ ಶ್ರೀ ಮುಕುಂದನ ಮಂಜುಳತರದ । ಕೋಮಲಾಕೃತಿಗಳನು ತಾಳ್ದ । ಭೂಮಿಜೆಯ ಸುತರೆಸೆದರಾ ಮನ್ಮಥನಸುತರೊಲು ॥ ೧೪ ॥ ದ್ವಾದಶಾಬ್ದದಮೇಲೆ ಮುನಿವರ । ನಾ ಧರಣಿನಂದನೆಯ ಸುತರಿಗೆ । ವೇದವಿಹಿತ ವಿಧಾನದಿಂದುಪನಯನಗಳ ನೆಸಗಿ ॥ ಮೇದಿನೀಸುರರು ಮುನಿಗಳು ಮೊದ । ಲಾದ ಜನರಿಗೆ ಭೋಜನಂಗಳ । ನಾದರದೊಳಾಗಿಸಿದ

ಬಹುವಿಧ ಭಕ್ಷ್ಯ ಭೋಜ್ಯದಲಿ ‖ ೧೫ ‖ ವಿವಿಧ ಕರ್ಮಂಗಳ ವಿಧಿವಿಧಾ।
ನವನು ವೇದಪುರಾಣ ಶಾಸ್ತ್ರಗ । ಳವಧಿಯನು ವರರಾಜ ನೀತಿಯ ನಿ
ಶ್ಚಯಂಗಳನು ‖ ವಿವಿಧವಾಗಿರು ವಸ್ತ್ರ ಶಸ್ತ್ರ ವಿ । ಧವನು ಕಾರ್ಮು
ಕ ವಿದ್ಯೆಗಳ ನಾ । ಲವಕುಶರಿಗಾ ತಾಪಸೋತ್ತಮ ನೊಲಿದು ಕಲಿಸಿ
ದನು ‖ ೧೬ ‖ ಸಕಲ ಧರ್ಮಂಗಳನು ಬೋಧಿಸಿ । ಸಕಲ ಮರ್ಮಂಗ
ಳನು ತಿಳಿಸುತ । ಸಕಲ ನೀತಿಗಳನ್ನು ಕಲಿಸಿದ ನಧಿಕ ಹರ್ಷದಲಿ ‖
ಸಕಲ ತತ್ವಂಗಳ ನರುಹುತ । ಪ್ರಕಟಮತಿ ಯುಪದೇಶಿಸಿದನತಿ । ಸು
ಖದೊಳು ಕುಶಲವರ್ಗೆ ರಾಮಾಯಣವ ನಾಬಳಿಕ ‖ ೧೭ ‖ ಜಾಣರಂ
ತಲೆ ವಾಗಿಸುತೆರಡು । ವೀಣೆಗಳ ನಾಂತಾ ಕುಶಲವ । ರ್ಜಾಣತನದಿಂ
ಸ್ವರಲಯ ಶ್ರುತಿತಾಳಗತಿಗಳನು ‖ ಕಾಣಿಸುತ ಮಂಜುಳತರವೆನಿಪ।
ವಾಣಿಯಿಂದಲೆ ಪಾಡಿದರು ಗೀ । ರ್ವಾಣಭಾಷೆಯೊಳೆಸೆವ ರಾಮಾಯಣ
ದ ಸತ್ಕಥೆಯ ‖ ೧೮ ‖ ಜನನಿಯನು ಸಂತೋಷಪಡಿಸುತ । ಮುನಿಪ
ವಾಲ್ಮೀಕಿಯನು ಮೆಚ್ಚಿಸಿ । ಮುನಿ ಸಮೂಹಕೆ ಬಹುಳವಿಸ್ಮಯಂಗಳ
ನುವಿರಚಿಸುತ ‖ ಮನುಕುಲೋತ್ತಮ ರಾಮಸುಚರಿತೆ । ಯೆಸೆವ ರಾ
ಮಾಯಣದ ಸತ್ಕಥೆ । ಯನೊಲಿದು ಪಠಿಸುತ್ತಿದ್ದರಾ ಕುಶಲವರನುದಿನ
ದೊಳು ‖ ೧೯ ‖ ಸಕಲ ವಿದ್ಯಾನಿಪುಣರೆನಿಸಿ । ಪ್ರಕಟಮತಿಲವಕು
ಶರು ಮುನಿಪತಿ । ಗಖಿಳ ವಿಧದಾಬಾಲ ಲೀಲೆಗಳನ್ನು ತೋರಿಸುತ ‖
ಪ್ರಕಟತರವೆಂದೆನಿಪ ಶಸ್ತ್ರ । ಪ್ರಕರಣಂಗಳ ನಭ್ಯಸಿಸಿದರು ಸಕಲ
ಮುನಿಪಾಲಕರ ಚಿತ್ತಕೆ ಮಾಡುತಚ್ಚರಿಯ ‖ ೨೦ ‖ ಸುತರ ವಿದ್ಯಾ
ಭ್ಯಾಸವನು ಭೂ । ಸುತೆ ವಿಲೋಕಿಸಿ ತನ್ನ ಮನದೊಳು । ವಿತತ
ಸಂತೋಷವನು ತಾಳ್ದತಿ ವಿಸ್ಮಯವನಾಂತು ‖ ಕ್ಷಿತಿಯೊಳಾರುಂಟೀತೆ
ರವ ಪರಿ । ಣತರು ಕಾಣೆನೆನುತ್ತ ತಾಂ ಸಂ । ತತಮುಳುಗಿ ತೇಲಾಡು
ತಿದ್ದಳು ಸುಖಸಮುದ್ರದಲಿ ‖ ೨೧ ‖ ಮುನಿಪಟುಗಳೆಲ್ಲರನು ಸೋ
ಲಿಸಿ । ಘನತರವ ವಿದ್ಯಾಮಹಿಮೆಯಿಂ । ದಿನಶಶಿಗಳಂತೆಸೆವ ಕುಶಲವ
ರಾವನಾಂತರದಿ ‖ ದಿನದಿನದೊಳೈತಂದಖಿಳ ಮುನಿ । ಜನರ ಕಣ್ಮನಕ
ಧಿಕಸಂಮುದ । ವನೊದವಿಸುತಿದ್ದರು ವಿನಯ ವಿದ್ಯಾವಿಭವದಿಂದ ‖ ೨೨ ‖
ಮುನಿಗಳೆಲ್ಲರು ಭರದೆ ಬಂದಾ । ವನಕೆ ಶಿಷ್ಯರಸಹಿತ ರಘುನಂ । ದನನ
ಮಕ್ಕಳ ಪರಸುವಿದ್ಯಾಕೌಶಲಂಗಳನು ‖ ಮನದಣಿಯೆ ಕಾಣುತ್ತ ವಿಸ್ಮ
ಯ । ವನು ತಳೆದು ಕೊಂಡಾಡಿಕೊಟ್ಟರು । ವಿನುತವಾಗಿಹ ವಸ್ತು
ಗಳ ನಾ ಕುಶಲವರುಗಳಿಗೆ ‖ ೨೩ ‖ ಒಬ್ಬ ಮುನಿ ಪ್ರಭುವಾರವಿತ್ತನ ।

ದಾರವ । ದೊಬ್ಬಮುನಿ ಜಪಸರವ ಕೊಟ್ಟನ । ದೊಬ್ಬಮುನಿ ತಾಪ
ದೆನುಕೊಟ್ಟನು ವರಕಮಂಡಲುವ ॥ ಒಬ್ಬನಿತ್ತನು ದಂಡವನು ಮ ।
ತ್ತೊಬ್ಬನಿತ್ತನು ಹರಿಣ ಚರ್ಮವ । ನೊಬ್ಬನಿತ್ತನು ನಾರುಮಡಿಗಳ ನಾ
ಕುಶಲವರಿಗೆ ॥ ೨೪ ॥ ಒರ್ವನಿತ್ತನು ಪೀಠವನು ಮ । ತ್ತೊರ್ವನಿ
ತ್ತನು ವರಮುಕುಟವ । ನೊರ್ವಮುನಿ ಕೌಪೀನವಿತ್ತನು ಬಹಳಹ
ರ್ಷದಲಿ ॥ ಒರ್ವಮುನಿವರನವರುಗಳಿಗಾ । ಶೀರ್ವದಿಸಿದನು ಪೇಳ್ದನೊ
ಬ್ಬನು । ಸಾರ್ವಭೌಮನ ಸುತರಿಗಾಯುಷ್ಯಾಭಿವೃದ್ಧಿಯನು ॥ ೨೫ ॥
ಜನನಿಗಾನಂದವ ನೆಸಗುತಾ । ಮುನಿವರನ ಮನಕಧಿಕ ವಿಸ್ಮಯ ।
ವನೊದವಿಸುತ ಸಮಸ್ತ ವಿದ್ಯೆಗಳನ್ನು ತೋರಿಸುತ ॥ ದಿನದಿನದೊಳ
ಭಿವೃದ್ಧಿಯಾಗುತ । ಮನುಕುಲೋತ್ತಮ ರಾಘವನ ಪದ । ವನವಲೋ
ಕಿಸಬೇಕೆನುತ ಕುಶಲವರು ಬಯಸಿದರು ॥ ೨೬ ॥ ಒಂದುದಿನ ಮುನಿಪದಕೆ
ಜಾನಕಿ । ವಂದಿಸಿ ತಪೋನಿಧಿಯು ರಘು । ನಂದನನೊಡನೆನ್ನ ಸಮಾ
ಗಮ ವಾಗುವಂದದಲಿ ॥ ಒಂದು ನೇಮವ ತಿಳುಹಿಸಿರಿ ನೀ । ವೆಂದು
ಬೇಡಲು ಮುನಿವರಗೆ ನಲ । ವಿಂದ ಮುನಿವಾಲ್ಮೀಕಿ ಪೇಳ್ದನು ಬಳಿಕ
ಜಾನಕಿಗೆ ॥ ೨೭ ॥ ಧರಣಿಸುತೆ ಕೇಳೊಂದು ನೇಮವ । ನರುಹುವೆ
ನು ನಾನಿಂದು ನೀನಾ । ಚರಿಸು ಮೇಲಹ ಶುಕ್ಲಪಕ್ಷದ ಪಾಡ್ಯಮಿಯು
ಮೊದಲು ॥ ಪರಮಭಕ್ತಿಯನಾಂತು ಸಮನಂ । ತರದೊಳೈತಪ ಶುದ್ಧ
ನವಮಿಯು । ವರೆಗಮದ ನಾಚರಿಸಬೇಕೊಂಬತ್ತು ದಿವಸಗಳು ॥ ೨೮ ॥
ಕನಕಮಂಟಪ ರಚಿಸಿ ರಘುನಂ । ದನನ ಪಾದುಕೆಗಳೆರಡನು ಮೊದ ।
ಲನೆಯ ದಿನವೊಂಬತ್ತು ಕಮಲಂಗಳನು ಪೂಜಿಸುತ ॥ ವಿನಯದಿಂದ
ಲೆ ಮಂತ್ರಪುಷ್ಪಗ । ಳ ನೊಲಿದರ್ಪಿಸಿ ಜನ್ಮಕಾಂಡವ । ಮನವೊಲಿ
ದು ಕೇಳುವುದು ಸುತನಿಂದೊಂದುಸಲ ನೀನು ॥ ೨೯ ॥ ಎರಡನೆಯದಿನ
ಪಾದುಕೆಗಳನು । ಪರಮಭಕ್ತಿಯೊಳರ್ಚಿಸುತ ನೀ । ನಿರದೆ ಹದಿನೆಂ
ಟು ಕಮಲಂಗಳನೊಲಿದು ಪೂಜಿಸುತ ॥ ಉರುತರದ ಪುಷ್ಪಾಂಜಲಿಯ
ನಿ । ತ್ತೆರಗಿ ತಪ್ಪದೆ ಜನ್ಮಕಾಂಡವ । ನೆರಡುಸಲ ನಿಜತನಯನಿಂದೊಲಿ
ದಾಲಿಪುದು ನೀನು ॥ ೩೦ ॥ ಮುದದೊಳಿಪ್ಪತ್ತೇಳು ಘನಕಮ । ಲದ
ಕುಸುಮಗಳ ನರ್ಚಿಸುತ ದಾಡು । ಕದೆಯ ಕೇಳ್ವುದು ಮೂರುಸಲ
ವರಜನ್ಮಕಾಂಡವನು ॥ ಪದಕೆ ನಾಲ್ಕನೆಯದಿನ ಪೂಜಿಸಿ । ಪಡೆದು ಮೂ
ವತ್ತಾರ್ಕಮಲಗಳ । ಮುದದಿ ಕೇಳ್ವುದು ಜನ್ಮಕಾಂಡವ ನೊಲಿದು
ನಾಲ್ಕುಸಲ ॥ ೩೧ ॥ ಐದನೆಯದಿನದಲ್ಲಿ ನಲವ । ತ್ತೈದು ಕಮಲಂಗ

ಳನು ಪೂಜಿಸಿ । ಪಾದುಕೆಗಳಿಗೆ ಮಂತ್ರಪುಷ್ಪವನಿತ್ತು ಭಕ್ತಿಯಲಿ । ಸಾದರದೊಳಾ ಜನ್ಮಕಾಂಡವ । ನೈದುಸಲ ನಿಜ ತನಯನಿಂದಲೆ । ಯೋದಿಸುತ ನೀನಾಲಿಪುದು ಸಂತೋಷವನು ತಾಳ್ದು ॥ ೩೨ ॥ ಆರನೆಯದಿನ ಪಾದುಕೆಗಳಿಗೆ । ವಿಸ್ತಾರದಿ ಭಕ್ತಿಯೊಳು ವರಪಂ । ಕೇರುಹಗಳೈವತ್ತು ನಾಲ್ಕನು ನೀನು ಪೂಜಿಸುತ ॥ ಆರುಸಲ ಕೇಳುವುದು ನಿನ್ನಕು । ಮಾರನಿಂದಲೆ ಜನ್ಮಕಾಂಡವ । ನಾರಘುವರನ ಪಾದಪದ್ಮವನಿಟ್ಟು ಚಿತ್ತದಲಿ ॥ ೩೩ ॥ ಕೇಳೆಲೆ ಮಹೀಸುತೆ ಬಳಿಕ ನೀ । ನೇಳನೆಯದಿನ ದಿಂದು ಬೆಳಗಿನ । ಕಾಲದೊಳಗರವತ್ತು ಮೂರ್ಕಮಲಗಳ ನರ್ಚಿಸುತ ॥ ಏಳುಸಲವರ ಜನ್ಮಕಾಂಡವ । ನಾಲಿಪುದು ಪುಷ್ಪಾಂಜಲಿಯನಿ । ತ್ತಾಲಯದೊಳಾಬಳಿಕ ನಿನ್ನಯ ತನಯನಿಂದೊಲಿದು ॥ ೩೪ ॥ ಭರದೊಳೆಂಟನೆಯದಿನ ಪುಷ್ಪ । ತ್ತೆರಡು ಕಮಲಂಗಳನು ಪೂಜಿಸು । ತೆರಗಿ ಪಾದುಕೆಗಳಿಗೆ ಪುಷ್ಪಾಂಜಲಿಯ ನರ್ಪಿಸುತ ॥ ತ್ವರಿತಗೊಳ್ಳುತ ಲೆಂಟುಸಾರಿ ಕು । ವರನ ಮುಖದಿಂದಾಲಿಪುದಮಲ । ತರಮೆನಿಸಿಪ ವರಜನ್ಮಕಾಂಡವ ನಧಿಕಭಕ್ತಿಯಲಿ ॥ ೩೫ ॥ ಜನಕಸುತೆ ಕೇಳ್ಬಳಿಕ ನವಮಾ । ದಿನದೊಳೆಂಬತ್ತೊಂದು ಕಮಲಗ । ಳನೊಲಿದರ್ಚಿಸಿ ಪಾದುಕೆಗಳಿಗೆ ಮಂತ್ರಪುಷ್ಪವನು ॥ ವಿನಯದಿಂದ ಸಮರ್ಪಿಸುತ ಪಾ । ವನತರವೆನಿಸ ಜನ್ಮಕಾಂಡವ । ತನಯನಿಂದೊಲಿದಾಲಿಸುವುದೊಂಬತ್ತುಸಲ ನೀನು ॥ ೩೬ ॥ ಅರುಣಕಾಲದೊಳೆದ್ದು ಪರದಿನ । ತರಣಿಮೂಡದ ಮುನ್ನ ಮಂಗಳ । ಕರವೆನಿಸುವಭ್ಯಂಗನಸ್ನಾನವನು ನೀನೆಸಗಿ ॥ ಮೆರೆವ ವಸ್ತ್ರಾಭರಣಗಳ ನಿ । ತ್ತೆರಗಿ ಸತ್ಕರಿಸುವುದು ಪರಮಾ । ದರದೊಳೆಂಬತ್ತೊಂದು ದಂಪತಿಗಳಿಗೆ ವಿಪ್ರರಲಿ ॥ ೩೭ ॥ ತರತರದ ಭಕ್ಷ್ಯಗಳ ನಾಗಿಸಿ । ಕರೆದು ವಿಪ್ರೋತ್ತಮರ ನತ್ಯಾ । ದರದೆ ವರಮೃಷ್ಟಾನ್ನ ಭೋಜನಗಳನು ಮಾಡಿಸುತ ॥ ವರಸುಚಂದನ ಪುಷ್ಪಗಳ ನಿ । ತ್ತೆರಗಿ ಫಲತಾಂಬೂಲಗಳ ಸಾ । ದರಿಸಿ ಕೊಡುವುದು ದಕ್ಷಿಣೆಸಹಿತ ತೃಪ್ತಿಯಪ್ಪಂತೆ ॥ ೩೮ ॥ ಮಗಳೆ ಕೇಳೀ ಜನ್ಮಕಾಂಡವ । ನೊಗೆದತಿ ಭಕುತಿಯಿಂದೆ ಕೇಳ್ದೊಡೆ । ರಘುವರನೊಡನೆ ನೀನು ಸೇರುವೆಯೆನುತೊರೆದು ಕೂಡೆ ॥ ಮಿಗಿಲು ಸಂತಸವನ್ನು ತಾಳುತ । ಸುಗುಣನಿಧಿ ವಾಲ್ಮೀಕಿ ಭೂಮಿಸು । ತೆಗೆ ವಿರಚಿಸಿದನಾ ಕೆಯಿಂದಾ ವ್ರತವನಾದರದೆ ... ... ॥ ೩೯ ॥

ಇಂತು ಮೂವತ್ತೇಳನೆಯ ಅಧ್ಯಾಯಕ್ಕಂ ಸಂಪೂರ್ಣಂ ಪದ್ಯಗಳು ೨೦೯೯

ಮೂವತ್ತೆಂಟನೆಯ ಅಧ್ಯಾಯ

ಸೂಚನೆ॥ ಲವನುರಾಘವ ನಧ್ವರವತುರ ।
ಗವನು ಕಟ್ಟಲಘಟಿತವೆನಿಸಿತು ।
ಬವರದೊಳ್ಶತ್ರುಘ್ನ ಲಕ್ಷ್ಮಣರಿಗೆ ಬಿಡಿಸಿಕೊಳಲು ।

ಜನಕಜಾತೆಯ ಸೇವೆಗೈಯ್ಯುತ । ಮುನಿಯಚಿತ್ತಕೆ ಬಹಳ ಸಂತಸ । ವನು ವಿರಚಿಸುತ ಕಾಕಪಕ್ಷವನಾಂತು ಕುಶಲವರು ॥ ಮುನಿಪನಾಶ್ರಮದೊಳರೆ ಮುನಿಕೊ । ಟ್ಟನು ಶರಶರಾಸನಗಳನು ಮೇ । ಲೆನಿಪ ಕವಚಕಿರೀಟ ತೂಣೀರಗಳನವದಿರಿಗೆ ॥ ೧ ॥ ಇತ್ತಲಿಂತಿರುತ್ತಿರಲು ರಾಘವ । ನತ್ತಯೋಧ್ಯಾನಗರದೊಳು ಸಲ । ಹುತ್ತ ಸಕಲ ಮಹೀತಲವ ನಮರೇಂದ್ರನಂದದಲಿ ॥ ಚಿತ್ತದೊಳು ಯೋಚಿಸಿದ ಶಾಸ್ತ್ರನ । ಕತ್ತರಿಸಿದಾ ಬ್ರಹ್ಮಹತ್ಯನಿ । ಮಿತ್ತಕೋಸುಗ ತುರಗಮೇಧಾಧ್ವರಕೆಯತ್ನಿಸಿದ ॥ ೨ ॥ ಮುನಿವಸಿಷ್ಠ ಸುಯಜ್ಞಕಶ್ಯಪ । ವಿನುತಗೌತಮ ನತ್ರಿಕಾತ್ಯಾ । ಯನವಿಜಯ ಜಾಬಾಲಿ ವಿಶ್ವಾಮಿತ್ರ ಮೊದಲಾದ । ಮುನಿಗಳಂಬರಿಸಿ ಹಯಮೇಧಸ । ವನವನಾಗಿಪೆ ನೆಂದು ರಘುವೀ । ರನರುಹಲವರು ಪೇಳದರು ನಿಜಪತ್ನಿಬೇಕೆನುತ ॥ ೩ ॥ ಹೇಮಮಯಸೀತೆಯನಿರಿಸಿಕೊಂ । ಡೀ ಮಹಾಕ್ರತುವ ನೆಸಗುವೆನೆಂ । ದಾ ಮುನಿಗಳನೊಡಂಬಡಿಸಿ ಮಖಶಾಲೆಯನು ಗೈಸಿ ॥ ರಾಮನಾಗಳೆ ದೀಕ್ಷೆತಳೆದಾ । ಕೋಮಲಾಶ್ವವ ನರ್ಚಿಸಿ ಪಣೆಗೆ । ಹೇಮಪತ್ರದೊಳಗ್ಗಳಿಕೆಯಂ ಬರಿಸಿ ಕಟ್ಟಿಸಿದ ॥ ೪ ॥ ಜವದೆ ಮೂರಕ್ಷೋಹಿಣಿಯ ಸೈ । ನ್ಯವನು ನೇಮಿಸಿ ತುರಗರಕ್ಷಣೆ । ಗವನಿಪತಿ ಶತ್ರುಘ್ನನಸಹಿತ ಕುದುರೆಯಂಬಿಡಲು ॥ ಅವನಿಮಂಡಲದೊಳದು ಸಂಚಾ । ರವನು ಮಾಡುತ ಕಳೆದು ಬಂದುದು । ವಿವಿಧ ದೇಶಂಗಳನು ಮನಬಂದಂತೆ ದಕ್ಷಿಣಕೆ ॥೫॥ ಮನುಕುಲೋತ್ತಮ ರಾಘವೇಂದ್ರನ । ವಿನುತ ಹಯಮೇಧಾಧ್ವರ ತುರುಗ । ಮೆಸುತ ಬರೆದಿಹ ಪಟ್ಟದಲಿಪಿಯನೋದಿಕೊಂಡಳುಕಿ ॥ ಮನುಜಪಾಲಕ ರೊಬ್ಬರಾಹಯ । ವನು ಪಿಡಿದು ಕಟ್ಟದಿರೆ ಕಾಪಿನ । ಜನರೊಡನೆ ವಾಲ್ಮೀಕಿ ವನಕೈತಂದುದಾ ಕುದುರೆ ॥ ೬ ॥ ಬಂದುಪವನದೊಳಾ ಕುದುರೆ ಸಲ । ವಿಂದೆ ಫುಲ್ಲನು ಮೇಯುತಿರೆ ಲವ । ನಂದು ತನ್ನೊಡನಾಡಿಗಳೊಡನೆ ವಿಹರಿಸುತಲಿದ್ದ ॥ ಬಂದ

ಹಯುವನು ಕಂಡು ಕಲಿತನ | ದಿಂದೆ ಕದಳೀದ್ರುಮಕೆ ಬಂಧಿಸಿ | ಚಂ
ದವಾಗಿಹ ಪಟ್ಟದಲಿಪಿಯುನೋದಿಕೊಳುತಿದ್ದ || ೭ || ತುರಗವಂ ಕ
ಟ್ಟಿದಿರು ಶಿಕ್ಷಿಸು | ವರವನೀಪತಿಗಳೆನುತ ಮುನಿಸು | ತರೆನಲಾಲವ
ನಂಜದೆ ತೊಲಗಿನೀವೆನುತ ಪೇಳ್ದ || ಶರವನೇರಿಸಿ ಬಿಲ್ಲಿನೊಳು ಬೊ|
ಬ್ಬಿರಿದು ನಿಂದನು ರಿಪುಗಳೊಡನೆ ಬ | ವರಕೆ ಮದವಾರಣಕೆ ಮರಿಸಿಂಗ
ಮಿದಿರಪ್ಪಂತೆ ||೮|| ಕುದುರೆಗಾವಲ ಭಟರು ನಡೆತಂ | ದಿದಿರೊಳಾ ಕದಳೀ
ದ್ರುಮಕ್ಕೆ ಬಿ | ಗಿದ ಕುದುರೆಯುಂ ಕಂಡು ನೀವೇತಕೆ ಪಿಡಿದಿರೆನುತ ||
ಇದಿರೊಳಿದ್ದಾ ಮುನಿವಟುಗಳನು | ಹೆದರಿಸಲು ನಾವಲ್ಲ ಲವನೀ |
ಕುದುರೆಯುಂ ಕಟ್ಟಿದನೆನುತ ತೋರಿದರು ಬೆರಲಿಂದ || ೯ || ತರಳನೀ
ಹಯುವನರಿಯುದೆ ಕ | ಟ್ಟಿರುವನೆಂದಾ ಕುದುರೆಗಾವಲ | ಚರರೊಡನೆ
ಬಿಡಹೇಳಿ ಗರ್ಜಿಸಲಾ ಲವನಳುಕದೆ || ತುರಗವಂಬಿಡೆಬಿಡಲು ಬಂದ
ಜ | ನರಕರವ ಛೇದಿಸುವೆ ನಾನೆನು | ತರುಹಿ ಬಿಡಲೈತಂದ ವರಕೈಗ
ಳನು ಸೀಳಿದನು || ೧೦ || ಬವರಕೈತಂದಖಿಳ ಸೈನ್ಯವ | ವಿವಿಧ ಶಸ್ತ್ರ
ಗಳಿಂದೆ ಛೇದಿಸು | ತವನಿಯೊಳು ಬೀಳಸಿದನಾ ಲವನೊಂದು ನಿಮಿಷ
ದಲಿ || ಜವದೊಳಾ ಶತ್ರುಘ್ನನಳಿದ ಬ | ಲವನು ಕಂಡು ಕದನಕೆ ಬಂ
ದನು | ಲವನಮೇಲೆಸುರಿಸುತ ಬತ್ತೀಸಾಯುಧಂಗಳನು || ೧೧ ||
ಮುತ್ತಿಬಹ ಶತ್ರುಘ್ನನುರುಬೆಗೆ | ತತ್ತರಪಡದೆ ನಿಲ್ಲುತ ಲವಂ | ಚಿತ್ತ
ದೊಳು ಮಾಹೇಶಮಂತ್ರವ ನೆನೆಯುತಾತನನು || ಮತ್ತೆ ಘಾತಿಸಲೆಲ
ವೊ ಬಾಲಕ | ಪೆತ್ತವರದಾರ್ನಿನ್ನನುರಣದಿ | ಸತ್ತುಹೋಗದಿರೆಂದು
ಹೊಡೆದನು ಹತ್ತು ಬಾಣದಲಿ || ೧೨ || ಅವಘಡಿಸಿ ಶತ್ರುಘ್ನನೆಚ್ಚ ಶ |
ರವನು ಮಾರ್ಗದೆ ಲವನು ಪಲ್ಗಡಿ | ದವನ ಚಾಪವ ನೆರಡುತುಂಡಪ್ಪಂ
ತೆ ಛೇದಿಸಲು || ಕುವರನ ಪರಾಕ್ರಮಕೆ ಮೆಚ್ಚುತ | ಜವದೊಳಾ ಶ
ತ್ರುಘ್ನ ನೆಚ್ಚನು | ಲವನ ವಕ್ಷಸ್ಥಳಕೆ ಕೋಪಿಸಿ ಮೂರುಬಾಣವನು
|| ೧೩ | ವಿರಹಿಗಳನಂಜಿಸುವ ತೆರದಿಂ | ದಿರುತಿಹವು ನಿನ್ನಂಬುಗಳೆ
ನುತ | ಧುರದೊಳಾತನ ಮೂರು ಬಾಣಂಗಳನು ಕತ್ತರಿಸಿ || ತುರಗಸಾ
ರಥಿ ಶರಶರಾಸನ | ವರವರೂಥಪತಾಕೆಗಳನತಿ | ಭರದೊಳಿಕ್ಕಡಿಗೈದು
ರುಚ್ಚಿದನಾಲವನು ಮತ್ತೆ || ೧೪ || ಪ್ರೊಸತೆನಿಪ ತೇರ್ಗಡರು ತಾಗಳೆ | ಪ
ಸುಬಯನು ನುತ್ತೊಂದು ಶರದಿಂ | ಬೆಸೆಯುಲು ಶತ್ರುಘ್ನನಂದತಿಕೋಪ
ವೆನುತಾಳ್ದು | ಕುಶನನುಜನ್ನೈತರ್ಪ ಬಾಣವ | ಬಸವಳಿಯು ದಿಕ್ಕಡಿಗ
ಡಿವನಾ | ರಸೆಯೊಳ್ಲ ಪತೆಲಯುವಾದುದು ಕೂಟಸಾಕ್ಷಿ ವೊಲು || ೧೫ |

ಕುವರನ ಪರಾಕ್ರಮಕೆ ಮೆಚ್ಚುತ। ಜವದೊಳೊಂದು ಮಹಾಸ್ತ್ರವನು ಬಿಡೆ। ಲವನಿಜಾತೆಯ ಸುತನ ಮೇಲ್ಶತ್ರುಘ್ನನುರೆವಾಳದು । ತವಕದಿಂದವ ನಿಕ್ಕಡಿಗಡಿಯ। ಲವನಿಯೊಳು ಬಿದ್ದುದು ಶರದೊಳ। ರ್ಧವು ಮಹಾಭಯವನೆಸಗುತ ಸಂಗರದಮಧ್ಯದಲಿ ॥ ೧೬ ॥ ಶರದೊಳಂದುಳಿದರ್ಧಭಾಗವು। ಭರದೆಬಂದಾ ಲವನಚಾಪವ । ನಿರಿದವನ ವಕ್ಷಸ್ಥಳವನುಛ್ಛಳಿಸಳಿಗೆಕೆಡಹೆ ॥ ಪಿರಿಯ ಮೋರ್ಛೆಯನೈದಿಸಲು ರಘು। ವರನ ತಮ್ಮನು ಹತ್ತಿರಕೆ ಬಂ। ದುರುತರದ ರಾಮಾಕೃತಿಯೊಳಹ ಶಿಶುವನೀಕ್ಷಿಸಿದ ॥ ೧೭ ॥ ಕರುಣದಿಂದೀಕ್ಷಿಸಿ ರಥದವೇ । ಲಿರಿಸಿಕೊಂಡತಿ ಮೋಹದಿಂದಾ। ತರಳನಂ ವೈದಡವಿ ಮುದ್ದಿಸಿಕೊಡೆ ಜಿಗಿದಪ್ಪಿ ॥ ತುರಗಸಹ ಶತ್ರುಘ್ನನಿತ್ತ ನ। ಗರಕೆ ನಡೆತಂದನತಿ ಭರದೊಳು। ಧರಣಿಜಾತೆಯ ಬಳಿಗೆ ಬಂದರುಹಿದರು ವಟುವರರು ॥ ೧೮ ॥ ತಾಯೆ ಚಿತ್ತೈಸು ಲವನಾರಘು। ರಾಯನ ಧ್ವರತುರಗಮಂ ನಿ। ರ್ದಾಯದಿಂ ಬಂಧಿಸಿದೊಡಾ ರಣರಂಗದೊಳವನನು ॥ ಗಾಯಗೊಳಿಸಿ ಮೂರ್ಛೆಗೆಡಹುತ। ಜೇಯನಾಗಿ ರಿಪುಘ್ನನೈದಿದ। ನಾಯಯೋಧ್ಯೆಗೆನುತ್ತ ಪೇಳ್ದರು ಸೀತೆಗರ್ಭಕರು ॥೧೯॥ ಆ ನುಡಿಯ ನಾಲಿಸುತ ದುಃಖಿಸಿ। ಜಾನಕಿಸುತನ ಸದ್ಗುಣಗಳಂ। ತಾ ನಡಿಗಡಿಗೆ ನೆನೆದು ಮಂದಿರದಿಂದೆ ನಡೆತಂದು॥ ಜ್ಞಾನವಿಲ್ಲದೆ ರೋದಿಸುತ ದು । ಮ್ಮಾನದಿಂದುರೆ ಕೊರಗುತಿದ್ದಳು। ದೀನಳಾಗುತರಿಯದ ಜನರಂತೈದಿ ಕಳವಳವ ॥ ೨೦ ॥ ಅಳುತ ಕಂಪಿಸಿ ಸೀತೆದೆಸೆಗೆ। ಟ್ಟಳುಕಿ ಬಿಸುಸುಯ್ಯುತ್ತ ಮೇದಿನಿ। ಯೊಳು ಹೊರಳುತ ಮೋಹದಿಂ ಬಸವಳಿದು ಚೇತರಿಸಿ॥ ಎಳೆಯನೇನಾಗಿಹನೊ ಮಗನೆಂ। ತಳುಕಿದನೊ ಜೀವಿಸಿಹನೊ ಬವರ। ದೊಳಳಿದನೊ ನಾನೆಂತು ನೋಡುವೆನೆಂದು ಹಲುಬಿದಳು ॥ ೨೧ ॥ ಅನಿತರೊಳು ನಡೆತಂದನು ಮನೆಗೆ। ವಿನುತ ಪುಷ್ಪಸಮಿತ್ತುಗಳನು ಕು। ಶನು ಕರಂಗಳೊಳಿರಿಸಿಕೊಳ್ಳುತ ಸುಪರನೊಡಗೊಂಡು ॥ ವಿನಯದಿಂದೆರಗುತ ನುಡಿದ ನೆಲೆ। ಜನನಿನೀ ನಿಂದೇತಕೆ ಬರಿದೆ। ಮನಮರುಗಿ ರೋದಿಸುವೆ ಪೇಳಂದೆನುತ ಶೀಘ್ರದಲಿ ॥ ೨೨॥ ಬನ್ನಮಂ ಕೇಳ್ಮಗನೆ ರಾಘವ। ಸುನ್ನತಹಯಂ ಬಂದೊಡಿಲ್ಲಿಗೆ। ನಿನ್ನ ತಮ್ಮನು ಕಟ್ಟಿದನದಂ ಯುದ್ಧಭೂಮಿಯೊಳು ॥ ಉನ್ನತ ಪರಾಕ್ರಮಿರಿಪುಘ್ನನು। ತನ್ನ ಶರದಿಂದೆಚ್ಚುಘಾತಿಸಿ। ನನ್ನ ಕಂದನ ಕೊಂಡುಪೋದನೆನುತ್ತ ಪೇಳಿದಳು ॥ ೨೩ ॥ ಕಾಲನಾಗಲಿ ಮೃತ್ಯುವಾಗಲಿ। ಶೂಲಿಯಾಗಲಿ ಸುರಪನಾಗಲಿ। ಹೇಳು ವಿಷ್ಣುವಿರಂ

ಚೆಗಳೊಳಾರಾದಡೆಯು ಸರಿಯು ॥ ಸೀಳಬಿಡುವೆನು ಮುಂದೆ ನಾನೀ । ರೇಳುಲೋಕದೊಳಿಹ ಕಲಿಗಳನು । ಬೀಳಿಸುವೆನೆಂದೆನುತ ಕುಶನಂ ದುಬ್ಬಿ ಬೊಬ್ಬಿರಿದ ॥ ೨೪ ॥ ಶೋಕವೇಕಿವ ಕೆಳೆಜನನಿ ಭೂ । ಲೋಕ ದರಸುಗಳಣಿಕೆ ಗೊಂಬೆನೆ । ನೀ ಕಳುಹು ಸಂಗರಕೆ ನನ್ನನೆನುತ್ತ ಕಾಲ್ಗೆರಗಿ ॥ ಆ ಕುಶಂ ಬೇಡಿದೊಡೆ ಸೀತೆಯು । ನೇಕವಿಧದಿಂ ಪರಸಿ ಜವದೊಳ । ಗಾಕುವರನಂ ಕಳುಹಿಕೊಟ್ಟಳು ತೊಡಿಸಿ ಕವಚವನು ॥ ೨೫ ॥ ತಾಯ ಪದಯುಗಕೆರಗಿ ಕುಶನ ಸ । ಹಾಯನಾಗಿಯೆ ಯುದ್ಧಭೂಮಿಗೆ । ವಾಯುವೇಗದೆ ಬಂದನಂಜದೆ ಪೋಗಬೇಡೆನುತ ॥ ಸಾಯಕದ ಮಳೆಯಂಕರೆದು ರಘು । ರಾಯನನುಜನಸಕಲ ಸೈನ್ಯ ಕ । ಪಾಯವನೆಸಗಿ ಹಿಂದಿರುಗಿಸಿದ ನೊಂದು ನಿಮಿಷದಲಿ ॥ ೨೬ ॥ ತಿರುಗಿದಂ ಪಡೆಸಹಿತ ಹಿಂದಕೆ । ಭರದೊಳಾ ಶತ್ರುಘ್ನ ನಾತನಿ । ದಿರೊಳು ನಿಂದುರೆಗರ್ಜಿಸಿ ಕುಶಂ ಪೋಗದಿರು ನಿಲ್ಲು ॥ ಧುರಕೆ ನಿಲ್ಲದೆ ಕದ್ದು ಪೋಪೆಯ । ತುರಗದೊಡನೆನ್ನನುಜನಂ ಬಿ । ಟ್ಟರದೆ ಪೋಗಿಸಲಹಿಕೊಜೀವವನೆನುತ ತೆಗೆದೆಚ್ಚ ॥ ೨೭ ॥ ಹಿಂದೆನಮ್ಮನು ಬಹುಪರಾಕ್ರಮ । ದಿಂದ ವೊರ್ವಪಸುಳೆ ಬಳಲಿಸಿದ । ನಿಂದುಮತ್ತಿವ ನೊರ್ವನೈತಂದಿಹನೆನುತ ಮುಳಿದು ॥ ಬಂದುನಿಂದನು ಕದನಕೆ ಕುಶನ । ಮುಂದುಗಡೆ ಶತ್ರುಘ್ನನಂಜದೆ । ಕೊಂದುಬಿಡುವೆನೆನುತ್ತ ಬಿಲ್ದುಡುಕುಬ್ಬಿಬೊಬ್ಬಿರಿದು ॥ ೨೮ ॥ ಕಡುಮುಳಿದು ಶತ್ರುಘ್ನನಂದೊಡ । ನೊಡನೆ ಯೊಂಬತ್ತು ಶರದಿಂದಾ । ಪೊಡವಿಯಣುಗಿಯ ಸುತನ ನೆಚ್ಚೊಡಳುಕದೆ ಕುಶನಿರದೆ ॥ ಬಿಡಿದು ಸಾರಥಿರಥಹಯಂಗಳ । ನಡಿಗಡಿಗೆ ಕತ್ತರಿಸಿ ಕೆಡಹಿದ । ನೊಡನಿಳೆಗೆ ಶತ್ರುಘ್ನನಂತಾ ನಾರುಬಾಣದಲಿ ॥ ೨೯ ॥ ಧುರದೊಳಾ ಕುಶನೆಚ್ಚಶರದಿಂ । ದುರುತರದ ಮೂರ್ಛೆಯನುತಾಳುತ । ಧರೆಗೆಬೀಳ್ವನಿತರೊಳು ಶತ್ರುಘ್ನನುಳಿದು ರಥವನು ॥ ದೊರೆಗಳೆಲ್ಲರು ಮೂರ್ಛೆಗೊಂಡರು । ಧರಣಿಯೊಳು ಕನ್ಯಾಕ್ರಯವಗೆ । ಯ್ದುರೆಮುದದೆ ಜೀವಿಸುವ ಮಾನವನಾ ಪಿತೃಗಳಂತೆ ॥ ೩೦ ॥ ದುರಿತಮಂ ಬಹು ಧರ್ಮದಿಂದೊಡ । ನೊರಸುವಂತೆ ಕುಶನ ಹಿತರ್ಕಳ । ನಿರಿದಖಿಳ ಶಸ್ತ್ರಾಸ್ತ್ರಸಂಚಯದಿಂದೆ ಕೆಡಹಿದನು ॥ ಮರವೆಯಂಕಳೆದು ಲವನಣ್ಣನ ॥ ಪೊರೆಗೆ ಬಂದನು ಕೂಡೆ ಬಂದರು । ಧುರಕೆ ಕುಶಲವರಿಬ್ಬರು ಸಮರಾಂಗಣಹುತವಹರೊಲು ॥ ೩೧ ॥ ಮತ್ತೆ ಹಯಮಂ ಕಟ್ಟಿ ಸಂಗರ । ಕಿತ್ತ ನಿಂದಾ ಕುಶಲವರ ಕಂ । ಡತ್ತಲೋಡಿದ ರುಳಿದ

ಘಟಿಸಿರಾಘವನಬಳಿಗೆ ॥ ಉತ್ತಮಾಧ್ವರಶಾಲೆಯೊಳು ಮುನಿ । ಪ್ರೋತ್ತಮರ ವಚನಂಗಳನು ಕೇ । ಳುತ್ತ ಕುಳಿತಿಪ ರಾಮನಂ ಕಂಡಿಂತು ಪೇಳಿದರು ॥ ೨೨ ॥ ಅವಧರಿಸು ಜೀಯತಡೆಯಿಲ್ಲದೆ । ಸವನದಹಯಂತಿರುಗಿ ಬಂದುದು । ಭುವನದೊಳು ಲವನೆಂಬ ಶಿಶುಬಿಗಿದನದನಾಬಳಿಕ ॥ ಬವರದೊಳು ಶತ್ರುಘ್ನನವನಂ । ತಿವಿದು ಬಿಡಿಸಲೂರ್ವೆ ಬಾಲಕ । ನವನಿಗೀತನ ನುರುಳಿಸಿದ ನೆಂದರುಹಿದರು ನಮಿಸಿ ॥ ೨೩ ॥ ಜಗದೊಳುಂಟೆ ಶತ್ರುಘ್ನನಂ ಭೂ । ಮಿಗೆ ಕೆಡಹಿಸುವ ವೀರನತಿ ಸೋ । ಜಿಗವೆನಿಪುದೀ ಮಾತು ನೀವ್ಪ್ರೋಲಗೆನುತ ರಾಘವನು ॥ ಮಿಗೆಮುಳಿದು ಗರ್ಜಿಸಲು ಪ್ರಾವಗ । ಳಗೆರಗಿ ಚರರುಬಿನ್ನವಿಸಿದರು । ರಘುಕುಲೇಂದ್ರಗೆ ನಿಮ್ಮ ಪದದಾಣೆ ನಿಜವಿದೆನುತ್ತ ॥ ೨೪ ॥ ಅನುಜನಂ ಸೋಲಿಸಿದ ಶಿಶುಗಳ । ವಿನುತ ಭುಜಬಲವೆಂತೊ ಲಕ್ಷ್ಮಣ । ರಣಕೆ ನೀಂ ನಡೆ ಸೇನೆ ಸಹಿತ ಮೆನುತ್ತ ರಾಘವನು ॥ ಘನವಿಷಾದವನಾಂತು ನುಡಿಯು । ಲ್ಕಿನಕುಲೋತ್ತಮ ನಂಘ್ರಿಗೆರಗುತ । ರಣಕೆ ಬಂದನು ಸೇನೆಯೊಡನುರೆ ಮುಳಿದು ಸೌಮಿತ್ರಿ ॥ ೨೫ ॥ ಬಂದು ಮುನಿವರ ನಾಶ್ರಮಕೆ ಭರ । ದಿಂದೆ ಲಕ್ಷ್ಮಣನಲ್ಲಿ ರಣದೊಳು । ನೊಂದು ಮೂರ್ಛೆಯನಾಂತು ಬಿದ್ದಿಹ ತಮ್ಮನನು ಕಂಡು ॥ ಮುಂದೆ ಬಿಲ್ವಿಡಿದತಿ ಪರಾಕ್ರಮ । ದಿಂದೆ ನಿಂದಿಹ ಶಿಶುಗಳಿಬ್ಬರ । ನಂದು ನೋಡುತ ಕಾಳಗಕೆ ನಡೆತಂದನುರೆಮುಳಿದು ॥ ೨೬ ॥ ಧುರದೊಳರ್ಭಕರಿರ್ವರುಂ ಬಂ । ದರಿಬಲವನೀಕ್ಷಿಸಿ ತಮಗೆ ಮುನಿ । ವರನು ಪವೆದಿತ್ತಖಿಳ ಶಸ್ತ್ರಾಸ್ತ್ರಂಗಳೆಲ್ಲವನು ॥ ವರಶರಾಸನದಲ್ಲಿ ಸಂಧಿಸಿ । ನೆರೆಮುಳಿದು ವೈರಿಗಳ ಮೇಲ್ಮಳೆ । ಗರೆವುತಿದ್ದರು ಲಕ್ಷ್ಮಣಂಗಿದಿರಾದ ನಾಕುಶನು ॥ ೨೭ ॥ ಪರಶುತೋಮರ ಶಕ್ತಿ ಗದೆಮು । ದ್ಗರ ಭೃಶುಂಡಿ ಪ್ರಾಸಭಲ್ಲಸು । ಪರಿಘಪಟ್ಟಿಸ ಭಿಂಡಿವಾಲಾದ್ಯಾಯುಧಂಗಳನು ॥ ಸುರಿಸಿ ಲಕ್ಷ್ಮಣ ನಲ್ಲಿ ಘಾತಿಸು । ತಿರಲಡಿಗಡಿಗೆ ಲಕ್ಷ್ಯಮಾಡದೆ । ಸರಣಿಮಧ್ಯದೊಳೆಲ್ಲವನು ಖಂಡಿಸಿದನಾ ಕುಶನು ॥ ೨೮ ॥ ಕೊಂದನೈತಂದಾ ಕುದುರೆಗಳ । ಬಂದಗಜಗಳನೆಲ್ಲ ಸೀಳಿದ । ನೊಂದುಳಿಯದಂತಖಿಳ ವೀರರನೆಲ್ಲ ಕೆಡಹಿದನು ॥ ನಿಂದತೇರ್ಗಳ ನುಚ್ಚುಮಾಡಿದ । ನೊಂದು ನಿಮಿಷದೆ ತನ್ನ ಬಾಣಗ । ಳಿಂದೆ ಕತ್ತರಿಸಿದನು ರಿಪುಗಳ ಶರಗಳೆಲ್ಲವನು ॥ ೨೯ ॥ ಬಳಿಕ ಲಕ್ಷ್ಮಣ ನೈದು ಬಾಣಂ । ಗಳನು ತೆಗೆದೆಸೆಯಲ್ಕೆ ಕುಶನಂ । ದಳುಕದತಿ ಕೋಪದವನು ಬಿಲ್ದುರೆಗರ್ಜಿಸುತ ಕೂಡೆ ॥ ತಳುವದೊಂದು ಸರಳನು ಕಾರ್ಮುಕ ।

ದೊಳುರೆ ಸಂಧಿಸಿ ಬಿಡಲು ಘನರಥ । ವಿಳೆಗೆ ಬೀಳುತ ಚೂರ್ಣವಾ
ದುದು ರಾಘವಾನುಜನ ॥ ೪೦ ॥ ತರಳನ ಪರಾಕ್ರಮಕೆ ಲಕ್ಷ್ಮಣ ।
ನುರುತರದ ವಿಸ್ಮಯವನಾಂತತಿ । ಭರದೆ ಮತ್ತೊಂದು ಪೊಸತೇರನ
ಡರ್ದು ಕೋಪದಲಿ ॥ ಧರಣಿಜಾತೆಯ ಸುತನ ಸುಂದರ । ತರ ಕಿರೀಟ
ಕವಚಗಳಂ ಕ । ತ್ತರಿಸಿದನು ಬಳಿಕೈದು ಬಾಣಗಳಿಂದೆ ಶೀಘ್ರದಲಿ
॥ ೪೧ ॥ ಪೊರೆಯುಗಿದ ಕಾಳೋರಗನ ವೋ । ಲ್ತರಳನತಿ ಕೋಪವನು
ತಾಳುತ । ವರಧನಂಜಯ ಸೂಕ್ತದಿಂದನಲಾಸ್ತ್ರಮಂಪಡೆದು ॥ ಕದ
ಕಾರ್ಮುಕದಲ್ಲಿ ಸಂಧಿಸಿ । ಭರದೊಳೆಚ್ಚೊಡರಿಬಲ ಮುರಿದುದು
ಪುರಹರಂಪಣೆಗಣ್ದೆರೆದನೆಂಬಂತೆ ಧಗಧಗಿಸಿ ॥ ೪೨ ॥ ಸುಡುವ ತನ್ನ
ಚತುರ್ಬಲವ ಕಂ । ಡೊಡನೆ ವರುಣಾಸ್ತ್ರವನು ಲಕ್ಷ್ಮಣ । ನಿಡುತನಿಲಿಸ
ಲ್ಕಂಡು ವಾಯುವ್ಯಾಸ್ತ್ರವನು ಕೊಂಡು ॥ ಕಡುಗಲಿ ಕುಶಂ ಮತ್ತೆ ತ
ನೆ । ಚ್ಚೊಡದು ಕುಲಶೈಲಪನುರುಳಿವಂ । ತಡಿಗಡಿಗೆ ಚತುರಂಗ ಬ
ಮಂ ಕಡಿದು ಕೆಡಹಿದುದು ॥ ೪೩ ॥ ಮುಳಿದು ಲಕ್ಷ್ಮಣನಸ್ತ್ರ
ಸ್ತ್ರಂ । ಗಳನು ತೆಗೆದೆಸೆಯುತಿರಲಾ ಕುಶ । ನಳುಕದೈತಹ ಕೂಗ
ಣೆಗಳಂ ತೇರ್ಗುದುರೆಗಳನು ॥ ಕೆಲದಭಟರಂ ಸಾರಥಿಗಳಂ । ಪಲ
ರದ ಕವಚಂಗಳಂ ತರಿ । ದಿಳೆ ಗುರುಳ್ಚಿದ ನಾ ಧ್ವಜಗಳಂ ಕು
ಬೊಬ್ಬಿರಿದು ॥ ೪೪ ॥ ಕ್ರೂರ ಗದೆಯಂ ಕೊಂಡು ಕದನಕೆ । ವೀರ
ಕ್ಷ್ಮಣ ನೈತರುತಿರ । ಲ್ಧೀರನಹ ಸೀತಾಕುಮಾರಕ ನದನು ಶೀಘ್ರ
ಲಿ ॥ ಘೋರಸಾಯಕದಿಂದೆ ಖಂಡಿಸಿ । ಧಾರಿಣಿಗೆ ಕೆಡಹಿದನು ಘನಗಂ
ಭೀರರವದಿಂ ಬೊಬ್ಬಿಡುತರಣರಂಗಮಧ್ಯದಲಿ ॥ ೪೫ ॥ ಮತ್ತೆ ಬತ್ತ
ಸಾಯುಧಗಳಂ । ದೊತ್ತರಿಸಿ ಸೌಮಿತ್ರಿ ಬಂದೊಡೆ । ಕತ್ತರಿಸಿ ನಿಶಿತ
ಸ್ತ್ರದಿಂದವನೆಲ್ಲಮಂ ಕುಶನು ॥ ಬತ್ತಳಿಕೆಯಿಂದೈದು ಶರಗಳ । ನೆ
ಕಿವಿವರೆಗೆಳೆದು ಬಿಟ್ಟೊಡೆ । ತತ್ತರಿಸಿ ಸೌಮಿತ್ರಿ ಬಿದ್ದನು ನೆಲಕೆ ಮ
ರ್ಛೆಯಲಿ ॥ ೪೬ ॥ ತನಗೆ ಮುನಿವಾಲ್ಮೀಕಿ ಕೊಟ್ಟಾ । ವಿನುತ ಶಸ್ತ್ರ
ನಿಪಾತದಿಂದಂ । ದನುವರದೆ ಸೌಮಿತ್ರಿ ಮೂರ್ಛೆಯನಾಂತು ತಾನಿ
ಲು ॥ ಮನುಜಪಾಲಕರೆಲ್ಲರಂ ಮೇ । ದಿನಿಗೆ ಬೀಳಿಸಿ ಕುಶನು ತನ
ನು । ಜನೆಡೆ ಗಬ್ಬರಿಸುತ್ತ ಬಂದನು ಬಹುವಿನೋದದಲಿ ॥ ೪೭
ವಿವಿಧ ಶಸ್ತ್ರಾಸ್ತ್ರಂಗಳನು ಕೊಂ । ಡವನಿಜಾತೆಯ ಸುತರು ತು
ವಿ । ರ ವೆವನಕೆನಡೆ ತಂದರು ಜಯವನೈದಿ ಬವರದಲಿ । ತವಕ
ದೊಡಿ ಪೋದರು । ಬವರದೊಳುಳಿದ ಭಟರು ವರಾ । ಘವನ

ಗೈದಿದರು ದೂತರತಿ ಜವದಿಂದಿರದೆ ॥ ೪೮ ॥ ಅಳಿದ ವೀರರ ಚಾಪಬಾಣಂ । ಗಳ ನಮಲ ರತ್ನಾಭರಣ ಕುಂ । ಡಲ ಕಿರೀಟಂಗಳನು ಶ್ರೀಘ್ರದೊಳಾಂತು ಕುಶಲವರು ॥ ತಳೆದಸುಂತಸದಿಂದೆ ಕುದುರೆಯು । ಬಳಿಗೆ ಬಂದರು ಘೋರಸಂಗರ । ದೊಳು ಜಯುವನಾಂತಾ ಮುನೀಂದ್ರನ ಪದ ವಜಾನಿಸುತ ... ... ॥ ೪೯ ॥

ಇಂತು ಮೂವತ್ತೆಂಟನೆಯ ಅಧ್ಯಾಯ ಸಂಪೂರ್ಣವು.

ಪದ್ಯಗಳು ೨೧೪೮.

***

ಮೂವತ್ತೊಂಬತ್ತನೆಯ ಅಧ್ಯಾಯ.

ಸೂಚನೆ ॥ ಕಾದಿನಿಜಸುತರೊಡನೆ ಮೂರ್ಛಿತ ।
ನಾದ ರಾಮನ ರಣದೊಳೆಬ್ಬಿಸು ।
ತಾವರಿಸಿ ಜಾನಕಿಯು ನಿತ್ತೊಪ್ಪಿಸಿದ ನಾಮುನಿಪ ॥

ವಿನುತ ಸರಯೂನದಿಯು ತೀರದೊ । ಳಿನಕುಲೋತ್ತಮ ರಾಘವನಖಿಳ । ಮುನಿಗಳಾಜ್ಞೆಯನಾಂತು ಮಖದೀಕ್ಷೆಯನು ಕೈಕೊಂಡು ॥ ಘನಮನೋವ್ಯಥೆಯಿಂದೆ ಕೊರಗಿ ಕ । ದನದೊಳಾ ಶತ್ರುಘ್ನನೇ ಗೈ । ದನೊ ಸುಮಿತ್ರಾಸುತನದೆಂತಿಹನೆನುತ ಚಿಂತಿಸಿದ ॥ ೧ ॥ ಭರತನಂ ಕರೆದೆಲೆ ಸಹೋದರ । ತರಳರಂ ಪಿಡಿವಪನೊ ವಧಿಪನೊ । ರಣದೊಳಗೆ ಸೌಮಿತ್ರಿ ಸಲೆಗೆದ್ದಪನೊ ಸೋಲ್ದಪನೊ ॥ ತುರಗವಂ ತಂದಪನೊ ತಾರದೆ । ಬರುವನೊ ಮರವೆಗೊಂಡಿಹನೊ ನಾ । ನರಿಯೆ ಹಾ ಯೆಂದೆನುತ ಬೆಸಗೊಂಡನು ರಘೂದ್ವಹನು ॥ ೨ ॥ ಕನಸಿನೊಳು ಸೌಮಿತ್ರಿ ತಾನಾ । ವನಿಗು ಸೋಲ್ದವನಲ್ಲ ಶಿಶುಗಳ । ವಿನುತ ಭುಜಬಲಮೆಂತೊ ಮೂರ್ಛೆಗೊಳಿಸುತವರ್ಗಳನು ॥ ತನಗೆ ತಂದೊಪ್ಪಿಸುವತೆರದಿಂ । ದನುಜನ ಸವಿಾಪಕೆ ಚರರ ನ । ಟ್ಟೆನಲವಂ ಕಳುಹಲವರರಿದೈತಂದು ತಿಳುಹಿದರು ॥ ೩ ॥ ದೇವಬಿಡು ದೀಕ್ಷೆಯನು ಮನದೊಳು । ನೋವನಾಸದೆ ಧುರಕೆ ನೀಂ ನಡೆ । ಜೀವಸಂಶಯಮಾಗಿಹುದು ಶತ್ರುಘ್ನ ಲಕ್ಷ್ಮಣರ ॥ ಆ ವನದ ಬಾಲಕರು ನಿನ್ನಂ । ತೀ ವಸುಧೆಯೊ

ಳು ರಂಜಿಪರು ರಣ । ಕೋವಿದರಳದುದೆಮ್ಮ ಪಡೆಯುವರಿಂದೆನು ತೋರಿ
ದರು ॥೪॥ ಚರರ ಮಾತನು ಕೇಳ್ದೊಡನೆಮೈ । ಮರೆದು ಭೂಮಿಗೆ ಬಿದ್ದ
ನಾ ರಘು । ವರನು ಘನಶೈತ್ಯೋಪಚಾರವ ನೆಸಗಿ ಶೀಘ್ರದಲಿ॥ ಭರತನಾ
ಕ್ಷಣದೊಳುಪಚರಿಸಲು । ಭರದೊಳೆದ್ದು ಕುಳಿತುಕೊಳುತ ಸೋ।ದರರ
ಸುಗುಣಂಗಳನು ನೆನೆದಳುತಿದ್ದ ನಡಿಗಡಿಗೆ ॥೫॥ ಹಳುವದೊಳ್ತನಗಾಗಿ
ಲಕ್ಷ್ಮಣ । ನಳಿದನೇ ಹಾ ತಮ್ಮ ಹಾ ರವಿ । ಕುಲತಿಲಕ ಹಾ ಸುಗುಣ
ಗಂಭೀರರಿಪುಸಂಹಾರ॥ ಎಳೆಯರಿಂದೆಂತೊರಗಿದೆ ಮಹೀ ।ತಳದೊಳೆಲೆ ಶ
ತ್ರುಘ್ನನೀ ನೆಂ । ದಳುತ ಬಿಸುಸುಯ್ಯುತ್ತ ಮರುಗಿದ ನಾ ರಘೂತ್ತಮ
ನು ॥ ೬ ॥ ಇಂತು ಸೋದರರಾ ಸುಗುಣಗಳ । ನಂತವಿಲ್ಲದೆ ರಾಘ
ವೇಂದ್ರನು । ಚಿಂತಿಸುತ್ತಿರೆ ಮತ್ತೆ ಚರರೈತಂದು ಶೀಘ್ರದಲಿ ॥ ಎಂತು
ಸುಮ್ಮನೆ ಕುಳಿತೆ ರಣದೊಳು । ಸಂತಪಿಸುತಿಹ ರನುಜರಿಬ್ಬರ ।
ದೆಂತಿಹುದೊ ಪಡೆದೀಕ್ಷೆಯಂ ಬಿಡೆನುತ್ತ ಮರುಗಿದರು ॥ ೭ ॥ ಮೊರೆ
ವ ಚರರಂ ಗರ್ಜಿಸುತ ರಘು । ವರನ ಪದಪಂಕಜಕೆರಗಿ ನೀಂ । ಬರಿ
ದೆ ದುಃಖಿಸಬೇಡ ಬಂಧಿಪ ರಿವರು ಭಯದಿಂದ ॥ ಮರವೆಗೊಂಡಿಪ ರಲ್ಲ
ದವರಿಗೆ। ಮರಣ ಮೆತ್ತಣದಾ ಪಸುಳೆಯರ। ಮರುಕಮಂ ಬಿಡಿಸೈತಪನೆ
ನುತ ಪೇಳ್ದನಾ ಭರತ ॥ ೮ ॥ ಬಳಿಕ ಜಾಂಬವ ಹನುಮ ಕೇಸ
ರಿ । ನಳಕುಮುದಶರಗುಲ್ಮ ಗಜಶತ । ಬಲಿಸುಷೇಣ ಗವಾಕ್ಷಗವ
ಯಾಂಗದರು ಮೊದಲಹ ॥ ಬಲಿಮುಖರಪಡೆಮೆಲ್ಲಮಂ ಕೊ । ಟ್ಟುಳಿದ
ಸೇನಾಸಹಿತ ಭರತನ । ಕಳುಹಿಕೊಟ್ಟನು ಬವರ ಕಾಶೀರ್ವದಿಸಿ ರಾಘ
ವನು ॥ ೯ ॥ ಜವದೊಳಾ ರಘುವರನಡಿಗೆರಗಿ । ವಿವಿಧ ಚಾಪಶರಂಗ
ಳನು ತಾ । ತವಕದೊಳಗಾಂತಮರ ನದಿಯಂ ದಾಂಟುತ ಭರತನು ॥
ಪವನಸಂಭವನಂ ಕರೆದು ನೀಂ । ಬವರದಾವೃತ್ತಾಂತವ ನರಿತು ।
ತವಕದೊಳನಗೆ ಪೇಳೆನುತ ಕಳುಹಿಸಿದನಲ್ಲಿಂದ ॥ ೧೦ ॥ ಕಲಿಪನು
ಮನಲ್ಲಿಂದೆ ಧಿಂಕಿ । ಟ್ಟಳಿವಖಿಳ ಸೈನ್ಯವನು ಕಂಡಿನ । ಕುಲಬಲಾಮಂ
ನಿನ್ನ ಸುತೆಯಂ ಬಿಟ್ಟನೆಂದೆನುತ ॥ ಮುಳಿಯುಸಿರು ತಾಯ್ಮನ್ನಿಸೆನು
ತಂ । ತಿಳಿವವನಿಯನು ಬೇಡುವೆಂದದೆ । ಮಲಗಿದಾ ಶತ್ರುಘ್ನ ಲಕ್ಷ್ಮ
ಣನನ್ನು ನೋಡಿದನು ॥ ೧೧ ॥ ಮೈಮರೆದು ಚೇತರಿಸಿಕೊಳ್ಳದೆ । ಭೂ
ಮಿತಳದೊಳು ಮಲಗಿದಾ ರಘು । ರಾಮನ ಸಹೋದರರನಾ ಪವಮಾ
ನಸಂಭವನು ॥ ಪ್ರೇಮದಿಂ ಹೆಗಲೊಳಗಿರಿಸಿಕೊಂ । ಡಾ ಮರುತ್ಪಥ
ದಲ್ಲಿ ಬಂದನು । ತಾಮಸವಿನಾಗಿಸದೆ ಭರತನಬಳಿಗೆ ಶೀಘ್ರದಲಿ ॥ ೧೨ ॥

ವರವರೂಥದೊಳ್ವರ್ವರಂ ತಂ । ದಿರಿಸಿ ಹಯವಮಂ ಕಟ್ಟಿಕೊಂಡುರು ।
ತರವತರಚಾಪಂಗಳಂ ಪಿಡಿದುಬ್ಬಿ ಬೊಬ್ಬಿರಿದು ॥ ಧುರಕೆ ನಿಂದಾ ಕು
ಶಲವರಕೇ । ಳ್ದುರೆಮುಳಿದು ನಡೆತಂದನಾಗಳೆ । ಭರತನಖಿಳ ಚತು
ರ್ಬಲಸಹಿತ ಯುದ್ಧವೇದಿನಿಗೆ ॥ ೧೩ ॥ ಕೋಪದಿಂದುರೆ ಗರ್ಜಿಸಿ
ಕುಶಂ । ಚಾಪಟಂಕಾರವ ನೆಸಗುತ್ತಿರೆ । ಭೂಪದೋಧಿಗಳೊಡವೆರೆದು
ವರ್ವಿಗಳುನಡುಗಿದವು ॥ ತಾಪದಿಂದಹಿಕಂಪಿಸಿದನು ವಿ । ರೂಪವಾದನು
ತರ್ಣಿಬೇಗನೆ । ದೀಪವಿಲ್ಲದ ಮನೆಯು ತೆರದಂತಾಯ್ತು ಸರ್ವಾಂಗ
॥ ೧೪ ॥ ಇಳೆಗೆ ಬಿದ್ದವು ಕರಿಗಳಟ್ಟೆಗ । ಳಳಿದ ಜೋದರ ತಲೆಗಳಾಕ
ಲಿ । ಗಳ ಮಹಾಸ್ತ್ರಂಗಳ್ಕಪಿವರರ ಘನಶರೀರಗಳು ॥ ಚಲಿಪ ಕುದು
ರೆಗಳ ಮಯವಂ ಗ । ಳ್ಕುಳಿದ ರಾಹುತ ರಾನನಂಗಳು । ತಳುವದೆ
ಕುಶಂ ಕೋಲ್ಗರೆವುತ್ತಿರೆ ಘೋರಯುದ್ಧದೊಳು ॥ ೧೫ ॥ ಸೇನೆಮಡಿ
ಯಲು ನಿಮಿಷದೊಳು ಪವ । ಮಾನಜಂ ನಡೆತಂದು ಶಿಶುಗ । ಳ್ಗಾನು
ಕುಲಮಣಿ ರಾಮನಾಕೃತಿಯಂತೆ ಕಾಣುವರು ॥ ನೀನು ನೋಡ್ಡೆದೆನುತ
ತೋರ । ಲ್ಲಾನುರಾಗದೊಳಂದಿರದೆ ರಾ । ಮಾನುಜಂನುಡಿಸಿದನು ಕುಶ
ನಂಮೊಗವನೀಕ್ಷಿಸುತ ॥ ೧೬ ॥ ವತ್ಸನೀನಾರ್ನಿನಗದೇತಕೆ । ಮತ್ಸ
ರವು ನಮ್ಮೊಡನೆ ರಣದೊಳು । ಮತ್ಸಹೋದರರನ್ನು ನೀನೇತಕ್ಕೆ ಘಾತಿ
ಸಿದೆ ॥ ಸತ್ಸಹಾಯವ ನೆಸಗು ವಿವನಾ । ರುತ್ಸವದೆ ಪೇಳ್ನಿನ್ನ ತೆರವ
ನು । ಮತ್ಸಮೀಪದೊಳೆನುತ ಕೇಳ್ದನು ಭರತನೊಲಿಸುತ್ತ ॥ ೧೭ ॥
ತಂದೆತಾಯಿಗಳಾರು ನಿಮ್ಮಯ । ಮಂದಿರವದಾವುದೆಲೆ ಬಾಲಕ ।
ಕೊಂದೆ ನಮ್ಮಯ ಸಕಲ ಸೈನ್ಯವ ಬರಿದೆ ರಣದೊಳಗೆ ॥ ಮುಂದೆ
ಮತ್ಸರಿಸದೆ ತುರಂಗವ । ತಂದು ನಮಗಿಂದೊಪ್ಪಿಸಿ ಕುಶಲ । ದಿಂದಿರು
ದೆನುತ ಭರತನೆಂದನು ಕುಶನ ನೀಕ್ಷಿಸುತ ॥ ೧೮ ॥ ಕಟ್ಟಿದಶ್ವವ ಬಿ
ಡೆನು ನನಗೊಡ । ಹುಟ್ಟಿದ ನಿಮಂ ಕಲಿಸಿಕೊಟ್ಟನು । ನೆಟ್ಟನೆ ಸಕಲ
ವಿದ್ಯೆಯನು ವಾಲ್ಮೀಕಿಮುನಿಪೊರೆದು ॥ ಥಟ್ಟನೆ ಮರವೆಗೊಳಿಸಿ ನಿನ್ನ
ನು । ಮುಟ್ಟಿ ದುತ್ಸವದಿಂದೆ ಪೋಪೆನು । ಹುಟ್ಟಿದಮನೆಗೆನುತ್ತ ಭರತ
ನನೊಡನೆ ಘಾತಿಸಿದ ॥ ೧೯ ॥ ಭರತನಂ ಗಣಿಸದಿಸುತಿರೆ ತಾಂ । ಕರಿತು
ರಗರಥ ಋಕ್ಷವಾನರ । ವರರಸಂಚಯ ಮುತ್ತಲಾ ಕುಶನಿರದೆ ಕೋ
ಪಿಸುತ ॥ ಭರದೆ ಲವನಂ ಕಳುಹಿಕೊಟ್ಟು ಕು । ದುರೆಯುಬಳಿಗಾ ಶ
ತ್ರುಜನಗಳ । ತಿರರಳನು ತಾ ನಿಕ್ಕಡಿಗಡಿದ ಸಾಕ್ಷಣದೊಳೆಚ್ಚು
॥ ೨೦ ॥ ಹತ್ತು ಭರತಂಗೆಂಟು ನಳನಿಗೆ । ಮತ್ತೆ ಮೂವತ್ತು ನಿಬಿದಗೆ

ನಾ |ಲ್ವತ್ತು ಕುಮುದಗೆ ಗವಯಗಜನೀಲರ್ಗೆ ನೂರ್ನೂರು || ಇತ್ತ ವಾ
ಲಿಸುತಂಗೆ ಕುಶನೆಂ ! ಬತ್ತು ಶರಗಳ ನೆಟ್ಟನಿಬರಂ | ತತ್ತರಂಗೊಳಿ
ಸುತ್ತ ಕೆಡಹಿದ ನಿಳೆಗೆ ಬೊಬ್ಬಿರಿದು || ೨೧ || ಎಲ್ಲಿ ಕುಶನಂಬುಗಳು
ತಗುಲುವು | ವಲ್ಲಿ ಮೂರ್ಛೆಯು ಮರಣವಿಲ್ಲದೆ | ನಿಲ್ಲುವ ಕಲಿಗಳಿಲ್ಲ
ಬಲ್ಲಿದರೆನಿಪ ವಾನರರು || ತಲ್ಲಣಿಸುತಲೆ ಬಿದ್ದರವನಿಯೊ | ಳೆಲ್ಲೆಡೆಯೊ
ಳಂದಾನೆ ಕುದುರೆಗ | ಳೆಲ್ಲವನು ಕೊಲ್ಲುತ್ತಲಿದ್ದವು ಶರಗಳತಿಜವದೆ
|| ೨೨ || ಕುಶನಬಾಣಕೆ ಸಿಕ್ಕಿ ದವನೀ | ವಸುಧೆಯೊಳು ತಾಂ ಮೂ
ರ್ಛೆಗೊಳ್ಳುವು | ದಸವಳವೆ ಪೇಳೆಂಬತೆರದಿಂ ಭರತ ವ್ಯೆಮರೆದು ||
ಕುಸಿದುಬಿದ್ದನು ಮೇದಿನಿಯೊಳಾ ! ಶ್ವಸನಸಂಭವನೊಂದು ಗಿರಿಯಂ |
ಕುಶನಮೇಲ್ಕೆಡಹಲ್ಕದಂ ಖಂಡಿಸಿದ ನಾಕ್ಷಣದಿ || ೨೩ || ಕಡೆಯುವಾ
ತೇನಖಿಳ ಬಲವುಂ | ಕಡುಗಲಿ ಭರತನಂ ಧರಣಿಯೊ | ಳ್ಕೆಡಹಿ ಹ
ಯುವಿದ್ದೆಡೆಗೆ ಬಂದಿರೆ ಕುಶನನುಜನೊಡನೆ || ನುಡಿದರೀತೆರನಂ ರಘೂ
ದ್ವಹ | ನಡಿಗೆರಗಿ ಸೇವಕರು ವಿಸ್ಮಯು | ವಡೆದು ಮೂರ್ಛೆಯುನಾಂತು
ಬಿದ್ದನು ರಾಮನವನಿಳೆಯೊಳು || ೨೪ || ನೊಂದು ರೋದಿಸಿ ರಾಘವನು
ತ | ಮ್ಮಂದಿರ ಗುಣಂಗಳನು ನೆನೆನೆನೆ | ದಂದು ಮೈಮರೆದೆದ್ದು ಚೇತರಿ
ಸಿಕೊಳುತಡಿಗಡಿಗೆ || ಮುಂದೆನಿಂದ ವಿಭೀಷಣ ತರಣಿ | ನಂದನರೊಡನೆ
ಕಾಳಗಕೆ ನಡೆ | ತಂದನು ರಥಾರೂಢನಾಗಿಯೆ ಕುಶಲವರಬಳಿಗೆ
|| ೨೫ || ಬಂದು ರಣದೊಳು ಮೈಮರೆದ ತ | ಮ್ಮಂದಿರಂ ಮಡಿದಾ
ಸಕಲ ಬಲ | ವೃಂದವುಂ ಹಯುಮಂ ಪಿಡಿದುಕೊಂಡಿದಿರಿಸುತ ರಣಕೆ ||
ನಿಂದಣುಗರಂ ಕಾಣುತಾ ರಘು | ನಂದನಂ ಬೆರಗಾಗಿ ತಾನಿಂ | ತೆಂದು
ಬೆಸಗೊಂಡನತಿ ಗಂಭೀರಧ್ವನಿಯೊಳರದೆ || ೨೬ || ಎಲೆ ಶಿಶುಗಳಿರ
ನಿಮ್ಮ ಜನ್ಮ | ಸ್ಥಳ ಮದಾವುದು ನಿಮ್ಮ ನಾಮನು | ಸಲಹಿದಂ ತಾ
ಯಾರು ನಿಮಗೀ ಚಾಪವಿದ್ಯೆಯನು || ಕಲಿಸಿದವರಾರ್ನಿಮಗೆ ನಮ್ಮೊ
ಳು | ಛಲಮಿದೇತಕೆ ಸೈನ್ಯವ ನಿರಿವ | ಬಲಮಿದೆಂತಾದುದೆನುತಾ ರಘು
ವರನು ಕೇಳಿದನು || ೨೭ || ಅರಸಚಿತ್ತೈಸಹುದು ನೀನೀ | ಧುರ
ದೊಳಿಂದು ಶರವನು ತಾಳುತ | ತುರಗವುಂ ಬಿಡಿಸಿಕೊಳಲೊಲ್ಲದೆ ಮ
ರುಳು ಮಾತೇಕೆ || ಬರಿದೆ ನಮ್ಮವಿಚಾರವನು ಕೇ | ಳ್ದರಿದೊಡೆ ಜ
ಗಂ ಮೆಚ್ಚುವುದೆ ಸಂ | ಗರದೊಳಿಂದೆಚ್ಚಾಡಿ ನೋಡೆನುತೆಂದನಾ
ಕುಶನು || ೨೮ || ಎಳೆಯರಾಗಿಹ ನಿಮ್ಮೆಳೆಂತು ಜ | ಗಳವನಾಡು
ವೆ ಮೈಮರೆದು ರಣ | ದೊಳೆರಗಿದ ಸೋದರರ ನೀಕ್ಷಿಸಿ ತಾಳ್ದು

ಕೋಪವನು ॥ ಬಲಿದ ಧನುವಂ ತೊಡುವೆನೆಂದೊಡೆ । ಸಲೆಮನವೊ
ಡಂಬಡದೆನಗೆ ನೀಂ । ತಿಳುಹು ನಿನ್ನಯ ಪರಿಯನೆನಲಾ ಕುಶನು
ಪೇಳ್ದನು ॥ ೨೯ ॥ ಈ ತಪೋವನದಲ್ಲಿ ಹೆತ್ತಳು । ಸೀತೆ ನಮ್ಮಿಬ್ಬರನ
ವಳಯಿಂ । ಪೋತು ಜಾತೋಪನಯನಾದಿಕ ಕರ್ಮಗಳನೆಸಗಿ ॥
ನೀತಿಗಳ ನರುಹಿ ನಿಗಮಾಗಮ । ಜಾತಮಂ ನಮಗೊಲಿದು ಪೇಳ್ದ
ಮು । ಹಾತಿಬಲರೆನಿಸಿದನು ಮುನಿವಾಲ್ಮೀಕಿ ಲಾಲಿಸುತ ॥ ೩೦ ॥ ವರಧ
ನುರ್ವೇದವನು ನಮ್ಮಿ । ಬ್ಬರಿಗೆ ಮೊದಲಿಂದರುಹಿ ಪಾವನ । ತರವೆನಿಪ
ಸಕಲ ಶ್ರುತಿಸ್ಮೃತಿಗಳನು ಬೋಧಿಸುತ ॥ ಪರಮಸಂಮುದದಿಂದೆ ತಿಳು
ಹಿದ । ನುರುತರದ ರಾಮಾಯಣವ ನಾ । ವರತಪೋನಿಧಿ ಯೆನಿಪ ವಾ
ಲ್ಮೀಕಿ ಮುನಿಮೊದಲಿಂದ ॥ ೩೧ ॥ ವಿನುತ ರಾಮಾಯಣವನು ನಾವನು ।
ದಿನವು ಭಕ್ತಿಯೊಳೋದುವುದರಿಂ । ಜನನುತ ನಿರಾಲಸ್ಯ ನಿಶ್ಚಲಮತಿ
ಸುಜಾತಿಶಯ ॥ ಘನಸುಪುಷ್ಟಿಕ್ಷೇಮ ಸಂಮೋದ । ಮಿನಿತುನಿಮ್ಮಾಸೈ
ನ್ಯವೆಲ್ಲವ । ರಣದೆ ಸೋಲಿಪ ಶಕ್ತಿಯುಂಟಾಯ್ತು ಸುತ ಕುಶನೆಂದ
॥ ೩೨ ॥ ಆ ನುಡಿಯ ನಾಲಿಸುತ ಘನಸುಂ । ಮಾನವನುತಾಳ್ದರ್ಭಕರ
ನನು । ಮಾನಮಿಲ್ಲದೆ ತನ್ನ ಸುತರೆಂದರಿದು ರಾಘವನು ॥ ಜಾನಕಿಯ
ನಾಮವನು ಕೇಳ್ದೊಡ । ನಾನೆಲದೆ ಮೈಮರೆದು ಬೇಗನೆ । ತಾನು
ಯೆಚ್ಚರಗೊಂಡು ಭಾಸ್ಕರಸುತನಿಗಿಂತೆಂದ ॥ ೩೩ ॥ ತಪನಸುತಕೇಳೈ
ಕುಮಾರರ । ವಿಪುಲವಚನಂಗಳನು ವಿದ್ಯಾ । ನಿಪುಣರಿವರಾ ರಾಮಪುರು
ಷಂ ಗುದಿಸಿಪರೊ ಕಾಣೆ ॥ ವಿಪಿನಚಾರಿಗಳನು ಕರೆದು ನೀ । ನುಪಚ
ರಿಸಿ ಕೇಳೆನಲು ನಗುತಾ । ಕಪಿಪತಿ ರಘೂತ್ತಮನಿಗೆಂದನು ಮತ್ತೆ
ತಾನಿಂತು ॥ ೩೪ ॥ ದೇವಚಿತ್ತವಿ ಸೀ ಕುಮಾರರು । ಭಾವಿಸಲು ತವತ
ನುಜರಾಗಿಪ । ರಾ ವಿಬುಧವಂ ದಿತನದೆಸೆಯಿಂದ ಎದಿಸಿರುವರಿವರು ।
ಪಾವನತರದ ಭಾನುಕುಲಜರು । ತೀವಿದತಿ ಬಲಯುತರು ದೇವರ ।
ದೇವ ನಿನ್ನಯ ರೂಪಿನಂದದೆ ಕಂಗೊಳಿಪರಿವರು ॥ ೩೫ ॥ ನಿನ್ನ ಸುತ
ರಲ್ಲವೊಡೆ ರಣದೊಳು । ನಿನ್ನನಿಳ ಬಲಮಂ ಗೆಲುವ ಸಂ । ಪನ್ನ
ಪೌರುಷವೆಂತು ನೆಲೆಗೊಂಡಿಪುದು ಶಿಶುಗಳೊಳು ॥ ಇನ್ನು ಸಂಶಯ
ಮೇಕೆನಿನಗಂ । ದೆನ್ನುತಂ ನುಡಿವನಿತರೊಳು ರಣ । ಕುನ್ನತಪರಾಕ್ರ
ಮದೆ ಬಂದನು ನೀಲನುರೆಮುಳಿದು ॥ ೩೬ ॥ ತರಣಿಸಂಭವ ರಘುಪತಿ
ಗಳ । ವರರು ಮೊಲಿಸು ಮಾತಾಡುತ್ತಿರುವ ನಿ । ತರೊಳು ಪಯಮಂ
ಬಿಡಿಸಿಕೊಳಬೇಕೆನುತ ಶೀಘ್ರದಲಿ ॥ ಮಡದಬಳಿಗಾ ನೀಲನೈತರೆ । ಶರಗ

ಳಂ ಕುಶನೆಚ್ಚು ಭೂತಳ | ಕುರುಳಿಸಿದ ನಾತ್ರನನ ವನಸೇನನಹಿತ್ರಬ್ಬ
ರಿಸಿ ‖ ೩೭ ‖ ರವಿಯ ಸಾರಥಿಸಿ ಕುಶನ ಮೇ | ಘವಿಸಿದ ಬಾಣಂಗ
ಳನು ಬಹು | ಜವದೊಳಾಂತು ಧನುವ್ರೊಳು ಸಂಧಿಸಿ ಸೇನು ಕಿಪಿವರೆ
ಗೆ | ಲವನ ನೀಕ್ಷಿಸುತೆಚ್ಚು ಕೆಡಹಿದ | ನವನಿಯೊಳು ರವಿಸುತ ವಿಭೀ
ಷಣ | ಗವಯನೊವಲ್ಲಾವಳಿಳ ವೀರರ ನೊಂದು ನಿಮಿಷದಲಿ ‖ ೩೮ ‖
ಅಳಿವ ವಾನರ ಋಕ್ಷರಾಕ್ಷಸ | ವಲಿಮುಖರು ಮೊದಲಾದ ಸೈನ್ಯವ |
ತಳುವದೀಕ್ಷಿಸಿ ಯುದ್ಧರಂಗದೊಳಾ ರಘೂತ್ತಮನು | ಮುಳಿದು ಸರಳ್ಗಂ
ಪೂಡಿ ಕಿವಿವರೆ | ಗೆಳೆದು ಬಿಟ್ಟನೆಳೆಯುರ ಮೇಲೀ | ನೆಲದೊಳಾ ಕ್ಷತ್ರಿ
ಯುರ ಮನವಾಸಿಗಳ ದೆಂತೆನಲು ‖ ೩೯ ‖ ಬಚ್ಚ್ವಪೋಗಬ ರಾಮಬಾಣ
ವ | ನುಚ್ಚು ನೂರಾಗುವ್ರೊಲು ಕುಶಕಡಿ | ದೆಚ್ಚೊಡಾ ರಘುವರನು ಕ
ಡುಮುಳಿದಾ ಕುಶಲವರನು ‖ ಎಚ್ಚೊಡವುಗಳ ನಣುಗರೆಡೆಯೊಳು |
ಕೊಚ್ಚಿ ರಘುವರನಂ ಬಳಲಿಸಿದ | ರಚ್ಚರಿಯ ಸಂಗ್ರಾಮ ನಡೆದುವು
ತಂದೆಮಕ್ಕಳಿಗೆ ‖ ೪೦ ‖ ಚಂಡರಾವಣ ಕುಂಭಕರ್ಣರ | ಮಂಡೆಗಳ
ನಿರಿದಂಬುಗಳು ರಣ | ಮಂಡಲದೆ ಸಲೆಮುರಿದು ಬಿದ್ದುವು ಕುಶನೆಸುಗೆ
ಯಿಂದ ‖ ಕಂಡುರಾಘವನಾ ಕುಶನ ಕೋ | ದಂಡದಿಂದೈತಪ್ಪ ಘನ
ಶರ | ಕಾಂಡವನು ತರಹರಿಸಲಾರದೆ ಸುಮ್ಮನಿರುತಿದ್ದ ‖ ೪೧ ‖
ಕಕ್ಕಸದ ಕುಶನಂಬುಗಳು ಸಲೆ | ಪೊಕ್ಕವು ಶರೀರದೊಳು ಮ
ಕ್ಕಳೊ | ಳಕ್ಕರುಂಟೆಲ್ಲೆಂಬುದಂ ಸಲೆನೋಳ್ಪವೆಂಬಂತೆ ‖ ಸೊಕ್ಕಿ
ಮೈಮರೆದಾ ರಘುವರನು | ಗಕ್ಕನೆ ಮಹೀತಳಕೆ ಬಿದ್ದನು | ವೃಕ್ಷ
ನ ಕೊಡಲಿಯಿಂದೆ ಕಡಿದಾ ಮರವು ಬೀಳ್ವಂತೆ ‖ ೪೨ ‖ ಬಳಿಕ
ರಾಘವನೆಡೆಗೆ ಬಂದು ಪ | ಸುಳೆಗಳಿಬ್ಬರು ಮನುಕುಲೇಂದ್ರನ |
ಸುಲಲಿತಾಕಾರವನು ಮನದಣಿವಂತೆ ನೆರೆನೋಡಿ | ಹೊಳೆವ ಮ
ಣಿಕುಂಡಲ ಕಿರೀಟಂ | ಗಳನು ಸಲೆಕಂಗೊಳಿಸು ವೇಕಾ | ವಳಿ
ಯ ಸರಗಳನಾಂತು ತಾವೈತಂದರಲ್ಲಿಂದ ‖ ೪೩ ‖ ಭರದೆ ಲಕ್ಷ್ಮಣ
ಭರತ ಶತ್ರು | ಘ್ನರ ವಿಭೂಷಣಗಳನು ಕೊಂಡಾ | ಧುರದೊಳಗಳಿಯು
ದೆಚ್ಚರಾಗಿಹ ವೀರರಂ ಪಿಡಿದು ‖ ತರುವೆನೆಂದು ಕುಶಂಗರುಹಿ ಲವ | ನಿ
ರದೊಡನೆ ಲಕ್ಷ್ಮಣನ ತೇರನ | ಡರಿ ಬರುತ್ತಿರಲ್ಜಾಂಬವನಿಗಾ ಹನುಮ
ನಿಂತೆಂದ ‖ ೪೪ ‖ ಕೇಳಿರೈ ಜಾಂಬವರೆ ರಘುಭೂ | ಪಾಲಕನುಮೊದ
ಲಹ ಕಲಿಗಳಂ | ಸಾಲುಸಾಲಾಗಿಯೆ ಕೆಡಹಿ ರಣರಂಗದೊಳು ಬಳಿಕ |
ಕಾಲನಸರಾಗಮುಳಿವರನೀ | ಬಾಲಕನೆ ಮುಕೊಂಡು ಪೋಪನು | ಕೀಳ್ರು

ಪೋಪಡವೆ ಜಾನಕಿಯುಬಳಿಗಿಂದು ಶೀಘ್ರದಲಿ ॥ ೪೫ ॥ ದೇವಿಯುಬಳಿಗೆ
ಕೊಂಡುಪೋಗಲಿ। ನಾವು ಸುಮ್ಮನಿರುತಿಪುದುತ್ತಮ। ಕಾವಳವ್ಮನು
ಸೀತೆ ತನ್ನಯ ಚರರಿವರೆಸುತ್ತ ॥ ದೇವಿ ರಕ್ಷಿಸ ಲುಳಿಯಲೆಮ್ಮನು।
ಜೀವಿಸುವರಿಂದೆಲ್ಲ ರೆಂದೆನು। ತಾ ವಿಕಟಕಪಿ ನುಡಿವನಿತರೊಳು ಲವ
ನು ನಡೆತಂದ ॥ ೪೬ ॥ ಕೆಡೆದಭಟರಂ ನೋಡಿ ರಣದೊಳು। ಮಿಡುಕಿ
ಮಾತಾಡುವಿವರಂ ಕಂ। ಡೊಡನೆ ಪಿಡಿತಂದವಗ್ರದ ಕಪಿಗಳಿಬ್ಬರಿವರೆನು
ತ ॥ ನುಡಿದು ಲವನಣ್ಣನಿಗೆ ತೋರ। ಲ್ಕಿಡಿದ ಸಂತಸದಿಂದೆ ಮನ್ನಿಸಿ।
ಪಡೆದ ಮಾತೆಯುಬಳಿಗೆ ಬಂದರು ವಾನರರಸಹಿತ ॥ ೪೭ ॥ ತನಯರೇನಾ
ಗಿಹರೊ ಹಾ ಯೆಂ। ದೆನುತ ಚಿಂತಿಸುತಿದ್ದ ತಮ್ಮ ಜ। ನನಿಗೆರಗಿ
ರಾವಣಾದಿಗಳ ಭೂಷಣಗಳನು ಕೊಟ್ಟು ॥ ಘನಮನೋವ್ಯಥೆಯಿಂದೆ
ಬಳಲಿದ ॥ ಹನುಮಜಾಂಬವರ ನಿದಿರೊಳಿರಿಸೆ। ಜನಕಸುತೆ ಕಂಪಿಸು
ತ ಕೇಳಿದಳಿಂತು ಮಕ್ಕಳನು ॥ ೪೮ ॥ ಆರರಿಯುವಂತಿದ್ದೆ ವನದೊಳು।
ಧಾರಿಣೀಶರೊಡವೆಗಳೇತಕೆ। ವೀರ ಕಪಿವರರಿವರಿಗೇತಕೆ ನೋವ
ನೆಸಗಿದಿರಿ ॥ ಕ್ರೂರಕೃತ್ಯಂಗಳ ನೆಸಗಿದಿರಿ। ದಾರಂತಪ್ಪಿದಿರಕಟ ಮುನಿ
ಪತಿ। ಬಾರದಿರನಿವರಂ ರಣವೊಳಿರಿಸೆಂದಳಾಲವಗೆ ॥ ೪೯ ॥ ಅವನಿ
ಸುತೆ ಪೇಳಿದುದ ನಾಲಿಸಿ। ಪವನಸಂಭವ ಜಾಂಬವರ ನಾ। ಲವನು
ಸಮರದ ಮಧ್ಯದೊಳಿರಿಸಿ ಮತ್ತೆ ಬರುತಿರಲು ॥ ದಿವಿಜಮುನಿಯಿಂದಿದ
ನು ಕೇಳುತ। ತವೆತಪಿಸಿ ವಾಲ್ಮೀಕಿ ಬಂದನು। ತಪಕವೊಳು ಪಾತಾ
ಳಲೋಕವನುಳಿದು ತನ್ನೆಡೆಗೆ ॥ ೫೦ ॥ ಚರಣಕಾನತಳಾದ ಸೀತೆಯು।
ಸಿರದೆ ಸೆಂತೈಸುತ್ತ ತನ್ನಡಿ। ಗೆರಗಿದವರಂ ಮನ್ನಿಸುತ ಶರವೇದಮೂ
ರ್ತಿಗಳ ॥ ತೆರದೆ ಕಂಗೊಳಿಸುತ್ತ ನಮಿಸಿದ। ತರಳರಂ ಮಣಿದೆತ್ತಿ ಪ
ರಸುತ। ಭರದೊಳಾ ವಾಲ್ಮೀಕಿ ನುಡಿದನು ಮೈದಡವುತಿಂತು ॥ ೫೧ ॥
ಮಕ್ಕಳಿರ ರಾಮನೊಳದೇತಕೆ। ಕಕ್ಕಸ ಜಗಳವಾಯ್ತು ನಿಮಗಿಂ।
ದಕ್ಕರೊಳು ನಡೆತಂದು ಜೊಡೆದಾಡುತ್ತ ಮೈಮರೆದು ॥ ಸೊಕ್ಕಿ ಬಿದ್ದ
ವರಾರು ನಿಮಗೀ। ತಕ್ಕೆ ಗಾಯಗಳಾಗದಿಪುದೆನ। ಲುಕ್ಕಿ ದಾನಂದ
ದೊಳು ಕುಶನಿಂತೆಂದನಾಮುನಿಗೆ ॥ ೫೨ ॥ ತಂದೆ ನೀಸಿರಲೆಮಗೆ ಸುಖ
ದಿಂ। ದೆಂದಿಗಹುದೇನಚ್ಚರಿಯೆ ಕೇ। ಳ್ಬಂದುದು ಕುದುರೆ ಯೊಂದು
ಕಟ್ಟಿದ ನೊಡನದಂ ಲವನು ॥ ಮಂದಿ ಕವಿದುದು ಕಾಳಗಕೆ ನಡೆ।
ತಂದನಾ ಶತ್ರುಘ್ನನವನಂ। ಸಂಧಿಸಿ ನೆಲಕುರುಳ್ಚಿ ನಾಂ ಮೂರ್ಛೆಗೆಡ
ದೆ ಮುಂದು ॥ ೫೩ ॥ ಧುರಕೆ ಬಂದರು ಬಳಿಕ ಲಕ್ಷ್ಮಣ। ಭರತ

ರಘುನಂದನರು ಪಾವನ । ತರಮೆನಿಪ ನವ್ಯಾಶ್ರಮದೊಳಾಗಿಹುದು ಭೂತಬಲಿ ॥ ದೊರೆದೊರೆಗಳಂ ಕೆಡಹುತಲೆ ನಾಂ । ಭರದೊಳಾರಘು ವೀರ ಲಕ್ಷ್ಮಣ । ಭರತರಂ ಸಲೆಮೂರ್ಛೆಗೆಡಹಿದೆ ನೆಂದನಾ ಮುನಿಗೆ ॥ ೫೪ ॥ ಒಡನೆ ಮುನಿವಾಲ್ಮೀಕಿ ಕುಶನಾ । ನುಡಿಗೆ ವಿಸ್ಮಯ ವೈದಿ ನೊಂದಡಿ । ಗಡಿಗೆ ಬಿಸುಸುಯ್ಯುತ್ತ ಚಿಂತಿಸಿ ಕೊರಗಿ ಹಾಯೆನುತ ॥ ನಡುಗುತ್ತಿರ್ಪಾ ಸೀತೆಯ ನೊಡಂ । ಬಡಿಸಿ ಬಂದನು ಶೀಘ್ರದೊಳು ತ । ನ್ನೊಡನೆ ಬಂದಿಹ ತಾಪಸರಸಹಿತ ಸಮರಾವನಿಗೆ ॥ ೫೫ ॥ ಮುರಿದ ಸತ್ತಿಗೆ ಸಿಂಧಸೀಗುರಿ । ವರಪತಾಕೆಗಳಿಂದಳಿದ ವಾ । ನರ ಮನುಜ ಗೋಪೃಷ್ಠರಾಕ್ಷಸ ಖಪಕ್ಷಿಚಯದಿಂದ ॥ ಪರಿದಮಿದುಳೆದೆ ಮಾಂಸನೆಣವಸೆ । ಕರಳು ರಕ್ತಗಳಿಂದ ತುಂಬಿದ । ಧುರದೊಳಾ ವಾಲ್ಮೀಕಿ ಮುನಿನೋಡಿದನು ರಾಘವನ ॥ ೫೬ ॥ ನೆರೆಮಸುಳ್ದವೊಗದನಿ ಶಿಯುತಾ । ಪರೆವೊಲಿಪ ಕಣ್ಣುಗಳ ಕೆಲಕೋ । ಸರಿಸ ಬಿದ್ದಿಹ ಶರಶರಾಸನ ಖಡ್ಗಖೇಟಗಳ ॥ ತರತರದ ಗಾಯುಗಳ ನೆತ್ತರಿ । ನೊರತೆಗಳ ಕಳೆಗುಂದಿ ದಂಗದ । ವರರಘುವರನ ಕಂಡು ಮುನಿವಾಲ್ಮೀಕಿ ಬೆರಗಾದ ॥ ೫೭ ॥ ಈಕ್ಷಿಸಿ ಕಮಂಡಲ ಸಲಿಲದಿಂ । ಪ್ರೋಕ್ಷಿಸಿದೊಡಾ ಮುನಿಕುಲೇಂದ್ರನು । ಪಕ್ಷಿವಾಹನನುರಗತಲ್ಪವನುಳಿದು ನಿಂದಂತೆ ॥ ರಾಕ್ಷಸಾಂತಕ ನೆದ್ದು ಕರ್ದ್ದರ । ದಾಕ್ಷಣದೆ ವಾಲ್ಮೀಕಿಮುನಿಪಂ । ಗಕ್ಷತನೆನಿಸಿ ನಮಿಸಿದ ನಧಿಕ ಭಕ್ತಿಭಾವದಲಿ ॥ ೫೮ ॥ ಪರಮಸಂಮುದದಿಂದೆ ತಾಪಸ । ವರನಿನಕುಲೋತ್ತಮನ ನೀಕ್ಷಿಸಿ । ಪರಸಿಸಲೆಬಿಗಿಯಪ್ಪಿ ಕರತಲದಿಂದೆ ಮೈದಡವಿ ॥ ಗರುಡವಾಹನ ಭಕ್ತವತ್ಸಲ । ಶರಣಜನರಕ್ಷಕದಯಾನಿಧಿ । ಸಿರಿಯ ರಸರಘುವೀರರಾಘವಯೆನುತ ಪೊಗಳಿದನು ॥ ೫೯ ॥ ಬಳಿಕರಾಮನ ಸಿರಿಮುಡಿಗೆ ಪೂ । ಮಳೆ ಸುರಿದುದಂ ದಮರದುಂದುಭಿ । ಗಳುರೆಮೊಳಗಿದುವಾ ಮುನೀಂದ್ರನ ಮಂತ್ರಜಲದಿಂದ ॥ ತಳುವದೆದ್ದರು ಲಕ್ಷ್ಮಣಾದಿಗ । ಳೊಲವಿನಿಂದ ನಿಮಿಷರಮೃತಮಂ । ತಳೆದರಳಿದ ಸಮಸ್ತ ಸೈನಿಕ ಮೆದ್ದುದಾಕ್ಷಣದೆ ॥ ೬೦ ॥ ಬರಿಸಿ ಸುರಧೇನುವನು ಪಾವನ । ಪರಿಕರಂಗಳನಾಂತು ತಾಪಸ । ವರನು ರಾಮಂಗೆಸಗಿದನು ದುಗ್ಧಾಭಿಷೇಕವನು ॥ ಪರಮಸಂಮುದದಿಂದೆ ರಘುಭೂ । ವರನ ಪೊಗಳುತ ಕುಶಲವರನತಿ । ಭರದೆ ರಾಮನ ಚರಣದೊಳ್ಬೀಳಿಸುತ ಲಿಂತೆಂದ ॥ ೬೧ ॥ ಜನಪ ಕೋಪವನೆಸಗದಿರ್ಪುದು । ಜನರು ನಿನ್ನನು ಪೊಗಳುವರು ಮೇ । ದಿನಿಯೊಳು

ದಯಾನಿಧಿಯು ಭಕ್ತರಪ್ಪೊರೆವನೆಂದೆನುತ ॥ ಜನಕಜಾಜೆಯು ಸುತರಿವರು ಕೇ । ಳ್ನಿನಗೆ ತನುಸಂಭವರೆನಿಸುವರು । ನಿನಗೆಸಗಿದಪರಾಧವನು ಸೈರಿಪ್ಪುದು ಕರುಣಿಸುತ ॥ ೬೨ ॥ ವಿನುತ ಮುನಿಯಾಜನಕೆ ವರುಣಂ । ವಿನಯದಿಂದಲೆ ಕರಿಸಲಾಂ ಪ್ಪೋ । ದೆ ನೆನಗೊಂದುಂ ತಿಳಿಯದ ಪರಾಧಂಗಳಿಲ್ಲವನು ॥ ಮನಕೆತಾರದೆ ರಕ್ಷಿಪ್ಪುದು ತನ । ಯನು ವಿನೀತನೆನಿಸಿದೊಡಂ ಧೂ । ರ್ತನೆನಿಸಿದೊಡಂ ಮನ್ನಿಪುದುಚಿತವಲ್ಲವೆಪಿತನಿಗೆ ॥ ೬೩ ॥ ತಂದೆಗೆ ದ್ರೋಹವನೆಸಗಿದೀ । ನಂದನರತೀತವನು ಮನ್ನಿಪು । ದೆಂದು ಮುನಿವಾಲ್ಮೀಕಿ ಬಿನೈಸುತ್ತಿರೆ ರಾಘವನು ॥ ನಿಂದ ಲಕ್ಷ್ಮಣನಾನನವಕಂ । ಡಿಂದುಮುಖಿತಾನೆಂತು ವನದೊಳ । ಗಂದು ಸುತರನು ಪೆತ್ತಳೆನೆ ಸೌಮಿತ್ರಿಯಿಂತೆಂದ ॥ ೬೪ ॥ ಜಾನಕಿಯನಂದಾ ವಿಮಲಗಂ । ಗಾನದಿಯು ದಕ್ಷಿಣದ ವನದೊಳ । ಗಾ ಸುಳಿದು ನಡೆತಂದುದಲ್ಲದೆ ಮುಂದರಿಯೆನೆನಲು ॥ ಕಾನನದೊಳೊಬ್ಬಳೆ ತಪಿಸುತತಿ । ದೀನತೆಯನಾಂತವನಿಸುತೆಯಂ । ನಾನು ಕಂಡೆನೆನುತ್ತ ಮುನಿ ಪೇಳಿದನು ರಾಮನಿಗೆ ॥ ೬೫ ॥ ಬಳಿಕ ಧರಣೀಸುತೆಯ ನೊಪ್ಪಿಸಿ । ತಳುವದೆನ್ನಾಶ್ರಮಕೆ ಕರೆತಂ । ದೊಲಿದು ರಕ್ಷಿಸುತ್ತಿದ್ದೆ ನಾಂತರುವಾಯದೊಳು ಸೀತೆ ॥ ಅವಳಮಕ್ಕಳ ಹೆತ್ತಳವರಿಗೆ । ಕಲಿಸಿಕೊಟ್ಟೆನು ಸಕಲ ವಿದ್ಯಂ । ಗಳನೆನುತ ವಾಲ್ಮೀಕಿಮುನಿ ಪೇಳಿದನು ರಘುಪತಿಗೆ ॥ ೬೬ ॥ ತಳುವದಂದಾ ಮುನಿಕುಶಲವರ । ಕಳುಹಿ ಸದನಕ್ಕೆರಡು ವಲ್ಲಕಿ । ಗಳನು ತರಿಸುತ್ತವರಿಗೆ ತಾಂ ಕಲಿಸಿಕೊಟ್ಟಿರುವ ॥ ನೆಲದೊಳುನ್ನತಿ ವೆತ್ತು ಸಲೆಕಂ । ಗೊಳಿಪ ರಾಮಾಯಣವ ನವರಿಂ । ದೊಲಿದು ಪಾಡಿಸಿದನು ಮೊದಲಿನಿಂದಲೆ ಕೊನೆಯತನಕ ॥ ೬೭ ॥ ವರಲಲಿತೆ ಧನ್ಯಾಸಿಪಳಮಂ । ಜರಿಸುಭೈರವಿ ತೋಡಿ ವರಗು । ಜ್ಜರಿವಿನುತ ಸಾಳಂಗ ಸಾವೇರಿಗಳು ಮೊದಲಾದ ॥ ಧರೆಯೊಳಾರಾಜಿಸುವ ಮೂವ । ತ್ತೆರಡು ರಾಗಂಗಳನು ಕೇಳಿಸು । ತಿರದೆ ಪಾಡಿದರವರು ತುಂಬುರ ನಾರದರತೆರದೆ ॥ ೬೮ ॥ ವೀಣೆಯಂ ಕೈಕೊಂಡು ಮುಖದೊಳು । ವಾಣಿ ತಾಂ ನೆಲಸಿರುವಳೋ ಕೈ । ಗಾಣಿಕೆಯ ನೊಳಕೊಂಡುರೆಮೆರೆವ ಗಾನದೇವತೆಯೋ ॥ ಮಾಣದತಿ ಮೋಹನದ ತನಿರಸ । ಪ್ಪೋ ಸರೆದ ಕರ್ಣಾಮೃತ ವಿದೋ । ಕಾಣೆ ವೆಂಬಂತೊಲಿದು ಪಾಡಿದ ರಣುಗರಾದರದೆ ॥ ೬೯ ॥ ಅಡಿಗಡಿಗೆ ಲಯುಜೋಕೆಯಿಂ ಚರ । ಬೆಡಗುಬಿನ್ನಾಣಗಳ ನವರಸ । ದೊಡನೆ ತೋರಿಸುತಾ ಹತಪ್ರತ್ಯಾಹತಂಗಳನು ॥ ಬಿಡದೆಕಂಪಿತ ಮೂರ್ಛೆರೀ

ತ್ರಿವಿ । ಗಡಸುತಾಳಸ್ವರಗಳಗತಿಯ । ನೊಡರಿಸುತ ಪಾಡಿದರು ರಾಮಾ ಯಣವನೊಲವಿಂದ ॥ ೨೦ ॥ ಸ್ಥಾಯಿಸಂಚಾರಿಗಳ ಸರಿಗಮ । ದಾಯತ ದಲಯ ಸಂಚಯದ ಪ್ರೌ । ರಾಯತಸುತಾನಂಗಳಂ ತಾಳಂಗಳಿಂದೊಡ ನೆ ॥ ಗೇಯರಸ ವೊಸರಿಸುವವೊಲು ರಘು । ರಾಯನ ಸುತರು ಸೊಗ ಸುಗೊಳಿಸು । ತ್ತಾ ಯವರಿ ತೊಲವಿಂದೆ ರಾಮಕಥೆಯನು ಪಾಡಿದರು ॥೨೧॥ ವಿನುತ ರಾಮಾಯಣದ ಸತ್ಕಥೆ । ಯನೊಲಿದಾಲಿಸುತಾ ರಘುವರ ನು । ಮನಮರುಗಿ ಮೆಚ್ಚಿಕೊಳುತಲೆ ಸೌಮಿತ್ರಿ ಭಾವಿಸಲು ॥ ಅಣ್ಣ ಗರಿಬ್ಬರು ರೂಪುಚೇಷ್ಟೆ ಸು । ಗುಣಗಳಿಂದಲೆ ಕಣ್ಗೆ ತೋರ್ಪರು । ಜನಕನಂದನೆ ಯಂದದೊಳಿವರ ನೋಡು ನೀನೆಂದ ॥ ೨೨ ॥ ಜನಕ ಜಾತೆಯ ನುಳಿದನನ್ಯ ಯ । ಘನತರದ ವಿರಹಾಗ್ನಿ ಸುತ ದ । ರ್ಶನ ಸಲಿ ಲವಿಂ ನಂದಿತಿನಕುಲದೇಳಿಗೆಯುದಾಯ್ತು ॥ ವಿನುತಿವೆತ್ತಿನ್ನ ಶರವನು ಮೋ । ದಿನಿತಳದೊಳಗೆ ಬಂಜೆಗೈಯುವ । ಮನುಜನಾವನಿರುವನು ಲಕ್ಷ್ಮಣ ಕೇಳು ನೀನೆಂದ ॥ ೨೩ ॥ ಆ ವಚನವನು ಕೇಳ್ದು ನಸುನ ಗು । ತೀ ವಸುಧೆಯೊಳು ನಿನ್ನ ಬಾಣಗ । ಳಾವಗಂ ಮೋಘಮೆನಿಸವಿ ವರು ನಿನ್ನ ಸುತರಹರು ॥ ಭಾವಿಸಿದೊಡದರಿಂ ದಣುಗರೊಳು । ತೀವಿ ಹುದು ನಿನ್ನಾತ್ಮಶಕ್ತಿಯು । ದೇವಸುತರಂ ಗ್ರಹಿಸೆನುತ ಪೇಳಿದನು ಸೌಮಿತ್ರಿ ॥ ೨೪ ॥ ಆನುಡಿಯನಾಲಿಸುತ ಘನಸುಂ । ಮಾನವನುತಾಳ್ದ ರಘೂತ್ತಮ । ನೀಂ ನೆಲದೊಳಾವಿಂದು ಧನ್ಯರೆನಿಸಿದೆವೆಂದೆನುತ ॥ ಸಾನು ನಯದಿಂದಾ ಘನತರತ । ಪೋನಿಧಿಗೆ ಕೈಮುಗಿದೆರಗಿ ನಿಜ । ಸೂನುಗಳ ಕರೆದಂದೊಲಿಸುತಿಂತೆಂದು ನುಡಿಸಿದನು ॥ ೨೫ ॥ ಅರಸುತರೆಲೆ ಮಕ್ಕ ಳಿರನಿಮ । ಗೀ ರಣದ ಶೂರತ್ವಮೆತ್ತಣ । ದಾರು ಸಲಹಿದರಿನಿತು ವಿದ್ಯಾ ಬಲಮದೆಂತಾಯ್ತು ॥ ಘೋರಕಾರ್ಮುಕ ವಿದ್ಯವನು ನಿಮ । ಗಾರು ಪೇ ಳಿದರೆಂದೆನುತ ರಘು । ವೀರನಾತ್ಮಜರನ್ನು ಮನ್ನಿಸುತೊಲಿದು ಕೇಳಿದ ನು ॥ ೨೬ ॥ ನಾವು ಸೀತೆಯ ಮಕ್ಕಳೆನಿಸುವೆ । ವೀವನದೊಳೆವಿಮ್ಮಾ ರ್ಗರ ನತಿ ಕೃ । ಪಾವಲೋಕನದಿಂದೆ ಮುನಿವಾಲ್ಮೀಕಿ ಪೋಷಿಸುತ ॥ ಪಾವನದ ಕೃತ್ಯಂಗಳ ನೆಸಗಿ । ಸಾವಧಾನದೊಳೆಮಗಖಿಳ ವಿ । ದ್ಯಾ ವಿಭವಗಳ ನೊಲಿದು ಬೋಧಿಸಿದನುಪಚರಿಸುತ್ತ ॥ ೨೭ ॥ ತಂದೆನಿನ್ನಯ ಚರಣಪಂಕಜ । ಕಿಂದು ಗೈವದ್ರೋಹವನು ಸುತ । ರೆಂದುತಿಳಿದು ಕ್ಷ ಮಿಸಿಕಾವುದೆನುತ್ತ ಕುಶಲವರು ॥ ಬಂದತಿವಿನಯದಿಂದೆ ದಶರಥ । ನಂದ ನನ ಪದಪಂಕಜದೊಳಾ । ನಂದ ಬಾಷ್ಪವೆ ಸುರಿಸುತೆರಗಿದ ರಧಿಕಭಕ್ತಿ

ಯುಲಿ ॥ ೭೮ ॥ ತನಯರಂ ಪಿಡಿದೆತ್ತಿ ರಘುನಂ । ದನನು ಕೂಡಿಸಿಕೊಂ
ಡು ತೊಡೆಯೊಳು । ಘನತರ ಸ್ನೇಹಾತಿಶಯದಿಂದೊಡನೆ ಬಿಗಿದಪ್ಪಿ ।
ಮನವೊಲಿದು ಮುಂಡಾಡಿ ವಿಮಲವ । ದನವ ಚುಂಬಿಸುತಡಿಗಡಿಗೆ ನ
ಲಿ । ದನು ಶಿರವನಾಘ್ರಾಣಿಸುತ ನೆರೆನೋಡಿ ಮೈದಡವಿ ॥ ೭೯ ॥ ಮುನಿ
ಪನಂ ಕೊಂಡಾಡಿ ರಘುನಾ । ಥನನುಜರ್ಕಳ ಸಹಿತ ಕುಶಲವ । ರನೊ
ಲಿದೀಕ್ಷಿಸಿ ಮುಳುಗಿದನು ಸಂತೋಷವಾರ್ಧಿಯಲಿ ॥ ವಿನುತ ದುಂದುಭಿ
ಗಳು ಮೊಳಗಿದವ । ವನಿತಳದೊಳು ಸುರಿದುದು ಪೂಮಳೆ । ಮನವೊ
ಲಿದು ತುಂಬುರರು ಗಾನವಮಾಡಿದರು ಕೂಡೆ ॥ ೮೦ ॥ ಬಳಿಕ ವಾಲ್ಮೀ
ಕಿ ಮುನಿವರನಂ । ಸಲೆಪೊಗಳಿ ಸಂತೈಸಿ ರವಿಕುಲ । ತಿಲಕನೆಂದನು
ತಾಪಸೋತ್ತಮ ಕೇಳು ಜಗದರಿಯೆ ॥ ನೆಲದಣುಗಿ ಪರಿಶುದ್ಧೆ ಪಾವ
ನೆ । ನೆಲದೆ ಪಡಿಬದೆಯೆಂಬುದನು ನಾಂ । ತಿಳಿದಿಹೆನು ಲೋಕಾಪವಾ
ದಕೆ ಬೆಚ್ಚಿನಾನೆನುತ ॥ ೮೧ ॥ ಮುನಿಪ ಕೇಳಿಂತಾದೊಡಂ ಸುತ । ರನು
ಪಡೆದಳೀಸೀತೆ ಭೂಮಿಯೊ । ಳಿನಕುಲದವಂಶಾಭಿವೃದ್ಧಿಯು ಬೆಳೆದುದೀ
ತೆರದೆ ॥ ಇನಿಯಳಂತನ್ನೆಡೆಗೆ ಕಳುಹೆಂ । ದೆನುತ ನೇಮಿಸಿ ಮುನಿಗೆ
ಪೋದನು । ತನಯರೊಡನಧ್ವರದ ಕುದುರೆಯಸಹಿತ ನಿಜಪುರಕೆ
॥ ೮೨ ॥ ಪುರವರಕೆ ನಡೆತಂದು ರಘುಭೂ । ವರನು ಮುನಿಪ್ರೋತ್ತಮ
ರು ಪೇಳಿದ । ಪರಿಯೊಳಾಳ್ದನು ವಿನುತ ವರಹಯಮೇಧಯಾಗವನು ॥
ಪರಮಸಂಭ್ರಮದಿಂದೆ ಸಕಲ ಸು । ರರನೊಲಿದು ಸಂತುಷ್ಟಿವಡಿಸುತ ।
ವಿರಚಿಸಿದನು ತ್ರಿಜಗಕಿದು ಪೊಸತೆಂಬರೀತಿಯಲಿ ॥ ೮೩ ॥ ಈತೆರದೊ
ಳಾ ರಘುವರನು ಸಂ । ಪ್ರೀತಿಯಿಂದನುದಿನವು ದಿವಿಜ । ವ್ರಾತವನೊಲಿ
ಸಿ ನೂರನೆಯ ಹಯಮೇಧಯಾಗವನು ॥ ಆ ತಪೋನಿಧಿಗಳಭಿಮತ
ದಿಂ । ಭೂತಸಂತುಷ್ಟಿಯ ನೆಸಗುತ । ತ್ಯಾತುರದೆ ಮುಗಿಸಿದನು ಶಾ
ಸ್ತ್ರೋಕ್ತಪ್ರಕಾರದಲಿ ॥ ೮೪ ॥ ಸುರರು ಬಹುಸಂತುಷ್ಟಿವಡೆದರು ।
ವರಹವಿರ್ಭಾಗಂಗಳಲಿ ಭೂ । ಸುರರು ದಣಿವರು ದಕ್ಷಿಣೆ ಭೋಜನಂಗ
ಳಲಿ ತರತರದ ಮನ್ನಣೆಗಳನು ತಾ । ಳ್ದರಸುಗಳು ತೆರಳಿದರು
ಹಿಂದಕೆ । ನೆರದಋತ್ವಿಕ್ಕುಗಳು ನಲಿದರು ಸಕಲ ದಾನದಲಿ ॥ ೮೫ ॥
ತುರಗಮೇಧಾಧ್ವರದ ಕೊನೆಯೊಳು । ಪರಮವೈಭವದಿಂದೆ ರಘು
ಭೂ । ವರನು ವಿರಚಿಸಿ ಯವಭೃತಸ್ನಾನವನು ಪಟ್ಟಣಕೆ ॥ ಗುರುಪು
ರೋಹಿತ ಬಂಧು ಸುತಸೋ । ದರರ ಸಹಿತೈತಂದು ಪೊಕ್ಕನು । ಮೆರೆ
ವ ತನ್ನ ಜನನಿಯರೆಲ್ಲರ ನೊಲಿದು ಮನ್ನಿಸುತ ॥ ೮೬ ॥ ಇತ್ತಲಿಂತಿರು

ತಿರಲು ಮುನಿವರ । ನತ್ತ ಕುಶಲವರಂ ರಘುವರಂ । ಗಿತ್ತು ತನ್ನಾಶ್ರಮಕೆ ಪೋಗಲು ಮನೆಯಬಾಗಿಲೊಳು ॥ ಉತ್ತಮಾಂಗನೆ ಸೀತೆ ನೋಡುತ । ಚಿತ್ತದೊಳ್ಕಳವಳಿಸಿ ಮುನಿಗೆರ । ಗುತ್ತ ಬಿನ್ನೈಸಿದಳು ಕಂಬನಿವಿಡಿದು ರೋದಿಸುತ ॥ ೮೭ ॥ ತನಯರೇನಾದರೆಲೆ ತಾತಸ । ದನಕೆ ಕುಶಲವರೇಕೆ ಬರಲಿ । ಲ್ಲೆನಗೆ ಮುಂದಿನ್ನೇನುಗತಿ ನಾನೆಂತು ಜೀವಿಸಲಿ ॥ ತನಯರಂ ಪಡೆದಂದು ಮೊದಲೊಡ । ಲನಿಡಿದಿದ್ದೆನು ಪತಿವಿರಹಮಂ । ಮನಕೆ ತಾರದೆ ಇನ್ನು ಗತಿಯೇನೆಂದು ಮರುಗಿದಳು ॥೮೮॥ ಆರಿಗಿತ್ತೈತಂದೆ ತಂದೆಕು । ಮಾರರನೆನುತ ಗೋಳಿಡುತಿರುವ । ಧಾರಿಣೀಸುತೆ ಸೀತೆಯನು ಮಣಿದೆತ್ತಿ ಸಂತವಿಸಿ ॥ ವೀರರಾಘವನೊಡನೆ ನಿನ್ನಕು । ಮಾರರಂ ಕಳುಹಿದೆನು ನಿನ್ನನು । ಸೇರಿಸುವೆ ನೀನೆಣಿಕೆಗೊಳ್ಳದಿರೆಂದ ನಾಮುನಿಪ ॥ ೮೯ ॥ ಬಳಿಕ ಮುನಿವಾಲ್ಮೀಕಿ ಮನುಕುಲ । ತಿಲಕರಾಘವ ನರಸಿಯಂ ತಾಂ । ನಲಿದೊಡಂಬಡಿಸುತ್ತ ರಥದೊಳ್ಕುಳ್ಳಿರಿಸಿಕೊಂಡು ॥ ತಳುವದೈತಂದಧಿಕ ವೈಭವ । ದೊಳು ಮೆರೆವಯೋಧ್ಯಾಪುರವರದೊ । ಳಿಳಿಸಿಬಿಟ್ಟನು ರಾಮಚಂದ್ರನ ಪದಸರೋಜದೊಳು ॥ ೯೦ ॥ ಧರಣಿಸುತೆ ಬಂದೊಡನೆ ಕಾಣದೆ । ಭರದೊಳಾಕ್ಷಣ ಮಾಯವಾದುದು । ಪರಮ ವಿಸ್ಮಯವನೆಸಗುತ ಮಾಯಾಕೃತಿಯ ಭುಜವು॥ ಧರಣಿಯಂ ಪಾಲಿಸಿದನಾ ರಘು । ವರನು ಬಳಿಕಾ ಸತಿಸುತ ಸಹೋ । ದರರೊಡನೆ ಹನ್ನೊಂದುಸಾವಿರ ವರುಷಪರಿಯಂತ ॥ ೯೧ ॥

ಇಂತು ಮೂವತ್ತೊಂಬತ್ತನೆಯ ಅಧ್ಯಾಯ ಸಂಪೂರ್ಣವು.
ಪದ್ಯಗಳು ೧೧೪೯.

ನಲವತ್ತನೆಯ ಅಧ್ಯಾಯ.

ಸೂಚನೆ ॥ ಘೋರಶಪಥವನೆಸಗಿ ಜಾನಕಿ ।
ಧಾರಿಣಿಯೊಳಡಗುತಿರೆ ರಾಘವ ।
ವೀರನೆಬ್ಬಿಸಿ ಭೂಮಿಯಂ ಸಲಹಿದನು ಸತಿಸಹಿತ ॥

ಒಂದುದಿನ ವಾಲ್ಮೀಕಿಮುನಿಗಾ । ನಂದದಿಂದೆರಗುತ್ತ ದಶರಥ । ನಂದನನು ಪೇಳ್ದನೆಲೆ ಮುನಿಪತಿ ನಿನ್ನ ನೇಮವನು । ತಂದು ನನ್ನಯ

ಮನದೆ ಧರಣೀ । ನಂದನೆಯ ನಂಗೀಕರಿಸಿದೆನು । ಯೆಂದಿಗುಂ ಪರಿಶು ದ್ಧಿಯಿವಳೆಂದರಿತಿಹೆನು ನಾನು ॥ ೧ ॥ ನನಗೆ ಚನ್ನಾಗಿ ತಿಳಿದಿಹುದಿದು । ಮುನಿಪ ಕೇಳಾದೊಡೆ ಸಭೆಯೊಳಹ । ಮನುಜರಿಗೆ ನಂಬುಗೆಯು ದಯಿ ಪಂತಿಂದು ಭೂಮಿಸುತೆ ॥ ಘನಶಪಥವನು ಮಾಡಲೆನುತಾ । ಮನುಕು ಲೇಂದ್ರನು ಪೇಳಲವನೀ । ತನುಜೆ ನುಡಿದಳು ನಿಂದು ರಾಮನ ಮುಂದೆ ಕೈಮುಗಿದು ॥ ೨ ॥ ಪತಿಯ ಪಾದಕಮಲವನಲ್ಲದೆ । ಸತತವೆನ್ನಯ ಚಿತ್ತದೊಳು ನಾ । ನಿತರ ಮಾನವರನ್ನು ನೆನೆದವಳಲ್ಲ ಮೊದಲಿಂದ ॥ ಕ್ಷಿತಿಯೊಳೀನುಡಿ ಸತ್ಯವಾದೊಡೆ । ಸುತೆಗೆ ದಾರಿಯನಿತ್ತು ಕಾವುದೆ । ನುತ ಮಹೀಸುತೆ ಬೇಡಿದಳು ಭೂಮಿಯನು ತಲೆವಾಗಿ ॥ ೩ ॥ ಧರೆ ಯೊಳುಂಟಾಯ್ತೊಂದು ರಂಧ್ರವ । ದರೊಳಗಿಂದಾಗಲತಿ ಸುಂದರ । ತ ರವೆನಿಪ ಸಿಂಹಾಸನವದೊಂದೊಡನೆ ಕಾಣಿಸಿತು ॥ ಧರಣಿದೇವತೆ ಬಂ ದು ಮೇಲಕೆ । ಧರಣಿಜಾತೆಯ ಕೈವಿಡಿದು ಸ । ತ್ಕರಿಸಿ ಕುಳ್ಳಿರಿಸಿದಳು ಸಿಂಹಾಸನದ ಮಧ್ಯದಲಿ ॥ ೪ ॥ ಒಡನೆ ಚವರವ ಬೀಸುತಿದ್ದಳು । ಪೊಡವಿದೇವತೆ ಧಾರಿಣಿಯೊಳಡಿ । ಗಡಿಗೆ ಸಿಂಹಾಸನವು ಕುಗ್ಗುತಲಿದ್ದು ದಂದಿರದೆ ॥ ಬಿಡದೆ ಪೂಮಳೆಗರೆದ ರಮರರು । ಕಡುಮೊಳಗಿದವು ದುಂದುಭಿಗಳೀ । ಕಡೆಭಯವನೈದಿದರು ಲಕ್ಷ್ಮಣನಾದಿ ಯಾದವರು ॥ ೫ ॥ ಕೆಲರು ಚಿಂತಾಕ್ರಾಂತರಾದರು । ಕೆಲರು ಸೀತೆಯ ನೋಡುತಿ ದ್ದರು । ಕೆಲರು ರಾಮನ ನೋಡುತಿದ್ದರು ಮನದೆ ಬೆರಗಾಗಿ ॥ ಕೆಲರು ದುಃಖಿಸಿ ಮೂರ್ಛೆಪೋದರು । ಕೆಲರು ಹಾಯೆನುತಳುತಲಿದ್ದರು । ಕೆಲರು ಸಲೆಮೊರೆಯಿಡುತಲಿದ್ದರು ತಾಳ್ದು ಭೀತಿಯನು ॥ ೬ ॥ ಆಗ ಲಾ ರಘುಕುಲತಿಲಕ ಬಲು । ಬೇಗನೆ ಮಹೀತಲದೊಳು ಕುಸಿದು । ಪೋಗುತಿಹ ಜಾನಕಿಯ ನೆಡಗೈಯಿಂದೆ ತಾಂ ಪಿಡಿದು ॥ ಜಾಗರೂಕತೆ ಯಿಂದೆ ಮಣಿದವ । ನಾಗಿ ಭೂದೇವಿಯನು ಪಿಡಿದು ಸ । ರಾಗದೆ ಬಲದ ಕೈಮೊಳಂದಿಂತೆಂದು ಪೊಗಳಿದನು ॥ ೭ ॥ ನೀನಖಿಳವಿಧ ಜಂತುಗಳಿಗೆ । ಸ್ಥಾನಳಾಗಿಹೆ ಪುಣ್ಯದೇವತೆ । ನೀ ನೆನಿಸಿಕೊಂಡಿರುವೆ ಹೊಟ್ಟೆಯೊಳಿರು ವ ಚಿನ್ನವನು ॥ ನೀನು ನಿತ್ಯವು ಕೊಡುತಿಹೆ ಸಕಲ । ಮಾನವರಿಗೆಲೆ ದೇವಿ ಪಡೆದಿಹೆ । ನೀನು ಘನಸಂತುಷ್ಟಿಗೊಳಿಪ ಸಮಸ್ತ ಲತೆಗಳನು ॥ ೮ ॥ ನೀನೆ ದುರ್ಗೆಯು ನೀನೆ ಲಕ್ಷ್ಮಿಯು । ನೀನೆ ಮೇಲೆನಿಪ ಸ್ವ ರಾತ್ರಿಕೆ । ನೀನೆ ಮಂಗಳದೇವತೆಯು ನೀನೆನ್ನರಸಿಯೆನಿಪೆ ॥ ನೀನೆ ನನ್ನಯ ಶಕ್ತಿಯಾಗಿಹೆ । ನಾನೆ ನಿನ್ನನು ನಿರ್ಮಿಸಿದೆ ಕೇ । ಳ್ಜಾನಕಿಯು

ನಿನ್ನಾತ್ಮಸಂಭವೆಯೆನಿಸಿಕೊಂಡಿಹಳು ॥ ೯ ॥ ನೀನು ನನಗಿಲ್ಲತ್ತೆ ದಾ ಗಿಹೆ । ಮಾನಿನೀಮಣಿ ಮತ್ತೆ ಕನ್ಯಾ । ದಾನವನು ಮಾಡೆನಗೆ ನೀನೆನು ತಾ ರಘೂತ್ತಮನು ॥ ತಾನಡಿಗಡಿಗೆ ಬೇಡಿಕೊಳುತಿರ । ಲಾ ನುಡಿಗಳ ನು ಕೇಳದೆ ಧರಾ । ಮಾನಿನಿ ಕೆಳಗೆ ಪೋಗುತಿದ್ದಳು ತನ್ನ ಮಗಳೊಡ ನೆ ॥ ೧೦ ॥ ಮುಳಿದು ಹುಂಕರಿಸುತ್ತ ರವಿಕುಲ । ತಿಲಕ ನಾಥೂಜನಕ ಸುತೆಯುರ । ನುಳಿದು ಕೋದಂಡವನು ಕೈಕೊಂಡದಕೆ ಬಾಣವನು ॥ ಪ್ರಳಯರುದ್ರನ ತೆರದೆಕಾಣುತ । ತಳುವದಾಗಲೆ ಸಂಧಿಸುತ್ತಿರ । ಲ್ಕಿಳೆ ಯೊಳುಂಟಾದುವು ಮಹೋತ್ಪಾತಗಳು ಶೀಘ್ರದಲಿ ॥ ೧೧ ॥ ಪೊಡವಿಬ ಳಿಕತಿ ಭೀತಿಯನುತಾ । ಳ್ದೊಡನೆ ನಡುನಡುಗುತ್ತ ರಾಘವ । ನಡಿಗೆರ ಗಿ ಕೈಮುಗಿದು ನಿಲ್ಲುತ ಕೊಟ್ಟು ಸೀತೆಯನು ॥ ಪೊಡವಿಯೊಡೆಯನೆ ಮನ್ನಿಸೆಂದೆನು । ತಡಿಗೆರಗಿ ವಂದನೆಯನಾಗಿಸಿ । ಬಿಡದೆ ಕೊಂಡಾಡಿದ ಳನುಪಮಸ್ತುತಿಗಳಿಂ ದೊಲಿದು ॥ ೧೨ ॥ ಪರಮ ಕರುಣಾತಿಶಯದಿಂ ದಾ । ಧರಣಿದೇವತೆಯುಂ ಕ್ಷಮಿಸಿ ರಘು । ವರನು ನೀಂ ಸುಸ್ಥಾಯಿ ಯಾಗಿರು ಮೊದಲಿನಂತೆನುತ ॥ ವರವ ನಿತ್ತಡಿಗಡಿಗೆ ಮನ್ನಿಸಿ । ನೆರೆದ ರಾಜಸಭೆಯೊಳೊಡನೆ ಸ । ತ್ಕರಿಸಿ ಕೈಕೊಂಡನು ಮಹೀಸುತೆಯನ್ನು ಕೈವಿಡಿದು ॥ ೧೩ ॥ ಬಳಿಕ ಜಾನಕಿ ಬಹುಳಹರ್ಷವ । ತಳೆದು ಭೂದೇ ವತೆಯ ಚರಣಕ । ಮಲಕೆರಗಿ ಪೂಜಿಸಿದಳಂದತಿ ಭಕ್ತಿಭರದೊಳಗೆ ॥ ತಳುವದಾ ರಘುವರನನೇಮವ । ತಳೆದು ಪದಪಂಕಜಕೆರಗುತಾ । ನೇದೆ ಮೇದಿನಿ ಮಾಯವಾದಳು ಸಭೆಯಮಧ್ಯದಲಿ ॥ ೧೪ ॥ ಅನಲನೊಳು ಬಿದ್ದಂದು ವಿಸ್ಮಯ । ವನೊದಗಿಸಿ ಮೂಜಗಕೆ ಸೀತೆ ಸು । ಮನಸರೆಲ್ಲ ರ ಮುಂದೆ ಲಂಕಾಪುರದ ಮಧ್ಯದಲಿ ॥ ವಿನುತ ಪಾತಿವ್ರತ್ಯದ ಮಹಿ ಮೆ । ಯನುಪಸರಿಸಿದುದಲ್ಲದಿಂತೀ । ಜನಸಮೂಹದೊಳಿಂದು ಕಾಣಿ ಸಿವಳೆನುತೆರಗಿದರು ॥ ೧೫ ॥ ತಾಯೆ ಕರುಣಿಸು ರಕ್ಷಿಸೆಮ್ಮನ । ಪಾಯ ಗಳ ದೆಸೆಯಿಂದೆ ತಪ್ಪಿಸಿ । ಮಾಯೆ ಜಗದಾಧಾರೆ ಶೋಕಭಯಾಬ್ಧಿಮ ಗ್ನರನು ॥ ಕಾಯಬಲ್ಲವರಾರೆಮಗೆ ಸು । ಶ್ರೇಯವನು ನೀನಿತ್ತು ಸಲ ಹೆಂ । ದಾ ಯುವತಿ ಜನವೃದ್ಧ ಜನಮಗೆಹೊಕ್ಕುದವನಿಜೆಯು ॥ ೧೬ ॥ ಘನದಯಾರಸದಿಂದೆ ಪೊಗಳುವ । ಜನರ ನೀಕ್ಷಿಸುತಾಮಹೀಸುತೆ । ಮನುಕುಲೋತ್ತಮ ರಾಘವನ ಪದಪಂಕಜಕೆ ನಮಿಸಿ ॥ ವಿನಯದಿಂ ದತ್ತೆಯರುಗಳ ಪದ । ವನಜಕೆ ನಮಿಸಿ ಬಳಿಕ ತನ್ನಯ । ಮನೆಗೆ ಬಂದಳು ಮುನಿಮನಕೆ ಸಂತಸವನಾಗಿಸುತ ॥ ೧೭ ॥ ಸುತರ ಸಹಿತವ

ನಿಜಮನಾ ಮುನಿ । ಪತಿ ರಘೂದ್ವಹನ ವಶಕೊಪ್ಪಿಸಿ । ವಿತತಸತ್ಕಾರ ಗಳನ್ನೈದುತ ಪರಸಿರಾಘವನ ॥ ಕ್ಷಿತಿಸುತೆಯ ಮಾಹಾತ್ಮ್ಯವನು ಪೊಗ । ಳುತ ನಿಜಾಶ್ರಮಕೆ ನಡೆತಂದನು । ಮತಿವಿಶಾರದರೆಂದೆನಿಪ ನಿಜಶಿಷ್ಯರೊಡಗೂಡಿ ॥ ೧೮ ॥ ಹರುಷವನುಹೊಂದಿದರು ಲಕ್ಷ್ಮಣ । ಭರತ ಶತ್ರುಘ್ನಾದಿಗಳು ಪುರ । ವರದೊಳಾದುದು ಮಂಗಳ ಮಹೋತ್ಸವಗಳಡಿಗಡಿಗೆ ॥ ಪರಮಸಂಮದದಿಂದೆ ರಘುಭೂ । ವರನು ಪಾಲಿಸುತಿದ್ದನತ್ಯಾ । ದರದೊಳವನೀಮಂಡಲವನಾ ಸತಿಸುತರಸಹಿತ ॥ ೧೯ ॥ ಜನರಿಗತ್ಯಧಿಕ ಸುಖಸಂಮದ । ವನೆಸಗುತ ರಾಘವನಖಿಳ ಮೇ । ದಿನಿಯನೊಲಿದಾಳುತಿರಲೊಂದುದಿನದೊಳು ಕುಶಲವರ ॥ ಮನವೊಲಿದು ನೋಡುತ್ತ ಮದುವೆಗ । ಳನೆಸಗುವ ಕಾಲವೊದಗಿತೆಂದರಿ । ಗೆನುತ ಯೋಚಿಸಿ ದನವರವಯೋಧರ್ಮವನುತಿಳಿದು ॥ ೨೦

ಇಂತು ನಲವತ್ತನೆಯ ಅಧ್ಯಾಯ ಸಂಪೂರ್ಣವು.

ಪದ್ಯಗಳು ೨೨೪೯.

ನಲವತ್ತೊಂದನೆಯ ಅಧ್ಯಾಯ

ಸೂಚನೆ॥ ಸುತರಿಗಾದ ವಿವಾಹಗಳನಾ ।
ಕ್ಷಿತಿಸುತೆ ವಿಲೋಕಿಸುತ ಪಡೆದಳು ।
ಪತಿಸುತರೊಡನೆ ವಿತತಸಂಸ್ಕೃತಿ ಸೌಖ್ಯಗಳನೊಲಿದು ॥

ಬಳಿಕ ರಾಘವನೊಂದುದಿನ ಸಭೆ । ಯೊಳಿರಲೊರ್ವ ಚರನು ಮನೆಯಬಾ । ಗಿಲಬಳಿಗೆ ಬಂದೆನ್ನಬರವನು ದೊರೆಗೆ ಪೇಳೆನುತ ॥ ತಿಳುಹಲಾ ಸೇವಕನು ತಾಂ ರಘು । ಕುಲಲಲಾಮಂಗರುಹಿ ಕರೆತಂ । ದೊಳಗೆ ಬಿಟ್ಟನು । ರಾಜನಪ್ಪಣೆಯಂತೆ ದೂತನನು ॥ ೧ ॥ ಶಿರವಬಾಗಿಸಿ ರಾಘವೇಂದ್ರನ । ಚರಣಪಂಕಜಕೆರಗಿ ನಾನಾ । ಧರಣಿಪಾಲಕ ಭೂರಿಕೀರ್ತಿಯ ದೂತನಾಗಿಹೆನು ॥ ಅರಸನೀ ಪತ್ರವನು ನಿಮ್ಮಯ । ಚರಣಕೊಪ್ಪಿಸಿ ಬರ್ಪುದೆನ್ನುತ । ಭರದೆ ಕಳುಹಿದನೆಂದು ಕೊಟ್ಟನು ಬಿನ್ನವತ್ತಳೆಯ ॥ ೨॥ ಅದನು ಲಕ್ಷ್ಮಣ ನೋದಿ ಸಭೆಯೊಳು । ಪದೆದುರಘುನಾಥಂಗೆ ಬಿನ್ನವಿ । ಸಿದನು ಮಂಗಳ ಲಗ್ನಪತ್ರಿಕೆಯೊಳಿಹ ವಿವರವನು ॥ ಅವನು ಕೇಳ್ದು ವಸಿಷ್ಠ ಕಶ್ಯಪ । ಮೊದಲಹ ಮುನಿಗಳೊಡನೆ ಯೋ

ಚಿಸ । ಮುದದೊಳಾ ರಘುಭೂವರನು ತಾಂ ಪಯಣಕನುವಾದ ॥ ೩ ॥ ಪುರದ ಸಂರಕ್ಷಣೆಗೆ ವಿಜಯನ । ನಿರಿಸಿ ರಘುನಂದನನಯೊಧ್ಯಾ । ಪುರದೊಳಿರುವ ಸಮಸ್ತ ಮಾನವರನ್ನು ತನ್ನೆಡೆಗೆ ॥ ಕರಿಸಿಕೊಳ್ಳುತ ಭೂರಿಕೀರ್ತಿಯ । ಪುರಕೆ ಪಯಣವನಾಗಿಸಿದನತಿ । ಭರದೊಳು ಸಚಿವಸುತಸಹೋದರ ಬಂಧುಗಳಸಹಿತ ॥೪॥ ದಾರಿನಡೆದಿಪ್ಪತ್ತು ದಿನತನ । ಕಾ ರಘೂತ್ತಮ ಬಂದು ಹೊಕ್ಕನು । ಭೂರಿಕೀರ್ತಿಯ ಪಟ್ಟಣವನು ಸಮಸ್ತ ಜನಸಹಿತ ॥ ವಿಾರಿದಾನಂದದೊಳಗಾ ರಘು । ವೀರನ ನಿದಿರು ಗೊಂಡು ರಾಜನು । ದಾರಮನದಿಂ ಕರೆದುತಂದನು ತನ್ನ ಪಟ್ಟಣಕೆ ॥ ೫ ॥ ಮರುದಿನದೊಳಾ ಭೂರಿಕೀರ್ತಿಯು । ವರರಘೂತ್ತಮನನ್ನು ಸುತಸೋ । ದರರ ಸಹಿತೈತಂದ ರಾಜರುಗಳೊಡನುಪಚರಿಸಿ ॥ ಅರಮನೆಗೆ ಕರೆತಂದಿರದೆ ಕು । ಳ್ಳಿರಿಸಿದನು ಸಿಂಹಾಸನಂಗಳೊ । ಳುರೆ ಥಳಥಳಿಸುವಾ ಸ್ವಯಂವರ ಮಂಟಪದನಡುವೆ ॥ ೬ ॥ ಭರದೊಳೈವತ್ತಾರುದೇಶದ । ದೊರೆಗಳೈತಂದಾರಘುವರನ । ಚರಣಪಂಕಜಕೆರಗಿದರು ಕಾಣಿಕೆಗಳನು ಕೊಟ್ಟು ॥ ಧರಣಿಪಾಲಕರೆಲ್ಲರತಿ ಸಂ । ದರಮೆನಿಪ ಸಿಂಹಾಸನಗಳೊಳು । ಪರಮಸಂಮದದಿಂದೆ ಕುಳಿತಿದ್ದರು ವಿನೋದದಲಿ ॥ ೭ ॥ ನಂದೆಯೆಂಬಾ ಮುದುಕಿಯೊಡನಾ । ನಂದವನು ತಾಳ್ದಾಗಳತಿ ಭರ । ದಿಂದವನಿಪತಿ ಭೂರಿಕೀರ್ತಿಯ ಮೊದಲನೆಯ ಮಗನ ॥ ನಂದನೆಯೆನಿಪ ಚಂಪಿಕೆಯು ನಡೆ । ತಂದಳು ಸಭೆಗೆ ಮೆರೆವ ಮಂಡಿಗೆ । ಯಿಂದಿಳಿದು ಮಿಂಚಿನತೆರದೊಳಾಗ್ನೇಯದಿಕ್ಕಿನಲಿ ॥ ೮ ॥ ಬಡನೆ ಸಭೆಗೈತಂದಳರಸನೆ । ರಡನೆಯ ಮಗನ ಪುತ್ರಿಯನಿಪಾ । ಹುಡುಗಿ ಸುಮತ್ರಿಸುನಂದೆ ಸಹಿತೀಶಾನ್ಯದಿಶೆಯಿಂದೆ ॥ ಪೊಡವಿಯಾಣ್ಮರು ಬೆಂದರೊಳಗೊಳ । ಗಡಿಗಡಿಗೆ ಬತ್ತಿದವು ತುಟಿಗಳು । ಹುಡುಗಿಯರ ನೀಕ್ಷಿಸುತೊಡನವರ ಕಂಠವೊಣಗಿದವು ॥ ೯ ॥ ಬಡನೆ ಛಪ್ಪನ್ನಾರು ದೇಶದ । ಪೊಡವಿಯೊಡೆಯರ ಬಳಿಗೆ ಸಂತಸ । ವಡೆದು ಚಂಪಿಕೆಯೆಂಬಳನಿರದೆ ನಂದೆ ಕರೆತಂದು ॥ ಅಡಿಗಡಿಗೆ ಬೇರ್ಬೇರೆ ಬಗೆಯಿಂ । ದೊಡೆಯರನು ವರ್ಣಿಸಿ ವರಿಸೆನುತ । ನುಡಿಯಲೊಬ್ಬರ ನೊಪ್ಪದೈತಂದಳು ನಿರಾಕರಿಸಿ ॥ ೧೦ ॥ ರಾಮ ಲಕ್ಷ್ಮಣ ರನವಲೋಕಿಸ । ದಾ ಮಹೀವರನಸುತೆ ಚಂಪಿಕೆ । ತಾಮನಕೆ ತಾರದೆ ಭರತ ಶತ್ರುಘ್ನರಿಬ್ಬರನು ॥ ಕಾಮನಂತೆಸೆವಾ ಕುಶನೆಡೆಗೆ । ತಾಮಸವನಾಗಿಸದೆ ನಡೆತಂ । ದಾ ಮನುಕುಲೋತ್ತಮನ ಸುತನಂ ಮನದೆಮೆಚ್ಚಿದಳು ॥ ೧೧ ॥ ನಂದೆಪೇಳ್ದ ಕುಶನಪೆರ್ಮೆಯ ।

ನಿಂದುಮುಖಿಯಾಚಂಪಿಕೆ ಹರುಷ । ದಿಂದೆ ಕೇಳುತ ಮೆಚ್ಚಿ ಕುಶನನು ಕೂಡೆತಲೆವಾಗಿ ॥ ಮುಂದುಕಡೆ ನಿಂದವನಕೊರಳೊಳು । ಸುಂದರಮೆನಿಪ ಪುಷ್ಪಹಾರವ । ನಂದಮೆನೆಹಾಕಿದಳು ಮುಖಪಂಕಜವನೀಕ್ಷಿಸುತ ॥ ೧೨ ॥ ಭರದೊಳೈವತ್ತಾರುದೇಶದ । ದೊರೆಗಳ ಸಮೀಪಕೆ ಸುಮತಿಯೆಂ । ಬೆರಡನೆಯ ಮಗಳನು ಸುನಂದೆಯು ಕೂಡೆ ಕರೆತಂದು ॥ ಪರಿಪರಿಯೊಳೆಸೆವರಸುಮಕ್ಕಳ । ಬಿರುದುಗಳ ಹೊಗಳುತ್ತ ಪೇಳಲ । ವರೊಳಗೊಬ್ಬರ ನೊಪ್ಪದೈತಂದಳು ವಿಲೋಕಿಸುತ ॥ ೧೩ ॥ ವರಸುನೆಂದೆಯು ಹಿಂಗಡೆ ಸುಮತಿ । ಭರದೊಳೈತಂದಾಲವನೆಡೆಗೆ । ಹರುಷದಿಂದಾಲಿಸುತವನ ಬಿರುದಾವಳಿಯನೆಲ್ಲ ॥ ಮೆರೆವಕುಸುಮದ ಹಾರವ ನವನ । ಕೊರಳೊಳರ್ಪಿಸಿ ಮೆಚ್ಚಿದಳರದೆ । ಶಿರವಬಾಗಿಸಿ ಧಾರಿಣೀತಲವನೀಕ್ಷಿಸುತನಿಂದು ॥ ೧೪ ॥ ಲವಕುಶರು ಲಜ್ಜೆಯನುತಾಳ್ದು ಶಿ । ರವನು ಬಾಗಿಸಿದರು ಸತಿಸಹಿತ । ರವಿಕುಲೋತ್ತಮ ರಾಘವನು ಸಂತಸವನೈದಿದನು ॥ ಅವನಿಪಾಲರೆ ನೀವು ನಾನೆಸ । ಗುವ ವಿವಾಹಂಗಳನು ಕಂಡು ನ । ಡೆವುದೆನುತಲಾ ಭೂರಿಕೀರ್ತಿನುಡಿದನು ಕೈಮುಗಿದು ॥ ೧೫ ॥ ಆಗಲೆನುತ ನುಡಿದುದೊರೆಗಳನು । ರಾಗದಿಂದಲೆ ಭೂರಿಕೀರ್ತಿಯು । ನಾಗ ಸಂತಸವಡಿಸಿ ನಡೆದರು ಬಿಡದಿಮನೆಗಳಿಗೆ ॥ ರಾಘವೇಂದ್ರನು ಮನೆಗೆಬಂದನು । ಬೇಗನೆ ಸುತಸಹೋದರರಸಹಿ । ತಾಗಲಾ ಧರಣಿಪನ ಚಿತ್ತಕೆ ಮುದವನಾಗಿಸುತ ॥ ಭೂರಿಕೀರ್ತಿ ಮರುದಿನದೊಳು ರಘು । ವೀರನೆಡೆಗೈತಂದು ಪದಸಂ । ಕೇರುಹಕೆರಗಿ ಜೀಯನೀಂವರ ಶುಭಮುಹೂರ್ತವನು ॥ ಧಾರಿಣೀಸುರರಿಂದಿರಿಸಿ ನೆರ । ವೇರಿಪುದು ಲಗ್ನಗಳನೆನ್ನುತ । ದಾರಭಾವದೊಳೈದೆ ಬಿನ್ನೈಸಿದನು ಶೀಘ್ರದಲಿ ॥ ೧೬ ॥ ಅದನರಿತು ರಾಘವನು ತನ್ನಯ । ಸದನಕೆ ವಸಿಷ್ಠಮುನಿವರನಂ । ಮುದದೊಳಾಗ ಕರೆಯಿಸಿ ತಿಳುಹಲು ವರ್ತಮಾನವನು ॥ ಚದುರತನದಿಂದಾಮುನೀಶ್ವರ । ನೊದವಿದ ಶುಭಮುಹೂರ್ತವನಿರಿಸಿ । ಸದಯದಿಂದೆ ನುಡಿದನು ಮನ್ನಿಸುತಾ ರಘೂತ್ತಮನ ॥ ೧೭ ॥ ಇಂದಿಗೈದನೆದಿನವೆ ಶುಭಕರ । ಮೆಂದೆನಿಸಿಕೊಂಡಿಹುದು ನಿನ್ನಯ । ನಂದನರ ವೈವಾಹಕೆನ್ನುತ ಮುನಿಕುಲೋತ್ತಮನು ॥ ಅಂದುಲಗ್ನವನಿರಿಸಿ ದಶರಥ । ನಂದನಂಗರುಹಲನುಗೊಳಿಸುವು । ದೆಂದು ನುಡಿದನು ಲಕ್ಷ್ಮಣಂಗೆ ಸಮಸ್ತವಸ್ತುಗಳ ॥ ೧೮ ॥ ಮನುಕುಲೋತ್ತಮ ನಪ್ಪಣೆವಡೆದು । ಮನೆಗೆಬಂದಾ ಭೂರಿಕೀರ್ತಿಯು । ಘನತರದ ವೈವಾಹಮಂಟಪವನೊಲಿದಾಗಿಸು

ತ ॥ ಮನವೊಲಿದು ಬೇಕಾದ ವಸ್ತುಗ । ಳನತಿ ಸಂಭ್ರಮದಿಂದೆ ತನ್ನ ಸ । ದನದೊಳಂದಡಿಗಡಿಗೆ ಸಿದ್ಧಪಡಿಸಿದನತಿಜವದೆ ॥ ೨೦ ॥ ರವಿಕುಲೋತ್ತಮ ರಾಘವನ ವಚ । ನವನು ಕೇಳುತ ಜವದೆ ಲಕ್ಷ್ಮಣ । ನವನಿಜಾತೆಯು ಮಕ್ಕಳ ಮದುವೆಗಳಿಗೆ ಬೇಕಾದ ॥ ವಿವಿಧವಸ್ತುಗಳೆಲ್ಲವನು ತಾ । ನವಸರಗೊಳುತ ಕೂಡಿಸಿದನತಿ । ಜವದೊಳಂದಾ ರಾಘವೇಂದ್ರನ ಮನವನೊಪ್ಪಿಸುತ ॥ ೨೧ ॥ ವರವಸಿಷ್ಠಮುನೀಂದ್ರ ನಾಮುನಿ । ವರರ ಸಹಿತೈತಂದು ಭವನಕೆ । ಹರುಷವನುತಾಳ್ದು ರಘುವರೇಣ್ಯನ ಸಮೀಪದೊಳು ॥ ಮೆರೆವಭದ್ರಾಸನದೊಳು ಕುಶಲ । ವರನುಕೂಡಿಸಿ ಮೊದಲು ವಿಘ್ನೇ । ಶ್ವರನ ಪೂಜೆಯನಾಗಿಸಿದ ನಾಗಮವಿಧಾನದಲಿ ॥ ೨೨ ॥ ವಿನುತ ವರಪುಣ್ಯಾಹನಾಂದಿಗ । ಳನೊಲಿದಾಗಿಸಿ ಮುನಿವಸಿಷ್ಠನು । ಮನವೊಲಿದು ತಾನಾಗಿಸಿ ನವಗ್ರಹಸುಕರ್ಮವನು ॥ ಮನುಜಪಾಲಕ ನಿಷ್ಟದೇವತೆ । ಯನುರೆಜಾನಿಸುತ ಕುಲದೇವತೆ । ಯನೊಲಿದರ್ಚಿಸಿ ರಚಿಸಿದನು ಹೋಮಗಳ ನಗ್ನಿಯಲಿ ॥ ೨೩ ॥ ಮೆರೆವ ವರ ಪೀತಾಂಬರವ ನಾ । ಧರಣಿತನುಜೆಯಲಂಕರಿಸಿ ಕೊಂ । ಡುರೆಮೆರೆವ ಶೃಂಗಾರಮಂಟಪದೊಳು ವಿರಾಜಿಸುತ ॥ ನೆರೆದ ಮುನಿಪತ್ನಿಯರ ನೊಲಿದಾ । ದರಿಸಿ ಮನ್ನಿಸುತ ಕೊಡುತ್ತಿದ್ದಳು । ಪರಮಸಂಭ್ರಮದದಿಂದ ಲರಿಸಿನ ಕುಂಕುಮಂಗಳನು ॥ ೨೪ ॥ ವರವಿವಾಹ ಮಹೋತ್ಸವಕೆ ಬಂ । ದರಸುಗಳ ನಾರಘುವರನು ಸ । ತ್ಕರಿಸಿ ಸೋದರರೊಡನೆ ತಾನುಪಚರಿಸು ತಡಿಗಡಿಗೆ ॥ ಪರಿಪರಿಯ ಧನಕನಕ ವಸ್ತ್ರಾ । ಭರಣಗಳನೊಲಿದಿತ್ತು ದಣಿಸಿದ । ನರಸುಗಳ ಯೋಗ್ಯತೆಗಳನು ತಾನರಿತು ಮನ್ನಿಸುತ ॥ ೨೫ ॥ ಮೊಳಗುತಿದ್ದವು ಬಹುಳವಿಧಮಂ । ಗಳಕರದ ವಾದ್ಯಂಗಳೆಲ್ಲವು । ತಳುವದಂದಾಗಿಸುತ ಸೇರಿದ ಜನಕೆ ಹರ್ಷವನು ॥ ಬಳಿಕ ಬಂದನು ಭೂರಿಕೀರ್ತಿ ಬ । ಹುಳ ವಿಭವದಿಂದಾ ರಘುವರನ । ನಿಳಯಕೆ ಕುಶಲವರನು ತನ್ನಯ ಮನೆಗೆ ಕರೆತರಲು ॥ ೨೬ ॥ ಮೆರೆವ ರಘುನಂದನನ ವರಮಂ । ದಿರದ ಮಂಜುಳ ಮಂಟಪದೊಳಾ । ಧರಣಿಪಾಲಕ ಭೂರಿಕೀರ್ತಿಯು ಮೊದಲನೆಯಮಗನು ॥ ವರಪುರೋಹಿತ ನಪ್ಪಣೆಯನನು । ಸರಿಸುತಲೆ ವರಪೂಜೆಯನು ತಾಂ । ವಿರಚಿಸಿದನತಿವೈಭವದೊಳಾನಂದವನುತಾಳ್ದು ॥ ೨೭ ॥ ಲವನಿಗತ್ಯಾನಂದದಿಂದೊಡ । ನವನಿಪಾಲಕ ನೆರಡನೆಯ ಮಗ । ನವಸರಗೊಳುತ ಬಂದು ವರಪೂಜೆಯನು ಮಾಡಿದನು ॥ ಲವಕುಶರು ಮಾವಂದಿರುಗಳಾ । ದಿವಸ ಕೊಟ್ಟವಸನಗಳ ನುಡು

ತ । ರವಿರಶ್ಮಿಗಳಂದದೊಳು ರಂಜಿಸುತ್ತಿದ್ದ ರತಿಗಡಿಗೆ ॥ ೨೮ ॥ ತಳಿವಲಂ
ಕೃತಿಯಿಂದೆ ಸಲೆಕಂ । ಗೊಳಿಸುವೆರಡಾಸನಗಳ ಕೊರಳೊಳು । ಕುಳಿತು
ಕೊಳ್ಳುತಕೂಡೆ ಲವಕುಶರಧಿಕವೈಭವದೆ ॥ ಪಲವುಬಗೆಯ ವಿನೋದಗಳ
ನೆಸ । ಬಲದೆನೋಡುತ ತಾವುಬಂದರು । ಪೊಳಲಮಧ್ಯದೆ ಭೂರಿಕೀರ್ತಿ
ಯು ರಾಜಮಂದಿರಕೆ ॥ ೨೯ ॥ ಅರಮನೆಯ ಬಾಗಿಲೊಳು ಮದಕುಂ ।
ಜರಗಳಿಂದಾ ಕುಶಲವರಿಳಿದು । ಮೆರೆವ ವರವೈವಾಹಮಂಟಪಕೊಡನೆ
ನಡೆತಂದು ॥ ವರಪುರೋಹಿತರಾಜ್ಞೆಯನು ತಳೆ । ದುರೆಮೆರೆವ ಮಂಗಳ
ಕರವೆನಿಪ । ಸುರುಚಿರವ ಪೀಠಂಗಳೊಳು ಕುಳಿತರತಿಹರ್ಷದಲಿ ॥ ೩೦ ॥
ಬಳಿಕ ಮಧುಪರ್ಕಾದಿ ಕರ್ಮಂ । ಗಳನು ಕುಶಲವರಿಗೆಸಗಿದರು ಬ ।
ಹುಳ ವಿಭವದಿಂದಾ ನೃಪನ ಸುತರಿಬ್ಬರಾದರಿಸಿ ॥ ನೆಲದಣುಗಿ ರಾಘವ
ರು ಸುತಸ । ವಳಿದು ಸಲೆಸತ್ಕರಿಸಿದರು ಮುನಿ । ತಿಳುಹಿದಂತಾ ಚಂಪಿ
ಕಾಸುಮತಿಗಳ ವೀಕ್ಷಿಸುತ ॥ ೩೧ ॥ ಬಂದುವೇದಿಕೆಯೊಳು ಮುನಿಪ
ನಾ । ನಂದದಿಂದಲೆ ಚಂಪಿಕೆ ಕುವರ । ನಂದುನಿಲ್ಲಿಸಿ ಸುಮತಿಲವರ
ನವರಸವಿಲಾಸದೊಳು ॥ ಚಂದದಿಂದುರೆ ಕಂಗೊಳಿಪ ಮು । ತ್ತೊಂದು
ವೇದಿಕೆಯಲ್ಲಿ ನಿಲ್ಲಿಸು ॥ ತಂದಮೆನೆ ಪೀತಾಂಬರದ ತೆರೆವಿಡಿದ ಮಧ್ಯದ
ಲಿ ॥ ೩೨ ॥ ತಳುವದಂದು ಸ್ವಸ್ತಿವಾಚನ । ಗಳನು ತಾಪಸರೊಲಿದು
ಪೇಳುತ್ತಿ । ರಲದನಾಲಿಸುತಾ ವಸಿಷ್ಠಮುನೀಂದ್ರನಾದರದೆ ॥ ಹಲವುಬ
ಗೆಯುಹ ಮಂಗಳಾಷ್ಟಕ । ಗಳನು ತಾನುಚ್ಚರಿಸಿ ಸಂತಸ । ದೊಳು
ತೆಗೆಮುತೆರೆಯನ್ನು ಜೀರಕ ಗುಡವನಿರಿಸಿದನು ॥ ೩೩ ॥ ವೇದವಿಧಿಗನುಸಾ
ರವಾಗಿಯೆ । ಸಾದರದೊಳಾ ಮುನಿವಸಿಷ್ಠನು । ಮೇದಿನೀಸುತೆ ಸೂನು
ಗಳೆನಿಸುವ ಕುಶಲವರಿಂಗೆ ॥ ಮೇದಿನೀಸುರ ರವನಿಪಾಲಕ । ರಾದಿ ಯಾ
ದವ ರೊಪ್ಪುವಂದದೊ । ಳಾದಿಯಿಂದೆ ವಿವಾಹಕರ್ಮವನೆಲ್ಲ ಮಾಡಿಸಿದ
॥ ೩೪ ॥ ಬಳಿಕುಭಯ ದಂಪತಿಗಳನು ಮುನಿ । ಕುಲತಿಲಕನಂದೆರಡು
ವೇದಿಕೆ । ಗಳೊಳು ನಿಲ್ಲಿಸಿ ಯಕ್ಷತಾರೋಪಣೆಯನಾಗಿಸುತ ॥ ಪಲವುತ
ರವಹ ವೇದಮಂತ್ರಂ । ಗಳನು ಪೇಳ್ದಗ್ನಿಯೊಳಗವರಿಂ । ದೊಲಿದು
ಲಾಜಾಹೋಮವನು ಮಾಡಿಸಿದನಾಬಳಿಕ ॥ ೩೫ ॥ ವರವಸಿಷ್ಠಮುನೀ
ಶ್ವರನು ತಮು । ಗರುಹಿದಂದದೊಳಾ ಕುಶಲವರ । ವರವರ ಸತಿಗಳೊ
ಡನೆ ಹೋಮಸ್ಥಾನಲಗೆ ಮಣಿದೆರಗಿ ॥ ಪರಮಸಂಮದದಿಂದೆ ವೈಶ್ವಾ ।
ನರನ ಸುತ್ತಲು ಮೂರುಸಲ ತಾ । ವ್ತಿರುಗಿದರು ಮಂತ್ರಗಳನುಚ್ಚರಿ
ಸುತ್ತ ಭಕ್ತಿಯಲಿ ॥ ೩೬ ॥ ಆದುದವರ ವಿವಾಹವೈಭವ । ವೈದನಯು

ದಿವಸದೊಳು ಮುನಿವರ । ನಾದರದೊಳಾಗಿಸುತ ನಾಕಬಲಿಯು ಮಹೋ
ತ್ಸವವ ॥ ವೇದವಿಹಿತ ವಿಧಾನದಿಂ ಹೋ । ಮಾದಿಗಳ ನಂದನುದಿನ ಪತಿ
ವಿ । ನೋದದೊಳು ಮಾಡಿಸಿದನೆಲ್ಲರ ಮನವನೊಪ್ಪಿಸುತ ॥ ೩೭ ॥
ಮೊದಲುದಿನ ದಿಂದೆಂಟನೆಯ ದಿವ । ಸದ ಕೊನೆತನಕ ಭೂರಿಕೀರ್ತಿನೆ ।
ರೆದಖಿಳ ಮಹೀಪಾಲಕರಿಗೆ ಸಮಸ್ತ ವಿಪ್ರರಿಗೆ ॥ ಸದಯದಿಂದಲೆ ಹಗಲಿ
ರುಳು ದಣಿ । ಸಿದ ನುಪಚರಿಸಿ ನಲಿದು ಮೃಷ್ಟಾ । ನ್ನದೊಡನೆ ಬಹು
ಳ ಭಕ್ಷ್ಯ ಭೋಜನಗಳನು ಮಾಡಿಸುತ ॥ ೩೮ ॥ ಅವರವರ ಮರ್ಯಾ
ದೆಗಳಿಗೆ ಸ । ಮಮೆನಿಪಂತಾ ಭೂರಿಕೀರ್ತಿಯು ॥ ರವಿಕುಲೋತ್ತಮ
ರಾಘವೇಶ್ವರನು ವೊಲಿದತಿಹಿತದೆ ॥ ಅವನಿಪಾಲಕರೆಲ್ಲರಿಗೆ ತಾ । ವ್ವವ
ದೊಳತ್ತು ಪಚರಿಸುತ್ತಿದ್ದರು । ವಿವಿಧವಸ್ತ್ರಾಭರಣಗಳ ನತ್ಯಧಿಕಹರ್ಷ
ದಲಿ ॥ ೩೯ ॥ ಧರಣಿಸುರರಿಗಖಿಳ ಮುನೀಂದ್ರರಿ । ಗೆರಗಿ ಕೊಟ್ಟರು ವಿ
ವಿಧವಸ್ತ್ರಾ । ಭರಣ ರತ್ನಾದಿಗಳ ನಾದರದೊಳುಪಚರಿಸುತ್ತ ॥ ದೊರೆಗ
ಳೆಲ್ಲರು ಬಳಿಕ ರಘುಭೂ । ವರನ ಪದಕೆರಗುತ್ತ ಪೋದರ । ವರವನಿ
ವಾಸಂಗಳಿಗೆ ಬಂದಂತೆ ಶೀಘ್ರದಲಿ ॥ ೪೦ ॥ ಬಂದು ಲಕ್ಷದ ವಾರಣಂಗಳನಿ ।
ನೊಂದು ಲಕ್ಷದ ರಥಗಳನು ಮ । ತ್ತೊಂದು ಲಕ್ಷದ ಪಲ್ಲಕಿಗಳನು ಶೀ
ಘ್ರಗಮನವನು ॥ ಹೊಂದಿ ಕಂಗೊಳಿಪೈದು ಲಕ್ಷದ । ಸುಂದರಹಯಂಗ
ಳನು ಸಂಮದ । ದಿಂದೆ ಕೊಟ್ಟನು ಭೂರಿಕೀರ್ತಿ ಕುಶಲವರಿಬ್ಬರಿಗೆ
॥ ೪೧ ॥ ಕನಕಮಯಪಾತ್ರಂಗಳನು ಮೋ । ಲೆನಿಪ ಪೀತಾಂಬರಗಳನು
ಪಾ । ವನತರದ ವಸ್ತ್ರಾಭರಣಗಳ ನುತ್ತಮೋತ್ತಮದ ॥ ವಿನುತ ಕಂ
ಬಳಗಳನು ದಾಸೀ । ಜನಗಳನು ಸಂತಸದೊಳಿತ್ತನು । ಮನುಜಪಾಲಕ
ಪಾರಿತೋಷಕಮೆನಿಸುತಳಿಯರಿಗೆ ॥ ೪೨ ॥ ಅಳಿಯರಿರ್ವರ ನಡಿಗಡಿಗೆ
ತಾ । ನೊಲಿದು ಮನ್ನಿಸುತಾನೃಪಾಲಕ । ಬಳಿಕ ಚಂಪಿಕೆ ಸುಮಿತ್ರಿಗಳ
ನಾ ಕುಶಲವರಸಹಿತ ॥ ಕಳುಹಿಕೊಟ್ಟನು ನೀತಿ ವಾಕ್ಯಂ । ಗಳನು
ತಿಳಿಸುತ ಮೈದಡವಿ ಕಂ । ಗಳೊಳು ಕಂಬನಿವಿಡಿದು ನೋಡುತ ಪಥದೊ
ಳಡಿಗಡಿಗೆ ॥ ೪೩ ॥ ಸತಿಸಹೋದರರೊಡನೆ ರಘುಭೂ । ಪತಿ ಕುಶಲವ
ರುಗಳ ನವರವರ । ಸತಿಗಳಸಹಿತ ದಿವ್ಯರಥದೊಳು ಕುಳ್ಳಿರಿಸಿಕೊಂ
ಡು ॥ ಅತಿವಿಭವದಿಂದಾ ನೃಪನನೊಲಿ । ಸುತ ಭರದೊಳೈತಂದನಾ ಜ
ನ । ತತಿಯುಮಧ್ಯದೊಳಂದಯೋಧ್ಯಾಪುರಿಗೆ ಶೀಘ್ರದಲಿ ॥ ೪೪ ॥ ಇರ
ಲಿರಲು ಬಳಿಕೊಂದುದಿನ ರಘು । ವರನು ಬಂದನು ಕುಂಭಸಂಭವ ।
ನುರುತರದ ಪುಣ್ಯಾಶ್ರಮಕೆ ಭೂನಂದನೆಯಸಹಿತ ॥ ಅರಿದಗಸ್ತ್ಯಮು

ನೀಂದ್ರನತ್ಯಾ । ದರದೊಳಾ ರಘುಭೂವರನ ನೃಪ । ಚರಿಸಿ ಕುಳ್ಳಿರಿಸಿ
ದನು ಮನ್ನಿಸುತುಚಿತ ಪೀಠದಲಿ ॥ ೪೫ ॥ ಮುನಿಕುಲೋತ್ತಮನೊ
ಡನೆ ತನ್ನೆಲೆ । ವನೆಯೊಳುನ್ನತ । ಭಕ್ತಿಯಿಂದೆಷ । ರನಮಡದಿಯೆನಿಪ
ನ್ನಪೂರ್ಣೆಯನೊಲಿದು ಜಾನಿಸಲು ॥ ಮನವೊಲಿದು ದಾಕ್ಷಾಯಿಣಿಯು
ಗ । ಸ್ತ್ಯನಿದಿರೊಳು ನಿಂದಿತ್ತು ಪಾಯಸ । ವ ನಿರಿಸಿದ ಬಟ್ಟಲನು
ಕೂಡೆ ಯುದ್ವೃಕ್ಷ್ಯನಿಸಿದಳು ॥ ೪೬ ॥ ಬಳಿಕ ಲೋಪಾಮುದ್ರೆಸಂತ
ಸ । ದಳೆವು ಪಾತ್ರೆಯೊಳಿದ್ದ ಪಲತೆರ । ಗನಿಸಿದ ಶಾಲ್ಯನ್ನ ಭಕ್ಷ್ಯಂಗ
ಳನು ಕೈಕೊಂಡು ॥ ನೆಲದಣುಗಿ ಗಾಗಿಸುತ ಮುದವನ । ಖಿಳ ಮು
ನೀಂದ್ರರ ಸಹಿತ ಭಾಸ್ಕರ । ಕುಲತಿಲಕನಿಗೆ ಬಡಿಸಿ ಭೋಜನ ಮಾಡಿಸಿ
ದಳಂದು ॥ ೪೭ ॥ ಮುನಿಯಗಸ್ತ್ಯನ ನಂತರದೊಳಾ । ಮನುಕುಲೋ
ತ್ತಮ ರಾಘವನು ಮೊದ । ಲೆನಿಸಿದ ಸಮಸ್ತ ಮುನಿಸಂದೋಹವನು
ಮನ್ನಿಸುತ ॥ ವಿನುತ ಚಂದನ ಪುಷ್ಪ ವೀಳೆಯ । ಘನಸುವಸ್ತ್ರಂಗ
ಳನು ಕೊಟ್ಟತಿ । ವಿನಯ ವಚನಗಳಿಂದೆ ತೃಪ್ತಿಪಡಿಸಿದ ನಡಿಗಡಿಗೆ
॥ ೪೮ ॥ ಕರುಣದಿಂದೀಕ್ಷಿಸುತ ತಾಪಸ । ವರನು ಕೊಟ್ಟನು ರಾಘವೇಂ
ದ್ರನಿ । ಗುರೆ ವಿರಾಜಿಪ ರತ್ನ ನಿರ್ಮಿತ ಕಂಕಣಂಗಳನು ॥ ಧರಣಿಜಾತೆ
ಗೆ ಕೊಟ್ಟನಾಮುನಿ । ವರನು ಥಳಥಳಿಸುತ್ತ ಕಂಗೊಳಿ । ಪೆರಡು ದಿವ್ಯ
ಸುಕುಂಡಲಂಗಳ ನೊಲಿದು ಮನ್ನಿಸುತ ॥ ೪೯ ॥ ಮುನಿಕುಲೋತ್ತ
ಮನೆನಿಪಗಸ್ತ್ಯನ । ಮನವನೊಪ್ಪಿಸುತೊಡನೆ ರಘುನಂ । ದನನು
ಬಂದನು ದಂಡಕಾವನ ಕವನಿಸುತೆ ಸಹಿತ ॥ ವನದ ಮಧ್ಯದೊಳೈತರು
ತತ । ನ್ನಿನಿಯಳಿಗೆ ನಲವಿಂದೆ ತೋರಿಸಿ । ದನುಪಲವುಬಗೆಯಾ ವಿನೋ
ದಂಗಳನು ಮುಂದುಗಡೆ ॥ ೫೦ ॥ ಬರುತ ಕಂಡನು ಕೂಡೆಪಂಚಾ ।
ಪ್ಸರಸೆನಿಪ ಪೆಸರಿಂದೆಸೆವ ಪು । ಷ್ಕರಿಣಿಯೊಂದನು ರಾಘವೇಶ್ವರನಾ
ವನವನಡುವೆ ॥ ಮೆರೆವ ಕಾಸಾರದ ದಡದೊಳೆ । ಲ್ಲರ ಸಹಿತ ತಾಂ ರಾ
ತ್ರಿ ವಸಿಸು । ತ್ತರಸಿಯೊಡನೆ ಮಲಗಿದನುತ್ತಮನೆನಿಪ ಮಂಚದಲಿ
॥ ೫೧ ॥ ಮಲಗಿಕೊಂಡೀಕ್ಷಿಸಿದ ನಾ ಮನು । ಕುಲತಿಲಕ ನಪ್ಸರಸರೆಂ
ಬಾ । ಲಲನೆಯರ ಘನನೃತ್ಯವನತಿ ವಿನೋದವನುತಾಳ್ದು ॥ ಪಲವುಬಗೆ
ಯಿಂಗೆಸೆವ ರಾಗಂ । ಗಳನು ಕೇಳಿದ ನಲ್ಲಿಸಂತಸ । ದಳೆದು ಜಾನಕಿ
ಸಹಿತ ಘನಲೀಲಾವಿನೋದದಲಿ ॥ ೫೨ ॥ ವರಮುನೀಂದ್ರನ ಕರುಣೆ
ಯಿಂದ । ಪ್ಸರ ಸರಾಸತ್ಸಂಗತ್ರಿಯನಾ । ದರಿಸಿ ಕೇಳುತ ವಿಸ್ಮಯವ
ನಾಂತಾ ರಘೂತ್ತಮನು ॥ ಪರಮಕರುಣಾತಿಶಯದಿಂದುಪ । ಚರಿಸುತವೆ

ರೆಲ್ಲರ ನಯೋಧ್ಯಾ । ಪುರವರಕೆ ಕರೆತಂದನಾಧರಣೀಸುತೆಯುಕೂಡೆ ॥ ೫೩ ॥ ಪತ್ರಿಗೆ ಸಂತೋಷವನೆಸಗುತಾ । ಕ್ಷಿತಿಸುತೆ ಮಹಾಪ್ರೇಮದಿಂದೆ ಸ । ತತ ಪಧಿಕಸೌಖ್ಯಗಳ ನಡಿಗಡಿಗನುಭವಿಸುತಂದು ॥ ವಿತತ ವಿಭವಂಗಳನು ನೆರೆನೋ । ಡುತ ಪಸಿಸುತ್ತಿದ್ದಳು ನಿರಂತರ । ಹಿತದೊಳಾನಂದವಡಿಸುತಖಿಳ ಜನರನುಪಚರಿಸಿ ॥ ೫೪ ॥

ಇಂತು ನಲವತ್ತೊಂದನೆಯ ಅಧ್ಯಾಯ ಸಂಪೂರ್ಣವು.

ಪದ್ಯಗಳು ೨೩೧೩.

ನಲವತ್ತೆರಡನೆಯ ಅಧ್ಯಾಯ

ಸೂಚನೆ ॥ ಬಂದ ದುರ್ವಾಸಮುನಿಯಂ ನಲ ।
ವಿಂದುಪಚರಿಸಿ ವಿರಹತಾಪದೊ ।
ಳಂದು ತಪಿಸುತ ಮತ್ತೆ ಬಂದಳು ಲಂಕೆಗವನಿಜೆಯು ॥

ಹರುಷದಿಂದಿಂತಿರಲು ಕಾಲಾಂ । ತರದೊಳೊಂದಾನೊಂದುದಿನ ರಘು । ವರ ನರಮನೆಯ ಮುಂಮುಗಡೆ ದುರ್ವಾಸಮುನಿವರನು ॥ ಭರದೆ ಬಂದನು ತನ್ನನೊಲಿದುಪ । ಚರಿಸಿ ಸಂತುಷ್ಟಿವಡಿಸುತ್ತಿ । ತರುತಲಿರ್ಪರವತ್ತುಸಾವಿರ ಶಿಷ್ಯರೊಡಗೂಡಿ ॥ ೧ ॥ ಬಾಗಿಲೊಳು ನಿಂದಾ ಮುನಿಪನಂ । ಬೇಗನೆ ಚರರು ಕಂಡು ಬಂದಾ । ರಾಘವೇಂದ್ರನ ಪದಕೆರಗಿ ಬಿನ್ನೈಸಲತಿಭರದೆ ॥ ಆಗಲಾ ಮುನಿಪಾನೆಡೆಗೆ ಸ । ರಾಗದಿಂದೈತಂದೆರಗಿ ಬಲು । ಬೇಗನೆ ರಘೂದ್ವಹನು ಕರೆತಂದನರಮನೆಯೊಳಗೆ ॥ ೨ ॥ ಸಮುಚಿತಾಸನದಲ್ಲಿ ಕೂಡಿಸಿ । ನಮಿಸಿದುರ್ವಾಸಮುನಿಪನ ಪದ । ಕಮಲ ಯುಗಕಂದರ್ಘ್ಯ ಪಾದ್ಯಾಚಮನಗಳನಿತ್ತು ॥ ದ್ಯುಮಣಿಕುಲತಿಲಕನತಿ ಭಕ್ತಿಯೊ । ಳಮಲ ವಚನಗಳಿಂದುಪಚರಿಸಿ ವಿಮಲಮನದಿಂದಾದರಿಸಿದನು ಮುನಿಕುಲೋತ್ತಮನ ॥ ೩ ॥ ಪರಸಿ ಮಂತ್ರಾಕ್ಷತೆಯನಿತ್ತತಿ । ಕರುಣೆಯಿಂದೀಕ್ಷಿಸುತ ರಘುಭೂ । ವರನಿಗಿಂತೆಂದು ನುಡಿದನು ಕೇಳು ರಾಘವನೆ ॥ ಧರಣಿಯೊಳು ನಾನೊಂದುಸಾವಿರ । ವರುಷದಿಂದಾಚರಿಸಿ ದತಿದು । ಷ್ಕರಮೆನಿಸಿಮುಪವಾಸ ವ್ರತಪೂರ್ತಿಯಾಗಿಹುದು ॥ ೪ ॥ ನನಗೆ ಹಸಿವಾಗುತಿದೆ ರಘುನಂ । ದನ

ನೀಂ ಭೋಜನವನಾಗಿಪು । ದೆನುತ ನಿನ್ನನು ಕೇಳ್ವೆನೊಂದು ಮುಹೂರ್ತದೊಳಗಾಗಿ ॥ ಅನಲಚಿಂತಾಮಣಿ ಸುರಭಿಗಳ । ಘನಸಹಾಯವನುಳಿದು ನೀನೆನ । ಗನುಗೊಳಿಸಿ ಭೋಜನವನಾಗಿಸು ಬೇರೆವಿಧದಿಂದ ॥ ೫ ॥ ಜನರು ಕಾಣದಿರುವ ಕುಸುಮಗಳ । ನೆನಗೆ ನೀಂ ತರಿಸೀವುದೀಗ ಹ । ರೆನನೊಲಿದು ನಾನರ್ಚಿಸಲು ಹಾಗಲ್ಲದಿರ್ದೊಡೆಯುಂ ॥ ವನಕೆ ಪೋಗುವೆನೆಂದು ಮುನಿವರ । ನೆನಲು ನಿಮ್ಮಭಿಲಾಷೆಯಂ ತೀ । ಕ್ಷಣವೆ ನೆರವೇರಿಸುವೆ ನೆಂದೊಪ್ಪಿಸಿದನಾರಾಮ ॥ ೬ ॥ ಸ್ನಾನಕೋಸುಗ ಮುನಿವರನು ಸರ । ಯೂನದಿಗೆ ಪೋದಾಕ್ಷಣದೊಳಂ । ದಾನರೇಂದ್ರನು ಲಕ್ಷ್ಮಣನಕೈಯಿಂದೆ ಪತ್ರವನು । ಸಾನುರಾಗದೆ ಬರೆಯಿಸುತದನು । ಬಾಣದ ಬುಡಕೆ ಕಟ್ಟಸೇರಿಸಿ । ತಾನುಬಿಟ್ಟನು ಶಕ್ರನಸವಿಧಪಕತಿಶೀಘ್ರದಲಿ ॥ ೭ ॥ ದೇವಪುರಿಗೈತಂದು ಘನಶರ । ಮಾವಿಬುಧಪಾಲಕನ ಸಭೆಯೊಳ । ತೀವಜವದಿಂದಿರದೆ ಬಿದ್ದುದು ಕೂಡೆಮುಂದುಗಡೆ ॥ ದೇವಪತಿಕಾಣುತ್ತ ಬಾಣವ । ನಾವನದಿದೆಂದಳುಕುತ್ತಾ ರಘು । ಭೂವರನ ನಾಮವನು ಕಂಡಾತನದೆನುತ ತಿಳಿದ ॥ ೮ ॥ ತಿಳಿದು ರಾಮನ ಪತ್ರವನು ಕೊಂ । ಡೊಲವಿನಿಂದಮರೇಂದ್ರನತಿ ಭರ । ದೊಳದನೋದಿ ಸಮಸ್ತ ದಿವಿಷದರೊಡನೆ ಯೋಚಿಸುತ ॥ ಬಳಿಕ ಸುರತರು ಪಾರಿಜಾತಂ । ಗಳನು ತನ್ನ ವಿಮಾನದೊಳಿರಿಸಿ । ಕೊಳುತ ಬಂದನು ರಾಮಚಂದ್ರನಬಳಿಗಮರರೊಡನೆ ॥ ೯ ॥ ಬಂದು ಘನದಿವ್ಯಾಸನದೊಳ್ ಕುಳಿ । ತಿಂದೆ ಕುಳಿತಮರೇಂದ್ರನಾ ರಘು । ನಂದನನ ನುರೆಹೊಗಳುತತಿ ಸಂತೋಷವನು ತಾಳ್ದು ॥ ಮುಂದಿರಿಸಿಕೊಟ್ಟನು ಸಭೆಯೊಳತಿ । ಸುಂದರವೆನಿಸಿ ಮಾನವರ ನಾ । ನಂದವಡಿಪಾ ಪಾರಿಜಾತ ಸುಕಲ್ಪವೃಕ್ಷಗಳ ॥ ೧೦ ॥ ಅನಿತರೊಳು ದುರ್ವಾಸಮುನಿಬಂ । ದನು ಸದನಕೆ ಸ್ನಾನವನೆಸಗಿ । ವಿನುತ ಸರಯೂನದಿಯೊಳಾತನ ಶಿಷ್ಯರೊಡವೆರಸಿ ॥ ವಿನುತ ಪೀಠದೊಳಾ ಮುನಿಕುಲೇಂ । ದ್ರನನು ಕುಳ್ಳಿರಿಸುತ್ತ ರಘುವೀ । ರನೊಲಿದಿತ್ತನು ಪಾರಿಜಾತಕುಸುಮಗಳನುಕೂಡೆ ॥ ೧೧ ॥ ಪಾರಿಜಾತ ಕುಸುಮಗಳಿಂದೆ ಪು । ರಾರಿಯನು ದುರ್ವಾಸಮುನಿಪನು । ದಾರಭಾವದೊಳರ್ಚಿಸಿದ ನತ್ಯಧಿಕಭಕ್ತಿಯುಲಿ ॥ ಧಾರಿಣೀಸುತೆ ಸೋದರರಸಹಿ । ತಾರಘುವರ ನಮರರನೆಲ್ಲವಿ । ಚಾರಪೂರ್ವಕವಾಗಿ ಪೂಜೆಸಿದನತಿಹರ್ಷದಲಿ ॥ ೧೨ ॥ ಧರಣಿಸುತೆ ಲಕ್ಷ್ಮಣರಿಗಾ ರಘು । ವರನು ನೇಮಿಸಿದನು ಸಮಸ್ತ ಸು । ರರಿಗೆ ನೀವು ಬಡಿಸುವುದತ್ಯಾದರದೊಳೆಂದೆನುತ ॥ ವರ

ಸುರತರುವು ಪಾರಿಜಾತಗ | ಳೆರಡ ನರ್ಚಿಸಿ ಜಾನಕಿಯು ಮರ | ತರುವೆ ನುರೆಕೊಂಡಾಡಿದಳಿರಿಸಿ ಕೋಟಿಪಾತ್ರೆಗಳ || ೧೩ || ಸುರರಿಗಿಷ್ಟಾರ್ಥಂ ಗಳನು ಕೊಡು | ತಿರುವೆ ನೀನವನೀರುಹಂಗಳ | ಗರಸನಾಗಿಹೆ ನೀನು ಪಾಲ್ಗಡಲೊಳುದಿಸಿಹೆ ನೀನು | ಸುರಮಹೀಜವೆ ತನ್ನ ಶಿಷ್ಯನಿ | ಕರ ದೊಡನೆ ಮಂದಿರಕೆ ನಡೆತಂ | ದಿರುವ ದುರ್ವಾಸಮುನಿಯುಂದಣಿಸೆಂದು ಬೇಡಿವಳು || ೧೪ || ಪಡೆದಖಿಳ ಮೃಷ್ಟಾನ್ನಭಕ್ಷ್ಯಗ | ಳೊಡನೆ ಕಂ ಗೊಳಿಸುತ್ತಿಹ ಪಾತ್ರೆಗ | ಳೆಡೆಗೆ ಜಾನಕಿ ಬಂದವುಗಳೆಲ್ಲವನು ತೆಗೆದಿರಿ ಸಿ || ತಡವಮಾಡದೆ ಸಕಲ ನಿರ್ಜರ | ರೊಡವೆರಸಿ ಕುಳಿತಾ ಮುನಿಪತಿ ಗೆ | ಬಡಿಸಿವಳು ಸೊಸೆತಂಗಿಯರ ಸಹಿತಧಿಕಹರ್ಷದಲಿ || ೧೫ || ರಾಮ ಭದ್ರನ ಬಿನ್ನಪಂಗಳ | ನಾಮುನಿವರೇಣ್ಯನೊಲಿದಾಲಿಸು | ತಾ ಮುನಿಸ ಮೂಹದೊಡನೆ ಸಕಲ ನಿರ್ಜರರಸಹಿತ || ತಾಮನದಣಿಯೆ ಭೋಜನ ಮೆಸಗು | ತಾ ಮನುಕುಲೋತ್ತಮನು ಕೊಟ್ಟತಿ | ಕೋಮಲ ಸು ತಾಂಬೂಲ ದಕ್ಷಿಣೆಯುಕೊಳು ತಿಂತೆಂದ || ೧೬ || ಧರಣಿಪಾಲಕ ಕೇಳು ನೀಂ ದಶ | ಶಿರನ ಸಂಹಾರಾರ್ಥಕಾಗವ | ತರಿಸಿರುವಮವೆನು ಜಾವತಾರದೊ ಳೀ ಮಹೀತಲದೆ || ನಿರುತ ವಿಾಜಗಕೀಶ್ವರನೆನಿಸು | ತಿರುವೆ ನೀಂ ಹದಿನಾಲ್ಕು ಲೋಕವ | ನಿರಿಸಿಕೊಂಡಿಹೆ ನಿನ್ನುದರದೊಳು ಸರ್ವಕಾ ಲದಲಿ || ೧೭ || ಜನಸಮೂಹಕೆ ನಿನ್ನ ಪೌರುಷ | ವನುತಿಳಿಸಬೇಕೆನು ತ ಯಾಚಿಸಿ | ದೆನು ವಿನುತ ಚಿಂತಾಮಣಿಯು ನಲಕಾಮಧೇನುಗಳು || ನಿನಗೆ ನಿರ್ಮಿಸಿಕೊಡದ ಪರಿಯೊ | ಳ್ಘನತರದ ದಿವ್ಯಾನ್ನವನು ನಾಂ | ಜನರು ಕಾಣದ ಸುಮನಸಂಗಳ ನಿಂತುಕೇಳಿದೆನು || ೧೮ || ವೀರರಾಘ ವಕೇಳು ನಿನ್ನ ವಿ | ಚಾರವನು ತ್ರಿಳಿಯಲ್ಕವನಿಯೊಳ | ಗಾರಿಗುವಸಾಧ್ಯವೆನಿಪ್ಪುದು ಪರಿಭಾವಿಸುತತಿಳಿದು || ಕ್ಷೀರಸಾಗರದೊಳು ಮುಳು ಗುತಿರೆ | ಭೂರಿಮಂದರ ಶೈಲವ ದನು | ದ್ಧಾರವಮಾಡಿದೆ ನೀನು ಘನಕೂ ರ್ಮಾವತಾರನಲಿ || ೧೯ || ಸಿರಿಯುಚಂದ್ರನು ಕಾಮಧೇನುವು | ಸುರಮ ಹೀಜವು ಕೌಸ್ತುಭವು ಅ | ಪ್ಸರರು ಧನ್ವಂತರಿಯುು ಮುಚ್ಚೈಶ್ರವಸು ಮದ್ಯಗಳು || ಹಿರಿಯುಲಕ್ಷ್ಮಿಯುು ಕಾಲಕೂಟವು | ಸುರುಚಿರಸುಧೆ ಯುು ಪಾರಿಜಾತವು | ಸುರಪನೈರಾವತಗಳವು ನಿನ್ನಿಂದೆ ಹೊರಟಹವು || ೨೦ || ಅಮರರೆಲ್ಲರು ನಿನ್ನ ಸೇವಮವ | ನಮಲಮನದಿಂದೊಲಿದು ಕೇಳ್ವರು | ಕಮಲನೇತ್ರನೆ ನಿನಗೆ ದುರ್ಘಟವೆಂಬುನೊಂದಿಲ್ಲ || ವಿ ಮಲಮನದಿಂದಖಿಳ ಮಾನವ | ಸಮುದಯಕೆ ವಿಸ್ಮಯುವನೀಮುತ |

ವಿಮಲಭಾವದೊಳಾಗಿಸಿದೆ ನೀನೆನ್ನಭೀಷ್ಟವನು ॥ ೧೧ ॥ ಆವನರನಿಂತೆನಗೆ ಪೂರ್ವದೊ । ಳೀ ವಸುಧೆಯೊಳು ತೋರಿಸಿಲ್ಲ ಮ । ಹೀವರನೆ ನೀನೆನಗೆ ಸದ್ಗತಿಯನೊಲಿದಾಗಿಸುವೆ ॥ ಸಾವಧಾನದೆ ಸೃಷ್ಟಿಮಾಡಿಸೆ । ಕಾವುತಿಹೆ ಹದಿನಾಲ್ಕುಲೋಕವ । ಹೇವರಿಸಿ ನಾಶವನು ಮಾಡುವನಾಗಿರುವೆ ಮುಂದೆ ॥ ೧೨ ॥ ಮನ್ನಿಸೆಲೆ ರಘುನಂದನನೆ ನೀ । ನೆನ್ನತಪ್ಪಿತಗಳ ನೆನುತ ಸಂ । ಪನ್ನಮತಿ ದುರ್ವಾಸಮುನಿಪೊಗಳುತ್ತ ಕೈಮುಗಿದು ॥ ಸನ್ನುತ ವಚನದಿಂದೆ ರಾಘವ । ನನ್ನು ಸಂತಸವಡಿಸಿ ಬಂದನು । ತನ್ನ ವಿಮಲ ತಪೋವನಕೆ ನಿಜಶಿಷ್ಯರೊಡವೆರಸಿ ॥ ೧೩ ॥ ತೆರಳಿದರು ಸುರರೆಲ್ಲ ಸಗ್ಗಕೆ । ಧರಣಿಪತಿ ರಾಘವನ ನೇಮವ । ಶಿರದೊಳಾನುತ ಕಲ್ಪವೃಕ್ಷದ ಮೂಲಭಾಗದೊಳು ॥ ಮೆರೆವ ಮಣಿಪರ್ಯಂಕದೊಳು ರಘು । ವರನು ತಾನನುಭವಿಸುತಿದ್ದನು । ಪರಿಪರಿಯ ಭೋಗಂಗಳನು ಸತಿಸಹಿತ ಹರ್ಷದಲಿ ॥ ೧೪ ॥ ಧಾರಿಣಿಯೊಳಾ ಪಾರಿಜಾತ ಮ । ಹೀರುಹದ ಶಾಖಾಶಕಲಗಳ । ಪಾರಿಜಾತ ಮಹೀಜಗಳೆನಿಸಿ ತೋರ್ಪುದಿದುವರೆಗೆ ॥ ಸಾರತರವೆಂದೆನಿಪ ಕಲ್ಪಮ । ಹೀರುಹದ ಭಾಗಗಳ ಬಗೆಯ । ಲ್ಧರಿಣಿಯೊಳಶ್ವತ್ಥ ವೃಕ್ಷಗಳೆನಿಸಿಕೊಂಡಿಹವು ॥ ೧೫ ॥ ಇರುತಿರಲು ಬಳಿಕೊಂದುದಿನ ರಘು । ವರನಬಳಿಗೆ ವಿಭೀಷಣನು ಬಂ । ದೆರಗಿ ಕೈಮುಗಿದಿತ್ತು ಕಪ್ಪವನತಿ ವಿನಯದಿಂದೆ ॥ ಪರಮಖೇದವನಾಂತರುಹಿದನು । ದುರುಳ ಪೌಂಡ್ರಕನೆಂಬ ರಜನೀ । ಚರನದೆಸೆಯಿಂ ತನಗೆ ಬಂದೊದಗಿದತಿ ಸಂಕಟವ ॥ ೧೬ ॥ ಜನಪಕೇಳಂದು ಮಡಿದನಿ ಕುಂ । ಭನ ಕುಟುಂಬಿನಿ ಹೆತ್ತಳು ಬಹುಳ । ದಿನಕೆ ಪೌಂಡ್ರಕನೆಂಬಸುರನನು ತಾಳ್ದುಗರ್ಭವನು ॥ ದನುಜನವನಾ ಪಾಲ್ಗಡಲಿನಾ । ಸನಿಹದೊಳೆಸೆವ ವಿನುತಶೋಣಿತ । ಟನಿಯ ತೀರದೊಳಿರುವ ಮಾಯಾಪುರವರಕೆ ಪೋಗಿ ॥ ೧೭ ॥ ನೂರುತಲೆಗಳನ್ನೈದುತವನಿ । ನ್ನೂರು ಕೈಗಳ ನಾಂತೆಸೆವ ಬಹು । ಶೂರನಹ ಶತಕಂಠರಾವಣನೊಡನೆ ಸಖ್ಯವನು ॥ ತಾರಚಿಸಿ ಲಂಕಾಪುರಿಗೆ ಬಂ । ದಾರಜನಿಪನ ನೆರವಿಯಿಂದಲೆ । ದಾರುಣವೆನಿಪ ಯುದ್ಧರಂಗದೊಳೆನ್ನ ಸೋಲಿಸಿದ ॥ ೧೮ ॥ ಒಡನೆ ಲಂಕಾಪುರಿಗೆ ನಡೆತಂ । ದೊಡೆಯನಾಗುತ ಲಂಕೆಯಿಂದೆ । ಹೊರಡಿಸಿದನು ಪೌಂಡ್ರಕನೆನುತ್ತ ವಿಭೀಷಣನರುಹಲು ॥ ಕಡುಜವದೆ ರಘುನಾಥನಾತನ । ನುಡಿಯನಾಲಿಸುತತಿಭರದೊಳಾ । ಪೊಡವಿಯಣುಗಿಯಕೂಡೆ ಲಂಕಾಪುರಕೆ ನಡೆತಂದ ॥ ೧೯ ॥ ಬಂದುಘನಸಂಗ್ರಾಮದೊಳು ರಘು । ನಂದನನು ಶತಕಂ

ಠರಾವಣ । ನೊಂದುಶರದಿಂದೆಚ್ಚು ಮೂರ್ಛೆಗೆಡಹಿದ ಸಿಳೆಯೊಳಗೆ ।
ಸುಂದರಾಂಗನೆ ಸೀತೆ ರಣದೊಳ । ಗೊಂದು ಬಾಣವ ನೆಚ್ಚು ಶೀಘ್ರದೆ ।
ಕೊಂದಳಾಶತಕಂಠರಾವಣ ಪಾಂಡ್ರಕರುಗಳನು ॥ ೩೦ ॥ ವರವಿಭೀಷ
ಣನಿಗೊಲಿದಾ ರಘು । ವರನು ಲಂಕಾರಾಜ್ಯವನು ಕೊ । ಟ್ಟರಸಿಯೊಡನಾ
ಲಂಕೆಯನುಳಿದು ಬಹುಳ ಶೀಘ್ರದಲಿ ॥ ವೆರೆವಯೋಧ್ಯಾಪ್ರರಿಗೆ ಬರುತ
ಲೆ । ಹರುಷದಿಂದೆಲ್ಲರನು ನಿತ್ಯವು ಪೊರೆವುತಿದ್ದನು ಮಕ್ಕಳಂದದೊಳ
ತಿ ಕರುಣೆಯಿಂದ ॥ ೩೧ ॥ ಅಳುಕುತ ವಿಭೀಷಣನು ಮನುಕುಲ । ತಿಲ
ಕನೆಡೆಗೈತಂದು ಚರಣಕ । ಮಲಕೆ ನಮಿಸುತ ಮತ್ತೆ ಕೇಳಿದಿನ ವಾದಸಂ
ತರದೆ ॥ ಜಲಜನೇತ್ರನೆ ಕೇಳು ಬಹುದಿನ । ಗಳಿಗೆ ಪೂರ್ವದೆ ಕುಂಭ
ಕರ್ಣ ನೊ । ಡಲೊಳು ಹುಟ್ಟಿದ ನೊಬ್ಬ ಕುವರನು ಮೂಲಋಕ್ಷದ
ಲಿ ॥ ೩೨ ॥ ಭರದೊಳೀಕ್ಷಿಸಿ ಸುತನ ನಾದಶ । ಶಿರನ ತಮ್ಮನು ಭೀತಿ
ವಡೆದೀ । ತರಳನಿಂದಲೆ ತನಗೆಮರಣವು ಸಂಭವಿಸ್ಪದೆನುತ ॥ ಅರಿದು
ಸೇವಕರಂ ಕರೆಯಿಸುತ । ಮರರಿಪ್ರನುಡಿದನಡವಿಯೊಳು ನೀ । ವಿರಿಸಿ
ಬಹುದೀ ಮಗುವನೊಂದೆಡೆ ಮರದಕೆಳಗೆನುತ ॥ ೩೩ ॥ ಅಸುರನಾಥ
ನನೇಮವನು ತಾ । ಳ್ದಸುರರಾ ಪಸುಳೆಯ ನಡವಿಯೊಳು । ಬಿಸುಟ
ರೊಂದಾನೊಂದು ಮರದಾಕೆಳಗೆ ಸೆಳೆದೊಯ್ದು ॥ ಪಸುಳೆಜೆಳೆದನು
ಜೇನು ಹುಳುಗಳು । ವಸುಧೆಯೊಳಗೊೀಕರಿಸಿ ಸಲೆಪಸ । ರಿಸಿದವ
ಮನಜಲವನು ಪದೆದೀಂಟುತ್ತ ದಿನದಿನವು ॥ ೩೪ ॥ ಅರಸಚಿತ್ತೈಸಣು
ಗನಂದಾ । ಮರದಕೆಳಗಭಿವೃದ್ಧಿಯಾಗು । ತ್ತರಿದು ನಿನ್ನಿಂದಾದ ಲಂಕಾ
ನಾಶವನು ಬಳಿಕ ॥ ಭರವೊಳತಿ ಭೀಕರತಪವನಾ । ಚರಿಸಿ ಮೆಚ್ಚಿಸಿ
ಹೊಂದಿದನು ಪಂ । ಕರುಹಸಂಭವನಿಂದೆ ಮೇಲೆನಿಪಖಿಳ ವರಗಳನು
॥ ೩೫ ॥ ಮುಳಿದು ಗರ್ವಿಸಿ ಹುಂಕರಿಸುತಾ । ಖಳನಿರದೆ ಪಾತಾಳ
ಲೋಕದ । ಖಿಳ ನಿಶಿಚರರಸಹಿತ ಲಂಕಾಪುರಕೆ ನಡೆತಂದು ॥ ತಳುವ
ದೆನ್ನೊಡನಾರುಮಾಸ ಜ । ಗಳವನಾಗಿಸಿ ಸೋಲಿಸುತ ಬಲು । ಬಲು
ಮೆಯಿಂದಲೆ ನನ್ನ ಹೊರಡಿಸಿ ಪೊರೆವಲಂಕೆಯನು ॥ ೩೬ ॥ ಮನುಜಪ
ತಿ ಕೇಳವನ ನೀಮೇ । ದಿನಿಯೊಳೆಲ್ಲರು ಮೂಲಕಾಸುರ । ನೆನುತ
ಪೇಳುವರವನು ನನ್ನನು ಯುದ್ಧಭೂಮಿಯಲಿ ॥ ಕನಲಿನೋಡುತ
ತಿಳುಹಿವನು ನಿ । ನ್ನನು ಮೊದಲು ಕೊಂದಾಬಳಿಕ ರಾ । ಮನನು
ಕೊಲ್ಲುವೆನೆನುತ ಗರ್ಜಿಸಿ ಕಡಿದು ಪಲ್ಗಳನು ॥ ೩೭ ॥ ನನ್ನ ತಂದೆಯ
ಸರಿದವನ ಕುಲ । ವನ್ನು ನಾಶನಮಾಡುವೆನು ನಾ । ನೆನ್ನುತ ಶಪಥ

ಮಾಡಿರುವನಾ ಮೂಲಕಾಸುರನು ॥ ನಿನ್ನ ಮನದೊಳಗೇನು ಯೋಚನೆ ।
ಯನ್ನು ಮಾಡಿಪೆ ರಾಘವೇಂದ್ರನೆ । ಮುನ್ನದನು ಮಾಡೆನುತ ಪೇಳಿದನಾ
ವಿಭೀಷಣನು ॥ ೩೮ ॥ ಆ ನುಡಿಯ ನಾಲಿಸುತ ದೂತರ । ನಾನರೇಂದ್ರ
ನು ಕರೆದು ಪೇಳ್ದನು । ಸೇನೆಸಹಿತ ಸಮಸ್ತ ರಾಜರ ಕರೆತರುವುದೆನು
ತ । ನೀನು ಹೇಳಿದ ಮಾತನು ತಿರದೊ । ಳಾನುತ ಕೆಲರು ಬಂದಿಹರುಕೆ
ಲ । ರಾನುಡಿಯ ನುಲ್ಲಂಘಿಸಿಹರೆಂದರುಹಿದರು ಚರರು ॥ ೩೯ ॥ ಚರರ ಮಾ
ತನು ಕೇಳ್ದು ರಘುಭೂ । ವರನು ಕೋಪಾವಿಷ್ಟನಾಗುತ । ಭರದೆ
ಪೇಳ್ದನು ಮೊದಲು ಕೊಂದಾ ಮೂಲಕಾಸುರನ ॥ ಧರೆಯೊಳೆನ್ನಾಜ್ಞೆ
ಯನು ಮೀರಿರು । ವರಸರನು ಸೋಲಿಸುವೆ ಘನಸಂ । ಗರದೊಳಾನೆಂ
ದೊರೆದು ಲಂಕೆಗೆ ಹೊರಡಲನುವಾದ ॥ ೪೦ ॥ ಇರಿಸಿ ಸೀತಾದೇವಿಯನುಸು
ತ । ಸ್ವರಮನೆಯೊಳಾ ಯೂಪಕೇತುವ । ನಿರಿಸಿ ಪುರರಕ್ಷಣೆಗೆ ಮಿತ್ರಸೈ
ನ್ಯನನು ಕೈಕೊಂಡು ॥ ವರಶುಭಮುಹೂರ್ತದೊಳಗಾ ರಘು । ವರನ
ಚೋನ್ಯೈಯ ನುಳಿದು ಲಂಕಾ । ಪುರಕೆ ಬಂದನು ಪರಿಪರಿ ವಿನೋದಗ
ಳ ನೀಕ್ಷಿಸುತ ॥ ೪೧ ॥ ಸಂಗರಕೆ ರಾಘವನು ಬಂದಿಹ । ಸಂಗತಿಯ
ನರಿವತಿ ಭರದೊಳಾ । ತುಂಗವಿಕ್ರಮ ಮೂಲಕಾಸುರ ನಿರವೆ ಕಾಳಗ
ಕೆ ॥ ಸಂಗಳಿಸಿ ಬಂದೊದಗಿದಾ ಚತು । ರಂಗ ಸೈನ್ಯದ ಸಹಿತಸಿಂದನು ।
ಸಂಗರಕೆ ಲಂಕಾಪುರದ ಹೊರಗಡೆಯ ಭೂಮಿಯಲಿ ॥ ೪೨ ॥ ದನುಜರಿಗೆ
ವಾನರರಿಗಾದುದು । ದಿನಗಳೇಳರತನಕ ಘೋರ ಕ । ದನವಳಿದವಾನರರ
ನಾಪವನಸೂನಸಂಭವನು ॥ ಅನಿಲಜವದಿಂ ದ್ರೋಣಪರ್ವತ । ವನು
ತರುತ್ತ ಬದುಕಿಸುತಿದ್ದನೊ । ಡನೊಡನೆ ಮೊದಲಿನಂತೆ ಸಂಗರ ರಂಗ
ಮಧ್ಯದಲಿ ॥ ೪೩ ॥ ನೆಲಕುರುಳ್ದಿದನೊಂದು ಘನಶರ । ದೊಳವನೀಸಂದ
ನೆಯ ಸುತಕುಶ । ನಳುಕದಾಖಳಮೂಲಕಾಸುರನ ನತಿಶೀಘ್ರದಲಿ ॥
ತಿಳಿದು ಮೂರ್ಛೆಯ ನಾಖಳನು ಭರ । ದೊಳು ಗುಹೆಗೆ ಬಂದನಭಿ
ಳಾದುಧ । ಗಳನು ಹೊಂದಲಿ ರದಭಿಚಾರಕ ಹೋಮವನು ಗೈದು
॥ ೪೪ ॥ ಹೋಮಧೂಮವ ನೀಕ್ಷಿಸಿ ಭರದೊ । ಳಾ ಮನುಕುಲೇಂ
ದ್ರಂಗರುಹಿದನು । ಹೋಮಭಂಗವ ನಾಗಿಸೆಂದೆನುತಾ ವಿಭೀಷಣನು ॥
ರಾಮಚಂದ್ರನೆಡೆಗನಿತರೊಳು ಪಿ । ತಾಮಹನು ನಡೆತಂದರುಹಿದನು ।
ತಾಮಸವನಾಗಿಸದೆ ದೈತ್ಯನ ಮರಣಕಾರಣವ ॥ ೪೫ ॥ ವೀರರಾಘವ
ಕೇಳುವನತಿ ಕ । ಠೋರತಪವನು ಮಾಡಿ ತನ್ನನು । ವೀರರೊಬ್ಬರು
ಯುದ್ಧದಲಿ ಸಂಹರಿಸನಂದದಲಿ । ಭೂರಿವರವ ನನುಗ್ರಹಿಸೆನುತ ।

ಕೋರಿ ನನ್ನನು ಬೇಡಿಕೊಳ್ಳಲು । ದಾರಮನದಿಂದಿತ್ತೆನು ವರವ ನಿವನೆಣಿಸಿದಂತೆ ॥ ೪೬ ॥ ವನಿತೆ ಕೈಯಿಂದೀಖಳನಿಗೆ ಮ । ರಣವೊದಗಬೇಕಾಗಿಹುದೆಲೆ ತ । ವನಕುಲೋತ್ತಮ ಕೇಳು ಹಿಂದಿನನೊಂದು ಕಾಲದಲಿ ॥ ಜನಕನಂದನೆ ಚಂಡಿಯುವಳಂ । ದನುಜರೆಲ್ಲರು ಲಂಕೆಯೊಳು ನಾ । ಶನವನೈದಿದರೆನುತ ನುಡಿದನು ವಿಪ್ರರೆಡೆಗೈದಿ ॥ ೪೭ ॥ ಅವರೊಳೊರ್ವ ಮಹೀಸುರನು ಕಂ । ಡಿವನನೆಂದನು ಮೂಢಕೇಳೀ । ಭುವಿಯೊಳಿಂದಾವಳನು ಚಂಡಿಯೆನುತ್ತ ಪೇಳದೆಯೋ ॥ ಅವಳೆ ನಿನ್ನನು ಕೊಲ್ಲುವಳೆನು । ತ್ತವನಿಗೀಯಲು ಶಾಪವನವನು । ಜವದೆ ಕೊಂದನು ವಿಪ್ರವರನನು ಕೂಡೆ ಕಡುಮುಳದು ॥ ೪೮ ॥ ಅದು ನಿಮಿತ್ತದೆ ವಧಿಸಬೇಕಾ । ಗಿದೆ ಧರಾಸುತೆಯಿಾ ಖಳನನೆಲೆ । ಪದುಮನಾಭನೆ ಕರೆಯಿಸಾಕೆಯ ನಿಲ್ಲಿಗೀಗಲೆ ನೀಂ ॥ ವೊದಲು ಕೊಲ್ಲಿಸಿವನನೆನುತ್ತನು । ಡಿದು ರಘೂತ್ತಮನೊಡನೆ ಬಂದ ತೆ । ರದೆ ಸುರಪುರಿಗೆ ಪೋದನಾ ಕಮಲಾಸನನು ಕೂಡೆ ॥ ೪೯ ॥ ಗರುಡ ಹನುಮಂತರನು ರಘುಭೂ । ವರನು ಕರೆಯಿಸಿ ಬಳಿಕ ಪೇಳಿದ । ನಿರವೆಲೆ ಗರುಡ ನೀನಯೋಧ್ಯಾಪಟ್ಟಣಕೆ ಪೋಗಿ ॥ ಧರಣಿಸುತೆಯಂ ನಿನ್ನ ಬೆನ್ನಿನೊ । ಳಿರಿಸಿಕೊಂಡಿಲ್ಲಿಗತ್ರಿಭರದಿಂ । ಕರೆತಹುದೆನುತ ಪೇಳ್ದು ಬಳಿಕಿಂತೆಂದು ತಿಳುಹಿದನು ॥ ೫೦ ॥ ದಾರಿಯೊಳು ಬಹತೊಂದರೆಗಳ ನಿ । ವಾರಿಸುವ ನೀ ಹನುಮನೆಂದೆನು । ತಾ ರಘುವರನು ಪೇಳ್ದಯೋಧ್ಯೆಗೆ ಕೂಡೆ ಕಳುಹಿದನು ॥ ಧಾರಿಣೀಸುತೆ ಯಿಷ್ಟರೊಳು ರಘು । ವೀರನ ವಿರಹತಾಪದಿಂ ಬಾ । ಯಾರಿ ಶೋಕಿಸುತಿರ್ದ್ದಳಂದದಡಿಗಡಿಗೆ ಬಸವಳಿಮ ॥ ೫೧ ॥ ಪತಿಗೆ ಜಯವಾಗಲೆನುತಾ ಕ್ಷಿತಿ । ಸುತೆ ಮನದೊಳಗೆ ಬೇಡುತಿರ್ದ್ದಳು । ಸತತಮಂತಃಪುರದೊಳಾ ಸಾಧನಿವಹಂಗಳೊಳು ॥ ಕುತುಕದೆ ದ್ರಾಕ್ಷಾಲತೆಯುಡಿಯೊ । ಳುತಿಹ ಕಾಲದೊಳೆಲ್ಲ ಕೈಮುಗಿ । ದತಿ ಭಕುತಿಯಿಂದನುದಿನದೆ ಜಾನಿಸುತ ದೇವರನು ॥ ೫೨ ॥ ಬಡವೆಗಳ ತೆಗೆದಿಟ್ಟು ಚಿಂತಿಸಿ । ಪೊಡವಿಯುಣುಗಿಯು ನರ್ತನಂಗಳ । ನಡಿಗಡಿಗೆ ನೋಡದೆಯೆ ಜಯವಾಗಲೆನುತಿನಯನಿಗೆ ॥ ಮೃಡನನೊಲಿದರ್ಚಿಪಳು ತುಲಸೀ । ಗಿಡಕೆ ಸುತ್ತು ಬಳಸುವ ಳರಳೀ । ಗಿಡಕೆ ಕೈಮುಗಿದು ಪ್ರದಕ್ಷಿಣೆಗಳನು ಮಾಡುವಳು ॥ ೫೩ ॥ ದಿನದಿನದೊಳಾ ಕಾರ್ತ್ತವೀರ್ಯಾ । ರ್ಜನನನೊಲಿದರ್ಚಿಸುವ ಳವನೀ । ತನುಜೆ ಗೋಮಯದಿಂದೆ ಗೋಡೆಯೊಳಾಂಜನೇಯನನು । ಮನವೊಲಿದು ಬರೆಯಿಸುತಲೆ ಪ್ರತಿ । ದಿನದೊಳೊಂದಂ

ಗುಲದ ನಿತವನ । ಘನಸುಪುಷ್ಪವ ಬೆಳೆಯಿಸಿದ ಪಳುವಿಸ್ಮಯವೆನಿತ್ತು
॥ ೫೪ ॥ ವಿನುತ್ರಿವೇತ್ತಾ ಮಾನ್ಯಸೂಕ್ತಗ । ಳನವನೀಸುತೆ ವಿಪ್ರರಿಂದ
ನು । ದಿನವು ಪಾರಾಯಣವನಾಗಿಸುತಿದ್ದಳತಿ ಹಿತದೆ ॥ ಜನಕಸುತೆ ದೇ
ವಾಲಯದೊಳಾ । ವಿನುತ ಶತರುದ್ರೀಯಪಾರಾ । ಯಣಗಳಂದಭಿಷೇಕ
ಮಾಡಿಸುತಿದ್ದ ಳನುದಿನವು ॥ ೫೫ ॥ ಪರಮಭಕ್ತಿಯನಾಂತು ಕೈಮು
ಗಿ । ದೆರಗಿ ಜಾನಕಿ ಗೌರಿಗಣಪತಿ । ತರಣಿ ಶಂಕರಹನುಮರನುದಕ
ಕಲಶಗಳೊಳಿರಿಸಿ ॥ ನಿರುತ ಮರ್ಚಿಸುತಿದ್ದ ಳತ್ಯಾ । ದರದೆ ಪೂಜಿಪ
ಳರಿಸಿ ರಘುಭೂ । ಮರನ ಮಂಚದೆ ಕಾರ್ತವೀರ್ಯಾರ್ಜುನನ ಯಂತ್ರ
ವನು ॥ ೫೬ ॥ ಕುಳಿತುಕೊಂಡವಳಲ್ಲ ಜಾನಕಿ । ಗೆಳತಿಯರನಿವಹ
ದೊಳು ಸಲೆಕಂ । ಗೊಳಿಪಖಿಳ ರತ್ನಾಭರಣಗಳ ನಿರಿಸಿದವಳಲ್ಲ ॥ ಸಲಿ
ಲ ಯಂತ್ರಂಗಳ ಬಳಿಯೊಳಾ । ನೆಲದಣುಗಿ ನಿದ್ರೆಯನು ಮಾಡದೆ ।
ಸಲೆಕೊರಗುತಿರುತಿರ್ದಳನಿಯನ ವಿರಹತಾಪದಲಿ ॥ ೫೭ ॥ ಬಂದುಸಲ
ಮಾಳಿಗೆಯ ಮೇಲ್ಕಳ । ತೊಂದು ಕಾಗೆಯ ನತಿಸವಿಾಪದೊ ।
ಳಂದುಮುಖಿ ಜಾನಕಿಯು ನೋಡುತಲೆ ಪಿಕವರ್ಧನನೆ ॥ ಮುಂದಕೆ ತೆರ
ಳು ಬೇಗನಾರಘು । ನಂದನನು ಬರುವಂತಿರಲು ನಲ । ವಿಂದೆ ಕುಳಿತಿ
ರು ಬಾರದಿರುವಂತಿರಲು ನೀನಿಲ್ಲಿ ॥ ೫೮ ॥ ಎನುತ ಜಾನಕಿ ಪೇಳುತಿರ
ಲಂ । ದನಿತರೊಳು ಮುಂದಕ್ಕೆ ಪೋದುದ । ವನಿಸುತೆಗೆ ನಂಬುಗೆಯ
ನಾಗಿಸುವಂತೆ ವಾಯಸವು ॥ ಜನಕಸುತೆ ಸಿತಪಕ್ಷಬಿದಿಗೆಯ । ದಿನದೊ
ಳು ಸ್ನಾನವನೆಸಗಿ ಮೇ । ಲೆನಿಪ ಮಂಗಳ ವಸ್ತುಗಳ ನಿರಿಸುತ್ತ ಶೀಘ್ರ
ದಲಿ ॥ ೫೯ ॥ ತನ್ನ ಸಖಿಯರ ಕೂಡೆ ನಡೆತಂ । ದುನ್ನತವೆನಿಪ ಸಾಧ
ದೊಳು ಕುಳಿ । ತನ್ನೆ ಗಂಧರಣೀಸುತೆ ಮೆರೆವ ಚಂದ್ರನನು ಕಂಡು ॥
ನನ್ನ ಪತಿಯನು ನೋಡುವನು ಸಂ । ಪನ್ನಮತಿ ಚಂದ್ರನಿವನೀದಿನ ।
ವಿನ್ನು ಪತಿಯುಸಮಾಗಮ ವಹುದೆನುತ್ತ ಪೇಳಿದಳು ॥ ೬೦ ॥ ಅತ್ರಿ
ಮುನಿಪನ ಪತ್ನಿ ಕೊಟ್ಟ ಪ । ವಿತ್ರ ವಸ್ತುಗಳಲ್ಲದೆ ಜನಕ । ಪ್ರತಿ
ತಾಳ್ದವಳಲ್ಲಿ ತರವಿಧವೆನಿ ಪೊಡವೆಗಳನು ॥ ಗಾತ್ರದೊಳಿರಿಸಲಿಲ್ಲ ಗಂ
ಧವ । ಚಿತ್ರ ಕುಸುಮಂಗಳನು ತನ್ನ ಪ । ವಿತ್ರ ಮಸ್ತಕದಲ್ಲಿ ತಾಳ್ದವ
ಳಲ್ಲ ಚಿಂತಿಸುತ ॥ ೬೧ ॥ ಪತಿಯ ನೀಕ್ಷಿಸಬೇಕೆನುತ ಸಂ । ತತವು ಶಕು
ನಂಗಳನು ನೆರೆನೋ । ಡುತ ಮಹೀಸುತೆ ಶುಭ ಶಕುನಗಳ ನಂದು ತಾ
ನರಿತು ॥ ವಿತತ ಸಂತೋಷವನು ಹೊಂದು । ತ್ತತಿ ವಿನೋದದೆ ಕೋಡು
ತಲಿದ್ದಳು । ಚಿತವರಿತು ಸಕ್ಕರೆಗಳನು ಪಡೆದಖಿಳ ಮನುಜರಿಗೆ ॥ ೬೨ ॥

ಇತರರ ಮನೆಗೆ ಪೋಗುತಿರಲಿ | ಲ್ಲಿತರರೊಳು ಮಾತಾಡುತಿರಲಿ | ಲ್ಲಿತರರನು ತಲೆಯೆತ್ತಿ ಕಂಡವಳಲ್ಲ ಭೂಮಿಸುತೆ ‖ ಇತರ ಮನುಜರ ಕಂಗಳಿಗೆ ಕಾ | ಣುತ್ತಿರಲಿಲ್ಲ ಪುರುಷರಿಲ್ಲಿಲ್ಲ ಕು | ಳಿತವಳ್ಲ ಸದನದೊಳಗೆ ತಾನಾತು ಜೀವವನು ‖ ೬೩ ‖ ಅವನಿಸುತೆ ಯಭ್ಯಂಗಸಸ್ನಾ | ನವನು ತಾನೆಸಗಿದವಳಲ್ಲ ಪ | ಲವುತೆರದ ಮೃಷ್ಟಾನ್ನಭೋಜನಗಳ ನೆಸಗಲಿಲ್ಲ ‖ ಸವಿಯು ತಿದ್ದವಳಲ್ಲ ತಾಂಬೂ | ಲವನು ಸಂತಸದಿಂದೆ ಸಂಗೀ | ತವನು ಕೇಳ್ದವಳಲ್ಲ ನಗುತ್ತಿರಲಿಲ್ಲ ಹರ್ಷದಲಿ ‖ ೬೪ ‖ ಮಲಗಲಿಲ್ಲವು ಮಂಚದೊಳು ಸ | ಲ್ಲಲಿತ ಕೇಶಾಲಂಕರಣಗಳ | ನೊಲಿದು ತಾನು ವಿರಚಿಸಿಕೊಂಡವಳಲ್ಲ ಸಲೆಕೊರಗಿ ‖ ನೆಲವಣುಗಿ ರಾಘವನ ವಿರಹಾ | ನಲನೊಳತಿ ಬಿಳುಪೇರಿದ ಮುಖವ | ನೊಲಿದು ಕಂಡವಳಲ್ಲ ಕನ್ನಡಿಯನು ವಿಲೋಕಿಸುತ ‖ ೬೫ ‖ ತರತರದೆ ಕಂಗೊಳಿಪ ಪೀತಾಂ | ಬರಗಳನು ಕುಸುಮಗಳನು ತಾಂ | ಧರಿಸಲಿಲ್ಲವು ಸೀತೆ ಸರಯೂನದಿಗೆ ಮನವೊಲಿದು ‖ ತೆರಳಲಿಲ್ಲವು ಮಿಾಯಬೇಕೆಂ | ದರಮನೆಯ ಹಿಂದುಗಡೆಯೊಳಗಿರು | ತಿರುವ ಕಾಸಾರಕ್ಕೆ ಪೋದವಳಲ್ಲ ಪೇಸತ್ತು ‖ ೬೬ ‖ ಪೋಗಲಿಲ್ಲವು ಸೀತೆ ಯುಪವನ | ಕಾಗಿ ವಿಹರಿಸಲಿಲ್ಲವು ಮನ | ತಾಗಮದೆ ಳಾ ಪುಷ್ಪವಾಟಿಕೆಗಳೊಳು ನಡೆತಂದು ‖ ಆಗಮೋಕ್ತ ವಿಧಾನದೊಳತಿಸ | ರಾಗದಿಂದಲಿ ಪೂಜೆಗೈವಳು | ಬೇಗನೆ ಬ್ರಾಹ್ಮಣಸುವಾಸಿನಿಯರನು ಸತ್ಕರಿಸಿ ‖ ೬೭ ‖ ಬೇರೆಬೇರೆ ವ್ರತಗಳನು ಪದೆ | ದಾ ರಮಣಿಯಾಚರಿಸುತಿದ್ದಳು | ವಿಾರಿದ ಭಕುತಿಯಿಂದೆ ಸುರರನು ತೃಪ್ತಿಪಡಿಸುಳ್ಪದಕೆ ‖ ಭೂರಿನಿಯಮಗಳಿಂದೆ ಚಿತ್ತಕೆ | ತೋರಿದ ವ್ರತಗಳ ನೆಸಗುತಾ | ಧಾರಿಣೀಸುರಪತ್ನಿಯರ ನರ್ಚಿಸುವಳನುದಿನವು ‖ ೬೮ ‖ ನಿನಗೆ ಸಂಡಿಗೆ ಸರವನೀಯುವೆ | ನನಿಲನಂದನ ನಿನಗೆ ನಾಂ ಕೊಡು | ವೆನೆಲೆ ವಿಘ್ನೇಶ್ವರನೆ ಹೂರಣ ಕಡುಬುಗಳನೆಸಗಿ ‖ ನಿನಗೆ ಬಲಿದಾನವನು ಮಾಡಿಸು | ವೆನೆಲೆ ದುರ್ಗೆಯೆ ಬರಲಿ ರಘುನಂ | ದನನು ಶೀಘ್ರದೊಳೆನುತ ಜಾನಿಸುತಿದ್ದಳಾ ಸೀತೆ ‖ ೬೯ ‖ ನಿನಗೆ ನಾಲಗೆಯುಳ್ಳಿಹ ರಕುತವನು ಸಮರ್ಪಿಸುವೆನೆಲೆ ಚಂಡಿಯೆ | ನಿನಗೆ ಬಲಿದೀಪಗಳೊಡನೆ ಭಕ್ಷ್ಯಾನ್ನಗಳನಿತ್ತು ‖ ಮನದಣಿಯೆ ಸಂತುಷ್ಟಿಪಡಿಸುವೆ | ನಿನಕುಲದೀಪನು ಕುಶಲದಿಂದಾ | ತನ ಸುತರಸಹಿತಿಲ್ಲಿ ಗೈತರಲೆನುತ ಬೇಡಿದಳ್ ‖ ೭೦ ‖ ಬರುತ್ತಿರುವ ಶನಿವಾರದಿಂದಲೆ | ವಿರಚಿಸುವೆ ನುಪವಾಸವ ವ್ರತ | ವರತು ನಾತ್ರೈಮಾ ಶನಿವಾರಂಗಳೊಳನುಕ್ರಮದೆ | ಇದರೊಳು ದಗ

ಲಿನೊಳೊಂದು ತಿಂಗಳ । ವರೆಗೆ ತಿನ್ನದೆ ತುಪ್ಪ ಬೆಲ್ಲವ । ನಿರುವೆ ನಾಚ
ರಿಸುತ್ತ ಘೃತವೆಂಘುವರ್ಜ್ಯಸಿಯುವುವನು ॥ ೨೧ ॥ ಸಪರಿವಾರ ಸಮೇ
ತನಾಗಿಯೆ । ವಿಪ್ರಲವುತಿ ರಾಘವ ನಯೋಧ್ಯೆಗೆ । ರಿಪುಗಳನು ಸಂಹರಿಸಿ
ಬರುವಂತಾಗಿಸೆಲೆಗಿರಿಜೆ ॥ ತಪವನಾಗಿಸುತ ತಿಲಪಿಷ್ಟವ । ಗುಪಿತದಿಂ
ದಲೆ ನಾನು ತಿನ್ನುವೆ । ಚಪಲವಿಲ್ಲದೆ ಕೃಷ್ಣಪಕ್ಷ ಚತುರ್ಥಿ ದಿವಸ
ದಲಿ ॥ ೨೨ ॥ ಎಳೆ ರವಿಜೆ ವಿಧ್ಯುಕ್ತವಾಗಿಯೆ । ನಲಿವು ನಿನ್ನನು ಭಾನುವಾ
ರಂ । ಗಳೊಳು ಪೂಜಿಪೆನೆಂದು ಜಾನಕಿ ನುಡಿವು ಕೈಮುಗಿವು ॥
ಪಲವುಬಗೆಯ ವ್ರತಗಳನು ಮನ ವೊಲಿದೆಸಗುತ ಕೊಡಿಸಿದಳರ್ಘ್ಯಂ ।
ಗಳನು ನಿರ್ಜರರಿಗೆ ಸಮಂತ್ರವ್ರತಗಳಂದೊಲಿವು ॥ ೨೩ ॥ ಪ್ರಿಯವಿ
ರಹಾತುರದೊಳುರೆ ಕೊರ । ಗುತಪನೀಸುತೆ ನಿದ್ರೆಯನು ಮಾ । ಡ ತಿ
ರಲಿಲ್ಲವು ಹಗಲು ರಾತ್ರಿಗಳಲ್ಲಿ ಯೊಂದುದಿನ ॥ ಪ್ರಿಯನಿಂತನುದಿನದೊ
ಳಾಕ್ಷಿತಿ । ಸುತೆ ನೆನೆನೆನೆದು ಹೊಂದಲಿಲ್ಲವು । ಹಿತದೆ ಸುಖಸಂದೋಹವ
ನು ತಾನಾವತಾಣದೊಳು ॥ ೨೪ ॥ ಧರಣಿಸುತೆ ಗರುಡಾಂಜನೇಯರ ।
ನಿರುವರನು ವಾಹ್ವಾನವಮಾಡಿದ । ಳುರುತರ ನಿಯಮದಾವ್ರತಂಗಳನೆ
ಲ್ಲ ವಿರಚಿಸುತ ॥ ಭರದೊಳೈತಂದವರಯೋಧ್ಯಾ । ಪುರವರವ ನೈದಿವರ
ನಿತರೊಳ । ದಿರಿವು ವೆಸಗಣ್ಣಿಡದ ಭುಜಪಾವೋದಿನೀಸುತೆಗೆ ॥ ೨೫ ॥
ಬಂದಯೋಧ್ಯೆಗೆ ಗರುಡಕೇಸರಿ । ನಂದನರೆರಗಿ ಯೂಪಕೇತುವಿ ।
ಗಂದರುಹಲು ಸಮಸ್ತ ಸಂಗತಿಗಳನು ಕೈಮುಗಿದು ॥ ಸ್ಯಂದಸಂತಸದಿಂದೆ
ಧರಣೀ । ನಂದನೆಯ ಸನ್ನಿಧಿಗೆ ತಾನೈ । ತಂದರುಹಿದನು ಯೂಪಕೇ
ತುವವನತಿ ಶೀಘ್ರದಲಿ ॥ ೨೬ ॥ ವಿನುತಿವೆತ್ತನಿಜಾಗ್ನಿ ಹೋತ್ರಗ ।
ಳನು ಸಕಲ ಋತ್ವಿಕ್ಪುರೋಹಿತ । ರನು ನಿಲಿಸುತಾ ಸೀತೆ ವಿನತಾಸು
ತನ ಬೆನ್ನಿನೊಳು ॥ ಮನುಕುಲೇಂದ್ರನ ಪಾದಕಮಲಗ । ಳನು ನೆನೆ
ಯುತ್ತಲೆ ಕುಳಿತು ಬಂದಳು । ಹನುಮನಾಕೆಯ ನೊಲಿದು ರಕ್ಷಿಸುತಿದ್ದ
ನಾಪಥದೆ ॥ ೨೭ ॥ ಬರುತ ನಾನಾದೇಶಗಳ ಪರಿ । ಪರಿ ಯತಿಶಯಂಗ
ಳನು ನೋಡುತ । ಧರಣಿಸುತೆ ಲಂಕಾನಗರಕೈತಂದು ಜವದಿಂದೆ ॥
ವರವಿಮಾನದ ಮಧ್ಯದೊಳೆಸೆವ । ಸುರಮಹೀಜದಡಿಯೊಳು ಸುಖ
ದಿಂ । ದಿರುವ ರಾಮನ ನೀಕ್ಷಿಸಿದಳಾರುತಂತರಿಕ್ಷದೊಳು ॥ ೨೮ ॥
ಇಳೆಗಿಳಿದು ಭೂಜಾತೆ ಸಂತಸ । ದೊಳತಿ ಭರದಿಂದಾ ಗರುಡನ ಹೆ ।
ಗಲನುಳಿದು ರಾಘವನ ಪದಪಂಕೇರುಹಕೆರಗಲು ॥ ನೆಲದಣುಗಿಯನು
ಕಂಡು ಕೇಳದ । ನೆಲೆ ಲಲನೆ ಕೇಳ್ನಿನ್ನ ದೇಹವು । ಸಲೆಸವೆದು ಬಿಳು

ಪಾಗಿರುವುದೇಕೆನುತ ರಾಘವನು ‖ ೭೯ ‖ ಪತಿಯೆ ನಿನ್ನಯ ವಿರಹತಾಪ
ಗೆ । ಸತತ ದು ಖಿಸಿದೆ ನವರಿಂ ಕೃಶಿ । ಸಿತು ಕಳೇಬರವಿಂತಿದನು ಕೇ
ಳ್ನೀನೆ ತಿಳಿದಿರುವೆ ‖ ಪ್ರತಿದಿನವು ನಿದ್ರೆಯನು ಮಾಡದೆ । ಹಿತದೆ ನೀರ
ನು ಕುಡಿಯದಿದ್ದೆನು । ಪತಿಯೆ ಕೇಳ್ ಭೋಜನಗಳನು ಸಾಸೆಸಗಿದವಳಲ್ಲ
‖ ೮೦ ‖ ನೆನೆಯುತಿದ್ದೆನು ನಿನ್ನನೇ ಪ್ರತಿ । ದಿನವು ವೈರಾಗ್ಯದ ನತಾಳ್ದ
ತಿ । ಘನತೆಯಿಂದಿಹ ಯೋಗಿಯಂತಿರುತಿದ್ದೆ ನನವರತ ಕನಸಿನೊಳ
ಗಾದೊಡೆಯು ನಾಂ ನಿ । ನ್ನನು ವಿಲೋಕಿಸಲಿಲ್ಲ ಚಂದ್ರನಿ । ಗೆಣೆಯೆ
ನಿಪ ನಿನ್ನ ನನವನು ನೋಡಿದವಳಲ್ಲ ‖ ೮೧ ‖ ಪಿಕಸಿನಾದವ ಕೇಳಲಿ
ಲ್ಲವು । ಸಖಿಯರನೊಲಿಸುತಗ್ನಿಹೋತ್ರವ । ಸುಖದೊಳೆಂದುಂ ನಾನು
ಕಾಯಿಸಿಕೊಂಡಿರುವುದಿಲ್ಲ ‖ ಸಕಲವಿಧದ ವ್ರತಗಳನೊಲಿದು । ಭಕುತಿ
ಯೆಂವಲೆ ನಾನುಮಾಡಿದೆ । ಚಕಿತಳಾಗುತ ನಿನಗೆ ಮಂಗಳವಾಗಬೇಕೆಂ
ದು ‖ ೮೨ ‖ ಎಳ್ಳನಿತು ಸೌಖ್ಯವನು ಕಂಡವ । ಳಲ್ಲ ನಾನೆನುತಾ ಮ
ಹೀಸುತೆ । ನಲ್ಲನಿ ಗರುಹಲಾ ನುಡಿಯನಾಲಿಸುತ ರಾಘವನು ‖ ಪಲ್ಲವಾಧ
ರೆ ಜನಕಜಾತೆಯ । ನುಲ್ಲಸದೊಳಾಲಿಂಗಿಸಿಕೊಳುತ । ಲಲ್ಲಿ ನಲಿಸಿದ
ನೊಡನೆ ಸರಸಸುಖೇಲನಂಗಳಲಿ ... ‖ ೮೩ ‖

ಇಂತು ನಲವತ್ತೆರಡನೆಯ ಅಧ್ಯಾಯ ಸಂಪೂರ್ಣವು.
ಪದ್ಯಗಳು ೨೪೯೬.

ನಲವತ್ತುಮೂರನೆಯ ಅಧ್ಯಾಯ.

ಸೂಚನೆ ‖ ಮೂಲಕಾಸುರನನ್ನು ವಧಿಸಿ ವಿ ।
ಶಾಲಲೋಚನೆ ಸೀತೆ ಸುಖತರ ।
ಲೀಲೆಯಿಂದಿರುತಿದ್ದಳಾ ರಘುವರನ ನೊಲಿಸುತ್ತ ‖

ಬಳಿಕ ಮಾರನೆದಿನದೊಳಾ ರಘು । ಕುಲಲಲಾಮನು ಮಜ್ಜನವಿನ
ಗಿ । ಲಲನೆಜಾನಕಿಯನ್ನು ತಾಂ ಕರೆಯಿಸುತ ಹತ್ತಿರಕೆ ‖ ಪಲತೆರದ
ಶಸ್ತ್ರಾಸ್ತ್ರ ವಿದ್ಯೆಂ । ಗಳನು ಪೇಳುತ ತಿಳುಹಿಸಿದನವು । ಗಳುಪ ಸಂ
ಹಾರ ಪ್ರಯೋಗ ವಿಧಾನಗಳನೆಲ್ಲ ‖ ೧ ‖ ಧರಣಿಸುತೆಗಾ ತೆರದೊಳಾರ
ಘು । ವರನೊಲಿದಖಿಳ ಚಾಪವಿದ್ಯೆಯ । ನರುಹುತೊಲಿದು ಶನೇಶಿಸಿದನತಿ

ಹರ್ಷವೆನುತಾಳ್ದು ॥ ಪರಮ ಸಂಮುದದಿಂದೆ ರಘುಭೂ । ವರನನೀಮ ಮಯಾಂತು ಲಕ್ಷ್ಮಣ । ನೆರಗಿ ತಂದಿರಿಸಿದನು ಮುಂಗಡೆ ವರವರೂಥವನು ॥ ೨ ॥ ಆ ರಥಕೆ ಸಾರಥಿಯೆನಿಸಿದನು । ದಾರು ಕನದರೊಳಿದ್ದವು ಬಹು ಕ । ಠೋರತರವೆನಿಸುತ್ತ ಮೆರೆವಖಿಳಾಸ್ತ್ರಶಸ್ತ್ರಗಳು ॥ ವಿಸಾರಿದ ಗದಾಯುಧ ಪದುಮಗಳು । ತೋರುತಿದ್ದುವು ರಥದೊಳು ಗರುಡ । ನಾರಥ ಧ್ವಜದೊಳಿರುತಿದ್ದನು ಕಾಣುತಿಲ್ಲರಿಗೆ ॥ ೩ ॥ ವರವರೂಥಕೆ ಬಿಗಿದು ಕಟ್ಟಿ । ದ್ದರು ಬಲಾಹಕ ಮೇಘಪುಷ್ಪವು । ಸುರುಚಿರೆವ ಸುಗ್ರೀವ ಶೈಬ್ಯಗಳೆಂಬ ಹಯುಗಳನು ॥ ಮರುತಜವದಿ ಓಡುತಿದ್ದವು । ತುರಗಗಳಿರದೆ ಬೆಳುಗೊಡೆಯು ಚಾ । ಮರಗಳಿದ್ದುವು ಕಂಗೊಳಿಸಿ ಕಾಣಿಸುತ ರಥದೊಳಗೆ ॥ ೪ ॥ ಇಂತಸೆವ ವರದಿವ್ಯರಥವನು । ಸಂತಸವೊಳವಲೋಕಿಸುತ ಸಮ । ನಂತರದೊಳಾ ಸೀತೆಯನು ಕುರಿತಾ ರಘೂತ್ತಮನು ॥ ಕಾಂತೆ ಕೇಳೀ ರಥದೊಳು ಕುಳಿತು । ಚಿಂತಿಸದೆ ಸಂಹರಿಸುಸೀನೇ । ಕಾಂತದೊಳಗೀ ಮೂಲಕಾಸುರನ ನೆನುತರುಹಿದನು ॥ ೫ ॥ ಹಾಗೆಯಾಗಲೆನುತ್ತೊರೆದು ಬಲು । ಬೇಗನಾ ಧರಣೀಸುತೆ ನಮಿಸಿ । ರಾಘವನ ಪದಯುಗಕೆ ಛಾಯಾ ಸೀತೆಯನುಕರೆದು ॥ ಕೂಗಿ ಗರ್ಜಿಸುತನುವರಕೆ ನೀಂ । ಪೋಗಿ ರಣರಂಗದೊಳು ಕೋಪಿಸು । ತೀಗ ಕೊಲ್ಲುವುದು ಮೂಲಕಾಸುರನನೆನುತರುಹಿದಳು ॥ ೬ ॥ ಬಹಳ ತಾನುಸರೂಪಿಯೆನಿಪಾ । ಪೊಡವಿಯಣುಗಿಯು ನಮಿಸಿ ರಾಘವ । ನಡಿಗಳಿಗೆ ಶೀಘ್ರದೊಳು ಹತ್ತಿದಳಾವರೂಥವನು ॥ ಪಡೆದುಭೀಕರರೂಪವಿಂದೆಸೆ । ಪೊಡಲನಂದತಿ ಘೋರಶಬ್ದವ । ನೊಡರಿಸುತ ಕಾಳಗಕೆ ಛಾಯಾಸೀತೆ ತೆರಳಿವಳು ॥ ೭ ॥ ಅನಿತರೊಳು ರಾಘವನು ಮುನ್ನಕ । ದನಕೆ ನೇಮಿಸಿ ಕಳುಹಿಕೊಟ್ಟಾ । ವನಚರರು ಲಂಕಾಪುರಕೆ ನಡೆತಂದು ಮೊದಲಂತೆ ॥ ದನುಜನಾಥನ ಹೋಮಕರ್ಮಗ । ಳನು ಕೆಡಿಸಿ ಭಂಗವಡಿಸುತ್ತಲೆ । ಮಣಿದು ಪೇಳ್ದರು ರಾಮನಡೆಗಾ ಸಂಗತಿಯ ನಂದು ॥ ೮ ॥ ಮುಳಿದು ಗರ್ಜಿಸಿ ಪಲ್ಗಡಿದು ಭರ । ದೊಳು ಬರು ಇಲು ಮೂಲಕಾಸುರ । ನಿಳೆಗೆಬಿದ್ದುದವನ ಕಿರೀಟವು ಧರಣಿಕಂಪಿಸಿತು ॥ ಕುಳಿತುಕೊಂಡವು ಹದ್ದುಗಳವನ । ತಲೆಯಮೇಲ್ಗಡೆ ಜಂಬುಕಗಳದಿ । ರೊಳು ರಕುತವನು ಕಾರಿದವು ತಾರೆಗಳು ಮುದುರಿದವು ॥ ೯ ॥ ಕ್ರೂರರವಗಳ ಕಾರ್ಮುಗಿಲಿನ ಶ । ರೀರದ ವಿಶಾಲಾನನದತಿ ಕ । ಠೋರರೊಮಸಾವಳಿಯ ಶೂರ್ಪಾಕೃತಿಯ ಜಂಘೆಗಳ ॥ ಭೂರಿಮಸ್ತಕ

ದ ಘನಗುಹೆಯಾ । ಕಾರ ವಕ್ತ್ರದ ಹೊರಗೆ ನೀಡಿದ । ಘೋರ ಜಿಹ್ವೆ
ಯ ಘೋರಭಾಯಾ ಸೀತೆಯನುಕ್ಕಡ ॥ ೧೦ ॥ ಅರುಸೀನೆಲೆ ರಮಣಿ
ಘೋರಾ । ಕಾರದ ಜಗಳಕೇತಕೆಂದು ವಿಚಾರಿಸದಪೇಕ್ಷಿಸಿದೆ ತಿಳುಹಿಸು
ನಿನ್ನ ಸಂಗತಿಯು ॥ ವೀರನೆನುತಾಂ ಜಸವಡೆದಿರುವೆ । ಧಾರಿಣೀತಲದೊ
ಳಗೆ ಕೇಳೆಲೆ । ನಾರಿ ನನ್ನನು ಮೂಲಕಾಸುರನೆನುತ ಪೇಳುವರು
॥ ೧೧ ॥ ಇದಿರು ನಿಲ್ಲದೆ ಪೋಗು ಹಿಂದಕೆ । ಬದುಕಬೇಕೆಂಬಿಚ್ಛೆಯು
ಳ್ಳೊಡೆ । ಕದನವೊಳು ಬರಿದೇಕೆ ಸಾಯುವೆ ನನ್ನ ಶರದಿಂದ ॥ ಸುದತಿ
ಯರೊಳಿಲ್ಲೆನಗೆ ಪೌರುಷ । ಮದು ನಿಮಿತ್ತದೊಳೊಂದೆರಡು ನಿಮಿ
ಷವವರೆಗು ವಿರಬೇಡವೆನುತಾ ಖಳನು ಗರ್ಜಿಸಿದ ॥ ೧೨ ॥ ವಿವಿ
ಮಾನದೆ ಕೂಡುತಾ ರಘು । ವರನು ಜಾನಕಿ ನೋಡುತಿರಲಂ । ದಿರದೆ
ಛಾಯಾಸೀತೆ ರಜನೀಚರನ ನೀಕ್ಷಿಸುತ ॥ ದುರುಳಬರಿದೇತಕ್ಕೆ ಗರ್ಜಿ
ಸು । ತಿರುವೆ ಚಂಡಿಕೆನಾನು ಲಂಕಾ । ಪುರವು ನಿನ್ನಯ ಕುಲವು ನಾಶನ
ವಾಯ್ತು ನನ್ನಿಂದ ॥ ೧೩ । ನನ್ನ ಭಕ್ತನೆನಿಸಿದ ಭೂಸುರ । ನನ್ನು
ವಧಿಸಿದೆ ನೀನು ಖೂಳನೆ । ನಿನ್ನ ನಿರಿದಾ ಬ್ರಾಹ್ಮಣನ ಋಣವನ್ನು ಪರಿ
ಸುವೆನು ॥ ನನ್ನ ವಿಕ್ರಮವೆಲ್ಲವ ನರಿವು । ದೆನ್ನುತಾಭಟಿಸುತ್ತ ರಕ್ಕ
ಸ । ನನ್ನ ಬಾಣಗಳೈದರಿಂದೊಡನೆಚ್ಚಳಾಸೀತೆ ॥ ೧೪ ॥ ದನುಜವಲ್ಲ
ಭ ನುರೆಮುಳಿದು ಮೇ । ಲೆನಿಸುವಾಯುಧಗಳನು ಕೊಂಡಾ । ವನಿತೆ
ಗಿಡಲಾ ಶರಗಳನಿರಿದು ತನ್ನ ಖಡ್ಗವಲಿ ॥ ವನಿತೆಕೋಪಿಸಿ ಮೂಲಕಾ
ಸುರ । ನನು ವಿಲೋಕಿಸುತಾಗಳೆಚ್ಚಳು । ಘನತರದ ನಿಶಿತಾಯುಧಂಗ
ಳನಾಂತು ಶೀಘ್ರದಲಿ ॥ ೧೫ ॥ ಆಕೆ ನಾಲ್ಕುಶರಂಗಳಿಂದೆಸೆ । ವಾ
ಕುದುರೆಗಳನೆಲ್ಲ ಕೊಂದು ಪ । ತಾಕಚಾಪಕಿರೀಟ ಕವಚಂಗಳಿಗೆ ಗು
ರಿಯಿಟ್ಟು । ಜೋಕೆಯಿಂದಲೆ ಮೂರು ಶರಗಳ । ಹಾಕುತಿಕ್ಕಡಿಮಾಡಿ
ದಳಸುರ । ನಾಕಡೆಯೊಳೈತಂದು ಹತ್ತಿದನೊಂದು ಪೊಸರಥವ ॥ ೧೬ ॥
ಭರದೆ ನಡೆತಂದಸುರನತ್ಯಾ । ದರದೊಳಾಗ್ನೇಯಾಸ್ತ್ರವನು ಕೊಂ
ಡಿರದೆ ಛಾಯಾಸೀತೆ ಗಿಡಲದನಾಕೆ ಶೀಘ್ರದಲಿ ॥ ಉರುತರದ ಮೇಘಾ
ಸ್ತ್ರದಿಂದಲೆ । ಪರಿಹರಿಸುತಿರಲವನು ಗರ್ಜಿಸು । ತಿರದೆ ಬಿಟ್ಟನು ಪರ್ವ
ತಾಸ್ತ್ರವ ನಾಮಹೀಸುತೆಗೆ ॥ ೧೭ ॥ ಅವನು ಕುಲಿಶಾಸ್ತ್ರಂಗಳಿಂದೆ
ಕ । ಡಿವಳು ಛಾಯಾಸೀತೆ ಖಳನುಮು । ಳಿದುಬಿಡಲು ಸರ್ಪಾಸ್ತ್ರವ
ನು ಗರುಡಾಸ್ತ್ರವನು ಬಿಡುತ ॥ ಅದನು ಕತ್ತರಿಸಿಟ್ಟಳು ಬಳಿಕ
ಕದನ ಮೇಳ್ದನತನಕ ಮಿಂತುನ । ಡೆದುದು ರಾತ್ರಿಗಳೆಡೆ ಬಿಡದವ

ಬ್ಬರಿಗೆ ಮತ್ತೆ ॥ ೧೮ ॥ ಒಡನೆ ಭೂಯಾಸೀತೆ ಗರ್ಜಿಸು । ತಡಿಗಡಿಗೆ
ಘನಚಂಡಿಕಾಸ್ತ್ರವ । ಸಿಡಲಸುರವಲ್ಲಭನ ಮೇಲ್ಕಂಪಿಸಿತು ಮೇದಿನಿ
ಯು ॥ ಕಡಲು ಹೊರಳಿತು ಕೂಡೆಸಿದ್ದುವು । ಪೊಡವಿಯೊಳು ತಾರೆಗ
ಳು ರಕ್ತದ । ಜಡಿಮಳೆಸುರಿದುದಾ ಖಳಂಗಶುಭವನು ತೋರ್ಪಂತೆ
॥ ೧೯ ॥ ಅತಿಭರದೊಳೈತಂದು ಕತ್ತರಿ । ಸಿತು ಶಿರವುವನ ತಲೆ
ಯನಾವಸು । ಮತಿಗೆ ಬಿದ್ದುದುಖಳನದೇಹವು ಭಯವನಾಗಿಸುತ ॥
ಕ್ಷಿತಿಗೆ ಪೂವುಳೆಯನ್ನು ಸುರಿಸಿಯೆ । ವಿತತದುಂದುಭಿಗಳನು ಹೊ
ಡೆಸಿದ । ರತಿಹಿತದೊಳಸುರೇಂದ್ರನಳಿದುವ ನರಿತು ನಿರ್ಜರರು
॥ ೨೦ ॥ ಹಿಂದಿರುಗಿ ರಣರಂಗವೆನುಳಿದು। ಬಂದು ಭೂಮಾಸೀತೆ ದಶರ
ಥ । ನಂದನಗೆರಗುತ್ತೈಕ್ಯವಾದಳು ಸೀತೆ ಯುಂಗದಲಿ ॥ ವಂದಿಮಾಗಧರು
ಹೊಗಳಿದರಾ । ನಂದದಿಂದೆಸಗಿದರು ಹಾಡುತ । ಚಂದಮೆನೆ ನರ್ತನವನ
ಪ್ಸರರಧಿಕ ಹರ್ಷದಲಿ ॥ ೨೧ ॥ ಅಮರರೆಲ್ಲರ ಸಹಿತ ಲಂಕೆಗೆ । ಕಮ
ಲ ಭವನೈತಂದು ಶೀಘ್ರದೆ । ನಮಿಸಿ ಸೀತಾರಾಘವರ ಪದಯುಗ್ಮಸರಸಿ
ಜಕೆ ॥ ವಿಮಲವೇದೋಕ್ತ ವಚನಗಳಿಂ । ದಮಲಮನದೊಳು ಹೊಗ
ಳಿವನು ತಾ ನಮರರೆಲ್ಲರ ಮಧ್ಯದೊಳು ಸೀತೆಯನುಪಲತೆರದೆ ॥ ೨೨ ॥
ಜನಕರಾಯನ ಮಗಳೆನಿಸಿ ರಾ । ಮನಿಗರಸಿಯಾಗುತ್ತ ನೀನನು ।
ದಿನವು ರಕ್ಷಿಸುತಿರುವೆ ತಾಯೆ ಸಮಸ್ತ ಭಕ್ತರನು ॥ ಮನವೊಲಿದು
ನಲಿದಾಡುತಿದೆ ಕೇ । ಳ್ಜನನಿ ತವಪದ ಕಮಲಯುಗ್ಮದೊ । ಳನವರತ
ಮೆನ್ನಯಶಿರೋಭೃಂಗವು ವಿನೋದದಲಿ ॥ ೨೩ ॥ ನೀನು ವಧಿಸಿದೆ
ಮೂಲಕಾಸುರ । ನೀನೆಬದೊಳಾದಿಲಕುಮಿಯೆನಿಸಿಪೆ । ನೀನಯೋನಿಜೆ
ಯಾಗಿರುವೆ ಸರ್ವೋತ್ತಮಳೆನಿಸಿಪೆ। ನೀನು ಪಾವನಗೈವೆ ಜಗವನು ।
ನೀನು ಪರಿಶುದ್ಧಳೆನಿಸುತ್ತಿಹೆ । ನೀನು ಭೂದೇವತೆಗೆ ಮಗಳಾಗಿರುವೆ
ಜಾನಕಿಯೆ ॥ ೨೪ ॥ ಸಲಹುವನು ರಾಘವನು ಸಂತತ । ವೆಲೆ ಜನನಿ
ಕೇಳ್ನಿನ್ನನವನೀ । ತಳದೊಳುರೆ ಸೇವಿಪನು ನಿನ್ನನು ಬಹುವಿನೋದ
ದಲಿ ॥ ಪಲವುತೆರದ ವಿಲಾಸವಿಭ್ರಮನು । ಗಳ ನೆಸಗುತಾ ರಘುವರನುಮನ ।
ವೊಲಿದು ಸಂತಸವಡಿಸುತಿರಲು ವಿರಾಜಿಸುವೆನೀನು ॥ ೨೫ ॥ ರಾ
ಮನನು ಮೋಹಗೊಳಿಸುತ್ತಿಹೆ । ರಾಮನುತ್ತಮದೇಹ ದೊಳು
ನೀ । ನೀ ಮನುಜರಿಗೆ ಕಾಣಿಸುತ್ತಿಹೆ ಯಾದಿಲಕ್ಷ್ಮಿಯೊಲು ॥ ತಾವರ
ಸನೇತ್ರಿಯೆನಿಸುವೆ ಗಜ । ಗಾಮಿನಿಯು ನೀನಾಗಿ ರಂಜಿಪೆ । ಹೇಮರ
ತ್ನಾಭರಣದಿವ್ಯಾಂಬರಗಳನು ತಾಳ್ದು ॥ ೨೬ ॥ ಜನನಿ ಕೇಳು ನಿರಂ

ತರವು ಮೇ । ದಿನಿತಲದೊಳನುಭವಿಸುತಿಹೆ ಮೇ । ಲೆನಿಪ ನೈಜಸ್ವಸ್ವ
ರೂಪಾನಂದ ಸೌಖ್ಯವನು ॥ ವನಜಮುಖಿ ಯೆಂದೆನಿಸಿಕೊಂಡನು ।
ದಿನವು ರಕ್ಷಿಪೆ ನಿನ್ನ ಸೇವಕ । ರನುದನುಜ ಸಂದೋಹಕಾಗಿಸುತಧಿಕ
ದುಃಖವನು ॥ ೨೭ ॥ ತಾಯೆ ಕರುಣಿಸು ಮೂಲಕಾಸುರ । ನೀ ಯನು
ವರದೊಳಳಿದನಾರಸ । ಹಾಯುವಿಲ್ಲದ ನಿನ್ನಕಡೆಗಣ್ಣಿನವಲೋಕನದಿ ॥
ತಾಯಿಯಾಗಿಹೆ ಕುಶಲವರಿಗಂ । ಶ್ರೇಯವನು ನೀನಾಗಿಸುತ ಕಡೆ ।
ಹಾಯಿಸುವೆ ಜನಗಳನು ಪಾಪಗಳಿಂದೆ ನೀಂ ಬಿಡಿಸಿ ॥ ೨೮ ॥
ನಿನ್ನ ಮುಖವು ಮನೋಹರವುದೆಂ । ದೆನ್ನಿಸಿರುವುದು ಮುಗುಳುನ
ಗೆಯಿಂ । ದುನ್ನತಿಯನಾಂತಿಹುದಧರವಾಬಿಂಬ ಫಲದಂತೆ ॥ ನಿನ್ನ ನಾಸಿ
ಕ ಸಂಪಗೆಯ ಹೂ । ವನ್ನು ಹೋಲುತ ರಂಜಿಪುದು ಘನ । ಸನ್ನುತಿ
ವಡೆದು ಸಕಲ ಲೋಕಪ್ರಾಣವೆಂದೆನಿಸಿ ॥ ೨೯ ॥ ಪೊಡವಿಯಣು
ಗಿಯೆ ನೀನು ನಮ್ಮನು । ಬಿಡಿಸಿ ರಕ್ಷಿಸಿಕೊಂಡು ಬಂದಿರು । ವಡಿಗಡಿಗೆ
ಭಯಮೋಹ ಸಂಚಯದಿಂದೆನುತ ನುತಿಸಿ ॥ ಒಡನೆ ಸೀತಾರಾಘವರ
ಪದ । ಕೊಡಲ ನೀಡುತ ಪಲತೆರ ದುಡಿಗೆ । ತೊಡಿಗೆಗಳನೀಯುತ್ತ
ಪೋದನು ಸತ್ಯಲೋಕಕ್ಕೆ ॥ ೩೦ ॥ ಬಳಿಕರಾಮನ ಪಾದಪಂಕಜ ।
ಗಳಿಗೆ ನಮಿಸಿ ವಿಭೀಷಣನು ಕೈ । ಗಳನು ಮುಗಿದೆಲೆ ದೇವಲಂಕೆಗೆ
ಹಿಂದೆಬಂದಾಗ ॥ ಒಳಹೊಗದಯೋಧ್ಯೆಗೆ ನಡೆದಿರೀ । ಸಲ ನಗರಕೈತಂ
ದಖಿಳಜನ । ಗಳ ಸಹಿತ ಸಂತೋಷಪಡಿಸುವುದೆನುತ ಬೇಡಿದನು
॥ ೩೧ ॥ ಹಾಗೆಯಾಗಲೆನುತ್ತ ನುಡಿದಾ । ರಾಘವನು ಲಂಕಾಪುರದೊ
ಳು ಸ । ರಾಗದಿಂದೈತರುತ ಹೊಕ್ಕನು ರಾಜಮಂದಿರವ ॥ ಬೇಗನೆ
ವಿಭೀಷಣನ ಮನ್ನಿಸು । ತಾಗ ಪಟ್ಟವ ಕಟ್ಟಿದನು ಅನು । ರಾಗದೊಳು
ಲಂಕಾಧಿಪತ್ಯವನಿತ್ತರಡನೆಸಲ ॥ ೩೨ ॥ ನಡೆದುದದ್ಭುತ ಮಂಗಳೋ
ತ್ಸವ । ವಡಿಗಡಿಗೆ ಲಂಕಾಪುರದೊಳಾ । ಪೊಡವಿಯಣುಗಿ ರಘೂತ್ತಮರ
ನೊಲಿವರ್ಚಿಸುತಕೂಡೆ ॥ ಕಡುಬೆಲೆವಡೆದು ಕಂಗೊಳಪುಡುಗೆ । ತೊಡಿ
ಗೆಗಳನಿತ್ತಾ ವಿಭೀಷಣ । ನಡಿಗಡಿಗೆ ದಣಿಸಿದನು ಸೇನೆಸಹಿತ ರಘೂದ್ವ
ಹನ ॥ ೩೩ ॥ ಸುರಪನಂ ಜಯಿಸುತ್ತ ದಶಶಿರ । ನರಮನೆಯೊಳಗೆ
ತಂದಿರಿಸಿಕೊಂ । ಡೆರಗಿ ಪೂಜಿಸುತಿದ್ದ ಕಪಿಲವರಾಹಮೂರ್ತಿಯನು ॥
ಪರಮ ಸಂಮುದದಿಂದೆ ರಘುಭೂ । ವರನಿಗಿತ್ತು ವಿಭೀಷಣನು ಪದ । ಕೆ
ರಗಿ ಕೊಟ್ಟನು ತನ್ನ ಸರ್ವಸ್ವವನು ಭಕ್ತಿಯಲಿ ॥ ೩೪ ॥ ಪತಿಯು ಕೈ
ಯನು ಪಿಡಿದುಕೊಳುತಾ । ಕ್ಷಿತಿಸುತೆ ವಿನೋದಾರ್ಥವಾಗಿಯೆ । ಸುತರ

ಸಹಿತ ಸಮಸ್ತ ಸೇನಾಜನರ ನೊಡಗೊಂಡು ॥ ವಿತತ ವೈಭವದಿಂದೆ
ಬಂದತಿ । ಹಿತದೊಳಗಶೋಕಾವನಕೆ ರಘು । ಪತಿಗೆ ತೋರ್ದಳು ಶಿಂ
ಶುಪಾಭೂರುಹದಮೂಲವನು ॥ ೩೫ ॥ ಹಿಂದೆ ತಾಂ ಕುಳಿತಿರ್ದೆಡೆಗಳ
ನು । ಮಿಂದಭಾವಿಗಳನ್ನು ತೋರಿಸು । ತಂದು ವಸ್ತ್ರಾಭರಣಗಳನಾ
ತ್ರಿಜಟೆಗೊಲಿದಿತ್ತು ॥ ಮುಂದೆ ನೀಂ ತ್ರಿಜಟೆಯುನು ಸಂತವಿ । ಸೆಂದು
ಸರಮೆಗೆ ಪೇಳ್ದು ಧರಣೀ । ನಂದನೆ ಘನನಿಕುಂಭಿಳಾದಿಗಳನ್ನು ನೋ
ಡಿದಳು ॥ ೩೬ ॥ ವರವಿಭೀಷಣ ನೊಲಿಸುತಾ ರಘು । ವರನ ವನಸಂರ
ಕ್ಷಣೆಗೆನುತ । ಭರದೆ ತನ್ನಯ ಪೆಸರಿನಿಂದೆಸೆವೊಂದು ಬಾಣವನು ॥
ಕರುಣೆಯಿಂದಿತ್ತು ವನಲಂಕಾ । ಪುರಿಗೆ ರಕ್ಷಾರೇವಯುನೆಸಗಿ । ವರವಿ
ಮಾನವೇಱಾಗ ಪತ್ತಿದ ನಖಿಳಜನರೊಡನೆ ॥ ೩೭ ॥ ಬಳಕ ನಾನಾದೇಶ
ವಿಭವಂ । ಗಳನು ತನ್ನಯ ಸತಿಗೆ ಸಂತಸ । ದೊಳರುಹುತ ರಾಘವನ
ಯೋಧ್ಯಾನಗರಕ್ಕೈತಂದು ॥ ನೆಲೆಗೊಳಿಸಿ ನಿಜರಾಜಮಂದಿರ । ದೊಳಗೆ
ಕಪಿಲವರಾಹಮೂರ್ತಿಯು । ನೊಲಿದು ಪೂಜಿಸುತಿರ್ದನನುದಿನವಧಿಕ
ಭಕ್ತಿಯಲಿ ॥ ೩೮ ॥ ಕೆಲವುದಿನತರುವಾಯ ರಾಘವ । ನೊಲಿದು
ಶತ್ರುಘ್ನನಿಗೆ ಕೊಟ್ಟನು । ತಿಳಿದು ಪೂಜಿಸೆನುತ್ತ ಕಪಿಲವರಾಹಮೂ
ರ್ತಿಯನು ॥ ನೆಲದಣುಗಿ ನೆರವೇರಿಸಿದಳು ಮೊ । ದಲು ಹರಿಸಿಕೊಂ
ಡಂತೆ ಸುವ್ರತ । ಗಳನು ಸಾಂಗೋಪಾಂಗವಾಗಿಯೆ ಬಹುಳ ಭಕ್ತಿಯ
ಲಿ ॥ ೩೯ ॥ ಅವುಗಳಿಗಮುದ್ಯಾಪನೆಗಳನು । ತವಕದಿಂದಾಗಿಸುತ ದ
ಣಿಸಿದ । ಳವನಿನಿರ್ಜರರಾದಿಯಾದ ಸಮಸ್ತ ಜನಗಳನು ॥ ರವಿ
ಕುಲೋತ್ತಮ ನೊಂದುದಿನದೆ ಪೃ । ಥಿವಿಸುತೆಯನೀಕ್ಷಿಸುತ ಪೇ
ಳ್ದನು । ಜವದೆನಾಂ ದಿಗ್ವಿಜಯಕೋಸುಗ ಪೋಗಿಬಹೆನೆನುತ
॥ ೪೦ ॥ ಬರುವೆ ನಿನ್ನಯ ಹಿಂಗಡೆಯೊಳೆನು । ತೆರಗಿ ಪದಪಂಕಜಕೆ
ಜಾನಕಿ । ಪರಿಪರಿವಿಧದೆ ಬೇಡುತಿರಲಾ ರಾಘವೇಶ್ವರನು ॥ ಕರೆದು
ಕೊಂಡೈದುವೆನೆನುತ ತ । ನ್ನರಸಿಯ ನೊಡಂಬಡಿಸಿ ಸಕಲಜ । ನರಸ
ಹಿತ ಪತ್ತಿದನು ಪುಷ್ಪಕವರವಿಮಾನವನು ॥ ೪೧ ॥ ಹೊರಟು ಮೂ
ಡಣದೆಸೆಗೆ ರಘುಭೂ । ವರನು ಛಪ್ಪನ್ನಾರುದೇಶಗ । ಳರಸರಿಂದುರೆ
ಮನ್ನಣೆವಡೆದು ಕಪ್ಪಗಳನಾಂತು ॥ ಮೆರೆವ ಜಂಬೂದ್ವೀಪ ಮಧ್ಯ
ದೊ । ಳಿರುವ ನವವರ್ಷಂಗಳಿಗೆ ತಾಂ । ಭರದೊಳೈತಂದನು ಸತೀಸು
ತ ಹಿತಜನರಸಹಿತ ॥ ೪೨ ॥ ಭರತ ವರ್ಷಕೆ ಬಂದು ರಘುಭೂ ।
ವರನು ಕಪ್ಪವನಾಂತು ಪರಕಿಂ । ಪುರುಷವರ್ಷಕೆ ಪೋಗಿ ಕಾಣಿಕೆಯ

ನ್ನು ಕೈಕೊಂಡು ॥ ಹರಿವರುಷಕೈತಂದು ಸಕಲಜ । ನರಸಹಿತ ಕಪ್ಪ ವನುಕೊಂಡತಿ। ಭರದೆ ಬಂದಸಿಲಾವೃತವರುಷಕಾಗಿ ಹರ್ಷದಲಿ ॥ ೪೩ ॥ ಪಡೆದು ಕಪ್ಪವನಲ್ಲಿ ಜಾನಕಿ । ಯೊಡನೆ ಭದ್ರಾಶ್ವವರುಷಕೆ ಬಂ। ದೊ ಳ್ಳೆಯನ ನೊಲಿಸಿಕೇತುಮಾಲವರುಷಕೆ ನಡೆತಂದು ॥ ಕಡುತವಕದಿಂದಲ್ಲಿ ಕಪ್ಪವ। ಪಡೆದುಕೊಳ್ಳುತ ರಮ್ಯಕವರುಷ । ಕಿಡಿದ ಸಂಭ್ರಮದಿಂದೆ ಬಂದನು ಗಗನಮಾರ್ಗದಲಿ ॥ ೪೪ ॥ ತೆಗೆದುಕೊಳ್ಳುತ ಕಾಣಿಕೆಯನಾ । ರಘುಕುಲತಿಲಕನಲ್ಲಿ ಸಕಲ ಕ । ಪಿಗಳ ನೋಲೈಸುತ ಹಿರಣ್ಮಯವ ರ್ಷಕೈತಂದು ॥ ಅಗಣಿತದ ಕಪ್ಪವನು ಬೇಗನೆ । ತೆಗೆದುಕೊಂಡೈತರುತ ಪಡೆದನು । ಸೊಗಸಿನಿಂದುತ್ತರ ಕುರುವರುಷದಲ್ಲಿ ಕಾಣಿಕೆಯ ॥ ೪೫ ॥ ಜಯಿಸಿಜಂಬೂದ್ವೀಪವ ನವನಿ । ಜೆಯನೊಲಿಸುತಪ್ಲಕ್ಷಶಾಲ್ಮಲಿ । ನ ಯಯುತ ಕುಶಕ್ರೌಂಚಪುಷ್ಕರ ಶಾಕಗಳೆನಿಸುವನಯನಶಾನಂದಾತಿ ಶಯವನು । ಜಯಿಸುವೇಳುದ್ವೀಪಗಳ ತಾ । ಜಯಿಸಿ ಕಾಣಿಕೆಗೊಂಡ ಯೋಧ್ಯಾಪುರಿಗೆ ನಡೆತಂದ ... ... ॥ ೪೬ ॥

ಇಂತು ನಲವತ್ತುಮೂರನೆಯ ಅಧ್ಯಾಯ ಸಂಪೂರ್ಣವು.

ಪದ್ಯಗಳು ೨೪೪೦.

ನಲವತ್ತುನಾಲ್ಕನೆಯ ಅಧ್ಯಾಯ

ಸೂಚನೆ॥ ವಿತತವಿಸ್ಮಯಗಳನು ನೆರೆನೋ ।
ಡುತ ಮಹೀಸುತೆ ನಾರದಮುನಿಯ ।
ನತಿಭಕುತಿಯಿಂದುಪಚರಿಸಿದಳು ತನ್ನರಮನೆಯಲಿ ॥

ಬಂದು ಹೊಕ್ಕಳು ಪುರವರವನತಿ । ಚಂದದಿಂದುರೆ ಕಂಗೊಳಿಪ ನಿಜ । ಮಂದಿರಕೆ ನಡೆತಂದಳಿಳಿದಾ ವರವಿಮಾನವನು ॥ ಸಂದಸಂತಸ ದಿಂದೆ ಧರಣೀ । ನಂದನೆ ರಘೂದ್ವಹನ ಮನಕಾ । ನಂದವನು ತಾ ನೆಸ ಗುತಿದ್ದಳು ಬಹುವಿನೋದದಲಿ ॥ ೧ ॥ ಇರಲಿರಲು ಬಹುದಿವಸಗಳನಂ। ತರದೊಳೈದು ವರುಷದ ಧರಣೀ । ಸುರನ ಪುತ್ರನದೊರ್ವನೈದಲು ಮೃತಿಯನತಿಭರದೆ ॥ ಪರಿಪರಿವಿಧಗಳಿಂದೆ ರಘುಭೂ । ವರನ ಬಾಗಿಲ

ಮುಂಗಡೆಬೊಳಳು । ತುರೆ ವಿಲಾಪಿಸುತ್ತಿದ್ದ ರೆಳೆಯನ ತಾಯಿತಂದೆಗ
ಳು ‖ ೨ ‖ ಮಡದಿಯೊಡನಾ ರಾಘವೇಶ್ವರ । ನೊಡನೆ ಬಾಗಿಲಬಳಿಗೆ
ಬರಲಾ । ಪ್ರೊತವಿಯುಣುಗಿ ರಘೂತ್ತಮರ ನೀಕ್ಷಿಸುತ ಭೂಸುರನು ‖
ಒಡೆಯನೀಂ ಕೇಳ್ನಿನ್ನ ರಾಜ್ಯದೊ । ಳಡಿವ ಧರ್ಮಗಳಿಂದಲೋ ನೀ ।
ನೊಡರಿಸಿದ ಧರ್ಮಂಗಳಿಂದಲೊ ನನ್ನ ಮಗನಳಿದ ‖ ೩ ‖ ಇವನ ಬದುಕಿ
ಸಿಕೊಟ್ಟರೆ ಸರಿಯು । ಸುವಿಡಿದಿಹೆ ನಿಲ್ಲನೊಡೆನನ್ನ ವ । ಧುವಿನ ಸಹಿ
ತಳಿವೆನೆನುತವನೀಸುರನು ಪೇಳಿದೊಡೆ ‖ ಜವದೊಳೀಗಲೆ ಬದುಕಿಸುತ್ತ
ಕೊ । ಡುವೆನು ನಿನ್ನಯ ಮಗನನಲ್ಲದೊ । ಡವನಿಗೆ ಬದಲು ಕುಶನ
ನೀಯುವೆನೆಂದನಾರಾಮ ‖ ೪ ‖ ಅವನಿಜಾತೆಯೆ ಕೇಳು ಮಗುವಿನ ।
ಸುವನುಳುಹಿಕೊಡದಿದ್ದರೀಗಳ । ಸುವನು ಬಿಡುವೆನು ನಿನ್ನಿದಿರೊಳೆನು
ತಾಕೆ ಗೋಳಿಡಲು ‖ ರವಿಕುಲೋತ್ತಮ ರಾಮನಾ ವಚ । ನವನು ನೀ
ನಾಲಿಸಿದೆ ಯುಷ್ಟಕೊ । ಡುವೆನುಲವನನು ನಿನ್ನ ಕುವರನು ಬದುಕ
ದಿರಲೀಗ ‖ ೫ ‖ ಎನುತ ಸೀತಾರಾಘವರು ಬಹು । ವಿನಯದಿಂದಾದಂಪ
ತಿಗಳ ನೊ । ಡನೊಡನೆ ಸಮಾಧಾನಪಡಿಸುತ್ತಿರಲನಂತರದೆ ‖ ಮನ
ದೊಳೊಂದು ಮುಹೂರ್ತಯೋಚಿಸಿ । ಮುನಿವಸಿಷ್ಠನ ಪದಕೆರಗಿ ನು
ಡಿ । ದನದರನಿಮಿತ್ತವನು ತಿಳಿಸೆಂದೆನುತ ರಾಘವನು ‖ ೬ ‖ ಹರಿಮು
ಕುಂದಮುರಾಂತಕಾಚ್ಯುತ । ಗರುಡವಾಹನ ವಾಸುಕಿಶಯನ । ಮುರ
ಮಥನನಾರಾಯಣಯೆನುತ ವಿಷ್ಣುನಾಮವನು ‖ ಪರಮಸಂಮದದಿಂದೆ
ಪಾಡುತ । ಭರದೆ ಬಂದನನಿತರೊಳಾ ರಘು । ವರನೆಡೆಗೆ ನಾರದಮುನೀಂ
ದ್ರನು ಧರಿಸಿವೀಣೆಯನು ‖ ೭ ‖ ಬಂದನಾರದನಡಿಗೆರಗಿ ರಘು । ನಂದನ
ನುಚಿತಪೀಠದೊಳು ನಲ । ವಿಂದೆಕೂಡಿಸಿ ಯರ್ಘ್ಯಪಾದ್ಯಾಚಮನಗಳ
ನಿತ್ತು ‖ ಮುಂದೆನಿಂದುಪಚರಿಸುತಿರಲಾ । ನಂದದಿಂದಾಶೀರ್ವದಿಸುತಿಂ ।
ತೆಂದು ನುಡಿದನು ದೇವಮುನಿಮಂತ್ರಾಕ್ಷತೆಯನಿತ್ತು ‖ ೮ ‖ ವೀರರಾ
ಘವ ಕೇಳು ನೀನೀ । ಧಾರಿಣೀವಲಯದೊಳಿರದೆ ಸಂ । ಚಾರವೆನಸಗಿ
ಕಂಡುಹಿಡಿವುದ ಧರ್ಮವನೆನುತ್ತ ‖ ನಾರದಮುನೀಂದ್ರನರುಹಿ ಘನದ ।
ಯಾರಸಗೆ ತೆರಳಿದನು ಘನಗಂ । ಭೀರಗಾನವನಾಗಿಸುತ ಮರಲೋಕಕ
ತಿಭರದೆ ‖ ೯ ‖ ಸತಿಸಹಿತ ರಘುನಂದನನ ಪರಿ । ಮಿತಮೆನಿಪ ಪರಿವಾ
ರದೊಡನೆ ಕು । ಳಿತು ಕುಬೇರನ ಘನತರದ ಪುಷ್ಪಕವಿಮಾನದೊ
ಳು ‖ ಅತಿಭರದೊಳಂದೆಲ್ಲ ಕಡೆತಿರು । ಗುತ ಭರತಖಂಡದೊಳು ಬಂ
ದನು । ವಿತತ ವಿಂಧ್ಯಾಚಲದಪತ್ತಿರ ಕಭ್ರಮಾರ್ಗದಲಿ ‖ ೧೦ ‖ ಗಿರಿಯ

ಮಧ್ಯದೊಳೊರ್ವ ಶೂದ್ರನು । ಹರನ ನಾಮವ ಜಪಿಸುತ ಹಗ ।
ಲಿರುಳಧೋಮುಖನಾಗಿ ನಿಂದು ತಪವನೆಸಗುತಿರಲು ॥ ತ್ವರಿತದಿಂದವನ
ನು ವಧಿಸಿ ರಘು । ವರನು ಮುಕ್ತಿಯನೀಯಲಂದನಿ । ತರೊಳಯೋ
ಧ್ಯಾಪುರದ ವಿಪ್ರನ ಮಗನು ಜೀವಿಸಿದ ॥ ೧೧ ॥ ಸುರಪಥದೊಳೈತಂದ
ಯೋಧ್ಯಾ । ಪುರಿಗೆ ರಘುನಂದನನು ಧರಣೀ । ಸುರನಿಗೊಪ್ಪಿಸುತವನ
ಮಗನನು ಬಹಳಹರ್ಷದಲಿ ॥ ಕರುಣೆಯಿಂದೀಕ್ಷಿಸುತ ಸಕಲ ಜ । ನ
ರನು ಮನ್ನಿಸಿ ಕಳುಹಿಕೊಟ್ಟತಿ । ಭರದೆ ಬಂದನು ಸತಿಸಹಿತ ನಿಜರಾ
ಜಮಂದಿರಕೆ ॥ ೧೨ ॥ ಕೆಲವುದಿನಗಳನಂತರದೊಳಾ । ನೆಲದಣುಗಿ ತಾ
ನೊಂದು ದಿವಸದಿ । ಛಳತಿಗೋಪ್ಯದೆ ನಮಿಸಿ ರಾಮನ ಪಾದಪಂಕಜ
ಕೆ ॥ ಎಲೆ ಮನೋರಥ ಕುಶನು ಹುಟ್ಟಿದ । ಬಳಿಕ ನನಗೇತಕ್ಕೆ ಮ
ತ್ತೆಯೊ । ಡಲೊಳು ಗರ್ಭವು ನಿಲ್ಲಲಿಲ್ಲವೆನುತ್ತ ಕೇಳಿದಳು ॥ ೧೩ ॥
ಲಲನೆ ಪೇಳಿದ ನುಡಿಯ ಕೇಳ್ದನ । ಕುಲತಿಲಕ ನೊಂದು ಕ್ಷಣಿತ
ನಕ । ಸಲೆವಿಚಾರವನಾಂತು ಯೋಚಿಸಿ ತನ್ನ ಚಿತ್ತದಲಿ ॥ ಎಲೆಸತಿಯೆ
ನೀನೇತಕೆಳಸುವೆ । ಪಲವುಮಕ್ಕಳ ಸತ್ಕುಲದೊಳು ಬ । ಹುಳಸುತ
ರು ಸಂಜನಿಸಬಾರದು ಕೇಳು ಮನವಿರಿಸಿ ॥ ೧೪ ॥ ಇರಲಿರಲು ಸದ್ವಂ
ಶದೊಳು ಬಲು । ದುರುಳ ನೊರ್ವನು ಜನಿಸಿ ಕಾಲಾಂ । ತರದೆ ತಾ
ನಾಕುಲಕೆ ಹಾನಿಯನುಂಟುಮಾಡುವನು ॥ ಅರಸಿಕೇಳದು ಕಾರಣಬ
ಹು ಸು । ತರನಪೇಕ್ಷಿಸಲಿಲ್ಲ ನಾನು ಬ । ಸಿರನು ಹೊಂದುವುದೆಲ್ಲಿ ನೀನೆ
ನ್ನಿಚ್ಛೆಯಿಲ್ಲದೆಯೆ ॥ ೧೫ ॥ ಕುಲವನುದ್ಧರಿಪೊರ್ವ ಪುತ್ರನ । ನಿಳೆಯೊಳೆ
ಲ್ಲರಪೇಕ್ಷಿಸಲು ಬೇ । ಕೆಲೆ ಸತಿಯೆ ಕೇಳ್ಕ್ರಮಿಗಳಂತತಿ ದುಷ್ಟರಹಸು
ತರು ॥ ಹಲಬರುದಿಸಿದೊಡೇನುಫಲವು ಕ । ಮಲಸಖವಿಧುಗಳಂತುದಿ
ಸಿಹರೊ । ಡಲೊಳು ಕುಶಲವರಿಬ್ಬರಿನ್ನೇತಕೆ ಸುತರು ನಿನಗೆ ॥ ೧೬ ॥
ನಿನಗೆ ಸಂತತಿಬೇಡವೆನುತಾ । ಮನುಕುಲೋತ್ತಮ ನರುಹಲಂದಾ ।
ಜನಕಸುತೆ ಮನದೊಳು ವಿಷಾದವತಾಳ್ದು ಬಿಸುಸುಯ್ದು । ನನಗೆ
ಕನ್ಯಾರತ್ನ ವೊಂದನು । ಮನವೊಲಿದನುಗ್ರಹಿಸಬೇಕೆಂ । ದೆನುತ
ಬೇಡಿಕೊಳುತ್ತಿರಲಾ ರಘುನಾಥನಿಂತೆಂದ ॥ ೧೭ ॥ ನಿನಗೆ ಮಗಳುದಿಸಿದ
ರವಳ ನಾ । ವನಿಗೆ ನಾಂ ಕೊಡಲೀಭುವನದೊಳು । ನನಗೆ ಸಮರಾ
ರುಂಟು ಜಾನಕಿ ಕೇಳವನಿಪರೊಳು ॥ ವಿನಯದಿಂದಾವ ನೃಪನಸತಿ
ಗೆ । ವಿನಮಿಸುವೆ ನೀನಾರಕಾಲುಗ । ಳನು ತೊಳೆಯಬೇಕೀಮಹೀತ
ಳದೊಳಗೆ ನಾಂ ಪಿಡಿದು ॥ ೧೮ ॥ ಅವನಿಪಸಂತಪ್ಪದೊರೆಮಗ ।

ನೀ ವಸುಧೆಯೊಳದರ ನಿಮಿತ್ತದೆ । ಭಾವಿಸದಿಹೆನು ಮಗಳು ಬೇಕೆನು
ತೆನ್ನ ಚಿತ್ತದಲಿ ॥ ಆವಕಾಲದೊಳಲ್ಲ ನನಗೀ । ಭೂವಲಯದೊಳು ಮ
ಗಳುಬೇಕೆಂ । ಬಾವಿತ್ರತಮೆನಿಪಾಸೆ ಕೇಳೆಲೆಮತ್ತಗಜಗಮನೆ ॥ ೧೯ ॥
ಲವಕುಶರು ಮೊದಲಾದ ಮಕ್ಕಳ । ಕುವರಿಯರು ನಿನ್ನಾತ್ಮಜೆಯರ ।
ಲ್ಲವೆ ಮಹೀಸುತೆ ನೀನು ಯವ್ವನಮತ್ತತೆಯೊಳಂತು ॥ ಕವಿದಮೋಹ
ಕಥೀನನಾಗುತ । ಕುವರರ ನಪೇಕ್ಷಿಸಿಯೆ ಕೇಳುತಿ । ರುವೆ ಬಗೆದ್ರಿ
ಯೆ ಜನನಿಯಲ್ಲವೆ ನೀನು ಮೂಜಗಕೆ ॥ ೨೦ ॥ ನಿನಗೆ ಹೆಂಗಸರೆಲ್ಲ
ಪುತ್ರಿಯು । ರೆನಿಸಿಕೊಂಡಿರುತಿಹರು ಗಂಡಸ । ರ ನಿಬರು ಕುವರರೆನಿಸಿ
ಕೊಂಡಿಹರೆನುತೊಡಂಬಡಿಸಿ ॥ ವನಜಮುಖಿ ಕೇಳ್ನನಗೆ ಬಹುಸು
ತ । ರನು ಕೊಡದಿರಲಿಹುದು ನೆಪಮದನು । ಸಿನಗೂರೆವೆನಾಲಿಪುದೆನುತ
ಲಿಂತೆಂದನಾರಾಮ ॥ ೨೧ ॥ ಸುತರು ಬಹುಜನ ಸಂಜನಿಸಲು ವ ।
ನಿತೆಯರಿಗೆ ಯವ್ವನವು ಪೋಪುದು । ಸತಿಯೆ ನೀಂ ಕೇಳ್ನಿನ್ನ ಜವ್ವನ
ಪೋಪುದೆಂದೆನುತ ॥ ಅತಿ ಚತುರತನದಿಂದಿದನು ಸಂ । ತತವು ತಿಳಿದಿಂ
ತಾಗಿಸಿದೆ ನೀ । ಕ್ಷಿತಿಯೊಳಿದು ಬಹುಗೋಪ್ಯವೆನುತೊಪ್ಪಿಸಿದ ನವನಿಜೆ
ಯು ॥ ೨೨ ॥ ಭರದೊಳೊಂದಾನೊಂದುದಿನ ಬಂ । ದರವನೀಸುತೆ
ಪಾದಪದ್ಮಗ । ಳೆರಡ ನೀಕ್ಷಿಸಬೇಕೆನುತ ವಾಹನಗಳ ನಡದರ್ ॥
ಅರಸಿಯರು ಮುನಿಪತ್ನಿಯರಿಳೆಯೊ । ಳಿರುವ ಚಾತುರ್ವರ್ಣ್ಯದವನಿತೆ ।
ಯರುಗಳೇಳು ದ್ವೀಪಗಳೊಳಿರುವಖಿಳನಾರಿಯರು ॥ ೨೩ ॥ ಸಾವಿರಾ
ರುಜನಗಳ ನೊಡಗೊಂ । ಡಾವಿಮಲತರ ಚೈತ್ರಮಾಸದ । ಪಾವನ
ಸ್ನಾನಕೆನುತಾವನಿತೆಯರು ಬರುತಿರಲು ॥ ತೀವಿದತಿ ಕರುಣಾಕಟಾಕ್ಷ
ದೊ । ಳಾವನಿತೆಯರ ನಿದಿರುಗೊಳ್ಳುತ । ಭೂವಧೂಸುತೆ ಯುಪಚರಿಸಿ
ದಳು ಮನೆಗೆ ಕರೆತಂದು ॥ ೨೪ ॥ ವಿನುತ ಸಿಂಹಾಸನದೆ ಕುಳಿತಿಹ ।
ಜನಕಜಾತೆಯ ಪಾದಪದ್ಮಕೆ । ಮಣಿದೆರಗುತವರೆಲ್ಲ ನಾನಾದೇಶದೊಳಿ
ರುತಿಪ ॥ ಮಣಿಕನಕವಸನಾಭರಣ ವಾ । ಹನಗಳನು ಕಾಣಿಕೆಯ
ನೀಯುತ । ಮನಮೊಲಿದು ಪೂಜಿಸಿದರರಿಸಿನ ಕುಂಕುಮವನಿರಿಸಿ
॥ ೨೫ ॥ ಆಗಳಾ ಮಾನಿನಿಯರೆಲ್ಲ ಸ । ರಾಗದಿಂದವನೀಸುತೆ ನುಡಿದ ।
ರಾಘವನ ಕಥೆಗಳನು ಕೇಳುತ್ತಧಿಕಹರ್ಷದಲಿ ॥ ಶ್ಲಾಘಿಸುತ ಸೀತಾ
ವಿವಾಹವ । ನಾಗ ಬಿನ್ನವಿಸಿದರೆಲೆ ಜನನಿ । ಬೇಗತಿಳುಹಿಸು ನಿನ್ನ
ಮದುವೆಯ ಸತ್ಕಥೆಯನೆನುತ ॥ ೨೬ ॥ ಅವರ ಮಾತನು ಕೇಳ್ದು
ಜಾನಕಿ । ತವಕದಿಂದಲೆ ತನ್ನ ಸಖಿಯೆನಿ । ಸುವ ತುಲಸಿಯೊಡನೆಂದ

ಳಾಕಥೆಯನ್ನು ತಿಳಿಸೆನುತ ॥ ಅವಳ ಮುಖದಿಂದಾಲಿಸುತ ಲಾ । ದಿವೆ
ಸವನಿತೆಯರಾ ವಿವಾಹೋ । ತ್ಸವದ ಸತ್ಕಥೆಯನ್ನು ಹೊಗಳಿದರಧಿಕಭ
ಕ್ತಿಯಲಿ ॥ ೧೭ ॥ ಧರಣಿಜಾತೆಯ ಚರಣಪಂಕಜ । ಕೆರಗಿ ಪೂಜಿಸಿ
ಮನ್ನಣೆಯನಾಂ । ತುರುತರದವರ ಚೈತ್ರಮಾಸಸ್ನಾನವನುಗೈದು ॥
ಹೊರಟುಹೋದರು ತಮ್ಮೆಡೆಗಳಿಗೆ । ಭರದೆ ರಾಮನಬಳಿಗೆ ಬಂದನು ।
ಮರುದಿವಸ ವಾಲ್ಮೀಕಿ ವನದಿಂದೊರ್ವ ವಟುವರನು ॥ ೧೮ ॥
ನಮಿಸಿ ರಘುಭೂಪಾಲಕನ ಪದ । ಕಮಲಕಾ ವಟುವರನು ಪೇಳ್ದ
ನು । ವಿಮಲಮತಿ ವಾಲ್ಮೀಕಿಯಾಗವನಾಗಿಸುತ್ತಿಹನು ॥ ಕಮಲನಾಭ
ನೆ ನೀವುಬರ್ಪುದು । ವಿಮಲಯಾಗಕೆ ಸಕಲಬಾಂಧವ । ಸಮುದ
ಯದೊಳಿಂದೆನುತಪೇಳ್ದನು ಕೊಟ್ಟು ಪತ್ರಿಕೆಯ ॥ ೧೯ ॥ ಒಡನೆ
ಮನೆಗಿನ್ನೊರ್ವ ವಟುಬಂ । ದಡಿಗೆರಗಿ ಬಿನ್ನೈಸಿದನು ಕೇ । ಳೊಡೆ
ಯ ವಿಶ್ವಾಮಿತ್ರಮುನಿ ಘನತರದ ಯಜ್ಞವನು ॥ ಒಡರಿಸುತ್ತಿಹನದಕೆ
ಸತಿಸುತ । ರೊಡನೆ ನೀವ್ಬಯಮಾಡಬೇಕೆನು । ತಿಡಿದ ಸಂತಸದಿಂದೆ
ಪೇಳ್ದನು ನಮಿಸಿ ಕೈಮುಗಿದು ॥ ೨೦ ॥ ಧರಣಿಸುತೆ ಗೀ ಸಂಗತಿಯ
ನಂ । ದರುಹಿ ರಾಘವನಖಿಳ ಜನಸಹಿ । ತೆರಡು ದಾರಿಗಳೆರಡು ದೆಸೆಗೈ
ದು ವೆಡೆಗೈತಂದು ॥ ಎರಡೆರಡು ರೂಪುಗಳ ನೈದುವ । ತೆರದೊಳಾಜ್ಞಾ
ಪಿಸಿ ಸಮಸ್ತ ಜ । ನರಿಗೆ ಬಂದನು ಭರದೊಳಬ್ಬರ ಯಾಗಗಳಿಗಾಗಿ
॥ ೨೧ ॥ ಆ ಮುನೀಂದ್ರರ ಯಜ್ಞಗಳೆರಡ । ನಾ ಮನುಕುಲೋತ್ತಮ
ನು ಮಾಡಿಸಿ । ಭೂಮಿಸುತೆ ಸಹಿತಖಿಳ ಮರ್ಯಾದೆಗಳನೈದುತ್ತ ॥ ನೇ
ಮದಿಂದಾ ಮುನಿಪತಿಗಳಿಗೆ । ಕೈಮಗಿದು ಸಂತೋಷಪಡಿಸುತ । ತಾಮ
ಸವನಾಗಿಸದೆ ಬಂದನು ತನ್ನ ಪುರಿಗಾಗಿ ॥ ೨೨ ॥ ಮೊದಲೆರಡು ರೂ
ಪಂಗಳನು ತಾ । ಳಿದೆಡೆಗೈತಂದಾ ರಘೂತ್ತಮ । ನೊದವಿಸುತ ವಿಸ್ಮ
ಯವನೊಂದೇರೂಪವನು ತಾಳ್ದು ॥ ಪದೆದು ಮನ್ನಿಸುತಖಿಳಸೇನೆ
ಯ । ನೊದವಿದತ್ಯಾನಂದದಿಂದಾ । ಸುದತಿ ಜಾನಕಿಯೊಡನಯೋಧ್ಯಾ
ಪುರಿಗೆ ನಡೆತಂದ ॥ ೨೩ ॥ ಪರಿಮಳಂಗಳನೆಲ್ಲ ಕಡೆಗಂ । ಧರಿಸುವ
ಪಂಕೇರುಹಂಗಳ । ನಿರಿಸಿದಪಲವು ಸಾವಿರದ ಬುಟ್ಟಿಗಳನಾತೆರದೆ ॥
ಪರಿಪರಿಯ ಪಕ್ವಫಲಗಣದಿಂ । ದುರೆಮೆರೆವ ಪೆಟ್ಟಿಗೆಗಳನು ರಘು ।
ವರನಬಳಿಗಾ ಭೂರಿಕೀರ್ತಿ ಕಳುಹಿದನೊಂದುದಿನ ॥ ೨೪ ॥ ಅವುಗಳೆಲ್ಲ
ವ ನೀಕ್ಷಿಸುತ ರಾ । ಘವನು ಧರಣೀಸುತೆಯ ಹತ್ತಿರ । ಕವುಗಳೆಲ್ಲವನು
ಕಳುಹಿಸಲಾ ಜನಕನಂದನೆಯು ॥ ತವಕದಿಂದಾ ಪೆಟ್ಟಿಗೆಗಳ । ಲ್ಲವನು

ತೆರೆದಾಘ್ರಾಣಿಸಿದಳು ಹ । ಲವುಸಲ ಘನಸುಗಂಧದಿಂದೆಸೆವಾ ಕುಸುಮಗಳನು ॥ ೩೪ ॥ ಮನುಜಪಾಲಕ ಸಭೆಯೊಳಿರುತಾ । ಜನಕನಂದನೆಗೈದುದನರಿತು । ವನಜಗಳನಾಘ್ರಾಣಿಸಿದಳಿಳದೆನ್ನನವನಿಜೆಯು ॥ ಇನಯನಪ್ಪಣೆ ಯಿಲ್ಲದಾ ಪತಿ । ಯನುಳಿದಾವಪದಾರ್ಥವನು ಮಾ । ನಿನಿಯರು ಧರಿಸಕೂಡದಿದು ತರವಲ್ಲಬಲೆಯರಿಗೆ ॥ ೩೬ ॥ ಅದುನಿಮಿತ್ತದೆ ಶಿಕ್ಷಿಸುವೆನೀ । ಸುದತಿಯನು ನಾನಿಲ್ಲದಿದ್ದರೆ । ವಧುಗಳೆಲ್ಲರು ಜಗದೊಳೀತೆರದಿಂದೆ ಮಾಡುವರು ॥ ಇದು ವಿಹಿತವಲ್ಲೆಂದು ಯೋಚಿಸಿ । ಸದನಿಕತ್ತಿ ಶೀಘ್ರದೊಳು ಬಂದನು । ಅವನು ಮತ್ತೊಬ್ಬರಿಗೆ ಪೇಳದೆ ಮನದೆ ಯೋಚಿಸುತ ॥ ೩೭ ॥ ಭರದೊಳೊಡ್ಡೋಲಗವ ನಾರಘು । ವರನು ಮುಗಿಸುತ ಜಾನಕಿಯ ಹ ॥ ತ್ತಿರಕೆ ಬಂದಾ ಪೆಟ್ಟಿಗೆಗಳನು ತೆಗಿಸಿ ನೆರೆನೋಡಿ ॥ ವರಫಲ ಕುಸುಮಚಂದನಂಗಳ । ನಿರದೆ ಪಟ್ಟಣದೊಳಹ ಸಕಲ ಜ । ನರಿಗೆ ಕೊಟ್ಟಾಬಳಿಕವುಗಳನು ತಾನುಧರಿಸಿದನು ॥ ೩೮ ॥ ಬಂದುದಿನವೇಕಾದಶಿಯೊಳಾ । ನಂದದಿಂ ದುಪವಾಸವನೆಸಗು । ತಿಂದುವವನೆ ಮಹೀಸುತೆ ದ್ವಾದಶಿಯುಷಸ್ಸಿನೊಳು ॥ ಮಿಂದುಬೃಂದಾವನಕತಿಭಕುತಿ । ಯಿಂದೆ ಪೂಜೆಯನಾಗಿಸುತ ನಲ । ವಿಂದೆ ಸುತ್ತುಬಳಸುತಲಿದ್ದಳು ಪೇಳ್ವಮಂತ್ರವನು ॥ ೩೯ ॥ ಪೊಡಮಡುತಲಾಸೀತೆ ತುಲಸಿಯ । ಗಿಡಕೆಮೂರುಸಲ ಪ್ರದಕ್ಷಿಣೆ । ಯೊಡರಿಸುತ್ತಿರೆ ಸೆರಗುಸೋಂಕುತಬಿದ್ದುದೊಂದೆಲೆಯು ॥ ಪೊಡವಿಯೊಳಗೀದಿನದೆ ತುಲಸಿಯ । ಗಿಡದೆಲೆಯುರುಳ್ದುದ ನುಚಿತವೆನು । ತೊಡನೆ ಪತ್ರವನಲ್ಲಿರಿಸಿಬೇಡಿದಳುಪಲತೆರದೆ ॥ ೪೦ ॥ ಮುಗಿಸಿಪೂಜೆಯನಾ ಗಿಡಕೆಕೈ । ಮುಗಿದುಜಾನಕಿ ಪುಲವು ಬಗೆಹರಿ । ಕೆಗಳನಾಗಿಸಿ ಬರುವನಿತರೊಳು ರಾಜಮಂದಿರಕೆ ॥ ಗಗನದಿಂದೈತಂದ ಮುರಮುನಿ । ರಘುವರನ ಮುಂದುಗಡೆ ನಿಂದನು । ಬಗೆಬಗೆಯರಾಗಂಗಳನು ಹಾಡಿಸುತವೀಣೆಯಲಿ ॥ ೪೧ ॥ ದೇವಮುನಿಯಚರಣಕೆರಗಿ ರಘು । ಭೂವರನು ಕುಳ್ಳಿರಿಸಿಕೂಡೆ ಮ । ಹಾವಿಭವದಿಂದರ್ಘ್ಯ ಪಾದ್ಯಾಚಮನಗಳನಿತ್ತು ॥ ತಾವುಭೋಜನ ಕೇಳಬೇಕೆನೆ । ಲೀವಸುಮತೀಸುತೆ ಬಡಿಸಿವರೆ । ನಾವುಮಾಡುವುದಿಲ್ಲ ವೂಟವನೆಂದುಪೇಳದನು ॥ ೪೨ ॥ ಧಾರಿಣೀಸುತೆ ಭೀತಿಗೊಂಡಳು । ವೀರರಾಘವ ನರಿಯದಂದದೆ । ಕಾರಣವದೇನೆನುತ ಕೇಳ್ದೊಡಮುರಮುನೀಂದ್ರನನು ॥ ಘೋರಪಾತಕಿ ಸೀತೆಮುರಿದಳು । ಸೀರೆಸೆರೆಗಿಂ ದೊಂದೆಲೆಯನು ವಿ । ಚಾರಿಸದೆ ತುಲಸೀಗಿಡದೊಳೀ ದ್ವಾದಶಿಯದಿವಸ ॥ ೪೩ ॥ ಪೋಗಿನೋಡೆಲೆ ರಾಘವ

ನೆನೀ । ನೀಂಗಲಿವರ ನಿಜಸ್ಥಿತಿಯುಂ ಗೊ । ತ್ತಾಗುವುದಿದು ಬ್ರಹ್ಮಹತ್ಯಕೆ ಸರಿಯಹುದೆನುತ್ತ ॥ ಆಗ ನಾರದನರುಹುತಿರಲನು । ರಾಗದಿಂದಾ ರಘುವಂಶಿವ । ಕ್ಕಾಗಿಪ್ಪುದು ಪರಿಹಾರವನು ನೀವೆನುತಬೇಡಿದನು ॥ ೪೪ ॥ ತನ್ನ ಪಾತಿವ್ರತ್ಯ ಮಹಿಮೆಯೊ । ಳನ್ನು ಜಾನಕಿಗಿಡದೊಳೀಯೊಲೆ । ಯುನ್ನು ಸಂಧಿಸಲೀ ದುರಿತಪರಿಹಾರವಹುದೆನುತ ॥ ಮನ್ನಿಸಿತಿಳಿಸಲಮರ ಮುನಿವರ । ನನ್ನೆಗಂ ಪದಕೆರಗಿಜಾನಕಿ । ಬಿನ್ನವಿಸಿದಳು ನೀವ್ರನುಡಿದಂತಾಗಿಸುವೆನೆಂದು ॥ ೪೫ ॥ ಒಡನೆಬೃಂದಾವನದ ಬಳಿಗಾ । ಪ್ರೌಢಪಿಯುಣಾಗಿಯುಂ ಬಂದು ತುಲಸಿಯು । ಗಿಡಕೆ ಕೈಮುಗಿದೆರಗಿ ನಿಂದೆಲೆ ತುಲಸಿದೇವತೆಯೆ ॥ ಗಿಡದೊಳಗೆ ಮೊದಲಂತೆ ಸೇರಲಿ । ಕಡುತವಕದಿಂ ದೀಯಲೆಯುನಾಂ । ಪೊಡವಿತಳದೆ ಪತಿವ್ರತೆಯೆನುತ ಜನವೆನಾಂತಿರಲು ॥ ೪೬ ॥ ಸಿಲುಕಿಕೊಳ್ಳದೆ ಪೋಗಲೆಲೆಕೋ । ಮಲತುಲಸಿ ಗಿಡದಲ್ಲನಿತರೊಳ । ಖಿಳವಿಬುಧರೈತಂದರತಿ ಜವದಿಂದನೆರೆನೆರೆದು ॥ ನೆಲವನೀಕ್ಷಿಸುತತಿವಿಷಾದವ । ತಳೆದು ನಿಂದವನಿಜೆಯುಕಂಡು ವ । ಹಿಲದೊಳಮರ ಮುನೀಂದ। ನೊಲವಿಂದಿಂತುಪೇಳಿದನು ॥ ೪೭ ॥ ಎಲೆಮಹೀಸುತೆ ಕೇಳುಗಂಡನನುಳಿಮುಚ್ಚಂದನ ಪುಷ್ಪಫಲಗಳ । ನೊಲಿದುಸೇವಿಸಕೂಡದು ಪತಿವ್ರತೆಯರಿಳೆಯೊಳಗೆ ॥ ಸಲೆಹೊಳೆವುತಿಹ ಪರಸುಗಂಧಕ । ಮಲಗಳನು ನೀಂ ರಾಘವೇಂದ್ರನ । ನುಳಿದೆ ಆಘ್ರಾಣಿಸಿದೆಯಲ್ಲವೆ ಹಿಂದೆಯೋಚಿಸದೆ ॥ ೪೮ ॥ ಮತ್ತೆ ಬೃಂದಾವನದ ಬಳಿಗೈ । ದುತ್ತ ಪತಿಗೆಸಮರ್ಪಿಸದೆನಾ । ನುತ್ತಮ ಕಮಲತತಿಯನಾಘ್ರಾಣಿಸಿದುದನುತೊರೆದು ॥ ಉತ್ತಮಪತಿವ್ರತೆಯಧರ್ಮವ । ನೆತ್ತಲುಂ ಸಲಿಪಿರ್ದಡೀಯೊಲೆ । ಮತ್ತೆ ಸಂಧಿಸಲಿಂದುಬೇಡೆನುತಮರ ಮುನಿನುಡಿದ ॥ ೪೯ ॥ ಅಮರರೆಲ್ಲರು ನೋಡುತಿರಲಾ । ಕಮಲಲೋಚನೆ ಸೀತೆಶೀಘ್ರದೊ । ಳಮಲ ಬೃಂದಾವನವನುಂಗಡೆನಿಂದು ಕೈಮುಗಿದು ॥ ರಮಣನಂತೊರೆದಾ ಕಮಲವಕು । ಸುಮವನಾಘ್ರಾಣಿಸಿದುದಲ್ಲದೆ । ವಿಮಲಪಾತಿವ್ರತ್ಯಧರ್ಮವು ನನ್ನೊಳಿರುತಿರಲು ॥ ೫೦ ॥ ಎಲೆಯು ನಿನ್ನೊಳುಸಿಕ್ಕಿಕೊಳಲಿ ಮೊ । ದಲಿನ ರೀತಿಯೊಳಿಂದುಜಾನಕಿ । ತುಲಸಿಯನು ಬೇಡಿಕೊಳಲಷ್ಟರೊಳಗೆ ಗುರುಸ್ಥಲೆಯು । ಸಿಲುಕಿಕೊಂಡುದು ಮೊದಲಿನಂತಾ । ತುಲಸಿಗಿಡದೊಳು ಸಕಲದೇವತೆಗಳು ಮನುಕುಲೇಂದ್ರನನು ಪೊಗಳುತಪಡೆದವರಚ್ಚರಿಯ ॥ ೫೧ ॥ ಅವನಿಜಾತೆಯ ಪತಿಭಕ್ತಿಯುಧ । ರ್ಮವನು ಪೊಗಳುತ್ತಖಿಳ ನಿರ್ಜರ । ರವನಿಜೆ ರಘೂತ್ತಮರ ಪದಪಂಕಜಕೆರಗಿ ॥ ಅವರವರ ಲೋಕಂ

ಗಳಿಗೆ ಕಡು । ತವಕದಿಂದಲೆ ಪ್ರೋದರಾನಂ । ದವನು ತೋರ್ಪಡಿಸುತ್ತ ತನ್ನ ಮುಖಾರವಿಂದದೊಳು ॥ ೫೨ ॥ ಸುರಮುನಿಪನವನೀ ಸುತೆಬಡಿಸಿ । ದುರುತರದ ಮೃಷ್ಟಾನ್ನವನು ಪರಿ । ಪರಿಯ ಪಾವನಭಕ್ಷ್ಯಭೋಜ್ಯಾದಿಗಳ ಭುಂಜಿಸುತ ॥ ಪರಿಮಳಸುಗಂಧ ಕುಸುಮಗಳನು । ಧರಿಸಿ ಫಲತಾಂಬೂಲ ದಕ್ಷಿಣೆ । ವರವಸನಗಳನಾಂತು ತೆರಳಿದನಮರಪುರಿಗಾಗಿ ॥ ... ... ॥ ೫೩ ॥

ಇಂತು ನಲವತ್ತುನಾಲ್ಕನೆಯ ಅಧ್ಯಾಯ ಸಂಪೂರ್ಣವು

ಪದ್ಯಗಳು ೨೪೯೫.

ನಲವತ್ತೈದನೆಯ ಅಧ್ಯಾಯ.

ಸೂಚನೆ ॥ ಪ್ರತಿವರುಷದೊಳು ರಾಘವನು ಭೂ ।
ಸುತೆಯೊಡನೆ ವಿಪ್ರರಿಗೆಕೊಟ್ಟನು ।
ವಿತತವೈಭವದಿಂದೆ ಪೂಜಿಸಿ ಕೋಟಿಲಿಂಗಗಳ ॥

ಗುರುವಸಿಷ್ಠ ಮುನೀಂದ್ರನರುಹಿದ । ತೆರದೆ ರಾಘವನತಿಭಕುತಿಯಿಂ । ದಿರದೆ ಒಳಕೊಂಡೊಂದು ಭಾರದತೂಕವಿರುವಂತೆ ॥ ವರಸುವರ್ಣದೊಳೊಂದು ಲಿಂಗದ । ತೆರದಿ ಮಾಡಿಸಿದನತಿ ಮಂಜುಳ । ತರದಿನಿಸಿತ್ತೋರ್ಪೊಂದು ಕೋಟಿಯ ಲಿಂಗಗಳ ನೊಲಿದು ॥ ೧ ॥ ಬಿಂದುಸಾವಿರವೆಂಟು ಲಿಂಗಗ । ಳಿಂದೆಸಿ ನಿರ್ಮಿಸಿದತಿ ಶುಭಕರದ । ದಿಂದೆನಿಪ ಮಂಗಳಸುಪೀಠದ ಮಧ್ಯಭಾಗದೊಳು ॥ ಅಂದವಾಗೆಸೆವೊಂದು ಕಮಲದೊ । ಳೊಂದುಲಿಂಗವ ನಿರಿಸಿ ಸಂತಸ । ದಿಂದಲೆ ನಭೋಮಾಸದೊಳು ತಾಳ್ದಧಿಕ ಭಕ್ತಿಯನು ॥ ೨ ॥ ಅದಕೆ ಷೋಡಶವಿಧದಪೂಜೆಯ । ನೊದವಿಸುತ್ತರಗಿ ರಾಘವೇಶ್ವರ । ನದರದಕ್ಷಿಣೆಗಿಟ್ಟ ಪಾವನ ರಾಮಟಂಕಿಯನು ॥ ಮುದದೊಳೋರ್ವ ಧರಣಿಸುರನನೊದ । ವಿದ ಭಕುತಿಯಿಂದರ್ಚಿಸಿತ್ತನು । ಸದಯದಿಂದಾಸನದ ಸಹಿತಾತನಿಗೆ ಲಿಂಗವನು ॥ ೩ ॥ ಬೇರೆಬೇರೆ ವಿಧಂಗಳಿಂದಿಂ । ತಾರಘುವರನು ಕೂಡೆಮೂವ । ತ್ತಾರು ದಿವಸದೊಳೊಂದು ಕೋಟಿಯ ಲಿಂಗಗಳನೊಲಿದು ॥ ಧಾರಿಣೀಸುತೆಸಹಿತಘನಗಂ । ಭೀರ ವಚನದೊಳಾದರಿಸಿ ಯುಪ । ಚಾರಮಾಡುತ ದಾನ

ಮಾಡಿದನಂದು ವಿಪ್ರರಿಗೆ ॥ ೪ ॥ ವರುಷವರುಷ ದೊಳಂತುರಾಮನು ।
ವರನಭೋಮಾಸದೊಳು ತಪ್ಪದೆ । ಪರಮ ಭಕ್ತಿಯೊಳರ್ಚಿಸುತ ಬ
ಹುಕಾಲಪರ್ಯಂತ ॥ ಧರಣಿಜಾತೆಯು ಸಹಿತ ಸಮನಂ । ತರದೊಳು ವ್ರತ
ದಂಗಹೋಮವ । ವಿರಚಿಸುತ್ತಾಗಿಸಿದ ನವಕುದ್ಯಾಪನಂಗಳನು ॥ ೫ ॥
ಮುನಿಗಳಿಗೆ ಧರಣೀಸುರರಿಗಾ । ಮನುಕುಲೋತ್ತಮ ನಖಿಳದಾನಗ।
ಳನೊಲಿದಿತ್ತುರೆ ಮನ್ನಿಸುತ ಮೃದುಮಧುರವಚನದಲಿ ॥ ಜನಕನಂದನೆ
ಯೊಡನೆ ವಿಪ್ರರ । ಘನಚರಣಪಂಕಜಕೆ ವಿನಯದೆ । ಮಣಿದೆರಗಿದನು
ಭಕ್ತಿಭಾವದೊಳಂದು ಕೈಮುಗಿದು ॥ ೬ ॥ ಕಡುಬು ಹೋಳಿಗೆಲಾಡು
ಪಿರಿಹೊ । ಯ್ಗಡುಬು ಮಂಡಿಗೆ ಫೇಣಿಘೃರಿಗೆ । ಸುಡುವೆಹಪ್ಪಳ ಸಂ
ಡಿಗೆ ಚಿರೋಟಿ ಕರದಾಂಬೊಡೆಯು ॥ ಕಡುಸವಿಯನಾಂತ ಸುಖಿಯುಂ
ಡೆಪ । ರಡಿಯುಪಾಯಸ ಪಲ್ಯಹುಳಿ ಪ । ಚ್ಚಡಿಗಳೀ ಮೊದಲಾದವುಗ
ಳನ್ನಡಿಗೆ ಮಾಡಿಸುತ ॥ ೭ ॥ ಹೊಳೆವ ವರಶಾಲ್ಯನ್ನ ಷಡ್ರುಚಿ । ಗಳ
ತಳೆದಚಿತ್ರಾನ್ನ ಸಲೆಕಂ । ಗೊಳಪ ವಾರ್ತಾಕಾನ್ನ ದಧ್ಯನ್ನ ವರಸು
ಘೃತಾನ್ನ ॥ ತಿಳಿಯುರಸ ಚಟ್ನಿಪುಡಿ ತೊವ್ವೆಬ । ಹುಳರುಚಿವಡೆದ
ಮೊಸರು ತುಪ್ಪವೊ । ದಲಹ ವಸ್ತುಗಳೆಲ್ಲವನು ಮಾಡಿಸುತರಾಘವನು
॥ ೮ ॥ ವಿತತಸಂಮದದಿಂದೆ ಪುರದೊಳ । ರುತಿಹ ವರ್ಣಚತುಷ್ಟ
ಯದ ಜನ । ತತಿಗೆ ಭೋಜನಗಳನು ಮಾಡಿಸಿಕೊಡೆಯುಪಚರಿಸಿ ॥
ಅತಿಸುವಾಸನೆಯಿಂದೆ ಮಘಮಘ । ಸುತಿಹ ಚಂದನಕುಸುಮಗಳನು
ಕೊ । ಡುತದಣಿಸಿದನು ದಕ್ಷಿಣಾತಾಂಬೂಲಗಳನಿತ್ತು ॥ ೯ ॥ ಜವದೆ
ಜಾನಕಿ ಸಂತಸವದಳೆ । ದವರವರ ಯೋಗ್ಯತೆಗಳನರಿತು । ಸುವಿಮ
ಲೋಕ್ತಿಗಳಿಂದೆ ಪುರದಸುಮಂಗಲೀಯರನು ॥ ತವಕದಿಂದಡಿಗಡಿಗೆ ಮ
ನ್ನಿಸಿ । ವಿವಿಧ ಮಂಗಳವಸ್ತುಗಳ ನಿ । ತ್ತವರಮನದಣಿವಂತೆ ಭೋಜ
ನಮಾಡಿಸಿದಳೊಡನೆ ॥ ೧೦ ॥ ಪುರದಮಾನವರೆಲ್ಲರಾ ರಘು । ವರನನಾ
ಧರಣೀಸುತೆಯನಾ । ದರದೆ ಹೊಗಳುತಲಿಬ್ಬರಿಗೆ ಸುಖವಾಗಲೆಂದೆನು
ತ ॥ ಹರಿಹರರ್ಗಡಿಗಡಿಗೆ ತಾವ್ಪಲ । ತೆರದೊಳರ್ಪಿಸಿ ಬಲುಹರಿಕೆಗಳ ।
ತೆರಳಿದರು ನಿಜಭವನಗಳಿಗಾನಂದವನುತಾಳ್ದು ॥ ೧೧ ॥ ಜನರಿಗೆವಿವೇ
ಕವನು ರಘುನಂ । ದನನು ತಿಳುಹಿಸುವಂತೆ ಹೊಂದುತ । ಮನುಜವೇ
ಷವನಾ ದಶರಥಮಹೀಶನುದರದೊಳು ॥ ಜನಿಸಿ ನಿತ್ಯವುಸಕಲವಿಧಮಂ ।
ಜನಿಪಕರ್ಮಂಗಳನು ವಿರಚಿಸಿ । ದನವನಿಯೊಳತಿ ವಿಸ್ಮಯವನಾಗಿಸುತ
ಸಂತತವು ॥ ೧೨ ॥ ಹಲವುಕಾಲದ ತನಕಸಲೆಕಂ । ಗೊಳಿಪ ಯೋಧ್ಯಾ

ಪುರವರದೊಳಾ । ಜಲಜನೇತ್ರನು ತನ್ನ ಸತಿಸುತ ಸೋದರರಸಹಿತ ।। ಬೆಳೆದಸಂತಸದಿಂ ದಡಿಗಡಿಗ । ಖಿಳವಿಧದ ಸೌಖ್ಯಂಗಳನು ತಾ । ಳ್ಗಲಿವು ರಕ್ಷಿಸುತಿದ್ದನು ಸಕಲಜೀವಿಗಳನರಿತು ॥ ೧೩ ॥ ಇರಲಿರಲುಬಳಿಕೊಂದುದಿನ ರಘು । ವರನು ಲಕ್ಷ್ಮಣನಂಕರೆದು ಹ । ತ್ತಿರಕೆಲೆಸಹೋದರನೆ ಕೇಳ್ನಾಳೆಯುದಯದಲಿ ॥ ಪುರದ ಮಾನವರೆಲ್ಲರಸಹಿತ । ಭರದೆ ಬೇಂಟೆಗೆಪೋಗಬೇಕೆಂ । ದಿರುವೆ ಸಿದ್ಧಪಡಿಸು ಸಮಸ್ತವನೆಂದುನೇಮಿಸಿದ ॥ ೧೪ ॥ ಅಣ್ಣನಾಜ್ಞೆಯನಾಂತು ಲಕ್ಷ್ಮಣ । ಸನ್ನೆಗಂ ಶಿರಬಾಗಿ ರಾಘವ । ನುನ್ನತಚರಣಯುಗಳ ಪಂಕಜಕೆರಗಿ ಭಕ್ತಿಯಲಿ ॥ ಸನ್ನುತವ ಮೃಗಯಾವಿಹಾರಕೆ । ನನ್ನೊಡವೆರಸಿ ನಾಳೆನೀವ್ಬಪು । ದೆನ್ನುತಪ್ಪಣೆಗೈದನಾ ಪುರದಖಿಳಮನುಜರ್ಗೆ ... ॥ ೧೫ ॥

ಇಂತು ನಲವತ್ತೈದನೆಯ ಅಧ್ಯಾಯ ಸಂಪೂರ್ಣವು

ಪದ್ಯಗಳು ೨೫೧೦.

ನಲವತ್ತಾರನೆಯ ಅಧ್ಯಾಯ.

ಸೂಚನೆ ॥ ಮೃಗದಬೇಂಟೆಯನೆಸಗಿ ವನದೊಳು ।
ರಘುವರನು ವಿಸ್ಮಯವನೆಸಗಿದ ।
ನಗಸುತೆ ಮಹೀಸುತೆಯರಿಗಭೇದವನು ತೋರಿಸುತ ॥

ಬಳಿಕಲೊಂದಾನೊಂದು ದಿನ ರವಿ । ಕುಲತಿಲಕ ರಾಘವನುಪಟ್ಟಣ । ದೊಳಿಹ ಮಾನವರೆಲ್ಲರನು ಬರಿಸುತ್ತಹತ್ತಿರಕೆ ॥ ತಳುವದೈತಂದನುಕುದುರೆ ಬೆ । ನ್ನೊಳು ಕುಳಿತುಕೊಳ್ಳುತ ವನಕೆ ಮ । ಕ್ಕಳಸಹಿತ ಮೃಗಯಾವಿಹಾರಕೆ ಧರಿಸಿಖಡ್ಗವನು ॥ ೧ ॥ ಅಟ್ಟಿಕೊಂಡೈದಿದನು ವನದೊಳು । ಥಟ್ಟನೆಮಹಾ ಮೃಗವದೊಂದನು । ನೆಟ್ಟನೆಬಹುಳನೂರ ನಡೆತಂದದನು ಶರದಿಂದೆ ॥ ಕುಟ್ಟಿಸಂಹರಿಸಿದ ನರಣ್ಯದ । ನಟ್ಟನಡುವಣತಾಣದೊಳು ಗುರಿ । ಯಿಟ್ಟು ರಘುನಂದನನು ತಾನಾಂತತಿವಿನೋದವನು ॥ ೨ ॥ ಜನಗಳೆಲ್ಲರು ಹಿಂದೆನಿಂದರು । ವನದಮಧ್ಯದೆ ಬಹುಳದೂರದೊ । ಳಿನಕುಲೇಂದ್ರನು ಹಸಿವುಬಾಯಾರಿಕೆಗಳನುಹೊಂದಿ ॥ ಮನದೊಳಾಯಾಸವನು ತಾಳುತ । ವನದೊಳೈತಂದೊಂದು ವೃಕ್ಷದ ।

ಸನಿಹದೊಳು ತಾಕುಳಿತುಕೊಂಡನು ತನ್ನೊಳಲಿನೊಳಗೆ ॥ ೩ ॥ ಆಗಳ
ಲ್ಲಿಗದೊರ್ವ ಬೇಡಿತಿ । ಬೇಗನೈತಂದಿದಿರು ನಿಂದಾ । ರಾಘವನನೀಕ್ಷಿ
ಸುತ ನಮಿಸಿದಳಧಿಕ ಭಕ್ತಿಯಲಿ ॥ ಈಗಬಾಯಾರಿಕೆ ಹಸಿವ್ರನನ । ಗಾ
ಗುತಿವೆ ಬಹುವಾಗಿ ನೀನನು । ರಾಗದೊಳು ಭೋಗಿಸೆಲೆಬೇಡಿತಿ ನನ್ನ
ಬಾನ್ಸಿಗಳ ॥ ೪ ॥ ದೂರದಲಿ ಸಾವಿತ್ರಿ ಮೊದಲಹ । ಪೌರಜನಗಳು ನಿಂ
ತಿರುವರು ವಿ । ಚಾರಿಸೆಂದೆನುತಪಳನಾ ರಘುವರನುಕೇಳಿದೊಡೆ ॥ ಧಾರಿ
ಣೀಪತಿಕೇಳು ಘನಕಾ । ಸಾರವೊಂದಿಹುದಿಲ್ಲಿಗೆ ಬಹುಳ । ದೂರಮೆನಿ
ಸದೆ ವಿಮಲಜಲದಿಂದೆಸೆದು ಸಂತತವು ॥ ೫ ॥ ಅದರ ಹತ್ತಿರದಲ್ಲಿರು
ವುದು ಪೆ । ರಿದಹ ದುರ್ಗಾದೇವತೆಯಗುಡಿ । ಯದರಬಳಿಗೀಹೊತ್ತು
ಮಂಗಳವಾರವದರಿಂದೆ ॥ ಪದೆದುಚಂಡಿಕೆಯನ್ನು ಪೂಜಿಸ । ಲೊದ
ವಿದಭಕುತಿಯಿಂದಲೀ ನಗ । ರದಸುಮಂಗಲಿಯರು ಬರುತಿಹರುಗುಂಪು
ಗುಂಪಾಗಿ ॥ ೬ ॥ ಮನುಜಪತಿಕೇಳಲ್ಲಿಗೀಗಳೆ । ಮನವಿರಿಸಿನೀಂ ಬರ
ಲುದೊರೆವುವು । ನಿನಗೆ ಪರಚಿತ್ರಾನ್ನ ಪಾನೀಯಗಳೆನುತರುಹಲು ॥
ವನಿತೆಕೇಳಾ ಲಕ್ಷ್ಮಣಾದಿಗ । ಳನು ನಿರೀಕ್ಷಿಸಿಕೊಂಡಿರುವೆನೀ । ವನ
ದೊಳೆನ್ನವಿಚಾರವನು ಪೇಳಾವನಿತೆಯರಿಗೆ ॥ ೭ ॥ ಎಂದು ತಿಳುಹಿಸಲಂ
ತೆಮಾಡುವೆ । ನೆಂದು ಬಿನ್ನವಿಸುತ್ತ ತಾನೈ । ತಂದು ದುರ್ಗಾದೇವಿ ದೇ
ವಾಲಯದಹತ್ತಿರಕೆ ॥ ಸುಂದರಾಂಗನೆಯರನು ಕಂಡಾ । ನಂದದಿಂದಾ
ಶಬರಿಪೇಳಿದ । ಳಂದಧಿಕ ಮೃದುಮಧುರವಚನಗಳಿಂದೆ ಕೈಮುಗಿದು
॥ ೮ ॥ ರಘುವರನು ಬಂದಿರುತಿಹನು ಬೇಂ । ಟೆಗೆನುತ್ತಿಲ್ಲಿಗೆ ಬಹುಸಮೀ
ಪದೊ । ಳಗಿಹನು ಹಸಿವುನೀರಡಿಕೆಗಳನಾಂತು ಬಳಲಿದನು ॥ ಜಗದೊ
ಡೆಯನೀ ಸಂಗತಿಯನು ನಿ । ಮಗರುಹುವುದೆಂದೆನ್ನ ನಿಂದಿ । ಲ್ಲಿಗೆಕ
ಳುಹಿದನೆನುತ್ತ ಪೇಳ್ದಳು ಶಬರಿವಧುಗಳಿಗೆ ॥ ೯ ॥ ಆವನಿತೆಯರವಳನಿ
ರಿಸಿಕೊಂ । ಡಾವಿನುತ ಚಂಡಿಕೆಯನರ್ಚಿಸಿ । ದೇವದೇವನಿಗನ್ನವಿಟ್ಟು
ಕೃತಾರ್ಥರಹೆವೆನುತ ॥ ಸಾವಧಾನದೊಳಂದು ಯೋಚಿಸಿ । ತೀವಿಯಿಂ
ದಲೆ ಸಿಂಗರಿಸಿಕೊಂ । ಡಾವಿಮಲವಸ್ತುಗಳ ನಾಂತೈತಂದರಾಗುಡಿಗೆ ॥
॥ ೧೦ ॥ ಆಗುಡಿಯೊಳಿರ್ದಂಬೆ ಯನಿತರೊ । ಳಾಗಳವರಿಗೆ ಕರುಣೆ
ತೋರಿಸಿ । ಬೇಗನಾದೇವಾಲಯದ ಬಾಗಿಲನುಮುಚ್ಚಿದಳು ॥ ನಾಗ
ಭೂಷಣನರಸಿ ಮಹದನು । ರಾಗದೊಳಗೊಂದುಕ್ಷಣದಪೋ । ಲಾಗು
ಡಿಯಮುಂದುಗಡೆ ನಿಂದಿಂತೆಂದು ಪೇಳಿದಳು ॥ ೧೧ ॥ ವನಿತೆಯರೆ ನೀ
ವ್ಕೇಳಿನಕುಲೇಂ । ದ್ರನೆನಿಪಾ ರಘುನಂದನನೆ ಗಿರಿ । ಶನೆನಿಪನು ಜಾನಕಿ

ಯೆ ಪಾರ್ವತಿಯೆಂದೆನಿಸುತಿಹಳು ॥ ಜನಕಜಾಪಾರ್ವತಿಯರಿಗು ಮೇ । ಣ್ಣಿನಕುಲೋತ್ತಮ ವಾಮದೇವರಿ । ಗಿನಿತು ಭೇದವು ತೋರದೆನ್ನುತ ರಿಪುನುಚಿತ್ತದಲಿ ॥ ೧೨ ॥ ಇವರುಗಳಿಗಾವ ಜನಗಳು ಛೀ । ದವನೆಣಿಸುತಿರಾಜನರುವೆಸ । ಸುವರುಕುಂಭೀಪಾಕಮೊದಲಾದ ನರಕಂಗಳಲಿ । ವಿವಿಧಯಾತನೆಗಳನು ತಾವನು । ಭವಿಸುತ ದಿವಾರಾತ್ರಿ ಹಾಹಾ । ರವವಗೈಯುತ ಕೋಟಿಕಲ್ಪದ ಕಾಲಪರ್ಯಂತ ॥ ೧೩ ॥ ಅಮಸಿವಿತ್ತದೊಳೀಗಳೆ ಸಕಲ । ವಿಧಗಳಹ ವ್ಯೃಷ್ಟಾನ್ನಗಳನಿ । ತ್ತೊದವಿಪತಿ ಭಕ್ತಿಯಸುತಾತ್ಪ್ತಿಪ್ಡಿಸು ನೆಂದೆನಿಪ ॥ ಮಧುವಿನಾಶಕ ರಾಮಚಂದ್ರನ । ಪದನನಚಿಸಿ ತೃಪ್ತಿಯನೆಸಗು । ಪುವತಿಶೀಘ್ರದೆ ನೀವುಕೈಮುಗಿದೇಗಿ ಮನವೊಲಿದು ॥ ೧೪ ॥ ಮಿಕ್ಕಶೇಷಾನ್ನವನು ನಾನಿಂ । ದಕ್ಕರೆಯೊಳುಣ್ಣುವೆನೆನ್ನುತ । ಘಕ್ಕನೆನುಡಿದು ಹೊರಡಿದಘುನಂದನನು ಹಸಿವಿಂದೆ ॥ ಸೊಕ್ಕಿಬಳಲಿಹ ನೆಂದುಚಂಡಿಕೆ । ತಕ್ಕಪಾತ್ರಗಳಿಂದೆ ತಿಳಿಹಿವ । ನಕ್ಕೆಕಳುಹಿಸಿಕೊಟ್ಟಳಂದಾ ವನಿತೆಯರನೊಡನೆ ॥ ೧೫ ॥ ಅನುಡಿಯನಾಲಿಸುತಘನಸುಂ । ಮಾನವನು ತಾಳ್ದುಚಿತ್ತರಿವಡೆದು । ಮಾನಿನಿಯರಾಬರಿಮಸಹಿತ ಬಹುಳಶೀಘ್ರದಲಿ ॥ ಭಾನುಕುಲ ತಿಲಕನಬಳಿಗೆಬಂ । ದಾನರೇಂದ್ರನ ಚರಣಕಮಲಕೆ । ಸಾನುರಾಗದೆ ನಮಿಸಿದರುಕಣ್ಣಾರೆನೆರೆನೋಡಿ ॥ ೧೬ ॥ ಕನಕಜಲಕುಂಭಂಗಳನು ಮೇ । ಳೆನಿಪ ದಿವ್ಯಾನ್ನಂಗಳನು ರಾ । ಮನಿದಿರೊಳಿರಿಸಿ ಸಕಲನಾರಿಯರೆಲ್ಲ ಕೈಮುಗಿದು ॥ ಮನುಕುಲೋತ್ತಮಕೇಳು ಬೇಡಿತಿ । ಯನುಕಳುಹಿ ಸಮ್ಮೊಡೆಗೆ ಸಲಹಿದೆ । ವಿನುತಕರುಣಾತಿಶಯದಿಂದಲೆ ನಮ್ಮನೀಕ್ಷಿಸುತ ॥ ೧೭ ॥ ಗಿರಿಜೆದಿವ್ಯಾನ್ನಂಗಳನು ತರ । ತರದ ಭಕ್ಷ್ಯಂಗಳನು ನಿನಗತಿ । ಹರುಷದಿಂದಲೆ ಕಳುಹಿಕೊಟ್ಟಿಹಳವನು ಕೈಕೊಂಡು ॥ ಭರದೆಭೋಜನಮಾಡಿ ಹಸಿವನು । ಪರಿಹರಿಸಿಕೊಳ್ಳುವುದೆನುತ ಕಾ । ಲ್ಗೆರಗಿಬೇಡಿದರತಿ ವಿನಯದಿಂದಬಳನಾರಿಯರು ॥ ೧೮ ॥ ಎಲೆವನಿತೆಯರೆ ದೇವಿಪೇಳ್ದುದ । ನೊಲಿದುತೀಸೇದೆನುತ ಭಾಸ್ಕರ । ಕುಲತಿಲಕನಾ ಸ್ತ್ರೀಯರೆಲ್ಲರನಂದು ಬೆಸಗೊಳಲು ॥ ಜಲಜನಾಭನೆ ಕೇಳುದುರ್ಗೆಗು । ಮಿಳೆಯುಮಗಳಿಗು ಭೇದವಿಲ್ಲೆನು । ತಲು ಶಿವನೆನೀನೆನ್ನುತಲು ಪೇಳ್ದಳು ಶರ್ವಾಣಿ ॥ ೧೯ ॥ ಗಿರಿಜೆಜಾನಕಿಯರೊಳು ಗಂಗಾ । ಧರರಘೂತ್ತಮರೊಳಗೆ ಭೇದವ । ನಿರಿಸುತಿಪ ಮಾನವರು ನರಕಂಗಳಲಿಬೀಳುವರು ॥ ಅರುಹುತಿಂತಿಂದೆಮ್ಮದೇವತೆ । ಹರುಷದಿಂದಲೆ ಭುಜಿಪೆನಾರಘು । ವರನ ಯುಚ್ಛಿಷ್ಟವನೆನುತ

ಪೇಳದಳುನವ್ಮೊಡನೆ ॥ ೨೦ ॥ ಬಂದೆವದಕೆಂದಿಂದು ನಾವ್ಮದ । ದಿಂದೆ ನೀವಿವನುಂಡು ರಕ್ಷಿಪು । ದಂದದಿಂದಲೆನುತ್ತಡಿ ಗಡಿಗೆಬೇಡಿಕೊಳಲವರು ॥ ಮಂದಹಾಸದೊಳೀಕ್ಷಿಸುತ ರಘು । ನಂದನನು ಹಾಗಾದರಾಗಿರಿ । ನಂದನೆ ಮೆ ಭೂಜಾತೆಯಾಗುತ ಬರಲಿನನ್ನೆಡೆಗೆ ॥ ೨೧ ॥ ಪೋಗಿನಿವ್ಮೊಳಗೊಬ್ಬರಲ್ಲಿಗೆ । ಬೇಗನೀಸಂಗತಿಯ ಪೇಳುವು । ದೀಗದುರ್ಗೆಗೆನುತ್ತ ಪೇಳದನಾ ರಘೂದ್ವಹನು ॥ ಆಗಳೆಂದೆನುತೂರ್ವ ವಸಿತೆ ಸ । ರಾಗದಿಂದೈತಂದು ಕೈಮುಗಿ । ದಾಗಿರಿಸುತೆಗೆ ಬಿನ್ನವಿಸಿದಳು ರಾಮವಾಕ್ಯವನು ॥ ೨೨ ॥ ಬಡನೆಬಾಗಿಲತೆರೆದು ಪಾರ್ವತಿ । ಪೊಡವಿಯಣುಗಿಯ ರೂಪಿನೊಳಗಂ । ದಿಡಿವ ಸಂತಸದಿಂದೆ ಹೊರಗೈತಂದುಶೀಘ್ರದಲಿ ॥ ಗುಡಿಯಬಾಗಿಲಮುಚ್ಚಿ ಕೈಯೊಳು । ಪಿಡಿದು ಜಲಪಾತ್ರೆಯನು ಬಂದಳು । ಕಡುತವಕದೆ ರಘುವರನೆಡೆಗಾನಂದವನು ತಾಳ್ದು ॥ ೨೩ ॥ ಮುಗುಳುನಗೆ ಯಿಂದೀಕ್ಷಿಸುತ್ತಾ । ರಘುವರನ ಚರಣಾರವಿಂದಕೆ । ರಗಿ ಮಹೀಸುತೆ ನಿಂತುಕೊಂಡಳು ರಾಘವನಿದಿರೊಳು । ಜಗದೊಡೆಯ ರಾಘವನನಂದುರೆ । ಹೊಗಳುತ ಸಕಲ ನಾರಿಯರಡಿಗೆ । ಡಿಗೆ ಬಹುಳವಿಸ್ಮಯವನಾಂತರು ಕೂಡೆನೆರೆನೋಡಿ ॥ ೨೪ ॥ ವರ ಧನುರ್ಬಾಣಂಗಳನು ರಘು । ವರನು ಕೈಯೊಳಗಾಂತು ಸಂಧಿಸಿ । ಧರಣಿಯನು ಭೇದಿಸುತ ವರಪಾತಾಳಗಂಗೆಯನು ॥ ಬರಿಸಿಮೇಲಕಜರೊಳು ಮಿಾಯುತ । ವಿರಚಿಸಿಯೆ ಮಾಧ್ಯಾಹ್ನಿಕವನತಿ । ಭರದೊಳೂಟಕೆ ಸಿದ್ಧವಾದನುಕುಳತುಪೀಠವೊಳು ॥ ೨೫ ॥ ಅನಿತರೊಳ ಗೈತಂದುದಲ್ಲಿಗೆ । ಮನುಕುಲೋತ್ತಮ ರಾಘವೇಂದ್ರನ । ಘನಚತುರ್ಬಲವೆಲ್ಲ ಲಕ್ಷ್ಮಣನೊಡನೆಶೀಘ್ರದಲಿ ॥ ವನಜನಾಭನಮುಂದೆ ನಿಂದಿಹ । ಜನಕಜಾತೆಯ ನೀಕ್ಷಿಸುತ್ತಲೆ । ಮನದೊಳಾಶ್ಚರ್ಯವನು ತಾಳ್ದರು ತವ್ಮೊಳಡಿಗಡಿಗೆ ॥ ೨೬ ॥ ಲವ ಕುಶರು ಮೊದಲಾದಖಿಳ ಮಾ । ನವರು ಬೇಡಿತಿಮಾತಿನಿಂನತಿ । ಜವದೊಳೀವಾರ್ತೆಯನು ತಿಳಿದತಿಮೋಹವನು ತಾಳ್ದು ॥ ಶಿವನೆರಾಘವನೆಂತಲು ಗಿರಿಜೆ । ಯುವನಿಸುತೆಯೆಂತಲು ತಿಳಿದುಕೊಂ । ಡವರೊಳಗಭೇದವನು ಮಾಡಿದರಂದು ಮೊದಲಾಗಿ ॥ ೨೭ ॥ ಸತಿಸುತ ಸಹೋದರರೊಡನೆಕೂ । ಡುತ ಜವದೊಳಾರಾಘವೇಶ್ವರ । ನತಿಪರುಷವನು ತಾಳ್ದು ಪಚರಿಸುತ ಖಿಳಸೇನೆಯನು ॥ ಹಿತದೊಳೂಟವಗೈದು ಮೇಲೆನಿ । ಸುತಿಹ ನೀರನುಕುಡಿದು ಕೂಡೆವ । ನಿತೆಯರೆಲ್ಲರ ನೀಕ್ಷಿಸುತ್ತತಿಕೃಪೆಯೊಳಂತೆಂದ ॥ ೨೮ ॥ ನಿಮಗೆ ರಾಮಾ ಯೆಂಬನಾಮವ । ಸುಮನದಿಂದಿ

ತ್ತಿಹೆನು ನನ್ನೊಳು । ನಿಮಗೆಮೇಲೆನಿಸುತ್ತಿಹ ಭಕ್ತಿಯು ಸಂಜನಿಸಲಿ
ನ್ನು ॥ ನಿಮಗೆದೇವತೆಗಳೊಳು ವಿಪ್ರರೊ । ಳಮಲಧರ್ಮದೊಳುತ್ತಮ
ಕಥಾ । ಸಮುದಯವನಾಲಿಪ್ಪ ರೊಳಿರಲಿಭಕ್ತಿ ಸಂತತವು ॥ ೨೯ ॥
ೀವು ಪರಿಶುದ್ಧರೆನಿಸಿರುವಿರಿ । ನೀವು ಶುಭಶಕುನಂಗಳನು ಕೊಡಿ ।
ಾವಗಂ ಭೂತಳದೊಳಿರುತಿಪ ಮನುಜಸಂಚಯಕೆ ॥ ಈವಿಧದಮೇ
ೆನಿಸ ವರಗಳ । ನೀವೆನು ನಿಮಗೆನಾನೆನುತ ರಘು । ಭೂವರನು ಸಂ
ೋಷಪಡಿಸಿದನಾ ವನಿತೆಯುರನು ॥ ೩೦ ॥ ಎಲೆಮಹೀಸುತೆ ನೀನು
ನ್ನೆ । ಸ್ಥಳಕೆ ಪೋಗೆನುತಪ್ಪಣೆಯ ಮಾ । ಡಲತಿ ಶೀಘ್ರದೊಳಾಕೆ ಸ
ಲ ಸುಮಂಗಲಿಯರೊಡನೆ ॥ ಕಲಶಕನ್ನಡಿ ಕಂಬತೋರಣ । ಬಳಗ
ುದುರೆ ಮೆರೆವುತಿಹ ಗುಡಿ । ಬಳಿಗೆ ಬಂದೊಳಹೊಕ್ಕು ಪಾರ್ವತಿಯಾ
ಳಾಕ್ಷಣದೆ ॥ ೩೧ ॥ ಏನಿದಚ್ಚರಿ ಯೆಂದೆನುತ್ತ ಭ । ವಾನಿದೇವಿಯು
ವಕೆರಗುತಾ । ಮಾನಿನಿಯುರಾ ದುರ್ಗೆಯನು ಪಲತೆರದೆಸಂಸ್ತುತಿಸಿ ॥
ಾನುರಾಗದೊಳರ್ಚಿಸುತ ಘನ । ಕಾನನವನುಳಿದತ್ತ ಪೋದರು ।
ಾನಿಸುತ ರಾಘವನನಾಮವ ನವರಮನೆಗಳಿಗೆ ॥ ೩೨ ॥ ಮೃಗದಬೇಂ
ಯನಾಗಿಸಿ ಬಹುವಿ । ಧಗಳೆನಿಪ ಚರ್ಮಂಗಳನು ಕೊಂ । ಡೊಗೆದಸಂ
ಸದಿಂದಖಿಳ ಸೇನೆಗಳನೊಲಿಸುತ್ತ ॥ ಬಗೆಬಗೆಯ ವನವೈಭವಗಳನ ।
ಗಡಿಗೆ ವಿಲೋಕಿಸುತ ಬಂದನು । ರಘುವರನಯೋಧ್ಯಾಪುರಿಗೆ ಸುತ
ೋದರರಸಹಿತ ... ... ॥ ೩೩ ॥

ಇಂತು ನಲವತ್ತಾರನೆಯ ಅಧ್ಯಾಯ ಸಂಪೂರ್ಣವು

ಪದ್ಯಗಳು ೨೫೪೩.

ನಲವತ್ತೇಳನೆಯ ಅಧ್ಯಾಯ.

ಸೂಚನೆ॥ ಸೋಮಕುಲದರಸರನು ಘನಸಂ ।
ಗ್ರಾಮದೊಳು ಸೋಲಿಸುತಿರೆ ಕುಶನು ।
ಭೂಮಿಸುತೆ ನಿಲ್ಲಿಸಿದಳಬ್ಜೋದ್ಭವನಸಂ.ತಿಗೇಳ್ದು ॥

ಬಳಿಕರಾಘವನೊಂದುದಿನ ಕಂ । ಗೊಳಿಪ ನಿಜಸಿಂಹಾಸನದ
ೇ । ಲ್ಕೆಳತುಕೆಂದೆಲ್ಲರನು ಪಡೆದು ವಿಚಾರಿಸುತ್ತಿರಲು । ನಲಿ

ಜಿಪ ಹಸ್ತಿನಪುರಿಯು । ನುಳದು ನಡೆತಂದೊರ್ವ ದೂತನು । ತಳುವೆ ದಾನತನಾಗಿ ಬಿನ್ನವಿಸಿದನು ರಘುಪತಿಗೆ ‖ ೧ ‖ ಆರಸಚಿತ್ತ್ರ್ಯಸಹುಮುಹ ಸ್ತಿನ । ಪುರಿಯುನಿಂದಾ ಕ್ರಮಿಸಿಕೊಂಡಿರು । ವರು ವಿಧುಕುಲೋತ್ಪ ನ್ನ ಚಿರಜೀವಿಗಳೆನಿಸಿಕೊಂಡು ‖ ವರನಳಾದಿ ಮಹೀಪತಿಗಳನು । ತರು ಹಿಬಿನ್ನೈಸಿದನು ರಘುಭೂ । ವರನ ಪದಪಂಕೇಜಕೆರಗುತ ಮತ್ತೆ ಕೈ ಮುಗಿದು ‖ ೨ ‖ ಆವಚನವನುಕೇಳ್ದೊಡನೆ ರಘು । ಭೂವರನುಸಾಮಿ ತ್ರಿಯಂ ಕರೆ । ದಾವಿನುತಸಭೆಯೊಳುರೆಮನ್ನಿಸಿ ನಾಳೆಯುದಿನದೊಳು ‖ ಸಾವಕಾಶವನಾಗಿಸದೆ ನಾ । ನಾವಿಧವಖಿಳ ಸೇನೆಸಹಿತಮ । ಹಾವಿಭವ ದೊಳು ಪೋಗಬೇಕಾಹಸ್ತಿನಾಪುರಿಗೆ ‖ ೩ ‖ ಕರೆಯಿಸೇಳುದ್ವೀಪ ಮ ಧ್ಯದೊ । ಳಿರುವ ರಾಜರನೆಲ್ಲ ನೀನತಿ । ಭರದೊಳೆಮ್ಮಸುತರನು ಸೈನ್ಯ ಸಮೇತಕಾಳಗಕೆ ‖ ಬರುವತೆರದೊ ಳನುಜ್ಞೆಗೊಡೆನು । ತ್ತರುಹಿಸಲೆ ಪಟ್ಟಾಭಿಷೇಕವ । ವಿರಚಿಸಿದನು ಕುಶಂಗೆ ಸಪ್ತದ್ವೀಪಕರಸೆನಿಸಿ ‖ ೪ ‖ ಘನವರೂಥದೊಳಗ್ನಿ ಹೋತ್ರಗ । ಳನಿರಿಸಿ ಮನುಕುಲೋತ್ತಮನಖಿ ಳ । ಜನರನಾರಥದಲ್ಲಿ ಕುಳ್ಳಿರಿಸುತ್ತ ಶೀಘ್ರದಲಿ ‖ ಇನಿಯಳಸಹಿತಕೂ ಡೆನಡೆತಂ । ದನು ರಥದೆಕೂಡುತ ಪುರದಹೊರ । ಗಣ ಪಟದಗೃಹಕಾಗಿ ನಿಜಚತುರಂಗ ಬಲಸಹಿತ ‖ ೫ ‖ ಅಲ್ಲಿನಿಂದಾ ರಾತ್ರಿಸತಿಯೊಡ । ನುಲ್ಲ ಸದೊಳೂಟವನೆಸಗಿ ವರ । ಸಲ್ಲಲಿತ ಮೃದುತಲ್ಪದೊಳು ಸುಖನಿದ್ರೆ ಯುನುಮಾಡಿ ‖ ನಲ್ಲಳಸಹಿತ ಲೆದ್ದುದಯದೊಳ । ಗೆಲ್ಲರನೊಲಿಸುತೆಸರ ಯೂನದಿ । ಯಲ್ಲಿ ಮಿಂದೆಸಗಿದನು ಸಂಧ್ಯಾವಂದನಾದಿಗಳ ‖ ೬ ‖ ವಿಧಿ ವಿಧಾನದೊಳೆಸಗಿವಿಪ್ರಸ । ಮುದಯುಕೆ ಸಕಲದಾನಗಳನಾ । ನದಿಯತೀ ರದೊಳಾ ರಘೂದ್ವಹನಧಿಕಭಕ್ತಿಯುಲಿ ‖ ಪದೆದುವಂದಿಸಿ ಹರಿವಸರಯೂ । ನದಿಗೆಕೋಸಲಪುರಿಗೆ ನಮಿಸಿಭ । ರದೊಳುಪೋದನು ಮುಂದಕೆಸಕಲ ಸೈನ್ಯಜನಸಹಿತ ‖ ೭ ‖ ಕುಳತುಕೊಂಡರು ಜನಕಪುತ್ರಿಮೊ । ದಲೆ ರಾಜಾಂಗನೆಯುರೆಲ್ಲರು । ಸಲೆವಿರಾಜಿಪ ಘನಗಜಂಗಳೊಳತಿ ವಿನೋದ ದಲಿ ‖ ಕುಳತುಕೊಂಡನು ರಾಘವನು ಕಂ । ಗೊಳಿಪ ಮತ್ತನುತಂಗ ಜದಕೊರ । ಳೊಳತಿ ವೈಭವದಿಂದೆ ಬಿರುದಾವಳಿಯನಾಲಿಸುತ ‖ ೮ ‖ ವರವಿಮಾನವನೇರಿದರು ತರ । ತರದಖಿಳ ವಸ್ತುಗಳನಿರಿಸುತ । ಪುರದ ಮಾನವರೆಲ್ಲರತಿ ಶೀಘ್ರದೊಳುನಡೆತಂದು ‖ ಭರದೊಳಾ ರಘುವರನ ಹಸ್ತಿನ । ಪುರಿಗೆಬಂದನು ದಿವಸಹನ್ನೊಂ । ದರಲಿ ನಾನಾಪುರಗಳನತಿ ಕ್ರಮಿಸಿ ಮಾರ್ಗದಲಿ ‖ ೯ ‖ ಕಳುಹಿಕೊಟ್ಟನು ವಾನರರನು ಜ । ಗಳ

ಕೆರಘುಭೂವರನು ಕೂಡೆಜ । ಗಳನಡೆದುದು ನಲಾದಿಗಳಿಗಾವಾನರೇಂದ್ರರಿಗೆ ॥ ಹಲವುಜೋಧರು ಮಡಿದರಿರ್ಕಡೆ । ಯೊಳಗೆ ಹನ್ನೆರಡುಪದುಮಂಗಳ । ಬಲವಿನಾಶನವಾದುದು ನಲಾದಿಗಳಸೈನ್ಯದಲಿ ॥೧೦॥ ನೊಂದುಕೊಳ್ಳದೆ ಬಹುಪರಾಕ್ರಮ । ದಿಂದೆ ಜಗಳವನೆಸಗಿದರುಹ । ನ್ನೊಂದುತಿಂಗಳಮೇಲೆ ಹನ್ನೊಂದುದಿನಗಳತನಕ ॥ ಕುಂದಿಕೊರಗುತ್ತತಿ ವಿಷಾದವ । ನೊಂದಿ ರಣರಂಗದೊಳುನಿಲ್ಲದೆ । ಬೆಂದುಪೋದರು ಶತ್ರುಗಳು ಕುಶನಸ್ತ್ರಘಾತದಲಿ ॥ ೧೧ ॥ ಅಳಿದಸೈನ್ಯವನೆಲ್ಲ ಕಂಡಾ । ನಳನುಮೊದಲಾದ ಚಿರಜೀವಿಗ । ಳಳುಕದಾ ರಣರಂಗಕೈತಂದೊಡನೆ ಗರ್ಜಿಸುತ ॥ ಹಲವುಬಗೆ ಕೂರಂಬುಗಳ ನಿದಿ । ರೊಳು ಕುಶಲವರಮೇಲಿಡುತ ಧುರ । ದೊಳುರೆ ಪೊಯ್ದಾಡಿದರು ವೀರಾಲಾಪವನುಗೈದು ॥ ೧೨ ॥ ನಳನುಮೊದಲಾದವರು ಬಿಟ್ಟಸ । ಕಲವಿಧದ ಶಸ್ತ್ರಾಸ್ತ್ರಗಳನೆಡೆ । ಯೊಳುಕುಶನು ಖಂಡಿಸಿಮಹಾಸ್ತ್ರವನೆಚ್ಚು ಶೀಘ್ರದಲಿ ॥ ಬಳಿಕಲಾಬ್ರಹ್ಮಾಸ್ತ್ರವನುಕ್ಕೈ । ಯೊಳುಪಿಡಿದು ಸಂಧಿಸುತ ಕಾರ್ಮುಕ । ದೊಳುರೆ ಗರ್ಜಿಸಿ ಶತ್ರುಗಳಮೇಲೆಚ್ಚಲನುವಾದ ॥ ೧೩ ॥ ವನಜಸಂಭವನಷ್ಟರೊಳಗಾ । ಜನಕಜಾತೆಯ ಸುತನಹತ್ತಿರ । ಕನುನಯದೆ ಬಂದೀಕ್ಷಿಸಿ ಬ್ರಹ್ಮಾಸ್ತ್ರವನುಕೂಡೆ ॥ ತನಯಕೇಳೀ ಪ್ರಾಣನಾಶಕ । ಮೆನಿಸುವ ಬ್ರಹ್ಮಾಸ್ತ್ರವನುನೀ । ನನುವರದೆ ಶತ್ರುಗಳಮೇಲ್ಬಿಡ ದಿರೆನುತಡ್ಡಗಿಸೆ ॥ ೧೪ ॥ ಸರಸಿಜೋದ್ಭವನೆಂದ ನುಡಿಗು । ತ್ತರವನೀಯದೆ ಹೋಗೆನುತಧಿ । ಕ್ಕರಿಸಲಾ ಕುಶನಬ್ಜಸಂಭವನತಿ ವಿಷಾದವನು ॥ ಧರಿಸಿರಾಘವನೆಡೆಗೆ ನಡೆತಂ । ದೆರಗಿ ಬಿನ್ನೈಸಿದನು ರಘುಭೂ । ವರನೆಪೇಳು ಕುಶಂಗೆ ಬಿಡದಂತಸ್ತ್ರವನೆನುತ್ತ ॥ ೧೫ ॥ ಅವನು ನನ್ನವಚನಗಳನು ಕೇ । ಳುವವನಲ್ಲೆನುತಾಸರಸಿಜೋ । ದ್ಭವನನೊಪ್ಪಿಸಿ ರಾಘವನು ವಾಲ್ಮೀಕಿಮುನಿಬಳಗೆ ॥ ತವಕದಿಂದಲೆ ಕಳುಹಲತಿ ಹ । ರ್ಷವನುತಾಳ್ದಾ ಮುನಿಕುಲೇಂದ್ರನ । ಸುವಿಮಲಾಶ್ರಮಕಾಗಿ ಬಂದನು ಮನದೆಯೋಚಿಸುತ ॥ ೧೬ ॥ ಬಂದುಮುನಿ ವಾಲ್ಮೀಕಿಗಾರಘು । ನಂದನನು ಪೇಳ್ದಾನುಡಿಯನೊಲ । ವಿಂದೆ ಕಮಲಾಸನನು ಬಿನ್ನವಿಸಲತಿಶೀಘ್ರದಲಿ ॥ ಅಂದದನುಕೇಳುತ್ತ ಧರಣೀ । ನಂದನೆ ನುಡಿದೊಡಾಲಿಸುವನದ । ರಿಂದೆಸೀತೆಗೆ ಪೇಳೆನುತ ವಾಲ್ಮೀಕಿಕಳುಹಿದನು ॥ ೧೭ ॥ ನಳನುಮೊದಲಾದವರಹೆಂಡತಿ । ಗಳನುಬೇಗನೆ ಸೀತೆಯಬಳಿಗೆ । ಕಳುಹಿಕೊಟ್ಟಾ ಕಮಲಸಂಭವನಾಮಹೀಸುತೆಯು ॥ ಬಳಿಗೆಬಂದಿಂತೆಂದು ಪೇಳ್ದ । ನೆಲೆ ಜನಸಿಕೇ

ಳ್ಳಿನ್ನ ಮಗನಿಗೆ । ತಿಳುಹಿಸು ಬ್ರಹ್ಮಾಸ್ತ್ರ ಬಿಡದಂತೆನುತಬೇಡಿದನ
॥ ೧೮ ॥ ಅನುಡಿಯನಾಲಿಸುತ ಬರುವಾ । ವನಿಸಿಯರನು ಕಂಡ
ಜಾನಕಿ । ಸಾನುನಯದಿಂದೊಡನೆ ಮಂಚವನಿಳದು ನಿಂದಿರಲು । ಅನಳಾ
ದಿಗಳರಸಿಯರು ಸುಂ । ದಾನವನುತಾಳುತ್ತ ಬಂದರು । ಜಾನಕಿಯುಹ
ತ್ತಿರಕತಿ ವಿನಯದಿಂದೆಸೀಘ್ರದಲಿ ॥ ೧೯ ॥ ಬಂದತಿಬಕುತಿಯಿಂದೆ ಧರ
ಣೀ । ನಂದನೆಯು ಪದಪಂಕಜಕೆರಗಿ । ತಂದಕಾಣಿಕೆಗಳನು ಪದೆದಿತ್ತ
ಬಿಳನಾರಿಯರು ॥ ನಿಂದುಮುಂಗಡೆಯಲ್ಲಿ ಸಂತಸ । ದಿಂದೆಹೊಗಳುತ
ಕರವಮುಗಿದಿಂ । ತೆಂದು ಬಿನ್ನವಿಸಿದರು ತಮ್ಮವಿಚಾರವನು ಕೊಡ
॥ ೨೦ ॥ ದೇವಿಕರುಣಿಸು ನಮ್ಮಪತಿಗಳ । ಜೀವಗಳನೊಲಿದಿಂದುರಕ್ಷಿ
ಸು । ಸಾವಧಾನದೊಳವರ ತಪ್ಪುಗಳನ್ನುಮನ್ನಿಸುತ ॥ ಅವರಬ್ರಹ್ಮಾ
ಸ್ತ್ರವನು ಸಮ । ರಾವನಿಯೊಳು ಬಿಡದಿರುವೆಂದದೆ । ನೀವುಕುಶನಿಗೆಪೇ
ಳ್ದುಪಾಲಿಸೆನುತ್ತ ಬೇಡಿದರು ॥ ೨೧ ॥ ನಮ್ಮಪತಿಗಳನೀಗ ಬದುಕಿ
ಸು । ತೆಮ್ಮನು ಸಲಹಬೇಕೆನುತ ನೆರೆ । ನೆಮ್ಮುಗೆಯೊಳ್ಕೈತಂದೆವಮ್ಮಾ
ನಿಮ್ಮಸನ್ನಿಧಿಗೆ ॥ ನಿಮ್ಮನುಳಿದರೆ ರಕ್ಷಿಸುವರಿ । ಲ್ಲೆಮ್ಮನೆಂದುರೆ ಬೇಡಿ
ಕೊಂಡರು । ತಮ್ಮಮನದಣಿವಂತೆ ನಾರಿಯರೆಲ್ಲ ಸೀತೆಯನು ॥ ೨೨ ॥
ಹಾಗೆಯಾಗಲೆನುತ್ತ ಲೊಪ್ಪಿಸಿ । ಬೇಗನೆಕುಳಿತುಕೊಂಡು ಸೀತೆಸ
ರಾಗದೊಳೆಸೆವ ದಂಡಿಗೆಯೊಳಾವನಿತೆಯರಸಹಿತ ॥ ಆಗಳೈತಂದಾ ಕುಶ
ನೆಡೆಗೆ । ಪೋಗಿಪೇಳ್ದಳೆಲೆ ಕುಶಬಿಡದಿ । ರೀಗಲೀ ಬ್ರಹ್ಮಾಸ್ತ್ರವನು
ಶತ್ರುಗಳಮೇಲೆನುತ ॥ ೨೩ ॥ ಸುತನಿಗೆ ಸಮಾಧಾನವನು ಪೇ । ಳ್ದತಿ
ಭರದೊಳೊಪ್ಪಿಸುತ ಧರಣೀ । ಸುತೆ ನಿವಾರಣೆಗೈದಳಾನತ ಜನರತಾಪ
ವನು ॥ ಚತುರಮತಿ ಕುಶನಾಜನನಿ ನುಡಿ । ದತಿ ಹಿತೋಕ್ತಿಯನಂದೊ
ಲಿದುಕೇ । ಳುತ ಭರದೆನಿಲ್ಲಿಸಿದನಾ ಬ್ರಹ್ಮಾಸ್ತ್ರವನುಬಿಡದೆ ॥ ೨೪ ॥
ಧುರವೆಸೋತು ಕುಶಂಗೆಕೈಮುಗಿ । ದೆರಗಿ ಹಸ್ತಿನನಗರವನುಳಿದು
ಹೊರಟುಪೋದರು ತಮ್ಮನೆಲೆಗಳಿಗಾ ನಳಾದಿಗಳು । ಪರಮಸಂಮುದ
ದಿಂದೆ ರಘುಭೂ । ವರನಬಳಿಗಾ ಜನನಿಸಹಿತನ । ಮರಮಹೀತಳ
ನುಳಿ ದಂಡ್ಯೈತಂದನಾ ಕುಶನು ॥ ೨೫ ॥ ನಿಂತುಪೋದುದು ಕಾಳಗವ
ನನು । ನಂತರದೊಳಾ ರಾಘುವನು ಬಲು । ಸಂತಸವನಾಂತಖಿಳಸೇನ
ಜನಗ[illegible] ಳಾಪವರಸಿ ॥ ಅಂತಮಿಲ್ಲದ ವಿಭವದಿಂದೆ ನಿ । ರಂತರಮೆಸೆವ
ನ್ನಿಪ್ಪ[illegible] । ಅಂತರಿಕ್ಷಪಥದೊಳು ಬಂದನು ಕುಳಿತು ಪುಷ್ಪಕದ
॥ ೨೬ ॥ ಮುರೆ[illegible]ಯೋಧ್ಯೆಗೆ ಬ[illegible] । ವರನ[illegible]

ತನ್ನ ಸತಿಸಹಿ । ತರವುನೆಯನಂದಖಿಳವಿಧ ರಾಜವಿಭವಂಗಳಲಿ ॥ ಧರಣಿ ಸುತೆ ರಘುಭೂವರನ ಸಹಿ । ತರವುನೆಯೊಳಗೆ ಹಗಲಿರುಳು ಪರಿ । ಪರಿಯ ಸೌಖ್ಯವನೈದಿದಳಖಿಳ ಜನಗಳನೊಲಿಸುತ ... ॥ ೬೭ ॥

ಇಂತು ನಲವತ್ತೇಳನೆಯ ಅಧ್ಯಾಯ ಸಂಪೂರ್ಣವು

ಪದ್ಯಗಳು ೨೫೭೦.

ನಲವತ್ತೆಂಟನೆಯ ಅಧ್ಯಾಯ

ಸೂಚನೆ ॥ ತೆರಳಿದಳು ವೈಕುಂಠಕಾ ರಘು ।
ವರನಕೂಡೆ ಮಹೀಸುತೆ ಖಗೇ ।
ಶ್ವರನ ಬೆನ್ನೊಳುಕುಳಿತು ಗಂಗಾನದಿಯತೀರದಲಿ ॥

ಬಳಿಕರಾಘವನಖಿಳ ಸೌಖ್ಯಂ । ಗಳನುಹೊಂದುತನೇಕವರ್ಷಂ । ಗಳತನಕ ಸಂತೋಷದಿಂದಿರಲವನಿಸುತೆಸಹಿತ ॥ ಹಲವುದಿನಗಳು ಕಳೆದ ನಂತರ । ಜಲಜಸಂಭವ ನೊಂದುದಿನರವಿ । ಕುಲಲಲಾಮನ ಬಳಿಗೆಬಂದನು ವಿಪ್ರವೇಷದಲಿ ॥ ೧ ॥ ಜವದೊಳೈತಂ ದಬ್ಜಭವನಾ । ರವಿಕುಲೇಂದ್ರನ ಪಾದಕಮಲಕೆ । ಜವದೊಳುನಮಿಸಿ ಮನ್ನಣೆವಡೆದುಕುಳಿತು ಪೀಠದೊಳು ॥ ಸುವಿಮಲೋಕ್ತಿಗಳಿಂದೆ ಹೊಗಳುತ । ಭುವನರಕ್ಷಕ ನೀನುಬಾರೈ । ದಿವಕೆಶೀಘ್ರದೊಳೆನುತ ಬಿನ್ನೈಸಿದನುಗೋಪ್ಯದಲಿ ॥ ೨ ॥ ಇಂದಿಗಾದುದೆಮಗಿಳೆಯೊಳು ಹ । ನ್ನೊಂದುಸಾವಿರ ವರ್ಷಗಳು ಹ । ನ್ನೊಂದುವರ್ಷಗಳನಿತೆ ತಿಂಗಳುಮನಿತೆ ದಿವಸಗಳು ॥ ಅಂದವಹ ವೈಕುಂಠಕೀಜನ । ವೃಂದದಸಹಿತ ನಾಳೆಬರುತಿಹೆ । ನೆಂದುಬೀಳ್ಕೊಟ್ಟನು ರಘೂದ್ವಹನಬ್ಜಸಂಭವನ ॥ ೩ ॥ ಕಳುಹಿಕೊಟ್ಟ ನವರವರ ಸ್ಥಳ । ಗಳಿಗಖಿಳವಾನರರನಾ ರವಿ । ಕುಲತಿಲಕನು ಸಮಸ್ತರಾಜರ ನೈದೆಮನ್ನಿಸುತ ॥ ಕಳುಹಿದನವರವರನಿವಾಸಂ । ಗಳಿಗೆಕೂಡೆಸಮಸ್ತಬಾಂಧವ । ಕುಲವಬೀಳ್ಕೊಟ್ಟನವರವರ ನಿಜಭವನಂಗಳಿಗೆ ॥ ೪ ॥ ಕಳುಹಿಕೊಟ್ಟನುಕೂಡೆ ಸಂತಸ । ದಳೆದು ರಘುಭೂವರನು ಲವನನು । ತಳೆದಡವಿ ತಾನುತ್ತರದ ಕುರುಭೂಮಿಗತಿಜವದೆ ॥ ಬೆಳೆವಸಂತಸದಿಂದೆ ಜಾನಕಿ । ತಳುವದುತ್ತಮ ಕಾಮಧೇನುವ । ನೊಲಿದುಕೊಟ್ಟು ಕಳು

ಹಿದಳಾಶೀರ್ವದಿಸುತಾ ಲವನ ॥ ೫ ॥ ಮತ್ತೆ ಚಿಂತಾಮಣಿಯ ರತ್ನವ । ನಿತ್ತನುಕುಶಂಗಾ ರಘೂದ್ವಹ । ನುತ್ತಮವೆನಿಪ ಕಲ್ಪವೃಕ್ಷ ಸುಪಾರಿಜಾತಗಳ ॥ ಇತ್ತು ಕಳುಹಿದ ನಿಂದ್ರನಿಗೆನಲಿ । ಯುತ್ತವರ ಪುಷ್ಪಕವಿಮಾನವ । ನಿತ್ತು ಕಳುಹಿದನಾ ಕುಬೇರನಿಗತಿವಿನೋದದಲಿ ॥ ೬ ॥ ನೀವು ನಿಮ್ಮಯಪುತ್ರಿಗಳ ಸಹಿತ । ಸಾವಕಾಶವನಾಗಿಸದೆ ಪರಿ । ಭಾವಿಸುತ್ತಲೆ ನಾಳೆಯದಿನವೆ ಸಹಗಮನಗೈದು ॥ ದೇವಪುರಿಗೈತಹುದೆನುತ ರಘು । ಭೂವರನುಪೇಳಿದನು ಬಹುಕರು । ಣಾವಲೋಕನದಿಂದೆ ನಾದಿನಿಯರಿಗೆ ತಾನಿರದೆ ॥ ೭ ॥ ಸೋದರರಗೊಳು ಹಿತೋಪದೇಶವ । ಗೈದು ಕಳುಹಿಸಿಕೊಟ್ಟನು ಮನೆಗೆ । ಮೋದದಿಂಶೃತಕೀರ್ತಿ ಮಾಂಡವಿ ಯೂರ್ಮಿಳೆಯರುಗಳ ॥ ಮೇದಿನೀಸುತೆಸಹಿತ ರಾಘವ । ನಾದಿನದ ರಾತ್ರಿಯನುಕಳೆದನು । ವೇದವನುಪಠಿಸುತ್ತ ಚಿನ್ನದಮಂಚದೊಳು ಮಲಗಿ ॥ ೮ ॥ ಮರುದಿನ ಮಡದಿಯೊಡನೆ ರಘುಭೂ । ವರನು ತಾನೇಳುತಜವಿಪಘನ । ಕರೆದುವೈಕುಂಠಕ್ಕೆ ಪೋಗುವೆನೀದಿನವೆ ನಾನು ॥ ಧರದೊಳೀಗಲೆಕಳುಹು ಕುಶನೆಡೆ । ಗಿರುವ ಜಡವಸ್ತುಗಳನೆಲ್ಲವ । ಬರಲಿ ಚರವಸ್ತುಗಳ ವೆಲ್ಲವು ನನ್ನಜೊತೆಯೊಳಗೆ ॥ ೯ ॥ ನೀನು ಕುಶನಸಮೀಪಕೈದಿ ನಿ । ದಾನಿಸಡಖಿಳ ಸಂಗತಿಗಳನು । ಸಾನುನಯದಿಂದರುಹು ಮುಂದೆಮಗಾಗಿ ಕುಶನೊಲಿದು ॥ ಕ್ಷೋಣಿತಲದೊಳು ವಿಪ್ರರಿಗೆಬಹು । ದಾನಗಳನೀಯುತ್ತ ಘನಸುಂ । ಮಾನದಿಂದಾಗಿಸುವ ನುತ್ತರಕರ್ಮಗಳನೆಲ್ಲ ॥ ೧೦ ॥ ಎಂದುಪೇಳುತ್ತವನ ನಾರಘು । ನಂದನನು ಬೀಳ್ಕೊಟ್ಟು ಸಂತಸ । ದಿಂದೆ ಗಂಗಾಮಂಗಳ ಸ್ನಾನವನುತಾನೆಸಗಿ ॥ ಚಂದದಿಂದಲೆ ನಿತ್ಯಕರ್ಮವ । ನಂದೆಸಗಿ ವೈಶ್ವಾನರನಿಗಾ । ನಂದವನು ತಾಳ್ದತ್ತ ನಾಹುತಿಗಳನುಬಹುವಾಗಿ ॥ ೧೧ ॥ ವಿನುತ ಗಂಗಾನದಿಯತೀರದೊ । ಳಿನಕುಲೋತ್ತಮನಖಿಳ ದಾನಗ । ಳನೆಸಗುತ್ತ ಯಥಾವಿಧಿಯೊಳತ್ಯಧಿಕ ಭಕ್ತಿಯಲಿ ॥ ಘನಮಹಾ ಪ್ರಸ್ಥಾನಿಕವ ಚೇ । ಗನೊಡರಿಸಿ ವೈಕುಂಠಕೆಕಳುಹಿ । ದನತಿಶೀಘ್ರದೊಳಗ್ನಿಯನು ವಿಸ್ಮಯವನಾಗಿಸುತ ॥ ೧೨ ॥ ಆಗ ಮೂರ್ತಿಭವಿಸಿ ಹೊರಟಿತು । ರಾಘವನಕೈಯಿಂದೆ ಪದ್ಮವು । ಬೇಗನೆ ವಿರಾಜಿಸುತ ವೈಕುಂಠಕತ್ತಿತೇಜದಲಿ ॥ ರಾಗರಸದಿಂದಖಿಳ ವೇದಗ । ಳಾಗವೈಕುಂಠಕ್ಕೆ ತೆರಳಿದ । ವಾಗಸದದಾರಿಯೊಳು ತಾವ್ಪ್ರತ್ಯಕ್ಷರೂಪದಲಿ ॥ ೧೩ ॥ ಭರದೊಳಂದಾ ಪ್ರಣವರೂಪಿನೊ । ಳರದೆಬಂದುದು ರಾಮನ ಮುಖವ । ತೊರೆದುಗಾಯತ್ರೀಮಹಾದೇವತೆಯು ಹೊರಗಡೆಗೆ ಹೊ

ರಟುಹೋದವು ರಾಮಚಂದ್ರನಿ । ಗೆರಗಿಸಗ್ಗಕೆ ಶಾಂತಿಯುಶಬಲ । ಕರುಣಾ
ಮೇಧಾಕ್ಷಾಂತಿ ತೇಜಧೃತಿಗಳುಶೀಘ್ರದಲಿ ॥ ೧೪ ॥ ಸುರವಿನುತ ಗಂಗಾ
ನದಿಯೊಳಾ । ಪುರದಮಾನವರೆಲ್ಲ ರೊಡನಂ । ದಿರದಖಿಳಕಪಿವೀರರೆಲ್ಲರು
ಮಿಂದುಹರ್ಷದಲಿ ॥ ತೊರೆದರು ನಿಜಶರೀರಗಳನುರು ತರದಯೋಗಾ
ಭ್ಯಾಸದಿಂದಾ । ಪರಿಯುಜಾನಿಸಿಬಂಧಿಸುತ್ತ ಪ್ರಾಣವಾಯುಗಳ ॥ ೧೫ ॥
ವಿತತಸಂಮದದಿಂದೆ ಘನಸಂ । ನುತಿವಡೆದ ಗಂಗಾಜಲವನತಿ । ಹಿತದೆರಾ
ಘವನು ಸ್ಪರುಶವನುಮಾಡಿಕೈಯಿಂದೆ ॥ ಅತಿವಿಮಲ ದರ್ಭಾಸನದೊಳು
ಕು । ಳಿತುಸಲೆವಿರಾಜಿಸಿದ ತನ್ನಯ । ಸತಿಯೊಡನು ದನ್ಮುಖದೊಳತಿ
ಪೂತಾತ್ಮನೆಂದೆನಿಸಿ ॥ ೧೬ ॥ ದೇವಲೋಕವನುಳಿದುಸಲೆಸಂ । ಭಾವಿಸುತ
ಖಿಳ ದೇವತೆಗಳಂ । ದಾ ವಿನುತಗಂಗಾನದಿಯ ತೀರಕೊಡನೈತಂದು ॥
ಸಾವಧಾನದೊಳಲ್ಲಿ ಸಕಲಜ । ನಾವಳಿಗೆ ದರ್ಶನವಕೊಡುತಿಹ । ದೇವ
ದೇವನ ವಿನುತಮೂರ್ತಿಯ ನಿಂತುನೋಡಿದರು ॥ ೧೭ ॥ ಹೊಳೆವನಿಡು
ದೋಳ್ಗಳ ಮಘಮಘಿಸಿ । ಸಲೆವಿರಾಜಿಪತುಲಸಿಹಾರದ । ಲಲಿತಕೌಸ್ತುಭ
ಮಣಿ ವಿರಾಜಿತವಿಸ್ತೃತೋರದಮೇಣ್ ॥ ವಿಲಸಿತ ಶ್ರೀವತ್ಸನಾಭಿಯ ।
ಕಲಿತ ದಿವ್ಯಾನಂದರೂಪದ । ಜಲಜನೇತ್ರನು ರಂಜಿಸಿದನಂದಧಿಕ ತೇಜ
ದಲಿ ॥ ೧೮ ॥ ಮೇದಿನೀಸುತೆ ಲಕ್ಷ್ಮಿರೂಪವ ನೈದಿನಿಂತಿದ್ದಳೆಡಭಾಗ
ದೊ । ಳಾದಿಶೇಷನು ತಾನೆನಿಸಿತೋರಿದನು ಲಕ್ಷ್ಮಣನು ॥ ಆದಿನಾರಾ
ಯಣನ ಕೈಗಳೊ । ಳೈದೆಸೇರುತ ಶಂಖಚಕ್ರಗ । ಳಾದರಾಗಲೆ ಭರತ
ಶತ್ರುಘ್ನರುಗಳೆಡಬಲದೆ ॥ ೧೯ ॥ ಮೊಳಗಿದವು ದುಂದುಭಿಗಳಾಗಸ ।
ದೊಳತಿಶೀಘ್ರದೆ ಸುರಿಸಿದರು ಪೂ । ಮಳೆಯನೀಧರಣೀತಲಕೆ ಸುರರತಿ
ವಿನೋದದಲಿ ॥ ಬೆಳೆದಸಂತಸದಿಂದೆ ನರ್ತನ । ಗಳನು ಮಾಡಿದರಪ್ಸರ
ಸ್ಸ್ರಗ । ಳೊಲಿದುಗಾನವಮಾಡಿದರು ಗಂಧರ್ವಕಿನ್ನರರು ॥ ೨೦ ॥
ಗರುಡನಾಗಳೆಬಂದು ಪದಗಳಿ । ಗೆರಗಿದನು ದೇವಾಂಗನೆಯರತಿ । ಭರದೆ
ಮುಂಗಡೆ ಹತ್ತುಸಾವಿರದ ಮಣಿದೀಪಗಳ ॥ ಇರಿಸಿಕೊಂ ಡಾರತಿಗಳ
ನೆಸಗಿ । ದರು ಲಕುಮಿನಾರಾಯಣರಿಗತಿ । ಹರುಷದಿಂದುರೆ ಮೆರೆವ ಚಿ
ನ್ನದತಟ್ಟೆಗಳೊಳಂದು ॥ ೨೧ ॥ ಪದಸರೋಜಯುಗಳಕೆ ಕೂಡೆಪ ।
ದೆದುನಮಿಸಿ ಕೈಮುಗಿದು ಬೊಮ್ಮನು । ಮೊದಲೆನಿಪಖಿಳ ದೇವತೆಗಳತಿ
ಭಕ್ತಿಭಾವದಲಿ ॥ ವಿಧವಿಧಗಳಿಂದೆ ಸ್ತುತಿಸಿದರು । ಪದುಮನಾಭನನೊಲಿ
ದುಸಾನಂ । ದದೊಳು ನಿಗಮಾಗಮವಿಚಾರವನೆಲ್ಲ ಬೋಧಿಸುತ ॥ ೨೨ ॥
ವಿನುತಚೈತ್ರ ಬಹುಳದ ಪಂಚಮಿ । ದಿನದೊಳೀಶ್ವರನಿಂದೆ ತಾಂಪ್ರೇ ।

ರಣೆಯನಾಂತಾಲಂಗಿಸುತ ವಾಲ್ಮೀಕಿಮುನಿಪನನು ॥ ಮುನಿಗಳೆಲ್ಲರನೊಲಿದು ನೋಡುತ । ವನಜನಾಭನು ಸಗ್ಗಕೆತೆರಳ । ದನು ಸತಿಸಹಿತಕುಳಿತುವಿನತಾಸುತನಬೆನ್ನಿನೊಳು ॥ ೨೩ ॥ ಹೊಳೆಹೊಳೆವ ಸುಂದರತರಾಕೃತಿ । ಗಳನು ತಾಳ್ದಸೆವಾವಿಮಾನಂ । ಗಳ ಸಮೂಹಗಳಿಂದೆಬಳಸಿದನೇಕಭುವನಗಳ ॥ ಜಲಜಲೋಚನ ನೀಕ್ಷಿಸುತಕಂ । ಗೊಳಿಪವರವೈಕುಂಠಕೈತಂ । ದಿಳಿದನಾ ಲಕ್ಷ್ಮಿಯೊಡನೆ ಬಹುಳಹರ್ಷವನುತಾಳ್ದು ॥ ೨೪ ॥ ದಿವಿಜರೆಲ್ಲರನೊಲಿದು ನೋಡುತ । ಜವದೊಳಾವೈಕುಂಠದೊಳು ಮಾ । ಧವನು ತಾನಾರೋಹಿಸಿದನಾ ಸ್ವಪದವನುಬಳಿಕ ॥ ಶಿವನುಮೊದಲೆನಿಪಮರರೆಲ್ಲರ । ನವರಲೋಕಂಗಳಿಗೆ ಕಳುಹಿದ । ವಿವಿಧವರವಿನಯೋಕ್ತಿವಚನಗಳಿಂದೆ ಮನ್ನಿಸುತ ॥ ೨೫ ॥ ಪರಮಪೂರುಷನಾಗಿ ಸಚರಾ । ಚರವಜೀವಿಗಳಂತರಂಗದೊ । ಳಿರುವ ಪಾವನಸಚ್ಚಿದಾನಂದಮಯರೂಪವನು ॥ ಧರಿಸಿದಾಪರಮಾತ್ಮ ನಂದೊಡ । ನುರಗತಲ್ಪದೊಳಿಂದಿರೆಸಹಿತ । ಗರುಡಸೇವಿತನಾಗಿ ಪೂರ್ಣಮನೋರಥ ನೆನಿಸಿದ ॥ ೨೬ ॥ ಮುನಿಗಳೆಲ್ಲರು ಹೊರಟುಹೋದರು । ವನಜನಾಭನ ಚರಣಕಮಲಕೆ । ಮಣಿದುಪೂಜಿಸಿ ತಮ್ಮತಮ್ಮತಪೋವನಂಗಳಿಗೆ ॥ ಅನಿತರೊಳಯೋಧ್ಯಾಪುರವರದ । ಜನಗಳೆಲ್ಲರು ಸೇರಿದರು ಪಾ । ವನತರದ ಸಾಂತಾನಿಕ ಮಹಾಲೋಕಗಳನೊಡನೆ ॥ ೨೭ ॥ ಆದಿಲಕ್ಷ್ಮಿಯೆನಿಪ ಮಹೀಸುತೆ । ಮೇದಿನೀಮಂಡಲದ ಭಾರವ । ನಾದರದೊಳೀತೆರದಿ ಪರಿಹರಿಸುತ್ತ ಭಕ್ತರನು ॥ ಆದರಿಸಿಸಲಹುತ್ತ ಸಕಲವಿ । ನೋದಗಳನಾಗಿಸುತ ಸೇರಿದ । ಳಾದಿನಾರಾಯಣ ನೆಡಗಡೆಯೊಳಾಗಸಗ್ಗದಲಿ ॥ ೨೮ ॥ ಗರುಡವಾಹನ ವಾಸುಕಿಶಯನ । ಸರಸಿಜನಯನ ದನುಜಮರ್ದನ । ಮುರಮಥನ ಲಕ್ಷ್ಮೀರಮಣ ಪೀತಾಂಬರಾವರಣ ॥ ದುರುಳಶಿಕ್ಷಣ ಶಿಷ್ಟರಕ್ಷಣ । ನಿರುತರಕ್ಷಿಸೆನುತ್ತ ಪದಪಂ । ಕರುಹಕಾನತರಾಗಿ ನುತಿಸಿದರಖಿಳ ನಿರ್ಜರರು ॥ ೨೯ ॥ ನೀನೆತಾಯಿಯು ನೀನೆತಂದೆಯು । ನೀನೆಬಂಧುವು ನೀನೆಮಿತ್ರನು । ನೀನೆವಿದ್ಯೆಯು ನೀನೆವಿತ್ತವು ನೀನೆಸರ್ವಸ್ವ ॥ ನೀನೆರಕ್ಷಿಪೆ ಸಕಲಜಗವನು । ಸಾನುರಾಗದೊಳೆನು ತಡಿಗಡಿಗೆ । ಸಾನುನಯದಿಂದೆರಗಿ ನುತಿಸಿದುದಮರಸಂದೋಹ ॥ ೩೦ ॥ ಎಲ್ಲರೊಳು ನೀಂ ತುಂಬಿರುವೆನಿ । ನ್ನಲ್ಲಿರಿಸಿಕೊಂಡಿಹೆ ಸಮಸ್ತರ । ನೆಲ್ಲ ಕಪಟತೋರಿಸುವೆ ನಿನ್ನಮಹಾತ್ಮೆಯನು ನೀನು ॥ ಎಲ್ಲರಿಗೆಗತಿನೀನು ಜಗದೊಳ । ಗಿಲ್ಲನಿನಗೆಣೆಯೆನಿಪ ನಿರ್ಜರ । ರೆಲ್ಲಲೋಕಕೆ ಜನಕನೇಸೀನಾಗಿತೋ

ರುತಿಹೆ ॥ ೩೧ ॥ ವಿಶ್ವಪಾಲಕ ವಿಶ್ವರೂಪಕ । ವಿಶ್ವವಂದಿತ ವಿಶ್ವಪೂಜಿತ । ವಿಶ್ವತೋಮಯ ವಿಶ್ವಸಂಚಯ ವಿಶ್ವಮೂರುತಿಯೆ ॥ ವಿಶ್ವಲೋಚನ ವಿಶ್ವಕಾರಣ । ವಿಶ್ವಭೂಷಣ ವಿಶ್ವಪೂರಣ । ವಿಶ್ವಗುಣ ವಿಶ್ವೇಶರಕ್ಷಿಸೆನುತ್ತ ಪೊಗಳಿದರು ॥ ೩೦ ॥ ಆದಿಮಧ್ಯಾಂತರಹಿತ ಸಕಲ । ವೇದಶಾಸ್ತ್ರ ಪುರಾಣಸನ್ನುತ । ಆದಿಲಕ್ಷ್ಮೀರಮಣ ಘನ ಗೋವರ್ಧನೋದ್ಧರಣ ॥ ಆದಿಮೂರ್ತಿಯೆ ಆದಿದೇವನೆ । ಆದಿನಾರಾಯಣ ಸಲಹು ನೀ । ನಾದರದೊಳೆನುತೆರಗಿ ನುತಿಸಿದರಖಿಳ ನಿರ್ಜರರು ॥ ೩೩ ॥ ಜ್ಞಾನದಾಯಕಿ ವಿಷ್ಣುನಾಯಕಿ । ದೀನಪೋಷಿಣಿ ವಿಬುಧತೋಷಿಣಿ । ವಾಣಿಪಂಕಜಪಾಣಿ ಪನ್ನಗವೇಣಿ ಕಲ್ಯಾಣಿ ॥ ದಾನವಾಹಿತೆ ಸುಗುಣಭರಿತೆಭ । ವಾನಿಸಂಸ್ತುತೆ ವಾಣಿಹಿತೆ ಚತು । ರಾನನವಿನುತೆ ರಕ್ಷಿಸೆನ್ನುತ ಸುರರುಬೇಡಿದರು ॥ ೩೪ ॥ ಜಯಜನಾರ್ದನ ಮುರವಿಮರ್ದನ । ಜಯಮುನಿವಿನುತ ಸದ್ಗುಣಭರಿತ । ಜಯಜಯವಿನುತ ವೇಣುವಾದನಲೋಲ ಸುರಪಾಲ ॥ ಜಯಜಗನ್ಮಯ ಜಯಸುಚಿನ್ಮಯ । ಜಯರಮಾಧವ ಜಯಮಹೀಧವ । ಜಯಜಯಯೆನುತ ಪೊಗಳುತಿದ್ದರು ದೇವಸಂದೋಹ ॥ ೩೫ ॥ ಜಯಜಗನ್ಮಯೆ ಜಯಮಹಾಭಯೆ । ಜಯವಿಧುವದನೆ ಜಯಶುಭರದನೆ । ಜಯಜಯ ಸುಪೀತಾಂಬರಾವರಣೆ ಸುಗುಣಾಭರಣೆ ॥ ಜಯದಯಾಕರೆ ಜಯಸುಖಾಕರೆ । ಜಯಸುಜನನುತೆ ಜಯವಿಬುಧಹಿತೆ । ಜಯಜಯಯೆನುತ ಹೊಗಳುತಿದ್ದರು ಸುರರುಲಕ್ಷ್ಮಿಯನು ॥ ೩೬ ॥ ಮಂಗಳವು ರಾಜೀವನೇತ್ರನೆ । ಮಂಗಳವು ನೀಲಾಭ್ರಗಾತ್ರನೆ । ಮಂಗಳವು ಗೋವರ್ಧನೋದ್ಧರನೆ ಜಯವರ್ಧನನೆ ॥ ಮಂಗಳವು ಮಧುಕೈಟಭಹರನೆ । ಮಂಗಳವು ಪೀತಾಂಬರಧರನೆ । ಮಂಗಳವು ನಿನಗೆನುತ ಪಾಡಿದರಮರರಡಿಗಡಿಗೆ ॥ ೩೭ ॥ ಮಂಗಳವು ಜಗದಾದಿಮೂರ್ತಿಯೆ । ಮಂಗಳವು ಘನಪುಣ್ಯಕೀರ್ತಿಯೆ । ಮಂಗಳವು ಜಗದಾದಿದೇವಿಯೆ ದೇವಮುನಿನುತೆಯೆ ॥ ಮಂಗಳವು ದನುಜೇಂದ್ರಭೀಷಿಣಿ । ಮಂಗಳವು ಭಕ್ತಜನಪೋಷಿಣಿ । ಮಂಗಳವು ನಿನಗೆಂದೆನುತ ಹೊಗಳಿದರು ಲಕ್ಷ್ಮಿಯನು ॥ ೩೮ ॥ ಆದಿಕವಿ ವಾಲ್ಮೀಕಿಮುನಿವರ । ನೋದಿಸಿದನಾ ಕುಶಲವರ್ಗೆ ಸ । ಮೋದದಿಂ ಶ್ರೀ ರಾಮಚರಿತೆಯ ನಂದುಹಿತದಿಂದ ॥ ಸಾಧುನುತರವರೆಮ್ಮ ಜನನಿಯ । ಸಾಧುವೃತ್ತವ ಕೇಳಬೇಕನ । ಲಾದರದೆ ಮುನಿಪೇಳಿದನು ಮೊದಲಿಂದೆಕೊನೆತನಕ ॥ ೩೯ ॥ ಇಂತು ಪೂರ್ಣಮೆನಿಸಿಹುದಿಲ್ಲಿಗೆ । ಕಂತುಜನನಿಯ ಕರುಣೆಯಿಂದಾ ।

ತಂಕವಿಲ್ಲದೆ ಧಾರಿಣೀಸುತೆಚರಿತೆ ಕೊನೆತನಕ ॥ ಸಂತತವಿದು ಸ್ಥಿರ
ನಿಸಿಮೆರೆ । ವಂತೆ ರಕ್ಷಿಸಬೇಕೆನುತ ಮಾ । ಕಾಂತನಂ ಪ್ರಾರ್ಥಿಸುತಿ
ನಧಿಕ ಭಕ್ತಿಭಾವದಲಿ ॥ ೪೦ ॥ ಇದು ನವೀನಚರಿತ್ರಮಿದು ಪ್ರ । ಣ್ಯ
ನಿವಾಸವಿದಿಷ್ಟ ಫಲಕರ । ಮಿದುಸಕಲಸೌಖ್ಯಕರಮಿದು ಪಾಪವನು
ರಿಸುವುದು ॥ ಇದುವೆ ಪತಿಭಕ್ತಿಯುನಬಲೆಯುರಿ । ಗೊದವಿಪ್ರದಿದುಕ್ಷೇ
ಕರಮೆನಿ । ಪುದಿದು ಸಕಲಾಭೀಷ್ಟಗಳ ನೆಸಗುತಿಹುದೆಲ್ಲರಿಗೆ ॥ ೪೧
ಪರಮಪಾವನವೆನಿಪ ಸೀತಾ । ಚರಿತೆಯೊಳು ಮೊದಲಿಂದೆ ಕೊನೆತನ
ಕೆರಡು ಸಾವಿರದಾರನೂರಿಪ್ಪತ್ತು ಪದ್ಯಗಳು ॥ ಪರಿಗಣನೆಯಿಂ ದೊ
ಕಾಣಿಸು । ತಿರುವುವಧ್ಯಾಯ ನಲವತ್ತಂ । ಟರಲಿ ಭಾಮಿನಿಷಟ್ಪದಿ
ರೂಪಿಂದೆ ನುತಿವಡೆದು ॥ ೪೨ ॥ ಭರತಖಂಡದ ದಕ್ಷಿಣಾಶೆಯೊ । ಳರು
ಶಾಲೀವಾಹನ ಶಕೆಯೊ । ಳೊರೆವ ಸಾವಿರದೆಂಟುನೂರ್ತ್ರ್ಯಾವತ್ತು ನಾ
ಕ್ಕೆ ॥ ಸರಿಯುಹ ಪರೀಧಾವಿಸಂವ । ತ್ಸರದ ಚೈತ್ರಬಹುಳ ಬಿದಿಗೆದಿನ
ನೆರೆದ ಬುಧವಾಸರದೊಳೀ ಕಥೆಪೂರ್ಣವಾಗಿಹುದು ॥ ೪೩ ॥ ಚೆನ್ನ
ಗಣಿಯು ಮಧ್ಯಭಾಗದೊ । ಳುನ್ನತವಿಭವದಿಂದೆ ನವಪುರ । ಮೆನ್ನಿ
ಮರಾಬರ್ಟ್ಸನ್ಪೇಟೆಯೊಳು ಕಂಗೊಳಿಸಿ ॥ ಸನ್ನುತಿವಡೆದು ತೋ
ವಾಂಗ್ಲೋ । ಕನ್ನಡದ ವಿದ್ಯಾಲಯದೆ ಗುರು । ವೆನ್ನಿಪಣ್ಣಯನಿಂ
ವಿರಚಿತವೆನಿಪ್ಪುದೀ ಕಥೆಯು ॥ ೪೪ ॥ ಜನಗಳಿಗೆ ಮಂಗಳಗಳಾಗಲಿ
ಮನುಜಪಾಲಕರೆಲ್ಲ ಸಲಹಲಿ । ವನಿತಲವನು ನ್ಯಾಯಮಾರ್ಗವ ನಾ
ಗಂಬಿಡದೆ ॥ ದನಗಳಿಗೆ ವಿಪ್ರರಿಗೆ ಸಂತತ । ಜನಿಸಲಿ ಸಕಲಶುಭಗಳ
ಯೊಳು । ಘನಸುಖಂಗಳ ನಾಂತಿರುತಿರಲಿ ಸಕಲಲೋಕಗಳು ॥ ೪೫
ಮಳೆಯುಬೀಳಲಿ ಕಾಲಕಾಲಕೆ । ನೆಲವುಸಸ್ಯಗಳಿಂದೆ ಕೂಡಿರ । ಲಿ
ಯೊಳು ಕ್ಷೋಭೆಗಳಗೊಳಗಾ ಗದಿರಲೀದೇಶ ॥ ಸಿಲುಕದಿರಲವನೀಸು
ರುಭಯ । ಗಳಿಗೆ ಪುತ್ರವಿಹೀನರಿಗೆ ಜನಿ । ಸಲಿ ಸುಪುತ್ರರು ಪಾತ್ರ
ಗಲಿ ಪುತ್ರವಂತರಿಗೆ ॥ ೪೬ ॥ ಧನವಿಹೀನರು ಧನಿಕರಾಗಲಿ । ಜನಗ
ಲ್ಲರು ನೂರುವತ್ಸರ । ತನಕಬದುಕಲಿ ಪುತ್ರಮಿತ್ರಕಳತ್ರರೊಡವೆರಸಿ
ಮನುಜರ ಮಹಾಪಾಪಗಳು ನಾ । ಶನವಕೈದಲಿ ಜನರುಜೊವ್ವನ ।
ನಿಪಕ್ಕೈದಲಿ ಬೊಮ್ಮನಿಂದೆ ಪಡೆಯಲಿಪ್ರಾಜ್ಯತೆಯು ॥ ೪೭ ॥ ಏಕಭಾ
ದೊಳತಿ ಭಕುತಿಯಿಂ । ದೀಕಥೆಯು ನೋದುತಿಹ ಜನಗಳ । ಗಾಕಮ
ದಳನೇತ್ರನನುದಿನ ವಧಿಕಹರ್ಷದಲಿ ॥ ಬೇಕು ಬೇಕಾದವುಗಳೆಲ್ಲವ
ತಾಕರುಣಿಸುತ ಕೊಟ್ಟುಸಲಹುವ । ನೀಕಲಿಯುಗದೊಳವರ ಪಾಪ

ಳೆಲ್ಲವನುಹರಿಸಿ ॥ ೪೮ ॥ ಆಯುರಾರೋಗ್ಯ ಧನಧಾನ್ಯಸ । ಹಾಯ ಸತಿಸುತ ಬಂಧುಮಿತ್ರ, ನಿ । ಕಾಯ ಕನಕಾಭರಣ ಪಶುವಸನಾದಿಗಳ ನೆಲ್ಲ ॥ ಶ್ರೀಯುರಸನೊಲಿದಿತ್ತು ಸಂತತ । ಕಾಯುವನಧಿಕ ಭಕ್ತಿಭರ ದಿಂ । ದೀಯುವನಿಜಾಕಥೆಯ ನೋದುವ ಮನುಜರೆಲ್ಲರಿಗೆ ॥ ೪೯ ॥ ಸೀತವಿಜಾಕಥೆಯ ನೊಲಿದಾಲಿಸು । ವರಿಗೆ ಹೇಳಿಸುವರಿಗೆ ಓದುವ । ವರಿಗೆ ಓದಿಸುವರಿಗೆ ಪರಮಾದರದೆ ಬರೆವರಿಗೆ ॥ ಗರುಡವಾಹನ ನೀವ ನತ್ಯಾ । ದರದೊಳಾ ಜನರಘಗಳೆಲ್ಲವ । ಪರಿಹರಿಸಿ ಕಲ್ಪಾಂತವರೆಗಾ ಸ್ವರ್ಗಸೌಖ್ಯವನು ... ... ॥ ೫೦ ॥

ಇಂತು ನಲವತ್ತೆಂಟನೆಯ ಅಧ್ಯಾಯ ಸಂಪೂರ್ಣವು

ಪದ್ಯಗಳು ೭೬೦.

ಸೀತಾಚರಿತ್ರೆ ಸಂಪೂರ್ಣವು

ಮಂಗಳಾನಿ ಭವಂತು

ಕಂದ॥ ವರ ರಾಬರ್ಟ್ಸನ್ ಪೇಟೆಯೊ ।
ಳಿರುವಾಂಗ್ಲೋ ಕನ್ನಡದ ಸುವಿದ್ಯಾಲಯದೊಳ್ ॥
ಮೆರೆವಧ್ಯಾಪಕನೊರ್ವಂ ।
ವಿರಚಿಸಿದಂ ಮುದದೊಳಣ್ಣಯಾಖ್ಯಾತಸಿದಂ ॥

The Town Press Bangalore City,—1914.

ಶುದ್ಧಾಶುದ್ಧ ಪತ್ರಿಕೆ.

ಪುಟ.	ಪಙ್ಕ್ತಿ.	ಅಶುದ್ಧ.	ಶುದ್ಧ.
1	8	ತೋರಭುಜಗ.	ಘೋರಭುಜಗ.
2	1	ಜಾಣೆಯುಪ್ಪಂತೆ.	ಜಾಣನಪ್ಪಂತೆ.
,,	21	ಘನತರಕೃಪೆ.	ಘನತರದಕೃಪೆ.
4	10	ಪತಿವ್ರತೆ.	ಹದಿಬದೆ.
5	25	ನಿರ್ದೋಷ.	ನದೋಷ.
7	28	ಬೇಡುವೆನುಸ.	ಬೇಡುವೆನುಸು.
9	22	ನೆಲ್ಲಪರಿಕಿಸಿಡ.	ನೆಲ್ಲವಪರಿಕಿಸಿದ.
11	25	ಮಿಗಿಲುಸಂತಸವ.	ಬಹುಳಸಂತಸವ.
12	22	ಸರರನೆಲ್ಲರ.	ಸುರರನೆಲ್ಲರ.
15	2	ರೂಪೆತಾಂಗ.	ರೂಪೆತಾಂ.
,,	21	ವ್ಗಿಗೆಕ್ಕೈಮುಗಿದು.	ವಿಗೆಕ್ಕೈಮುಗಿದು.
,,	,,	ಪದಗಳ್ತಿಗೆರಗಿ.	ಪದಗಳಿಗೆರಗಿ.
18	2	ದೆಶೆಯು.	ದಶೆಯು.
24	16	ಭುಜಬಲಯುತರುಗಜ ಹುಲಿಸಿಂಹವೃಷಭಗಳ.	ಭುಜಬಲರುಗಜ ಸಿಂಹವ್ಯಾಘ್ರ ವೃಷಭಗಳ.
28	15	ದೊಂದುಸಾವಿರ.	ನೊಂದುಸಾವಿರ.
29	16	ಭುಜಭವ.	ಬುಜಭವ.
36	7	ತಾಂಬೂಲತಟ್ಟೆಗಳ.	ತಾಂಬೂಲಪಾತ್ರೆಗಳ.
40	13	ಕರೆತಹುದೆಂದು.	ಕರೆತರುವುದೆಂದು.
,,	17	ತಿಳಿತೊಡನೆ.	ತಿಳಿದೊಡನೆ.
46	29	ಸೀತೆನೊಡಿ.	ಸೀತೆನೋಡಿ.
49	14	ಳೊಳುಗುಪ.	ಳೊಳಗುಪ.
54	11	ಸುಮಂತ್ರಿಗೆ.	ಸುಮಂತ್ರಗೆ.

ಪುಟ.	ಪಙ್ತಿ.	ಅಶುದ್ಧ.	ಶುದ್ಧ.
54	23	ಬಳಿಯೊಳು.	ಬಳಿಯೊಳ್.
55	18	ವೃಕ್ಷವನುಸಂ.	ಮರವನುರೆ.
61	4	ಮಂಡಲವನಿಸುತೆ.	ಮೆಂದಳವನಿಸುತೆ.
66	22	ನಾರಿಯೊ.	ನಾರಿಯೋ.
70	15	ಲೆಳೆಸುತ್ತ.	ಲೆಳಸುತ್ತ.
71	13	ಕೊಡುವವುಹೀರುಹ.	ಕೊಡುವವುಹೀರುಹ.
72	8	ಗಿರುತ್ತ.	ಗಿರುತ.
73	22	ಕೊಂಡುಪೊದನು.	ಕೊಂಡುಪೋದನು.
80	29	ಯೆನಿಸುತುರ್ವರೆ.	ಯೆನಿಸುತ್ತುರ್ವರೆ.
83	8	ನವಿಲನಾಟವೆ.	ನವಿಲನಾಟ್ಯವೆ.
87	15	ಳುಷ್ಟ್ಯುಪಾದಿ.	ಳುಷ್ಟ್ರುಪಾದಿ.
92	20	ತಿನಿಯುಳನಗಲಿ.	ತಿನಿಯುಳನ್ನಗಲಿ.
98	7	ಮರುತಸಂಭವ.	ಮರುತನಾತ್ಮಜ.
100	14	ಶಾಸ್ತ್ರಂಗಳೊಳರಲು.	ಶಾಸ್ತ್ರಂಗಳೊರಲುವು.
101	19	ಮರುತಸುತನು.	ಪವನಸುತನು.
105	23	ಪಡಿಸುತಲಿಹೆ.	ಪಡಿಸುತ್ತಲಿಹೆ.
110	5	ದಿರೆಲೆ.	ದಿರಲೆ.
116	5	ದುಖಂಗಳೊಳು.	ದುಃಖಂಗಳೊಳು.
124	11	ತಳದು.	ತಳೆದು.
125	30	ಕೃತಿಗಳನು.	ಕೃತಿಗಳನ್ನು.
129	13	ವೋ.	ವೊ.
138	3	ಕೆನುತಕಳುಹಿಸಿದ.	ಕೆನುತವನಕಳುಹಿಸಿದ.
142	18	ರಾವನಾಗವು.	ರಾಮನಾಗವು.
145	28	ಳನುತ.	ಳೆನುತ.
147	29	ಮೆಂದೆನಿಸು.	ಮೆಂದೆನಿಸಿ.
148	6	ಸಂತಸ.	ಸಂಮುದ.
,,	9	ಪೆಳ್ದನು.	ಪೇಳ್ದನು.

ಪುಟ.	ಪಙ್ತಿ.	ಅಶುದ್ಧ.	ಶುದ್ಧ.
148	18	ಬಂದಿಸಿ.	ಬಂಧಿಸಿ.
149	6	ದರಣದೊಳ್.	ದಾರಣದೊಳ್.
151	17	ನಿತ್ರ.	ನಿತ್ಯ.
,,	20	ದಿಂದತಿ.	ದಿಂದಲೆ.
152	24	ರಘುಜನರನು.	ರಘುಜರನು.
154	16	ಗಾರರವಿಸುತ.	ಗಾರವಿಸುತ.
158	6	ತೀಕ್ಷರದನ.	ತೀಕ್ಷ್ಣರದನ.
159	10	ಸಂತಸ.	ಸಂಮುದ.
,,	23	ಹೊದಿಸಿ.	ಹೊಂದಿಸಿ.
160	16	ಕಡುಪರಾಕ್ರಮಿಯೆನಿಪ.	ಕಡುದುರಳನೆಂದೆನಿಪ.
,,	25	ವದಿಸಿದ.	ವಧಿಸಿದ.
162	3	ಯೋಷಧಿ.	ಓಷಧಿ.
164	25	ಸಂತಸ.	ಸಂಮುದ.
165	23	ಪೊಡವಿನಂದನೆ.	ಪೊಡವಿಯಮಗಳು.
166	28	ಸಂಮ್ಮುದ.	ಸಂಮುದ.
167	9	ಸಂತಸ.	ಸಂಮುದ.
169	22	ಸಂತಸ.	ಸಂಮುದ.
183	4	ಸಂತಸ.	ಸಂಮುದ.
184	4	ಸಂತಸ.	ಸಂಮುದ.
197	12	ತರತರದೊಳಾಕೃತಿ.	ತರತರದಾಕೃತಿ.
,,	26	ವಸಿಷ್ಟ.	ವಸಿಷ್ಠ.
199	12	ಮಷೋತ್ಸವ.	ಮಹೋತ್ಸವ.
,,	21	ಹಾರವನಿತ್ತು.	ಹಾರವನಿತ್ತ.
202	20	ದೆಸರ್ವತ್ರ.	ದಯೆಸರ್ವತ್ರ.
204	21	ಬಂಧುಸುಹೃ.	ಬಾಂಧವಸುಹೃ.
208	12	ಗಂಗಾವೇಣ.	ಗಂಗಾವೇಣಿ.
210	3	ನೊಂದುತೀರ್ಥವ.	ನೊಂದುಘಟ್ಟವ.

230	21	ಕಾಮಧೆನು.	ಕಾಮಧೇನು.
233	29	ಭಗಳಂ.	ಭಂಗಳಂ.
242	4	ಳಲ್ಲಿಯುಚರಿಸುತ.	ಳಲ್ಲಿಚರಿಸುತ್ತ.
244	10	ಗೆಣಯೆ.ನಿ.	ಗೆಣೆಯೆನಿ.
253	19	ಲೆಂತಪ.	ಲೆಂತಹು.
254	10	ಶೀವಿರೂಪವತಿ	ಶೀಲೆರೂಪವತಿ.
263	1	ದಾರವದೊಬ್ಬ.	ದೊಬ್ಬ.
270	6	ಪೊರೆಯುಗಿದ.	ಪರೆಯುಗಿದ.
273	29	ಶಿರರಳನು.	ಶಿರಗಳನು.
274	14	ನವನಿಳೆಯೊಳು.	ನವನಿಯೊಳು.
281	24	ದಣಿದರುದಕ್ಷಿಣೆ.	ದಣಿದರುವಿನುತದಕ್ಷಿಣೆ.
290	14	ವಾರಣಂಗಳನಿ.	ವಾರಣಂಗಳ.
294	14	ತರಿಸಿರುವುವೆನು.	ತರಿಸಿರುವೆವುನು.
300	15	ತಾಗವುದೆಳಾ.	ತಾಗವುದೊಳಾ.
304	4	ಧಾರಿಣಿತಲ.	ಧಾರಿಣೀತಲ.
308	4	ಳೆಯುನನೊಲಿಸಿ.	ಡೆಯುನನೊಲಿಸಿ.
,,	6	ಕಾಣಿಕಯುನಾ.	ಕಾಣಿಕೆಯುನಾ.
314	1	ವುದಿದು.	ವುದಿದಾ.
,,	13	ಮುನೀಂದ.	ಮುನೀಂದ್ರ.
,,	14	ಗಂಡನ್ರ.	ಗಂಡನ.
324	30	ಹೊಕನ್ಕ.	ಹೊಕ್ಕನು.